ನರನೆ ನಿನ್ನಯ ಮೇಲೆ ಯೆನ್ನ ಪ್ರೇಮ ಬಹುವಿಹುದು ॥ ೪೮ ॥

ಆದ ಕಾರಣ ನಿನ್ನೊಡನೆ ಸಂ- ।
ವಾದ ಮಾಳ್ಪರೆ ಮನವು ಕುಣಿವುದು ।
ಹೇ ಧನಂಜಯ ತೃಪ್ತಿಯಾಗದು ಹೇಳಲೀನದನು ॥
ಆದ ಕಾರಣ ನಿನ್ನೊಡನೆ ಕೇಳ್ ।
ವಾದದಿಚ್ಛೆಯು ವರ್ಧಿಸುತ್ತಿದೆ ।
ಸಾದರದಿ ಕೇಳೆನ್ನ ಮಾತನು ಲಕ್ಷ್ಯಪೂರ್ವಕದಿ ॥ ೪೯ ॥

ನರನೆ ಮಾರ್ಮಿಕರೊಳು ಶಿರೋಮಣಿ ।
ಒರೆವೆ ನಾ ನಿನಗೊಂದು ವಾಕ್ಯವ- ।
ನಿರುವುದತ್ಯುತ್ತಮವು ಯೆನ್ನಯ ಗುಹ್ಯತಮತತ್ತ್ವ ॥ .
ಬರಿದೆ ವಾಕ್ಯವದಲ್ಲ ಮೇಣ- ।
ಕ್ಷರಗಳಾಕೃತಿಯಾಗಿ ನಾಕ್ಷಾದ್ ।
ವರ ಪರಬ್ರಹ್ಮಸ್ವರೂಪವೆ ಬಂದುದಿಳೆಗಿಳೆದು ॥ ೫೦ ॥

ನರನೆ ನಿನಗಾಲಿಂಗನವ ತಾ- ।
ನಿರದೆ ಕೊಡಬೇಕೆಂದು ಬಂದಿಹು- ।
ದರರೆ ನಿನಗೇನೆಂತ ಪೇಳಲಿ ಗುಹ್ಯತಮತತ್ತ್ವ ॥
ಅರರೆ ನೀನೆನ್ನನು ಯಥಾರ್ಥದಿ ।
ಯರಿಯಲಾರದೆ ಮಾತನಾಡುವಿ ।
ನರನೆ ನಾ ನರಸಲ್ಲ ನಾಗೇ ವಿಶ್ವವಾಗಿಹೆನು ॥ ೫೧ ॥

ನ ಮೇ ವಿದುಃ ಸುರಗಣಾಃ ಪ್ರಭವಂ ನ ಮಹರ್ಷಯಃ ।
ಅಹಮಾದಿರ್ಹಿದೇವಾನಾಂ ಮಹರ್ಷೀಣಾಂ ಚ ಸರ್ವಶಃ ॥ ೨ ॥

ಅರಿಯದೆನ್ನಯ ರೂಪಮಂ ಸ್ವೀ- ।
ಕರಿಸಿದುವು ವೇದಗಳು ಮೂಕತೆ ।
ಬರುವುದೇ ಯೆನ್ನೆಡೆಗೆ ಗತಿಯಾಪವನಹುತಗಳಿಗೆ ॥
ತರಣಿಶಶಿಗಳು ರಾತ್ರಿಯಾಗದೆ ।
ಮೆರೆವ ಯೆನ್ನಯ ತೇಜದೆದುರಿಲಿ ।
ಕಿರಣಸಹಿತಲಿ ಲುಪ್ತರಾದರು ಹೇಳಲೇನದನು ॥ ೫೨ ॥

ಸರನೆ ಸರ್ವಮಹರ್ಷಿದೇವತೆ- ।
ಯರಿಗೆ ಸಚರಾಚರ ಜಗತ್ತಿಂ ।
ಗಿರುವೆನಲ್ಲಾ ನಾನೆ ಮೂಲನು ಪರಿಯಿಡಾಗಿರಲು ॥
ಅರಿಯದೆನ್ನನು ಚಟುಪಟಿಸುವರು ।
ಗಿರಿಯ ಮೇಲಿಂ ಕೆಳಗಿಳಿದ ನದಿ ।
ತಿರಿಗಿ ಶಿಖರವನೇರಿ ಶಿಖರಜ್ಞಾನ ಪಡೆಯುವುದೆ ॥ ೫೩ ॥

ಅರಿವುದೇನ್ಯೆ ತಾಯಿಯವಯವ ।
ತರುಣಿಯುದರದೊಳಿರುವ ಗರ್ಭವು ।
ಪರಿಯಲಿನ್ನೊಳು ಹುಟ್ಟಿದೀ ಸುರವರರು ಮೊದಲಾಗಿ ॥
ಅರಿವರೆಂತ್ಯೆ ಯೆನ್ನರೂಪವ ।
ಶರಧಿಯಂತವ ನೊನು ಬಲ್ಲುದೆ ।
ಪರಿಯಲಾ ಮಶಕಕ್ಕೆ ಶಕ್ಯವೆ ಗಗನ ವಾಟುವುದು ॥ ೫೪ ॥

ಮರವು ಬೆಳೆಯುತಲಿರಲು ತುದಿಯದು ।
ಬರುವುದೇನ್ಯೆ ಬೇರಿನೆಡೆಗಾ ।
ತೆರದೊಳೆನ್ನನು ನೋಡಲಾರರು ಮೂಲಭೂತನನು ॥
ಮರದ ತಿರುಳದು ಮರದ ಸುತ್ತಲು ।
ತೆರಗಳಾ ಸಾಗರವ ನುಂಗಲು ।
ಬರುವುಹೇ ಪರಿಮಾಣುವಿಲಿ ಜಗವೆಲ್ಲ ತುಂಬುವೆ ॥ ೫೫ ॥

ನಾನು ಯಾರಿಹೆನೆನ್ನದಿಹುದು ಪ್ರ- ।
ಮಾಣವಾವುದು ಬಂದೆನ್ನಿಂ ।
ನಾನು ಯಾರವನೀ ವಿಚಾರಂಗಳನು ಮಾಡುತಲಿ ॥
ಕ್ಷೋಣಿಯಲಿ ಯುಗಯುಗದಲಾ ಶತ- ।
ಮಾನ ಕೋಟಿಗಳಾದುವೈ ಯನು- ।
ಮಾನ ಜಾರದು ಮತಿಯೆ ಕುಂಠಿತವಾಯ್ತು ಚಿಂತನದಿ ॥೫೬॥

ಪರಿಯಲೀ ಯೆನ್ನಸ್ವರೂಪವ- ।
ನರಿಯಲಾರರು ಸುರರು ಋಷಿವರ- ।
ರಿರುವರೆನ್ನೊಳು ಕಾರಣನೆನ್ನನು ಮೂಢರೀ ಜಗದಿ ॥
ತೊರೆವರಾರು ಪ್ರವೃತ್ತಿಮಾರ್ಗವ ।
ಭರದಲಿಂದ್ರಿಯನಿಕರ ಜಯಿಸುತ ।
ಪುರುಷರೈ ಮುಟ್ಟುವರು ದೇಹಾತೀತ ಸದ್ಗತಿಯ ॥ ೫೭ ॥

ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಮ್ ।
ಅಸಮ್ಮೂಢಃ ಸ ಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ ॥ ೩ ॥

ಸರನ ಮನದ ಸ್ಥಿತಿಯಿಡಾಗಲು ।
ಮೆರೆವ ಸ್ವಾತ್ಮಜ್ಞಾನಬೆಳಕಿನ ।
ಭರದೊಳವನಿಗೆ ಕಣ್ಣಿನೆದುರಿಲಿ ನಾನು ತೋರುವೆನು ॥
ಬರುವುದೆನ್ನುತ್ಪತ್ತಿವಿರಹಿತ ।
ಪರಮ ಸುಂದರರೂಪವೆದುರಿಂ- ।
ಗರಿವನೆನ್ನನನಾದಿ ಲೋಕದಿ ಶ್ರೇಷ್ಠ ನಾನೆನುತ ॥ ೫೮ ॥

ಸ್ಫುರಿಸಮಣಿಯೋಲ್ ಕಲ್ಲುಗಣಿಯೊಳ- ।
ಗಿರುವನ್ಯೆ ರಸಗಳಲಿಯಮೃತದ ।
ಪರಿಯಲವನಾ ನರನ ಯೋಗ್ಯತೆ ತಿಳಿಯಲಾ ಪಾರ್ಥ ॥ ೫೯ ॥

ಧರೆಯೊಳಿರುತಿಹ ಪುರುಷರಲಿ ನಾ- ।
ನಿರುವೆ ನೋಡೈಯಂಶರೂಪದಿ ।
ಯರಿವನಾರೀ ಪರಿಯೊಳೆನ್ನನು ವಿಸ್ತರಿಪೆನವನ ॥

ಪೊಡವಿಯೊಳಗೀ ಯೋಗ್ಯಪುರುಷನು ।
ನಡೆವ ನುಡಿಯುವ ಜ್ಞಾನಮೂರುತಿ ।
ಜಡಶರೀರಾವಯವವೆಲ್ಲವು ಸೌಖ್ಯದಂಕುರವು ॥
ಪೊಡವಿಯಲ್ಲಾತನ ನರತ್ವವು ।
ನುಡಿಗೆ ಲೌಕಿಕಕಾಗಿಮಾತ್ರವೆ ।
ಜಡಶರೀರನೆ ಪಾರ್ಥ ವರ್ಣಿಸಲೆಂತು ನಾನವನ ॥ ೬೦ ॥

ನರನೆ ಕರ್ಪುರದೊಳಗೆ ವಜ್ರವು ।
ದೊರಕಿದರೆ ಮತ್ತೇನು ನೀರಲಿ ।
ಕರಗುವುದೆ ಕರ್ಪುರದ ತೆರದಲಿ ವಜ್ರ ನೀರಹುದೆ ॥
ಧರೆಯೊಳನ್ಯರ ತೆರದೊಳೀ ನರ ।
ಚರಿಸುತಿರ್ದರು ಮಾಯೆ ಬಾಧಿಸ- ।
ದಿರುವುದೈ ಮೇಣವನ ಹತ್ತರ ಸುಳಿಯಲಾರದಲಾ ॥ ೮೧ ॥

ಹತ್ತರದಿ ತಾಂ ಹೋದೆನಾದರೆ ।
ಮೃತ್ಯುವಿನ ತುತ್ತಾಗಿ ಬೀಳ್ವೆನೆ- ।
ನುತ್ತ ಪಾಪದ ಮೊತ್ತ ಹತ್ತರ ಸುತ್ತಲಾರದಲಾ ॥
ಸುತ್ತಮುತ್ತಲು ಗಂಧದ್ರುಮದಲಿ ।
ಹತ್ತಿ ಸುಡುತಿರೆ ಬೆಂಕಿ ದ್ರುಮವನು ।
ಸ್ವಸ್ಥಚಿತ್ತದಿ ಸರ್ಪ ತ್ಯಜಿಸುವುದಲ್ಲಲೇ ದ್ರುಮವ ॥ ೮೨ ॥

ಅರಿವನಾರೀ ಜಗದೊಳೆನ್ನನು ।
ಹರಿವನೈ ಸಂಕಲ್ಪವೆಲ್ಲವ- ।
ನರಿವುದೆನ್ನನು ಹೇಗೆ ಯೆಂಬೀ ಶಂಕೆ ನಿನಗಿರಲು ॥
ಇರುವೆ ನಾನೆಂತೀ ಜಗತ್ತಿಲಿ ।
ಪೊರೆವುದಾವ ವಿಕಾರವೆನ್ನಲಿ ।
ನರನೆ ನಿನಗಾನೊರೆವೆ ಕೇಳೈ ಪ್ರೇಮಪೂರ್ವಕದಿ ॥ ೮೩ ॥

ಪರಿಪರಿಯ ಜೀವಂಗಳಲಿ ನಾ ।
ಪರಿಪರಿಯ ಪ್ರಕೃತಿಗಳ ಮಾನದೊ- ।
ಳಿರುವೆನೈ ಕೌಂತೇಯ ಹಬ್ಬಿಹೆನೆಲ್ಲ ಮೂಜಗದಿ ॥
ಅರಿವನಾರೀ ತೆರದೊಳೆನ್ನನು ।
ಭರಿತನಾಗಿಹೆ ವಿಶ್ವದಲಿ ಯೆಂ- ।
ಬುರುತರದ ಸುಜ್ಞಾನವಾಗಲು ನರನೆ ಮೇಣವನು ॥ ೮೪ ॥

ಬುದ್ಧಿರ್ಜ್ಞಾನಮಸಮ್ಮೋಹಃ ಕ್ಷಮಾ ಸತ್ಯಂ ದಮಃ ಶಮಃ ।
ಸುಖಂ ದುಃಖಂ ಭವೋ ಭಾವೋ ಭಯಂ ಚಾಭಯಮೇವ ಚ ॥ ೪ ॥

ಅಹಿಂಸಾ ಸಮತಾ ತುಷ್ಟಿಸ್ತಪೋ ದಾನಂ ಯಶೋಽಯಶಃ ।
ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ ॥ ೫ ॥

ನರನೆ ಸರ್ವವಿಕಾರತತಿಯೊಳ- ।
ಗಿರುವುದೈ ಪ್ರಥಮದಲಿ ಬುದ್ಧಿಯು ।
ಯೆರಡನೆಯ ನಿಃಸೀಮ ಜ್ಞಾನವು ಸಹನಶೀಲತೆಯು ॥
ಇರುವುವಾಪರಿ ದುಃಖಸುಖಗಳು ।
ಯಿರುವುವಾಪರಿ ಸತ್ಯಕ್ಷಮೆಗಳು ।
ನರನೆ ನಿಖಿಲೇಂದ್ರಿಯಮನೋನಿಗ್ರಹವಸಂಪೋಹ ॥ ೮೫ ॥

ಮರಣಜನ್ಮಾದಿಗಳು ಲೋಕದೊ- ।
ಳಿರುವುವೆನ್ನಲಿ ಭಾವರೂಪನು ।
ನರನೆ ನಾ ಪರಮಾತುಮನು ವಿಶ್ವದಲಿ ಕೌಂತೇಯ ॥
ನರನೆ ನಿರ್ಭಯ ಭೀತಿ ಸಮತೆಯು ।
ಹರುಷ ದಾನವು ತಪವಹಿಂಸೆಯು ।
ಧರೆಯೊಳಗೆ ಕಾಣುವ ಯಶೋಽಪಯಶಂಗಳೆಲ್ಲವಿವು ॥೮೬॥

ಹುಟ್ಟುವುದು ಕೆಲವರಲಿ ಯೆನ್ನ ।
ಶ್ರೇಷ್ಠಜ್ಞಾನವು ಕೆಲವರಲ್ಲದು ।
ಹುಟ್ಟಲಾರದು ಸೃಷ್ಟಿನಿಯಮವಿದಲ್ಲವೇ ಪಾರ್ಥ ॥ ೮೭ ॥

ಕತ್ತಲೆಯು ರವಿಯಸ್ತನಾಗಲು ।
ಪೃಥ್ವಿಯಲಿ ವಿಸ್ತರಿಪುದಲ್ಲವೆ ।
ಮತ್ತೆ ಬೆಳಕಾ ಸೂರ್ಯನುದಯಿಸೆ ಬರುವುದೈ ಪಾರ್ಥ ॥
ಕತ್ತಲೆಯ ಮೇಣ್ ಬೆಳಕಿನ ಸಮು- ।
ತ್ಪತ್ತಿಯಲ್ಲವೆ ಸೂರ್ಯನಿಂದಲೆ ।
ವಿಸ್ತರಿಪುವೀ ತೆರದಿ ಜ್ಞಾನಾಜ್ಞಾನವೆನ್ನಿಂದ ॥ ೮೮ ॥

ಹುಟ್ಟಿಹುವ ಭೂತಂಗಳಲಿ ಕೇಳ್ ।
ಸೃಷ್ಟಿಯಲಿ ಪರಿಪರಿಯ ಭೂತಗ- ।
ಳಿಷ್ಟಿಹುವು ಕೇಳಾ ಪರಿಯಲಿ ವಿಕಾರಸಂತತಿಯು ॥

ಜ್ಞಾನ ಮೇಣಜ್ಞಾನ ಬರುವುದು ।
ತಾನು ಮಾಡಿದ ಕರ್ಮಫಲದಂ- ।
ತೇನ ಹೇಳಲಿ ಕರ್ಮದೋಲ್ ಜನಿಪುವು ವಿಕಾರಗಳು ॥
ಕಾಣುವೀ ಜೀವಿಗಳು ಸರ್ವವು ।
ಪೂರ್ಣವೆನ್ನಲಿ ತುಂಬಿಹುವು ನಿ- ।
ನ್ನಾಣೆ ನಿಜವಿದು ವಿಶ್ವವೆಲ್ಲವು ಯೊನ್ನೊಳೇಯಿಹುದು ॥ ೮೯ ॥

ನರನೆ ಕೇಳೈ ಸೃಷ್ಟಿಪಾಲಕ- । ಅರುಹುವೆನು ಕೌಂತೇಯ ನಿನಗಾ- ।
ರಿರುವರೆಷ್ಟೀ ಜಗದಿ ಪೇಳುವೆ । ನಿರುವೃಷ್ಟಿ ಹನ್ನೊಂದು ಭಾವಗ- ।
ಮರಳಿಯವರಾಜ್ಞೆಯಲಿ ಜಗವಿದು ನಡೆವ ಪರಿಯೆಂತು ॥ ಅರುಹುವೆನು ನಾನವುಗಳನು ಕೇಳ್ ಪಾಂಡುನಂದನನೆ ॥ ೭೧ ॥

ಮಹರ್ಷಯಃ ಸಪ್ತ ಪೂರ್ವೇ ಚತ್ವಾರೋ ಮನವಸ್ತಥಾ ।
ಮದ್ಭಾವಾ ಮಾನಸಾ ಜಾತಾ ಯೇಷಾಂ ಲೋಕ ಇಮಾಃ ಪ್ರಜಾಃ ॥ ೬ ॥

ನರನೆ ಕೇಳ್ವೈ ಸರ್ವಗುಣದಿಂ । ಇರುವುದೊಂದೇ ಬೀಜ ಮೊದಲಂ- ।
ಭರಿತರಾಗಿಹರೇಳು ಋಷಿಗಳು । ಕುರವು ಪುಟ್ಟುವುದದಕೆ ತದನಂ- ।
ಮೆರೆವೈ ಪ್ರಖ್ಯಾತ ಕಶ್ಯಪಮುಖ್ಯರವರುಗಳು ॥ ತರದಿ ಮರವಾಗುವುದು ಬುಡ ವಿಸ್ತಾರವಾಗುವುದು ॥
ಇರುವರಾಪರಿ ಜಗದಿ ಮನುಗಳು । ಬರುವುನೈ ಕವಲುಗಳು ಬುಡದಲಿ ।
ಮೆರೆವೆಮ್ಮೆ ಹದಿನಾಲುಕವರೊಳು । ಬರುವುನೈ ಶಾಖೋಪಶಾಖೆಗ- ।
ಮೆರೆವರೈ ಸ್ವಾಯಂಭುವಾದಿಗಳಲ್ಲವೇ ನಾಲ್ಕು ॥ ೭೧ ॥ ಕಿರುವುದೀಪರಿ ವೃಕ್ಷವಿಸ್ತಾರವು ಕಣಾ ಜಗದಿ ॥ ೭೫ ॥

ಹುಟ್ಟಿಸುವರೀ ಸೃಷ್ಟಿಯೆಲ್ಲವ । ಹುಟ್ಟಿದುದು ಮನ ಮೊದಲಿಗದರಿಂ- ।
ಹುಟ್ಟಿಸಿದೆನೀ ಭಾವಗಳ ನಾ- । ಹುಟ್ಟಿದರು ಹನ್ನೊಂದು ಮಾನಸ ।
ನಿಷ್ಟ ಮಾನಸವುತ್ರರಾದರು ನೋಡು ಹನ್ನೊಂದು ॥ ಜ್ಯೇಷ್ಠ ಸುತರವರಿಂದ ಹುಟ್ಟಿದರಷ್ಟಪಾಲಕರು ॥
ಹುಟ್ಟಿದಿಲ್ಲ ವ್ಯವಸ್ಥೆ ವಿಶ್ವದಿ । ಹುಟ್ಟಿಸಿದರೀ ಯಷ್ಟಪಾಲರು ।
ಹುಟ್ಟಿದಿಲ್ಲೈ ಮೂರು ಲೋಕಗ- । ಸೃಷ್ಟಿಯೊಳಗಿಹ ನಿಖಿಲ ಲೋಕವ ।
ಳಿಷ್ಟಕಾರ್ಯವ ಮಾಡದಿದ್ದುವು ಪಂಚಭೂತಗಳು ॥ ೭೨ ॥ ಹುಟ್ಟಿದುವು ನಾನಾಪ್ರಕಾರದ ಪ್ರಾಣಿ ಲೋಕದಲಿ ॥ ೭೬ ॥

ಏಳು ಋಷಿಗಳು ಮನುಚತುಷ್ಟಯ । ಬರುವುವೈ ಶಾಖೋಪಶಾಖೆಯೊ- ।
ಮೂಲವೀ ಜಗಕೆಲ್ಲ ನೋಡೈ । ಳಿರದೆ ನವಪಲ್ಲವವು ಕೋಮಲ ।
ಮೇಳವಿಸಿ ಹುಟ್ಟಿಸಿದರಿವರಾ ದಿಶೆಗಳೊಡೆಯರನು ॥ ಬರುವುವದರಲಿ ಹೂವುಹಣ್ಣುಗಳೇನ ಹೇಳುವೆನು ॥
ಮೇಲೆ ಕೇಳಾ ದಿಶೆಗಳೊಡೆಯರ । ಪರಿಕಿಸಲು ನಿಜತತ್ತ್ವ ಪಾರ್ಥನೆ ।
ಮೇಳವನು ಸ್ಥಾಪಿಸಿದರವರೇ । ಇರುವುದಲ್ಲವೆ ಬೀಜದಿಂದಲೆ ।
ಮೂಲಕಾರಣರಾದರೈ ಕೇಳೆಂಟು ದಿಶೆಗಳಲಿ ॥ ೭೩ ॥ ಪರಿಯಲೀ ನಾನೊರ್ವನಿದ್ದೆನು ಲೋಕಗಳ ಬೀಜ ॥ ೭೭ ॥

ಅರಸನೈ ಹನ್ನೊಂದು ಕೇಳೀ । ಪರಿಕಿಸಲು ನಿಜತತ್ತ್ವವೀಪರಿ ।
ಪರಿಯಲಾದರು ವಿಶ್ವವೆಲ್ಲಕೆ । ಬಿರುವೆ ನಾ ವಿಶ್ವಕ್ಕೆ ಕಾರಣ ।
ಮೆರೆವ ವಿಶ್ವವಿದೆಲ್ಲ ತೋರ್ಪುದು ಪ್ರಜೆಗಳಂದದಲಿ ॥ ನಿರುತವೀ ವಿಸ್ತಾರವೆನ್ನಿಂದಾಯ್ತು ವಿಶ್ವವಿದು ॥
ನರನೆ ಕೇಳೀ ವಿಶ್ವವಿಸ್ತರ- । ಇರುವುದಾರಿಗೆ ತ್ರದ್ಧೆಯೆನ್ನಲಿ ।
ವರಿಯಲಾ ಯೆನ್ನಿಂದಲಾಯಿತು । ಬಿರುವರವರೇ ಗುಹ್ಯವೆನ್ನಯ ।
ನರನೆ ನಿನಗಿದ ವಿಸ್ತರಿಸಿ ಪೇಳುವೆನು ಪ್ರೀತಿಯಲಿ ॥ ೭೪ ॥ ಬರುವುದೇ ಮೂಢರಿಗೆ ಯೆನ್ನೀಜ್ಞಾನ ಕೌಂತೇಯ ॥ ೭೮ ॥

ಏತಾಂ ವಿಭೂತಿಂ ಯೋಗಂ ಚ ಮಮ ಯೋ ವೇತ್ತಿ ತತ್ತ್ವತಃ ।
ಸೋಽವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ ॥ ೭ ॥

ನರನೆ ಕೇಳಿಪ್ಪತ್ತು ಭಾವದಿ ।
ಮರಳಿ ಯೇಕಾದಶ ವಿಭೂತಿಯಿ- ।
ನಿರದೆ ವಿಶ್ವವನೆಲ್ಲ ಪೂರ್ಣ ವ್ಯಾಪಿಸಿಹೆ ನಾನು ॥
ಅರಿಯಲೀ ಪರಿ ನಿಧಿಯ ಹಿಡಿದಾ- ।
ಯಿರಿವೆಗಳ ಪರ್ಯಂತವೆನ್ನಯ ।
ಹೊರತು ಮಾತೇನಿಹುದು ನಾ ತುಂಬಿಹೆನು ವಿಶ್ವದಲಿ ॥೬೯॥

ಅರಿವನಾರೀ ಪರಿಯಲೆನ್ನನು ।
ನಿರುತವಿಹ ಸತ್ಯಸ್ವರೂಪಮ- ।
ನಿರುವನವನೇ ಜ್ಞಾನಿಯವನಲಿ ವಾಸಿಪುದು ಜ್ಞಾನ ॥
ಅರಿಯನಾತನು ಹೆಚ್ಚುಕುಂದನು ।
ಬರುವುದೇನೈ ಭೇದಭಾವವು ।
ಬರುವುದೇ ಕನಸಿನಲಿಯಾದರು ಭೇದವವನಿಂಗೆ ॥ ೮೦ ॥

ನರನೆ ಯೆನ್ನ ವಿಭೂತಿಯವುಗಳು ।
ಮರಳಿ ಯೆನ್ನ ವಿಭೂತಿಯಿಂ ತುಂ- ।
ಬಿರುವ ವಿಶ್ವವಿದೆಲ್ಲ ವೊಂದೇ ತಿಳಿವರಾರಿದನು ॥

ಧರೆಯೊಳವರೆ ಯಥಾರ್ಥವಾಗಿಯೆ ।
ಪರಿಯ ಧೀವಾಕ್ಯಯದಿಂದಲಿ ।
ಧರಿಸುವರು ಮದ್ರೂಪವನು ಕೇಳ್ ಜ್ಞಾನಯೋಗದಲಿ ॥೭೮॥

ಧರೆಯೊಳಾತ ಕೃತಾರ್ಥನೆಂದರಿ ।
ನರನೆ ಕೇಳದ್ವೈತದೃಷ್ಟಿಯಿ- ।
ನಿರದೆ ಭಜಿಪರೊ ನಾನವರ ಪಾಶದಲಿ ಸಿಲುಕುವೆನು ॥
ಇರುವನವನದ್ವೈತ ಭಕ್ತನು ।
ದೊರೆಯುವೆನು ನಾನವಗೆ ಸುಲಭದಿ ।
ಬರುವುದಿಲ್ಲೈ ವಿಘ್ನವಾತನಿಗೆನ್ನ ಹಾದಿಯಲಿ ॥ ೮೨ ॥

ಮರಣವೀಪರಿಯಲ್ಲಿ ಬಂದರೆ ।
ಶರಣಿಗವಗುತ್ತಮವು ಕೇಳಾ- ।
ನೊರೆಯಲಿಲ್ಲವೆ ಹಿಂದೆ ಷಷ್ಠಾಧ್ಯಾಯದಲಿ ನಿನಗೆ ॥
ಇರುವುದೆಂತದ್ವೈತಶಕ್ತಿಯು ।
ನರನೆ ನಾ ವಿಸ್ತರಿಸಿ ಪೇಳುವೆ ।
ವರ ಸುಭದ್ರಾಪತಿಯೆ ಕೇಳ್ಮೈ ಲಕ್ಷ್ಯಪೂರ್ವಕದಿ ॥ ೮೩ ॥

ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।
ಇತಿ ಮತ್ವಾ ಭಜಂತೇ ಮಾಂ ಬುಧಾ ಭಾವಸಮನ್ವಿತಾಃ ॥ ೮ ॥

ಹುಟ್ಟರುವುದೀ ವಿಶ್ವವೆನ್ನಿಂ ।
ಸೃಷ್ಟಿಯನು ಪಾಲಿಸುವೆ ನಾನೇ ।
ಕೊಟ್ಟು ಮನವ ವಿಚಾರಮಾಡೈ ಹೇಳ್ವೆ ದೃಷ್ಟಾಂತ ॥
ಹುಟ್ಟುವುವು ನೀರಿನಲಿ ತೆರೆಗಳು ।
ಹುಟ್ಟಲವಕಾಶ್ರಯವು ನೀರೇ ।
ಯಿಷ್ಟಜೀವನವವಕೆ ನೀರಿನ ಹೊರತು ಬೇರಿಹುದೆ ॥ ೮೪ ॥

ಎಲ್ಲಿ ನೋಡಿದಡಲ್ಲಿ ತೆರೆಗಳೆ- ।
ಗೆಲ್ಲ ನೀರೇ ಗೋಚರಿಪುದೈ ।
ಯೆಲ್ಲ ವಿಶ್ವದಿ ತುಂಬಿರುವೆನೀ ತೆರದಿ ನಾ ಪಾರ್ಥ ॥
ಅಲ್ಲವೇನೈ ನೋಡು ತತ್ತ್ವವ- ।
ನಿಲ್ಲನೈ ಜಗವೆನ್ನ ಹೊರತೆನು- ।
ತೆಲ್ಲರೆನ್ನನೆ ಭಜಿಸುತಿಹರೈ ಪ್ರೇಮಭಾವದಲಿ ॥ ೮೫ ॥

ನರನೆ ನೊಡೈ ಗಾಳಿ ಗಗನದೊ- ।
ಳಿರುತ ಗಗನಾಕಾರದಿಂ ಸಂ- ।
ಚರಿಸುತಿಹುದೈ ಗಗನದಲಿ ನೋಡಿದಿಯೊ ಕೌಂತೇಯ ॥
ಪರಿಯಿದೈ ಮದ ಜಕರೆಲ್ಲರು ।
ಧರಿಸಲಾರರು ಭೇದಬುದ್ಧಿಯ- ।
ನಿರುವೆ ವಿಶ್ವದಿ ನಾನು ಪರಿಪರಿ ದೇಶಕಾಲದಲಿ ॥ ೮೬ ॥

ಅರಿಯುತೆನ್ನೀ ತೆರದ ರೂಪವ ।
ನಿರುತವೆನ್ನನು ಭಜಿಪರಾರೀ- ।
ತೆರದ ಸ್ವಾತ್ಮಜ್ಞಾನಿಗಳು ರಂಜಿಪರು ಸುಖದಿಂದ ॥
ಧರೆಯೊಳೆಲ್ಲವು ಕಣ್ಣೆದುರು ಬಂ- ।
ದಿರುವ ವಸ್ತುಗಳೆಲ್ಲ ಪರಮೇ- ।
ಶ್ವರನೆನಿತ ತಿಳಿಯುವುದೆ ಯೆನ್ನಯ ಭಕ್ತಿಯೋಗವಿದು ॥ ೮೭ ॥

ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಮ್ ।
ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥ ೯ ॥

ಚಿತ್ತದಿಂ ಮದ್ಭಾವರಾದರು ।
ಸ್ತುತ್ಯಬೀವಿಗಳೆನ್ನ ಯೋಗದಿ ।
ಸತ್ತು ಹುಟ್ಟದರೇನು ಗೊತ್ತೇನಿಲ್ಲ ಜ್ಞಾನದಲಿ ॥
ಮತ್ತೆ ಬೋಧದ ಬಲದಿ ಕೌತುಕ- ।
ಹತ್ತಿ ಸಂವಾದದ ಸುಖದಿ ಪುರು- ।
ಷೋತ್ತಮನ ನೆನೆನೆನೆದು ಕುಣಿವರು ನಿತ್ಯಹರ್ಷಿತರು ॥೮೮॥

ಇಷ್ಟು ಸ್ಥಿತಿ ಬಂದಿರೆ ಪರಸ್ಪರ ।
ಕೊಟ್ಟು ಕೊಂಬುವ ವಸ್ತು ಜ್ಞಾನವೆ ।
ಯೆಷ್ಟು ವರ್ಣಿಸಲಿವರ ಪರಮಾನಂದನಿರ್ಭರವ ॥
ಸೃಷ್ಟಿಯಲಿ ರಂಜಿಪ ಕೆರೆಗಳಿರ- ।
ಡೊಟ್ಟು ಕೂಡಲು ಮಳೆಯ ಸಮಯದಿ ।
ಹುಟ್ಟುವುವು ಸುಂದರತರಂಗಗಳೇನ ಹೇಳುವೆನು ॥ ೮೯ ॥

ಆರಿಯಲೀಪರಿ ಭಕ್ತರೆನ್ನಯ ।
ಮೆರೆವರು ಪರಸ್ಪರರ ಯೋಗದಿ ।
ಹೊರಟು ಬ್ರಹ್ಮಾನಂದತೆರೆಗಳು ತುಂಬಿತುಳುಕುವುವು ॥
ಮೆರೆವುದಾತ್ಮಾನಂದಬೋಧವು ।
ಸರಸಸ್ವಾತ್ಮಾನಂದಬೋಧಕೆ ।
ಸರಸ ಚಿನ್ಮಾಭರಣ ಸ್ವಾತ್ಮಾನಂದವಾಗುವುದು ॥ ೯೦ ॥

ತರಣಿಯಾರತಿ ತರಣಿಗೆನೆ ಬೆಳ- ।
ಗಿರುವ ಪರಿಯಲ್ಲೈ ಧನಂಜಯ ।
ಮೆರೆವ ಚಂದ್ರಮ ಚಂದ್ರಮನ ತಾನಪ್ಪಿಕೊಂಡಂತೆ ॥
ಎರಡು ನದಿ ಸಮುವೇಗದಿಂದಲಿ ।
ಹರಿದು ಸಂಗಳು ಹೊಂದಿ ಮುಂದಕೆ ।
ಹರಿವ ಪರಿಯಂತಿವರ ಯೋಗ ಪರಸ್ಪರವು ನೋಡೈ ॥೯೧॥

ಪರಿಯಲೀ ಬ್ರಹ್ಮೈಕ್ಯಸಂಗಮ ।
ಮೆರೆವುದೈ ಯದರಲ್ಲಿ ಸಾತ್ವಿಕ ।
ಪರಿಗಳೆಲ್ಲವು ತೇಲುವುವು ಕಡಿಗಳ ತೆರದಿಂದ ॥
ಶರಣಿಗಳು ಸಂವಾದರೂಪದ ।
ಪರಮ ಸುಖಸಾಮ್ರಾಜ್ಯದೊಳಗಿನ ।
ದೊರೆಗಳಾಗುವರೇನ ಹೇಳುವುದವರ ಯೋಗ್ಯತೆಯ ॥ ೯೨ ॥

ನರನೆ ಬ್ರಹ್ಮಾನಂದದಿಂದಲಿ ।
ಭರದೊಳವರು ಶರೀರದಿಂದಲೆ ।
ಹೊರಗೆ ಬರುವರು ದೊರೆತೆ ನಾನೆನುತತಿಹರುಷದಿಂದ ॥
ಮೆರೆಸುವರು ಬಹುಪರಿಯ ಗರ್ಜನೆ ।
ಪರಿಯನಿದ ನಾನೆಂತು ಹೇಳಲಿ ।
ನರನೆ ಬ್ರಹ್ಮಾನಂದವೇಗವನಾರು ಬಣ್ಣಿಪರು ॥ ೯೩ ॥

ಗುರುವು ಶಿಷ್ಯನಿಗಂತರಂಗದೊ- ।
ಳೊರೆವ ಗುಹ್ಯದ ಮಂತ್ರನೇಕಾ- ।
ಕ್ಷರಿಯನವರೊದರುವರು ಕೇಳ್ವೈ ಮೇಘನಾದದಲಿ ॥
ಭರದೊಳಿವರೀ ಭಜನ ಮಾಡುವ ।
ಪರಿಯ ಕೇಳಲು ಮೂರುತೋಕಗ- ।
ಳರೆಗಳಿಗೆಯಲಿ ಕಿವ್ದಡರಾಗುವ ಹೊತ್ತು ಬರುವುದಲಾ ॥ ೯೪ ॥

ತರಣಿಯುದಯದಿ ಕಮಲಕಲಿಕೆಗ- ।
ಳರಳಿದರೆ ಕಮಲಸ್ಥವಾಗಿಹ ।
ಪರಿಮಳವ ಬಚ್ಚಿಡಲು ಶಕ್ಯವೆ ನೋಡು ಕೌಂತೇಯ ॥
ಪರಿಮಳವನಾಸ್ವಾದಿಸುವರೈ ।
ನರಪಸೇವಕ ಭೇದವಿಲ್ಲದೆ ।
ಪರಿಯೊಳನ್ನಯ ಭಕ್ತರೈ ಸ್ವಾನಂದಸಂಯುತರು ॥ ೯೫ ॥

ಎನ್ನ ಗುಣಗಣ ಹಾಡಿ ಹರಸುತ- ।
ಲೆನ್ನಲೀ ತಲ್ಲೀನರಹರೈ ।
ಭಿನ್ನಭಾವವ ಬಿಟ್ಟು ಮರೆವರು ದೇಹಭಾನವನು ॥
ಮುನ್ನವೀಪರಿಯಾಗೆ ಪಾರ್ಥನೆ ।
ಭಿನ್ನಮಾಳ್ಪರು ಜೀವದೇಹವ ।
ಪೂರ್ಣಸ್ವಾತ್ಮಜ್ಞಾನಮಗ್ನರು ಹಗಲಿರುಳ ಮರೆತು ॥ ೯೬ ॥

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥ ೧೦ ॥

ಹರುಷದಿಂದಾನೇನ ಕೊಡುವುದು ।
ನರನೆ ಕೇಳೀ ತೆರದ ಭಕ್ತರಿ- ।
ಗನಿಯಲಾ ತದ್ದಾನ ತಂಗಳವಾಗಿ ತೋರುವುದು ॥
ಭರದೊಳೆನ್ನಿಯ ಕಡೆಗೆ ಬರುವರೆ ।
ಹೊರಟ ಮಾರ್ಗವು ಸರಳವವರಿಗೆ ।
ನರನೆ ತೋರುವುದದ್ಧಹಾದಿಯೆ ಸ್ವರ್ಗಮೋಕ್ಷಗಳು ॥ ೯೭ ॥

ಶರಣಿಜನರುಗಳೆನ್ನ ಭಕ್ತಿಯು ।
ಭರದಿ ಸೇವಿಪರೆಂದು ಮನದಲಿ ।
ಹರುಷದಿಂದವರಿಂಗೆ ಪರಗಳ ಕೊಡಲಿಕಿಚ್ಛಿಸಲು ॥
ದೊರಕಿಹುದು ತದ್ದಾನಸಿದ್ಧಿಯು ।
ನರನೆ ಮೊದಲೇಯವರಿಗದರಿಂ ।
ದಿರುವುದೇನವರಿಂಗೆ ಕೊಡಲೆನ್ನೊದನೆ ಸಾಧನವು ॥ ೯೮ ॥

ಎನ್ನ ಭಕ್ತರ ಪ್ರೇಮಸುಖಸಂ ।
ಪನ್ನತೆಯು ವರ್ಧಿಸಲು ಬೇಕ್ಕೆ ।
ಯೆನ್ನ ಭಕ್ತರೊಳೆತ್ತಲಾರನು ಕಾಲ ದೃಷ್ಟಿಯನು ॥
ಎನ್ನದಿದು ಕರ್ತವ್ಯವಿರುವುದು ।
ಚಿಣ್ಣನಾಡುವ ಬೇಳೆಯಲಿ ಕೂ ।
ಸನ್ನು ಸಂರಕ್ಷಿಪರೆ ತಾಯೋಡುವಳು ಹಿಂದಾಗಿ ॥ ೯೯ ॥

ಬಾಲ ಬೇಡಿದ ವಸ್ತುಗಳನಾ ।
ಲೀಲೆಯಿಂ ತಾಯ್ ವೂರಯಿಸುವಳು ।
ಮೇಲೆ ಮೇಲೆ ನವೀನ ವಸ್ತುವ ಮಾಡಿಡುವಳಲ್ಲ್ಯ ॥
ಅಲಿಸೈ ಕೌಂತೇಯ ಯೂ ಪರಿ ।
ಲೀಲೆಯಿಂದಾ ಭಕ್ತಜನರನು ।
ಪಾಲಿಸಲು ಬೇಕ್ಕೆಯುಪಾಸನೆ ಬೇಡಿದಂದದಲಿ ॥ ೧೦೦ ॥

ಪರಿಪರಿಯ ಪೂಜೋಪಚಾರವ ।
ಶರಣಿವೈಂದವು ಬೇಡಲವುಗಳ ।
ಹರುಷದಿಂ ಪೂರಯಿಸ ಬೇಕ್ಕೆ ಪ್ರೇಮದಲಿ ಪಾರ್ಥ ॥

ಬರುವುದದರಿಂ ಭಕ್ತಿಪೋಷಣ ।
ಬರುವುದೈ ತದ್ಭಕ್ತಿಯೆನಗೆನೆ ।
ನರನೆ ವರ್ಧಿಸ ಬೇಕು ಪರಿಪರಿ ಸಂಪ್ರದಾಯಗಳ ॥ ೧೦೧ ॥

ನರನೆ ಭಕ್ತರ ಪ್ರೇಮವೆನ್ನಲಿ ।
ಯಿರುವುದೈ ನಾನವರ ಭಕ್ತಿಯ ।
ಹರುಷದಿಂ ಸ್ವೀಕರಿಸುವೆನು ಮೆಚ್ಚುವೆನು ಪ್ರೇಮದಲಿ ॥
ನಿರಳರೈ ಲೋಕದಲಿ ಯೊಂದೇ ।
ಪರಿಯ ಭಾವದಲೆನ್ನ ಭಜಿಪರು ।
ಮೆರೆವರಾರೀ ತೆರದಲವರಿಗೆ ನಾಸೆ ದಾನನಲಾ ॥ ೧೦೨ ॥

ಬರಿದೆ ಬಾಹ್ಯಾತ್ಕಾರದಿಂದಲೆ ।
ಶರಣಿಜನರುಗಳೆನ್ನ ಭಜಿಸಲು ।
ವಿರಚಿಸಿದೆನ್ನೈ ಸ್ವರ್ಗಮೋಕ್ಷಗಳೆಂಬ ಗೊಂಬೆಗಳ ॥
ಸಿರಿಸಹಿತ ನಾನೆನ್ನ ದೇಯವ ।
ನಿರದೆ ಶೇಷನಿಗರ್ಪಿಸಿಹೆನ್ನೈ ।
ಯಿರುವುದೊಂದೀ ಜಗದೊಳತ್ಯುತ್ಕೃಷ್ಟ ನೌಖ್ಯನಿದು ॥ ೧೦೩ ॥

ಪರಮ ಸುಖವು ನ್ಯಾತ್ಮಸುಖವೈ ।
ದೊರೆಯಲಾರದು ಸರ್ವರಿಂಗದು ।
ನರನೆ ಕಾಯ್ದಿಟ್ಟಿಹೆನು ಭಕ್ತ್ಯಪ್ರೇಷ್ಠರಿಂಗದನು ॥
ನರನೆ ಪ್ರೇಮದ ಭಕ್ತರನು ಹ ।
ತ್ತರದೊಳಿರಿಸುವೆನೆಂಬ ಮಾತಿದು ।
ಹೊರಗೆ ಹೇಳಲಯೋಗ್ಯವನುಭವದಿಂದ ತಿಳಿಯುವುದು ॥೧೦೪॥

ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥ ೧೧ ॥

ಆತುಮನು ನಾನಿರುವೆನೆನ್ನಯ ।
ಪ್ರೀತಿಪೂರ್ವಕ ಭಕ್ತಿಯೇ ನಿಜ ।
ಭೂತಳದಿ ಬದುಕುವರೆ ಕಾರಣವೆಂದು ನೆನಸುತಲಿ ॥
ಮಾತನಾಡಿಸದನ್ಯನಸ್ತುವ ।
ನೀತೆರದೊಳೆನ್ನನ್ನೆ ಭಜಿಪರು ।
ಪಾರ್ಥ ಕೇಳೀತೆರದ ಭಕ್ತರು ಪ್ರೇಮಭಾಜನರು ॥ ೧೦೫ ॥

ಇರುವರೀ ಪರಿ ಸ್ವಾತ್ಮಜ್ಞಾನಿಗ ।
ಳಿರುವರವರತಿಶುದ್ಧನಿರ್ಮಲ ।
ಕರದಿ ಕರ್ವುರದೀವಟಿಗೆಯನು ಕೊಂಡು ಮೋದದಲಿ ॥

ನರನೆ ನಾನೆ ಮಶಾಲಿಯಾಗುತ ।
ತಿರುಗುವೆನು ಕೇಳವರಿಗೋಸುಗ ।
ಶರಣಿಜನರನು ಕಂಡರವರನು ಸೇವಿಪೆನು ನಾನು ॥ ೧೦೬ ॥

ನರನೆ ಯಜ್ಞಾನಾಂಧಕಾರವೆ ।
ಹರಿಸಿ ಕತ್ತಲೆರಾತ್ರಿಯನು ಸಂ ।
ಹರಿಸುತಿಹ ಸುಜ್ಞಾನಸೂರ್ಯನ ಬೆಳಗಿಹೆನು ನಾನು ॥
ಶರಣಿಕಲ್ಮಷಹರಣ ಭಕ್ತರ ।
ಸುರತರುವು ಸಿರಿಯರಸಕೃಷ್ಣನು ।
ನರನೊಡನೆ ಕೇಳೀತೆರದಿ ಭಾಷಣವ ಮಾಡಿದನು ॥ ೧೦೭ ॥

ನುಡಿಯ ಕೇಳುತ ಪಾರ್ಥನಾಕ್ಷಣ ।
ನುಡಿದನೈ ಗೋಪಾಲಕೃಷ್ಣಗೆ
ಜಡಜನಾಭನೆ ಕೇಳು ನಾನು ಕೃತಾರ್ಥನಾದೆನಲಾ ॥
ಒಡೆಯ ನೀ ಸಂಸಾರರೂಪದ ।
ಕೆಡಕು ಕಸ ಝಾಡಿಸುತಲೆನ್ನನು ।
ಬಿಡಿಸಿದಿಯಲಾ ಜನ್ಮಮರಣದ ಚಕ್ರದಿಂ ನಿಜದಿ ॥ ೧೦೮ ॥

ಎನ್ನ ಜನ್ಮವ ಶ್ರೀಹರಿಯೆ ನಾ- ।
ನೆನ್ನ ಕಣ್ಣಿಂದೀಗ ನೋಡಿದೆ ।
ನೆನ್ನ ಜೀವಿತವೆನ್ನ ಕೈವಶವಾಯಿತಿಂದಿನಲಿ ॥

ಸನ್ನುತಾತ್ಮನೆ ಪರಮನಿಭುವೇ ।
ನಿನ್ನ ಜಾಯಿಂ ನುಡಿಯ ಕೇಳುತ ।
ಧನ್ಯನಾದೆನು ಹರಿಯೆ ಸಾರ್ಥಕವಾಯಿತಾಯುಷ್ಯ ॥ ೧೦೯ ॥

ಏನ್ನ ಭಾಗ್ಯೋದಯವ ಮೂಡಿತು ।
ನಿನ್ನ ಗೀತಾವಾಕ್ಯಸೂರ್ಯನು ।
ಛಿನ್ನ ಮಾಡಿದನೆನ್ನ ಕೇಳಜ್ಞಾನತಿಮಿರವನು ॥
ನಿನ್ನ ದಯೆಯಿಂ ಹರಿಯೆ ಕೇಳ್ದೆ ।
ಪೂರ್ಣ ನಿನ್ನ ಯಥಾರ್ಥರೂಪವ ।
ಕಣ್ಣಿನೆದುರಿಲಿ ಕುಣಿಯುತಿದೆ ನಾ ಭಾಗ್ಯಶಾಲಿಯಲಾ ॥ ೧೧೦ ॥

ಅರ್ಜುನ ಉವಾಚ—

ಪರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನ್ ।
ಪುರುಷಂ ಶಾಶ್ವತಂ ದಿವ್ಯಮಾದಿದೇವಮಜಂ ವಿಭುಮ್ ॥ ೧೨ ॥

ಹರಿಯೆ ಶ್ರೀಗೋಪಾಲಕೃಷ್ಣನೆ ।
ಯಿರುವಿ ನೀ ಪರಬ್ರಹ್ಮ ವಿಶ್ವಕೆ ।
ಯಿರುವಿಯಲ್ಲೈ ಸರ್ವಭೂತಂಗಳಿಗೆ ವಿಶ್ರಾಂತಿ ॥
ಹರಹರವಿರಿಂಚಿಗಳೆನಿಪ ಮೂ- ।
ವರಿಗೆ ನೀನಾಧಾರಭೂತನು ।
ಪುರುಷನಿಷ್ಪತ್ತ್ಯೈದನೆಯ ಪರತತ್ತ್ವ ನೀನಿರುವಿ ॥ ೧೧೧ ॥

ಇರುವಿ ಮಾಯಾತೀತನೆಂಬುವ ।
ಪರಮ ದಿವ್ಯಸ್ವರೂಪ ನೀನೇ ।
ಬರುವುದೆಂತೈ ಜನ್ಮಮರಣಗಳೆಂಬ ಧರ್ಮಗಳು ॥

ಇರುವಿ ನೋಡಲನಾದಿಸಿದ್ಧನು ।
ಪರಮ ನಿನ್ನಯ ರೂಪ ತಿಳಿಯಿತು ।
ನಿರುತ ನೀನು ತ್ರಿಕಾಲಚಾಲಕನಲ್ಲವೇ ನೋಡು ॥ ೧೧೨ ॥

ದೇವರಿಗೆ ನೀ ದೇವ ಜಗದಲಿ ।
ಜೀವಕಳೆಗಧಿದೈವತವಲಾ ।
ಭಾವಿಸಲು ಬ್ರಹ್ಮಾಂಡಕಾಶ್ರಯನಿರುವಿ ನೀ ಹರಿಯೆ ॥
ಕಾವದೇವನು ಭಾವಹೀನನು ।
ಭೂವಲಯದಲಿ ಚಿತ್ರಚರಿತನು ।
ಗೋವಳರಕುಲಜಾತ ನೀನೇ ಸಕಲ ವಿಶ್ವಾತ್ಮ ॥ ೧೧೩ ॥

ಆಹುಸ್ತ್ವಾಮೃಷಯಃ ಸರ್ವೇ ದೇವರ್ಷಿರ್ನಾರದಸ್ತಥಾ ।
ಅಸಿತೋ ದೇವಲೋ ವ್ಯಾಸಃ ಸ್ವಯಂ ಚೈವ ಬ್ರವೀಷಿ ಮೇ ॥ ೧೩ ॥

ಹರಿಯೆ ನಾನೆರಡನೆಯ ತೆರದಲಿ ।
ದೊರಕಿಸಿದೆನನುಭವವ ನಿನ್ನಯ ।
ಪರಿಪರಿಯ ಋಷಿವರರು ವಿಸ್ತರಿಸಿಹರು ತ್ವದ್ರೂಪ ॥
ಅರಿತೆನಿಂದಿನ ದಿವಸವಮ್ಮೀ ।
ಪರಿಯ ಪೇಳ್ದುದು ಸತ್ಯವೆನುತಲಿ ।
ಹರಿಯೆ ನಿನ್ನ ಕೃಪಾಕಟಾಕ್ಷದೊಳಾಯ್ತು ಲಾಭವಿದು ॥ ೧೧೪ ॥

ನಾರದನು ಸುರಮುನಿ ಜಗತ್ಸಂ- ।
ಚಾರಕರ ಬರುತೆಮ್ಮ ಮನೆಯಲಿ ।
ಚಾರು ಭಕ್ತಿಯಲಿದನೆ ಹಾಡುತ್ತಿಹನು ವೀಣೆಯಲಿ ॥
ಬಾರದಾಯಿತು ಮನದೊಳರ್ಥವು ।
ಚಾರು ಗಾಯನಸುಖವನುಂದೆನು ।
ನೀರಜಾಕ್ಷನೆ ಬಂದುದನುಭವನಿಂದಿಗದು ತಿಳಿಯೆ ॥ ೧೧೫ ॥

ಹುಟ್ಟುಕುರುಡರೆ ಪೂರ್ಣತುಂಬಿಹ ।
ಪಟ್ಟಣದೊಳಾ ಸೂರ್ಯನುದಯಿಸೆ ।
ದೃಷ್ಟಿಯಿಂದಾ ಸೂರ್ಯಬಿಂಬದ ಬೆಳಕ ನೋಡುವರೆ ॥
ಮುಟ್ಟಿದರೆ ಹೂಬಿಸಿಲು ಮೈಯನು ।
ತುಷ್ಟಿಯಹುದೈ ಮನದೊಳವರಿಗೆ ।
ಶ್ರೇಷ ಸೂರ್ಯನ ದಿವ್ಯತೇಜವನರಿವರವರೇನು ॥ ೧೧೬ ॥

ಸುರಮುನಿಪನಧ್ಯಾತ್ಮವಿಷಯವ ।
ತಿರಿತಿರಿಗಿ ಹಾಡುತ್ತಲಿದ್ದನು ।
ಹರಿಯೆ ನಾನದ ತಿಳಿಯಲಿಲ್ಲೈ ವಿಷಯಮಹಿಮೆಯನು ॥
ಪರಿಪರಿಯೊಳಾ ರಾಗರಾಗಿಣಿ ।
ಸರಸತೆಯು ಮೇಣ್ ತಾನಮಧುರತೆ ।
ಬರುವುವಲ್ಲದೆ ಮನದಿ ಬಾರದು ವಿಷಯದರ್ಥವದು
॥ ೧೧೭ ॥
ಹರಿಯೆ ದೇವಲನಸಿತನೀಪರಿ ।
ಮೆರೆವ ನಿನ್ನ ಗುಣಾನುವಾದವ ।
ನಿರದೆ ಮಾಳ್ಪುದ ಕೇಳಿಹೆನು ತತ್ತ್ವಾರ್ಥ ತಿಳಿಯದಲೆ ॥

ಅರಿಯದಾದೆನು ವಿಷಯವಿಷದಿಂ ।
ಭರದೊಳೆನ್ನಯ ಬುದ್ಧಿ ಕೆಟ್ಟತು ।
ವಿರಸಕಟು ಜೀವಕ್ಕೆಲಾ ಪರಮಾರ್ಥಪೀಯೂಷ ॥ ೧೧೮ ॥

ಇರುವುದಾದರು ಕಟುವಿಷಯತತಿ ।
ಯಿರುವುದದು ಜೀವಕ್ಕೆ ಸವಿಯೇ ।
ಯೆರಡನೆಯರೇತಕ್ಕೆ ನಮ್ಮ ವ್ಯಾಸಮುನಿರಾಯ ॥
ಅರಮನೆಗೆ ಬಂದೆಮ್ಮ ನಿನ್ನಯ ।
ಪರಿಪರಿಯ ಗುಣಗಣವನವ ವಿ ।
ಸ್ತರಿಸಿದನಲಾ ಬಾರದಾಯಿತು ಮನದಿ ತತ್ತ್ವಾರ್ಥ ॥ ೧೧೯ ॥

ಹರಿಯೆ ಕತ್ತಲೆರಾತ್ರಿಯಲಿ ದೊರ ।
ಕಿರುವ ಚಿಂತಾಮಣಿ ಬಿಸಾಡುತ ।
ಮರಳಿ ಹಗಲಲಿ ದುಃಖ ಮಾಡುವ ಪರಿಯಿದಾಯಿತಲಾ ॥
ಅರುಹಿದೀ ಮುನಿವಚನವೆಲ್ಲವು ।
ಮೆರೆವ ಜ್ಞಾನದ ರತ್ನಖನಿಯೈ ।
ಯರಿತೆ ನಿನ್ನುಪದೇಶಸೂರ್ಯನ ಕಿರಣದಿಂದೀಗ ॥ ೧೨೦ ॥

ಸರ್ವಮೇತದೃತಂ ಮನ್ಯೇ ಯನ್ಮಾಂ ವದಸಿ ಕೇಶವ ।
ನ ಹಿ ತೇ ಭಗವನ್ವ್ಯಕ್ತಿಂ ವಿದುರ್ದೇವಾ ನ ದಾನವಾಃ ॥ ೧೪ ॥

ಹರಿಯೆ ನಿನ್ನಯ ವಾಕ್ಯಕಿರಣದಿ ।
ಹರಿಯಿತೆನ್ನಜ್ಞಾನತಿಮಿರವು ।
ಭರದಿ ಹಬ್ಬಿದುದೆನ್ನ ಹೃದಯದಿ ಜ್ಞಾನರವಿತೇಜ ॥
ಅರಿತೆನಿಂದಾ ಮುನಿಗಳಾಡಿದ ।
ಸರಸ ಶಬ್ದಗಳೆಲ್ಲ ಸಾರ್ಥಕ ।
ಮೆರೆವ ಜ್ಞಾನದ ಬೀಜವೆಂದೇ ತಿಳಿದೆನಿಂದಿನಲಿ ॥ ೧೨೧ ॥

ಹರಿಯೆ ಕೇಳಾ ಬೀಜವೆನ್ನಯ ।
ವಿರಸಹೃದಯಕ್ಷೇತ್ರದಲಿ ಕೇಳ್ ।
ಬರಿದೆ ಬಿತ್ತಿದರೀವರೆಗೆ ಬಹುವ್ಯರ್ಥವಾಯಿತಲಾ ॥
ಹರಿಯೆ ನಿನ್ನ ಕೃಪಾತುಷಾರದಿ ।
ಸರಸಸಂವಾದಸ್ವರೂಪದ ।
ಬರುವುದಾಯಿತು ಫಲವು ಹರ್ಷಾಯ್ತೆಂದು ವನಮಾಲಿ
॥ ೧೨೨ ॥
ಹರಿಯೆ ಸದ್ಗುರುಮೂರ್ತಿ ಜನ್ಮಾಂ ।
ತರದಿ ಮಾಡಿದ ಪುಣ್ಯವಶದಲಿ ।
ದೊರಕಿದಿಯಲಾ ಯೆನ್ನ ಭಾಗ್ಯೋದಯವೆ ಮೂಡಿದುದು ॥

ಅರಿಯಲಿಂದಿಗೆ ಪುಣ್ಯಕರ್ಮಗ ।
ಳಿರದೆ ಋಣದಿಂ ಮುಕ್ತವಾದುವು ।
ಹರಿಯೆ ನಿನ್ನಯ ಗುಣಗಣಂಗಳನೆಂತು ವರ್ಣಿಸಲಿ ॥ ೧೨೩ ॥

ಹಿರಿಯರಾದರು ಪರಿಪರಿಯಲಾ ।
ನಿರುತ ನಿನ್ನ ಸ್ತುತಿಯ ಮಾಡಿದ ।
ರರರೆ ನಾನೀವರೆಗೆ ತಿಳಿಯದೆ ಕೆಟ್ಟೆನೈ ಕೆಟ್ಟೆ ।
ಗುರುಕೃಪಾಂಜನ ಬೀಳೆ ನಯನದಿ ।
ದೊರೆಯುವುದಲಾ ಸರ್ವಸಿದ್ಧಿಯು ।
ಗುರುಕೃಪೆಯ ಹೊರತೆಲ್ಲ ಯತ್ನವು ನಿಷ್ಫಲವು ತಿಳಿಯೆ ॥ ೧೨೪ ॥

ದೈವಬಲವನುಕೂಲವಾಗಲು ।
ಸರ್ವಯತ್ನವು ಸಫಲವಪ್ಪುದು ।
ದೈವಹೀನನ ಯತ್ನ ನೋಡಲರಣ್ಯರೋದನವೆ ॥
ಆ ವಸಂತನ ಹೊರತು ಫಲಗಳ ।
ಭಾವ ಯತ್ನವ ಮಾಡಲೇನೈ ।
ಭೂವಲಯದಲಿ ದೈವ ಬೇಕನುಕೂಲ ಸಾಧನಕೆ ॥ ೧೨೫ ॥

ನರನು ವಿಷಮಜ್ವರದಿ ಪೀಡಿತ- ।
ನಿರಲು ಜ್ವರದವಸಾನವಾಗದೆ ।
ಬರುವುದೇನೈ ನಾಲಿಗೆಗೆ ರುಚಿ ತತ್ತ್ವ ನೋಡಿದಿಯಾ ॥
ನರನಿಗಾರೋಗ್ಯವನು ತಾರದೆ ।
ಬರಿದೆ ವೈದ್ಯನ ಸ್ತುತಿಯು ಯೋಗ್ಯವೆ ।
ಚರಿಸಿದರೆ ಚೈತನ್ಯ ಪ್ರಾಣೇಂದ್ರಿಯಗಳಿಂ ಫಲವು ॥ ೧೫೬ ॥

ವೇದಶಾಸ್ತ್ರಪುರಾಣಗಳ ತಾ- ।
ನೋದಿ ಪಠಿಸಲದೇನು ಫಲ ಯೋ- ।
ಗಾದಿಗಳ ಸಾಧನದಿ ಬರುವುದೆ ಫಲವು ಜಗದೊಳಗೆ ॥

ಆದರಾ ಸದ್ಗುರುವಿನೊಲುಮೆಯು ।
ಮೇದಿನಿಯಲಾಗುವುದು ಸಿದ್ಧಿಯು ।
ಆ ಧನಂಜಯ ಗುರುಕೃಪಾಮೃತದಿಂದ ಕುಣಿದನಲಾ ॥ ೧೫೭ ॥

ನರನು ನಗುತಿಂತೆಂದ ಕೃಷ್ಣಗೆ ।
ಹರಿಯೆ ನಿನ್ನಯ ನುಡಿಗಳರ್ಥವ ।
ನರಿತೆನಿಂದಿಗೆ ಬಂದುದನುಭವ ತ್ವತ್ಪ್ರಸಾದದಲಿ ॥
ಇರುವಿ ನೀನೇ ಮುಕ್ತಿದಾತನು ।
ಸುರವರರು ದಾನವರು ತಿಳಿಯರು ।
ದೊರಕಿತ್ತೆಯಾ ಜ್ಞಾನವಿಂದಿಗೆ ನಿನ್ನ ನಿಜರೂಪ ॥ ೧೫೮ ॥

ಅರಿಯದಲೆ ತತ್ತ್ವಾರ್ಥವನು ತಾ- ।
ನರಿತೆನೆಂಬುವ ಹೆಮ್ಮೆ ಸಲ್ಲದು ।
ನರಗೆ ನಿನ್ನ ಜ್ಞಾನದನುಭವ ದೊರೆವುದತಿಕಠಿಣ ॥

ಸ್ವಯಮೇವಾತ್ಮನಾತ್ಮಾನಂ ವೇತ್ಥ ತ್ವಂ ಪುರುಷೋತ್ತಮ ।
ಭೂತಭಾವನ ಭೂತೇಶ ದೇವದೇವ ಜಗತ್ಪತೇ ॥ ೧೫ ॥

ಅರಿವರಾರಾಕಾಶವಿಸ್ತರ- ।
ವರಿಯರೈಯಾಕಾಶ ಹೊರತದ ।
ಧರೆಯು ಭಾರವ ಧರೆಯೆ ತಿಳಿವುದು ತಿಳಿಯರನ್ಯರದ ॥ ೧೫೯ ॥

ಹರಿಯೆ ಲಕ್ಷ್ಮೀಪತಿಯೆ ನಿನ್ನಯ ।
ಪರಮಶಕ್ತಿಯ ಗೊತ್ತ ಹಿಡಿಯುವ- ।
ರಿರುವರಾರೀ ಜಗದಿ ನಿನ್ನಯ ಹೊರತು ನೋಡಿದರೆ ॥
ಅರಿತೆವೆಂದೀ ನಿನ್ನ ಶಕ್ತಿಯ ।
ಪರಿಪರಿಯ ನಿಗಮಗಳು ಪೇಳ್ವುವು ।
ಪರಿಯನರಿಯವು ಹರಿಯೆ ನಿನ್ನಯಗಾಧಶಕ್ತಿಯನು ॥೧೬೦॥

ಯಾರು ಮನದೊಡನೋಡುವರು ಮ- ।
ತ್ತಾರು ಮಾರುತನನ್ನು ಹಿಡಿವರು ।
ಯಾರು ಕೈಯಿಂದೀಸುವರು ಮಾಯಾಸಮುದ್ರವನು ॥
ಯಾರು ನಿನ್ನನು ಪೂರ್ಣವರಿವರು ।
ಯಾರಿಗಿಹುದು ಸಮಸ್ತಜ್ಞಾನವು ।
ಧಾರುಣಿಯಲೀ ನಿನ್ನರೂಪವ ನೀನೆ ತಿಳಿವಿಯಲಾ ॥೧೬೧॥

ಅರಿಯಲಾರರು ನಿನ್ನ ರೂಪವ- ।
ನರವು ನಿನಗೊಬ್ಬನಿಗೆ ಜಗದಲಿ ।
ಯರಿವ ಪರಿಯಲಿ ಹೇಳಿ ಯನ್ಯರಿಗರವು ಮಾಡುವ್ದದು ।'

ಹರಿಯೆ ನಿನಗೊಬ್ಬನಿಗೆ ಸಾಧ್ಯವು ।
ಚರಣಕೆರಗುವೆ ನಾನು ನಿನ್ನಯ ।
ಪರಿಯನೆನಗಿಂದೊಮ್ಮೆ ಹೇಳ್ವೈ ಯಾದವೇಶ್ವರನೆ ॥ ೧೬೨ ॥

ಹರಿಯೆ ಜಗದುತ್ಪತ್ತಿಕಾರಣ ।
ಹರಿಯೆ ನೀ ಸಂಸಾರಮದಗಜ- ।
ಕಿರುವಿಯೈ ಪಂಚಾನನನು ದೇವರಿಗೆ ದೇವನಲಾ ॥
ಪರಕಿಸಲು ನಿನ್ನಯ ಮಹತ್ತ್ವವ- ।
ನಿರಲು ಯೋಗ್ಯನು ನಿನ್ನ ಹತ್ತರ ।
ಧರಿಸುತೀಪರಿ ಸಂಶಯವ ನಾ ನಿನ್ನ ಬೇಡದೊಡೆ ॥ ೧೬೩ ॥

ಇರುವರಾರೀ ಶಕ್ತರೆನ್ನಯ ।
ಹರಿಸುವರೆ ಸಂಸಾರವಾಶವ ।
ಶರಧಿನದಿಗಳು ತುಂಬಿ ತುಳುಕಲು ಚಾತಕಂಗೇನು ॥
ಬರುವ್ದದೇನುಪಯೋಗ ಮೇಘವು ।
ಸುರಿದರೊಂದೇ ಪರಿಯೊಳವನಿಗೆ ।
ದೊರಕುವುದು ನೀರಲ್ಲವೇ ಬೆರೇನು ಸಾಧನವು ॥ ೧೬೪ ॥

ಗುರುಗಳೆಶುವರು ಹಲರು ಜಗದಲಿ ।
ಗುರುವು ನೀನಾಗಿರುವಿ ಯೆಮಗೀ- ।
ಪರಿಯ ಗುರುವನ್ಯರನು ಕಾಣೆನು ಹುಡುಕಿ ಮೂಜಗದಿ ॥

ಕರುಣೆಯಂಬುಧಿ ಶ್ರೇಮದವನಿಯೆ ।
ಯರುಹು ನಿನ್ನ ವಿಭೂತಿಯೋಗವ- ।
ನರಿವ ಪರಿಯಲ್ಲೆನಗೆ ವರಸುಜ್ಞಾನಮೂರುತಿಯೆ ॥ ೧೩೫ ॥

ವಕ್ತುಮರ್ಹಸ್ಯಶೇಷೇಣ ದಿವ್ಯಾ ಹ್ಯಾತ್ಮವಿಭೂತಯಃ ।
ಯಾಭಿರ್ವಿಭೂತಿಭಿರ್ಲೋಕಾನಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ ॥ ೧೬ ॥

ಹರಿಯೆ ಕರುಣೆಯೊಳೆನಗರುಹು ನಿ- ।
ನ್ನಿರುವ ವ್ಯಾಪಕಶಕ್ತಿತೇಜವ ।
ಧರೆಯೊಳೆನಗೆಲ್ಲವನು ತೋರಿಸು ತ್ವದ್ವಿಭೂತಿಗಳ ॥

ಅರಿವೆನಿರುವುವನಂತ ನಿನ್ನಯ ।
ವರವಿಭೂತಿಗಳೆನುತಲದರೊಳು ।
ಭರದೊಳೆನಗರುಹೀಗ ಮುಖ್ಯನದಾವುದೆಂಬುದನು ॥ ೧೩೬ ॥

ಕಥಂ ವಿದ್ಯಾಮಹಂ ಯೋಗಿಂಸ್ತ್ವಾಂ ಸದಾ ಪರಿಚಿಂತಯನ್ ।
ಕೇಷುಕೇಷು ಚ ಭಾವೇಷು ಚಿಂತ್ಯೋಽಸಿ ಭಗವನ್ಮಯಾ ॥ ೧೭ ॥

ಅರಿವುದೆಂತೈ ನಿನ್ನ ನಾಪರಿ- ।
ಯಿರುಹ ಬೇಕೈ ದೇವದೇವನೆ ।
ನಿರುತ ನಿನ್ನನು ಚಿಂತಿಸುವುದೆಂತೆನುತ ಪೇಳೆನಗೆ ॥
ಭರಿತ ನೀನೀ ವಿಶ್ವದಲಿ ಯೆಂ- ।
ದರುಹಿದರೆ ನಾ ತಿಳಿಯಲಾರೆನು ।
ಕರುಣದಿಂದ ವಿಭೂತಿಗಳ ವಿಸ್ತರಿಪುದೆನಗೀಗ ॥ ೧೩೭ ॥

ಧರೆಯೊಳಗೆ ನಿನ್ನಯ ವಿಭೂತಿಗ- ।
ಳಿರುವುವೆಲ್ಲಿಯೆನುತ್ತ ಪೇಳ್ದರೆ ।
ಹರಿವುವೆನ್ನಯ ಸಂಶಯಂಗಳು ಚಿಂತಿಸುವೆನದನೆ ॥
ತ್ವರಿತದಲಿ ಸುಲಭದಲಿ ನಿನ್ನನು ।
ದೊರಕಿಸುವ ಸಾಧನವ ಹೇಳೈ ।
ಕರುಣದಿಂದದ ಹೇಳು ಸ್ವಷ್ಟೀಕರಿಸಿ ಶ್ರೀಕೃಷ್ಣ ॥ ೧೩೮ ॥

ವಿಸ್ತರೇಣಾತ್ಮನೋ ಯೋಗಂ ವಿಭೂತಿಂ ಚ ಜನಾರ್ದನ ।
ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತಿ ಮೇಽಮೃತಮ್ ॥ ೧೮ ॥

ಭೂತನಾಥನೆ ನಾನು ಕೇಳ್ವ ವಿ- ।
ಭೂತಿಗಳ ವಿಸ್ತರಿಸಿ ಹೇಳೈ ।
ಯಿಾತೆರದಿ ಮಗುಳೇನ ಹೇಳುವುದೆನುತ ಕೇಳಿದರೆ ॥
ಏತಕೀಪರಿ ಬೇಡ ಸಂಶಯ ।
ಭೂತಳದಿ ಯಮೃತವು ದೊರಕಿದರೆ ।
ಮಾತು ಬರುವುದೆ ಸಾಕೆನುತ ಕುಡಿಯುಲಿಕೆ ಹಾಕಿದರೆ ॥ ೧೩೯ ॥

ಕರದರೇನದನಮೃತವೆನುತಲಿ ।
ದೊರೆವುದೇನಮರತ್ವ ಶಾಶ್ವತ ।
ಧರೆಯೊಳಾರಿದ ಬಿಡುವನೈ ಸಾಕೆನುತ ತ್ಯಜಿಸುವರೆ ॥
ಪರಿಯಿದೇನೈ ಕ್ಷುದ್ರವಮೃತವು ।
ಹರಿಯೆ ಪರಮಾಮೃತವು ಕೇಳ್ನೀ- ।
ನರುಹುವೀ ತತ್ತ್ವಾರ್ಥಸಾರವ ಬಿಡುವರಾರಿದನು ॥ ೧೪೧ ॥

ಇರುವುದೇನೈಯಮೃತ ವಿಷಸೋ- ।
ದರನಲಾ ಬ್ರಹ್ಮಾದಿದೇವರು ।
ಮರಣಭಯದಿಂ ಕುಡಿದರೇನಾಯ್ತುವರ ಗತಿ ನೋಡೆ ॥
ಬರಿದೆ ಕಮಲಾಸನನ ದಿನವೊಂ- ।
ದರಲಿ ಹದಿನಾಲ್ಕಿಂದ್ರರಳಿವರು ।
ಮೆರೆವುದೊಂದೇ ರಸವು ಕ್ಷೀರಾಬ್ಧಿಯಲಿ ನೋಡಿದರೆ ॥ ೧೪೦ ॥

ಮಂದರಾಚಲವೆತ್ತಿದಲೆಯಾ- ।
ಸಿಂಧುಮಥನವ ಮಾಡದಲೆ ತ- ।
ನ್ನಿಂದ ತಾನೇ ಸಿಗುವುದೀ ಸುಧೆ ಯಾದಿನಿರಹಿತವು ॥
ಗಂಧರಸರುಚಿಹೀನವಿಹುದಿದು ।
ಕುಂದುಕೊರತೆಗಳೆಲ್ಲ ಪರಮಾ- ।
ನಂದಸುಖಮಯ ಶುದ್ಧನಿರ್ಮಲ ಸಿದ್ಧತತ್ತ್ವವಿದು ॥ ೧೪೧ ॥

ಧ್ಯಾನ ಮೂಡಲು ಸರ್ವಜನರಿಗೆ- ।
ಧೀನವಿಹುದಿದು ಸ್ಮರಣಮಾತ್ರದಿ ।
ಹಾನಿಮಾಳ್ಪುದು ಮಾನವರ ಸಂಸಾರಜಾಲವನು ॥
ಏನ ಹೇಳಲಿ ಸಕ್ತಿಯಿಂ ಸ್ವಾ- ।
ಧೀನ ಬರುವುದು ನಿತ್ಯ ಶಾಶ್ವತ ।
ಹಾನಿಯಾಗುವುವಲ್ಲವೇ ಜನ್ಮಾದಿತಾಪಗಳು ॥ ೧೪೩ ॥

ಪರಮಸುಖ ಸಂಪ್ರಾಪ್ತಿಯಪ್ಪುದು ।
ಹೊರಗೊಳಗೆ ವರ್ಧಿಸುವುದಾ ಸುಖ ।
ಬಿರಿದೆ ಸೇವನ ಮಾಡಲಾತ್ಮಜ್ಞಾನ ದೊರೆಯುಸ್ಪರು ॥
ಇರುವುದೀ ಪರಿ ನಿನ್ನ ತತ್ತ್ವದ ।
ಪರಮ ಪೀಯೂಷವದು ನೋಡಲು ।
ಭರದೊಳೆನಗಿಕ್ಕುತಲಿರಲು ಸಾಕೆಂಬೆನೇ ನಾನು ॥ ೧೪೪ ॥

ಹರಿಯೆ ನಿನ್ನಯ ನಾಮವೇ ಸುಧೆ ।
ತಿರಿಗಿ ತವ ಸಹವಾಸವಾಯಿತು ।
ಮರಳಿ ಪರಮಾನಂದಸುಖವನು ಸುರಿಸ್ಪುತಿರುನಿಮಿಷ ॥
ಅರಿಯೆ ನಾನುಪಮೆಯನು ಕೊಡುವರೆ ।
ಹರುಷಸಾಗರವುಕ್ಕಿ ಬರುತಿದೆ ।
ತಿರಿತಿರಿಗೆ ನಾನೀಸುಖವ ಬಯಸಿದರೆ ಯಚ್ಚರಿಯೆ ॥ ೧೪೫ ॥

ಮರಳಿ ನೀನು ವಿಭೂತಿಯೋಗವ- ।
ನರುಹಿದರೆ ವುನರುಕ್ತಿಯಾದರು ।
ಹರಿಯೆ ದೋಷವಿದಲ್ಲ ಹೇಳ್ವೆ ಯೆನಗೆ ಮತ್ತೊಮ್ಮೆ ॥

ತರಣಿಕಿರಣಕೆ ಬರುಸ್ಪುದೇನಾ- ।
ಪರಿಯ ದೋಷವ ಹರಿಯೆ ನೋಪೈ ।
ತಿರಿತಿರಿಗೆ ದಿನದಿನದಿ ಬಂದರು ಹರ್ಷಕಾರಕವು ॥ ೧೪೬ ॥

ಇರುವುದೇ ಭ್ರಷ್ಟತೆಯು ಜೆಂಕಿಗೆ ।
ನಿರುತ ಲೋಕತ್ರಯದಿ ಹರಿಯುವ ।
ಸುರತರಂಗಿಣಿಯನ್ನು ತಂಗಳೆಂದು ಕರೆಯುವರೆ ॥
ಹರಿಯೆ ನಿನ್ನೀಮುಖದಿ ಹೊರಡುವ ।
ಸರಸ ಗೀತೆಯ ಕೇಳಿ ಮನದೊಳ- ।
ಗರಿತ ನಾದಬ್ರಹ್ಮ ಒಂದುದು ಮೂರ್ತಿರೂಪದಲಿ ॥ ೧೪೭ ॥

ಧರೆಯೊಳತಿದುರ್ಲಭದ ಚಂದನ- ।
ಮರಕೆ ಹೂಗಳು ಬಂದುವೋ ಯೊ- ।
ಪರಿಯಿದಾಯಿತು ನಿನ್ನ ತತ್ತ್ವಾರ್ಥವನು ಕೇಳುತಲೆ ॥
ನರನ ವೇತನವ ಕೇಳುತೀಪರಿ ।
ಹರುಷನಿರ್ಭರತನಾದನೆ ಹರಿ ।
ಮರಳಿ ತಲೆಸ್ಪೆಯೆಲ್ಲ ತೂಗುತಲೆಂದನಸುರಾರಿ ॥ ೧೪೮ ॥

ನರನು ಭಕ್ತಿಜ್ಞಾನದಾಗರ ।
ವೆರೆದನ್ನೆ ಶ್ರೀಕೃಷ್ಣನೆರುಲಿ ।
ಹರಿಗೆ ಪರಮಾನಂದವಾಯಿತು ಭಕ್ತವತ್ಸಲಗೆ ॥
ಮರಳಿ ಪ್ರೇಮದ ವೇಗ ಬಂತೈ ।
ಹರಿಯದನ್ನಾವರಿಸುತಾಕ್ಷಣ ।
ನರಗೆ ಸ್ರತ್ಯುತ್ತರವನಿತ್ತನು ಪ್ರೇಮಪೂರ್ವಕದಿ ॥ ೧೪೯ ॥

ಶ್ರೀಭಗವಾನುವಾಚ—

ಹಂತ ತೇ ಕಥಯಿಷ್ಯಾಮಿ ದಿವ್ಯಾ ಹ್ಯಾತ್ಮವಿಭೂತಯಃ ।
ಪ್ರಾಧಾನ್ಯತಃ ಕುರುಶ್ರೇಷ್ಠ ನಾಸ್ತ್ಯಂತೋ ವಿಸ್ತರಸ್ಯ ಮೇ ॥ ೧೯ ॥

ಇರುವೆ ಬ್ರಹ್ಮನ ಪಿತನು ತಾನೀ- ।
ತೆರದ ಭಾವನೆ ಮರೆತು ಕೃಷ್ಣನು ।
ಪರಮ ಪ್ರೇಮದೊಳೆಂದನಾ ಪಾರ್ಥನಿಗೆ ಹರ್ಷದಲಿ ॥
ನರನೆ ಕೇಳೆನ್ನಪ್ಪ ನೀನೀ- ।
ತೆರದಿ ತೋರ್ಪಿಸಿ ಜ್ಞಾನದಿಚ್ಛೆಯ ।
ಮರುಳ ಮಾಡಿದಿ ಯೆನ್ನ ಹೇಳುವೆನೆಲ್ಲ ವಿಸ್ತರದಿ ॥ ೧೫೦ ॥

ನರನಿಗಪ್ಪನೆನಿಪ್ಪ ಶಬ್ದದಿ ।
ಕರೆದರೇನಚ್ಚರಿಯು ಜಗದಲಿ ।
ಹರಿಯು ಲೀಲೆಯನಾಡಲಿಲ್ಲವೆ ನಂದಸುತನೆನುತ ॥

ಅರಿಯುತಿದನಚ್ಚರಿಯು ಜ್ಞಾನೇ- ।
ಶ್ವರನು ಮಗುಳೆಂತೆಂದನಾಗಲೆ ।
ಪರಮ ಪ್ರೇಮಾವಧಿಯು ಮಾತಿದು ಭಕ್ತವತ್ಸಲನ ॥ ೧೫೧ ॥

ಮರಳಿ ನಗುತಿಂತೆಂದ ಪಾರ್ಥಗೆ ।
ನರನೆ ಭಗಿನೀಧವನೆ ಯೆನ್ನಯ ।
ಪರಿಪರಿಯಲಿ ವಿಭೂತಿಗಳು ಕೇಳಿಹುವು ತಿಳಿಯುವರೆ ॥
ಇರುವುದಾದರು ಯೆನ್ನದೀಪರಿ ।
ಯಿರಿಯಲಾರೆನು ಸರ್ವವನು ನಾ- ।
ನರಿಯುವರೆ ಗಣನೆಯನು ಮಾಳ್ಪರೆ ಶಕ್ಯರಾರಿಹರು ? ೧೫೨ ॥

ನರನೆ ನಾನಿಹೆನೆಂತು ಪೆನ್ನಯ ।
ಪರಿಯವಾವುದು ನನ್ನ ನಾನೇ ।
ಯರಿಯಲಾರೆನು ಗುಹ್ಯ ತತ್ತ್ವವ ನಿನಗೆ ಪೇಳುವೆನು ॥
ಪರಿಯದಾದರು ನೋಡು ನಾನಾ ।
ಪರಿಯ ಮುಖ್ಯವಿಭೂತಿಗಳ ವಿ- ।
ಸ್ತರಿಸಿ ಪೇಳುವೆ ಕೇಳು ಮನಗೊಟ್ಟದನು ಕೌಂತೇಯ
॥ ೧೫೩ ॥
ತಿಳಿಯಲು ವಿಭೂತಿಗಳನೀಪರಿ ।
ತಿಳಿವುದೆಲ್ಲವು ರೂಪವೆನ್ನದು ।
ಕೊಳಲು ಕೈಯಲಿ ಬೀಜ ಮರ ಬಂತಲ್ಲ ಕೈವಶವು ॥

ಹೊಲವು ಕೈವಶವಾದರೆಲ್ಲವು ।
ಬೆಳೆಯು ಕೈವಶವಲ್ಲವೇ ನೀ- ।
ತಿಳಿಯೆ ಮುಖ್ಯವಿಭೂತಿಗಳ ನೀ ವಿಶ್ವ ತಿಳಿವಿಯಲಾ ॥ ೧೫೪ ॥

ನರ ಧನುರ್ಧರ ವೀರ ಕೇಳೈ ।
ಯಿರುವುದೇನೈಯಂತವೆನಗೀ- ।
ಪರಿಯ ವಿಸ್ತಾರದಲಿ ನಾ ವಿಶ್ವದಲಿ ತುಂಬಿಹೆನು ॥
ಮೆರೆವನಂತಾಕಾಶವಾದರು ।
ಧರಿಸಿಹೆನು ನಾನದನು ಪೆಸ್ನೊಳ- ।
ಗರಿಯಲಾ ತೋರುವುದು ಸರ್ವವಿದೆನ್ನ ವಿಸ್ತಾರ ॥ ೧೫೫ ॥

ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ ॥ ೨೦ ॥

ನರನೆ ಕುಟಿಲಾಲಕನೆ ಹರನಿಗೆ ।
ಸರಿಯಿರುವ ಬಿಲುಗಾರ ವೀರನೆ ।
ಯಿರುವೆನಾತ್ಮನ ರೂಪದಿಂದಲಿ ಸರ್ವಜೀವರಲಿ ॥
ಇರುವೆನಂತಃಕರಣದೊಳಗಾ- ।
ನಿರುವೆನಾಚ್ಛಾದನವು ಹೊರಗಿಲಿ ।
ಯಿರುವೆ ನಾನಾರಂಭಮಧ್ಯಾಂತದಲಿ ಪ್ರಾಣಿಗಳ ॥ ೧೫೬ ॥

ಅರಿವನೆನ್ನ ವಿಭೂತಿಯೋಗದ ।
ಭರದಲೆನ್ನ ವ್ಯಾಪಕತೆಯ- ।
ನ್ನರಿವನೆನ್ನೀ ತೆರದನಂತತ್ವವನು ಕೌಂತೇಯ ॥
ನರನೆ ಯಂತಃಕರಣಪೂರ್ವಕ ।
ವಿರಿಸಿಯನುಸಂಧಾನ ನಾ ಹಿಂ- ।
ದರುಹಿರುವ ವಿಷಯದಲಿ ಮುಂದಕೆ ಕೇಳು ಕೌಂತೇಯ ॥೧೫೭॥

ಹಿಂದೆ ಬಿಟ್ಟ ವಿಭೂತಿಗಳ ನಾ- ।
ನಂದದಿಂದುಸುರುವೆನು ಪಾರ್ಥನೆ ।
ಮುಂದೆ ನೀನದ ಕೇಳು ಬಹಳ ವಿಚಾರಪೂರ್ವಕದಿ ॥
ಎಂದು ಪೇಳುತ ವಾಸುದೇವ ಮು- ।
ಕುಂದ ಶರಣಾಗತರ ರಕ್ಷಕ ।
ಮುಂದೆ ವಿಸ್ತರಿಸಿದನು ತನ್ನ ವಿಭೂತಿಯೋಗವನು ॥ ೧೫೮ ॥

ಸುತ್ತಮುತ್ತಲು ಹೊರಗೊಳಗೆ ಸ- ।
ರ್ವತ್ರ ಮೇಘಕೆ ಗಗನವಿರುವುದು ।
ಸತ್ತು ಹುಟ್ಟುವವಲ್ಲವೇ ಮೇಘಗಳು ಗಗನದಲಿ ॥
ಮತ್ತೆ ಕೇಳಾಕಾಶ ಸ್ಥಿತಿಯು- ।
ತ್ಪತ್ತಿಲಯಗಳಲೆಲ್ಲವಿರುವುದು ।
ಪಾರ್ಥ ನಾನಾತೆರದೊಳಿರುವೆನು ಪ್ರಾಣಿಮಾತ್ರದಲಿ ॥೧೫೯॥

ಆದಿತ್ಯಾನಾಮಹಂ ವಿಷ್ಣುರ್ಜ್ಯೋತಿಷಾಂ ರವಿರಂಶುಮಾನ್ ।
ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಮಹಂ ಶಶೀ ॥ ೨೧ ॥

ಹರಿಯು ಕೇಳೀ ತೆರದಿ ಪಾರ್ಥನಿ- ।
ಗರುಹಿ ಮುಂದಿಂತೆಂದನೆಂದರೆ ।
ಯಿರುವೆ ನಾನಾದಿತ್ಯದ್ವಾದಶರೊಳಗೆ ವಿಷ್ಣುನಲಾ ॥

ಇರುವೆ ಜ್ಯೋತಿಗಳಲ್ಲಿ ಕೇಳ್ವೈ ।
ತರಣಿ ನಾನು ಸಹಸ್ರಕಿರಣನು ।
ಮರುತರೊಳಗೆ ಮರೀಚಿ ತಾರಾಗಣದಿ ಚಂದ್ರನು ॥ ೧೬೦ ॥

ವೇದಾನಾಂ ಸಾಮವೇದೋಽಸ್ಮಿ ದೇವಾನಾಮಸ್ಮಿ ವಾಸವಃ ।
ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ ॥ ೨೨ ॥

ವೇದಗಳಲಾಂ ನಾಮವೇದವು । ಹೇ ಧನಂಜಯ ಸಾವಧಾನದೊ- ।
ನಾ ದಿವೌಕಸರೊಳಗೆ ವಾಸವ । ಳಾದರಿನು ನಾ ಪ್ರಾಣಿವರ್ಗದೊ- ।
ವೇದಿನಿಯಲಿಂದ್ರಿಯದಿ ನಾ ಹನ್ನೊಂದನೆಯ ಮನವು । ಳಾದಿಚೇತನೆ ಯಿಹೆನು ವೇಣಾ ಜೀವಕಳೆ ನಾನು ॥ ೧೬೧ ॥

ರುದ್ರಾಣಾಂ ಶಂಕರಶ್ಚಾಸ್ಮಿ ವಿತ್ತೇಶೋ ಯಕ್ಷರಕ್ಷಸಾಮ್ ।
ವಸೂನಾಂ ಪಾವಕಶ್ಚಾಸ್ಮಿ ಮೇರುಶ್ಶಿಖರಿಣಾಮಹಮ್ ॥ ೨೩ ॥

ಧರಿಸದಿರು ಶಂಕೆಯನು ರುದ್ರರೊ- । ಇರುವೆ ಪಾವಕ ವಸುಗಳೊಳು ನಾ- ।
ಳಿರುವೆ ಮದನಾಂತಕನು ಶಂಕರ- । ನಿರುವೆ ಮೇದಿನಿಯಲ್ಲಿ ಮೆರೆಯುವ ।
ನಿರುವೆ ಯಕ್ಷರೊಳಾಂ ಧನೇಶ ಕುಬೇರ ಶಿವಸಖನು ॥ ಗಿರಿಗಳೊಳು ನೋಡೈ ಧನಂಜಯ ಮೇರುವೇ ನಿಜದಿ ॥ ೧೬೨ ॥

ಪುರೋಧಸಾಂ ಚ ಮುಖ್ಯಂ ಮಾಂ ವಿದ್ಧಿ ಪಾರ್ಥ ಬೃಹಸ್ಪತಿಮ್ ।
ಸೇನಾನೀನಾಮಹಂ ಸ್ಕಂದಃ ಸರಸಾಮಸ್ಮಿ ಸಾಗರಃ ॥ ೨೫ ॥

ಮಹರ್ಷೀಣಾಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಮ್ ।
ಯಜ್ಞಾನಾಂ ಜಪಯಜ್ಞೋಽಸ್ಮಿ ಸ್ಥಾವರಾಣಾಂ ಹಿಮಾಲಯಃ ॥ ೨೬ ॥

ವರಪುರೋಹಿತಸಚಿವರೊಳು ನಾ- । ನರನೆ ಯಜ್ಞಂಗಳಲಿ ಕೇಳೈ ।
ನಿರುವೆನಲ್ಲಾ ಗುರು ಬೃಹಸ್ಪತಿ- । ಯಿರುವೆ ನಾ ಜಪಯಜ್ಞ ಸಂತತ ।
ಯಿರುವೆನದರಿಂದಾನು ಸರ್ವಜ್ಞತೆಯ ಮೂಲನಲಾ ॥ ಮೆರೆವ ಕರ್ಮತ್ಯಾಗದಿಂದೋಂಕಾರಮಯವಾದ ॥ ೧೬೪ ॥
ಹರನ ವೀರ್ಯೋದ್ಭವನು ವೈಶ್ವಾ- ।
ನರನ ಸಂಗದಿ ಕೃತ್ತಿಕೆಗಳಲಿ । ಪರಮ ಶ್ರೇಷ್ಠವು ನಾಮಜಪವದು ।
ಭರದಿ ಹುಟ್ಟಿದ ಷಣ್ಮುಖನು ಸೈನ್ಯಾಧಿಪತಿಗಳೊಳು ॥೧೬೫॥ ನಿರುತವಿಹುದು ಪವಿತ್ರ ವೇದದೊ- ।
ಳಿರುವುದಿದಕಾ ಹೆಸರು ಕೇಳ್ ಪರಬ್ರಹ್ಮವೆಂಬುವುದು ॥

ಕೆರೆಸರೋವರಪಂಕ್ತಿಯೊಳು ನಾ- । ನರನೆ ಧರ್ಮಾಧರ್ಮವೆಂಬುವ- ।
ನಿರುವೆ ಸಾಗರ ಮುನಿವರರೊಳಾ- । ದೆರದನದು ಪಾವನವ ಮಾಳ್ಪುದು ।
ನಿರುವೆ ಭೃಗು ವೋಂಕಾರವಕ್ಷರಪಂಕ್ತಿಯೊಳಗಾನು ॥ ಬರುಪುದೇ ಬಾಧಕತೆ ಸ್ನಾನಾದಿಗಳೊಳಗೆ ಪಾರ್ಥ ॥ ೧೬೫ ॥

ಹರಿಯು ಲಕ್ಷ್ಮೀಪತಿಯು ಮತ್ತಾ- ।
ನರನಿಗೆಂದನು ಕೇಳು ಪಾರ್ಥನೆ ।
ಯಿರುವೆ ಪುಣ್ಯಾತ್ಮಕ ಹಿಮಾಚಲ ಸ್ಥಾವರಂಗಳಲಿ ॥

ಅಶ್ವತ್ಥಸ್ಸರ್ವವೃಕ್ಷಾಣಾಂ ದೇವರ್ಷೀಣಾಂ ಚ ನಾರದಃ ।
ಗಂಧರ್ವಾಣಾಂ ಚಿತ್ರರಥಸ್ಸಿದ್ಧಾನಾಂ ಕಪಿಲೋ ಮುನಿಃ ॥ ೨೬ ॥

ಉಚ್ಚೈಃಶ್ರವಸಮಶ್ವಾನಾಂ ವಿದ್ಧಿ ಮಾಮಮೃತೋದ್ಭವಮ್ ।
ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಮ್ ॥ ೨೭ ॥

ಧರೆಯೊಳಗೆ ಕೇಳ್ವಾರಿಜಾತವು ।
ಸುರತರುವು ಚಂದನವು ಮೊದಲಾ- ।
ಗಿರುವ ವೃಕ್ಷಗಳೆಹುವು ಪರಿಪರಿಗುಣದಿ ಶೋಭಿಪುವು ॥೧೬೬॥

ಇರುವೆ ನಾನಶ್ವತ್ಥ ಕೇಳೀ ।
ಪರಿಪರಿಯ ವೃಕ್ಷಗಳ ವೃಂದದೊ- ।
ಳೆರುವೆ ನಾರದ ನಾನು ದೇವರ್ಷಿಗಳ ವೃಂದದಲಿ ॥
ನರನೆ ಗಂಧರ್ವರಲಿ ನಾನಾ- ।
ಗಿರುವೆ ಕೇಳಾ ಚಿತ್ರರಥನೈ ।
ರಿಯಿರುವೆ ಕಪಿಲಾಚಾರ್ಯ ನಾನಾ ಸಿದ್ಧಸಂಘದಲಿ ॥೧೬೭॥

ತುರಗಗಳಲುಚ್ಚೈಃಶ್ರವವು ನಾ- ।
ನಿರುವೆನೈರಾವತವು ಕುಂಜರ- ।
ವರಗಳಲಿ ಜಲನಿಧಿಜ ವಾವನ ಸಿತ ಚತುರ್ದಶನ ॥
ಧರೆಯೊಳಿರುವ ಸಮಸ್ತಜನರೊಳ- ।
ಗಿರುವುದೆನ್ನ ವಿಭೂತಿ ನೃಪರಲಿ ।
ಧರಿಸುತವರಾಜ್ಞೆಯನು ಶಿರದಲಿ ನರರು ವರ್ತಿಪರು ॥ ೧೬೮ ॥

ಆಯುಧಾನಾಮಹಂ ವಜ್ರಂ ಧೇನೂನಾಮಸ್ಮಿ ಕಾಮಧುಕ್ ।
ಪ್ರಜನಶ್ಚಾಸ್ಮಿ ಕಂದರ್ಪಃ ಸರ್ಪಾಣಾಮಸ್ಮಿ ವಾಸುಕಿಃ ॥ ೨೮ ॥

ಅನಂತಶ್ಚಾಸ್ಮಿ ನಾಗಾನಾಂ ವರುಣೋ ಯಾದಸಾಮಹಮ್ ।
ಪಿತೃಣಾಮರ್ಯಮಾ ಚಾಸ್ಮಿ ಯಮಃ ಸಂಯಮತಾಮಹಮ್ ॥ ೨೯ ॥

ನೂರು ಯಜ್ಞಂಗಳನು ಪೂರ್ಣದಿ ।
ತೀರಿಸುತ ಸುರಪತಿಯು ಗದ್ದುಗೆ- ।
ಯೇರಿ ಧರಿಸುವ ವಜ್ರ ನಾನಿಹೆನಾಯುಧಂಗಳಲಿ ॥
ಧಾರುಣಿಯೊಳೀ ಗೋವ್ರಜದಿ ನಾ ।
ಭೂರಿಕಾಮದ ಕಾಮಧೇನುವು ।
ಭಾರಿಸುಂದರ ಮದನ ನಾನಿಹೆ ಪ್ರಜನವೃಂದದಲಿ ॥೧೬೯॥

ಸರನೆ ಕುಲದಲಿ ಸರ್ಪಗಳ ನಾ- ।
ನಿರುವೆ ನಾಯಕ ವಾಸುಕಿಯು ನಿಜ- ।
ವಿರುವೆ ನಾಗಗಳೊಳಗೆ ನಾಯಕ ಶೇಷ ನಾನೆ ಕಣಾ ॥

ಇರುವೆ ಜಲದೇವತೆಯರಲಿ ನಾ ।
ವರುಣ ಪತ್ನಿ ಮದಿಶೆಯ ಪಾಲಕ- ।
ನಿರುವೆ ನಾನರ್ಯಮನು ಪಿತೃಗಣದೊಳಗೆ ಕೌಂತೇಯ ॥೧೭೦॥

ನರನೆ ಪ್ರಾಣಿಗಳಿಗೆ ಶುಭಾಶುಭ- ।
ವಿರುವ ಸರ್ವವನವರ ಕರ್ಮವ ।
ಬರೆದವರ ಮಾನಸದ ಶೋಧವ ಸಂತತದಿ ಕೊಂಡು ॥
ಭರದಿ ಕರ್ಮಫಲಾನುಸಾರದೊ- ।
ಳೆರದೆ ಭೋಗವ ಕೊಡುವ ನಿಯಮನ- ।
ಕರರೊಳಗೆ ಯಮರಾಜನಲ್ಲನೆ ಕರ್ಮಸಾಕ್ಷಿಯಲಾ ॥ ೧೭೧ ॥

ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಮ್ ।
ಮೃಗಾಣಾಂ ಚ ಮೃಗೇಂದ್ರೋಽಹಂ ವೈನತೇಯಶ್ಚ ಪಕ್ಷಿಣಾಮ್ ॥ ೩೦ ॥

ದೈತ್ಯರಲಿ ಪ್ರಹ್ಲಾದ ನಾನಿಹೆ ।
ದೈತ್ಯಗುಣಕಪವಾದನೀತನು ।
ಭಕ್ತರೊಳು ತಾನಾದನೈ ಪೆಚ್ಚಿಸಿದನೈ ಯೆನ್ನ ॥

ಮೃತ್ಯುಕಾರಕ ಕಾಲ ನಾನಿಹೆ ।
ಧಾತ್ರಿಯಲ್ಲಿಹ ಮೃಗಕುಲದಿ ನಾ ।
ಪಾರ್ಥ ಹುಲಿಸಿಂಹಗಳು ಪಕ್ಷಿಗಳಲ್ಲಿ ಗರುಡನಲಾ ॥ ೧೭೨ ॥

ಪವನಃ ಪವತಾಮಸ್ಮಿ ರಾಮಃ ಶಸ್ತ್ರಭೃತಾಮಹಮ್ ।
ಝಷಾಣಾಂ ಮಕರಶ್ಚಾಸ್ಮಿ ಸ್ರೋತಸಾಮಸ್ಮಿ ಜಾಹ್ನವೀ ॥ ೩೧ ॥

ಅರರೆ ಭರದಲಿ ಧರೆಯ ಸುತ್ತಲು । ಹರಿಸಿ ರಕ್ಕಸರನ್ನು ದಿಸಿಜರ ।
ಮೆರೆಯುತಿಹ ಸಪ್ತಾಂಬುನಿಧಿಗಳ । ಸೆರೆಯ ಬಿಡಿಸಿದನಾ ಕೃಪಾನಿಧಿ ।
ತಿರುಗಿ ಬರುತಿಹ ವೇಗಿಗಳ ಮಧ್ಯದಲಿ ವಾಯುನಿಹೆ ॥ ಧರೆಯೊಳಗೆ ಸಂಸ್ಥಾಪಿಸಿದನೈ ಧರ್ಮರಾಜ್ಯವನು ॥
ನರನೆ ನಾನೇ ರಾಮ ಶಸ್ತ್ರವ । ತರಣಿಕುಲದಲಿ ಹುಟ್ಟಿ ತಾಂ ಪ್ರತಿ- ।
ಧರಿಸಿದವರೊಳು ತ್ರೇತೆಯೊಳಗಾ- । ತರಣಿಯೆಂದೆನಿಸಿದನು ಸೀತಾ- ।
ವರರಘೂತ್ತಮ ಮಾಡಿರುವ ಸಾಹಸವ ಶ್ರುತವಹ್ಯೆ ॥೧೩೩॥ ಪರನು ರಘುಕುಲತಿಲಕ ಶಸ್ತ್ರವ ಧರಿಸರಲಿ ಶೂರ ॥ ೧೩೪ ॥

ಹಿಂದೆ ತ್ರೇತಾಯುಗದಿ ಧರ್ಮಕೆ । ಇರುವೆ ನಾನಾ ರಾಮಚಂದ್ರನು ।
ಬಂದು ಸಂಕಟ ಬೀಳೆ ಧರ್ಮದ । ನರನೆ ಕೇಳ್ನಾ ಮಕರಪಿಹೆ ಜಲ- ।
ಚಂದದಿಂದೆತ್ತಿದನು ಪಕ್ಷವನಾ ರಘೂತ್ತಮನು ॥ ಚರಗಳಲಿ ಭಾಗೀರಥಿಯು ನಾ ನದಿಗಳೊಳು ಪಾರ್ಥ ॥
ಮುಂದೆ ನಿಜರೂಪದ ಧನುಸ್ಯವ- । ತರುತಲಾ ಗಂಗೆಯ ಭಗೀರಥ ।
ನಂದದಲಿ ಧರಿಸುತಲಿ ವಿಜಯಾ- । ಪರಮ ತಾಪಸ ಜಹ್ನು ನುಂಗುತ ।
ನಂದ ಸಿರಿಗೆರಡನೆಯು ದಾರಿಯು ತೋರಿಸಲೆ ತಾನು ॥೧೩೪॥ ಮರಳೆ ಜಂಘೆಯೊಳಿಸಿ ಬಿಟ್ಟನು ಹಾದಿ ಮೇಣಾಯ್ತು ॥೧೩೫॥

ಚಂದದಿಂ ವರಿಸಿದನು ನಾನೇ- । ಇರುವೆ ನಾ ನದಿಗಳಲಿ ಜಾಹ್ನವಿ ।
ನೆಂದು ವರ್ಣಿಸಲವನ ಲೀಲೆಯ । ನರನೆ ಕೇಳೀ ಪರಿ ವಿಭೂತಿಯ ।
ಮುಂದೆ ನೋಡು ಸುನೇಲಸರ್ವತಶಿಖರದಲಿ ಪಾರ್ಥ ॥ ಪೆರೆಸಿ ವಿಸ್ತಾರವನು ಮಾಳ್ಪುದು ಶಕ್ಯವೇ ನೋಡು ॥
ನಿಂದು ಲಂಕಾಧೀಶಗಿಹ ದಶ- । ಪರಿಪರಿ ವಿಭೂತಿಗಳ ನಾ ವಿ- ।
ಕಂಧರಾಳಿಯ ಕಡಿದು ಭೂತದ । ಸ್ತರಿಸಿ ವಿಶ್ವದೊಳಿರುವ ಸರ್ವವ ।
ವ್ಯಂದಕಾಹುತಿ ಕೊಟ್ಟನೈ ಜಗತಕ್ಕೆ ಯಾ ರಾಮ ॥೧೩೫॥ ನರುಹ ಹತ್ತಿದರೇನು ಸಾಲ್ಪುವೆ ವರ್ಣಸಾವಿರವ್ಯ ॥ ೧೩೬ ॥

ಸರ್ಗಾಣಾಮಾದಿರಂತಶ್ಚ ಮಧ್ಯಂ ಚೈವಾಹಮರ್ಜುನ ।
ಅಧ್ಯಾತ್ಮವಿದ್ಯಾ ವಿದ್ಯಾನಾಂ ವಾದಃ ಪ್ರವದತಾಮಹಮ್ ॥ ೩೨ ॥

ಅಕ್ಷರಾಣಾಮಕಾರೋಽಸ್ಮಿ ದ್ವಂದ್ವಃ ಸಾಮಾಸಿಕಸ್ಯ ಚ ।
ಅಹಮೇವಾಕ್ಷಯಃ ಕಾಲೋ ಧಾತಾಹಂ ವಿಶ್ವತೋಮುಖಃ ॥ ೩೩ ॥

ಉಡುಗಣವ ಕೈವಶವ ಮಾಳ್ಪಕೆ । ಮರದ ಹೂವಣ್ಣುಗಳ ಮೇಣಾ ।
ಜಡಿದು ಗಗನವ ಗಂಟಕಟ್ಟಲು । ತೆರದಿ ಟೊಂಗೆಗಳೆಲ್ಲ ಸಹಿತಲಿ ।
ಹಿಡಿಯೊಳುಡುಗಣ ಕೂಡುವುದು ಸಾಹಸದ ಕಾರ್ಯವಿದು ॥ ಕರದಿ ಹಿಡಿವರೆ ಮರವ ಕಿತ್ತಲು ಬೇಕು ಬುಡಸಹಿತ ॥ ೧೩೭ ॥
ಪೊಡವಿಯಾ ಪರಮಾಣು ಕಾಣಲು ।
ಹಿಡಿಯಲಾ ಕಂಕುಳಲಿ ಭೂಮಿಯ । ಎನ್ನ ಸರ್ವವಿಭೂತಿಗಳ ಸಂ- ।
ನೋದನೆ ಯಾರಿಗೆ ಸಾಧ್ಯವಿಹುದೀ ಕಾರ್ಯ ಲೋಕದಲಿ ॥ ೧೩೮ ॥ ಪನ್ನತೆಯ ನೀನರಿವುದಾದರೆ ।
ನರನೆ ಕೇಳೀ ಪರಿಯಲೀ ವಿ- । ಯೆನ್ನ ನಿರ್ದೋಷಸ್ವರೂಪನ ತಿಳಿಯಲಾ ಪಾರ್ಥ ॥
ಸ್ತರವನೆನ್ನಯ ತಿಳಿವುದಾದರೆ । ಭಿನ್ನಭಿನ್ನ ವಿಭೂತಿಗಳ ನಾ ।
ಯರಿಯಿ ಬೇಕೆನ್ನನು ಕಣಾ ಸಂದೇಹವೇನಿದಕೆ ॥ ವರ್ಣಿಸಲು ದುಃಸಾಧ್ಯವೈ ಸಂ- । ಪೂರ್ಣವಿಶ್ವದಿ ನಾನೆ ತುಂಬಿಹೆನೆಂದು ತಿಳಿ ಪಾರ್ಥ ॥ ೧೩೯ ॥

ಹೇ ಧನಂಜಯ ನಾನು ಸೃಷ್ಟಿಂ- । ಇರುವೆನಕ್ಷರಗಳಲಕಾರವ್ಯ ।
ಗಾದಿಮಧ್ಯಾಂತವು ಕಣಾ ನೀ- । ಮೆರೆವ ವ್ಯಾಕರಣದ ಸಮಾಸದೊ- ।
ನಾದರದಿ ನೋಡಿದರೆ ವಸ್ತ್ರದಿ ತಂತು ನಾನಿಹೆನು ॥ ಳೆರುವೆ ದ್ವಂದ್ವಸಮಾಸ ಕೇಳೈ ಪಾರ್ಥ ಮನಗೊಟ್ಟು ॥
ಬೋಧವೀಪರಿಯಾಗೆ ಮನದಲಿ । ನರನೆ ಮಶಕವ ಹಿಡಿದು ಬ್ರಹ್ಮನ ।
ಭೇದವೇನಿಹುದದರನಂತರ । ವರೆಗೆ ಸರ್ವರ ಗ್ರಾಸಿಸುತ್ತಿಹ ।
ಮೋದದಿಂದಾನಿಹೆನು ಸರ್ವವ್ಯಾಪಕನು ತಿಳಿಯೆ ॥ ೧೮೨ ॥ ವರಮಹಾಕಾಲನು ಕಣಾ ನಾನಿರುವೆ ಕೌಂತೇಯ ॥ ೧೮೫ ॥

ಅರಿಯಲೀಪರಿ ಯೆನ್ನ ರೂಪವ। ಮೇರುಮಂದಿರಸಹಿತ ಪೃಥ್ವಿಯ ।
ನಿರುವುದೇನು ವಿಭೂತಿಯೋಗದಿ । ಸಾರವಿಲ್ಲದ ಪುಡಿಯ ಮಾಳ್ಪನು ।
ಪರಿಕಿಸಲು ನಿನಗಿಲ್ಲ ಯೋಗ್ಯತೆ ತಿಳಿಯಲಿದನೆಲ್ಲ ॥ ತೋರಗೊಡನೈ ವಾರಿಮಯಜಗ ಕೂಡ ಪ್ರಳಯದಲಿ ॥
ಅರುಹುವೆನು ನಾನಾದಕಾರಣ । ಹಾರಿ ನುಂಗುವ ಪ್ರಳಯತೇಜವ ।
ಪರಿಯೆ ಕೇಳ್ನನಗೊಟ್ಟು ಕಾರ್ಪಣೆ । ವಾರುತನ ತಾಂ ತಿಂದು ತೇಗುವ ।
ಯಿರುವೆ ನಾನಧ್ಯಾತ್ಮವಿದ್ಯೆಯು ಸರ್ವವಿದ್ಯೆಯಲಿ ॥ ೧೮೩ ॥ ಭಾರಿಗಗನವನುದರದಲ್ಲಿರಿಸುವ ಮಹಾಕಾಲ ॥ ೧೮೬ ॥

ತಿರಿತಿರಿಗಿ ಸುವಿಚಾರ ಮಾಡಲು । ಇರುವೆ ನಾನೀಪರಿಯ ಕಾಲನು ।
ಬರುವುದೈ ಬಲ ಶ್ರವಣತರ್ಕಕೆ । ನರನೆ ನೀನೆನ್ನ ಸ್ವರೂಪವ- ।
ಪರಿಪರಿಯಿಲಾ ತರ್ಕಭರದಲಿ ಭಾಷಣದ ಸವಿಯು ॥ ನರಿಯೊ ತಿಳಿಯಿತೆ ನಿನಗೆ ಜೀಗದಿ ಹೇಳು ನೀನೆನಗೆ ॥
ನಿರುತ ವರ್ಧಿಪುದೇನ ಹೇಳಲಿ । ಮರಳಿ ನಗುತಿಂತೆಂದ ಪಾರ್ಥನಿ- ।
ಸರಸತೆಯ ಸಂವಾದವೀಪರಿ । ಗಿರುವೆ ವಿಶ್ವೋತ್ಪತ್ತಿಕಾರಕ- ।
ಯಿರುವೆನೀ ಸಂವಾದ ನಾನೇ ಮಾತು ಬಲ್ಲರಲಿ ॥ ೧೮೪ ॥ ನರಿಯಲಾ ನೀನೆಂದು ಲಕ್ಷ್ಮೀಲೋಲ ಹೇಳೆದನು ॥ ೧೮೭ ॥

ಮೃತ್ಯುಸ್ಸರ್ವಹರಶ್ಚಾಹಮುದ್ಭವಶ್ಚ ಭವಿಷ್ಯತಾಮ್ ।
ಕೀರ್ತಿಃ ಶ್ರೀರ್ವಾಕ್ಚ ನಾರೀಣಾಂ ಸ್ಮೃತಿರ್ಮೇಧಾ ಧೃತಿಃ ಕ್ಷಮಾ ॥ ೩೪ ॥

ಹುಟ್ಟಿರುವ ಪ್ರಾಣಿಗಳ ಜೀವನ । ಭೂತಳದಿ ಸುವಿಚಾರ ಮಾರ್ಗದ ।
ಸೃಷ್ಟಿಯೆಲ್ಲಕೆ ಧಾರಕನು ನಾ । ರೀತಿಹಜ್ಜುವ ವಾಣಿ ನಾನೇ।
ನಷ್ಟ ಮಾಡುವ ಸರ್ವ ಸಂಹಾರಕನು ಮೃತ್ಯುವಿಹೆ ॥ ಯಿ ತೆರೆದೊಳಾ ಸ್ಮರಣಶಕ್ತಿಯೆ ನಾನಿರುವೆ ಪಾರ್ಥ ॥
ಸೃಷ್ಟಿಸಿಹೆನು ವಿಭೂತಿಯೋಳನು । ಅತ್ರಿಶುದ್ಧಿಯ ಮಾಡಿ ದೃಷ್ಟಿಯ ।
ಕೊಟ್ಟು ಮನವಿಡ ಕೇಳು ಕಲ್ಯಾಣ । ಪಾತವಾಗಲು ಯೆನ್ನ ಸ್ಮರಣೆಯ ।
ತುಷ್ಟಮಾನಸನಾಗಿ ಪೇಳ್ವೆನು ಪಾರ್ಥ ನಿನಗಿದನು ॥ ೧೮೮॥ ಮಾತ ಕೊಡುವೀ ಸ್ಮರಣಶಕ್ತಿಯ ಮಹಿಮೆ ಯೇನೆಂಬೆ ॥೧೯೦॥

ಕೌತುಕದೊಳಾನೇಳು ನಾರಿಯ- । ಧರೆಯೊಳಿಹಲೋಕದಲಿ ಸ್ವಹಿತವ- ।
ಭೂತಿಗಳ ವಿಸ್ತರಿಪೆನೀಗಲೆ । ನಿರದೆ ಸಾಧಿಸಿ ಮುಂದೆ ಪರದಲಿ ।
ಕೀರ್ತಿ ನಿತ್ಯನವೀನವೆನ್ನೆಯ ಮೂರ್ತಿಯೇ ಪಾರ್ಥ ॥ ಪರಮಪದವನು ಸಾಧಿಸುವ ಸದ್ಬುದ್ಧಿ ನಾನೆಯಲಾ ॥
ಈ ತೆರದೊಳೌದಾರ್ಯಸಂಪ- । ನರನೆ ಕೇಳಾಪರಿಯೊಳಾನಿಹೆ ।
ನ್ಮೂರ್ತಿ ನಾನೇ ನೋಡು ನೋಡಾ । ಮೆರೆವ ಧೃತಿ ಕ್ಷಮೆ ಸದ್ಗುಣಂಗಳ ।
ನೀತಿ ಸಿಂಹಾಸನಕೆ ಶೋಭೆಯನಿತ್ತು ಪಾಲಿಸುವ ॥ ೧೮೯ ॥ ಸರಣಿಗಾಧಾರಂಗಳಲ್ಲವೆ ಪಾರ್ಥ ನೋಡಿದಿಯಾ ॥ ೧೯೧ ॥

ಹರಿಯು ಕೇಳ್ ಸಂಸಾರಮದಗಜ- ।
ಹರಿಯು ಶ್ರೀಗೋಪಾಲಕೃಷ್ಣನು ।
ನರನಿಗೀಪರಿ ಪೇಳಿದನು ಸಂತೋಷಯುತನಾಗಿ ॥

ಅರಿಯಲಾ ಕಲಿಪಾರ್ಥ ಕೇಳೀ- ।
ತೆರದ ನಾರಿಯರಿಪರು ಎನ್ನಯ ।
ವರವಿಭೂತಿಗಳಿಹರು ವಿಸ್ತರಿಸಿದೆನು ಪ್ರೇಮದಲಿ ॥ ೧೯೨ ॥

ಬೃಹತ್ಸಾಮ ತಥಾ ಸಾಮ್ನಾಂ ಗಾಯತ್ರೀ ಛಂದಸಾಮಹಮ್ ।
ಮಾಸಾನಾಂ ಮಾರ್ಗಶೀರ್ಷೋಽಹಮೃತೂನಾಂ ಕುಸುಮಾಕರಃ ॥ ೩೫ ॥

ಹರಿ ರಮಾಪತಿ ಪೇಳ್ದನಾಕ್ಷಣ ।
ಪರಮಮಿತ್ರಶ್ರೇಷ್ಠ ವೇದದೊ- ।
ಳಿರುವೆ ಸಾಮವು ಮೇಣ್ ಬೃಹತ್ಸಾಮವು ಕಣಾ ನಾನು ॥
ಇರುವೆ ನಾ ಗಾಯತ್ರಿ ಛಂದಸ್ಸು ।
ಸರಸ ಶಾಸ್ತ್ರದಿ ನೋಡು ಪಾರ್ಥನೆ ।
ಧರಿಸದಿರು ಸಂಶಯವ ಮನದಲಿ ಕುಂತಿಯಾತ್ಮಜನೆ ॥೧೯೩॥

ಹರಿಯು ಮಗುಳೆಂತೆಂದ ಪಾರ್ಥಗೆ ।
ಪರಮ ಮಾಸಂಗಳ ಸಮೂಹದೊ- ।
ಳಿರುವೆ ನಾನಾ ಮಾರ್ಗಶೀರ್ಷವು ನೋಡು ಕೌಂತೇಯ ॥
ಇರುವೆ ನಾನಾಋತುಸಮೂಹದಿ ।
ಮೆರೆವ ಕುಸುಮಾಕರ ವಸಂತವು ।
ಹರುಷವರ್ಧನವಲ್ಲವೇ ನೋಡಿದಿಯೊ ಕೌಂತೇಯ ॥ ೧೯೪ ॥

ದ್ಯೂತಂ ಛಲಯತಾಮಸ್ಮಿ ತೇಜಸ್ತೇಜಸ್ವಿನಾಮಹಮ್ ।
ಜಯೋಽಸ್ಮಿ ವ್ಯವಸಾಯೋಽಸ್ಮಿ ಸತ್ತ್ವಂ ಸತ್ತ್ವವತಾಮಹಮ್ ॥ ೩೬ ॥

ವೃಷ್ಣೀನಾಂ ವಾಸುದೇವೋಽಸ್ಮಿ ಪಾಂಡವಾನಾಂ ಧನಂಜಯಃ ।
ಮುನೀನಾಮ್ಯಹಂ ವ್ಯಾಸಃ ಕವೀನಾಮುಶನಾ ಕವಿಃ ॥ ೩೭ ॥

ಚಾತುರಿಯುದಾತುಮನೆ ಪಾರ್ಥನೆ ।
ಭೂತಳದಿ ವಂಚಿಸುವ ಸಾಧನ- ।
ವ್ರಾತದಲಿ ನಾ ದ್ಯೂತವಾಗಿಹೆ ನೋಡು ಪರಿಕಿಸಿಲಾ ॥
ಈ ತೆರದ ಬಹಿರಂಗ ತಸ್ಕರ ।
ನೀತಿಮಂತರು ತಪ್ಪಿಸುವರೇ ।
ಪಾರ್ಥ ಎನ್ನ ವಿಭೂತಿಯಲ್ಲನೆ ನೋಡು ಮನಗೊಟ್ಟು
॥ ೧೯೫ ॥

ಧಾತ್ರಿಯಲಿ ದೇವಕಿಯ ಜಠರದೊ- ।
ಳೆತ್ತಿ ಜನ್ಮವ ನಾ ಯಶೋದೆನಿ- ।
ಸಿತ್ತ ಹೋದೆನು ಗೋಕುಲಕೆ ಲೀಲೆಯಲಿ ಹೇ ಪಾರ್ಥ ॥೧೯೭॥

ರುಗರುಗಿಪ ವಸ್ತ್ರಗಳೊಳಗೆ ನಾ ।
ಮುಗುಧತೇಜೋರೂಪನಾಗಿಹೆ ।
ಮಿಗಿಲೆನಿಪ ಜಯ ನಾನು ಸರ್ವಾರಂಭಕಾರ್ಯದಲಿ ॥
ಜಗದೊಡೆಯ ಶ್ರೀಕೃಷ್ಣನೆಂದನು ।
ಜಗದಿ ನೀತಿಯ ಬಿಡದೆ ಮಾಡುವ ।
ಸಗುಣ ನಾನಿಹೆ ಕೇಳು ಎನ್ನುದ್ಯೋಗರೂಪನದು ॥೧೯೬॥

ತರಳತನದಲಿ ರಾಕ್ಷಸರ ಸಂ- ।
ಹರಿಸಿ ಧರಣಿಯ ಭಾರವಿಳಿಸಿದೆ ।
ಧರಿಸಿ ಗೋವರ್ಧನವನಿಂದ್ರನ ಗರ್ವ ಹರಿಸಿದೆನು ॥ ೧೯೮ ॥

ಸತ್ತ್ವಧೀರರ ಸತ್ತ್ವ ನಾನಿಹೆ ।
ಪಾರ್ಥ ನಾನೇ ಯಾದವರೊಳ- ।
ತ್ಯುತ್ತಮನು ಕೇಳ್ ವಾಸುದೇವನು ನೋಡು ಕೌಂತೇಯ ॥

ಸುಳಿಯಲಾ ಯಮುನೆಯಲಿ ಕಾಲಿಯ ।
ತಲೆಯ ಮೇಲೇರಿದನು ತಾಂಡವ ।
ನಲವಿನಿಂದಾಡಿದೆನು ಮರ್ದಿಸಿ ದುಃಖ ಹರಿಸಿದೆನು ॥
ಜಲಜಸಂಭವ ಗೋಕುಲದ ಆ- ।
ಕಳವ ಕದ್ದೊಯ್ದಿರಲು ಮತ್ತಾ ।
ಜಲಜಸಂಭವನಿಂ ಹಿಡಿಸಿದೆ ಹುಚ್ಚತನವನಲಾ ॥ ೧೯೯ ॥

ಬಾಲದಶೆಯಾರಂಭದಲಿ ನಾ ।
ಹೊಳ ಕಸಾಬಗಳ ಕೊಂಡೆನು ।
ಹೇಳಲೇನಾ ಕಂಸಚಾಣೂರಸ್ತ್ರಭಾವವನು ॥
ಲೀಲೆಗಳ್ನೇ ತೆರದಿ ಪೆರೆಸಿದೆ ।
ಹೇಳಲೆಂತೀ ಪರಿಯನೆಲ್ಲವ ।
ಕೇಳಿ ಬಲ್ಲೆಯೊ ನೀನು ಹಲವನು ನೋಡಿರುವಿಯಲ್ಲೆ
॥ ೨೦೨ ॥
ಇರುವೆ ನಾ ಯಾದವಶಿರೋಮಣಿ ।
ನರನೆ ನಾನೆ ವಿಭೂತಿಯೆನ್ನದು ।
ಯಿರುವಿ ನೀನಾ ತೆರದಿ ಪಾಂಡವರೊಳು ಧನಂಜಯನು ॥

ಇರುವುದೆನ್ನ ವಿಭೂತಿ ನಿನ್ನಲಿ ।
ಯಿರುವುದಾ ಕಾರಣದಿ ನಿನ್ನೊಳು ।
ಪರಮಸ್ನೇಹವು ಭೇದವರಿಯೆನು ನಿನ್ನೊಡನೆ ನಾನು ॥ ೨೦೧ ॥

ನರನೆ ನೀ ಸಂನ್ಯಾಸವೇಷದಿ ।
ಹರಿಸಿದೆಯಲಾ ಭಗಿನಿಯೆನ್ನಯ ।
ಸುರಪನಾತ್ಮಜ ಶಂಕೆ ನಿನ್ನಲಿ ಬಂತೆ ಹೇಳೆನಗೆ ॥
ಇರುವುದೇ ನಮ್ಮೊಳಗೆ ಭೇದವು ।
ಯಿರುವೆ ನಾ ಮುನಿಗಳಲಿ ವ್ಯಾಸನು ।
ಯಿರುವೆ ಶುಕ್ರಾಚಾರ್ಯ ನಾನಾ ಕವಿಸಮೂಹದಲಿ ॥ ೨೦೨ ॥

ದಂಡೋ ದಮಯತಾಮಸ್ಮಿ ನೀತಿರಸ್ಮಿ ಜಿಗೀಷತಾಮ್ ।
ಮೌನಂ ಚೈವಾಸ್ಮಿ ಗುಹ್ಯಾನಾಂ ಜ್ಞಾನಂ ಜ್ಞಾನವತಾಮಹಮ್ ॥ ೩೮ ॥

ಇರುವೆ ನಾನಾದಂಡ ದಂಡವ ।
ಧರಿಸುವವರೊಳು ಮಶಕ ಹಿಡಿದಾ ।
ಬರಮದೇವರ ವರೆಗೆ ಸರ್ವರ ದಂಡಿಸುವೆ ನಾನು ॥
ನರನೆ ನಾರಾನಾರ ನೋಡುವ ।
ಸರನ ಶಾಸ್ತ್ರಂಗಳಲಿ ನಾನಾ ।
ಗಿರುವೆ ನೀತಿಯ ಶಾಸ್ತ್ರ ಗುಹ್ಯದಿ ಗುಹ್ಯ ನಾ ಮೌನ ॥೨೦೩॥

ನರಸಿಜೋದ್ಭವ ಕೂಡ ಮೌನವ ।
ಧರಿಸುವವರಲಿ ಮುಗ್ಧನಲ್ಲೆಯ ।
ಯಿರುವೆ ನಾನಾ ಜ್ಞಾನವೇ ಜ್ಞಾನಿಗಳ ವೃಂದದಲಿ ॥
ನರನೆ ನಾಕು ವಿಭೂತಿವಿಸ್ತರ ।
ವರಿಯಲಾರೆನು ತುದಿಯನದಕಾಂ ।
ನರಸಿಜಾಸನಕಲ್ಪ ನಾಲದು ವಿಸ್ತರಿಸಲಿಕರ ॥ ೨೦೪ ॥

ಯಚ್ಚಾಪಿ ಸರ್ವಭೂತಾನಾಂ ಬೀಜಂ ತದಹಮರ್ಜುನ ।
ನ ತದಸ್ತಿ ವಿನಾ ಯತ್ಸ್ಯಾನ್ಮಯಾ ಭೂತಂ ಚರಾಚರಮ್ ॥ ೩೯ ॥

ನಾಂತೋಽಸ್ತಿ ಮಮ ದಿವ್ಯಾನಾಂ ವಿಭೂತಿನಾಂ ಪರಂತಪ ।
ಏಷ ತೂದ್ದೇಶತಃ ಪ್ರೋಕ್ತೋ ವಿಭೂತೇರ್ವಿಸ್ತರೋ ಮಯಾ ॥ ೪೦ ॥

ಮಳೆಯ ಧಾರೆಯನೆಣಿಸಬಹುದೇ ।
ಯಿಳೆಯ ತಳದಲಿ ಬೆಳೆವ ಹುಲ್ಲಿನ ।
ತಿಳಿಯ ಬಹುದೇ ಸಂಖ್ಯೆಯನ್ನದ ತಿಳಿಯುವ್ರದಶಕ್ಯ ॥
ಜಲಧಿಯಲಿ ಬರುತಿರುವ ತೆರೆಗಳ ।
ತಿಳಿಯ ಬಹುದೇ ಸಂಖ್ಯೆ ಪಾರ್ಥನೆ ।
ಸುಲಭವಲ್ಲಾ ಯೆನ್ನ ಸರ್ವವಿಭೂತಿ ಯೆಣಿಸುವರೆ ॥೨೦೫॥

ಪರಿಯಿದಾದರು ನಿನಗೆ ನಾ ವಿ- ।
ಸ್ತರಿಸಿದೆನು ನೋಡ್ ಪ್ರಮುಖವಿರುತಿಹ ।
ವರವಿಭೂತಿಗಳೊಳಗಿನೆಸ್ಪತ್ತೈದು ಮೂಲಗಳ ॥

ನರನೆ ನಿನಗೀತೆರದೊಳಾದುದು ।
ವರವಿಭೂತಿಯ ಕೇಳುವಿಚ್ಛೆಯು ।
ನೆರೆವುದೈ ಸಾಮಾನ್ಯವೀಪರಿಯೆಂದು ಪೇಳಿದೆನು ॥ ೨೦೬ ॥

ಪರಿಕಿಸಲು ಯೆನ್ನಯ ವಿಭೂತಿಗ- ।
ಳಿರುವೈಯಗಣಿತವು ನಿನಗಾ ।
ನರುಹುವುದೆ ದುಃಸಾಧ್ಯ ನೀನಿದ ಕೇಳ್ವುದೇ ಕಾರಣ ॥
ನರನೆ ನಿನಗಾ ಕಾರಣದೊಳಾ- ।
ನರುಹುವೆನು ಸಂಕ್ಷೇಪದಿಂದಲಿ ।
ಯರಿತಲೀ ಮರ್ಮವನು ನಿನಗಾಗುವುದು ಬೋಧವದು ॥ ೨೦೭॥

ಧರೆಯೊಳಗೆ ಭೂತಾಂಕುರಂಗಳು । ಹಿರಿದು ಕಿರಿದೀ ಭಾವನಿಲ್ಲದೆ ।
ಹೊರಡುವುದ ನೀ ನೋಳ್ಪೆಯಲ್ಲವೆ । ಭರಿತ ನಾನಿಹೆ ಸರ್ವವಿತ್ವದಿ ।
ಸಿರುವೆನಿದಕಾಂ ಬೀಜವೆಂದರಿ ಪಾರ್ಥ ಮನದೊಳಗೆ ॥ ಯರಿಯ ಬೇಡೈ ಯುಕ್ತನೀಚವನಿತೆನು ಸರ್ವರಲಿ ॥ ೨೦೨ ॥

ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಂಶಸಂಭವಮ್ ॥ ೪೧ ॥

ನರನೆ ಸಂಕ್ಷೇಪದಲಿ ನಿನಗಾ- । ನರನೆ ದಿಟ ಸಂಪತ್ತಿ ಯೆರಡಿವು ।
ಸೊರೆವೆ ಸಾಧಾರಣ ನಿಯಮವನು । ನಿರುತ ವಾಸಿವುವೆಲ್ಲಿ ಯಲ್ಲಿಯೆ ।
ಗುರುತ ಹಿಡಿಯಲು ಬಹುದು ಯೆನ್ನ ವಿಭೂತಿಲಕ್ಷಣದ ॥ ಸಿರುವುದೆನ್ನ ವಿಭೂತಿಯೆಂದರಿ ಪಾರ್ಥ ನಿಜವಾಗಿ ॥ ೨೦೪ ॥

ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ ।
ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ॥ ೪೨ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ
ಶ್ರೀಕೃಷ್ಣಾರ್ಜುನಸಂವಾದೇ ವಿಭೂತಿವಿಸ್ತಾರಯೋಗೋ ನಾಮ ದಶಮೋಽಧ್ಯಾಯಃ ॥ ೧೦ ॥

ತರಣಿಬಿಂಬವದೊಂದೆ ಗಗನದೊ- । ನರನೆ ಯೆನ್ನವತಾರವೆಂದೀ ।
ಸಿರುವುದಲ್ಲವೆ ನೋಡು ಮೂಜಗ- । ತೆರದ ಸರ್ವವಿಭೂತಿ ಮನ್ನಿಸು ।
ಕಿರಿದೆ ಕೊಡುವುದು ಪ್ರಭೆಯನಿದ ನೀ ನೋಡು ಕೌಂತೇಯ ॥ ಒರಿದೆ ದೋಷವನೆಣಿಸದಿರು ಭೇದವನು ನೋದದಿರು ॥
ಧರೆಯೊಳೊರ್ವ ನೃಪಾಲನಾಜ್ಞೆಯ । ನರನೆ ಸಾಮಾನ್ಯವ ವಿಶೇಷವ ।
ನರರು ಸರ್ವರು ಸ್ವೀಕರಿಸಿದರೆ । ಸರಿಯು ಚಾರದು ಭೇದವೆನ್ನಲ ।
ಕರೆಯು ಬೇಡಾ ನೃಪತಿಯೊರ್ವನೆನುತ್ತಲೀ ಜಗದಿ ॥೨೧೧॥ ಭರಿತನಾಗಿಹೆ ಪೂರ್ಣವಿಶ್ವದಿ ನಾನೆ ಕೌಂತೇಯ ॥ ೨೧೩ ॥

ಇರುವನಾತ ಮಹಾನುಭಾವನು । ಒರಿದೆ ಕೇಳೀ ಭೇದ ಕಲ್ಪನಿ ।
ಕರೆಯಬೇಡಾತನನು ನಿರ್ಧನ- । ತರಲು ಬೇಕೆ ಕಳಂಕ ಬುದ್ದಿಗೆ ।
ನೆರಡನೆಯುರಿಚ್ಛೆಯನು ಪರಿಪಾಲಿಸಲು ಕೌಂತೇಯ ॥ ಬರಿದೆ ಘೃತ ತೊಳೆಯುವರೆ ಯವ್ಯತವನಪ್ಪಿಸುವರೇನು ॥
ಸುರರ ಧೇನುವಿಗೇನು ಹತ್ತರ । ಇರುವುದೇನೆಡಬಲವು ಗಾತಿಗೆ ।
ಪರಿಪರಿಯ ನಾಮಗ್ರಿ ಬೇಕೇ । ತರಣಿಬಿಂಬವ ಹಿಂದೆಮುಂದಕೆ ।
ಶರಣಿಗಳ ಸ್ಪೃಹೆ ಪೂರ್ಣಗೈವುದು ಬೇಡಿದಾಕ್ಷಣದಿ ತಿರಿತಿರಿಗಿ ನೋಡಿದರೆ ದೃಷ್ಟಿಯೆ ಕುಕ್ಕಿ ತೋಗುವುದು ॥ ೨೧೪॥
॥ ೨೧೨ ॥

ಇರುವುದೆನ್ನ ವಿಭೂತಿಯಂಗದಿ । ಎನ್ನ ರೂಪಗಳೆಲ್ಲ ವೊಂದೇ ।
ಪರಿಪರಿಯ ಐಶ್ವರ್ಯ ಸರ್ವವು । ಯೆನ್ನ ಭೇದವನೆಣಿಸದಿರು ಸಂ- ।
ನರನೆ ನಿನಗದನರಿವ ಸಾಧನ ಪೇಳ್ವೆ ಕೇಳುನ್ಮದು ॥ ಪೂರ್ಣನಾನಿಹೆ ಸರ್ವಸಚರಾಚರ ಜಗತ್ತಿನಲಿ ॥
ಧರಿಸಿ ಶಿರದೊಳಗಾಜ್ಞೆ ಸರ್ವರು । ಎನ್ನ ಸರ್ವವಿಭೂತಿಗಳ ಸಂ- ।
ಪಡೆಸುವರು ನೀ ನೋಡಲೀತೆರ- । ಪೂರ್ಣವೆಣಿಸುವುದೆಂತು ಹೇಳೈ ।
ವರಿಯು ಬೇಕು ವಿಭೂತಿಯುತರಾಜ್ಞೆಯನು ಕೊಡುವನವರು ॥೨೧೫॥ ಭಿನ್ನಭಿನ್ನವನಂತರೂಪಗಳಾಗಿಹೆನು ನಿಜವಿ ॥ ೨೧೫ ॥

ನರನೆ ನಾಕೆನ್ನಯ ವಿಭೂತಿಗ- ।
ಳರಿವ ಮನದಿಚ್ಛೆಯದು ತೀರದು ।
ಭರಿತನಾನೊಂದಂಶದಲಿ ತುಂಬಿಹೆನು ಜಗದೊಳಗೆ ॥
ಅರಿಯುತೀಪರಿ ಯೆನ್ನ ಭಜಿಸೈ ।
ಯಿರುವೆ ಜ್ಞಾನವನಕ್ಕೆ ಕುಸುಮಾ- ।
ಕರನಲಾ ಆನಂದದಾಯಕನಿಹೆನು ಜಗಕಾನು ॥ ೨೧೬ ॥

ಹರಿಯು ಶ್ರೀಪರಮಾತ್ಮನೀಪರಿ ।
ಯರುಹಿದನು ವೈರಾಗ್ಯಶೀಲರಿ- ।
ಗುರುತರದಲೀಕಾಂತಸುಖವನು ಕೊಡುವ ದೇವನಲಾ ॥
ನರನು ಪಾರ್ಥನಿಗೆಂದನಾಕ್ಷಣ ।
ಹರಿಯೆ ನೀನೆನಗರುಹಿದಿಯಲಾ ।
ಧರಿಸ ಬಾರದು ಭೇದವನು ನಿನ್ನಯ ವಿಭೂತಿಯಲಿ ॥೨೧೭॥

ಹರಿಯೆ ನಿನ್ನಯ ಮಹಿಮೆಗಿದು ಬಹು ।
ತೆರದಿ ಯೋಗ್ಯವೆಯಾಯ್ತು ನೋಡಲು ।
ಪರಿಯನರಿಯೆನು ನಿನ್ನ ತರ್ಕವಗಮ್ಯವೆನಗಿಹುದು ॥
ತೊರೆಯು ಬೇಕ್ಕೆ ಭೇದವೆನ್ನಲು ।
ತೊರೆವವರು ಮೇಣ್ ತ್ಯಾಗಿಯೀಪರಿ ।
ಯೆರಡು ತತ್ತ್ವಗಳುಳಿಯೆ ಭೇದವು ನಾವ ಪರಿಯೆಂತು
॥ ೨೧೮ ॥

ತರಣಿಯುಹಯದ ಹಿಂದೆ ಕತ್ತಲೆ- ।
ಗಿರದೆ ಸಾರೆಲೆ ಬದಿಗೆನುತ ಪೇ- ।
ಳ್ವರೆ ಕಣಾ ಜಗದೊಳಗೆ ಸೂರ್ಯೋದಯದಿ ಕತ್ತಲೆಯು ॥
ಹರಿದು ತನ್ನಿಂ ತಾನೆ ಪೋವುದು ।
ಭರಿತನೀಶ್ವರ ಜಗದೊಳೆಂಬೀ ।
ಪರಿಯ ಜ್ಞಾನವು ಬರಲು ತದ್ರೂಪತೆಯೆ ಬರುವುದಲಾ
॥ ೨೧೯ ॥

ಹರಿಯೆ ನಿನ್ನಯ ತರ್ಕ ತಿಳಿಯದು ।
ಕರೆಯಲೆಂತದ ಬೀರೆ ಹೆಸರಲಿ ।
ಹರಿಯೆ ನಿನ್ನಯ ನಾಮ ಮಾತ್ರವ ಸ್ಮರಿಸಿದಾಕ್ಷಣದಿ ॥
ಬರಲು ಶ್ರವಣದಿ ನಿನ್ನ ನಾಮವು ।
ಹರಿಯುವುದು ಮನದಿಂದ ಭೇದವು ।
ಹರಿಯೆ ನೀ ಕೇವಲ ಪರಬ್ರಹ್ಮಸ್ವರೂಪನಲಾ ॥ ೨೨೦ ॥

ಇರುವುದೆನ್ನ ಸುದೈವವೀಪರಿ ।
ಹರಿಯೆ ಕೈವಶನಾದಿ ಯೆನ್ನಯ ।
ಬರುವುದೆಂತೀ ಭೇದವೆಮ್ಮೊಳು ತಿಳಿಯಲಸದಳವು ॥

ನರನು ಚಂದ್ರನ ಗರ್ಭ ಸೇರಲು ।
ಒರುಪ್ರದೆಂತೈ ಶಕೆಯು ದೇಹಕೆ ।
ಮುರಳಿ ಶಕೆಯೆಂದಾತನೊದರಲು ಮರುಳನೆನ್ನುವರು ॥ ೨೨೧ ॥

ಹರಿಯೆ ಶ್ರೀಗೋಪಾಲಕೃಷ್ಣನೆ ।
ಯಿರುವಿ ನೀನು ಮಹಾತ್ಮ ಜಗದೊಳ- ।
ಗಿರುವುದಧಿಕಾರವ್ರತ ನಿನಗೆ ಮಾತಾದುವರೆ ಸ್ವೇಚ್ಛೆ ॥
ನರನ ಭಾಷಣ ಕೇಳುತೀಪರಿ ।
ಹರಿಗೆ ಬಂತತಿಶಯದಿ ಸಂತಸ ।
ನರನ ಬಿಗಿಯಪ್ಪಿದನು ಹರಿಯಂತಃಕರಣದಿಂದ ॥ ೨೨೨ ॥

ಮರಳಿ ಪ್ರತ್ಯುತ್ತರವನಿತ್ತನು ।
ನರನೆ ಸಿಟ್ಟಾಗದಿರು ಯೆನ್ನೊಳು ।
ಭರದಿ ನಿನಗಾನರುಹಿ ನೋಡಿದೆ ತಿಳಿಯಿತೇ ವಿಷಯ ॥
ಪರಿಪರಿಯಲಿ ವಿಭೂತಿಂಯೋಗವ- ।
ನರುಹಿದೆನು ನಾ ನಿನಗೆ ಪ್ರೇಮದ- ।
ಲರಿಯಿತೇ ನಿನಗೆಂದು ಕೇಳ್ದೆನು ಭಾಷಣದ ಭರದಿ ॥ ೨೨೩ ॥

ಅರಿಯ ಬೇಕಿದನೆಂದು ನಿನಗೀ- ।
ಪರಿಯ ಭಾಷಣ ಮಾಡಿ ನೋಡಿದೆ ।
ನರಿತೆ ನಿನಗಾಯ್ತೊ ವಿಭೂತಿಜ್ಞಾನ ಪರಿಪೂರ್ಣ ।
ನರನು ಪ್ರತ್ಯುತ್ತರವನಿತ್ತನು ।
ಹರಿಯೆ ನೀನೇ ನೋಡಿಕೊಳ್ಳೆಲ ।
ಭರಿತ ನೀನಾಗಿರುವಿ ವಿಶ್ವದೊಳೆಂದು ತಿಳಿದಿಹೆನು ॥ ೨೨೪ ॥

ನರನಿಗಾಯ್ತೊ ತೆರದ ಯೋಗ್ಯತೆ ।
ಯರುಹಿದನು ಸಂಜಯನು ಭೂಪನಿ- ।
ಗರುಹಿಹುದ ಕೇಳುತ್ತ ಕೂತನು ಸ್ತಬ್ಧ ಧೃತರಾಷ್ಟ್ರ ॥
ಅರಿತನೀ ಸಂಗತಿಯ ಸಂಜಯ ।
ಭರದಿ ಖೇದವನಾಂತು ನುಡಿದನು ।
ದೊರಕುತಿಹ ಲಾಭವನು ಕಾಲಿಂದೊದ್ದು ಬಿಡುವನಲಾ ॥ ೨೨೫ ॥

ಕುರುಡನೀ ಧೃತರಾಷ್ಟ್ರ ಕಣ್ಣಿಂ- ।
ದಿರಲು ಮೇಣಾ ಜ್ಞಾನದೃಷ್ಟಿಯು ।
ಕುರುಡಿರದು ತಾನೆಂದು ತಿಳಿದೆನು ಮಿಥ್ಯವಾಯಿತಿದು ॥
ಎರಡು ತೆರದಲಿ ಕುರುಡನೀತನು ।
ಬರಿದೆ ಕೋಣನ ಮುಂದೆ ವೀಣೆಯು ।
ನರನು ತನ್ನಯ ಯೋಗ್ಯತೆಯಲೇರಿದನು ಹರಿಯೆದುರು ॥ ೨೨೬ ॥

ಎರದನೆಯ ಸಂಗತಿಯು ಧ್ಯಾನದಿ ।
ಬರಲು ನರನಿಂತೆಂದ ಕೃಷ್ಣನಿ- ।
ಗಿರುವದೀಶ್ವರಮಾಯವು ಜಗನಿದು ತಿಳಿಯಿತೆಂದೆನಗೆ ॥
ಬರಲು ಬೇಕೀ ವಿಶ್ವವೆನ್ನಯ ।
ಚರುಮ ಚಕ್ಷುವಿನೆದುರಿಗೆನುತೀ ।
ಪರಿಯು ಮನದೊಳಗಿಚ್ಛೆಯಾದುದು ನೋಡಿದಿಯೊ ಹರಿಯೆ
॥ ೨೨೭ ॥

ನರನ ಬುದ್ಧಿಗೆ ಬಯಕೆ ಬೆಳೆಯಿತು ।
ತ್ವರಿತದಿಂದೀ ಕಣ್ಣಿನಿಂದಲೆ ।
ಭರದೊಳಾ ನಿಜ ವಿಶ್ವರೂಪವ ಕಾಣ ಬೇಕೆನುತ ॥
ನರನು ಕೇಳ್ವಾಮಾನ್ಯ ಪುರುಷನೆ ।
ಸುರತರುವಿನುಪಶಾಖೆಯಲ್ಲವೆ ।
ಬರಡು ಪೂಗಳು ಬರುವುದೆಂತೀ ಕಲ್ಪತರುವಿನಲಿ ॥ ೨೨೮ ॥

ನರನು ನುಡಿದುದನೆಲ್ಲ ಮಾಧವ ।
ಹರಿಯು ತತ್ವರನಿರುವನಲ್ಲವೆ ।
ಹರಿಯು ಪವಮಾತುಮನ ಲೀಲೆಯುನೆಂತು ವರ್ಣಿಸಲಿ ॥
ಶರಣಿಪ್ರಹ್ಲಾದನನು ಕಾಯ್ವರೆ ।
ಗರಳ ಸಹ ತಾನಾಗಿ ಕೂತನು ।
ಶರಣಿ ಕಲ್ಪದ್ರುಮನು ಸದ್ಗುರು ಕೃಷ್ಣನಿಂದಿನಲಿ ॥ ೨೨೯ ॥

ನರನ ಕೈಯಲಿ ಸಿಲುಕಿಹನಲಾ ।
ನರನು ನೋಡಾವಿಶ್ವರೂಪವ ।
ನಿರಕಿಸುವ ಪರಿಯೆಂತು ವರ್ಣಿಪೆನೀಗ ಸರಸದಲಿ ॥
ಅರುಪಿದನು ಬ್ಯಾಸೇಶನೀಪರಿ ।
ಗುರುನಿವೃತ್ತಿಯ ಮುಂದೆ ನಾನದ- ।
ನರುಹುವೆನು ಕನ್ನಡದಿ ಸದ್ಗುರುವಿಷ್ಣು ಪೇಳ್ದಂತೆ ॥ ೨೩೦ ॥

ಇತಿ ಶ್ರೀಮೂದಕಟ್ಟಿಸುಬ್ಬರಾವಾತ್ಮಜರಾಘವೇಂದ್ರರಾಯಕೃತವಾದ ಕನ್ನಡಬ್ಯಾಸೇಶ್ವರಿಯಲ್ಲಿ
(೧೦) ಹತ್ತನೆಯ ಅಧ್ಯಾಯ ಮುಗಿದುದು.

ಸಂಸ್ಕೃತ ಮೂಲಶ್ಲೋಕಗಳು ೪೨, ಕನ್ನಡ ಷಟ್ಪದಿಗಳು ೨೩೦

ಕನ್ನಡ ಜ್ಞಾನೇಶ್ವರಿ.

೧೧ ಹನ್ನೊಂದನೆಯ ಅಧ್ಯಾಯ.

ಇಂದು ಬರುವಧ್ಯಾಯವದು ಹ- ।
ನ್ನೊಂದನೆಯುದದ ಕೇಳಿರೆಲ್ಲರು ।
ಚಂದನಿಹುದೈ ಕಥೆಯು ಶಾಂತಾದ್ಭುತರಸಾನ್ವಿತವು ॥
ಕಂದೆರೆದು ನೋಡುತಲೆ ವಾರ್ಥಗೆ ।
ನಂದಕಂದ ಮುಕುಂದ ತನ್ನಯ ।
ವಂದನೋಚಿತಗುಹ್ಯರೂಪವ ಶೋರ್ದನೈ ಮುದದಿ ॥ ೧ ॥

ಶಾಂತರಸದರಮನೆಗೆಯತಿಥಿಯು ।
ಕಾಂತವದ್ಭುತರಸವು ಬಂತಾ- ।
ಗಂತುಕರು ಬೇರಿಹರು ರಸಗಳ ಪಂಕ್ತಿ ಕೂಡುವುದು ॥
ಪಂಕ್ತಿಲಾಭವು ದೊರೆವುದವರಿಂ- ।
ಗೆಂತೆನಲು ನೋಡಿರಿ ನಿಮಗೆ ದೃ- ।
ಷ್ಟಾಂತವನು ಕೊಡುತಿಹೆನು ಕೇಳಿರಿ ಲಕ್ಷ್ಯಪೂರ್ವಕದಿ ॥೨॥

ಪೆರೆವಣಿಗೆಯಲಿ ಪಾಲಕಿಯನೇ- ।
ರ್ವರು ವಧೂವರರಿಬ್ಬರಾದರು ।
ನೆರೆದ ನೆಂಟರಿಗೂಟವುದುಗುರೆ ತಿನಿಸಿನಾನಂದ ॥
ದೊರೆಯಲಾರದೆ ಲಗ್ನಮುಂಟಪ- ।
ಕೆರದೆ ಬಂದಿಹ ನೆಂಟರಿಷ್ಟರು ।
ಪರಮಸಂತಸ ತಾಳಲಾರದೆ ಲಗ್ನದುತ್ಸವದಿ ॥ ೩ ॥

ಪರಿಕಿಸಿದರಧ್ಯಾಯನಿದರಲಿ ।
ಮೆರೆವುವೈ ಸುಶ್ರೀಷ್ಟರಸಗಳು ।
ಈರೆನರವುಗಳ ಬುಧರು ಶಾಂತಾದ್ಭುತವೆನಿಸುತ ತಿಳಿಯೆ ॥
ಮೆರೆವುವೆಂತೆನೆ ಕೇಳಿದರೆ ನಾ- ।
ನೊರುವೆನುಪಮೆಯನೊಂದೆ ಕೇಳಿರಿ ।
ಹರಿಹರರ ಸಂಗಮದ ಸಮಯದೊಳವರುಗಳ ತೆರದಿ ॥ ೪ ॥

ತರಣಿಶಶಿಬಿಂಬಗಳ ಯುಗಳವು ।
ಮೆರೆವುದಲ್ಲೈ ಯೊಂದೆ ಠಾವಿಲಿ ।
ಬರಲುಮಾವಾಸ್ಯಾಹವಾಖ್ಯಾಪರಿಯ ರಸಯುತಿಯು ॥

ಎರಡು ನದಿಗಳು ಗಂಗೆ ಯಮುನೆಯು ।
ಹರಿದು ಬಂದು ಪ್ರಯಾಗಕ್ಷೇತ್ರದಿ ।
ಭರದಿ ಸಂಗತವಹುವು ಮುಂದೆ ಪ್ರವಾಹ ವೊಂದಹುದು ॥ ೫ ॥

ಎರಡು ರಸಗಳು ಶಾಂತವದ್ಭುತ ।
ಬರುತ ಸಂಗಮವಿಲ್ಲಿಯಾದುವು ।
ಮೆರೆವುದೈ ಹನ್ನೊಂದನಧ್ಯಾಯವು ಪ್ರಯಾಗವಲಾ ॥
ಭರದೊಳೀಯಧ್ಯಾಯ ಕೇಳಲು ।
ಬರುವುದದರಿಂ ಪುಣ್ಯ ಬಹುಪರಿ ।
ಯಿರುವರದರಿಂ ಶ್ರವಣತತ್ಪರರೈ ಮುಮುಕ್ಷುಗಳು ॥ ೬ ॥

ಎರಡು ರಸಗಳ ಸಂಗಮದಿ ಮ- ।
ತ್ತಿರುವುದೈ ಗುಪ್ತವದು ಮೂರನೆ ।
ಪರಮ ಗೀತಾಭಿಧಸರಸ್ವತಿಯತಿಪವಿತ್ರನದಿ ॥
ಇರುವುದೀಯಧ್ಯಾಯವದರಿಂ ।
ಪರತ್ರಿವೇಣೀಸಂಗಮವಲಾ ।
ಅರಿಯಿರೈ ನೀವಿದುವೆ ಪಾವನಪುಣ್ಯಕಾರಕವು ॥ ೭ ॥

ಇರುವುದಿದು ಬಹು ಚಿತ್ರಸಂಗಮ- ।
ವಿರುವುದೇನವಗಾಹನೆಯ ಭಯ- ।
ವಿರುವುದಿದಕೆ ಪ್ರವೇಶ ಕರ್ಣೇಂದ್ರಿಯದ ದ್ವಾರದಲಿ ॥
ಗುರುನಿವೃತ್ತಿಯನುಗ್ರಹದಲೀ- ।
ತೆರದ ಸುಲಭೋಪಾಯ ಜಗದಲಿ ।
ಕರತಲಾಮಲಕಪ್ರಕಾರದಿ ಹಸ್ತಗತವಿಹುದು ॥ ೮ ॥

ಇರುವುದೈ ಗೀತಾನದಿಗೆ ದೃಢ- ।
ತರದ ಸಂಸ್ಕೃತಭಾಷೆ ದಂಡೆಯು ।
ಹರಿಯುತಲ್ಲೆ ಮರಾಠಿಭಾಷೆಯ ಘಟ್ಟವನೆ ಕಟ್ಟಿ ॥
ಗುರು ನಿವೃತ್ತಿಯು ಸುಲಭವಿಹ ಬಹು ।
ತೆರದ ಪಾವಟಿಗೆಗಳನಿರಿಸಿದ ।
ಒರುವುದದರಿಂ ಸುಲಭದಲಿ ಗೀತಾರ್ಥಲಾಭವದು ॥ ೯ ॥

ಧರೆಯೊಳೀ ತೀರ್ಥದಲಿ ಭಕ್ತಿಯೊ- ।
ಳಿರದೆ ಸಂತತ ಸ್ನಾನ ಮಾಡುತ ।
ದೊರಕಿಸಿರಿ ಪುರುಷಾರ್ಥವೆಲ್ಲವ ನೀವು ಸಂತಸದಿ ॥
ಇರುವನಾ ಮಾಧವ ಪ್ರಯಾಗದಿ ।
ದರುಶನವ ಕೊಳ್ಳದಲೆ ಪುಣ್ಯವು ।
ಬರುವುದಿಲ್ಲೈ ನೋಡಲೀ ಸಂಗಮದಿ ಮಾಧವನು ॥ ೧೦ ॥

ಇರುವನೈ ಹರಿ ವಿಶ್ವರೂಪನು ।
ಭರದಿ ದರ್ಶನ ಕೊಳ್ಳಿರೀತನ ।
ಮರಣಜನನದ ಭವಕೆ ಕೊಡಿರಿ ತಿಲಾಂಜಲಿಯನಿಲ್ಲಿ ॥
ಅರುಹಲೆಂತೀ ವಿಸ್ತರವ ನಾ- ।
ನಿರುವುನೀಯಧ್ಯಾಯದಲಿ ಬಹು ।
ಪರಿಯಲಾ ನವರಸಗಳೆಲ್ಲವು ಮೂರ್ತಿಯುತವಾಗಿ ॥ ೧೧ ॥

ಎರಡು ರಸಗಳು ಶಾಂತವದ್ಭುತ ।
ಬರುವುವೈ ಗೋಚರಕೆ ಬಹುಪರಿ ।
ಬಿರುವುವನ್ಯರಸಂಗಳೆಲ್ಲವು ಭೃತ್ಯರಂದದಲಿ ॥
ಇರುವುದೀ ದೃಷ್ಟಾಂತ ಗೌಣವು ।
ಪರಿಕಿಸಿದರಧ್ಯಾಯವಿದರೊಳು ।
ದೊರಕುವುದು ಪ್ರತ್ಯಕ್ಷನೋಕ್ಷದ ಸುಖವು ನೋಡಿದಿರಾ ॥ ೧೨ ॥

ಇರುವುದೀಯಧ್ಯಾಯ ಸಾಕ್ಷಾ- ।
ದ್ಧರಿಯ ವಿಶ್ರಾಂತ್ಯಾಲಯವಲಾ ।
ನರನು ಭಕ್ತಶಿರೋಮಣಿಯಲಾ ಭಾಗ್ಯಶಾಲಿಯಲಾ ::
ಅರಿಯಲೀ ಸ್ಥಾನದಲಿಯಾದರು ।
ನರನು ಕೃಷ್ಣನ ಬಿಟ್ಟನೇನೈ ।
ಹರಿಯೊಡನೆ ಹಿಂಬಾಲಿಸಿದನೈ ನೆರಳಿನಂದದಲಿ ॥ ೧೩ ॥

ನರನು ಬಂದಿಹನೊರ್ವನೆಂದೀ- ।
ಪರಿಯ ಭಾಷಣವೇಕೆ ಗೀತೆಯ ।
ಸರಸಕನ್ನಡದಲ್ಲಿ ತಿಳಿವಂದದಲಿ ಮಾಡಿರಲು ॥
ಬರುವುದಲ್ಲವೆ ಲಾಭವೀಪರಿ ।
ಪರಮಸುಖಸಾಮ್ರಾಜ್ಯವೆಲ್ಲರಿ- ।
ಗಿರುವುದೈ ಬಹುಸುಲಭ ಸುಖದ ಸುಕಾಲವಾಯಿತಲಾ ॥ ೧೪ ॥

ಪರಿಯಲೀ ನಾ ವಿನ್ನವಿಸುವೆನು ।
ಪರಮಸಜ್ಜನರುಗಳೆ ಯೆನ್ನಯ ।
ಸರಸವಚನವ ಮಾನ್ಯಮಾಡಿರಿ ಪ್ರೇಮಭಾವದಲಿ ॥
ಅರಿಯಲೀಪರಿ ಸಲಿಗೆಮಾತನು ।
ಭರದಿ ನಿಮ್ಮೊಳಗಾಡುವೆ ನಾ- ।
ನಿರೆನು ಯೋಗ್ಯನು ಪರಿಯಿದಾದರು ಸಲಿಗೆಮಾಡಿದೆನು ॥ ೧೫ ॥

ಪರಮ ಪ್ರೇಮದೊಳೆನ್ನದೀ ತೆರ- ।
ವಿರುವುದೈ ನಾ ನಿಮ್ಮ ಬಾಲನು ।
ಭರದಿ ಮಮತೆಯಿಲೆನ್ನನೆತ್ತಿರಿ ತಮ್ಮ ಕೈಯಿಂದ ॥
ಇರುವೆ ನಾನಾಗಳೆಯ ಮರಿಯೈ ।
ಸರಸವಾಕ್ಯವ ನೀವೆ ಕಲಿಸಿರಿ ।
ಮರಳಿ ನೀವ್ ಕಲಿಸಿದುದ ನುಡಿದರೆ ನಿಮಗೆ ಕೌತುಕವು ॥ ೧೬ ॥

ಕಲಿಸಿರುವ ನುಡಿಗಳನು ನುಡಿದರು ।
ತಲೆಯ ತೂಗುವರಲ್ಲನೇ ನೀವ್ ।
ಗಿಳಿಯ ಪಾಂಡಿತ್ಯವನು ಮೆರೆಸುವುದೇನು ನಿಮ್ಮೊಡನೆ ॥
ಎಳೆಮಗುವು ಮಾತಾಡುವುದ ತಾ- ।
ನೊಲಿದು ತಾಯಿಯು ಕೇಳುತಿರಳೇ ।
ಯೆಳೆಮಗುವು ವಾಂಡಿತ್ಯ ತೋರ್ಪುದೆ ತೊದಲುನುಡಿಯ ವಿನಾ ॥ ೧೭ ॥

ನುಡಿಗಳನು ನೀವ್ ಕಲಿಸಿದಿರಿ ನಾ ।
ನುಡಿವೆ ನಿಮ್ಮಯ ನುಡಿಗಳನ್ನೇ ।
ಯಡಿಗೆರಗಿ ನಾ ಬೇಡಿಕೊಳ್ಳುವೆ ವಿನಯುಸದನಾಗಿ ॥
ನುಡಿಗಳೆಂದರೆ ನೀವೆ ಹಚ್ಚಿದ ।
ಗಿಡವಲಾ ಸುಜ್ಞಾನರೂಪದ ।
ಕೊಡಿರಿ ನಿಮ್ಮೀಕಾಗ್ರದಂತಃಕರಣಸೇಚನವ ॥ ೧೮ ॥

ಬೆಳೆಯಲೀಪರಿ ಗಿಡವ ಮೇಣದ- ।
ಕಿಳೆಯುವೆವು ನವರಸದ ಹೂಗಳು ।
ತಿಳಿಯಲರ್ಥದ ಸರಸಫಲಗಳು ತುಂಬಿತುಳುಕುವುವು ॥
ಇಳೆಯೊಳೀ ನಿಮ್ಮ ಪ್ರಭಾವದಿ ।
ಫಳಿಸುವರು ಪುಣ್ಯವನು ಸಕಲರು ।
ಫಳಿಸುವರು ಸುಖಶಾಂತಿಯನು ನಿಮ್ಮಿಂದ ಲೋಕದಲಿ ॥ ೧೯ ॥

ಅರುಹಿದೀ ಜ್ಞಾನೇಶವಚನವ- ।
ನಿರದೆ ಕೇಳುತ ಶ್ರೋತೃಜನರೇ ।
ಮರಳಿ ಪ್ರತ್ಯುತ್ತರವನಿತ್ತರು ಹರ್ಷಪುಳಕಿತರು ॥
ಹರುಷವಾಯಿತು ಮನದಿ ಸಾಕೀ- ।
ಪರಿಯ ಸಂಸ್ತುತಿ ನಿನಗೆ ಸಲ್ಲದು ।
ಹರಿಯ ಗೀತಾವಚನದರ್ಥವ ಹೇಳು ಹೇಳೆಮಗೆ ॥ ೨೦ ॥

ಆರುಹಿದೀ ನುಡಿಕೇಳೆ ಜ್ಞಾನೇ- ।
ಶ್ವರನು ಪ್ರತ್ಯುತ್ತರವನೀಡಿದ- ।
ನರುಹಲೆಂತೀ ಪಾಮರನು ಕೃಪಣಾರ್ಜುನರ ಗೀತೆ ॥
ಪರಿಯಿದಾದರು ನೀವು ಶಕ್ತಿಯ ।
ಕರುಣಿಸಿದಿರೈ ಯೆನಗೆ ನಿಮ್ಮಯ ।
ವರಪ್ರಸಾದದಿ ಸಾಹಸವನಿದ ಮಾಡಲೆತ್ನಿಪೆನು ॥ ೫೧ ॥

ಅಡವಿಯುಲಿ ಮರಮರವ ಹಾರುತ ।
ಗಿಡದ ತೊಪ್ಪಲ ತಿಂಬ ವಾನರ- ।
ಗಡಣದಿಂ ಲಂಕಾಧಿರಾಜನ ಹೊಡೆಸಲಿಲ್ಲೇನೈ ॥
ಜಡಜನಾಭನು ಪಾರ್ಥನಿಂದಾ ।
ಕಡುಭಯಂಕರ ಕುರುಪತಿಯ ದಳ- ।
ಕಡಲನೇಕಾದಶಗಳಕ್ಷೌಹಿಣಿಗಳೊಣಗಿಸಿದ ॥ ೨೨ ॥

ಮನಕೆ ಬರಲೀಪರಿ ಸಮರ್ಥರು ।
ನೆನೆದ ಕಾರ್ಯದಿ ಸಿದ್ಧಿ ತರುತಿಹ- ।
ರೆನಗೆ ನಿಮ್ಮ ಸಮರ್ಥರಾಶೀರ್ವಾದ ದೊರೆದಿಹುದು ॥
ಎನಗೆ ಗೀತಾರ್ಥವನು ಪೇಳೆಂ- ।
ದೆನಲು ನಿಮ್ಮಯ ವರಪ್ರಸಾದದಿ ।
ಮನಕೆ ಒಂದುದ ನುಡಿದರದು ಗೀತಾರ್ಥವಾಗುವ್ರದು
॥ ೨೩ ॥

ಹರಿಯು ಶ್ರೀವೈಕುಂಠನಾಯಕ- ।
ನರನಿಗರುಹಿದ ಗೀತೆಯರ್ಥವ- ।
ನಿರದೆ ನಾ ನಿಮಗೊರುವೆ ಕೇಳ್ವುದು ಲಕ್ಷ್ಯಪೂರ್ವಕದಿ ॥
ಒರೆದೆ ವರ್ಣಿಸಲೆಂತು ಬಾಯಲಿ ।
ಹರಿಯ ಗೀತೆಯು ಧನ್ಯ ಜಗದೊಳ- ।
ಗಿರುವೆ ನಾನತಿಧನ್ಯ ಬಾಯಿಂದುಚ್ಚರಿಸಲಿದನು ॥ ೨೪ ॥

ಪರಿಪರಿಯಲಾ ವೇದ ವರ್ಣಿಪ ।
ಹರಿಯೆ ಪರಮಾತುಮನೆ ವಕ್ತನು ।
ಹರನ ಬುದ್ಧಿಗೆ ನಿಲುಕಲಾರದು ಮಹಿಮೆ ಗೀತೆಯದು ॥
ಇರುವುದೀಪರಿ ಧನ್ಯ ಕೃತಿಯಿದ- ।
ನರಿವುದೆಂತೀ ತತ್ತ್ವನಾಗರ ।
ತಿರಿಗಿ ವಿಸ್ತರಿಸುವ್ರದು ಶಕ್ಯವೆ ಯೆನಗೆ ಪಾಮರಗೆ ॥ ೨೫ ॥

ಅರಿತೆ ಗೀತಾಶಾಸ್ತ್ರಮೀಪರಿ ।
ಯಿರುವುದೈ ಸಕಲರಿಗೆ ವಂದ್ಯವೆ ।
ಭರದಿ ಧೀಕಾಕ್ಕಾಯದಿಂದಲಿ ವಂದಿಸುವ್ರದುಚಿತ ॥

ನರನು ಕೇಳಾ ವಿಶ್ವರೂಪದ ।
ದರುಶನವನಿಚ್ಛಿಸುತ ಮನದೊಳ- ।
ಗಿರುವ ಬಯಕೆಯ ತೀರಿಸಲು ಹರಿಯೊಡನೆ ನುಡಿವನಲಾ ॥೨೬॥

ಚತುರನಲ್ಲವೆ ದಿನಿಜಪತಿಸುತ- ।
ನತಿಕುಶಲದಿಂ ಪ್ರಶ್ನೆ ಕೇಳ್ವನು ।
ಪ್ರತಿಯು ವಿಶ್ವವಿದೆಲ್ಲನೀಶ್ವರಮಯವೆನುತ ಮನದಿ ॥
ಮತಿಗೆ ಗೋಚರವಾಯ್ತು ನಿಜವಿದು ।
ಮತಿಯ ತೆರದಲಿ ದೃಷ್ಟಿಗೋಚರ ।
ಪ್ರತಿಪೆ ನೋಡಲು ಶಕ್ಯವೇ ತನಗೆಂದು ಯೋಚಿಸಿದ ॥ ೨೭ ॥

ನರನಿಗೀಪರಿಯಿಚ್ಛೆಯಾದರು ।
ಹರಿಯೊಡನೆ ಮಾತಾದಲಾರನು ।
ಭರದೊಳೀಪ್ರಶ್ನೆಯನು ಕೇಳ್ವುದೆ ಸಂಶಯಾತ್ಮಕವು ॥
ಪರಿಕಿಸಿದರೀ ರೂಪ ಗುಹ್ಯವು ।
ಹರಿಯು ವಿಶ್ವಸ್ವರೂಪ ನೋಡಲಿ- ।
ಕಿರುವ್ರದೇ ಮಾನವಗೆ ಸಾಧ್ಯವು ಚರ್ಮಚಕ್ಷು-ವಿಗೆ ॥ ೨೮ ॥

ನರನು ಮನದಲಿ ಚಿಂತಿಸಿದನೈ ।
ಹರಿಯು ಹಿಂದೀ ವಿಶ್ವರೂಪವ ।
ಶರಣರಿಗೆ ತೋರಿಸಿದನೋ ಪೇಳಿಲ್ಲವೋ ತಿಳಿಯೆ ॥
ಶರಣರಿಂಗೀವರೆಗೆ ತೋರಿಸ- ।
ದಿರುವ ದಿವ್ಯಸ್ವರೂಪವೆನಗೆನೆ ।
ಕರುಣಿಸೈ ಯೆಂಬುವ ವಿನಂತಿಯ ಮಾಡಲಾನೆಂತು ॥ ೨೯ ॥

ಶರಣರಲಿ ನಾ ಸಲಿಗೆಯವ ನಿಜ- ।
ನಿರುವನೇ ನಾ ತಾಯಿಗಂ ಮಿಗಿ- ।
ಲರುವ್ರದೇ ಹೃಯಂತರಂಗವು ತಿಳಿಯಲೆನ್ನೊಡನೆ ॥
ಭರದಿ ತಾಯಿಯೆ ಕೇಳಲಂಜಿದ ।
ಪರಿಯ ರೂಪವ ತೋರಿಸೆನುತಲಿ ।
ಹರಿಗೆ ಬನ್ನೈಸುವ್ರದು ಯೆಂತೀ ಪರಿಯನರಿಯೆನಲಾ ॥ ೩೦ ॥

ಪರಿಪರಿಯಲೀ ಹರಿಯ ಸೇವೆಯ- ।
ನಿರದೆ ಮಾಡಿದೆನಹುದು ನಿಜ ನಿಜ ।
ಗರುಡನಿಂ ಮಿಗಿಲಿಹುದೆ ಯೆನ್ನಯ ಸೇವೆ ಹರಿಯೊಡನೆ ॥
ಗರುಡನಾದರು ವಿಶ್ವರೂಪವ- ।
ನರಿಯ ಬೇಕೆಂದಿಚ್ಛೆ ಮಾಡದೆ ।
ಸರಿಯೆ ಯೆನಗೀ ಮಾತ ಕೈಗೆವ್ರದು ಕೃಷ್ಣನೋಡನೆಂದು ॥ ೩೧ ॥

ಹರಿಯ ಹ್ಯಸ್ತವಿನಿಸುವೆ ನಿಜವಿದು ।
ಇರುವೆನೇ ಸನಕಾದಿಗಿಂತಲು । .
ಹಿರಿಯನೇ ನಾನೇನು ಶ್ರೀಕೃಷ್ಣಗೆ ಸಮೀಪದಲಿ ॥
ಅರಿಯಲೀ ರೂಪವನು ಕೇಳಾ ।
ಶರಣಿಸನಕಾದಿಗಳು ಬಯಸದೆ ।
ಸರಿಯೆ ಯೆನಗೀ ಮಾತ ತೆಗೆವುದು ಕೃಷ್ಣರಾಯನಲಿ ॥೩೨॥

ನಂದಗೋಕುಲದೊಳಗೆ ಶ್ರೀಗೋ- ।
ವಿಂದ ಲೀಲೆಯನಾಡಿ ಗೋಪರ ।
ವೃಂದಕಾನಂದವನು ಸಂದಣಿಸಿದ ಮುಕುಂದನಿವ ॥
ಸಂದಗೋಕುಲದೊಳಗೆ ಗೋಪೀ- ।
ವೃಂದಕೀ ರೂಪವನು ತೋರ್ದನೆ ।
ಕಂದನೆಂದೇ ವಂಚಿಸಿದನೈ ನಂದಗೋಕುಲದಿ ॥ ೩೩ ॥

ಶರಣವತ್ಸಲನೆಂಬ ಬಿರುದನು ।
ಧರಿಸಿ ಭಕ್ತನನಂಬರೀಷನ ।
ಪೊರೆವ ನೆವದಿಂ ಸ್ವೀಕರಿಸಿದನು ಗರ್ಭವಾಸವನು ॥
ಪರಿಯಿದಾದರು ವಿಶ್ವರೂಪವ ।
ಹರಿಯು ಕರುಣಿಸಲಿಲ್ಲವಿಂದಿನ ।
ನರೆಗೆ ಗುಹ್ಯದಗುಹ್ಯ ಮಾಡಿಹನಿದನು ನಿಜ ನೋಡೆ ॥೩೪॥

ಇರುವುದೀಪರಿ ಗುಹ್ಯವದರಿಂ ।
ಧರದಿ ಕೇಳುವುದೆಂತು ಕೃಷ್ಣನ ।
ತಿರಿಗಿ ಕೇಳದೆ ಪೋದೆನಾದರೆ ಬಯಕೆ ತೀರುವುದೆ ॥
ಹರಿಯು ನಿಜವಿಶ್ವರೂಪವ ।
ಕರುಣಿಸದೆ ಬಯಕೆಯನು ಮುರಿದರೆ ।
ಮರಣವೇ ಲೇಸಮದು ಬೀಸಿನಲಾರೆನರೆಘಳಿಗೆ ॥ ೩೫ ॥

ಭೀತಿಭೀತಿಯಲೀಗ ಹರಿಯೊಳು ।
ಮಾತ ತೆಗೆಯುವೆ ಮೇಲೆ ಕಂಸಾ- ।
ರಾತಿ ಮಾದಲಿ ಮನಕೆ ಬಂದಂತೆಂದು ನರ ನುಡಿದ ॥
ವಾರ್ಥನತಿಪ್ರಾತುರ್ಯದಿಂದಲಿ ।
ಮಾತ ತೆಗೆದನು ಹೇಳಲೇನದ ।
ಪ್ರೀತಿಯಿಂದಲಿ ಹರಿಯು ತೋರ್ಪನು ವಿಶ್ವರೂಪವನು ॥ ೩೬ ॥

ಇರುವುದೇನಿದರೊಳಗೆ ಚೋದ್ಯವು ।
ಕರುವ ನೋಡಿದ ಕ್ಷಣದಿ ತಾಯಾ- ।
ತುರುವು ಗಡಬಡಿಸುತ್ತ ಪ್ರೇಮದೊಳೇಳುತಿರುವುದಲಾ ॥
ತುರುವನಂತರ ಕೆಚ್ಚಲಿಗೆ ತಾಂ ।
ಭರದಿ ಶಿರದಿಂ ಗುಟಕೆಯಿತ್ತರೆ ।
ತುರುವು ಪಾಲನು ಬಚ್ಚಿಡುವುದೇ ಕರುವನುಣಿಸದಲೆ ॥ ೩೭ ॥

ಹರಿಯು ಪಂಚಪ್ರಾಣ ಪಾಂಡವ- ।
ರಿರುವರೆಂಬೀ ಬಿರುದ ಕಾಯ್ವರೆ ।
ಹರಿಯು ವನಮಧ್ಯದಲಿ ತಾನೋದಾಡಲಿಲ್ಲೀನು ॥
ನರನಿಗೀತೆರದಿಚ್ಛೆಯಾಗಲು ।
ಹರಿಸಲಾರನೆ ಕೃಷ್ಣ ಬಯಕೆಯ ।
ಹರಿಯು ಸಾಕ್ಷಾದ್ಭಾರಿಪ್ರೇಮದ ಮೂರ್ತಿಯಾಗಿಹನು ॥ ೩೮ ॥

ನರನು ಹರಿಯೊಳಗೈಕ್ಯಹೊಂದಿಹ- ।
ನೆರಡು ಮೂರ್ತಿಗಳೆಂದು ತೋರ್ಪುವು ।
ಪರಿಕಿಸಲು ಕೃಷ್ಣಾರ್ಜುನರು ಕೇಳೀಕರೂಪರಲಾ ॥
ಧರೆಯೊಳೀಸಂಬಂಧವಿರಲಾ ।
ನರನು ಪ್ರಶ್ನೆಯ ಕೇಳಿದಾಕ್ಷಣ ।
ಮುರಹರನು ನಿಜವಿಶ್ವರೂಪವ ತೋರ್ಪುದಜ್ಜರಿಯೆ ॥ ೩೯ ॥

ಅರ್ಜುನ ಉವಾಚ—

ಮದನುಗ್ರಹಾಯ ಪರಮಂ ಗುಹ್ಯಮಧ್ಯಾತ್ಮಸಂಜ್ಞಿತಮ್ ।
ಯತ್ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋ ಮಮ ॥ ೧ ॥

ಹರಿಗೆ ನರನಿಂತೆಂದನಾಕ್ಷಣ ।
ಕರುಣೆಯುದಧಿಯು ನೀನು ಯೆನಗೋ- ।
ಸ್ಕರವೆ ಶಬ್ದಾತೀತ ಗುಹ್ಯವ ವಿಸ್ತರಿಸಿ ಪೇಳ್ದಿ ॥
ಮೆರೆವ ಭೂತಗಳೈದು ಹೇ ಹರಿ ।
ತೊರೆದು ಮಾಯಾಪ್ರಾಣಿಗಳನಂ- ।
ತರದಿ ಪರಮಾತುಮನ ರೂಪದೊಳೈಕ್ಯ ಹೊಂದುವುವು ॥೪೦॥

ಇರುವುದಿದು ಬಹು ಗುಹ್ಯರೂಪವು ।
ಧರಿಸಿದುವು ವೇದಗಳು ಮೌನವ ।
ಹರಿಯೆ ನೀನಿದನೆನ್ನ ಹೃದಯದೊಳಿಟ್ಟ ಗುಪ್ತದಲಿ ॥
ದೊರೆಯಿತಿಂದಿನ ದಿವಸ ನಿಧಿಯಿದು ।
ಹರಿದು ನಿನ್ನಯ ಹೃದಯಪಟಲವ ।
ಕರುಣದಿಂದೆನಗಿತ್ತಿ ಭಾಗ್ಯವಿದೆಂತು ವರ್ಣಿಸಲಿ ॥ ೪೧ ॥

ದೊರೆಯದೀಯುಘ್ಯಾತ್ಮತತ್ತ್ವವು ।
ತೊರೆಯುತಸ್ಪೃಶ್ಯಾಸ್ಪೃಶ್ಯ ಶಂಕರ।
ತಿರುಗುತಿಹನು ಶ್ಮಶಾನದಲ್ಲಿ ವಿರಕ್ತಿಸರನಾಗಿ ॥
ಹರಿಯೆ ನೀನೀ ಜ್ಞಾನನಿಧಿಯನು ।
ಕರುಣದಿಂದೆನಗಿತ್ತಿ ಸುಲಭದಿ ।
ಯರೆಘಳಿಗೆ ಯೋಚಿಸಲು ವ್ಯರ್ಥವಿದೆಂದು ತೋರುವುದು
॥ ೪೨ ॥

ನಿನ್ನೊಳೈಕ್ಯವು ಬಂದನಂತರ ।
ಭಿನ್ನಭಾವವಿದೆಂತುಳಿವುದೈ ।
ಭಿನ್ನಭಾವವ ತೊರೆದು ಕೊಡುವುದು ಕೊಳ್ಳುವುದು ಯಾರು॥
ಎನ್ನ ಮೋಹದ ಪೂರದಲಿ ಸಂ- ।
ಪೂರ್ಣ ಮುಳುಗಿದ ದೀನನೆನ್ನನು ।
ಕೃಷ್ಣ ಪೂರದಿ ಧುಮುಕಿ ಮೇಲಕ್ಕೆತ್ತಿ ತಂದಿಯಲಾ
॥ ೪೩ ॥

ಹರಿಯೆ ನಿನ್ನಯ ಹೊರತು ವಿಶ್ವದೊ- ।
ಳೆರದಲಾ ಬೇರೊಂದು ವಸ್ತುವು ।
ಬರುವುದಿಲ್ಲೈ ತತ್ತ್ವವೀಪರಿ ಮನದಿ ದುರ್ಭಾಗ್ಯ ॥
ಮರೆತು ನಿಜತತ್ತ್ವವನು ಸಾಯುವ ।
ನರಶರೀರಗಳಾವೆನುತ ಬಹು- ।
ಭವಸವನಾವಾಂತು ನಿನ್ನಿಂ ಭಿನ್ನರಾವೆನುತ ॥ ೪೪ ॥

ಪರಿಪರಿಯಲೊದರುವೆವು ಲೋಕದಿ ।
ಮರುಳರಲ್ಲವೆ ನಾವು ಯೆನಗೀ- ।
ದುರಭಿಮಾನವಿದಿತ್ತು ನಾನರ್ಜುನನು ಬಹುಶೂರ ॥
ಕುರುಕುಲೋದ್ಭವರಾಪ್ತರೆನ್ನಯ ।
ಧುರದಿ ಕೊಲ್ಲುವುದೆಂತು ಪಾಪವು ।
ಬರುವುದೆಂದೀ ತೆರದಿ ಭಾವನೆಯಿತ್ತು ಮನದೊಳಗೆ ॥ ೪೫॥

ಪರಿಪರಿಯೊಳೀ ತೆರವಿಚಾರವು ।
ಹರಿಯೆ ಮನದೊಳಗಾಯ್ತು ನಿನ್ನಯ ।
ವರಪ್ರಸಾದದಿ ಭಿನ್ನವಾಯ್ತಿದು ಕನಸಿನಂದದಲಿ ॥
ಸಿರಿಯರಸ ಕಾಲ್ಪನಿಕ ನಗರವ ।
ತೊರೆದು ನೀರಡಿಕೆಯಲಿ ಮುಂದಕೆ ।
ತೆರಳಿದೆನಲಾ ಮೃಗಜಲವ ಕುಡಿಯುವ ದುರಾಶೆಯಲಿ
॥ ೪೬ ॥

ಅರಿವೆಯಿಂ ಮಾಡಿರುವ ಹಾವಿನ- ।
ದಿರುವುದೇನೈ ಭೀತಿ ನಿಜದಲಿ ।
ಪರಿಯನಿದನರಿಯದಲೆ ಕತ್ತಲೆಯಲ್ಲಿ ತುಳಿದಿರಲು ॥

ಧರಿಸಿ ಮನದಲಿ ಕಲ್ಪನೆಯ ತಾ- ।
ನಿರದೆ ಸರ್ಪವು ಕಚ್ಚಿತೆಂದೇ ।
ಭರದಿ ಮೈ ಮರೆಯುವುದು ಕೈಕಾಲುಗಳು ನೆಟಿಯುವುವು ॥ ೪೭ ॥

ಹರಿಯೊಳೆನ್ನ ಸ್ಥಿತಿಯಿದಾಯಿತು ।
ಮರಣಭಯದಿಂ ದುಃಖಶರಧಿಯೊ- ।
ಳೆರಲು ನೀನೆನ್ನನು ಕಣಾ ಮೇಲೆತ್ತಿ ರಕ್ಷಿಸಿದಿ ॥
ಅರಿಯದಲೆ ಪ್ರತಿಬಿಂಬವೆನುತಲಿ ।
ಭರದಿ ಬಾವಿಯ ಧುಮುಕುತಿಹ ಕೇ- ।
ಸರಿಯ ಮೇಲಕ್ಕೆತ್ತಿ ರಕ್ಷಿಸಿದಂತೆ ಮೇಣಾಯ್ತು ॥ ೪೮ ॥

ತಿಳಿಯುದಾನಜ್ಞಾನಸಾಗರ- ।
ದೊಳಗೆ ಮುಳುಗುವುದಿತ್ತು ನನ್ನನು ।
ಕಳಕಳಿಯೊಳೆತ್ತುತಲಿ ನೀನುಳಿಸಿದಿ ಜನಾರ್ದನನೆ ॥
ತಿಳಿಸಿ ಹೇಳುವೆನೆನ್ನ ಮಾನಸ- ।
ದೊಳಗೆ ಕುದಿಯುವ ದುರಭಿಮಾನದಿ ।
ನಳಿನನಾಭನೆ ಬೆಂದು ಬಳಲಿದೆನೀವರೆಗೆಯಲ್ಲಿ ॥ ೪೯ ॥

ಏಳು ಕಡಲುಗಳುಕ್ಕಿ ಬಂದರು ।
ಮೇಲಿರುವ ಬಾನೊಡೆದು ಬಿದ್ದರು ।
ಹಾಳು ಬಿದ್ದರು ಜಗವು ಪ್ರಳಯಾಧೀನವಾದೊಡೆಯು ॥
ಕಾಳಗವ ಗೋತ್ರಜರೊಡನೆ ನಾ ।
ಮೇಳವಿಸೆನೆಂಬೀ ದುರಾಗ್ರಹ ।
ತಾಳಿದೆನು ತಪ್ಪಾಯ್ತು ತಿಳಿಸಿದಿ ತತ್ತ್ವ ನೀನೆನಗೆ ॥ ೫೦ ॥

ನಾನಹಂಕಾರವನು ತಾಳುತ ।
ಮಾನಸಿಕದಾಗ್ರಹದ ಜಲದಲಿ ।
ಕೇಣವಿಲ್ಲದೆ ಧುಮುಕಿದೆನಲಾ ಹರಿಯೆ ತಿಳಿಯದಲೆ ॥
ನೀನು ಹತ್ತರವಿದ್ದು ದಯೆಯಿಂ ।
ದೀನನೆನ್ನನು ಯೆತ್ತಿ ಹಿಡಿದೈ ।
ಯೇನ ಹೇಳಲಿ ಯಾರು ಬಿಡಿಸುವುದಿತ್ತು ನಿನ್ನೊರತು ॥ ೫೧ ॥

ನಾನು ಯೆಂಬುವ ಭಾವ ಸುಳ್ಳದು ।
ಕಾಣುವಮರೀ ಗೋತ್ರಜರು ಯೆಂ- ।
ದಾನು ಕರೆಯುತ ಮರುಳನಾದೆನು ತತ್ತ್ವ ತಿಳಿಯದಲೆ ॥
ಏನ ಹೇಳಲಿ ಹುಚ್ಚು ಹಿಡಿಯಿತು ।
ನೀನು ಕಾಯ್ದೆಯೊ ಯೆನ್ನನಿದರಿಂ ।
ದೀನವತ್ಸಲ ಭಕ್ತರಕ್ಷಕ ನೀನಹುದು ಹರಿಯೆ ॥ ೫೨ ॥

ಹಿಂದೆ ಲಾಕ್ಷಾಗೃಹದೊಳೆಮ್ಮನು । ಹರಿಯೆ ನಿನ್ನ ಶ್ರಮವಿದೆಲ್ಲವು ।
ಬೆಂದು ಸುಡುತಿರೆ ಕಾಯ್ದಿಯಲ್ಲನೆ । ಬರಿದೆ ನಿಷ್ಫಲವಾಗಲಿಲ್ಲೈ ।
ಯೆಂದು ನಮಗೆ ಶರೀರಭೀತಿಯೆ ಯಿತ್ತು ಶ್ರೀಕೃಷ್ಣ ॥ ದೊರಕಿತ್ತೈ ಯಶ ನಿನಗೆ ಹೇಳುವೆನೆಂತು ನಾನದನು ॥
ಇಂದು ಲಾಕ್ಷಾಗೃಹವೆ ಬೇರಿದು । ಹರಿಯೆ ಯೆನ್ನಜ್ಞಾನವೃಕ್ಷವು ।
ಬಂದು ನಿಡಿಸಿದಿ ನಂದನಂದನ । ಮುರಿದು ಬಿತ್ತು ಸಮೂಲ ಭೂಮಿಗೆ ।
ಬೆಂದು ಹೋಗುವುದಿತ್ತು ನಾನಾತುಮನ ಸಹ ಹರಿಯೆ ಕರುಣಿ ಮಾಧವ ನಿನ್ನ ಬೋಧ್ದಾಭಿಧಕುರಾರದಲಿ ॥ ೫೬ ॥
॥ ೫೫ ॥

ಎನ್ನ ಬುದ್ಧಿಯೆನಿಪ್ಪ ವೈದ್ಯಿಯ । ಹರಿಯೆ ಪರಮಾನಂದಕೆರೆಯೊಳ-।
ತನ್ನ ಕಂಕುಳದೊಳಗೆ ಹಾಕುತ । ಗಿರುವ ಕಮಲವೆ ನಿನ್ನ ನೇತ್ರವು ।
ಮುನ್ನಡೆದನು ದುರಾಗ್ರಹಾಹ್ವಯನೈ ಹಿರಣ್ಯಾಕ್ಷ ॥ ಬರಲು ನಿನ್ನ ಕೃಪಾಕಟಾಕ್ಷವು ಮಾನವಗೆ ಜಗದಿ ॥
ಜನ್ಮ ಮೋಹವೆನಿಪ್ಪ ಕಡಲಲಿ । ಇರುವುದವನಿಗೆ ಮೋಹವೆಂದರೆ ।
ಥಣ್ಣಗದ ಒಚ್ಚಿಡಲು ಕೇಳೈ । ಮರುಳನೆನುತಲಿ ಕರೆವರಲ್ಲವೆ ।
ನಿನ್ನ ಬೋಧದ ಬಲದಿ ರಕ್ಷಣೆಯಾಯ್ತು ಬುದ್ಧಿಗಲಾ ॥೫೪॥ ಹರಿವನೇ ವಡವಾನಳನು ಮೃಗಜಲದ ವೃಷ್ಟಿಯಲಿ ॥ ೫೭ ॥

ಪರಿಯ ನೋಡಲು ನೀ ವರಾಹನು । ಹರಿಯೆ ನಿನ್ನ ಕೃಪಾಭವನದೊಳ-।
ತರುತಲೆನ್ನೀ ಬುದ್ಧಿವೃಧ್ಯಿಯ- । ಗಿರುವೆ ನಾನಾಗರ್ಭಗೃಹದಲಿ ।
ನೆರಡನೆಯ ಲೀಲೆಯನು ತೋರಿದಿ ಬುದ್ಧಿರಕ್ಷಣೆಯ ॥ ಬರುವ್ರದೆನಗಖಿಭವವ ವೂರ್ಣಬ್ರಹ್ಮವಿದ್ಯೆಯಲಿ ॥
ಧರೆಯೊಳದ ಸರ್ವವನು ವರ್ಣಿಸ- । ಹರಣವಾಯ್ತೆನ್ನ ಮೋಹವೆನ್ನದು ।
ಲರದು ಶಕ್ತಿಯು ದೀನನರನಿಗೆ । ಬರಿದೆ ನಾನಾವೆನು ಮುಖಸ್ತುತಿ- ।
ಹರಿಯೆ ಪಂಚಪ್ರಾಣಗಳ ನೀನೆನಗೆ ಕೊಟ್ಟಿಯಲಾ ॥ ೫೫ ॥ ಯೊರುವೆ ನಿನ್ನಯ ಚರಣಸಾಕ್ಷಿಕವಾಯಿತುದ್ಧಾರ ॥ ೫೮ ॥

ಭವಾಪ್ಯಯೌ ಹಿ ಭೂತಾನಾಂ ಶ್ರುತೌ ವಿಸ್ತರಶೋ ಮಯಾ ।
ತ್ವತ್ತಃ ಕಮಲಪತ್ರಾಕ್ಷ ಮಾಹಾತ್ಮ್ಯಮಪಿ ಚಾವ್ಯಯಮ್ ॥ ೨ ॥

ಸರಸಿಜಾಕ್ಷನೆ ಕೋಟಿಭಾಸ್ಕರ । ವೇದಗಳಿಗುತ್ಪತ್ತಿ ನೀನೇ ।
ಕಿರಣತೇಜೋಧರ ಮಹೇಶನೆ । ಬೋಧ ಧರ್ಮಾದ್ಯಖಿಳ ಶಾಸ್ತ್ರದ ।
ಯರಿತೆ ನಿನ್ನಯ ಬಾಯಿಯಿಂದೀ ತತ್ತ್ವವಿಸ್ತರವ ॥ ಚೋದ್ಯ ರತ್ನದ ಖಾನಿ ನೀನೇ ನಿಜದಿ ಪರಮಾತ್ಮ ॥
ಹರಿಯೆ ನೀವಿಸ್ತರಿಸಿ ಹೇಳಿದಿ । ವೇದಗಳು ಯಶ ಹೊಂದಿದುವು ಕವ ।
ಪರಿಸರಿಯ ಮಾಯಾಪ್ರಸಂಚವ । ಪಾದದಾಶ್ರಯ ಸಿಕ್ಕಿತೆಂದೇ ।
ಮರಣಜನನದ ಚಕ್ರಸೇಮಿಕ್ರಮವ ನಿಜವಾಗಿ ॥ ೫೯ ॥ ಹೇ ದಯಾನಿಧಿ ನಿನ್ನ ಮಹಿಮೆಯಗಾಧವಿರುನ್ನದಲಾ ॥ ೬೧ ॥

ಬತ್ತಲೆಯ ಮಾಡುತ್ತ ಮಾಯೆಯ । ಪರಿಪರಿಯ ಮಾರ್ಗಕ್ರಮಣದಲಿ ।
ಚಿತ್ತರಿಸಿ ಪರಮಾತ್ಮರೂಪನ । ಬರುವರೊಂದೇ ತತ್ತ್ವವೆಲ್ಲರು ।
ಚಿತ್ತವಿಸಿದೈ ಮೂಲಬೀಜವನೆನಗೆ ಶ್ರೀಹರಿಯೆ ॥ ಹರಿಯೆ ನೀನಾಜ್ಞೇಯತತ್ತ್ವವಗಮ್ಯ ಪರತತ್ತ್ವ ॥
ಸ್ವಸ್ಥದಿಂದೀ ಮೂಲಬೀಜದ । ಇರುವಿ ನೀನಾತ್ಮಾನುಭವನಿಧಿ ।
ಕೀರ್ತಿಯೆಂಬುವ ಹೊದಿಕೆ ಮೈಯಲಿ । ಕರುಣದಿಂದದನೆನಗೆ ತೋರಿಸಿ ।
ಸೆತ್ತಿದರೆ ವೇದಗಳಿಗಾಯಿತು ವಸ್ತ್ರಭೂಷಣವು ॥ ೬೦ ॥ ಧರೆಯೊಳೆನ್ನ ಕೃತಾರ್ಥ ಮಾಡಿದಿ ಹೇ ದಯಾನಿಧಿಯೆ ॥ ೬೨ ॥

ಹರಿಯಲಾ ಪೋಡಗಳು ಗಗನದಿ ।
ತರಣಿಬಿಂಬವ ಗೋಚರಿಸುವುದು ।
ಸರಿಸೆ ಕೈಯಿಂ ಶ್ವೇತವ ತೋರುವುದು ಶುದ್ಧಜಲ ॥
ಧರೆಯೊಳಾ ಚಂದನತರುವ ಸು- ।
ತ್ತಿರುವ ಸರ್ಪವು ಹೋಗದಲೆ ಯಾ- ।
ತರುವನಾಲಿಂಗಿಸುವರಾರೈ ಮರುಳರೈ ತಿಳಿಯೆ ॥ ೬೩ ॥

ವಿತ್ತಗಳ ನಿಕ್ಷೇಪವಿದ್ದರೆ ।
ಹತ್ತಿಲಿಹುದು ಪಿಶಾಚವದನೇ ।
ಕೆತ್ತಿ ತೆಗೆಯದೆ ವಿತ್ತ ಕೈಸೇರುವುದೆ ಶ್ರೀಕೃಷ್ಣ ॥
ಇತ್ತು ಮಾಯೆಯು ಸುತ್ತಮುತ್ತಲು ।
ಕೆತ್ತಿ ನೀನಾಮಾಯಿಯನು ಯೆನ- ।
ಗಿತ್ತಿ ಜ್ಞಾನವ ಬುದ್ಧಿಯಾಂತ್ಯೈ ಬ್ರಹ್ಮರೂಪವದು ॥ ೬೪ ॥

ಅರಿತೆ ನಿನ್ನೀ ಪರಿಯಗಾಧದ ।
ಪರಮ ಶಕ್ತಿಯ ನೋಡಿ ಕಣ್ಣಿಲಿ ।
ಭರವಸವು ಸಂಪೂರ್ಣವಾಯಿತು ನಿನ್ನ ಶಕ್ತಿಯಲಿ ॥
ಬರುವುದೆನಗಿನ್ನೊಂದು ಬಯಕೆಯು ।
ಹರಿಯೆ ನಿಸಗಾಂ ಕೇಳಿ ಬಿಡುವೆನು ।
ಧರೆಯೊಳನ್ಯರ ಕಾಣದಿದ ಪೂರಯಿಸುತಿಹ ಭಟರ ॥ ೬೫ ॥

ಬರಿದೆ ಲಜ್ಜಾಮೌನ ತಾಳುತ ।
ಹರಿಯೆ ನಿನ್ನೊಳು ಕೇಳದಿದ್ದರೆ ।
ಬರುವುದೇ ಕೈಗೂಡಿ ಯೆನ್ನ ಮನೋರಥವು ಕೃಷ್ಣ ॥
ಶರಧಿಯೊಳಗಿಹ ಜಲಚರಂಗಳು ।
ಬರಿದೆ ಶರಧಿಗೆ ತ್ರಾಸನೇತಕೆ ।
ಹೊರಗೆ ಹೋಗುವೆವೆಂದು ನಿರ್ಧಾರವನು ಮಾಡಿದರೆ ॥ ೬೬ ॥

ಇರುವುದೇನವುಗಳಿಗೆ ಬದುಕುವ ।
ಯೆರಡನೆಯ ಸಾಧನವು ನೋಡಾ ।
ಶರಧಿಗೆನೆ ತಾವ್ ಶರಣಹೊಗ ಬೇಕಲ್ಲವೇ ನಿಜದಿ ॥
ಅರಿಯಲಾ ಪರಿ ಬಾಲ ಮೌನವ ।
ಧರಿಸಿ ತಾಯೊಳು ಬೇಡದಿದ್ದರೆ ।
ಯಿರುವುದೇ ಗತಿ ಬೇರೆ ಸ್ತನಪಾನಕ್ಕೆ ಬಾಲಕಗೆ ॥ ೬೭ ॥

ಕೇಳ ಬೇಕೇ ಬಯಕೆ ಯೆನ್ನಯ ।
ತಾಳದಲೆ ಸಂಕೋಚ ಮನದೊಳು ।
ಹೇಳುವನಿತರೊಳಿದನು ಶ್ರೀಹರಿ ಬಹುಕುತೂಹಲದಿ ॥
ಪೇಳಿದನು ಪಾರ್ಥನಿಗೆ ಪ್ರೇಮದಿ ।
ಹೇಳು ಹೇಳೈ ನಿನ್ನ ಬಯಕೆಯು ।
ತಾಳದಿರು ಸಂಕೋಚ ನಿನ್ನಯ ಬಯಕೆ ಯೇನಿಹುದು ॥ ೬೮ ॥

ಏವಮೇತದ್ಯಥಾತ್ಥ ತ್ವಮಾತ್ಮಾನಂ ಪರಮೇಶ್ವರ ।
ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ ಪುರುಷೋತ್ತಮ ॥ ೩ ॥

ನರನು ಮಗುಳೆಂತೆಂದ ಕೃಷ್ಣಗೆ ।
ಹರಿಯೆ ಪುರುಷೋತ್ತಮನೆ ನೀನೆನ- ।
ಗರುಹಿದಿಯಲಾ ಕೇಳಿ ನಿನ್ನನು ಶಾಂತಿ ಯೆನಗಾಯ್ತು ॥
ಹರಿಯೆ ಯಿಚ್ಛಾಮಾತ್ರದಿಂದಲೆ ।
ಸಿರಚಿಸುವೆ ಸಂಹರಿಸುವೆನು ತಾ- ।
ನರನೆ ನನ್ನ ಸಹಸ್ರನಾಮದ । ಚಿತ್ತಶುದ್ಧಿಕೆಯಿಂದ ನೀ ಸು ।
ವರಮ ನ್ಕೆಕೆ ತಯಾರಿಸಿಟ್ಟಿಹೆ । ರ್ವತ್ರವೆನಗರ್ಪಿಸುವುದೆಲ್ಲವ ।
ಧರೆಯೊಳಾನಿಹೆ ತಾರಕನು ಸಂಸಾರಶರಧಿಯಲಿ ॥ ೬೦ ॥ ನಿತ್ಯನಿಶ್ಚಲಪದವ ಪಡೆಯುವಿ ಯೆನ್ನ ಹತ್ತಿರದಿ ॥ ೬೫ ॥

ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥ ೮ ॥

ಮನವ ಬುದ್ಧಿಯನೆರಡ ಪಾರ್ಥನೆ ।
ನನಗೆ ಪ್ರೇಮದೊಳರ್ಪಿಸುತ ನೀ ।
ವಿನಯದಿಂದಿವುಗಳನು ಸಂಸ್ಥಿತ ಮಾಡು ನನ್ನಲ್ಲಿ ॥
ಮನವು ಬುದ್ಧಿ ಯಿನೆರಡು ನನ್ನಲಿ ।
ನನುಮತದಿ ವಾಸಿಸೆ ನಿರಂತರ ।
ಮನೆಯೆ ನನ್ನೊಳಗಾಯ್ತು ನಿನಗೇನೆಂದು ವರ್ಣಿಸಲಿ
॥ ೬೬ ॥

ಮನೆಯೆ ನನ್ನೊಳಗಾದನಂತರ ।
ನಿನಗೆ ಯೇನುಳಿದಿಹುದೆ ಭೇದವು ।
ನನಗೆ ನಿನಗೆಂಬಿರುವ ಭಾವವೆ ಸುಟ್ಟು ಹೋಗುವುದು ॥
ಮಿನುಗುತಿಹ ಸೂರ್ಯಪ್ರಕಾಶವು ।
ಕ್ಷಣದಿ ಪೋಪುದು ಜಂಬ ಭೋಗಲು ।
ಮನೆಯು ದೀಪವು ನೊಂದಿದಾಕ್ಷಣ ತೇಜ ವುಳಿಯುವುದೆ ॥೬೭॥

ಹೊರಗೆ ಹೋಗಲು ಪ್ರಾಣವಾಕ್ಷಣ ।
ಚರಿಸುತಿಹುವೇ ಯಿಂದ್ರಿಯಂಗಳು ।
ಯೆರಡು ಮನಬುದ್ಧಿಗಳು ಹೋಗುವುವೆಲ್ಲಿ ತಾನಲ್ಲಿ ॥
ಬರುವುದಲ್ಲಿಯಹಂತೆಯೇ ಮೇ- ।
ಣಿರದದಕೆ ಸ್ವಾತಂತ್ರ್ಯ ಕೇಳೈ ।
ಕಿರಣವಿಹುದೆ ಸ್ವತಂತ್ರ ತರಣಿಯ ಕೂಡೆ ಪೋಪುದಲಾ ॥ ೬೮ ॥

ನರನೆ ಯೆನ್ನ ಸ್ವರೂಪಕರ್ಪಿಸು ।
ಯೆರಡ ಬುದ್ಧಿಯ ಮನವ ಸಂತತ ।
ಒರುವುದೆನ್ನ ಸ್ವರೂಪ ನಿನಗೆ ವಿಶೇಷವೇನಿಹುದು ॥
ಅರುಹಿದೆನು ನಿನಗಾನು ಗುಹ್ಯವ ।
ನರಿತುಕೋ ದಿಟದಿಟವೆನುತ್ತಲಿ ।
ಯರಿಯ ಬಾರದು ಮಿಥ್ಯವೆನುತಲಿ ಸತ್ಯ ನಿನ್ನಾಣೆ ॥ ೬೯ ॥

ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಮ್ ।
ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ ॥ ೯ ॥

ಎರಡು ಧೀಮನಸುಗಳನರ್ಪಿಸು ।
ವರೆ ನಿನಗೆ ದುಃಸಾಧ್ಯವಾದರೆ ।
ನರನೆ ನಿನಗಭ್ಯಾಸವೆಂಬುವ ಯುಕ್ತಿಯನು ಕೇಳ್ವೆ ॥
ಬರುವುದೈಯಭ್ಯಾಸಯೋಗದಿ ।
ಪರಮಯೋಗ್ಯತೆ ಯೊರೆವೆ ನಿನಗಾಂ ।
ನರನೆ ಕೇಳಭ್ಯಾಸಯೋಗವ ಮಾಳ್ಪುದೆಂತೆನುತ ॥ ೭೦ ॥

ಚಿತ್ತವೀಪರಿ ಗಳಿಗೆಗಳಿಗೆಗೆ ।
ನಿತ್ತೆನಲು ನೋಡೆನ್ನೊಳೀಪರಿ ।
ವಿಸ್ತರಿಪುದಂತದಲಿ ಯೆನ್ನ ಸ್ವರೂಪವಾಗುವುದು ॥
ವಿಸ್ತರಿಸಿಯಭ್ಯಾಸಯೋಗದ ।
ತತ್ತ್ವ ನಿನಗಾನರುಹಿದೆನು ಕೇಳ್ ।
ಪ್ರಾಪ್ತವಾಗುವುದೆಲ್ಲ ಮನಸಿನಭೀಷ್ಟವೆನ್ನಿಂದ ॥ ೭೧ ॥

ಒರುವುವೆಂಟು ಪ್ರಹರ ದಿವಸದ ।
ಲರೆಗಳಿಗೆ ದಿನದಿನದೊಳಿನಗಿವ ।
ನೆರಡನರ್ಪಿಸು ಬುದ್ಧಿಮನವನ್ನೇಕಭಾವದಲಿ ॥
ನರನೆ ಯೆನ್ನ ಸಮಾಗಮದ ಸುಖ ।
ವರೆಗಳಿಗೆ ಬಂದರೆಯು ಅಷ್ಟೇ ।
ಬರುವುದೈ ನಿನಗರುಚಿ ವಿಷಯದ ಸುಖದಿ ನಿಜನಾಗಿ ॥೭೨॥

ನರನೆ ಕೇಳಭ್ಯಾಸಯೋಗದಿ ।
ನರನು ಸಂತರಿಪಂತರಾಳದಿ ।
ನರುಪ ವ್ಯಾಘ್ರಾದಿಗಳ ಕೈವಶ ಮಾಳ್ಪರರಿಗಳನು ॥
ಶರಧಿಯಲಿ ಕಾಲಿನಲಿ ನಡೆವರು ।
ಪರಿಪರಿಯ ವಿಷ ನುಂಗಿ ತೇಗುವ ।
ರರರೆ ಸಾಧ್ಯವು ಸರ್ವವಭ್ಯಾಸಕ್ಕೆ ಧರಣಿಯಲಿ ॥ ೭೪ ॥

ಬರಲು ಶರದೃತು ವದುವೆ ನದಿಗಳ ।
ಹರಿವ ನೀರದು ಕಮ್ಮಿಯಾಗುವ ।
ಪರಿಯಲ್ಲೆ ಸಂಸಾರಸುಖ ಕ್ಷೀಣಿಸುವುದೈ ಕ್ರಮದಿ ॥
ನರನೆ ಚಂದ್ರಮ ವರ್ಣಮೆಯನಂ ।
ತರಕೆ ಕ್ಷೀಣತೆ ಹೊಂದೆ ಕೊನೆಗದು ।
ಬರುವುದಲ್ಲವೆ ಲೋಪವದರಂತಾಗುವುದು ನಿನಗೆ ॥ ೭೫ ॥

ನರನೆ ಕೇಳಭ್ಯಾಸಯೋಗಕೆ ।
ಯಿರುವುದೇನ್ಯೆ ಕಠಿಣ ಜಗದಲಿ ।
ನರನೆ ನಿನಗದು ಸಾಧ್ಯವಪ್ಪುದು ಯತ್ನ ಮಾಡಿದರೆ ॥
ಬರುಬರುತ ನೀನೆನ್ನ ಸೇರುವೆ ।
ಭರದಿ ಸುಖಸಾಮ್ರಾಜ್ಯ ಹೊಂದುವೆ ।
ಯಿರುವುದಿದು ಸುಖಕರವು ಹಾಯಿಯು ಯೆನ್ನ ಸೇರುವರೆ ॥ ೭೫ ॥

ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ ।
ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥ ೧೦ ॥

ನರನೆ ನಿನಗಭ್ಯಾಸಯೋಗಾ- ।
ಚರಣ ಸಾಧ್ಯವದಲ್ಲವಾದರೆ ।
ಚರಿಸು ನಿನ್ನಯ ನಿತ್ಯಕರ್ಮವನೇಕಭಾವದಲಿ ॥
ಮರುಗಿಸಲು ಬೇಡಿಂದ್ರಿಯಂಗಳ ।
ಕರಗಿಸಲು ಬೇಡಕಟ ಭೋಗವ- ।
ನುರುಶರದ ಜಾತಿಯಭಿಮಾನವ ಬಿಟ್ಟು ಬಿಡ ಬೇಡ ॥ ೩೩ ॥

ನಿರುತ ಕುಲಧರ್ಮಾಚರಣತ- ।
ತ್ಪರತೆಯನು ಧರಿಸುತ್ತ ಸುಖದಿಂ- ।
ದಿರು ಯಥಾಸ್ಥಿತ ಮಾಡ ಬೇಡ ನಿಷಿದ್ಧಕರ್ಮಗಳ ॥
ನರನೆ ತನುವಾಙ್ಮನಸೇಂದ್ರಿಯ ।
ವಿರಚಿಸುವ ಕರ್ಮಗಳ ತಾನೇ ।
ವಿರಚಿಸುವೆನೆಂಬೀ ಯಹಂಕೃತಿ ಬಿಟ್ಟು ಬಿಡ ಬೇಕು ॥ ೩೪ ॥

ಇರುವನೈ ಪರಮಾತ್ಮ ವಿಶ್ವದ ।
ಮೆರೆವ ಪಾಲಕ ಚಾಲಕನು ತಾ- ।
ನರಿವನಾರೀ ಕರ್ಮ ಮಾಳ್ಪನು ಮಾಡದಿಹನೆಂದು ॥
ಕೊರತೆಕುಂದುಗಳೆಣಿಸದಿರು ನಿನ- ।
ಗಿರುವ ಬಂದಿಹ ಕರ್ಮಗಳನಾ- ।
ಚರಿಸು ಮನದಲಿ ಖೇದಗೊಳ್ಳದೆ ಹೆಚ್ಚುಕುಂದಿಂಗೆ ॥ ೩೫ ॥

ಪೂರ್ವಸಂಸ್ಕಾರಪ್ರಕಾರದಿ ।
ಸೇವಿಸುವುದೀ ಕರ್ಮಗಳ ನೀ- ।
ನಾವ ತೆರದಲಿ ಪೂರ್ವಸಂಸ್ಕೃತಿ ಕರ್ಮವಾತೆರದಿ ॥

ಭಾವವೆರಡನೆ ಧರಿಸದಲೆ ನೀ ।
ಜೀವದಲಿ ನಿಶ್ಚಯವ ಮಾಡೈ ।
ಯಾವುದೇ ಕರ್ತೃತ್ವದಲಿಂಬಿಮಾನ ಧರಿಸದಿರು ॥ ೩೬ ॥

ಮಾಲಿ ತೋಟದಿ ನೀರ ತಿದ್ದುತ ।
ಕಾಲಿವೆಗಳಲಿ ಬಿಟ್ಟ ಪರಿಯಲಿ ।
ಮೇಳದಲಿ ಹರಿಯುವುದು ನೀರು ನಿವಾತದಲಿ ತಿಳಿಯೆ ॥
ಕೇಳು ಪಾರ್ಥನೆ ನೀರಿನಂದದಿ ।
ತಾಳು ನಿರಹಂಕೃತಿತೆ ಬುದ್ಧಿಯು ।
ತಾಳಲಾರದು ತಾಂ ಪ್ರವೃತ್ತಿನಿವೃತ್ತಿಗಳ ಭಾರ ॥ ೩೭ ॥

ಚಿತ್ತವೃತ್ತಿಯನೆಸ್ಸೊಳಿರಿಸಾ- ।
ಸಕ್ತಿಯನು ನೀ ಬಿಡುವುದುಚಿತವು ।
ಸ್ವಸ್ಥಚಿತ್ತದಲದನು ಸರ್ವವನರ್ಪಿಸೈ ಯೆನಗೆ ॥
ರಥ್ಯೆ ಡೊಂಕಾಗಿರಲು ರಥವದು ।
ಸ್ವಸ್ಥ ಚಲಿಪುದೆ ಜೋಲುತಿಹುದೈ ।
ಚಿತ್ತವೃತ್ತಿಯ ಬಿಟ್ಟು ಕೃಷ್ಣಾರ್ಪಣವ ಮಾಡೆಲ್ಲ ॥ ೩೮ ॥

ನರನೆ ನೀನಾಚರಿಪ ಕರ್ಮವ ।
ನಿರುತವೆನಗರ್ಪಿಸುತ ಪೋಗೈ ।
ಧರಿಸಬೇಡೈ ಶಂಕೆ ಮನದಲಿ ಹೆಚ್ಚುಕುಂದುಗಳ ॥
ಧರಿಸಬೇಕೈ ಯೇಕನಿಷ್ಠೆಯ ।
ಚರಿಸಲೀ ಪರಿ ಕರ್ಮಮಾರ್ಗದಿ ।
ಬರುನಿ ಮತ್ಪದಕಾಗಿ ಪಾರ್ಥನೆ ಮೃತಿಯನಂತರಕೆ ॥ ೩೯ ॥

ಅಥೈತದಪ್ಯಸಮರ್ಥೋಽಸಿ ಕರ್ತುಂ ಮದ್ಯೋಗಮಾಶ್ರಿತಃ ।
ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್ ॥ ೧೧ ॥

ನರನೆ ಕರ್ಮಾರ್ಪಣೆಯು ದುಷ್ಕರ- ।
ವಿರಲು ಕರ್ಮಾರಂಭದಂತದಿ ।
ಬರದಿರಲು ಭಾವನೆಯು ಕೃಷ್ಣಾರ್ಪಣವ ಮಾಡುವರೆ ॥
ಇರದಿರಲು ಸ್ವಾಧೀನಬುದ್ಧಿಯು ।
ಬರಲು ಪರಿಪರಿ ವಿಘ್ನ ಮಾರ್ಗದಿ ।
ಬೆರೆವೆ ನಿನಗಾನೊಂದು ಯುಕ್ತಿಯ ಸುಲಭಸಾಧನವ ॥ ೪೦ ॥

ಮಾಡು ಕೈವಶ ಬುದ್ಧಿಯೆಂಬುವ ।
ಕಾಡುಕುದುರೆಯ ಮೊಟ್ಟಮೊದಲಿಗೆ ।
ಮಾಡು ತದನಂತರದಲಿಂದ್ರಿಯನಿಗ್ರಹಾಭ್ಯಾಸ ॥
ರೂಢಿಯಲಿ ನೀ ಸರ್ವಕಾಲದಿ ।
ಮಾಡುತಿಹ ಕರ್ಮಂಗಳಲ್ಲಿಡ- ।
ಬೇಡಫಲದಾಶೆಯನು ಕೆಡಿಸುವುದೆಲ್ಲ ಫಲದಾಶೆ ॥ ೪೧ ॥

ಮರವು ಬಳ್ಳಿಯು ಫಲಭರಿತವಾ- । ಅರಿಯಲೀ ವರ್ಗವು ಧನಂಜಯ ।
ದರು ಕಣಾ ತಾವ್ ಫಲವ ತಿನುವುದೆ । ಪರಮಸುಲಭವು ಶ್ರೇಷ್ಠನಿಹುದೈ ।
ತೊರೆದು ಬಿಡುವುವು ನೋಡು ನೀನೀ ಗುಣವ ಕೊಳ್ಳುವುದು ॥ ನರನೆ ತಿಳಿಯಲು ಯೋಗವಿದು ಸಾಮಾನ್ಯನೇನಿಹುದು ॥ ೨೮ ॥
ಧರಿಸದಲೆ ಮಾನಸದಲೆನ್ನನು ।
ಚರಿಸದಲೆ ಕರ್ಮಾರ್ಪಣವ ನೀ । ಬಿಡುರು ಪೊಂದೇ ಸಾರಿ ಫಲಿಸುವು- ।
ಬರಿದೆ ನಿಷ್ಫಲವಹುದು ಕರ್ಮಾಚರಣವೀ ತೆರದ ॥ ೨೫ ॥ ದದು ಕಣಾ ನಿನಗರವಿರುವುದೈ ।
ಯದರ ಪರಿಯಲಿ ಜನ್ಮನಿಹುದೀ ನರಗೆ ಭೂಮಿಯಲಿ ॥

ಮಳೆಯು ಭೋರ್ಗಲ್ಲಿಸಲಿ ಸುರಿಯಲು । ಸದೆ ಬಿಡದು ಕರ್ಮೇಚ್ಛೆ ಕರ್ಮವ ।
ಕೊಳುವುದೇನದ ಮಳೆಯುನೊಳಗದು । ನೊದಗಿ ಮಾಡಲು ಜನ್ಮಮರಣದ ।
ಬೆಳೆಯುವುದೆ ಗಿಡ ಬೆಂಕಿಯಲಿ ಬಿತ್ತಿದರೆ ಬೀಜವನು ॥ ಕದಡುಬಲೆಯಿಂ ಮೋಕ್ಷಸಡೆಯುವಿ ಶಾಸ್ತ್ರಸಿದ್ಧವಿದು ॥ ೨೯ ॥
ಇಳೆಯೊಳಗೆ ನೀ ಮಾಳ್ಪ ಕರ್ಮಂ ।
ಗಳು ಸದಾ ನಿಷ್ಫಲತೆ ಹೊಂದಲು । ನರನೆ ಕೇಳಭ್ಯಾಸಂಯೋಗದಿ ।
ತಿಳಿಯು ನೀನಾಕರ್ಮವೆಲ್ಲವು ಸ್ವಪ್ನದಂದದಲಿ ॥ ೨೬ ॥ ಬರುವುದೈ ಸುಜ್ಞಾನದುದಯವು ।
ಬರಲು ಜ್ಞಾನೋದಯವು ಕೈವಶವಿರುವುದೈ ಧ್ಯಾನ ॥

ತಂದೆ ನಿಜ ಬಾಲೆಯನು ಬಹಳಾ- । ಬರಲು ಧ್ಯಾನವು ಸರ್ವಭಾವಗ- ।
ನಂದದಿಂದಲಿ ಸಾಕಿ ಬೆಳೆಸುವ । ಕರದೆ ಧ್ಯಾನವನಪ್ಪಿಕೊಳುವವು ।
ಮುಂದೆ ಯವಳುಪಭೋಗದಿಚ್ಛೆಯ ಧರಿಸುವನೆ ಮನದಿ ॥ ಮರಣ ಹೊಂದುವುವೆಲ್ಲ ಕರ್ಮಗಳಾಗ ನೋಡಿದಿಯಾ ॥ ೩೦ ॥
ಚಂದದಿಂದಾ ಪರಿಯೊಳೈ ಫಲ- ।
ಕಂದು ನೀನಿಚ್ಛಿಸದೆ ವರ್ತಿಸು । ಮರಣ ಬರಲಾ ಕರ್ಮಕೆಲ್ಲಕೆ ।
ಮುಂದೆ ನಿನಗದರಿಂದ ಬರುವುದು ಸಕಲಸಿದ್ಧಿಯಲಾ ॥೨೭॥ ಮರಣ ಹೊಂದುವುದ್ಕೆ ಫಲೇಚ್ಛೆಯು ।
ಬರುವುದಾಗಲೆ ಶಾಂತಿ ಕೈವಶ ದಾಸಿಯಂದದಲಿ ॥

ನರನೆ ಬೆಂಕಿಯ ಜ್ವಾಲೆ ಗಗನವಿ । ನರನೆ ಕೇಳದರಿಂದ ಶಾಂತಿಯ ।
ಒರಿದೆ ನಿಷ್ಫಲವಾಗಿ ಪೋಗುವ । ದೊರಕಿಸುವ ಬಹುಸುಲಭಯುಕ್ತಿಯ- ।
ತೆರದಿ ನಿನ್ನಯ ಕರ್ಮವೆಲ್ಲವು ಫಲಿಸ ಬಾರದಲಾ ॥ ನರುಹಿದೆನು ಕಲಿವಾರ್ಧ ನೀನಭ್ಯಾಸ ಮಾಡೆಂದು ॥ ೩೧ ॥

ಶ್ರೇಯೋ ಹಿ ಜ್ಞಾನಮಭ್ಯಾಸಾಜ್ಜ್ಞಾನಾದ್ಧ್ಯಾನಂ ವಿಶಿಷ್ಯತೇ ।
ಧ್ಯಾನಾತ್ಕರ್ಮಫಲತ್ಯಾಗಸ್ತ್ಯಾಗಾಚ್ಛಾಂತಿರನಂತರಮ್ ॥ ೧೨ ॥

ನರನೆ ಕೇಳಭ್ಯಾಸಕಿಂತಲು । ಅಂತು ನಿನಗಾಂ ಪಾರ್ಥ ಪೇಳ್ದೆನು ।
ಯಿರುವುದೈ ಬಹು ಲೇಸು ಜ್ಞಾನವು । ಸಂತಸದಿ ಮಾರ್ಗಗಳನೆಲ್ಲಮ- ।
ಯಿರುವುದಲ್ಲವೆ ಧ್ಯಾನ ಜ್ಞಾನಕ್ಕಿಂತ ಲೇಸಾಗಿ ॥ ನೆಂತು ಬ್ರಹ್ಮಪ್ರಾಪ್ತಿಯಹುದೈ ನೇಮದಿಂದೆನುತ ॥
ಧರೆಯೊಳುತ್ತಮ ಮಾರ್ಗವೆಂದರೆ । ಅಂತು ನೀನಾಚರಿಸೆ ಬಹುದೈ ।
ತೊರೆವುದೈ ಫಲದಿಚ್ಛೆ ಕರ್ಮದಿ । ಶಾಂತಿನಗರದ ಕಾಂತಿ ಕೇಳ್ ।
ಬರುವುದದರಿಂ ಬ್ರಹ್ಮಪ್ರಾಪ್ತಿಯ ಸುಖವು ನಿರುಪಮವು ॥೩೨॥ ಕುಂತಿಪುತ್ರನೆಮನದಿ ಗಂಟಿಕ್ಕಿದನು ಪೇಳೆದುದ ॥ ೩೩ ॥

ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।
ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ ॥ ೧೩ ॥

ಭೂತಮಾತ್ರದಿ ದ್ವೇಶ ಮಾಡದೆ ।
ಭೂತಳದಿ ಸಮದೃಷ್ಟಿ ಭೂತ- ।
ವ್ರಾತದಲಿ ಮೇಣ್ ಸ್ವೀಯ ಪರ ಭೇದವನು ತಾಳದಲೆ ॥
ಮೈತ್ರ್ಯನೀಪರಿ ವೈರವೆಂಬುವ ।
ಮಾತು ಸಲ್ಲದು ಭೂಮಿ ಸುಜನ- ।
ವ್ರಾತವನು ಧರಿಸುತಲಿ ಕುಜನ ತ್ಯಜಿಪುದೇ ವಾರ್ಥ ॥೪೪॥

ಪ್ರಾಣಿಮಾತ್ರಗಳಲ್ಲಿ ಸರ್ವಸ- ।
ಮಾನಮೈತ್ರಿಯು ದ್ವೇಷವಿಲ್ಲದೆ ।
ಕಾಣುವುದು ಹೃದಯದಲಿ ಕರುಣಾರ್ದ್ರತೆಯ ಗಣಿ ನಿತ್ಯ ॥
ನಾನುನನ್ನದುಭಾವದಿಂದ ವಿ- ।
ಹೀನವಂತಃಕರಣವಾಗಲು ।
ಹಾನಿಯಪ್ಪುದು ದುಃಖಸುಖಗಳ ಭಾವವವನಲ್ಲಿ ॥ ೯೬ ॥

ಕ್ಷೋಣಿಪತಿಯಲಿ ವಾಸಿಸುವೆ ನಾ ।
ದೀನರಲಿ ವಾಸಿಸೆನು ಯೆನುತಲಿ ।
ಪ್ರಾಣವೆನುವುದೆ ಭೇದವಿಲ್ಲದೆ ವಾಸವೆಲ್ಲರಲಿ ॥
ಧೇನುವಿಲಿ ಹುಲಿಯಲ್ಲಿ ಸಲಿಲ ಸ- ।
ಮಾನತನವನು ತೋರದಿಹುದೇ ।
ಹಾನಿ ಮಾಳ್ಪುದೆ ಹುಲಿಯ ಸಾಕುವುದೇನು ಧೇನುವನು ॥೪೫॥

ಪೊಡವಿಯಂದದಿ ಕ್ಷಮೆಯ ಮೂರ್ತಿಯು ।
ತೊಡೆಯು ಮೇಲಾಡುವುದು ಸಂತತ ।
ಕೊಡಲಿ ನಾನೇನುಪಮೆಯನು ಭಕ್ತರಿಗೆ ಕಲಿವಾರ್ಥ ॥
ಹಿಡಿದು ಕೈಯಲಿ ಕೊಡಲಿ ಮರವನು ।
ಕಡಿಯಲಿಕೆ ಬಂದಿರುವ ಮನುಜಗೆ ।
ಕೊಡದೆ ನೆರಳನು ಗಿಡವು ಧರಿಪುದೆ ದ್ವೇಷಭಾವವನು ॥ ೯೭ ॥

ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।
ಮಯ್ಯರ್ಪಿತಮನೋಬುದ್ಧಿರ್ಯೋ ಮೇ ಭಕ್ತಃ ಸ ಮೇ ಪ್ರಿಯಃ ॥ ೧೪ ॥

ಮಳೆಯು ಜೀಳದೆ ಸರ್ವಕಾಲದಿ ।
ತುಳುಕುತಿದೆ ಜಲದಿಂದ ಸಾಗರ ।
ತಳೆವನೀಪರಿ ಸಂತಸವನುಪಚಾರವಿಲ್ಲದಲೆ ॥
ತಳೆವನ್ನೆ ನಿಜ ಚಿತ್ತದಲಿ ನಿ- ।
ಶ್ಚಲತೆಯನು ಕಟ್ಟಾಜ್ಞೆಯಿಂದಲಿ ।
ಬಲವು ಬರುವುದು ನಿಶ್ಚಯಕೆ ಮೇಣಿವರ ಬಲದಿಂದ ॥೪೮॥

ವರ್ಣಿಸಲಿ ನಾನೆಂತು ಯೊಪರಿ ।
ಯೆನ್ನ ಪ್ರೇಮದ ಪರಮಭಕ್ತನ- ।
ನೆನ್ನ ವಲ್ಲಭೆಯವನು ಕಾಂತನು ನಾನು ಮೇಣವಗೆ ॥
ಬಣ್ಣಿಸಲು ನಾನೆಂತು ನನ್ನಯ ।
ವ್ಯಾಣಕಿಂತಲು ಪ್ರೇಮನವನಿಹ ।
ವರ್ಣನೆಗೆ ಸರಿಯಿಲ್ಲ ವೃಷಮಾತೀತವಿದುನಿಹುದು ॥ ೧೦೧ ॥

ಜೀವಪರಮಾತ್ಮರುಗಳಿಬ್ಬರು ।
ಹೇವವಿಲ್ಲದೆಯೊಂದೆ ಹೃದಯವಿದು ।
ಭಾವವೊಂದನೆ ಹಿಡಿದು ವಾಸಿಪರೇನು ಚಿತ್ರವಿದು ॥
ಯಾವನೀಪರಿ ಯೋಗ ಸಾಧಿಸ- ।
ನಾವನ್ನೆ ನಿಜಮನವ ಬುದ್ಧಿಯ- ।
ನಾವಗಂ ನಸಗರ್ಪಿಸುವನವನಿಹನು ಪ್ರಿಯತಮನು ॥ ೯೯ ॥

ಪ್ರೇಮವಾತ್ರನ ಪ್ರೇಮಕಥನವು ।
ರೋಮವುಳಕವ ಮಾಳ್ಪ ಹುಚ್ಚದು ।
ನಾಮರೂಪದಿ ವರ್ಣಿಸಲಿಕಸದಳವು ಪ್ರೇಮವದು ॥
ರಾಮಣೀಯಕದಶೆಯೊಳೆನ್ನನು ।
ಕ್ಷೇಮದಿಂ ಮಾತಾಡಿಸುವುದದು ।
ಪ್ರೇಮವನು ವರ್ಣಿಸುವರಾರೈ ಮೂರುಜಗದೊಳಗೆ ॥ ೧೦೨ ॥

ಧ್ಯಾನಯೋಗದಿ ಸಿದ್ಧನೊಳಗಿಂ ।
ಮೇಣು ಕೇಳವ್ವಾಂಗಯೋಗದಿ ।
ಮಾನ್ಯಸಿದ್ಧನು ಸರ್ವಭೂತಗ್ರಾಮಕಾದರೆಯು ॥
ಕೇಣನಿಲ್ಲದೆ ನನ್ನ ಪ್ರೇಮದಿ ।
ಧ್ಯಾನಿಸುವನಾರಿಹನೊ ಭಕ್ತನು ।
ಯೇನ ಹೇಳಲಿ ಮುಕ್ತನನನೇ ಯೋಗಿ ಪ್ರಿಯತಮನು ॥೧೦೦॥

ಮರುಳನೆಂದದಿ ಮೇಲೆಯುಪಮಾ- ।
ಸರಣಿಯನು ಕೊಟ್ಟಹೆನು ಪ್ರೇಮಕೆ ।
ಸರಿಯು ತೋರದು ನೋಡಲುಪಮೆಯು ಪ್ರೇಮ ನಿರುಪಮವು ॥
ನರನೆ ಕೇಳೇ ಮಾತನೆಲ್ಲವ ।
ಮರೆತು ಬಿಡು ಬದಿಗಿಟ್ಟು ಸಾರಿಸು ।
ಭರತಿ ಬರುವುದು ಪ್ರೇಮಕೈ ಕಥನದಲಿ ಪ್ರೇಮದಲಿ ॥ ೧೦೩ ॥

ಹೇಳುವನಿಂ ಮಿಗಿಲು ಪ್ರೇಮವು । ಬಂದುದೆಲ್ಲವು ಬರಲಿ ನಿನಗೀ- ।
ಕೇಳುವನಿಗೆ ಪುಟ್ಟುವುದಲಾ । ನಂದದಿಂದಲಿ ಪೇಳ್ವೆನೀಗಲೆ ।
ಹೇಳಲೇನದಕಿನ್ನು ವಪಮೆಯು ನೋಡು ಕಲಿವಾರ್ಥ ॥ ಬಂದೊದಗಿತಿದು ದಿವ್ಯಸಂದರ್ಭವು ಕಣಾ ಸುಕೃತ ॥
ಕೇಳು ಪ್ರೇಮಳ ಭಕ್ತ ನೀನೇ । ಮುಂದೆ ನಿನಗಾಂ ಪೇಳ್ವೆಸರಮಾ- ।
ಪೇಳುತಿರೆ ನಾ ಭಕ್ತವೃಂದದ । ನಂದದಿಂದಲಿ ಯೆನ್ನ ಹೃದಯದ ।
ಲೀಲೆಯನು ನಿನಗೆಳಗೆ ಪ್ರೇಮವು ದ್ವಿಗುಣವಾಯಿತಲಾ ॥೧೦೪॥ ಮಂದಿರದಿ ಸ್ಥಾಪಿಸುವ ಭಕ್ತರ ಲಕ್ಷಣಂಗಳನು ॥ ೧೦೫ ॥

ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ ।
ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸ ಚ ಮೇ ಪ್ರಿಯಃ ॥ ೧೫ ॥

ಶರಧಿಯಲಿ ಕಲ್ಲೋಲವಾದರೆ । ಪ್ರೀತಿದ್ವೇಷಗಳೆಲ್ಲ ನಾಯಲು ।
ಬರುವುದೇನೈ ಭೀತಿಯಾಜಲ- । ದ್ವೈತಭಾವವು ಮುರಿವುದಲ್ಲವೆ ।
ಚರತತಿಗೆ ನಿರ್ಭಯದಲೋಡಾಡುವುದು ಜಲದೊಳಗೆ ॥ ಯಾತಕಿರುವುವು ದುಃಖಹರ್ಷಾಮರ್ಷಭಾವಗಳು ॥
ಮರಳಿ ಜಲಚರವೃಂದ ಬೆಳೆದರೆ । ಭೂತಳದಿ ಸುಖದುಃಖಬಾಧಾ- ।
ಒರುವುದೇನೈ ತಾಪ ಶರಧಿಗೆ । ತೀತ ನಿರ್ಭಯ ಕ್ಷೋಭಸಿರಹಿತ- ।
ನರನೆ ಕೇಳೀ ತತ್ತ್ವ ಮರೆಯದೆ ನೋಡು ನೀನಿದನು ॥೧೦೬॥ ನೀತೆರದ ಸ್ಥಿತಿ ಪ್ರಾಪ್ತವಹುದೈ ಭಕ್ತಿ ಮಾಡಿದರೆ ॥ ೧೦೭ ॥

ಬಾರದವನಿಗೆ ಖೇದ ಜಗದಿಂ । ಈ ತೆರದ ಮಮ ಭಕ್ತನಿಹ ಮತ್- ।
ಬಾರದವನಿಂ ಖೇದ ಜಗಕೆ ಶ- । ಪ್ರೀತಿಪಾತ್ರನು ಪ್ರೇಮದಲಿ ನಾ ।
ರೀರಕಿರುವುದೆ ಸ್ವಾನಯವದಿಂ ತಾಪ ನೋಡಿದರೆ ॥ ಸೋತು ಹೋಗುವೆ ವರ್ಣಿಸಲಿ ನಾನೆಂತು ಬಾಯಿಂದ ॥
ಬಾರದಾಪರಿ ತಾಪ ಸರ್ವಾ- । ಅತನೆನ್ನ ಪ್ರಾಣವಲ್ಲಭ- ।
ಧಾರ ತಾನಿಹೆನೆಂದು ಜೀವಕೆ । ನಾತಪೂರ್ಣಾನಂದಪೂರಿತ- ।
ತೋರುನೀ ಜಗವಾಗೆ ದೇಹವ ದ್ವೈತವೆಲ್ಲಿಯದು ॥೧೦೮॥ ನಾತನೆತ್ತಿದ ಜನ್ಮನೇ ರೂಪಾಂತರವು ಯೆನ್ನ ॥ ೧೦೯ ॥

ಅನಪೇಕ್ಷಃ ಶುಚಿರ್ದಕ್ಷ ಉದಾಸೀನೋ ಗತವ್ಯಥಃ ।
ಸರ್ವಾರಂಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥ ೧೬ ॥

ಆತನಲಿ ಸತ್ತಿಹುದು ಸ್ವೇಚ್ಛೆಯು । ದುರಿತನಾಶಕ ಗಂಗೆ ಜೀವರ ।
ಆತನಲಿ ವರ್ಧಿಪುದು ಸೌಖ್ಯ- । ಹರಿಸುವುದು ತಾಪವ ಶುಚಿತ್ವದಿ ।
ಪ್ರಾಪ್ತಿಯಾತನೆ ಪುಣ್ಯಪಾವನನಿಹನು ಜಗದೊಳಗೆ ॥ ಬಿಡುವುದದರಲಿ ಭೀತಿ ಮುಳುಗಲು ಜೀಕು ಗಂಗೆಯಲಿ ॥೧೧೧॥
ಕ್ಷೇತ್ರರಾಜವು ಕಾಶಿ ಮೋಕ್ಷ- ।
ಪ್ರಾಪ್ತಿಯಾಗುವುದಲ್ಲಿ ಯೆಂಬರು । ಭಕ್ತಿರೂಪದ ನದಿಯು ಕಂತನೆ- ।
ಪ್ರಾಪ್ತಿಯಹುದೇ ಮೋಕ್ಷ ದೇಹತ್ಯಾಗ ಮಾಡದಲೆ ॥೧೧೨॥ ಸುತ್ತ ಪೇಳ್ವರು ನೆಲೆಯು ಹತ್ತದು ।
ಹತ್ತಿದರೆ ಮಾರ್ಗದಲಿ ಸಾಕೈ ಯುದ್ಧರಿಸುವುದಲಾ ॥
ದುರಿತನಾಶಕನೈ ಹಿಮಾಚಲ । ಪ್ರಾಪ್ತಿಯಪ್ಪುದು ಬಹುಸುಲಭದಲಿ ।
ಕರಗ ಬೇಕೈ ಜೀವವಲ್ಲಿಯೆ । ಮುಕ್ತಿ ಜೀವರ ಕರಗಿಸದಲೇ ।
ಮರಣವಿಲ್ಲದೆ ಶುಚಿತನವನೀಯುವರು ಸಜ್ಜನರು । ಮೃತ್ಯುಮುಖದಲಿ ಜೀಳದಲೆ ದರ್ಶನದಿ ಮುಕ್ತಿಯದು ॥ ೧೧೩ ॥

ಕಾಶಿಭಾಗೀರಥಿಯು ಲೋಕದ ।
ನಾಶಿವುದು ಪಾಪಗಳ ರಾಶಿಯ ।
ಕಾಶಿ ಹೊತ್ತಿಹ ಪಾಪಗಳ ನಾಶಿಪರು ಯಾರಿಹರು ॥
ದೋಷರಾಶಿಗಳೆಲ್ಲವನು ನಿ- ।
ರ್ದೋಷ ಮಾಳ್ಪುದು ಸಂತಸಂಗಮ ।
ಲೇಶವಿಹುದೇ ಕಿಂತು ಸಜ್ಜನರಿಹರು ಪಾವನರು ॥ ೧೧೩ ॥

ಧಾರುಣಿಯಲೀ ತೀರ್ಥರಾಜರ- ।
ನಾರು ಪಾವನ ಮಾಳ್ಪಗ್ಗೆ ಸಂ- ।
ಹಾರ ಮಾಳ್ಪರು ಪಾಪರಾಶಿಯ ತೀರ್ಥಕ್ಷೇತ್ರಗಳು ॥
ಭೂರಿಸ್ವಪ್ನ ಮನೋವಿಕಾರವ ।
ದೂರ ಮಾಳ್ಪರು ಹತ್ತುದಿಶೆಯಲಿ ।
ಸೇರುವರು ಮತ್ಪದವನವರಲಿ ವಾಸ ಮಾಡುವೆನು ॥೧೧೪॥

ತರಣಿಯಂತರ್ಬಾಹ್ಯದಲಿ ಶುಚಿ- ।
ಯಿರುವರೀಪರಿ ಸಾಧುಸಜ್ಜನ- ।
ರಿರುವುದೈ ಪಾದಾಳುವಿಗೆ ನಿಜ ದ್ರವ್ಯದೃಷ್ಟಿಯದು ॥
ಇರುವುದೈ ಸಜ್ಜನರಿಗೀಪರಿ ।
ಪರಮ ಬ್ರಹ್ಮತ್ವವನು ನೋಡುವ ।
ವರಸುದೃಷ್ಟಿಯು ನೋಡು ಪಾರ್ಥನೆ ಜನ್ಮಸಿದ್ಧವಿದು
॥ ೧೧೫ ॥

ನರನೆ ಕೇಳ್ ಸರ್ವತ್ರ ವ್ಯಾಪಕ- ।
ವಿರುವುದಾಕಾಶವು ಕಣಾ ಮೇ- ।
ಲಿರುವುದದು ನಿರ್ಲಿಪ್ತವೀಪರಿ ನೋಡು ಸಜ್ಜನರು ॥
ಇರುವುದೀಪರಿ ಸಜ್ಜನರ ಮನ- ।
ವಿರುವುದೈ ವ್ಯಾಪಕವು ಮೇಣದು- ।
ವಿರದು ಕೇಳಾಸಕ್ತಿಯೆಲ್ಲಿಯು ತತ್ತ್ವವಿದ ನೋಡು ॥೧೧೬॥

ಬೇಡನನು ತಪ್ಪಿಸುತ ಗಗನದೊ- ।
ಳಾಡುತಿಹ ಹಕ್ಕಿಗಳ ಮನದಲಿ ।
ಮೂಡುತಿಹುದೇ ಭೀತಿಯಾಪರಿ ಮುಕ್ತಗಾಸಕ್ತಿ ॥

ಮೂಡುವುದೆ ನಾಚಿಕೆಯು ಶವದಲಿ ।
ನೋಡಿದರೆ ತೋರುವುದು ನಗ್ನ ಸ್ತ್ರೀ ।
ಕಾಡಲಾರದು ದುಃಖಿಯಾತನೆ ಮುಕ್ತನನು ಪಾರ್ಥ ॥ ೧೧೭ ॥

ನಿರುತ ಕರ್ಮಾರಂಭದೆಸೆಯಿಂ ।
ಧರಿಸನ್ಯೆ ಯಭಿಮಾನವಾತನು ।
ವುರುವಲುವು ಸಿಗದಿರಲು ಬೆಂಕಿಯು ಸುಡುವ ಪರಿ ಯೆಂತು ॥
ಬರುವುದವನಿಗೆ ಶಾಂತಿ ಮೋಕ್ಷದ ।
ಪರಮ ಸುಲಭದ ಹಾದಿಯಂ- ।
ಕರಿನಲದನವನಾಗುವನು ಪ್ರಿಯತಮನು ಕಲಿಪಾರ್ಥ ॥ ೧೧೮ ॥

ಈ ತೆರದಿ ವಿಸ್ತರಿಸಿದೆನು ನಿನ- ।
ಗೀತ ತುಂಬಿಹನಾತ್ಮರೂಪದಿ ।
ದ್ವೈತಸಾಗರ ದಾಟಿ ಪಾರವ ಕಂಡನ್ಯೆ ಜಗದಿ ॥
ಭೂತಳದಿ ಕೇಳ್ ಭಕ್ತಿಸೌಖ್ಯದ ।
ಪ್ರಾಪ್ತಿಯಾಗುವ ನೆವದಿ ಸಂತತ- ।
ವಾತನಾಗುತ ದೂತ ದೇವಪ್ರೇತನಾಗುವನು ॥ ೧೧೯ ॥

ಸೇವ್ಯಸೇವಕ ಭಾವದಿಂದವ- ।
ನಾವಗಂ ಸೇವಿಪನು ನನ್ನನೆ ।
ಭಾವವೊಂದಿಹುದವಗೆ ತನ್ನೋಪಾಸನೆಯ ನೆವದಿ ॥
ಭಾವಭಕ್ತಿವಿಹೀನರಿಗೆ ತಾ- ।
ನಾವಗಂ ಕೈದೀಪ ತೋರಿಪ- ।
ನ್ಯೆ ವಿಚಾರಿಸೆ ಯೆನಗೆ ಪ್ರಿಯತಮನೀಪರಿಯ ಭಕ್ತ ॥ ೧೨೦ ॥

ಕೂತಿತೀತೆರಭಕ್ತನಲಿ ಸಂ- ।
ಪ್ರೀತಿಯಿವನನು ನಾನು ಧ್ಯಾನಿಸೆ- ।
ನೀತನಿತ್ತರೆ ದರ್ಶನವನೆನಗಾಗುವುದು ಶಾಂತಿ ॥
ಈತಗೋಸುಗ ನಾನು ಬರುವೆನು ।
ಭೂತಳದಿ ವಿಧವಿಧದ ರೂಪದೊ- ।
ಳೀತ ಪಂಚಪ್ರಾಣವೆನ್ನವ ನೋಡು ಕೌಂತೇಯ ॥ ೧೨೧ ॥

ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ ।
ಶುಭಾಶುಭಪರಿತ್ಯಾಗೀ ಭಕ್ತಿಮಾನ್ ಯಃ ಸ ಮೇ ಪ್ರಿಯಃ ॥ ೧೭ ॥

ಪ್ರಾಪ್ತವಾಗಲು ಬ್ರಹ್ಮಸುಖವದು ।
ಭೂತಳದೊಳೇನಿಹುದು ಲೆಸರದನೆ ।
ಪ್ರೀತಿಕಾರಕ ವಸ್ತು ಪರಮಾನಂದ ಕೊಡುತಿರುವ ॥

ಈ ತೆರದ ಬ್ರಹ್ಮಸ್ವರೂಪದ ।
ವೇತ್ತನಿಗೆ ಬೇರಿಹುದು ಸಾಖ್ಯವು ।
ದ್ವೈತ ಕಳೆಯಲು ದ್ವೇಷ ತನ್ನಿಂ ತಾನೆ ತ್ಯೋಗುವುದು ॥ ೧೨೨ ॥

ತೀಸೆ ವಿಶ್ವಸ್ವರೂಪವಾಗಲು । ತರಣಿಗಿರುವುದೆ ರಾತ್ರಿ ದಿವಸವು ।
ಯೆನಿಹುದು ವಿಶ್ವದಲಿ ದ್ವೇಷ್ಯವು । ಮೆರೆವುದೊಂದೇ ಸತ್ಕಾಶವು ।
ಮಾನದಂಭಾದಿಗಳು ತಾವೇ ಕರಗಿ ಹೋಗುವುವು ॥ ತೆರದೊಳೀ ಮದ್ಭಕ್ತನಿಗೆ ಕೇಳ್ ದ್ವೈತ ಮುರಿಯುವುದು ॥
ಕ್ಷೋಣಿಯಲ್ಲಿದು ನಿತ್ಯ ಶಾಶ್ವತ । ಮೆರೆವನವನೈ ಜ್ಞಾನರೂಪನು ।
ಹಾನಿಯೆಲ್ಲಿಂ ಬಹುದು ಯೆಂಬಭಿ- । ಮೆರೆವನೈ ಶುದ್ಧಾತ್ಮಭಕ್ತನು ।
ಮಾನವಾಗಲು ಮನದಿ ಶೋಕದ ಕಾರಣವದೇನು ॥೧೨೩॥ ನಿರುತ ಮದ್ಭಜನದಲಿ ತತ್ಪರನಾಗಿ ಜೀವಿಪನು ॥ ೧೨೫ ॥

ನಿರುತ ಸರ್ವೋತ್ಕೃಷ್ಟ ವಸ್ತುವು । ಕ್ಷೋಣಿಯಲ್ಲೀ ತೆರದ ಭಕ್ತನು ।
ದೊರಕಿಹುದು ತನಗೀಗ ಮುಂದಿ- । ಪ್ರಾಣಕಿಂತಲು ಪ್ರಿಯನಿಹನು ನೀ- ।
ನ್ನೆರಡನೆಯ ಪರತತ್ತ್ವವಿಲ್ಲೈ ಪ್ರಾಪ್ತವಾಗಲಿಕೆ ॥ ನ್ನಾಣೆ ಸತ್ಯವ ಪೇಳುವೆನು ಕೇಳ್ ಸತ್ಯವಿದು ಸತ್ಯ ॥
ಪರಿಯೊಳೀ ಭಾವನೆಯು ಮನದಲಿ । ಮಾನ್ಯನೆನಗವ ಮೂರುಲೋಕದಿ ।
ಒರಲು ಸ್ವೇಚ್ಛೆಯು ನಾಶವಪ್ಪುದು । ಪೂರ್ಣಬ್ರಹ್ಮಜ್ಞಾನಿಯಾತನು ।
ನರನೆ ಕೇಳೈ ಭಕ್ತನೆನ್ನಯ ಸಂಗರಹಿತನಲಾ ॥ ೧೨೪ ॥ ಯೇನ ಬಣ್ಣಿಪೆನವನ ಭಕ್ತಶಿರೋಮಣಿಯ ನಾನು ॥ ೧೨೬ ॥

ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ ।
ಶೀತೋಷ್ಣಸುಖದುಃಖೇಷು ಸಮಃ ಸಂಗವಿವರ್ಜಿತಃ ॥ ೧೮ ॥

ಮನದಿ ವಕ್ರತೆಯಿಲ್ಲವೆಂದಿಗು । ಕಾಲಖಿಲತು ಮಾನಗಳು ಪೋಡಗ- ।
ಯೆಣಿಸುವನು ತಾನೇಕಭಾವವ । ಳೇಳಲೇನವು ಗಗನವನು ತಾವ್ ।
ಕನಸಿನಲಿಯಾದರು ಕಣಾ ತೋರಿಸನು ವೈರವನು ॥ ಹಾಳ ಮಾಳ್ಪವೆ ಗಗನವದು ನಿರ್ಲಿಪ್ತ ನೋಡಿದರೆ ॥
ಮನೆಯು ಮಂಡಳಿಗಳಿಗೆ ಬೆಳಕದು । ಗಾಳಿ ತೆಂಕಲ ಬಡಗಿನೆನುತಲಿ ।
ಮಿನುಗಿ ಬಳಿಕನ್ಯರಿಗೆ ಕತ್ತಲೆ- । ತಾಳದೈ ಭೇದವನು ಮೇರುವು ।
ಯುಣಿಸುವುದೆ ಕೇಲ್ವೀಪವೊಂದೇಸನನೆ ಬೆಳಗುವುದು ಕೇಳು ನೀ ಕಲಿಪಾರ್ಥ ನನ್ನಯ ಭಕ್ತನೀತೆರನು ॥ ೧೩೦ ॥
॥ ೧೨೭ ॥

ಮರವು ಹಚ್ಚಿದ ದೊರೆಗೆ ಕಡಿಯಲು । ಮನದ ಸಮತೂಕವನು ತೊರೆಯದ- ।
ಬರುವ ದುಷ್ಪಾತ್ಮನಿಗೆಯೊಂದೇ । ಲನುಭವಿಸುವನು ದುಃಖಸುಖವನು ।
ತೆರದಿ ಕೊಡುವುದು ನೆರಳ ಪಂಕ್ತಿನಿಭೇದ ಮಾಡುವುದೆ ॥ ನಿನುಶೀಲನು ಭಕ್ತನೆನ್ನಯ ನೋಡು ಕೌಂತೇಯ ॥
ಮರಳಿ ನೋಡಾ ಕಬ್ಬು ತಾಂ ಸಾ- । ಮಿನುಗುತಿರುವುದು ಚಂದ್ರಬೆಳಕದು ।
ಕಿರುವನಿಗೆ ಸಿಹಿಯಾಗಿ ಮತ್ತಾ- । ಮನುಜರಲಿ ಭೇದವನು ತೋರಿಸ- ।
ಚರಕದಲಿ ಹಿಂಡುವನಿಗಿಹುದೇ ಕಹಿಯು ಕಲಿಪಾರ್ಥ ದನವರತ ಸುಖಕಾರಕವು ರಾಜನಿಗು ರಂಕನಿಗು ॥ ೧೩೧ ॥
॥ ೧೨೮ ॥

ಶತ್ರುಮಿತ್ರರು ಸರ್ವಜನರೀ- । ಇರುವನೀಪರಿ ಭಕ್ತನೆನ್ನಯ ।
ಧಾತ್ರಿಯಲ್ಲಿ ಸಮಾನರವನಿಗೆ । ಮೆರೆವನವ ತಾನೇಕಭಾವದಿ ।
ನೊತ್ತು ಬೇರಿಲ್ಲವಗೆ ದ್ವೈತವು ಮಾನವಪಮಾನ ॥ ಧರೆಯೊಳಗೆ ನೀರಿಹುದು ಸೇನ್ಯವು ಸರ್ವಮಾನ್ಯವದು ॥
ಕೈತ್ಯದೌಷ್ಣ್ಯಾದ ಭಾವವೆರಡವ- । ತೊರೆದು ಸಂಗವ ಸರ್ವಬಗೆಯಲಿ ।
ನೆತ್ತಣದು ತದ್ಬಾಧೆಯುರಿಯನು । ಯಿರುವನವನೇಕಾಂತದಲ್ಲಿಯೆ ।
ಭಕ್ತನೀಪರಿಯಿರಲು ನನಗವ ಪ್ರೇಯನೆನಿಸುವನು ॥ ೧೩೯ ॥ ಸ್ಥಿರವ ಮಾಳ್ಪನು ಮನವನೆನ್ನಲಿ ಸುಖವದೇ ಯೆನುತ ॥ ೧೪೨ ॥

ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್ ।
ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ಮೇ ಪ್ರಿಯೋ ನರಃ ॥ ೧೯ ॥

ನಿಂದೆಯನು ಮಾಡಿದರೆ ಕುಗ್ಗದೆ ।
ಮಂದಿ ಸ್ತುತಿಸಲು ಮನದಿ ಹಿಗ್ಗದೆ ।
ಯೊಂದೆ ತೆರನಾಕಾಶದಂದದಿ ಭಾವಿಸುತ್ತಿಹನು ॥
ನಿಂದೆಸ್ತುತಿಯು ಸಮಾನ ಮಾನಿಸಿ ।
ಕುಂದುಹೆಚ್ಚಿನು ತಿಳಿಯದಲೆ ತಾಂ ।
ಮಂದಿರದಿ ವನದೊಳಗೆ ಭೇದವ ಕಾಣನೈ ನಿಜದಿ ॥೧೩೩॥

ಏನು ಭಾಷಣ ಮಾಡಲೇನದು ।
ಮೌನವದು ಸಂಕಲ್ಪ ವೃತ್ತಿನಿ ।
ಹೀನನಾದುದರಿಂದ ಸತ್ಯಾಸತ್ಯತೆಗಳೆಲ್ಲ ॥
ತಾನರಿಯ ವಿಶ್ರಾಂತಿ ಬ್ರಹ್ಮ ।
ಜ್ಞಾನವ್ಯವಸಾಯದಲಿ ಭಾವನಿ ।
ಹೀನನೆನ್ನಯ ಭಕ್ತನವ ಪ್ರಿಯತಮನು ಕಲಿಪಾರ್ಥ ॥೧೩೪॥

ಬರಲು ಜಲು ಬರಗಾಲ ಬಿರುಮಳೆ ।
ಸುರಿಯದಿರೆ ಕಡಲೊಣಗಿ ಪೋಪುದೆ ।
ಸುರಿಯಲತಿಮಳೆ ಸಾಗರವು ತಾನುಕ್ಕಿ ಬರುತಿಹುದೆ ॥
ಪರಿಯೊಳೆನ್ನಯ ಭಕ್ತಪ್ರಿಯತಮ ।
ನರಿಯನೈ ಸಂತೋಷದುಃಖವ ।
ನಿರುವನೊಂದೇ ಭಾವದಲಿ ಸುಖದುಃಖವೆರಡರಲಿ ॥೧೩೫॥

ತಿರುಗುವುದು ಸರ್ವತ್ರ ವಾಯುವು ।
ಪರಿಯೊಳೆನ್ನಯ ಭಕ್ತ ಜಗದಲಿ ।
ತಿರುಗುವನು ವಾಸವನು ಮಾಡನು ವೊಂದೆಸ್ಥಾನದಲಿ ॥
ಇರುವುದೈ ತದ್ವಾಯು ವ್ಯಾಪಕ ।
ಶರಣೆಯೆನ್ನಯ ಸರ್ವವ್ಯಾಪಕ ।
ನರಿವನವನೀ ವಿಶ್ವವೆಲ್ಲವು ತನ್ನದೇ ಯೆನುತ ॥ ೧೩೬ ॥

ಮನೆಯೆ ತನ್ನದು ವಿಶ್ವವೆನುತಲಿ ।
ಮನದಿ ಸಂಕಲ್ಪವನು ಮಾಡುತ ।
ಮನಸಿನಲಿ ತಾಂ ವಿಶ್ವವೆಂದೇ ಭಾವಿಸುತ್ತಿರುವ ॥
ವಿನಯಪರನೀ ಭಕ್ತನೆನ್ನಯ ।
ಮನದಿ ಪೂರ್ಣಾಮೃತ ತಾಳ್ದರು ।
ಅನವರತ ಮದ್ಭಜನತತ್ಪರ ಭಕ್ತಿಭಾವದಲಿ ॥ ೧೩೭ ॥

ಹೇಳಲೇನದನಿಂಥ ಭಕ್ತರ ।
ತಾಳುವೆನು ನಾ ಶಿರದಿ ಮಕುಟದ ।
ವೋಲು ಸಾಮಾನ್ಯನೆ ಕಣಾ ನಾನೇನು ನೆನಸಿದಿಯಾ ॥
ಕಾಲ ತೀರ್ಥವು ನನ್ನ ಗಂಗೆಯು ।
ತಾಳುವರು ಧನ್ಯತೆಯ ಸೇವಿಸಿ ।
ಕೇಳು ನಾ ಪುರುಷೋತ್ತಮನು ಮಸ್ತಕದಿ ಧರಿಸುವೆನು ॥ ೧೩೮ ॥

ಎಂತು ಶ್ರದ್ಧೆಯಿನೆನ್ನ ಪೂಜಿಪು ।
ದೆಂತ ತಿಳಿಯಲು ಮನಸಿರಲು ಶ್ರೀ ।
ಕಂತುಹರ ಗುರುವಾಗಲವನಿಗೆ ಪೂರ್ಣ ತಿಳಿಯುವುದು ॥
ಇಂತು ಶಂಕರನನ್ನು ತೋರಿಸೆ ।
ಬಂತು ಸ್ವಾತ್ಮಸ್ತುತಿಯು ದುರಿತವು ।
ಚಿಂತೆಯಿಲ್ಲೈ ನಾಕು ಶಂಕರ ಹೆಸರ ಬಿಟ್ಟು ಬಿಡು ॥ ೧೩೯ ॥

ನಾಲುಕನೆ ಪುರುಷಾರ್ಥ ಸಿದಿಯು ।
ಲೋಲಲೋಚನೆ ಮುಕ್ತಿಯೈ ಹಿಂ ।
ಬಾಲಿಸುವಳೈ ಭಕ್ತಿಮಾರ್ಗದಿ ಕರದಿ ಕರ ಪಿಡಿದು ॥
ಮೇಲುಪಂಕ್ತಿಯ ಹಾಕಿ ಶರಣಿಯು ।
ಮೇಲಕೆಳೆವನು ಲೋಕವೆಲ್ಲವ ।
ಮೇಲಿರುನ್ನುದಧಿಕಾರವವನಿಗೆ ಲೋಕರಕ್ಷಣಕೆ ॥ ೧೪೦ ॥

ಶರಣಿಯೆನ್ನಯ ಮೋಕ್ಷಬಾಂದನು ।
ಹರಿವನೈ ಭಕ್ತಿಯ ಪ್ರಹಾರದೊ ।
ಳಿರುವನೈ ಯವ ನಮ್ರ ನೋಡಾ ನೀರಿನಂದದಲಿ ॥
ಕರಗಳೆರಡನು ಜೋಡಿಸುವೆ ನಾ ।
ಶರಣಿಯನು ಶಿರದೊಳಗೆ ಧರಿಸುವೆ ।
ಧರಿಸಿಹೆನು ಶ್ರೀವತ್ಸಲಾಂಛನವನ್ನು ಹೃದಯದಲಿ ॥ ೧೪೧ ॥

ಎನ್ನ ಭಕ್ತರ ಗುಣಗಣಂಗಳ ।
ವರ್ಣಿಸುವೆ ಬಾಯಿಂದ ಕೀರ್ತಿಯ ।
ಕರ್ಣದಿಂ ಕೇಳುತ್ತ ಪರಮಾನಂದ ತಾಳುವೆನು ॥
ಎನ್ನ ಭಕ್ತರ ನೋಡುವಿಚ್ಛೆಯು ।
ಕಣ್ಣಿಗಾಗಲು ದೇಹ ಧರಿಸುತ ।
ಕಣ್ಣಿನಿಚ್ಛೆಯ ಪೂರಯಿಸುವೆನು ಘನನೇತ್ರಸಲಾ ॥ ೧೪೨ ॥

ಎನ್ನ ಲೀಲಾಕಮಲದಿಂದಲಿ ।
ಯೆನ್ನ ಭಕ್ತರ ಪೂಜಿಸುತ್ತಿಹೆ ।
ನೆನ್ನ ಭಕ್ತರನಪ್ಪಿಕೊಳ್ಳಲು ಸಾಲವೆರಡು ಕರ ॥
ಎನ್ನತೀ ಬೇರೆರಡು ಕರಗಳ ।
ಸನ್ನುತಾನ್ಮನೆ ಧರಿಸಿ ಬಂದಿಹೆ ।
ಮನ್ನಿಸೈ ನೀ ಪಾರ್ಥ ಯೆನ್ನಯ ಮಾತು ನಿಜವೆಂದು ।।೧೪೩।।

ಭಕ್ತಸಂಗವು ಸೌಖ್ಯದಾಯಕ- ।
ವಿಸ್ತರಿಸೆ ನಾ ಬಹಳ ತೆರದಲಿ ।
ದೃಷ್ಟಿಯಲಿ ಸಾಕಾರನಾದೆ ನಿರಾಕೃತಿಯು ನಾನು ॥
ಮತ್ತೆ ಹೇಳುವುದೇನು ಪುನರಪಿ ।
ಭಕ್ತರೆನ್ನಯ ಪ್ರಾಣಜೀವವೆ ।
ನುತ್ತ ನಂಬಿಹೆ ಪಾರ್ಥ ಕೇಳ್ದೆ ಸಟೆಯು ಮಾತಲ್ಲ ।। ೧೪೪ ।।

ಭಕ್ತರೆನ್ನಯ ಪರಮಮಿತ್ರರೆ ।
ನುತ್ತ ಪೇಳ್ವುದು ಚೋದ್ಯವೇನದು ।
ಧಾತ್ರಿಯಲ್ಲೀ ಭಕ್ತಚರಿತವನಾರು ಕೇಳುವರೊ ॥
ವಿಸ್ತರಿಸುವರು ಯಾರು ಭಕ್ತರ ।
ಕೀರ್ತಿಯನು ಮತ್ತವರು ನನಗೆ ಸು ।
ಮಿತ್ರರಿರುವರು ಪಾರ್ಥ ಕೇಳ್ದೆ ಪ್ರೇಮಸರಣಿಯಿದು ॥ ೧೪೫ ॥

ನರನೆ ನಿನಗಾಂ ಪೂರ್ಣರೀತಿಯೊ ।
ಳರುಹಿದೆನು ಕೇಳ್ ಭಕ್ತಿಯೋಗವ ।
ಧರೆಯೊಳಿಹುದಿದು ಬ್ರಹ್ಮಪ್ರಾಪ್ತಿಯ ಸಾಧನದ ಯುಕ್ತಿ ॥
ಅರಿಯಲಾ ಭಕ್ತಪ್ರಶಂಸೆಯು ।
ಧರಿಸುವೆನು ಮಸ್ತಕದೊಳವನನು ।
ನಿರುತವೆನ್ನಯ ಮನದಿ ವಾಸಿಪನಾಮಹಾತುಮನು ॥ ೧೪೬ ॥

ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।
ಶ್ರದ್ಧಧಾನಾ ಮತ್ಪರಮಾ ಭಕ್ತಾಸ್ತೇತೀವ ಮೇ ಪ್ರಿಯಾಃ ॥ ೨೦ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ
ಶ್ರೀಕೃಷ್ಣಾರ್ಜುನಸಂವಾದೇ ಭಕ್ತಿಯೋಗೋ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ನರನೆ ನಾ ನಿನಗರುಹಿದೆನು ಬಹು ।
ಸರಸದಮೃತದ ವೃಷ್ಟಿಯಂದದ ।
ಪರಮಧರ್ಮರಹಸ್ಯತತ್ತ್ವವ ಪ್ರೇಮದಿಂದೀಗ ॥
ಪರಮಶ್ರದ್ಧೆಯಲಿದನು ಕೇಳ್ದಾ- ।
ಚರಿಪರೀ ತೆರನಂತೆ ಸಂತತ ।
ಪರಮ ಭಕ್ತಿಯೊಳೆನ್ನ ವಚನವನಾರು ನಂಬುವರೊ ॥೧೪೭॥

ಹೊತ್ತುಹೊತ್ತಿಗೆ ನಾನು ಹೇಳಿದ ।
ತತ್ತ್ವಸಾರವ ಗ್ರಹಿಸಿ ಯೆನ್ನೊಳು ।
ಚಿತ್ತವಿಟ್ಟರೆ ಯೆನ್ನ ವಚನಾಮೃತವ ಸೇವಿಸಲು ॥
ಬಿತ್ತಿದರೆ ಬೀಜವನು ಶುಭಫಲ ।
ವತ್ತಿರುವ ಹೊಲದೊಳಗೆ ಬೆಳೆಯದು ।
ಕೆತ್ತಿ ಬರುವಂದದಲಿ ಬರುವುದು ಫಲವು ಪಾವನವು ॥೧೪೮॥

ನಾನಿರುವೆ ವಿಶ್ವದಲಿ ಶ್ರೇಷ್ಠನು ।
ನಾನೆ ಸರ್ವವ್ಯಾಪಕನು ಮ- ।
ತ್ತೇನಿಹುದು ಯೆನಗಿಂತ ಮಿಗಿಲೀ ಜಗದಿ ನೋಡಿದರೆ ।।

ಮಾನಿಸುತಲೀ ತೆರದಿ ಪ್ರೇಮದಿ ।
ಧ್ಯಾನವನು ತನುಧನಮನಂಗಳ ।
ಕ್ಷೋಣಿಯಲಿ ಯೆನಗರ್ಪಿಸುವರೇ ಪ್ರೇಯರೆನಿಸುವರು ॥ ೧೪೯ ॥

ಅವರು ಯೆನ್ನಯ ಪೂರ್ಣಭಕ್ತರೆ ।
ಯವರೆ ಯೋಗಿಗಳಿಹರು ನಿಜದಲಿ ।
ಯವರ ಮೇಲಿಹುದೆನಗೆ ಪ್ರೇಮವು ಬಹಳ ಪರಿಯಾಗಿ ॥
ಅವರಿಗೆನ್ನಯ ಭಕ್ತಿಕಥನವ ।
ಸವಿಯು ತೋರ್ಪುದು ಬಹಳವದರಿಂ ।
ದವರೆ ತೀರ್ಥಕ್ಷೇತ್ರ ಪುಣ್ಯಪವಿತ್ರ ಪುರುಷರಲಾ ॥ ೧೫೦ ॥

ಧ್ಯಾನಿಸುವೆ ನಾನಿವರ ಮನದಲಿ ।
ಮಾನಿಸುವೆ ನಾನಿವರ ದೈವತ- ।
ವೇನ ಹೇಳಲಿ ಪ್ರೇಮನಿವರಲಿ ಪಾರ್ಥ ನಿನ್ನಾಣೆ ॥
ಕಾಣೆ ನಾ ವಿಶ್ವದಲಿ ಯೆರಡನೆ ।
ನ್ನಾನ ಪ್ರಿಯತಮವಿಲ್ಲದೆನಗದು ।
ಮಾನಸದಿ ಹುಚ್ಚೊಂದು ಹಿಡಿದಿದೆ ಭಕ್ತರೆನ್ನವರ ॥ ೧೫೧ ॥

ಭಕ್ತರೆಂಬುವೆ ವ್ಯಸನವೆನಗದು ।
ಹತ್ತಿಹುದು ದಿನರಾತ್ರಿ ಸಂತತ ।
ಭಕ್ತರೆನ್ನ ನಿಧಾನವವರಿಂ ಮನ ಸಮಾಧಾನ ॥
ವಿಸ್ತರಿಸಲೇನದನು ನನ್ನಯ ।
ಭಕ್ತಮಂಡಳಿಯವರ ಪ್ರೇಮಚ- ।
ರಿತ್ರವನು ವಿಸ್ತರಿಸುವವರೇ ನನ್ನ ದೈವತವು ॥ ೧೫೨ ॥

ಹರಿಯು ಪೇಳಿದ ಭಕ್ತಿಮಾರ್ಗದ ।
ಪರಿಯನೆಲ್ಲವ ಕೇಳಿ ಸಂಜಯ- ।
ನರುಹಿದನು ಸಂತೋಷಪುಳಕಿತನಾಗಿ ರಾಜನಿಗೆ ॥
ಅರಸ ಕೇಳೈ ನಂದಕಂದನು ।
ಹರುಷಪ್ರೇಮಾನಂದಕಂದನು ।
ಶರಣಕಲ್ಮಷಹರಣನೀಪರಿ ಪೇಳ್ದನಾ ನರಗೆ ॥ ೧೫೩ ॥

ಹರಿಯು ನಿರ್ಮಲ ನಿಷ್ಕಳಂಕನು ।
ಪರಮಕರುಣಿಯು ಶರಣರಕ್ಷಕ ।
ಶರಣ ಹೊಗಲಿಕೆ ಯೋಗ್ಯಪರಮಾತುಮನು ಶ್ರೀಕೃಷ್ಣ ॥

ಹರಿಯು ತಾನಿಹ ಧರ್ಮಕೀರ್ತಿಯು ।
ಪರಮಧನಳಚ್ಚವಿಯ ಮೂರ್ತಿಯು ।
ನಿರುಪಮಬಲಾಢ್ಯನು ಕರ್ಣಾ ಬಹುದಾನಶೂರನಲಾ ॥ ೧೫೪ ॥

ದಾನದಲಿ ಬಹುಶೂರನಿದ್ದರು ।
ದಾನಿ ಬಲಿಯಲಿ ಪ್ರೇಮಬದ್ಧನು ।
ದೀನಜನರುದ್ಧಾರ ಭಕ್ತಪ್ರೇಮಪರವಶನು ॥
ಕ್ಷೋಣಿಯಲಿ ಸತ್ಪಕ್ಷತಾರಕ ।
ತಾನು ವಿದ್ಯಾಕಲೆಗೆ ಬೀಜನು ।
ಮಾನನಿಧಿ ಪಾರ್ಥನಿಗೆ ಪುಣ್ಯಪ್ರತಾಪಿಗಿದ ಪೇಳ್ದ ॥ ೧೫೫ ॥

ಅರುಹುವೆನು ಕನ್ನಡದಿ ಪ್ರೇಮದಿ ।
ಹರಿಯು ಪಾರ್ಥಗೆ ಪೇಳ್ದ ಗೀತಾ- ।
ಪರಮಪೀಯೂಷವನು ಕನ್ನಡಿಗರಿಗೆ ಕುಡಿಸುವೆನು ॥
ಗುರುವೆನಗೆ ಹೇಳಿಹನು ವಿಷ್ಣುವ್ರ ।
ಶರಣ ಹೊಗು ಹರಿಭಕ್ತರಿಗೆ ಮೇಣ್ ।
ಒರುವುದೈ ಯೋಗ್ಯತೆಯು ಸದ್ಗುರುವರಪ್ರಸಾದದಲಿ ॥ ೧೫೬ ॥

ಇತಿ ಶ್ರೀಮೂಡಕಟ್ಟಿಸುಬ್ಬರಾವಾತ್ಮಜರಾಘವೇಂದ್ರರಾಯಕ ತವಾದ ಕನ್ನಡಜ್ಞಾನೇಶ್ವರಿಯಲ್ಲಿ
(೧೫) ಹನ್ನೆರಡನೆಯ ಅಧ್ಯಾಯ ಮುಗಿದುದು.

ಸಂಸ್ಕೃತ ಮೂಲಶ್ಲೋಕಗಳು ೨೦, ಕನ್ನಡ ಷಟ್ಪದಿಗಳು ೧೫೬

ಕನ್ನಡ ಜ್ಞಾನೇಶ್ವರಿ.

೧೩ ಹದಿಮೂರನೆಯ ಅಧ್ಯಾಯ.

ಸ್ಮರಿಸುತಾತ್ಮಾಭಿನ್ನಗಣಪತಿ- ।
ಚರಣಕಮಲವ ಸರ್ವವಿದ್ಯಾ ।
ಶರಧಿಗಾತ್ರಯವಾದ ಶ್ರೀಗುರುಚರಣಕೆರಗುವೆನು ॥
ತಿರಿತಿರಿಗಿ ತಲೆಯೊಡ್ಡುತ ನಮ- ।
ಸ್ಮರಿಸುವೆನು ಶ್ರೀಗುರುಚರಣದಲಿ ।
ಸ್ಮರಿಸಲೀಚರಣಗಳ ಮಹಿಮೆಯನೇನ ವರ್ಣಿಸಲಿ ॥ ೧ ॥

ಆರುಷಲೇಣವಾಕ್ಯಸರಣಿಯ ।
ಒರುವ ಪ್ರತಿಯೊಂದಕ್ಷರದಲೀ- ।
ತೆರದಲಿಹುದೈ ಸರಸತೆಯದನುಕೂಲತೆಯು ತಿಳಿಯೆ ॥
ಬರುವುದಾಪರಿ ಗರ್ಭಿತಾರ್ಥವು ।
ಹೊರಗೆ ಬರುತಿಹ ಸರಣಿಯನು ವಿ- ।
ಸ್ತರಿಸಲಾರೆನು ಹರಿವುದೈ ಗಂಗಾಪ್ರವಾಹದೊಲು ॥ ೩ ॥

ದೊರೆವುದಲ್ಲವೆ ಕಾವ್ಯಶಕ್ತಿಯು ।
ಬರುತ ಜಿಹ್ವಾಗ್ರದಲಿ ವಿದ್ಯೆಗ- ।
ಳೆರದೆ ಕುಣಿವುವು ಭಾಷಣದಿ ಮಾಧುರ್ಯವೇರುವುದು ॥
ಗುರುಪ್ರಸಾದದ ಭರದಿ ಜಾಯಿಂ- ।
ಧೊರಗೆ ಬಂದಿಹ ವಾಕ್ಯಸರಣಿಗೆ ।
ಒರುವುದೈ ಸರಸತೆಯು ಮಧುರತೆಯಮೃತಕಿಂ ಮಿಗಿಲು ॥೨॥

ಆರಿವರಾತ್ಮಜ್ಞಾನಮರ್ಮವ ।
ನಿರುತವೀಪರಿ ಮನದಿ ಶ್ರೀಗುರು- ।
ಚರಣ ಸ್ಮರಿಸಲು ಜ್ಞಾನಭಾಗ್ಯೋದಯವು ಒರುವುದಲಾ ॥
ಗುರುಚರಣ ಸಂಸ್ಮರಿಸಿ ಜ್ಞಾನೇ- ।
ಶ್ವರನು ಪೇಳ್ದನು ಬ್ರಹ್ಮದೇವರ ।
ಗುರುವು ಲಕ್ಷ್ಮೀನಾಥ ಗೀತೆಯನರುಹ ತೊಡಗಿದನು ॥ ೪ ॥

ಶ್ರೀಭಗವಾನುವಾಚ—

ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ ।
ಏತದ್ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥ ೧ ॥

ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ।
ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ ಯತ್ತಜ್ಜ್ಞಾನಂ ಮತಂ ಮಮ ॥ ೨ ॥

ನರನೆ ಕೇಳ್ಕೈ ನರಶರೀರವ ।
ಕರೆವರೈ ಕ್ಷೇತ್ರಾಭಿಧಾನದಿ ।
ಯರಿವನಾರೀಕ್ಷೇತ್ರವವ ಕ್ಷೇತ್ರಜ್ಞನೆನಿಸುವನು ॥

ಆರಿಯಲಾ ಕ್ಷೇತ್ರಜ್ಞ ನಾನೇ ।
ನಿರುತ ಕ್ಷೇತ್ರವ ಕೋಪಿಸುವೆನೈ ।
ಯರಿದು ಕ್ಷೇತ್ರಜ್ಞಕ್ಷೇತ್ರಗಳೆರಡುಪ್ಪೈ ಜ್ಞಾನ ॥ ೫ ॥

ತತ್ ಕ್ಷೇತ್ರಂ ಯಚ್ಚ ಯಾದೃಕ್ಚ ಯದ್ವಿಕಾರಿ ಯತಶ್ಚ ಯತ್ ।
ಸ ಚ ಯೋ ಯತ್ಪ್ರಭಾವಶ್ಚ ತತ್ಸಮಾಸೇನ ಮೇ ಶೃಣು ॥ ೩ ॥

ನರನೆ ಕೇಳೀ ನರಶರೀರವ ।
ಕರೆವರೇಕೈ ಕ್ಷೇತ್ರವೆನುತಲಿ ।
ಯಿರುವುದೇನೈ ಕಾರಣವು ಯೊ ಹೆಸರು ಬೀಳಲಿಕೆ ॥
ಅರುಹುವೆನು ನಿನಗೆನ್ನ ಮತವ ।
ನ್ನಿರುವುದೆಂತುತ್ಪತ್ತಿಯೆಲ್ಲಿಂ ।
ದಿರುವುದೆಂತು ವಿಕಾರದಿಂ ವಿಸ್ತಾರ ಕ್ಷೇತ್ರದಲಿ ॥ ೬ ॥

ಮೂರುವರೆ ಮೊಳವುದ್ದವಿರುವ ಶ ।
ರೀರವಲ್ಲವೆ ವಾರ್ಥ ಯಿದು ವಿ ।
ಸ್ತಾರವೆಂತಾಗಿಹುದು ಭಾರವಿದೆಂತು ತಾಳಿಹುದು ॥
ಯಾರು ದೊರೆ ಯೂ ಕ್ಷೇತ್ರಕೈ ನಿಜ ।
ಬಾರದಿಹುದೇ ಬರುವುದೇ ಬೆಳೆ ।
ಧಾರುಣಿಯಲೀ ಕ್ಷೇತ್ರಗುಣಗಳನೆಲ್ಲವರುಹುವೆನು ॥ ೭ ॥

ನರನೆ ನಿನಗಾನರುಹುವೆನು ವಿ ।
ಸ್ತರದಿ ಕೇಳೈ ಲಕ್ಷ್ಯಕೊಟ್ಟದ ।
ನುರುತರದಿ ಗ್ರಹಿಸುವುದು ಪಾರ್ಥನೆ ಪೇಳಿದುದನೆಲ್ಲ ॥
ಅರಿಯ ಬೇಕೀ ಕ್ಷೇತ್ರವೆನುತಲಿ ।
ಪರಿಪರಿಯ ಶ್ರುತಿನಿಕರ ವೊದರುತ ।
ಲಿರುವುದಲ್ಲೈ ಯತ್ನ ನಿಷ್ಫಲವೆಲ್ಲಿ ನೋಡಿದರು ॥ ೮ ॥

ಅರಿಯಲೆನುತೀ ಕ್ಷೇತ್ರತತ್ತ್ವವ ।
ಪರಿಪರಿಯ ಯತ್ನವನು ತರ್ಕವ್ಯ ।
ನಿರುತ ಮಾಡುವ್ರದೇನ ಹೇಳಲಿ ಯತ್ನ ನಿಷ್ಫಲವ ॥
ನರನೆ ಕೇಳೀತತ್ತ್ವವನು ನಿ ।
ರ್ಧರಿಸಿ ತಿಳಿಯಲು ಬೇಕೆನುತ ಪರಿ ।
ಪರಿಯ ಪಟ್ಟಾಸ್ತ್ರಗಳು ಟೊಂಕವ ಕಟ್ಟಿ ನಿಂತಿಹುವು ॥ ೯ ॥

ನರನೆ ಕೇಳೀಶಾಸ್ತ್ರವೆಲ್ಲವು ।
ಮರುಳರಾದರು ತತ್ತ್ವ ತಿಳಿಯದೆ ।
ತಿರಿತಿರಿಗಿ ದೆಸೆಗಾಣದಲೆ ಬಳಲಿದರು ಬೆಂಡಾಗಿ ॥
ಇರುವುದೆಂತೈ ಯೇಕವಾಕ್ಯತೆ ।
ನಿರುತ ಜಗದೊಳಗೇಕವಾಕ್ಯತೆ ।
ದೊರೆಯಲೀ ತತ್ತ್ವದಲಿ ಯೆನುತಲಿ ಯತ್ನ ಮಾಡುವರು ॥ ೧೦ ॥

ಭೇದವಿಲ್ಲದಲೇಕಮತವನು ।
ಸಾಧಿಸಲು ಬೇಕೆಂಬ ಯುಕ್ತಿಯ ।
ವಾದವನು ಮಾಡುವರು ಶಾಸ್ತ್ರಗಳೆಲ್ಲ ಜಗದೊಳಗೆ ॥

ಭೇದ ಮುರಿಯದು ಶಾಸ್ತ್ರನಿಕರಕೆ ।
ಹಾದಿಯೇ ಕಾಣದಲೆ ಕಾಡಿನ ।
ಹಾದಿಯಲಿ ಕತ್ತಲೆಯಲಡ್ಡಾಡುವರು ಕಲಿವಾರ್ಥ ॥ ೧೧ ॥

ಯಾರದಿಹುದೀ ಕ್ಷೇತ್ರವೆಂಬ ವಿ ।
ಚಾರ ಮನದಲಿ ಬಾರದಾರಿಗು ।
ಯೇರಿಹುದಹಂಕಾರ ಪಿತ್ತವು ಮಸ್ತಕಕೆ ನೋಡೆ ॥
ಧಾರುಣಿಯೊಳೀ ದುಷ್ಟ ರೋಗವು ।
ಸೇರಿಹುದು ಮನೆಮನೆಯಲೆಂತೆನೆ ।
ಬೇರೆಯಾವುದು ಗೋಚರಿಸದೈ ಹೆಮ್ಮೆ ಹೊರತಾಗಿ ॥ ೧೨ ॥

ನರನೆ ನಾಸ್ತಿಕಜನರು ಬಾಯನು ।
ತೆರೆಯು ಬಾರದೆನುತ್ತ ವೇದಗ ।
ಳುರುತರದಿ ಮಾಡುವರು ಯತ್ನವ ಹೇಳಲೇನಿದನು ॥
ಅರಿಯುತಿದ ಪಾಖಂಡಿಗಳು ಬಹು ।
ಪರಿಯಲಾವೇದಗಳನೆಲ್ಲವ ।
ಬರಿದೆ ಧಿಕ್ಕರಿಸುವರು ಬಡಬಡಿಸುವರು ಬಾಯಿಂದ ॥ ೧೩ ॥

ಅರುಹುವರೆ ಪಾಖಂಡವೀರರು ।
ಮರಳೆ ವೇದಕೆ ಮೂಲವಿಲ್ಲೈ ।
ಬರಿದೆ ನಿಷ್ಫಲ ವಾದ ಮಾಡುವರವರು ನಾಸ್ತಿಕರು ॥
ಧರೆಯಲೀಪರಿ ವೇದವೆನುತಲಿ ।
ಯರೆಗಳೆಗೆಯಲಿ ಸಿದ್ಧ ಮಾಳ್ಪೆವು ।
ಕರದಿ ವೀಳೆಯ ಕೊಳ್ಳಿರೈ ವಾದವನು ಮಾಡುವರು ॥ ೧೪ ॥

ನರನೆ ಪಾಖಂಡಿಗಳು ಧರೆಯಲಿ ।
ಪರಿಪರಿಯ ವೇಷಗಳ ಧರಿಪರು ।
ತಿರದ ಕೂದಲ ಕಿತ್ತುವರು ತಿರುಗುವರು ದಿಶೆದಿಶೆಗೆ ॥
ಧರೆಯಲನ್ಯ ದಿಗಂಬರರು ಬಹು ।
ಪರಿಯ ವೇಷದಿ ಪರ್ಯಟಿಸುವರು ।
ಬರಿದೆ ನಿಷ್ಫಲವೆನಿಪುದವರ ವಿತಂಡವಾದವದು ॥ ೧೫ ॥

ಮೃತ್ಯುಮುಖದಲಿ ಹಾಳು ಬೀಳ್ವುದು ।
ಕ್ಷೇತ್ರವಿದು ನೋಡಲಿಕೆ ಭರದಲಿ ।
ಸಾರ್ಥಕವ ಮಾಡುವರೆ ಯೋಗಿಗಳೈದೆ ಯಿತ್ಥಿಪರು ॥
ಮತ್ತೆ ಕೇಳೇಯಾತ್ಮನನ್ನಾ ।
ನತ್ಯಲೋಕಕ್ಕೊಯ್ದು ಯತ್ನವೆ ।
ಸ್ವಾರ್ಥತನದಿಂ ಯೋಗಬಲದಲಿ ಮಾಳ್ಪರೈ ಕೆಲರು ॥ ೧೬ ॥

ಪುರಣಕಂಜುವರಂಜುಬುರುಕರು ।
ಧರಿಪರೈ ಯೇಕಾಂತವಾಸವ ।
ಮರಳಿ ಯಮನಿಯಮಾದಿಸಾಧನಗಳನು ಗ್ರಹಿಸುವರು ॥
ಅರಿಯಲೀಕ್ಷೇತ್ರದ ವಿಚಾರವ ।
ತೊರೆದನೈ ರಾಜ್ಯವನು ಶಂಕರ ।
ತಿರುಗುತಿಹನು ಶ್ಮಶಾನದಲ್ಲಿಯೆ ತೊರೆದುಪಾಧಿಗಳ ॥ ೧೭ ॥

ಹರನು ಕ್ಷೇಳೀ ಕ್ಷೇತ್ರಜ್ಞಾನವ ।
ದೊರಕಿಸುವೆ ಬಿಡೆನೆಂದು ತಾಳ್ದನು ।
ವರಪ್ರತಿಜ್ಞೆಯನವ ದಿಗಂಬರನಾದನೇನೆಂಪೆ ॥

ಸ್ಮರನು ಯೋಗಭ್ರಷ್ಟ ಮಾಡುಳ ।
ಲಿರುವನೆನುತಾತನನು ಸುಟ್ಟನು ।
ಹರನು ಕೇಳೀ ತೆರದಿ ತಪ ಮಾಡಿದರು ಸಾಧಿಸದು ॥ ೧೮ ॥

ಸರಸಿಜಾಸನನಿಂಗೆ ಕೇಳೀ ।
ಪರಮ ಕ್ಷೇತ್ರಜ್ಞಾನತತ್ತ್ವವ ।
ಸರಿಯು ಬೇಕೆಂತಲೆ ಕಣಾ ನಾಲ್ಮೊಗನಾದುವಲಾ ॥
ಅರುಹಲೆಂತೀಪರಿಯಬ್ರಹ್ಮನಿ ।
ಗಿರದು ನೋಡೀ ಕ್ಷೇತ್ರಜ್ಞಾನವು ।
ಧರೆಯಲನ್ಯರಿಗೇನು ಸಾಧ್ಯವೆ ವಾರ್ಥ ನೋಡಿದಿಯಾ ॥ ೧೯ ॥

ಋಷಿಭಿರ್ಬಹುಧಾ ಗೀತಂ ಛಂದೋಭಿರ್ವಿವಿಧೈಃ ಪೃಥಕ್ ।
ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿರ್ವಿನಿಶ್ಚಿತೈಃ ॥ ೪ ॥

ನರನೆ ಕೇಳೈ ಕರ್ಮವಾದಿಗ ।
ಳರುಮತಿಹ ತತ್ತ್ವವನು ಪೇಳ್ವೆನು ।
ಪೊರೆವ ಕ್ಷೇತ್ರವಿದೆಲ್ಲ ಜೀವನ ವಶತೆಯಲ್ಲಿಹುದು ॥
ಧರೆಯೊಳಿದರ ವ್ಯವಸ್ಥೆಯೆಲ್ಲವ ।
ನಿರದೆ ಪ್ರಾಣನಿಗರ್ಪಿಸಿಹರೈ ।
ಯಿರುವರೀ ಮಂದಿರದಿ ಪ್ರಾಣಗೆ ಸೋದರರು ನಾಲ್ಕು ॥೨೦॥

ನರನೆ ಮೊದಲನೆಯವನವಾನನು ।
ಯೆರಡನೆಯನಾ ವ್ಯಾನನೈ ಸೋ- ।
ದರನು ಮೂರನೆಯವ ಸಮಾನನುದಾನ ನಾಲುಕನೆ ॥
ಇರುವರೀಪರಿ ನಾಲ್ಕು ಸೋದರ- ।
ರುರುತರದೊಳೆಚೆಪಡೆ ತಾವ್ ಸೈ- ।
ಮುರಿದು ಕೆಲಸವ ಮಾಳ್ಪರನುದಿನವೆಂತು ವರ್ಣಿಸಲಿ ॥೨೧॥

ಅಳುನೆಲಸನ ಮಾಳ್ಪರೀಪರಿ ।
ಮಾಳುಪರೊ ಅಲಸ್ಯ ನೆಂಬುದ ।
ಲೀಲೆಯಿಂ ನೋಡುವರೆ ಮನವೆ ಕೃಷೀವಲನೆ ತಿಳಿಯೆ ॥
ಮೇಳವಿಪುದೈ ಹತ್ತು ಯೆತ್ತುಗ- ।
ಳೂಳಿಗವ ಮಾಳ್ಪುವು ನಿರಂತರ ।
ಹೇಳಲೇನದ ಹತ್ತು ಯಿಂದ್ರಿಯನೆತ್ತುಗಳು ಸೋತೆ ॥ ೨೨ ॥

ರಾತ್ರಿ ಹಗಲೆನ್ನದಲೆ ಜೀವನು ।
ಯೆತ್ತುಗಳಿಗಾಕೆಲಸ ಕೊಡುವನು ।
ಕಿತ್ತು ಕಸಕಡ್ಡಿಗಳ ಕ್ಷೇತ್ರವ ಹಸನ ಮಾಡುವನು ॥

ಮತ್ತೆ ಶಿಷ್ಯಯದ ಗೊಬ್ಬರವ ತಾ- ।
ನಿತ್ತು ಕಾರ್ಯದ ಪೈಗೆಯ ಬಿಡುತಲಿ ।
ಬಿತ್ತುವನು ಕ್ಷೇತ್ರದಲಿ ನೋದನ್ಯಾಯ ಬೀಜವನು ॥ ೨೩ ॥

ಮರಳಿ ದುಷ್ಕರ್ಮಗಳ ಗೊಬ್ಬರ- ।
ವಿರಿಸಿ ಕ್ಷೇತ್ರದ ಸಾಗ ಮಾಡಲು ।
ಬರುವುದೈ ಬೀಜಾನುಸಾರದಿ ಪಾಪ ಫಲರಾಶಿ ॥
ಒರುವುದೈ ಕೋಟ್ಯನಧಿ ಸಂಖ್ಯೆಯು ।
ವರೆಗೆ ಫಲಪ್ರಣ್ಣುವರೆ ಜೀವನೆ ।
ಪರಿಸರಿಯು ಬಿಳಿಗೆಳನು ವರ್ಣಿಸಲೆಂತು ಕೌಂತೇಯ ॥ ೨೪ ॥

ಪುರುಷನಧವಾ ವಿಹಿತಕರ್ಮಾ- ।
ಚರಣವುಗೆಯುನು ಸಾಧಿಸುತ್ತಲಿ ।
ಭರದಿ ಸತ್ಕ್ರಿಯೆ ಬೀಜ ಪೆತ್ತಲು ಸುಖದ ಬೆಳೆ ಬಹುದು ॥
ನರನೆ ಕೇಳೈ ಸಾಂಖ್ಯನೇತ್ತರು ।
ಭರವಸವನಿಡಲಾರರಿದರ- ।
ಲ್ಲರುಮವರು ಸ್ವಾಧೀನವಿಲ್ಲಾ ಕ್ಷೇತ್ರ ಜೀವನಿಗೆ ॥ ೨೫ ॥

ಯಾರದಿಹುದೀ ಕ್ಷೇತ್ರನೆಂದು ವಿ- ।
ಚಾರಿಸಿದರಾವ್ ಪೇಳ್ವೆನೆನುವರು ।
ದಾರಿ ನಡೆಯುವ ಜೀವನಭ್ಯಾಗತನು ಕ್ಷೇತ್ರದಲಿ ॥
ಚಾರು ವುಂಬಳಿಗಾರ ಪ್ರಾಣನ- ।
ದಾರತನದಲಿ ಮಾಳ್ಪನೈ ಸ- ।
ತ್ಕಾರವನು ಹಗಲಿರುಳು ಜಾಗ್ರತ್ತಿರುವ ಕ್ಷೇತ್ರದಲಿ ॥ ೨೬ ॥

ಆಗುಹುವರು ಸಾಂಖ್ಯಜ್ಞರೀಪರಿ ।
ನವನೆ ಪ್ರಕೃತಿಯುನಾದಿಸಿದ್ಧವು ।
ಯಿರುವುದೀ ಕ್ಷೇತ್ರದಲಿ ವೃತ್ತಿಯು ಸರ್ವಕಾಲದಲಿ ॥
ಪರಿಪರಿಯ ಸಾಂಗ್ರಿ ಮನೆಯಲೆ ।
ಯಿರುವ ಕಾರಣವೆಲ್ಲ ಕ್ಷೇತ್ರದ ।
ನಿರುತ ವ್ಯವಸಾಯವನು ಮನೆಯಲಿ ಮಾಳ್ಪಳೀಪ್ರಕೃತಿ ॥ ೨೭ ॥

ನರನೆ ಕೇಳೀ ಕ್ಷೇತ್ರದತಿ ಪರಿ ।
ಪರಿಯ ಬೆಳೆಯನು ಮಾಡಬೀಕೆಗೆ ।
ಯಿರುವರೈ ತ್ರಿಗುಣಗಳು ರಸವುತ್ತರುತ್ತಮರು ॥
ನವನೆ ಗುಣರಜ ಬಿತ್ತುತಿರುವ ।
ಮರಳಿ ಸತ್ವವನು ಕಾಯುತಿರುವನು ।
ಬರಲು ಬೆಳೆ ತಮನೆಲ್ಲ ಕಿತ್ತುತ ರಾಶಿ ಮಾಡುವನು ॥ ೨೮ ॥

ಮಾಡುತ ಮಹತ್ತತ್ವಖಳವನು ।
ಹೂಡಿ ಕಾಲಾತ್ಮಕದ ಹೋರಿಯ ।
ಮಾಡುತಿರೆ ಮಳಣಿಯನು ಬಹುದವ್ಯಕ್ತರಾಶಿಯದು ॥
ಆಡಲೀಪರಿ ಸಾಂಖ್ಯವೇತ್ತರು ।
ರೂಢಿಯಲಿ ಸಂಕಲ್ಪವಾದಿಗ ।
ಳಾಡುವರು ಸಾಂಖ್ಯಜ್ಞಮೂಢರು ತಿಳಿಯಲೈ ತತ್ವ ॥ ೨೯ ॥

ಅರರೆ ಸಾಂಖ್ಯರ ಕಲ್ಪನೆಗಳೈ ।
ಯಿರುವುವರ್ವಾಚೀನವೆಲ್ಲವು ।
ಯಿರುವುದೇನಾಬ್ರಹ್ಮತತ್ವದ ಮುಂದೆ ಯೀ ಪ್ರಕೃತಿ ॥
ನಿರುತವೆಂತೀಕ್ಷೇತ್ರವಿರುವುದು ।
ಪರಿಯನೆಲ್ಲವ ನಿಮಗೆ ನಾವ ।
ನ್ನರಿಸಿ ಪೇಳುವೆವೆಂದು ಸಾಂಕಲ್ಪಿಕರು ಪೇಳುವರು ॥ ೩೦ ॥

ಕೇಳಿರೈ ಲಯರೂಪಮಂಚದಿ ।
ಈಲೆಯಿಂದವ್ಯಕ್ತಹಾಸಿಗೆ ।
ಮೇಲೆ ನಿದ್ರೆಯ ಮಾಡುತಿದ್ದನು ಗಾಢಸಂಕಲ್ಪ ॥
ತಾಳಿದನು ಜಾಗ್ರತೆಯು ಫಕ್ಕನೆ ।
ಈಲೆಯಿಂದಿಚ್ಛಾನುರೂಪದ ।
ಮೇಳವಿಸಿತೈ ನಿಧಿಯು ನಿಜವ್ಯಾಪಾರತತ್ಪರಗೆ ॥ ೩೧ ॥

ಇತ್ತಲಾ ಸಂಕಲ್ಪ ನಿರ್ಗುಣ ।
ಹುತ್ತೆ ಖಟಪಟಿ ಮಾಡಿದಾಕ್ಷಣ ।
ವಾತ್ರಿಭುವನವಿಶಾಲ ನೋಡುದ್ಯಾನ ದೊರಕಿತಲಾ ॥

ಮತ್ತೆ ಕೇಳೈ ಪಂಚಭೂತಸ ।
ಮಸ್ತವನ್ನೇಕತ್ರ ಮಾಡುತ ।
ವಿಸ್ತರಿಸಿದನು ನಾಲ್ಕು ಭೇದದ ಪ್ರಾಣಿನಿಚಯಗಳ ॥ ೩೨ ॥

ವರಜರಾಯುಜಸ್ವೇದಜಾಂಡಜ ।
ಮರಳಿ ಯುದ್ಭಿದವೆಂಬ ನಾಲ್ಕೀ ।
ಪರಿಯ ಭೇದಗಳನ್ನು ಸೃಷ್ಟಿಸಿದನು ಸುಗಾತ್ರದಲಿ ॥
ತಿರಿಗಿ ಕೇಳಾ ಪಂಚಭೂತದ ।
ಪರಿಪರಿಯ ಬಂಧನವ ಮಾಡುತ ।
ವಿರಚಿಸಿದನುಪಭೇದಗಳನಾ ಮೂಲಭೇದದಲಿ ॥ ೩೩ ॥

ಚಾರುಪ್ರತ್ಯಪಭೇದದಲ್ಲಿಂಪೆ ।
ಮೇರೆ ಕರ್ಮಾಕರ್ಮವೆಂಬುದ ।
ನೇರಿಸಿದನೈ ಕಲ್ಲಿನಿಂದಲಿ ಯುಭಯಸಾರ್ಥದಲಿ ॥
ಧಾರುಣಿಯಲೀತೆರದಿ ಬಹುಪರಿ ।
ಚಾರುಪಶುಪಕ್ಷ್ಯಾದಿವನಗಳ ।
ನಾರಭಿಸಿದನು ಸೃಷ್ಟಿಸುಂದರವಾಗಿ ರಂಜಿಸಿತು ॥ ೩೪ ॥

ಮರಳಿ ಸಂಕಲ್ಪನು ಪ್ರಭಾವದಿ ।
ನಿರುತ ನಡೆಯುವ ಬಂದಿಯಿಲ್ಲದ ।
ಮರಣಜನ್ಮಗಳೆಂಬ ದಾರಿಗಳೆರಡ ಮಾಡಿದನು ॥
ಭರದಲೀಪರಿ ಸೃಷ್ಟಿ ವಿರಚಿಸಿ ।
ಬರುತಿಹಂಕಾರದಲಿ ಯೈಕ್ಯವ ।
ಧರಿಸಿ ಬುದ್ಧಿದ್ವಾರದಿಂದಾಡಿಸಿದನಾಟವನು ॥ ೩೫ ॥

ಧರೆಯಲೀಪರಿ ಸರ್ವಸಚರಾ ।
ಚರವ ತಾನಾಡಿಸುತ ಮೆರೆದನು ।
ಬರುತ ಸಂಕಲ್ಪನು ಚಿದಾಕಾಶದಲಿ ಬೆಳೆದನಲಾ ॥
ಇರುವುದೈ ಸಂಕಲ್ಪವದರಿಂ ।
ಧರೆಯೊಳಗೆ ಸಂಸಾರಕಾರಣ ।
ವರುಹುವರು ಸಂಕಲ್ಪವಾದಿಗಳೀತೆರದಿ ಜಗದಿ ॥ ೩೬ ॥

ಕೇಳುತೀಮುಕ್ತಾಫಲಂಗಳ ।
ಒಳಗೆ ಸಂಕಲ್ಪವಾದಿಗ ।
ಳಾಲಿಸಿರಿ ನಿಜತತ್ವವೆಂದು ಸ್ವಭಾವವಾದಿಗಳು ॥
ಹೇಳಲಾರಂಭಿಸಿದರೈ ನಿಜ ।
ಶೀಲದಂಡದಿ ತಮ್ಮ ತತ್ವವ ।
ಹೇಳುವೆನು ಕೌಂತೇಯ ನಿನಗೀಜನರ ಮಾತುಗಳ ॥ ೩೭ ॥

ಇರುಪಿಲ್ಲೈ ವಿದ್ವನ್ಮಣಿಗಳೇ ।
ಯಿರಲಿ ನಿಮ್ಮಯ ಮತವು ನಿಮ್ಮೊಳು ।
ಹರಿಯ ಬಾರದು ನಿಮ್ಮ ಮುಕ್ತಾಫಲದ ಗಂಪಿಲ್ಲಿ ॥
ನಿರುತವೀ ಪರಬ್ರಹ್ಮದೂರಲಿ ।
ಮೆರೆಯಲೀಸಂಕಲ್ಪವಸ್ತುವು ।
ಅರಿಯ ಬಾರದೆ ಸಾಂಖ್ಯರೆನ್ನುವ ಪ್ರಕೃತಿ ನಿಜವೆಂದು ॥೩೮॥

ಇರಲಿ ಸಾಕು ವಿತಂಡವಾದವು ।
ಒರಿದೆ ನಿಮಗೀಶ್ರಮವಿದೇತ- ।
ಕ್ಕೆರುವುದೆಂತೀ ನಿಮ್ಮ ಪ್ರಕರಣ ಪೇಳ್ವೆವಾಷ್ಟಿಮಗೆ ॥
ಮೆರೆವ ತಾರಾಗಣಕೆ ಗಗನದೊ- ।
ಳಿರುವುದೇನಾಧಾರ ಮೇಘದಿ ।
ಭರಣ ಮಾಡಿಹರಾರು ನೀರನು ಹೇಳಿರೈ ನಮಗೆ ॥ ೩೯ ॥

ಮೇಲುಗಟ್ಟಿನ ತೆರದಿ ಗಗನವು ।
ಜೋಲು ಬೀಳದ ತೆರದಲೆಳೆದರು ।
ಹೇಳಿರೈ ಯಾರೆಂತ ಹಾಕಿದರಾರು ಮೇಲ್ಕಟ್ಟ ॥
ಗಾಳಿ ಸಂತತ ಬೀಸುತಿಹುದೈ ।
ಹೇಳಿದರು ಯಾರಿದಕೆ ಬೀಸಲು ।
ಹೇಳಿರಾರೀರೋಮಬೀಜವ ಚಿತ್ತಿದರು ನಿಜದಿ ॥ ೪೦ ॥

ಒತ್ತುವೆದೆ ಸಾಗರವು ನೀರೆರೆ- ।
ಯುತ್ತ ತುಂಬುವರಾರು ಸಾಗರ ।
ಮತ್ತೆ ಮಳೆಧಾರೆಯನು ಹುಟ್ಟಿಸರಾರು ಜಗದೊಳಗೆ ॥
ಕ್ಷೇತ್ರವೀಪರಿ ಸಿದ್ಧತತ್ವವು ।
ವೃತ್ತಿಯುಂಬಳಿ ಯಿಲ್ಲವಾರಿಗು ।
ಚಿತ್ತಿದಂದದಿ ಬೆಳೆಯು ಬಹುದು ಸ್ವಭಾವಸಿದ್ಧವಿದು ॥೪೧॥

ಕೇಳುತೀಪರಿ ಮಾತ ಸಿಟ್ಟಲಿ ।
ಕಾಲವಾದಿಗಳೆದ್ದರಾಕ್ಷಣ ।
ಹೇಳಲಾರಂಭಿಸಿದರೈ ತಮ್ಮಯ ವಿಚಾರಗಳ ॥
ಕೇಳಿದೆವು ನಿಮ್ಮಯ ಕುತರ್ಕವ ।
ನಾಲಿಸಿದರದು ಸತ್ಯ ತೋರದು ।
ಕಾಲನಿಗೆ ಸ್ವಾಧೀನವಲ್ಲವೆ ಕ್ಷೇತ್ರ ನೋಡಿದರೆ ॥ ೪೨ ॥

ತಿಳಿತಿಳಿದು ಮಾಹಾತ್ಮ್ಯ ಕಾಲನ ।
ತಳೆದು ಗರ್ವವ ಮನದೊಳಾತನ ।
ಹಳಿದು ಬೈವರು ಕಾಲನೊಳು ಬಡಿದಾಡಲೆತ್ನಿಪರು ॥

ಇಳೆಯೊಳಿದು ಸಿಂಹನ ಗುಹೆಯು ಪರಿ ।
ತಿಳಿಯಲಿಹುದು ಭಯಂಕರವಲಾ ।
ಛಳವ ಮಾಡುವಿರೇಕೆ ನೀವಜ್ಞಾನಪೀಡಿತರು ॥ ೪೩ ॥

ತಿಂದು ತೇಗುವನಿವನು ಕಲ್ಪವ ।
ಮುಂದೆ ಬ್ರಹ್ಮನ ಸತ್ಯಲೋಕವ ।
ತಿಂದು ಸ್ವರ್ಗಾರಣ್ಯ ಸೇರುತ ಲೋಕಪಾಲರನು ॥
ಕೊಂದು ಬಿಡುವನು ದಿನದಿನದೊಳವ ।
ಮುಂದೆ ಯೆಂಟನು ದಿಗ್ಗಜಂಗಳ ।
ಕೊಂದು ಬಿಡುವನು ಕಾಲನನು ಗೆದ್ದವರು ಯಾರಿಹರು ॥ ೪೪ ॥

ಕಾಲನಂಗದ ಗಾಳಿ ಬೀಸಲು ।
ಧೂಳಿಯಂದದಿ ಬೀಮಮೃಗಗಳು ।
ಬೀಳುವುವು ಕೇಳ್ ಜನ್ಮಮರಣಗಳೆಂಬ ಕಂದಕದಿ ॥
ಮೇಲೆ ಭ್ರಮಣವ ಮಾಳ್ಪವಲ್ಲಿಯೆ ।
ತಾಳುವುವು ನಿರ್ದೇವಸ್ಥಿತಿಯನು ।
ಕಾಲಹಸ್ತಪ್ರತಲವತಿನಿಸ್ತೀರ್ಣವಿಹುದಲ್ಲ್ಯೆ ॥ ೪೫ ॥

ಪಿಡಿದು ಜಗದಾಕಾರ ಹಸ್ತಿಯ- ।
ನೊಡನೆ ಕಾಲ ಸ್ವಹಸ್ತಪ್ರತಲದ- ।
ಲಡಗಿಸಿಹನ್ಯೆ ಕಾಲಪಸ್ತದ ನೋಡು ವಿಸ್ತಾರ ॥
ನುಡಿವರಾಕಾರಣದಿ ಕಾಲನು ।
ಪೊಡವಿಯಲಿ ಸ್ವಾತಂತ್ರ್ಯಸತ್ತೆಯ ।
ನಡೆಸುವನು ಕಾಲಂಗೆ ವಿರುವರಾರು ಮೂರ್ಜಗದಿ ॥ ೪೬ ॥

ನರನೆ ಕೇಳೀತೆರದಿ ಕ್ಷೇತ್ರದ ।
ಪರಿಯನರಿಯರು ಶಾಸ್ತ್ರವೇತ್ತರು ।
ಮೆರೆವುವೈ ಪರಿಪರಿಯ ಭಿನ್ನಮತಂಗಳೀ ಜಗದಿ ॥
ಪರಿಪರಿಯ ಭವತಿನಭವತಿಗಳು ।
ಪೆರೆಸಿದರು ನೈಮಿಷವನದಿ ಋಷಿ- ।
ವರರು ಪೆಸುತಲಿ ಘೋಷಿಪುದು ಪೌರಾಣಸಂತತಿಯು ॥ ೪೭ ॥

ವೇದಗಳು ಪರಿಪರಿಯ ಛಂದದಿ ।
ವಾದ ಮಾಡುತಲಿಹುವು ತತ್ತ್ವವ ।
ಮೇದಿನಿಯಲೀವರೆಗೆ ಕ್ಷೇತ್ರದ ನ್ಯಾಯ ತೀರದಲಾ ॥
ವೇದಸಂಗತಬ್ರಹ್ಮಸೂತ್ರಗ- ।
ಳಾದರಕೆ ಸತ್ಪಾತ್ರ ಪಾವನ- ।
ವಾದರೇನೈ ಕ್ಷೇತ್ರನ್ಯಾಯವು ತಿಳಿಯ ಬಾರದಲಾ ॥ ೪೮ ॥

ದೂರದರ್ಶಿಗಳಾದ ಸುಕವಿಗ- । ಯಾರದಿಹುದೀಕ್ಷೇತ್ರವೆಂಬುದ ।
ಳಾರಭಿಸಿದರು ಕ್ಷೇತ್ರನಿರ್ಣಯ । ಸಾರತತ್ತ್ವದ ನೆಲೆಯನರಿಯರು ।
ಬಾರದಾಯಿತು ಸಿದ್ಧಿ ವಾದದಿ ದಣಿದುಕೂತರಲಾ ॥ ಯಾರಿಗಾದರು ಬಾರದೈ ಸ್ವಾಧೀನವೀಕ್ಷೇತ್ರ ॥ ೪೪ ॥

ಪರಿಯಿದಾದರು ಕ್ಷೇತ್ರವೆಂಬುದು ।
ಯಿರುವುದೇನೆಂಬುದನು ನಾ ವಿ- ।
ಸ್ತರಿಸಿ ಪೇಳುವೆನೆನ್ನ ಸುವಿಚಾರಗಳ ಕೇಳುವ್ರದು ॥

ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ ।
ಇಂದ್ರಿಯಾಣಿ ದಶೈಕಂ ಚ ಪಂಚ ಚೇಂದ್ರಿಯಗೋಚರಾಃ ॥ ೫ ॥

ಇಚ್ಛಾ ದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾ ಧೃತಿಃ ।
ಏತತ್ ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಮ್ ॥ ೬ ॥

ನರನೆ ನಿನಗಾನರುಹಿದೆನು ವಿ- ।
ಸ್ತರಿಸಿ ಮೂವತ್ತಾರುತತ್ತ್ವದ ।
ಪರಿಯನೆಲ್ಲವ ಪಂಚಭೂತವಹಂಕೃತಿಯು ಬುದ್ಧಿ ॥ ೫೦ ॥

ಜ್ಞಾನಕರ್ಮೇಂದ್ರಿಯದಶಕ್ಕೈ । ನರನೆ ಕಾಷ್ಠದೊಳಗ್ನಿ ಗುಪ್ತದೊ- ।
ಮಾನಸವು ಯಿಂದ್ರಿಯದಶಕದ ನಿ । ಳಿರುವುದಲ್ಲವೆ ನೋಡಲೀಪರಿ ।
ಧಾನ ವಿಷಯದ ದಶಕ ಮೇಣವ್ಯಕ್ತ ಸುಖದುಃಖ ॥ ಯಿರುವನೈ ಹಂಕಾರ ಮಾಯೆಯ ಹೊಟ್ಟೆಯಲಿ ಗುಪ್ತ ॥
ಮೇಣು ಕಾಮನೆ ದ್ವೇಶವಾಪರಿ । ನರಗೆ ಜೀರ್ಣಜ್ವರ ಕುಪಥ್ಯದಿ ।
ಕ್ಷೋಣಿಯಲಿ ಸಂಘಾತ ಚೇತನೆ । ಹೊರಗೆ ವ್ಯಾಪಿಸಿ ಪಿಡುವ ಪರಿಯಲಿ ।
ಮೇಣು ಧೃತಿ ಯೀತೆರದ ಮೂವತ್ತಾರುತತ್ತ್ವಗಳು ॥೫೧॥ ಬರಲು ದೇಹಾಕಾರ ಭೂತಂಗಳ ನಿಕರ್ಷಣದಿ ॥ ೫೪ ॥

ಇರುವುದೀಪರಿ ಮೇಳ ಕ್ಷೇತ್ರದಿ । ಒಳಗೆ ಮಾಯೆಯೊಳಿದ್ದ ತತ್ತ್ವವ್ರ ।
ನರನೆ ನಿನಗಿದ ವಿಸ್ತರಿಸಿ ನಾ- । ತುಳುಕಿ ದೇಹವನೆಲ್ಲ ದಿಶೆಯು- ।
ನರುಹುವೆನು ವರ್ಣನೆಯ ಸ್ಪಷ್ಟೀಕರಿಸಿ ಬೀರಾಗಿ ॥ ಲ್ಲಿಳೆಯೊಳಗೆ ಕುಣಿಸುವುದಹಂಕಾರವ್ರ ಕಣಾ ನಿಜದಿ ॥
[**ಮಹಾಭೂತಾನಿ**] ನರನೆ ನೆಲ ಜಲ ತೇಜ ವಾಯುವು । ಇಳೆಯೊಳಿದು ಬಹು ಚಿತ್ರವಿಹುದೈ ।
ತಿರಿಗಿ ಕೇಳಾಕಾಶವೆಂಬೀ- । ತಿಳಿಯದಜ್ಞರ ಗೊಡವೆ ನೇರದು ।
ಪರಿಯೊಳಿಹುವೈ ಪಂಚಭೂತಗಳೆನಿಪ ತತ್ತ್ವಗಳು ॥ ೫೨ ॥ ತಿಳಿಪೆ ಸುಜ್ಞಾನಿಗಳ ಕೊರಳನೆ ಹಿಸುಕಿ ತ್ರಾಸಿಪುದು ॥ ೫೫ ॥

[**ಅಹಂಕಾರಃ**] ನರನೆ ಜಾಗ್ರದವಸ್ಥೆಯಲ್ಲಡ- । [**ಬುದ್ಧಿಃ**] ಅರುಹಿದನು ಯದುರಾಜಕೃಷ್ಣನು ।
ಗಿರುವುದಲ್ಲನೆ ಸ್ವಪ್ನ ನೋಡಲು । ನರನೆ ಬುದ್ಧಿಯ ಲಕ್ಷಣಂಗಳ ।
ಮೆರೆವನಲ್ಲವೆ ಚಂದ್ರ ಗುಪ್ತನಮಾವಸೀದಿವಸ ॥ ಗುರುತ ಹಿಡಿಯುವ ಜಿನ್ನಗಳ ನಾನರುಹುವೆನು ನಿನಗೆ ॥
ಇರುವುದಲ್ಲವೆ ಜಾಲಕನೊಳಾ- । ಸ್ಮರನ ದರ್ಪವು ವೃದ್ಧಿಯಾಗಲು ।
ತರುಣಭಾವವು ಗುಪ್ತತನದಲಿ । ಮೆರೆವ ನಿಖಿಲೇಂದ್ರಿಯಸಹಾಯದಿ ।
ಪರಿಮಳವ್ರ ಹೂಮೊಗ್ಗೆಯಲ್ಲಡಗಿಹುದು ಗುಪ್ತದಲಿ ॥೫೩॥ ತರುವ್ರದೈ ವಿಷಯಗಳ ನಿಕರವ ಸೋಲಿಸುತ ಭರದಿ ॥ ೫೬ ॥

ನರಗೆ ಸುಖದುಃಖಾನುಭವವದು ।
ದೊರೆವುದಾದರೆ ಭೋಗಮಾರ್ಗದಿ ।
ಯೆರಡರಲಿ ಯೋಗ್ಯತೆಯು ಹಿರಿದಿಹುದಾಗೆಂಬುದನು ॥
ಅರವು ಕೊಡುವುದು ಬುದ್ಧಿ ಸಂತತ- ।
ವಿರುವುದೀಪರಿ ದುಃಖವಿದು ಸುಖ ।
ದುರಿತವಿದು ಮೇಣ್ ಪುಣ್ಯವಿದುವೆನುತರವು ಕೊಡುವುದಲಾ ॥ ೫೭ ॥

ಇಷ್ಟವಾವುದನಿಷ್ಟವಾವುದು ।
ಭ್ರಷ್ಟವಾವುದು ಶ್ರೀಷ್ಠವೇನು ಕ- ।
ನಿಷ್ಠವಾವುದು ವೃಚ್ಛವಾವುದು ತಿಳಿಸುವುದು ನಿಜದಿ ॥
ಸೃಷ್ಟಿಯಲ್ಲೀ ಬುದ್ಧಿಯೋಗದಿ ।
ದೃಷ್ಟಿಗೋಚರ ವಿಷಯ ಬರುವುದು ।
ಯೆಷ್ಟಹೇಳಲಿ ಜ್ಞಾನತತ್ತ್ವದ ಮೂಲವಿದು ಬೇರು ॥ ೫೮ ॥

ಸತ್ತ್ವಗುಣದಭಿವೃದ್ಧಿಕಾರಣ- ।
ವಾತ್ಮಜೀವರ ಯೋಗದರ್ಪಣ ।
ಪೃಥ್ವಿಯಲ್ಲೀತೆರದ ಲಕ್ಷಣ ಬುದ್ಧಿಗಿರುವುದಲಾ ॥
[ಅವ್ಯಕ್ತಮೇವ ಚ] ಪಾರ್ಥನಿನಗವ್ಯಕ್ತ ಪೇಳುವೆ ।
ಚಿತ್ತವಿಸು ಜಗದೊಳಗೆ ಪ್ರಕೃತಿಯೆ- ।
ನುತ್ತಮಾಖ್ಯರು ಕರೆವ ತತ್ತ್ವವೆ ಯಿರುವುದವ್ಯಕ್ತ ॥ ೫೯ ॥

ನರನೆ ನಿನಗಾನೊರೆದೆ ಪೂರ್ವದೊ- ।
ಳೆರಡುಪರಿಯನು ಸಾಂಖ್ಯಯೋಗಗ- ।
ಳಿರುವುದೇನೈ ನಿನಗೆ ನೆನಪಿಲಿ ಸಪ್ತಮಾಧ್ಯಾಯ ॥
ಎರಡನೆಯದದು ಜೀವದಶೆಯೆಂ- ।
ದೊರೆವೆನಿದನೇ ವೀರಶ್ರೇಷ್ಠನೆ ।
ಕರೆವರೈ ಪರ್ಯಾಯದಿಂದವ್ಯಕ್ತನಾಮದಲಿ ॥ ೬೦ ॥

ಬರಲು ರವಿಯುದಯಾಚಲಕನಂ- ।
ತರದಿ ತಾರಾಗಣಗಳಿರುವುವೆ ।
ತರಣಿ ಯಸ್ತಾಚಲಕೆ ಪೋಗಲು ಪ್ರಾಣಿಮಾತ್ರಗಳು ॥
ಭರದಿ ನಿಜವ್ಯವಹಾರಗಳ ಸಂ- ।
ಹರಿಪುವಲ್ಲವೆ ನೋಡು ದೇಹಕೆ ।
ಮರಣ ಬರಲಾ ದೇಹ ಹಿಡಿದಾವಾಸನೆಯ ವರೆಗೆ ॥ ೬೧ ॥

ಇರುವ ಸರ್ವವಿಕಾರಸಂತತಿ- ।
ಯಿರುವುದಲ್ಲವೆ ಯಡಗಿ ಕರ್ಮದಿ ।
ಮರವು ಬೀಜದೊಳಡಗಿರುವುದಲ್ಲವೆ ಧನಂಜಯನೆ ॥
ನರನೆ ಕೇಳಾಪಂಚಭೂತಗ- ।
ಳೆರದೆ ಸ್ಥೂಲಾಕಾರ ತೊರೆಯುತ ।
ಧರಿಸಿ ಸೂಕ್ಷ್ಮಸ್ವರೂಪವಂತರ್ಧಾನ ತಾಳುವೆವೊ ॥ ೬೨ ॥

ಇರುವುದದುವವ್ಯಕ್ತರೂಪವು ।
ನರನೆ ನಿನಗೀಗಿಂದ್ರಿಯಂಗಳ ।
ಪರಿಪರಿಯ ಭೇದಗಳ ವಿಸ್ತರಿಸುವೆನು ಕೇಳುವುದು ॥
[ಇಂದ್ರಿಯಾಣಿ ದಶ] ನರನೆ ಕಿವಿಕಣ್ಣುಗಳು ಚರ್ಮವು ।
ಮರಳಿ ನಾಸಿಕೆ ಜಿಹ್ವೆಯೆಂಬೀ- ।
ಪರಿಯ ಜ್ಞಾನೇಂದ್ರಿಯಗಳಿರುವುವು ಪಂಚಸಂಖ್ಯಾಕ ॥ ೬೩ ॥

ಬರಲು ಪಂಚೇಂದ್ರಿಯದೊಳೈಕ್ಯವು ।
ನಿರುಪವಿವುಗಳ ದ್ವಾರದಿಂದಲೆ ।
ಬರುವುದೈ ಬುದ್ಧಿಗೆ ವಿಚಾರವು ದುಃಖ ಸುಖವೆಂಬ ॥
ಕರಯುಗಳ ಪದಯುಗಳ ವಾಚೆಯು ।
ಮರಳಿ ಗುದಶಿಶ್ನಗಳು ಯೆಂಬೀ- ।
ಪರಿಯ ಕರ್ಮೇಂದ್ರಿಯಗಳಿರುವುವು ಪಂಚಸಂಖ್ಯಾಕ ॥ ೬೪ ॥

ನರಶರೀರದಿ ಕರ್ಮಶಕ್ತಿಯು ।
ಪೆರೆವಳಲ್ಲವೆ ಪ್ರಾಣರಮಣಿಯು ।
ತೊರಗೊಳಗೆ ಕರ್ಮೇಂದ್ರಿಯದ್ವಾರದಲಿ ಚರಿಸುವಳು ॥
ನರನೆ ಕೇಳೀತೆರದಿ ನಿನಗಾ- ।
ನೊರೆದೆನ್ನೆ ಪರಿಪರಿಯ ಯಿಂದ್ರಿಯ- ।
ಕರಣಿಗಳ ನಿನಗಾಯ್ತೆ ಯಿಂದ್ರಿಯವೃಂದದ ಜ್ಞಾನ ॥ ೬೫ ॥

[ವಿಕಂ ಚ] ಮನವಿದೇನಿಹುದೆಂದು ವಾಸವ- ।
ತನಯ ನಿನಗಾನೊರೆವೆನೀಕ್ಷಣ ।
ವಿನುಗುತಿಹುದು ರಜೋಗುಣಸ್ಕಂಧದಲಿ ಕೌಂತೇಯ ॥
ವಿನುಗುತಿಹುದೈ ಬುದ್ಧಿಯಿಂದ್ರಿಯ- ।
ಗಣವು ಕೂಡಿಹುದೆಲ್ಲಿಯಲ್ಲಿಯೆ ।
ನಿನಗೆ ನಾ ವಿಸ್ತರಿಸಿನಿದ ದೃಷ್ಟ್ಯಾಂತಪೂರ್ವಕದಿ ॥ ೬೬ ॥

ನೀಲವಿಹುದಾಕಾಶವದರಲಿ ।
ಹೇಳು ನಿಜವೇನಿಹುದು ವರ್ಣವು ।
ಯೇಳುವುವು ಮೃಗಜಲದಿ ತೆರೆಗಳ ಮೇಲೆ ತೆರೆಯಲ್ಲಿ ॥
ಗಾಳಿ ಬೆಳಗಲು ವ್ಯರ್ಥವಾಪರಿ ।
ಕೇಳು ಮನದ ಸ್ವರೂಪವೀಪರಿ ।
ಮೇಳವಿಸಿದರೆ ಶುಕ್ರಕೋಣಿತ ನರಶರೀರದಲಿ ॥ ೬೭ ॥

ಈ ದುತತ್ತ್ವಂಗಳಿಗೆ ಯಾಕೃತಿ ।
ಯೈದೆ ಬರುವುದು ವಾಯುತತ್ತ್ವದ ।
ಭೇದದಿಂದಲೆ ಹತ್ತುಪ್ರಾಣಪ್ರಕಾರವಾಗುವುವು ॥
ಹೇ ಧನಂಜಯ ಪಂಚಪ್ರಾಣಗ- ।
ಳಾದವುವು ವೃಸಪ್ರಾಣಪಂಚಕ- ।
ವಾದುದೀಪರಿ ಹತ್ತುಪ್ರಾಣಪ್ರಕಾರ ಕಲಿಪಾರ್ಥ ॥ ೬೮ ॥

ಹತ್ತುಭಾಗಗಳೈದೆ ಯೊಸರಿ ।
ಸತ್ಯ ನಿಜಧರ್ಮಪ್ರಕಾರದಿ ।
ವಸ್ತಿಮಾಡುವುವೀಶರೀರದ ಭಾಗಭಾಗದಲಿ ॥
ಹತ್ತಿರುವುದೈ ಚಂಚಲತ್ವವೆ ।
ನುತ್ತ ವರ್ಧಕವಾರಜೋಗುಣ ।
ನಿತ್ಯ ಬುದ್ಧಿಯ ಹೊರಗಹಂಕಾರದ ಯೆದೆಯ ಮೇಲೆ ॥೬೯॥

ಇಂತು ಮೆರೆವುದು ಮಧ್ಯಭಾಗದಿ ।
ಯೆಂತು ಹೆಸರಿದು ಯೋಗ್ಯವೆಂಬುದ- ।
ನಾಂ ತಿಳಿಯೆ ಮನವೆಂಬ ಹೆಸರಿದು ವ್ಯರ್ಥ ಭ್ರಮಮೂಲ ॥
ಕುಂತಿತನಯನೆ ಕಲ್ಪನಾಮಯ ।
ಸಂತತದೊಳಿಹುದದರಯೋಗದಿ ।
ಬಂತು ಬ್ರಹ್ಮಗೆ ಜೀವದಶೆಯಿದು ನೋಡು ಕೌಂತೇಯ॥೭೦॥

ಸರುವಗೋಷ್ಟಿಗೆ ಮೂಲಕಾರಣ- ।
ವಿರುವುದೈ ವಾಸನೆಯೆ ಜೀಜವು ।
ನಿರುತವಿದಹಂಕಾರನೊಡನಾಡುವುದು ಸ್ವರ್ಧೆಯನು ॥
ಭರದೊಳಿಚ್ಛೆಯ ವರ್ಧಿಸುವುದಿದು ।
ನರನೆ ಕೇಳಾಶೆಯನು ಪ್ರಬಲಿಸಿ ।
ಕೆರಳಿಸುವುದೈ ವಿವಿಧಭಯಗಳ ನೋಡು ಕೌಂತೇಯ ॥೭೧॥

ನರನೆ ಕೇಳೈ ದ್ವೈತವಿದರಲಿ ।
ಭರದೊಳುದ್ಭವಿಸುವುದು ಸಂತತ ।
ಮರಳಿ ಕೇಳಜ್ಞಾನಯೋಗದಿ ಬಿಳಿವುದಿದು ವಾರ್ಥ ॥
ನರನೆ ಸರ್ವೇಂದ್ರಿಯಕದಂಬವ- ।
ನಿರಿಸುವುದು ವಿಷಯಂಗಳಲಿ ಕೇಳ್ ।
ವಿರಚಿಸುವುದೈ ಸೃಷ್ಟಿಯೆಲ್ಲ ಕ್ಷಣದಿ ಕೌಂತೇಯ ॥ ೭೨ ॥

ಮರಳಿ ಕೇಳು ವಿಕಲ್ಪದಿಂದೀ- ।
ಪರಿಯ ಸೃಷ್ಟಿಯನರೆಗಳಿಗೆಯಲಿ ।
ಮುರಿದು ಜಿಡುವುದು ಕೇಳ್ಮೆನೋರಥರಾಜ್ಯವಡಗುವುದು ॥

ಇರುವುದಿದು ಭ್ರಮುಕಾಗರವಲಾ ।
ಮರಳಿ ವಾಯುವಿನರ್ಕಜಲದಲಿ ।
ಸೆರೆ ಹಿಡಿದು ಬುದ್ಧಿಯನು ಬಹುನಿರ್ಜೀವ ಮಾಡುವುದು ॥ ೭೩ ॥

ನರನೆ ಕೇಳೀತೆರದಿ ಮಾನಸ- ।
ಕಿರುವುವೈ ಲಕ್ಷಣಗಳಿಲ್ಲವು ।
ಕರೆವರೀಲಕ್ಷಣದ ತತ್ತ್ವವ ಮನವೆನುತ ಬುಧರು ॥
ಮರಳಿ ವಿಷಯಪ್ರಸರಗಳ ನಾ- ।
ನೊರೆವೆನೈ ವಿಸ್ತಾರದಿಂದೆನು- ।
ತರುಹಿದನು ಗೋಪಾಲಕೃಷ್ಣನು ವೀರವಿಜಯನಿಗೆ ॥ ೭೪ ॥

[ಪಂಚ ಚ] ನರನೆ ಜ್ಞಾನೇಂದ್ರಿಯನಿಕರಕ್ಕೆ- ।
ದಿರುವುವೈ ವಿಷಯಗಳು ನೋಡೈ ।
ಮೆರೆವುವೈ ರಸಗಂಧಶಬ್ದಸ್ಪರ್ಶರೂಪಗಳು ॥
ಹೊರಗೆ ಜ್ಞಾನೇಂದ್ರಿಯದ ದ್ವಾರದಿ ।
ಬರುವುದೈ ತುಳುಕುತ್ತ ಜ್ಞಾನವು ।
ಧರೆಯೊಳಾಕಳು ಹುಲ್ಲಬಣಬೆಯ ನೋಡಿ ಬರುವಂತೆ ॥ ೭೫ ॥

ನರನೆ ಕರ್ಮೇಂದ್ರಿಯನಿಕರಕ್ಕೆ- ।
ದಿರುವುವೈ ವಿಷಯಗಳು ನೋಡ- ।
ಕ್ಷರದ ಸ್ವರದುಚ್ಚಾರ ವಸ್ತುಗ್ರಹಣ ಮೇಣ್ ದಾನ ॥
ಚರಣ ಮಲಮೂತ್ರದ ವಿಸರ್ಜನ- ।
ವಿರುವುವಿವು ಕರ್ಮೇಂದ್ರಿಯಂಗಳ ।
ಮೆರೆವ ವಿಷಯಗಳೆವು ಕಣಾ ಹೊರಡುವುವು ಯಿಂದ್ರಿಯದಿ ॥೭೬॥

[ಇಂದ್ರಿಯಗೋಚರಾಃ] ಜ್ಞಾನಕರ್ಮೇಂದ್ರಿಯದ ದಶಕದ ।
ಮಾನ್ಯ ವಿಷಯದ ದಶಕ ದೇಹದೂ- ।
ಳೇನ ಹೇಳಲಿ ಮೆರೆವುದಲ್ಲವೆ ವಾರ್ಥ ನೋಡಿದಿಯಾ ॥
ನಾನು ನಿನಗೇನಿಚ್ಛೆಯೆಂಬುದ ।
ನಾನರಾಗದಿ ಪೇಳ್ವ ಸ್ವಪ್ನದಿ ।
ಶ್ರೀನಿವಾಸನು ಪೇಳ್ದನೀಪರಿ ಭಕ್ತವಾರ್ಥನಿಗೆ ॥ ೭೭ ॥

[ಇಚ್ಛಾ] ಹಿಂದಕುಪಭೋಗಿಸಿದ ವಸ್ತುವು ।
ಚಂದದಿಂ ನೆನಪಾಗಲದು ಬೇ- ।
ಕೆಂದು ಬಯಸುವುದಿಚ್ಛೆಯೆಂಬರು ವಿಬುಧರೀ ಜಗದಿ ॥
ಬಂದು ಕವಿಯಲಿ ಶಬ್ದ ಜೀಳಲು ।
ತಂದು ಕೊಡುವುದೊ ಯಾವ ವೃತ್ತಿಯ ।
ಮುಂದೆ ವಿಷಯೇಂದ್ರಿಯದ ಯೋಗವು ಬರಲು ಕೌಂತೇಯ॥೭೮॥

ಧರಿಸಿ ಕಾಮೂಷಾರವಿಚ್ಛೆಯು ।
ಬರುವುದೈ ಮುಂದಕ್ಕೆ ವಾರ್ಥನೆ ।
ಪರಿಯಿದಾಗಲು ಹಿಂದೆಮುಂದೋಡುವುದು ಮಾನವ ॥
ಧರೆಯೊಳೀಮನ ಹೋಗಲಾರದ ।
ವರನಿಸಿದ್ಧಸ್ಥಳಕೆ ಪೋಪುದು ।
ಪೊರೆಯ ಬೇಕಾಗಿರುವ ವಿಷಯದಿ ಬಾಯ ಹಾಕುವುದು

॥ ೭೯ ॥

ನರನೆ ಕೇಳೀವೃತ್ತಿಯೋಗದಿ ।
ಮರುಳುತನ ಬರುತಿಹುದು ಬದ್ಧಿಗೆ ।
ಬರಲು ವಿಷಯದ ಮೇಲೆ ಬಯಕೆಯು ಯಿಚ್ಛೆಯೆನಿಸುವುದು ॥
[ದ್ವೇಷಃ] ಬರಲು ಮನದೊಳಗಿಚ್ಛೆ ತದನಂ ।
ತರದೊಳಿಂದ್ರಿಯನಿಕರಕಿಚ್ಛಿತ ।
ಪರಿಯಲುಪಭೋಗಿಸಲು ವಿಷಯವು ದೊರೆಯದಿರೆ ವಾರ್ಥ ॥೮೦॥

ಬರುವುದೇನಾವೃತ್ತಿಯದನೇ ।
ಕರೆವರಲ್ಲವೆ ದ್ವೇಷವೆನುತಲಿ ।
[ಸುಖಂ] ನರನೆ ನಿನಗಾನರುಯುವೆನು ಸುಖಲಕ್ಷಣಂಗಳನು ॥

ವ್ಯಾಪ್ತನಾಗಲು ನರಗೆ ಜಗದ ಸ- ।
ವಸ್ತು ಭವ್ಯ ಸುವಸ್ತುಸಂಚಯ- ।
ವಸ್ತವಹುದೈ ಜೀವನಿಂಗಾ ಮೈಮರೆತು ಬಿಡುವ ॥
ಚಿತ್ತವಾಕ್ಕಾಯದಲಿ ಯದನೇ ।
ಸ್ವಸ್ಥತೆಯಲುಪಭೋಗಿಸುತಲಿ ನಿ- ।
ಚಿತ್ರತನದಿಂ ದೇಹದರಿವನು ನಾಶ ಮಾಡುವುದು ॥ ೮೧ ॥

ಕರೆವರಿದ ಚೇತನೆಯೆನುತ್ತಲಿ ।
ಭರಿತನಿಹುದೈ ಸಖಶಿಖಾಂತದಿ ।
ಯಿರುವುದೊಂದೇ ತೆರದಿ ವಾರ್ಥನೆ ಮೂರವಸ್ಥೆಯಲಿ ॥
ಇರಲಿ ಸ್ವಪ್ನ ಸುಷುಪ್ತಿ ಜಾಗೃತಿ ।
ನರಶರೀರದೊಳಿಹುದು ಸಂತತ ।
ಧರಿಸಲಾರದು ಭೇದವೆಂದಿಗು ವಾರ್ಥ ನೋಡಿದಿಯಾ ॥ ೮೨ ॥

ಪ್ರಾಪ್ತವಾಗಲು ವಸ್ತು ಪ್ರಾಣನು ।
ನಿತ್ಯ ಕಾಲ್ಮರಿದಂತೆ ಜೀವ್ಯನು ।
ವೃತ್ತಿ ನಾತ್ತ್ವಿಕವೇರುವುದು ದ್ರಿಗುಣದಲಿ ಜೋರಿನಲಿ ॥
ಚಿತ್ರವಿದು ಸರ್ವೇಂದ್ರಿಯಂಗಳ ।
ವೃತ್ತಿಯನು ಹೃದಯದಲಿ ಥಪ್ಪಡಿ ।
ಸತ್ತ ಮಲಗಿಪುದೇನ ಹೇಳಲಿ ನೋಡು ಕೌಂತೇಯ ॥೮೩॥

ಉದರ ಯೋಗದಿ ಬುದ್ಧಿಮನಗಳಿ- ।
ಗುದುಭವಿಸಿತ್ತೈ ಲವಲವಿಕೆಯದು ।
ವಿದಿತವಾಯಾವನಕೆ ನಿತ್ಯ ವಸಂತಋತುವಾಗಿ ॥
ಉದಿತವಹುದು ಪ್ರಫುಲ್ಲತೆಯಲಾ ।
ಯಿದು ಸಮಸ್ತಚರಾಚರಾಂಶದಿ ।
ಯಿದಕೆ ಯಿರುವುದು ಹೆಸರು ಚೇತನೆ ನಿರ್ವಿವಾದವಿದು ॥ ೮೪ ॥

ನರನೆ ವಿಸ್ತರವೇಕೆ ವ್ಯರ್ಥದಿ ।
ಯರುಹುವೆನು ನಾ ನಿನಗೆ ಸ್ಪಷ್ಟವಿ ।
ಒರುವುದೆಲ್ಲಿಯೊ ಜೀವಕಾತ್ಮನ ಲಾಭವದುವೆ ಸುಖ ॥
[ದುಃಖಂ] ನರನೆ ಕೇಳೀತೆರದ ಲಾಭವು ।
ದೊರೆಯದಿರೆ ಜೀವಿಪುದು ದುಃಖವು ।
ಬರಲು ಕಲ್ಪನೆ ಯಿರದಲಾ ಸುಖವಲ್ಲಿ ಕೌಂತೇಯ ॥ ೮೫ ॥

ನರನೆ ಕೇಳೈ ಯರಸನಾಜ್ಞೆಯ ।
ಧರಿಸಿ ತಿರದಲಿ ಸೈನ್ಯವೆಲ್ಲವು ।
ಭರದಿ ಕಟು ಪರಚಕ್ರವನು ಗೆಲ್ಲುವುದು ನೋಡಿದಿಯಾ ॥
ಅರಸನರಿವನೆ ಸರ್ವಶಕ್ತಿಯ ।
ಕರಧಿ ಚಂದ್ರನ ನೋಡಿ ತಾಳ್ವದು ।
ಪರುಷ ದಿನಕರ ಜಗದ ವ್ಯಾಪಾರವನು ನಡೆಸುವನು ॥ ೮೬ ॥

ನರನೆ ನೋಡೈ ಲೋಹಚುಂಬಕ ।
ಒರಲು ಸಂನಿಧಿಯಲ್ಲಿ ಲೋಹಕೆ ।
ಬರುವುದಲ್ಲವೆ ಚಂಂಚಲತ್ವವು ನೋಡು ಕೌಂತೇಯ ॥
ಇರಿಸಿ ದೃಷ್ಟಿಯನಾಮೆ ತನ್ನಯ ।
ಮನಿಗಳಿಗೆ ಸ್ತನವಾನ ಕೊಡದಲೆ ।
ಭರದಿ ಬೆಳೆಸುವುದಲ್ಲವೇ ನಿನಗರಿವಿಹುದು ವಾರ್ಥ ॥ ೮೭ ॥

ಹರಿದು ಕಲ್ಪನೆ ಹೋಗಲಾಕ್ಷಣ ।
ಒರುವುದಲ್ಲಿಯೆ ಸುಖವು ಸಹಜದಿ ।
ನರನೆ ಸುಖದುಃಖಕ್ಕೆ ಕಾರಣ ಕಲ್ಪನಾಹರಣ ॥
[ಚೇತನಾ] ಇರುವುದಾದರಸಂಗ ವಾರ್ಥನೆ ।
ಯಿರುವುದೆಲ್ಲಕೆ ನಾತ್ಮಿಭೂತವು ।
ನರಶರೀರದೊಳಿಹುದು ಬ್ರಹ್ಮದ ಸತ್ತೆಯೆಂದೆಂಬೆ ॥ ೮೮ ॥

ನರನೆ ಕೇಳಾತ್ಮಾನುಭವದಿಂ ।
ನಿರುತವೀದೇಹದಲಿ ಜಡವಾ- ।
ಗಿರುವ ವಸ್ತುವಿಗೀವುದು ಸಜೀವತೆಯು ಕೌಂತೇಯ ॥
ಇರುವುದಿದಕೈ ಹೆಸರು ಚೇತನೆ- ।
ಯೊರೆವೆ ನಿನಗಾನೀಗ ಧೈರ್ಯದ ।
ಪರಿಯ ಕೇಳೈ ಭೇದಗಳ ವಿಸ್ತರಿಪೆ ಪ್ರೇಮದಲಿ ॥ ೬೯ ।

[ಧೃತಿಃ] ಧಾತ್ರಿಯಲ್ಲೀತತ್ತ್ವಪಂಚಕ- ।
ತತ್ರುತನದಿಂ ವರ್ತಿಪುದಲಾ ।
ನಿತ್ಯ ಜಾತಿಸ್ವಭಾವಕನುಗುಣವಾಗಿ ಶತ್ರುತನ ॥
ಪೃಥ್ವಿಯನು ನಾಶಿಪುದು ಜಲವೈ ।
ಮತ್ತೆ ಜಲಶೋಷಣವ ಮಾಳ್ಪುದು ।
ತತ್ತ್ವ ತೇಜವು ಗಾಳಿ ತೇಜವನೋಡಿಸುವುದಲ್ಲೈ ॥ ೭೦ ॥

ಗಾಳಿಯನು ನುಂಗುವುದು ಗಗನವು ।
ಮೇಳವಾಗದೆ ಗಗನತತ್ತ್ವವು ।
ಮೇಲೆ ವಿಶ್ವದೊಳೆಲ್ಲವೋತಪ್ರೋತ ತುಂಬಿಹುದು ॥
ಹೇಳಲೇನನು ವೈರವಿದ್ದರು ।
ಮೇಳದಿಂದಿವು ನರಶರೀರದಿ ।
ಲೀಲೆಯಿಂದೇಕತ್ರ ವಾಸಿಪುವಲ್ಲವೇ ವಾರ್ಥ ॥ ೭೧ ॥

ದ್ವೈತಿತನದ ವಿವಾದತರ್ಕದ ।
ಮಾತನಿರಿಸುತಲೊಂದುಕಡೆಯಲಿ ।
ಭೂತಳದಿ ದೇಹದಲಿ ವಾಸಿಪುವಿವು ಸುಮೈತ್ರಿಯಲಿ ॥
ಈತೆರದ ನಿಜಗುಣದ ಯೋಗದೊ- ।
ಳಾತುಮನ ಮಂದಿರವ ಪೋಷಿಪು- ।
ವೇತರಿಂದಲಿ ಯೆನುತ ವೇಳ್ದರೆ ಧೃತಿಯೆ ಕಾರಣವು ॥ ೭೨ ॥

[ಸಂಘಾತಃ] ನರನೆ ಜೀವಸಮೇತತತ್ತ್ವಗ- ।
ಳರದೆ ದೇಹದೊಳೈಕ್ಯ ತಾಳಲು ।
ಕರೆವರದ ಸಂಘಾತವೆನುತಲಿ ಕೋವಿದರು ಜಗದಿ ॥
ಅರುಹಿದನು ವಿಸ್ತರದಲೀಪರಿ ।
ಯಿರುವ ಮೂವತ್ತಾರುತತ್ತ್ವವ- ।
ನರಿಯಲಿವುಗಳು ಮೇಳವಾಗಲು ಕ್ಷೇತ್ರವೆನಿಸುವುದು ॥೭೩॥

ಪರಿಪರಿಯ ರಥಭಾಗ ಕೂಡಲು ।
ಜರುವುದೆಲ್ಲಿಕೆ ಹೆಸರು ರಥವೈ ।
ಚರಣ ಹಿಡಿದಾತಲೆಯ ವರೆಗಿಹ ಸರ್ವಭಾಗಗಳ ॥
ಬರಲು ಮೇಳವು ದೇಹವೆನುವರು ।
ಕರಿ ತುರಗ ರಥ ಪಥಿಕಜನವೀ- ।
ಪರಿಯ ನಾಲ್ಕಂಗಗಳು ಕೂಡಲು ಸೇನೆಯಾಗುವೆದು ॥ ೭೪ ॥

ಕೂಡಲಕ್ಷರಗಳದು ಪದವೈ ।
ಕೂಡೆ ಪದಗಳು ವಾಕ್ಯವಹುದೈ ।
ಮೋಡಗಳ ಸಮುದಾಯವೆಲ್ಲವನಭ್ರವೆನ್ನುವರು ॥
ಕೂಡೆ ಸಚರಾಚರಜಗತ್ತುಗ- ।
ಳಾಡುತಿಹರದ ವಿಶ್ವವೆನುತಲಿ ।
ಕೂಡಲೆಣ್ಣೆಯು ಬತ್ತಿ ತೇಜವು ದೀಪವೆನಿಸುವುದು ॥ ೭೫ ॥

ನರನೆ ಮೂವತ್ತಾರುತತ್ತ್ವಗ- ।
ಳರದೆ ಬರಲೇಕತ್ರವದಕೆನೆ ।
ಕರೆವರೈ ಕೋವಿದರು ಕ್ಷೇತ್ರವೆನುತ್ತ ಕೌಂತೇಯ ॥
ಪರಿಪರಿಯ ವ್ಯಾಣಿಗಳು ಜಗದಲಿ ।
ಪರಿಪರಿಯ ಕರ್ಮಾನುಸಾರದಿ ।
ದುರಿತಪುಣ್ಯಗಳನ್ನು ಬೆಳೆಸುವುವೀಶರೀರದಲಿ ॥ ೭೬ ॥

ಅರಿಯುತೀಪರಿ ತತ್ತ್ವ ಮನದಲಿ ।
ಕರೆದೆನಿದನಾ ಕ್ಷೇತ್ರವೆನುತಲಿ ।
ಯಿರುವುದೆನ್ನಯ ಮಾತು ಕೌತುಕಪರವು ಕೌಂತೇಯ ॥
ಕರೆವರನ್ಯರು ದೇಹವೆನುತಲಿ ।
ಯಿರಲಿ ಸಾಕೀವಾದಪ್ರಶ್ನೆಯು ।
ಪರಿಪರಿಯ ಹೆಸರಿಹುದು ಕೇಳೀಕ್ಷೇತ್ರಕೇನೆಂಬೆ ॥ ೭೭ ॥

ನರನೆ ಕೇಳೈ ಒಹ್ಮದೀಚೆಗೆ ।
ನರಸಿಜಜನರು ಹಿಡಿದು ಸಚರಾ- ।
ಚರವು ಹುಟ್ಟುತ ಸಾವುದೆಲ್ಲವು ಕ್ಷೇತ್ರವೆನಿಸುವುದು ॥
ಸುರರು ಮನುಜರು ಸರ್ವವಿದರಲಿ ।
ಪರಿಪರಿಯ ಯೋನಿಗಳು ಜನ್ಮಕೆ ।
ಬರುವುವಲ್ಲವೆ ನೋಡು ತತ್ತ್ವಕೆ ರಜಕೆ ತಮಕೆ ಸರಿ ॥ ೭೮ ॥

ನರನೆ ನಿನಗೀಗುಣವಿಚಾರವ- ।
ನರುಹುವೆನು ಮುಂದಕ್ಕೆ ನೋಡೈ ।
ಭರದಿ ನಿನಗಾಂ ಜ್ಞಾನರೂಪವನೀಗ ಪೇಳುವೆನು ॥
ಅರುಹಿದೆನು ಕ್ಷೇತ್ರದ ಸವಿಸ್ತರ- ।
ಪರಿಯ ಭಾನು ವಿಕಾರಸಹಿತಲೆ ।
ಬರುವುದೆಂತಾಮೋಕ್ಷ ಜ್ಞಾನದಿ ವಿಸ್ತರಿಪೆನೀಗ ॥ ೭೯ ॥

ನರನೆ ಕೇಳೀಜ್ಞಾನಕೋಸುಗ ।
ಪರಮಯೋಗಾಭ್ಯಾಸತತ್ಪರ- ।
ರಿರದೆ ಸ್ವರ್ಗವ ಬಿಟ್ಟು ಗಗನವ ನುಂಗಿ ಬಿಡುವರಲಾ ॥
ಧರಿಸದಲೆ ಸಿದ್ಧಿಯ ಗೊಡವೆಯನು ।
ಭರದಿ ಋದ್ಧಿಯ ಕಾಲಲೊದ್ದುತ ।
ಮರಳಿ ಧಿಕ್ಕರಿಸುವರು ಯೋಗಾಭ್ಯಾಸಸಾಧನವ ॥ ೧೧೦॥

ಸೂರೆ ಮಾಡುತ ತಪದ ಕೋತಿಯ ।
ಭಾರಿಯಜ್ಞಂಗಳ ನಿವಾಳಿಸಿ ।
ಬೇರುಸಹಿತಾ ಕರ್ಮವಲ್ಲಿಯ ಕಿತ್ತಿ ಹಾಕುವರು ॥
ಯಾರು ಕೆಲಬರು ಭಜನಮಾರ್ಗವ- ।
ನಾರಭಿಸಿ ಬತ್ತಲೆಗಳಿರುವರು ।
ಯಾರು ಕೆಲರು ಸುಷುಮ್ನೆಯನು ಸೇರುವರು ಗುಪ್ತದಲಿ
॥ ೧೧೧ ॥

ತೊರೆಯು ಬೇಕೀ ಜ್ಞಾನವೆನುತಲಿ ।
ಪರಮಋಷಿಗಳು ತಾಪಸರುಗಳು ।
ಚರಿಸುವರು ವೇದಸ್ವರೂಪದ ಮರದೆಲೆಗಳಲ್ಲಿ ॥
ಗುರುಚರಣಸೇವೆಯಲಿ ಜ್ಞಾನವ ।
ತೊರೆಯುವುದು ನಿಜನೆಂದು ಯೋಚಿಸಿ ।
ಗುರುಚರಣದಿ ನಿವಾಳಿಸುವರೈ ಬರುವ ಜನ್ಮಗಳ ॥ ೧೧೨ ॥

ಬರಲು ಕೇಳೀ ಜ್ಞಾನವ್ಯಾಪ್ತಿಯು ।
ಹರಣವಹುದಜ್ಞಾನತಿಮಿರವು ।
ಬರುವುದೈ ಜೀವಾತ್ಮರೈಕ್ಯವು ನೋಡು ಕೌಂತೇಯ ॥
ಬರಲು ಕೇಳೀ ಜ್ಞಾನವ್ಯಾಪ್ತಿಯು ।
ತೊರೆವುದಿಂದ್ರಿಯ ವಿಷಯದಿಚ್ಛೆಯ ।
ಮುರಿದು ಬಿಡುವುದು ಕರ್ಮ ಹಾವಳಿ ನೋಡು ಕೌಂತೇಯ
॥ ೧೧೩ ॥

ದೂರವಹುದೈ ಮನದ ದೈನ್ಯವು ।
ಹಾರುವುದಲಾ ದ್ವೈತಭಾವವು ।
ಧಾರುಣಿಯೊಳದ್ವೈತ ಬೆಳೆಯ ಸುಕಾಲವಾಗುವುದು ॥
ಹಾರಿ ಹೋಗುವುದಲ್ಲನೇ ಮದ ।
ಯಾರು ಕೇಳ್ವರು ಮಾಯೆಯಾಟವ ।
ಬಾರದಲ್ಲಾ ನಾನುನೀನೆಂಬೀಯಹಂಕಾರ ॥ ೧೧೪ ॥

ಬೇರುಸಹಿತಲೆ ಕಿತ್ತಿ ತಾಂ ಸಂ- ।
ಸಾರವನ್ನುದ್ಧ್ವಂಸಮಾಳ್ಪುದು ।
ತೋರುನೀಸಂಕಲ್ಪಕೆಸರನು ಸ್ವಚ್ಛ ತೊಳೆಯುವುದು ॥

ಚಾರುಸರ್ವವ್ಯಾಪಿಯಾಗಿಹ ।
ತೋರಿಪುದು ಪರಬ್ರಹ್ಮರೂಪವ ।
ಸೇರಲೀಪರಿಜ್ಞಾನ ಪ್ರಾಣನು ಹೆಳವನಾಗುವನು ॥ ೧೧೫ ॥

ನರನೆ ಕೇಳೀ ಜ್ಞಾನಸತ್ಕೃಯ ।
ಭರದಿ ಕೃತಿಯಲಿ ಜಗವು ನಡೆವುದು ।
ಬರುವುದಿದರ ಪ್ರಭಾವದಿಂ ಬುದ್ಧಿಯಲಿ ಶಕ್ತಿಯದು ॥
ಪೆರೆವ ಪರಮಾನಂದಸಾಗರ- ।
ನಿರದೆ ಜೀವಗೆ ವ್ಯಾಪ್ತವಾಗುತ ।
ನಿರುತವದರಲಿ ಮಗ್ನನಾಗುವನೇನ ಹೇಳುವೆನು ॥ ೧೧೬ ॥

ಇರುವುದಿದು ಸುಜ್ಞಾನ ಕೇಳೈ ।
ಮೆರೆವುದಿದು ಪಾಂಡಿತ್ಯದಾಗರ ।
ದೊರೆಯೆ ಹರಿವುದು ವಿಷಯಮಲ ಮನದಿಂದ ಕಲಿಪಾರ್ಥ ॥
ಇರುವೆ ನಾನೇ ಜೀವನೆಂಬೀ- ।
ಪರಿಯ ಕ್ಷಯರೋಗವನು ತಾಂ ಸಂ- ।
ಹರಿಸಿ ಕೇಳಾತ್ಮನಿಗೆ ಕೊಡುವುದು ನಿಜವರೋಗಹಿಯ ॥ ೧೧೭ ॥

ಅರುಹಲೀಜ್ಞಾನವನು ಸುಕಠಿಣ- ।
ವರಿವ ಪರಿಯಲಿ ಬೇಧ್ದಿ ನಿನಗಿದ- ।
ನರಿಯಬೇಕೈ ಸಾವಧಾನದಿ ನೀನು ಮನಗೊಟ್ಟು ॥
ನರನೆ ಕೇಳೀಜ್ಞಾನ ದೃಗ್ಗೋ- ।
ಚರಕೆ ಬಾರದ ತತ್ತ್ವವಲ್ಲವೆ ।
ಬರಲು ಜ್ಞಾನವು ದೇಹದೊಳಗಿನ ಕುರುಹ ಬೇಳುವೆಸು ॥೧೧೮॥

ಇಂದ್ರಿಯಂಗಳ ವರ್ತನದ ಮೇ- ।
ಲಿಂದ ತಿಳಿವುದು ಜ್ಞಾನ ದೇಹದಿ ।
ಬಂದಿಹುದೊ ಬಂದಿಲ್ಲವೋ ನೋಡಿದಿಯೊ ಕೌಂತೇಯ ॥
ಕೆಂದಳಿರು ಮರಕೇರೆ ವಾರ್ಷನೆ ।
ಬಂದನಲ್ಲವೆ ಋತುವಸಂತನು ।
ಯೆಂದು ತಿಳಿಯುವರೇನು ಸಂಶಯಿಸುವ- ಜಗದೊಳಗೆ ॥೧೧೯॥

ಮರದ ಬುಡದಲಿ ನೀರನೆರೆಯಲು ।
ಬರುವುದೈ ಲವಲವಿಕೆಯೆಲೆಯಲಿ ।
ಬರುವ ಮೊಳಕೆಯ ಮೇಲೆ ನೆಲಸನು ಸರಿಸಿಸುವುದಶ್ಟೆ ॥
ವುರುಷನಿಹನೊ ಕುಲೀನನೆಂಬುದು ।
ಹೊರಗಿನಾಚಾರ ಸ್ವಭಾವದಿ ।
ಬರುವುದೈ ಯನುಭವವು ಪ್ರತ್ಯಕ್ಷದಲಿ ಮಾನವಗೆ ॥ ೧೨೦ ॥

ಆದರಾತಿಥ್ಯವನು ನೋಡಲು ।
ಬೋಧವಹುದೈ ಸ್ನೇಹಭಾವವ್ಯ ।
ಸಾಧುಸತ್ಪುರುಷರನು ದರ್ಶನದಿಂದಲರಿವುದಲಾ ॥
ಕಾದು ದೀಪವ ಕಾಜಿನೊಳಗಿಡೆ ।
ಮೇದನಿಯಲಿ ಪ್ರಕಾಶ ಸುತ್ತಲು ।
ಸಾದರದಲೀಯುವುದು ನೋಡೈ ಪಾರ್ಥ ಮನಗೊಟ್ಟು
॥ ೧೧೧ ॥

ನರನೆ ಕೇಳೀತೆರದಿ ಹೃದಯದೊ- ।
ಳಿರುವ ಜ್ಞಾನದ ಲಕ್ಷಣಂಗಳು ।
ಹೊರಗೆ ದೇಹದಿ ಸೂಸುತಿಹುವೈ ಸ್ಪಷ್ಟತನದಿಂದ ॥
ಒಲವೆನೀಲಕ್ಷಣಗಳೆಲ್ಲವ ।
ನರನೆ ನಿನಗುತ್ತಮತರದಲಿಂ ।
ದರುಹಿದನು ಗೋಪಾಲಕೃಷ್ಣನು ಭರದಲರ್ಜುನಗೆ ॥ ೧೧೨ ॥

ಅಮಾನಿತ್ವಮದಂಭಿತ್ವಮಹಿಂಸಾ ಕ್ಷಾಂತಿರಾರ್ಜವಮ್ ।
ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ ॥ ೭ ॥

[**ಅಮಾನಿತ್ವಂ**] ಯಾವುದೇ ವಿಷಯದಲಿ ಸಾಮ್ಯದ ।
ಭಾವವನು ಸ್ವೀಕರಿಸನೈ ಸಂ- ।
ಭಾವನೆಯ ಮಾಡಿದರೆ ಯಾಗುವ್ಯದವನಿಗತಿ ಭಾರ ॥
ಯಾವುದೇ ಗುಣದಿಂದ ಸ್ತುತಿಸಲು ।
ಭೂವಲಯದಲಿ ಮಾನ ಮಾಡಲು ।
ಭಾವಭಕ್ತಿಯೊಳವನ ಯೋಗ್ಯತೆ ವರ್ಣಿಸಲುಪಾರ್ಥ ॥೧೧೩॥

ಪುರುಷರನ್ಯರು ಪ್ರೇಮದಿ ನಮ- ।
ಸ್ಕರಿಸಲಾತನನೇನ ಹೇಳಲಿ ।
ಮರಣ ಬಂದಂತಾಗಿ ಮನದಲಿ ತ್ರಾಸವಾಗುವುದು ॥
ಸುರಗುರುಬೃಹಸ್ಪತಿಗೆ ಸರಿಯಾ- ।
ಗಿರುವ ಸರ್ವಜ್ಞತೆಯೆ ಯಿದ್ದರು ।
ಮರುಳನಂದದಿ ವರ್ತಿಸುವನ್ಯೆ ಯನ್ಯರರಿಯರಲಾ ॥ ೧೧೪ ॥

ಏನ ಹೇಳಲಿ ಗಜಬಜಿಸುವನು ।
ಮಾನ ಕೊಡಲಪಮಾನವೆಣಿಪನು ।
ತಾನು ತನ್ನಯ ಕೀರ್ತಿ ಕೇಳ್ವರೆ ಕಿವಿಯ ಮುಚ್ಚುವನು ॥
ಏನ ಹೇಳಲಿ ವ್ಯಾಧನಿಗೆ ಸ್ವಾ- ।
ಧೀನವಾಗಿಹ ಹರಿಣದಂದದಿ ।
ಕ್ಷೀಣಧೈರ್ಯನು ಕಾತರಿಸುವನು ಸ್ತುತಿಯ ಕೇಳಿದರೆ ॥೧೧೫॥

ಅಡಗಿಸುವನ್ಯೆ ತನ್ನ ಚತುರತೆ ।
ಬಿಡುವನ್ಯೆ ನಿಜಮಹಿಮೆಯೆಲ್ಲವ ।
ಸಡಗರದಿ ಸ್ವೀಕರಿಸುವನಲಾ ಖೂಳತನ ಪಾರ್ಥ ॥
ಬಿಡುವನಾತನು ಕೀರ್ತಿಯಿಚ್ಛೆಯ ।
ಹೊಡೆದು ಹೊರಗಟ್ಟುವನು ಲೌಕಿಕ ।
ಬಿಡುವನ್ಯೆ ಬಯಕೆಯನು ವಾದವಿವಾದತರ್ಕದಲಿ ॥ ೧೧೬ ॥

ನರನು ನದಿ ಯೊಸಾಡಿ ದಾಟುತ- ।
ಲಿರಲು ನದಿಮಧ್ಯದಲಿ ಪಾರ್ಥನೆ ।
ತಿರುಗಣಿಯು ಸೆಳವಿನಲಿ ಸಿಲುಕಲು ಗಜಬಜಿಪ ತೆರದಿ ॥
ಪರರು ತನ್ನನು ಸ್ತುತಿಸ ತೊಡಗಲು ।
ಕರಗುವುದು ಮನದೊಳಗೆ ಧೈರ್ಯವ್ಯ ।
ತೊರೆವನ್ಯೆ ದೊಡ್ಡಸ್ತಿಕೆಯ ಮನದಿಚ್ಛೆಯನು ಪಾರ್ಥ ॥೧೧೫॥

ಸ್ವಸ್ಥತನದಲಿ ಕೂಶು ಪಾರ್ಥನೆ ।
ಚಿತ್ತಶಾಂತಿಯ ಭೋಗಿಸುವನ್ಯೆ ।
ಪೃಥ್ವಿಯಲಿಯಪಮಾನ ಮಂದಿಯೊಳಾಗ ಬೇಕೆನುತ ॥
ಅಪ್ತವರ್ಗವು ತನ್ನ ಸಂಗತಿ ।
ವ್ಯರ್ಥ ಹಿಡಿಯಲು ಬಾರದೆನುವನು ।
ಹೊತ್ತುಕೊಂಡಿಹನವನು ದೇಹದಿ ನಮ್ರತನ ಪಾರ್ಥ ॥ ೧೧೯ ॥

ಅನ್ಯರೀಜಗದೊಳಗೆ ತನ್ನಯ ।
ಮನ್ನಣೆಯ ಮಾಡುವುದು ಸೇರದು ।
ತನ್ನ ಕೀರ್ತಿಯ ತನ್ನ ಕಿವಿಯಿಂ ಕೇಳಲಂಜುವನು ॥
ತನ್ನ ನಿಜಸ್ಥಿತಿಯನ್ನು ತಿಳೆಯಲಿ- ।
ಕನ್ಯರಿಗೆ ಸಂಧಿಯನೆ ಕೊಡನ್ಯೆ ।
ಅನ್ಯರಿಂ ಸತ್ಕಾರ ಕೊಳ್ಳುವ ಪಾತ್ರ ಬೇರೇಕೆ ॥ ೧೧೭ ॥

ದೋಷವೆನಿಸದೆ ಹೀನತನವೇ ।
ಭೂಷಣವು ತಾನೆಂದು ಮೆರೆವನು ।
ಯೀಸುಪರಿಯಲಿ ತಾನು ವರ್ತಿಸುತಿಹನು ಲೋಕದಲಿ ॥
ಈಸು ವರ್ಣಿಸಲವನ ವರ್ತನ ।
ಭಾಸಿಸುವನ್ಯೆ ಮೃತನೊ ಜೀವಿಯೊ ।
ತ್ರಾಸ ಕೊಡನ್ಯೆ ಜಗಕೆ ಯೆಳ್ಳಷ್ಟಾದರುನು ಪಾರ್ಥ ॥ ೧೧೮ ॥

ಕಾಲಿನಿಂದಲಿ ನಡೆವನೋ ಮೇಣ್ ।
ಗಾಳಿಯಾತನ ದೂಡುತಿಹುದೋ ।
ಲೀಲೆಯೇನಿದುವೆಂದು ಮಂದಿಗೆ ಚೋದ್ಯವಿರುವುದಲಾ ॥
ತಾಳ ಬಾರದು ಜನರು ಭೀತಿಯ ।
ಹಾಳು ಬೀಳಲಿ ತನ್ನ ಜೀವವೆ ।
ಹೇಳುತೀಪರಿ ತೊರೆಯುವನಹಂಕಾರವೃತ್ತಿಯನು ॥ ೧೩೧ ॥

ಇರುಳುಹಗಲೀ ತೆರದಿ ದೇವರೊ- ।
ಳಿರುವುವೈ ಹರಕೆಗಳು ಪಾರ್ಥನೆ ।
ನಿರುತ ವೃಷಭೋಗಿಸುವನ್ಯೆ ಯೇಕಾಂತವಾಸವನು ॥
ಮರಳಿ ನಿರ್ಜನವಾದ ಸ್ಥಳ ಪ್ರೊಂ- ।
ದಿರುವುದೆನುತಲಿ ಕೇಳಿದಾಕ್ಷಣ ।
ಹರುಷವನವನಲಿ ತುಂಬಿ ತುಳುಕುವುದಲ್ಲಿ ಬೋಡುವನು
॥ ೧೩೨ ॥

ಗಾಳಿಯನುರೋಧದಲಿ ನಡೆವನು ।
ಮೇಲೆ ಗಗನದೊಳಾಡುತಿರುವನು ।
ಹೇಳಲೇನನು ಮಿತ್ರರಾತಗೆ ಕಾಡಮರಗಿಡವು ॥
ಹೇಳಿದೀಪರಿ ಲಕ್ಷಣಂಗಳ ।
ತಾಳುವರು ಯಾರೀಶರೀರದಿ ।
ಹೇಳಲೇನದನವನೆ ಜ್ಞಾನವ ಪಡೆದಿಹನು ಪಾರ್ಥ ॥ ೧೩೩ ॥

ನರನೆ ನಿನಗೀತೆರದಮಾನಿತೆ- ।
ಯುರುಹಿದೆನು ವಿಸ್ತರದಿ ಪ್ರೇಮದಿ ।
ತಿರಿಗಿ ನಿನಗಾನೊರೆವೆ ಕೇಳ್ವುದದಾಂಛಿಕತ್ವವನು ॥
[ಅದಂಛಿತ್ವಂ] ಮರಣ ಬಂದರೆ ಬರಲಿ ಬಚ್ಚಿ- ।
ಟ್ಟಿರುವ ನಿಧಿಯನು ಹೇಳಲಾರನು ।
ಪರರಿಗೀತೆರನಿಹನು ಕೃಪಣನು ನೋಡು ಕೌಂತೇಯ ॥೧೩೪॥

ನರನೆ ಕೇಳೀತೆರದಿ ಪಾರ್ಥನೆ ।
ಮರಣ ಬಂದರು ಬರಲಿ ಸುಕೃತವ- ।
ನರುಹಿ ಪರರಿಗೆ ತೋರಿಸನಲಾ ಕೃಪಣನಂದದಲಿ ॥
ಕರುಣಿಗೋಸುಗ ಕಪಟಿಯಾಕಳು ।
ಯಿರಿಸುವುದು ಕೆಚ್ಚಲಲಿ ಹಾಲನು ।
ಪುರುಷರಿಂಗಿಯಿದಲೆ ಬಚ್ಚಿಡುವಂತೆ ಕೌಂತೇಯ ॥ ೧೩೫ ॥

ವಾರವನಿತೆಯು ತನ್ನ ಸ್ವಾಯವ ।
ತೋರಿಸುವಳೇ ಯನ್ಯರಿಂಗಾ- ।
ಚೋರರಡವಿಯ ಮಧ್ಯದಲಿ ಸಧನನನು ಹಿಡಿದಿರಲು ॥

ತೋರಿಸುವನೇ ಧನವನಿಲ್ಲವ ।
ಚಾರುಕುಲವಧು ತನ್ನವಯವವ ।
ಬೇರೆಯವರಿಗೆ ತೋರಿಸದೆ ಸೆರಗಿನಲಿ ಮುಚ್ಚುವಳು ॥ ೧೩೬ ॥

ಹೊಲದಿ ಬೀಜವ ಬಿತ್ತುತಲಿ ಯೊ- ।
ಕ್ಕಲಿಗನದ ತಾಂ ಮುಚ್ಚಿ ಬಿಡುವನು ।
ತಿಳಿಯ ಬಾರದೆನುತ್ತ ಜಗದಲಿ ನೋಡಲೀತೆರದಿ ॥
ಇಳೆಯೊಳಗೆ ದಾನಾದಿಪುಣ್ಯವ ।
ತಿಳಿಸಲಾಗದು ಬಾಯ ಮಾತಿಲಿ ।
ಕೊಳನಲಾ ದೇಹದಲಿ ಮಾನದ ವೃಡಿಗೆಕೊಡಿಗೆಗಳ ॥ ೧೩೭ ॥

ಮಂದಿಯಾರ್ಜವ ಮಾಡಲಾರನು ।
ಯಿಂದು ಮಾಡಿದೆ ಪುಣ್ಯವದನಿದ- ।
ನೆಂದು ಜಗದಲಿ ಡಂಗುರವ ತಾಂ ಭಾರಿ ಹೊಡೆಯನಲಾ ॥
ಮಂದಿಗಳಿಗುಪಕಾರ ಮಾಡಿದೆ- ।
ನೆಂದು ಬಾಯಿಂದಾಡಿ ತೋರಿಸ ।
ಮುಂದೆ ವಿದ್ಯಾವೃದ್ಧಿ ಮೆರೆಸನು ನೋಡು ಕೌಂತೇಯ ॥೧೩೮॥

ಕೀರ್ತಿಗೋಸುಗ ತನ್ನ ವಿದ್ಯಾ- ।
ವ್ರಾತವನು ವಿಕ್ರಯಿಸಲಾರನು ।
ಭೂತಳದಿ ನಿಜಸುಖನಿಮಿತ್ತದಿ ಧನವ ಖರ್ಚಿಸನು ॥
ಆತನಿಹಸತಿಕೃಶನು ದೇಹದಿ ।
ಯಾತನಿಹ ಮನೆಯಲಿ ದರಿದ್ರತೆ ।
ಮಾತ ತೆಗೆದರೆ ದಾನ ಮಾಳ್ಪನು ಕಲ್ಪಲತೆಯಂತೆ ॥ ೧೩೯ ॥

ನರನೆಯತಿವಿಸ್ತಾರ ಸಾಕ್ಕೈ ।
ಯಿರುವನ್ಯೆ ಗಂಭೀರ ಧರ್ಮಾ- ।
ಚರಣದಲ್ಲಿ ಯುದಾರನಿಹನು ಪ್ರಸಂಗವಶದಿಂದ ॥
ಬರಲು ಸ್ವಾತ್ಮಜ್ಞಾನವಿಷಯವು ।
ಯಿರುವನ್ಯೆ ಬಹುಚತುರನಾತ್ಮನು ।
ಭರದಿ ವಾದವಿವಾದ ಮಾಳ್ಪನು ಸುರಗುರುವಿನಂತೆ ॥ ೧೪೦ ॥

ಹೇಳಲೇನನು ಬೇರೆ ವಿಷಯದಿ ।
ಖೂಳನೆಂದೆನಿಸುವನು ಜಗದಲಿ ।
ಬಾಳಿಗಿಡ ಕೃಶಲಘುವಲಾ ಹಣ್ಣುಗಳು ಸವಿಯಲ್ಲೆ ॥
ತೇಲುತಿರುವಾ ಮೋಡವಲ್ಲವು ।
ಗಾಳಿಯಲಿ ಲಘುವೆನಿಸಿ ತೋರ್ಪುದು ।
ಬೀಳಲಾಪರ್ಜನ್ಯ ಜಗಕಾಹ್ಲಾದವಾಗುವುದು ॥ ೧೪೧ ॥

ನೋಡಿದರೆ ವೃಣತಿಯನವನಲಿ ।
ಕೂಡುವುದು ಬುದ್ಧಿಗೆ ಸುಶಾಂತತೆ ।
ಘಾಡಿ ವಣ್ಣಿಸಲಿದುವೆ ಸುಸ್ಥಾನವು ಕಣಾ ಜಗದಿ ॥
ನೋಡಲೀಪರಿ ಚಿಹ್ನವೆಲ್ಲವ ।
ರೂಢಿಯಲ್ಲೀಜ್ಞಾನನಿಧಿಯೆಂ ।
ಪಾಡ ಬೇಕೈ ಬೇರೆ ತಿಳಿಯದು ಜ್ಞಾನನಿಧಿ ಯೇನು ॥೧೩೫॥

ಇರುವುದಿದುವೆ ಯದಾಂಭಿಕತ್ವವು ।
ಪರಿಪರಿಯ ಚಿಹ್ನಗಳ ನಾ ಮಿ ।
ಸ್ತರಿಸಿ ಪೇಳಿದೆ ನಿನಗೆ ಪೇಳ್ವಿನಹಿಂಸೆ ಯೇನೆಂದು ॥
[ಅಹಿಂಸಾ] ನರನೆ ನೋಡಲಹಿಂಸೆಯನು ಪರಿ ।
ಪರಿಯ ಮತವಾದಿಗಳು ತಮ್ಮಯ ।
ಪರಿಯಲೇ ವಿಸ್ತರಿಸಿ ಜಗದಲಿ ಮೆರೆಸಿಹರು ತತ್ತ್ವ ॥ ೧೩೬ ॥

ಇರುವುದೆಂತು ವಿಚಿತ್ರವೀಪರಿ ।
ಪರಿಕಿಸುತಲಿ ನಿರೀಕ್ಷಿಸೈ ನೀ ।
ಮರದ ಟೊಂಗೆಯ ಕಡಿದು ಮರಕೆನೆ ಜೀಲಿ ಮಾಳ್ಪರಲಾ ॥
ಹರಿದು ತನ್ನಯ ಕರವ ಬೆಂಕಿಯ ।
ಳಿರದೆ ಜೀಲ್ಪುಸಿ ಹಸಿವೆಗೋಸುಗ ।
ಭರದಿ ತಿನುವರು ನೋಡಲಿದು ಬಹುವಿಚಿತ್ರತರವಲ್ಲೈ ॥೧೩೪॥

ಮುರಿದು ದೇವಸ್ಥಾನವದರೊಳ ।
ಗಿರುವ ಸಾಹಿತ್ಯದಲಿ ಗೋಡೆಯ ।
ನಿರಚಿಸಿದರೇನಾಯ್ತು ವುರುಪಾರ್ಥವು ಕಣಾ ಜಗದಿ ॥
ಪರಿಪರಿಯ ಯಜ್ಞಾದಿಕರ್ಮದಿ ।
ಪರಿಪರಿಯ ಪಶುಹಿಂಸೆ ಮಾಡುತ ।
ದೊರಕಿಸುವರೇನವರ ಹಿಂಸೆಯ ಪರಿಯು ಜೋದ್ಯವಲಾ ॥ ೧೩೫ ॥

ಇರುವುದೀಪರಿ ಕರ್ಮಕಾಂಡದೊ ।
ಳರಿತವರು ಪೇಳಿರ್ದ ನಿರ್ಣಯ ।
ಧರೆಗವರ್ಷಣತಾಪವಾಗಲು ವೃಷ್ಟಿ ಬೇಕೆನುತ ॥
ಪರಿಪರಿಯ ಪರ್ಜನ್ಯಯಾಗವ ।
ನಿರಚಿಸಲು ಬೇಕೆಂದು ಶಾಸ್ತ್ರಗ ।
ಳರುಹುವರು ಪಶುಹಿಂಸೆಯೇ ಯಿದಕಿಹುದು ಮೂಲವಲಾ ॥ ೧೩೬ ॥

ವರವಹಿಂಸಾತತ್ತ್ವ ಸರಿ ಯಿದ ।
ತೆರಡನೆಯ ದಂಡೆಯನೆ ಕಾಣರು ।
ನರನೆ ಹಿಂಸೆಯ ಜೀಜದಿಂದಲಹಿಂಸೆ ಬೆಳೆಯುವುದಿ ॥

ಸರಿಯಿಡಾದರು ನೋಡು ಯಾಪ್ತಿಕ ।
ರಿರನೆ ಕೌತುಕದಿಂದ ಹಿಂಸೆಯ ।
ಪರಿಯ ಮಾಳ್ಪರು ಚಿತ್ರತರದುತ್ಪೇಕ್ಷೆಯಾಯಿತಲಾ ॥ ೧೩೭ ॥

ನರನೆ ಕೇಳ್ಳೆ ವೈದ್ಯಶಾಸ್ತ್ರವ ।
ನರಿತವರು ಪೇಳ್ವ ಪ್ರಕಾರವು ।
ಯಿರುವುದೈ ವರಚೋದ್ಯ ಜೀವಿಯನೊಂದ ಬದುಕಿಸಲು ॥
ಎರಡನೆಯ ಜೀವಿಗಳನುರೆ ಸಂ ।
ಹರಿಸರಲ್ಲವೆ ಘಾತ ಮಾಡುವ ।
ರಿಯಲಾರರು ಹಿಂಸೆಯಿಂದೌಷಧವ ಮಾಳ್ಪರಲಾ ॥ ೧೩೮ ॥

ಪರಿಪರಿಯ ವ್ಯಾಧಿಗಳ ತಾಪದಿ ।
ನೆರಳುತಿಹ ಜೀವಿಗಳ ಹಿಂಸೆಯ ।
ಪರಿಹರಿಸಲೋಸುಗವೆ ನಾಡಿಪರೀಕ್ಷೆ ಮಾಡುತಲಿ ।
ಪರಿಪರಿಯಲೌಷಧನಿಧಾನವ ।
ನರುಹುವರು ಸಂದೇಹವಿಲ್ಲದೆ ।
ಹರಿವರೌಷಧಕಾಗಿ ಬೇರ್ಗಳನೊಂದುಮರದಿಂದ ॥ ೧೩೯ ॥

ಕಿತ್ತಿ ತರುತಿಹರೆರಡನೆಯ ಗಿಡ ।
ಮತ್ತೆ ಮಧ್ಯದಿ ಕಡಿವರನ್ಯವ ।
ವಿಸ್ತರದ ಮರದಿಂದ ತ್ವಕ್ಕನು ಸುಲಿದು ತರುವರಲಾ ॥
ಮತ್ತೆ ಬೀವಿಯನೊಂದ ಹಿಡಿಯುತ ।
ಯುಕ್ತಗರ್ಭವ ತೂಗಹಾಕುತ ।
ಸುತ್ತಲಾಜ್ಞಾದನವನೀಡುತ ಬೇಯಿಸುವರಲ್ಲೈ ॥ ೧೪೦ ॥

ಶತ್ರುಭಾವವಿಹೀನತರುಪಿಲಿ ।
ಸುತ್ತಮುತ್ತಲು ಕಡಿದು ಗಾಯದಿ ।
ಬತ್ತುವಂದದಿ ರಸವ ಹೀರುವರೌಷಧಕ್ಕಾಗಿ ॥
ವಾರ್ತ ಕೇಳೀತೆರದಿ ಜಗದಿ ಸ ।
ಮಸ್ತ ಮರಬಳ್ಳಿಗಳ ಸುಲಿಯುತ ।
ಸತ್ತ್ವಹರಣವ ಮಾಡಿ ಕೊಲುವರು ಬಳ್ಳಿಮರಗಳನು ॥ ೧೪೧ ॥

ನರನೆ ಕೇಳು ಸಜೀವಜಂತುವ ।
ನಿರದೆ ಕಡಿದಂಗದಲಿ ಕೈಯಲಿ ।
ಹರಿದು ತರುವರು ಪಿತ್ತಕೋಶವ ಮದ್ದಿಗೋಸುಗನೆ ॥
ಪರಿಪರಿಯಲೀ ತೆರದಿ ಹಿಂಸೆಯ ।
ನಿರದೆ ಮಾಡುತ ಜೀವರಕ್ಷಣ ।
ಪರರು ನಾವಿಂತೆನುತ ವೈದ್ಯರು ಘೋಷಿಸುವರಲ್ಲೈ ॥ ೧೪೨ ॥

ನರನೆ ಕೇಳ್ ವಸತಿಗೃಹಗಳ ।
ಮುರಿದು ದೇವಸ್ಥಾನ ಕಟ್ಟಿದ ।
ಪರಿಯಲಾ ಶ್ರೀಮಂತನನು ಸುಲಿದನ್ನಸ್ತ್ರವನು ॥
ಹರುಷದಿಂ ಕಟ್ಟಿಸುವರೇನೈ ।
ಪುರುಷಸುಟ್ಟಿಹ ಧೋತ್ರ ಬಿಚ್ಚುತ ।
ಶಿರಕೆ ಕಟ್ಟಿದ ತೆರನಿದಾಯಿತು ವೀರಕೌಂತೇಯ ॥ ೧೪೩ ॥

ಮುಂದಿನಂಗಳ ರಿಕ್ತವಿರುವುದು ।
ಯೆಂದು ಮನೆಯನು ಮುರಿದು ಹಂದರ ।
ಚಂದದಿಂದೇರಿಸುವರೇನಾ ಅಂಗಳದಿ ಪಾರ್ಥ ॥
ನೊಂದು ಜಳಿಯಿಂ ಹೊದ್ದುಕೊಳ್ಳುವ ।
ಜಂದವಿಹ ಕಂಬಳಿಯ ಸುಟ್ಟಡ- ।
ರಿಂದಲಗ್ನಿಷ್ಟಿಗೆಯ ಮಾಡುವರೇನು ಜಗದೊಳಗೆ ॥ ೧೪೪ ॥

ಅನೆಯಂಗವ ತೊಳೆದು ನದಿಯಲಿ ।
ಸ್ನಾನ ಹಾಕಿದರೇನು ಬಲ್ಲುದೆ ।
ಸ್ನಾನವಾದಾಕ್ಷಣದಿ ಕೆಸರನು ಮೈಯೊಳೇರಿಪುದು ॥
ಮಾನವನು ತನ್ನೆತ್ತ ಮಾರುತ- ।
ಲೇನ ಹೇಳಲಿ ಬಂದ ಹಣದಲಿ ।
ತಾನು ಕೊಟ್ಟಿಗೆ ಕಟ್ಟಲೇನದು ಸಾರ್ಥಕವೆ ಪಾರ್ಥ ॥೧೪೫॥

ಗಿಳಿಯನೋಡಿಸಿ ಕೈಯೊಳಿರಿತಿಹ ।
ಗಿಳಿಯ ಪಂಜರ ಮಾಡ ತೊಡಗಲು ।
ಯಿಳೆಯೊಳೇನಿದು ಚೇಷ್ಟೆಯೋ ವ್ಯವಹಾರವೆನ್ನವರೊ ॥
ಕೆಲಸಮೀಪರಿ ನೋಡಿ ನಗುವುದೊ ।
ಅಳುವುದೋ ಮಾಡುವುದು ಯೇನಿದು ।
ತಿಳಿಯಲಾರೆನು ಪಾರ್ಥ ಹಿಂಸಾಹಿಂಸೆಗಳ ನಿಜದಿ ॥ ೧೪೬ ॥

ಕೆಲರು ಧರ್ಮೋಕ್ತಿಪ್ರಕಾರದಿ ।
ಜಲವ ಸೋಸುತ ಕುಡಿವರಲ್ಲವೆ ।
ತಿಳಿಯರಲ್ಲಾ ವಸ್ತ್ರದಲಿ ಜಲ ಸೋಸುತಿರುವಾಗ ॥
ಹಲವು ಕೃಮಿ ನೂರಾರು ಸಂಖ್ಯೆಯ- ।
ಲಳಿದು ಹೋಗುವುವಲ್ಲವೇ ಯಿದ ।
ತಿಳಿಯಲಾರದೆ ಕಷ್ಟಪಡುವರಹಿಂಸೆತತ್ಪರದಲಿ ॥ ೧೪೭ ॥

ಇನ್ನು ಕೆಲವರು ಹಿಂಸೆಯಾಗುವ- ।
ದೆನ್ನುತಲಿ ಭೀತಿಯಲಿ ಸಂತತ ।
ಧಾನ್ಯವನು ತಿನ್ನದಲೆ ಕೇಳುಪವಾಸ ಮಾಡುವರು ॥
ಅನ್ನವನು ತ್ಯಜಿಸಿದರೆ ಪ್ರಾಣಗ- ।
ಳನ್ನು ರಕ್ಷಿಪುದೆಂತು ಪಾರ್ಥನೆ ।
ಯೆನ್ನ ಮತದಲಿ ಹಿಂಸೆಯಲ್ಲವೆ ತ್ರಾಸವೀಪರಿಯ ॥ ೧೪೮ ॥

ನರನೆ ಕೇಳ್ ಕರ್ಮಕಾಂಡದಿ ।
ಕರೆವರಿದನೆಯಹಿಂಸೆಯೆನುತಲಿ ।
ಯರಿಯಲಿದರ ನಿಜತ್ವವಿದುವೇ ಹಿಂಸೆ ಯೆನಿಸುವುದು ॥
ಅರಿವು ನಿನಗಿರ ಬೇಕೆನುತಲೀ- ।
ಪರಿಯ ಸಿದ್ಧಾಂತವನು ನಾ ವಿ- ।
ಸ್ತರಿಸಿದೆನು ನೀ ತಿಳಿಯ ಬೇಕಿದನೆಂದು ಯೋಚಿಸಿದೆ ॥ ೧೪೯ ॥

ನರನೆ ನಿನಗೆ ಯಹಿಂಸೆಯೆಂಬುದು ।
ಬಿರುವ್ರದೆಂತೀಲಕ್ಷಣಂಗಳ- ।
ನರುಹ ಬೇಕೆಂತಾಯ್ತು ಮನದಲಿ ನಿಶ್ಚಯವು ತಿಳಿಯೆ ॥
ಅರುಹ ಬೇಕೈ ಮೊಟ್ಟಮೊದಲಲಿ ।
ಖರೆಯಹಿಂಸೆಯ ತತ್ತ್ವವೆನುತಲಿ ।
ಭರದೊಳಾಯಿತು ಮನದೊಳಿಚ್ಛೆಯು ಮರಳಿ ಯೋಚಿಸಿದೆ
॥ ೧೫೦ ॥

ಖರೆಯಹಿಂಸೆಯ ಹೇಳಿ ಹೋದರೆ ।
ನರನೆ ನಿನಗೀನಾಮಧಾರಕ- ।
ಪಿರುವಹಿಂಸೆಯ ಲಕ್ಷಣಂಗಳ ತಿಳಿವ ಪರಿಯೆಂತು ॥
ಒರುನ್ನಡಾಯ್ತು ವಿಚಾರ ಮನದಲಿ ।
ತಿರುಗಿತದರಿಂದಿಚ್ಛೆ ಮನದಲಿ ।
ಧರಿಸುತೀಹೇತುವನು ಮನದಲಿ ಪೇಳ್ದೆ ನಿನಗಿದನು ॥ ೧೫೧ ॥

ಆರಿಯಲಿದು ಕೇಳಡ್ಡಹಾದಿಯು ।
ಒರಿದೆ ಹೋಗುವರಾರು ಶ್ರಮದಲಿ ।
ಯಿರುವ್ರದಿದಕಿನ್ನೊಂದು ಕಾರಣ ಪೇಳ್ದೆ ನಿನಗೀಗ ॥
ಧರೆಯೊಳಗೆ ನಿಜಮತವ ಸ್ಥಾಪಿಸು- ।
ತಿರುವವರು ಕೇಳನ್ಯಮತಗಳ- ।
ನರಿತು ನಿಜಮತಗಳನು ಸಿದ್ಧಾಂತದಲಿ ಪೇಳುವುದು ॥ ೧೫೨ ॥

ಅನ್ಯಮತದ ವಿಚಾರವನು ನಾ- ।
ನಿನ್ನು ವಿಸ್ತಾರದಲಿ ಪೇಳ್ದೆನು ।
ಮುನ್ನ ನಿನಗಾನರುಹುವೆನು ಕೇಳನ್ಯ ಮತಗಳನು ॥
ನನ್ನ ಮತವನು ಸ್ಪಷ್ಟತನದಿಂ ।
ವರ್ಣಿಸುವೆ ನಿನಗೀಗ ಪಾರ್ಥನೆ ।
ವರ್ಣಿಸುವೆ ನಿನಗಿನ್ನಹಿಂಸೆಯ ಲಕ್ಷಣಂಗಳನು ॥ ೧೫೩ ॥

ನರನೆ ಕೇಳಂತಃಕರಣದಲಿ ।
ಬರಲಹಿಂಸೆಯ ತತ್ತ್ವದುದಯವು ।
ಬರುವುದೈ ಗೋಚರಕೆ ಜ್ಞಾನವು ಸ್ವಪ್ನತನದಿಂದ ॥
ಬರಲು ತತ್ತ್ವೋದಯವು ಪೂರ್ಣದಿ ।
ನಿರುತವನಾಚರಣದಲಿ ಗೋ-।
ಚರಿಪುದೈ ನಿಜ ನೋಡಹಿಂಸೆಯು ಪಾರ್ಥ ನೋಡಿದಿಯಾ
॥ ೧೫೪ ॥

ಚಿನ್ನವನ್ನೊರೆಗಲ್ಲ ಹಚ್ಚಲು ।
ಬಣ್ಣಬೆಲೆಗಳನರಿಯ ಬಹುದೈ ।
ಚನ್ನಗೀಪರಿ ಜ್ಞಾನವಾಗಲಹಿಂಸೆ ತಿಳಿಯುವುದು ॥
ಇನ್ನು ನಿನಗಾಂ ಜ್ಞಾನಲಕ್ಷಣ-।
ವನ್ನು ವಿಸ್ತರದಿಂದ ಪೇಳ್ವೆನು ।
ಪೂರ್ಣಬಿಂಬವದೆಂತು ಹೊರಡುವುದೆಂತ ತಿಳಿಸುವೆನು
॥ ೧೫೫ ॥

ತೆರೆಗಳನು ಮುರಿಯದಲೆ ನೀರಿನ ।
ಸ್ಥಿರತೆಯನು ಭಂಗಿಸದೆ ತನ್ನಯ ।
ಚರಣವನು ಬಕ ಜಲದಲಿಡುವುದು ಮಿನ ಪಿಡಿಯಲಿಕೆ ॥
ಸರಸಿಜಕೆ ಸೋವಾಗದಲೆ ನಿಜ-।
ಚರಣಗಳ ಕೇಸರದೊಳಿಡುತಲಿ ।
ಪರಿಮಳವನಾಸ್ವಾದಿಸುವುದೈ ಭ್ರಮರವಾತೆರದಿ ॥ ೧೫೬ ॥

ಕ್ಷೋಣಿಯಲಿ ಪರಮಾಣುಗಳ ಸು-।
ಶ್ರೇಣಿಯಲಿ ತುಂಬಿಹುವು ಜೀವಿಗ-।
ಳೇನ ಹೇಳಲಿ ನಡೆವುದೆಂತೋ ಭೀತಿಭೀತಿಯಲಿ ॥
ಜ್ಞಾನಿಪುರುಷನು ತನ್ನ ಕಾಲನು ।
ಕ್ಷೋಣಿಯಲಿ ತಾನಿಟ್ಟು ನಡೆವನ-।
ತಾನು ನೋಡುವನೆಲ್ಲಿ ಜೀರುವನಲ್ಲಿ ಕರುಣೆಯನು ॥೧೫೭॥

ತಾನು ಹೋಗುವ ದಿಶೆಗಳಲಿ ಸಂ-।
ಪೂರ್ಣವಿಡುವನು ಸ್ನೇಹಭಾವವ ।
ಪ್ರಾಣಿಗಳ ಜೀವಕ್ಕೆ ತ್ರಾಸವು ಬಾರದಂದದಲಿ ॥
ತಾನು ಜಾಗ್ರತೆಯಿಂದ ನಡೆವನು ।
ಯೇನಹೇಳಲಹಿಂಸೆಯನ್ನು ಪ್ರ-।
ಮಾಣಪೂರ್ವಕವಾಗಿ ಶಬ್ದದಿ ವಿಸ್ತರಿಸಲಾರೆ ॥ ೧೫೮ ॥

ಬಿಕ್ಕು ತನ್ನಯ ಮರಿಯ ಬಾಯೊಳ-।
ಗಕ್ಕರದಿ ಹಿಡಿದೋಡುವಾಗಲೆ ।
ದುಕ್ಕವಾಗುವುದೇನು ಮರಿಗಾಹಲ್ಲಿನಿಂ ವಾರ್ಥ ॥

ಮಕ್ಕಳನು ನಿಜತಾಯಿ ಪ್ರೇಮಕ-।
ಟಾಕ್ಷದಿಂ ನೋಡಿದರೆ ತ್ರಾಸವು ।
ಮಕ್ಕಳಿಂಗಾಗುವುದೆ ತಾಯಿಯ ದೃಷ್ಟಿಯಮೃತವಲಾ ॥ ೧೫೯ ॥

ಆಳಿಯಬಾರದು ಜೀವಜಾತಿಯು ।
ಬಳಲಿಸಲು ಸರಿಯಲ್ಲವೆನುತಲಿ ।
ತಿಳಿದು ಹೆಜ್ಜೆಯನಿಡುವನೈ ಭೂಮಿಯಲಿ ಕೌಂತೇಯ ॥
ಇಳೆಯೊಳೀಪರಿ ಜ್ಞಾನಿ ಹೆಜ್ಜೆಯ ।
ಹಳುಹಳೂ ತಾನಿಡುವ ಕಾರಣ ।
ಬಳಲಿಕೆಯು ಬಾರದಲೆ ಜೀವಿಗೆ ಸುಖವೆ ಬರುತಿಹುದು ॥ ೧೬೦ ॥

ಇರಿವೆ ಮೊದಲಾಗಿರುವ ಪ್ರಾಣಿಗ-।
ಳೆರದೆ ದೃಗ್ಗೋಚರಕೆ ಬಂದರೆ ।
ತಿರಿಗಿ ಹಿಮ್ಮೆಟ್ಟುವನು ಕಾಲಿಂ ತುಳಿಯನವ್ವಗಳನು ॥
ಧರೆಯ ಮೇಲಪ್ಪಳಿಸೆ ಕಾಲ್ಗಳ ।
ಬರುವುದಲ್ಲವೆ ಭಂಗ ನಿದ್ರೆಗೆ ।
ಮುರಿಯ ಬಾರದು ಸ್ವಸ್ಥತೆಯನನ್ಯರಲಿ ತಾನೆಂದು ॥ ೧೬೧ ॥

ಹುಟ್ಟಿ ಮನದಲಿ ದಯೆಯು ಪಾರ್ಥನೆ ।
ಕಷ್ಟವನು ಕೊಡನನ್ಯಜೀವಿಗೆ ।
ನಷ್ಟವಾಗದ ತೆರದಿ ಜೀವವು ತೃಣವ ತುಳಿಯುವನು ॥
ದೃಷ್ಟಿಪಥದಲಿ ಜೀವಿ ಬರಲದ ।
ಪೆಟ್ಟಿ ಕಾಲಲಿ ಕೊಲುವೆನೆಂಬುವ ।
ನೋಷ್ಟಿ ಸಂಭವಿಸುವುದೆ ನೋಡೈ ಪಾರ್ಥ ಮನಗೊಟ್ಟು ॥೧೬೨॥

ಇರಿವೆ ಡಾಟುವುದೇನು ಮೇರುವ ।
ಶರಧಿಯನು ಲಂಘಿಪುದೆ ಮಶಕವು ।
ಪರಿಯಲಾ ಪ್ರಾಣಿಗಳನುಲ್ಲಂಘಿಸನು ಜ್ಞಾನಿ ಕಣಾ ॥
ಇರುವುದೀಪರಿ ಜ್ಞಾನಿವರ್ತನ ।
ಕರುಣೆಫಲಗಳ ಹಿಡಿದ ಬಳ್ಳಿಯೊ ।
ಕರುಣೆಯೊಡ ಮೂಡಿಹುದು ವಾಣಿಯೆಲೇನ ಹೇಳುವೆನು ॥೧೬೩॥

ಜ್ಞಾನಿ ಶ್ವಾಸೋಚ್ಛ್ವಾಸ ಮಾಡಲು ।
ಹಾನಿ ತರನನ್ಯರಿಗೆ ಹತ್ತರ ।
ಕ್ಷೋಣಿಯಲ್ಲೀತೆರದಿ ಘಾತವನರಿಯನವ ಮನದಿ ॥
ಏನ ಹೇಳಲಿ ಮುಖವ ನೋಡಲು ।
ಸಾನುರಾಗದ ತೌರುಮನೆಯೋ ।
ಕಾಣುವುದು ಮುಖವನದೀಪರಿ ಜ್ಞಾನಲಕ್ಷಣವು ॥ ೧೬೪ ॥

ದಂತಪಂಕ್ತಿಯ ನೋಡಲಾತನ ।
ದಾಂತುದೋ ಮಾಧುರ್ಯವಂಕುರ ।
ವೆಂತ ತೋರ್ಪುದು ಶಬ್ದ ಬಾಯಿಂ ಹೊರಗೆ ಬರುವಾಗ ॥
ಬಂತೆನುತ ತಿಳಿ ಸ್ನೇಹಭಾವವು ।
ಅಂತರದಿ ದಯೆ ಹುಟ್ಟುವೆದು ತದ ।
ನಂತರದಿ ಶಬ್ದಗಳು ಹೊರ ಬೀಳುವುವು ದಯೆಯಿಂದ ॥೧೬೫॥

ಮಾತಿನಲಿ ಸುಜ್ಞಾನಿ ತೋರಿಸ ।
ನಾತುರತೆಯನು ಶಕ್ಯಮಟ್ಟಿಗೆ ।
ಮಾತ ನುಡಿವ ಪ್ರಸಂಗ ಬಂದರೆ ಮಾಡಿ ಸುವಿಚಾರ ॥
ಮಾತನಾಡಲು ತಾನು ಯಿತರರ ।
ಘಾತವಾಗುವುದೇನೊ ಯೆಂಬೀ ।
ಭೀತಿಯಿಂದಲಿ ಮಾತ ನುಡಿವನು ಪರರ ನೋಯಿಸದೆ
॥ ೧೬೬ ॥

ಕುಂದುಕೊರತೆಯ ಮಾತುಗಳು ಬಾ ।
ಯಿಂದ ಹೊರಟರೆ ಬೇರೆಯವರಿಗೆ ।
ಬಂದು ಮರ್ಮದಿ ಬೇಳಲಾಗದೆನುತ್ತ ಯೋಚಿಪನು ॥
ಮುಂದೆ ತಾನಾಡಿರುವ ಶಬ್ದಗ ।
ಳಿಂದಲನ್ಯರ ಮನದಿ ಶಂಕೆಯು ।
ಬಂದು ತ್ರಾಸವ ಕೊಡದ ತೆರದಿ ವಿಚಾರ ಮಾಡುವನು
॥ ೧೬೭ ॥

ಮಾತ ಕೇಳುತ ಭಾವ ಸ್ವಮನೋ ।
ಭೂತ ಮುರಿಯದ ತೆರದಲಾಡುವ ।
ಭೀತಿಕಂಪಗಳಾಗದಂದದಿ ಮಾತನಾಡುವನು ॥
ಮಾತನಾರು ತಿರಸ್ಕರಿಸಿದರು ।
ಘಾತವಾತವೆ ಬಾರದನ್ಯರಿ ।
ಗೀತೆರದಿ ತಾಂ ರಕ್ಷಿಸುವ್ಯ ತನ್ನ ನಾಲಿಗೆಯ ॥ ೧೬೮ ॥

ಭೂತಳದೊಳನ್ಯರಿಗೆ ತನ್ನಯ ।
ಮಾತಿನಿಂದಲೆ ಪೀಡೆ ಬಾರದ ।
ರೀತಿಯಲಿ ಮಾತಾಡುತಿರುವನು ಜ್ಞಾನಿ ಸಂತತದಿ ॥
ಮಾತ ಕೇಳುತ ಹುಬ್ಬನೇರಿಸಿ ।
ಪ್ರೀತಿ ಬಿಸುಡುತ ನೋಳ್ಪರೆನುತಲ ।
ಭೀತಿಯಿಂದಲೆ ಮಾತನಾಡದೆ ಸ್ವಸ್ಥ ಕೂಡುವನು ॥ ೧೬೯ ॥

ವಾರ್ಥ ಕೇಳ್ದೆ ಯನ್ಯರವನನು ।
ಪ್ರಾರ್ಥಿಸಲು ಪ್ರೇಮದಲಿ ಬಯಕೆಯ ।
ಪೂರ್ತಮಾಳ್ಪನು ತಾಯಿತಂದೆಯೊ ಹಾಗೆ ಮಾಡುವನು ॥

ಈತೆರದಲಾನಂದ ಬೀರುವ ।
ಭೂತಳದಿ ಶ್ರೋತರಿಗೆ ಪರಮ ।
ಪ್ರೀತಿಯುಂಟಾಗುವುದು ನೋಡೈ ಪಾರ್ಥ ಮನಗೊಟ್ಟು ॥೧೬೦॥

ಮೇದಿನಿಯಲಾನಾದಬ್ರಹ್ಮವ ।
ವೇದವೆನುತ ಪ್ರಸಿದ್ಧವಿಹುದದು ।
ವೀಧರೆಯ ಮೇಲ್ ಪ್ರಕಟವಾಯ್ತೋ ಮೂರ್ತಿಯುತವಾಗಿ ॥
ಮೇದಿನಿಯಲಿ ಪವಿತ್ರವಿಹ ಗಂ ।
ಗೋದಕವು ಹರಿವುದೊ ಪ್ರವಾಹದಿ ।
ಸಾಧುಶೀಲಪತಿವ್ರತೆಗೆ ವಾರ್ದ್ಧಕ್ಯ ಬಂದಿಹುದೊ ॥ ೧೬೧ ॥

ಪರಿಯೊಳೀ ಮೃದುಸತ್ಯವಾಗಿಹ ।
ಪರಿಮಿತದ ಪ್ರೇಮಾರ್ದ್ರವಿರುತಿಹ ।
ಸರಸಶಬ್ದಶ್ರೇಣಿ ಬಾಯಿಂ ಹೊರಗೆ ಬರುತಿರಲು ॥
ಮೆರೆವುದಲ್ಲವೆ ಬಾಯೊಳಮೃತದ ।
ತೆರೆಗಳೇಳುವ ತೆರದಿ ಪಾರ್ಥನೆ ।
ಯಿರದಲಾ ವ್ಯಾಜಸ್ತುತಿಯ ಭಾಷಣವು ಕೌಂತೇಯ ॥ ೧೬೨ ॥

ಇರದು ವಾದೋತ್ಪತ್ತಿಕಾರಣ ।
ಪಿರದು ಪರರಿಗೆ ತ್ರಾಸಕಾರಣ ।
ವಿರದು ಕೇಳನ್ಯರಿಗೆ ನಿಂದಾಳ್ತಲದ ಕೋಷಣವು ॥
ಇರದು ಪರರಿಗೆ ಮರ್ಮಭೇದನ ।
ವಿರದಲಾ ಹರದುಃಖವೇಗವು ।
ಯಿರದು ವಂಚನೆ ಕಪಟ ಶಂಕೆಯು ಶುಷ್ಕಲಾಘವವು ॥೧೬೩॥

ಸ್ಥಿರವಿರುವುದೈ ದೃಷ್ಟಿಯಾತನೆ ।
ಸರಳವಿಹುದೈ ಭ್ರಕುಟಿಯವನಿಗೆ ।
ನೆರಿಗೆಗಳು ಗೋಚರಿಸಲಾರವು ಹಣೆಯು ಮೇಲವಗೆ ॥
ಧರೆಯೊಳೆಲ್ಲರ ಹೃದಯ ಕಮಲದೊ ।
ಳಿರುವುದೈ ಪರಬ್ರಹ್ಮ ಪೂರ್ಣವು ।
ಅರಿಯುತೀಪರಿ ಕಣ್ಣ ತೆರೆಯನು ತ್ರಾಸಭಯದಿಂದ ॥ ೧೬೪ ॥

ಕರುಣದಿಂದದ ನೇತ್ರಯುಗಳವ ।
ತೆರೆಯಲಾದೃಷ್ಟಿಯ ಪ್ರವಾಹದಿ ।
ಹರಿವುದಮೃತದ ಧಾರೆ ಸಂತತ ಕೊಡುತಲಾನಂದ ॥
ನರರ ದೃಷ್ಟಿಗೆ ಚಂದ್ರನಿಂದಲಿ ।
ಹೊರಡುವಮೃತದ ಧಾರೆಗಳು ಗೋ ।
ಚರಕೆ ಬಾರದೊಡೇನು ಸಂತೈಪುವು ಚಕೋರಗಳ ॥ ೧೬೫ ॥

ನರನೆ ಕೇಳಾ ತೆರದಿ ಜ್ಞಾನಿಯು ।
ತೆರೆಯಲಮೃತದ ದೃಷ್ಟಿಯದರಿಂ ।
ಬರುವುದಾನಂದವು ಸಮಾಧಾನವು ಕಣಾ ಜಗದಿ ॥
ಇರುವುದಂತಾ ಪ್ರೇಮದೃಷ್ಟಿಯು ।
ಅರಿವರಾರು ಪ್ರಮಾಣಪೂರ್ವಕ- ।
ವರಿವುದೊಂದೇ ಯಾಮೆ ಪ್ರೇಮಕಟಾಕ್ಷಮಹಿಮೆಯನು
॥ ೧೩೬ ॥

ಭೂತಮಾತ್ರದ ಮೇಲೆ ಯೋತ- ।
ಪ್ರೋತ ಪ್ರೇಮದಿ ತುಂಬಲಾ ನರ ।
ಭೂತಳದೊಳಹನಧಿಕರರ್ಜುಣಿ ಯೆಂತು ನೋಡಿದರು ॥
ಆತನಿಂಗಾ ದೃಷ್ಟಿಯಂದದಿ ।
ಪೂತಹಸ್ತಗಳೆಹುವು ನೋಡೈ ।
ಪೂರ್ತವಾಗುವುವೆಲ್ಲ ಸುಮನೋರಥಗಳಾತನವು ॥ ೧೩೭ ॥

ಕರಗಳನು ನೋಡಿದರೆ ಪಾರ್ಥನೆ ।
ತೊರೆದಿಹುವು ವ್ಯಾಪಾರವೆಲ್ಲವ ।
ಕುರುಡ ನೋಡುವ ಕ್ರಿಯೆಯು ಬಿಟ್ಟುಂದದಲಿಕೌಂತೇಯ ॥
ಉರುವಲನು ಕಾಣದಲೆ ವೈಶ್ವ- ।
ನರನು ವ್ರಿಯನು ಬಿಟ್ಟ ತೆರದಲಿ ।
ನರಗೆ ಮೂಕತೆ ಬರಲು ವಾಚೆಯ ಬಿಟ್ಟ ತೆರನಂತೆ ॥೧೩೮॥

ಕರಗಳೆರ್ದೊಡದೇನು ಕರದಿಂ ।
ದಿರುವುದೇನುಪಯೋಗ ಮಾಡುವ ।
ಕರಣಿ ಯಿಲ್ಲೈ ಜ್ಞಾನಿ ನಿಜ ಕೃತಕೃತ್ಯನಾಗಿಹನು ॥
ನರನೆ ಕೇಳಾಘಾತ ಗಾಳಿಗೆ ।
ಬರುವುದೋ ಗಗನದಲಿ ತನ್ನಯ ।
ಕರದ ನಖದಿಂ ಘಾತವಾಗುವುದೆಂತ ಭೀತಿಯಲಿ ॥೧೩೯॥

ತನ್ನ ಕರಗಳ ಚಲಿಸಲಾರನು ।
ತನ್ನ ಮೈಯಲಿ ಕೂತ ಸೊಳ್ಳೆಗ- ।
ಳನ್ನು ಹೊಡೆಯನು ಕಣ್ಣ ಸೇರುವ ನೊಣವನಲಗಿಸನು ॥
ಮುನ್ನ ಪಶುಪಕ್ಷಿಗಳ ಬಡಿಯುತ- ।
ಲಿನ್ನವಕೆ ಬೆದರಿಕೆಯ ತೋರ್ಪುದ- ।
ರೆನ್ನ ಗೆಳೆಯನೆ ಕೇಳು ಸಂಭವವೆಂತು ಜಗದೊಳಗೆ ॥೧೪೦॥

ನರನೆ ಕೇಳ್ಗೆ ದಂಡಕೋಲನು ।
ಧರಿಸಲಂಜುವ ತನ್ನ ಕೈಯಲಿ ।
ಧರಿಸುವನು ಮೇಣೆಂತು ಶಸ್ತ್ರವನವನು ಕೈಯೊಳಗೆ ।

ಕರದಿ ಕಮಲವ ಹಿಡಿದು ತಿರುಗಿಸು ।
ತಿರಲು ಹೂವಿನ ಸರವ ತೂಗಿಸು ।
ತಿರಲು ತತ್ಕರ್ಮದಲಿ ಜೀವಿಗೆ ಹಾನಿಬಹುದೆಂದು ॥ ೧೪೧ ॥

ನರನೆ ಕೇಳೀತೆರದಿ ಯೋಚಿಸಿ ।
ತೊರೆವನೀ ವ್ಯಾಪಾರವೆಲ್ಲವ ।
ಕರವನಗಲಾಡಿಸನು ಮೈಯಲಿ ಕರ್ಮವಶದಿಂದ ॥
ಹರಣವಹುದಾರೋಮತತಿಗೆಂ ।
ದುರುತರದಿ ಭೀತಿಯಲಿ ಪಾರ್ಥನೆ ।
ಕರದ ನಖಗಳ ಬೆಳೆಸುತಿಹನ್ಯೆ ಹಿಂಸೆ ಬಹುದೆಂದು ॥ ೧೪೨ ॥

ಕರಗಳನು ಜೋಡಿಸುವ ಕರ್ಮಾ- ।
ಚರಣ ಮಾತ್ರವೆ ವಿದಿತವಿಹುದೈ ।
ಯರಿಯನೆರಡನೆ ಕರ್ಮದಭ್ಯಾಸವನು ಕೌಂತೇಯ ॥
ಕರದಿ ಕರ್ಮವ ಮಾಳ್ಪುದಿದ್ದರೆ ।
ಕರವನೆತ್ತುತಲಭಯ ಕೊಡುವನು ।
ಪುರುಷರನ್ಯರು ಜೀಳುತಿದ್ದರೆ ತನೆದವರ ಹಿಡಿವ ॥ ೧೪೩ ॥

ನರನು ಪೀಡಿತನಿರಲು ಮೈಯೊಳ- ।
ಗಿರದೆ ಕರದಿಂ ಸೇವರಿಸುವನು ।
ಪರಿಯಲೀಕರ್ಮಗಳ ಸಂಕಟದಿಂದ ಮಾಡುವನು ॥
ಪರಜನರ ಪೀಡೆಯನು ನೋಡಲು ।
ಕರಗುತಿಹುದಂತಃಕರಣವೈ ।
ಕರದ ಸ್ಪರ್ಶದಿ ದೂರ ಮಾಳ್ಪನು ಪರರ ಪೀಡೆಯನು ॥ ೧೪೪ ॥

ನರನೆ ಕೇಳೈ ಜ್ಞಾನಿವುರುಷನ ।
ಕರುಣೆಝರಿ ಸೂಸಿದರೆ ಜಗದಲಿ ।
ಝರಿವುದದು ಕೇಳ್ ಚಂದ್ರಕಿರಣಕ್ಕಿಂತ ಮಿಗಿಲಾಗಿ ॥
ಹೊರಡಲಾ ಮಲಯಾಚಲಾನಿಲ ।
ತರುವೈದೈ ಪೀಡಿತಗೆ ಶಾಂತಿಯ ।
ಬರುವುದಾಪರಿ ಸೌಖ್ಯ ಪಶುಗಳಿಗಿವನ ಕೈಯಿಂದ ॥ ೧೪೫ ॥

ನಿರುತ ಕೈಗಳು ರಿಕ್ತವಿರುವುವು ।
ಬರುವುದೇನ್ಯೆ ಚಂದನಕೆ ಫಲ ।
ಪರಿಯಿದಾದರು ಚಂದನವು ನಿಷ್ಫಲವೆ ಕೌಂತೇಯ ॥
ನಿರುತ ಶೀತಲ ಚಂದನವಲಾ ।
ಪರಿಪರಿಯ ಭಾಗದಲಿ ಭೇದವೆ ।
ನಿರುತ ಚಂದನದಂತೆ ಶೀತಲ ಸಫಲನೈ ಜ್ಞಾನಿ ॥ ೧೪೬ ॥

ಬರಿದೆ ವಾಕ್ಪಾಂಡಿತ್ಯ ಸಾಕಿದು ।
ಧರೆಯೊಳಗೆ ಸಜ್ಜನರ ಮನವದು ।
ಮೆರೆವ ಮನದ ಸ್ವಭಾವವಾಪರಿ ಕರಗಳಾಚರಣ ॥
ಇರುವುವೆಂತಿವು ಯೆಂಬು ಕೇಳಿದ-।
ರರುಹಲೆಂತಾವರ್ಣನೆಯ ನಾ ।
ನರನೆ ನಿನಗಾನೆಂತು ವರ್ಣಿಸಲಿವ್ರಗಳುರುಮಹಿಮೆ ॥೧೮೭॥

ಮರದ ಟೊಂಗೆಗಳೆಲ್ಲ ಮರವೈ ।
ಯಿರುವುದೇ ಸಾಗರವು ನೀರಿಂ ।
ಧೊರತು ತೇಜವ ಬಿಟ್ಟು ಬೇರಿಹನೇನು ಭಾಸ್ಕರನು ॥
ಇರುವುದೇನವಯವವು ದೇಹದ್ದ।
ಹೊರತು ನೀರನು ಬಿಟ್ಟು ನೀರಿನ ।
ಸರಸತೆಯು ಮೇಣಿಹುದೆ ಪಾರ್ಥನೆ ನೋಡು ಮನಗೊಟ್ಟು
॥ ೧೮೮ ॥

ನರನೆ ಸಕಲೇಂದ್ರಿಯದ ಬಾಹ್ಯಾ- ।
ಚರಣವೆಲ್ಲವು ನರನ ಮನಸಿನ ।
ಹೊರತಿಹುದೆ ಯಿಂದ್ರಿಯಗಳಾಟವು ಮನದೆನುತ ತಿಳಿಯೈ ॥
ಧರೆಯೊಳಗೆ ಬೀಜವನು ಬಿತ್ತಿರೆ ।
ಹೊರಗೆ ಮರದಾಕಾರದಲಿ ಗೋ- ।
ಚರಿಪುದಲ್ಲವೆ ನೋಡು ಸರ್ವೇಂದ್ರಿಯದ ವ್ಯಾಪಾರ ॥೧೮೯॥

ಹೊರಗೆ ತೋರ್ಪುದು ಮನವು ಪ್ರೇರಿಸು- ।
ತಿರುವ ತೆರದಲಿ ನೋಡು ಪಾರ್ಥನೆ ।
ಯಿರದಹಿಂಸೆಯು ಮನದಿ ಬಾಹ್ಯೇಂದ್ರಿಯದಿ ಮೂಡುವುದೆ ॥
ನರನೆ ಕೇಳೈ ವೃತ್ತಿ ಸರ್ವಪ್ರ ।
ಬರುವುದೈ ಮನದಲ್ಲಿ ಮೊದಲಲಿ ।
ಬರುವುದದನಂತರದಿ ವಾಗ್ದೃಷ್ಟಿಯಲಿ ಹಸ್ತದಲಿ ॥ ೧೯೦ ॥

ನರನೆ ಸಂಗತಿ ಮನದಿ ಬಾರದೆ ।
ಬರುವುದೆಂತೈ ನಾಲಿಗೆಯೊಳದು ।
ಧರೆಯೊಳಂಕುರ ಹೊರಡುತಿಹುದೇ ಬೀಜ ಬಿತ್ತದಲೆ ॥
ಪುರುಷನೊರ್ವನು ಸೂತ್ರಧಾರಕ- ।
ನಿರದೆ ಸೂತ್ರದ ಗೊಂಬೆ ಕುಣಿವುದೆ ।
ತೊರೆಯಲಾ ಮನವೆಲ್ಲವ್ಯಾಪಾರವನು ಕೌಂತೇಯ ॥೧೯೧॥

ನರನೆ ನಿಜ ಸರ್ವೇಂದ್ರಿಯಂಗಳು ।
ಧರಿಸುವುವು ನಿರ್ಜಲತೆ ನೀರಿನ ।
ಝರಿಯೆ ಬತ್ತಿದರೆಂತು ಹರಿವುದು ಹೊಳೆಯೊಳಗೆ ನೀರು ॥

ಮರಣವಾಗಲು ದೇಹದೊಳಗಿನ ।
ಪರಿಪರಿಯ ವ್ಯಾಪಾರ ಮುರಿವುದು ।
ಯಿರುವುದಿಂದ್ರಿಯದಾಟಕೆಲ್ಲಕು ಮನವೆ ಕಾರಣವು ॥ ೧೯೨ ॥

ನರನೆ ಸರ್ವೇಂದ್ರಿಯಗಳಿಂದಲಿ ।
ಧರೆಯೊಳಿಹ ವ್ಯಾಪಾರವೆಲ್ಲವ ।
ವಿರಚಿಸುವುದೈ ಮನವು ಕೇಳೊಳವಾಸನೆಯ ತೆರದಿ ॥
ಮರದಿ ಫಲ ಹಣ್ಣಾಗೆ ಯದರಿಂ ।
ಪರಿಮಳವು ಹಬ್ಬುವುದು ಸುತ್ತಲು ।
ಸ್ಥಿರವಹಿಂಸೆಯು ಮನದೊಳಾಗಲು ನೋಡು ಕೌಂತೇಯ ॥೧೯೩॥

ಹೊರಗಹಿಂಸೆಯು ಬರುವುದಲ್ಲವೆ ।
ನರನ ಸಕಲೇಂದ್ರಿಯದ ಕರ್ಮದಿ ।
ನಿರುತ ದೃಗ್ಗೋಚರಕಹಿಂಸೆಯು ತೋರಿ ಬರುವುದಲಾ ॥
ಇರುವುದೈ ಸಂಪತ್ತ್ಯಹಿಂಸೆಯು ।
ಅರಿಯುತೀ ತತ್ತ್ವವನಮಿಂಸೆಯ ।
ನಿರುತವಿಂದ್ರಿಯನಿಕರವದನೇ ಕೊಂಡುಕೊಳ್ಳುವುದು ॥ ೧೯೪ ॥

ಭರತಿಯೇರಲು ನೀರು ಶರಧಿಯೊ- ।
ಳೆರದೆ ಪಸರಿಸಿ ನದಿಯು ಪಾತ್ರದಿ ।
ಬರುವುದಾಪರಿ ನೋಡಹಿಂಸೆಯ ಭರತಿ ಮನದೊಳಗೆ ॥
ಬರಲು ಸರ್ವೇಂದ್ರಿಯಗಳಲಿ ಗೋ- ।
ಚರಕೆ ಬರುವುದಹಿಂಸೆ ಮೇಣಾ- ।
ಚರಣದಲಿ ಸರ್ವತ್ರದಲಿ ಬಂದದುವೆ ತುಳುಕುವುದು ॥ ೧೯೫ ॥

ನರನೆ ವಿಸ್ತರವೇಕೆ ನಾಕೈ ।
ಗುರುವು ಶಿಷ್ಯನ ಕೈಯ ಹಿಡಿಯುತ ।
ಬೆರಳಿನಿಂ ತಾನಕ್ಷರಂಗಳ ತಿದ್ದಿಕೊಳುವನಲಾ ॥
ಧರೆಯಲಾಪರಿ ಪೂರ್ಣತೆಗೆ ಬಂ- ।
ದಿರುವ ದಯೆಯಿಂದ್ರಿಯನಿಕರದಲಿ ।
ಹೊರಡಿಸುವುದೈ ಕೇಳಹಿಂಸಾತತ್ತ್ವನೆಸೆ ಪಾರ್ಥ ॥ ೧೯೬ ॥

ನರನೆ ಕೇಳಾಕಾರಣದಲಾ ।
ನರನ ಸರ್ವೇಂದ್ರಿಯನಿಕರದಿಂ ।
ನೊರಗೆ ಬಂದರಹಿಂಸೆಯದು ಮನದಿಂದ ಹೊರಡುವುದು ॥
ಪುರುಷನೀಪರಿ ಹಿಂಸೆಯೆಲ್ಲನ ।
ತೊರೆದಿಹನು ವಾಕ್ಕಾಯಮನದ- ।
ಲ್ಲರಿಯಲಾತನಹಿಂಸೆಯನು ತಿಳಿದವನೆ ಜಾಣನಲಾ ॥ ೧೯೭ ॥

ಅರುಹುವೆನು ಸಂಕ್ಷೇಪದಿಂದಲಿ ।
ಯಿರುವನಾತನು ಜ್ಞಾನವಸತಿಯು ।
ಮೆರೆವನಾತನು ಮೂರ್ತಿಮತ್ತೋ ಜ್ಞಾನ ನೋಡಿದಿಯಾ ॥
ನರನೆ ನಿನಗಾನರುಹಿರುವ ಪರಿ ।
ಪರಿಯಹಿಂಸೆಯ ವರ್ಣನೆಯು ನೀ- ।
ನಿರದೆ ಕಿವಿಯಿಂ ಕೇಳ್ದಿಯಲ್ಲೈ ನೋಡಲಿಚ್ಛಿಸಲು ॥೧೪೮॥

ಮರಳಿ ಗ್ರಂಥಾಧಾರದಿಂದಲೆ ।
ಪರಿಹರಿಯಲಿ ಯಹಿಂಸೆಯನು ನಾ- ।
ನಿರವಕೆರದಿ ನಿರೂಪಿಸಿದೆ ಪ್ರತ್ಯಕ್ಷ ನೋಡುವರೆ ।
ಬರಲು ಒಂದಿಕೆಯು ಮನದಿ ವಾರ್ತೆನೆ ।
ದರುಶನವ ಕೊಳ್ಳವನ ನೀ ತ- ।
ದ್ದರುಶನದ ಮಾತ್ರದಲಹಿಂಸೆಯು ಮೂರ್ತಿ ತೋರುವುದು
॥ ೧೪೯ ॥

ಅರುಹುತೀಪರಿ ಜ್ಞಾನರಾಜನು ।
ಕರಗಳನು ಜೋಡಿಸುತ ಪೇಳ್ದನು ।
ಹರಿಯು ಪೇಳಿದ ಯೀ ಯಹಿಂಸಾತತ್ತ್ವ ವಾರ್ಥನಿಗೆ ॥
ಅರುಹ ಬೇಕಿತ್ತೊಂದುಶಬ್ದದಿ ।
ಮರೆತು ನಾ ವಿಸ್ತಾರ ಮಾಡಿದೆ ।
ಕರುಣದಿಂದಲಿ ತಪ್ಪ ಕ್ಷಮಿಸಿರಿ ಶ್ರೋತೃಜನರುಗಳೆ ॥೧೦೦॥

ಹಸರುಹುಲ್ಲನು ಮೇದು ಹೋಗುವ ।
ಪಶುವ ಹಿಂದಿನ ಕ್ರಮವ ಬಿಡುವುದು ।
ನುಸುಳಲಾಕಾಶದಲಿ ಪಕ್ಷಿಯು ವಾಯುನಶದಿಂದ ॥
ಮಿಸುಪವೇಗದಿ ಮುಂದೆಮುಂದಾ- ।
ಗಸದಿ ಹಾರಾಟವನೆ ಮಾಳ್ಪುದು ।
ರಸಭರಿತ ಪ್ರೇಮದಲಿ ನಾ ಮೈಮರೆತೆ ಕಥನದಲಿ ॥೧೦೧॥

ಇಂತು ಮೈಮರೆಯುವರೆ ಕಾರಣ- ।
ವೆಂತೆನುತಲೆನ್ನನು ವಿಚಾರಿಸೆ ।
ಸಂತಸದಿ ನಾ ಪೇಳ್ವೆ ವಿಸ್ತಾರಕ್ಕೆ ಕಾರಣವ ॥
ಸಂತಸಜ್ಞನನೆನ್ನ ಕ್ಷಮಿಸಿರಿ ।
ನಿಂತು ನಿಮಗಾಂ ಪೇಳ್ವೆ ಪಿನ್ನಹ ।
ಸಂತಶಿಂದರೆ ಕ್ಷಮೆಯು ಮೂರ್ತಿಗಳಲ್ಲವೇ ತಿಳಿಯೆ ॥ ೧೦೨ ॥

ತರುವ್ಯೈ ಮೂರಕ್ಷರಂಗಳ ।
ತೆರದು ಶಬ್ದನಹಿಂಸೆಯೆಂಬುದು ।
ಅರುಹುವುದು ಸಂಕ್ಷೇಪದಿಂದಿದ ಶಕ್ಯ ಮೇಣಿಹುದು ॥

ಪರಿಯಿಡಾದರು ಲೋಕಮತವೇ- ।
ನಿರುವುದೆನುತಲಿ ಸೋಲ್ವ ಕಾರಣ- ।
ವಿರುವುದದರಿಂ ಪೇಳ್ದೆನಿದ ವಿಸ್ತಾರಪೂರ್ವಕದಿ ॥ ೧೦೩ ॥

ಧರೆಯೊಳಗೆ ಹಿಂಸೆಯನಹಿಂಸೆಯು- ।
ನರಿವರೈ ಬಹುಮತಪ್ರಮಾಣದಿ ।
ಭರದೊಳಿದ ಖಂಡಿಸುವ ಕಾರಣ ಬಿತ್ತೆನುತ ತಿಳಿದು ॥
ಅರುಹಬೇಕಾಯ್ತೆನಗೆ ವಿಸ್ತರ- ।
ವಿರುವುದಿದುವೆ ಪ್ರಶಸ್ತ ಹಾದಿಯು ।
ಅರುಹಲೀಪರಿ ಸ್ಪಷ್ಟವಾಯಿತಹಿಂಸೆ ಯೇನೆಂದು ॥ ೧೦೪ ॥

ಧರೆಯೊಳಗೆ ತಪ್ಪಾಗಿ ಹೋಗಿಹ ।
ಪರಿಪರಿಯ ಮತಗಳನು ಖಂಡಿಸ- ।
ದಿರದೆ ಮುಂದೆ ಯಹಿಂಸೆತತ್ತ್ವವ ನಾನು ವರ್ಣಿಸಲು ॥
ಒರಿದೆ ತಪ್ಪುಗಳೊಪ್ಪಿಕೊಳ್ಳುವ ।
ಪರಿಯಿದಾಗುವುದಲ್ಲವೇ ನಿಜ ।
ಸರಸ ತೋರುವುದೇನು ನಿಮಗೀ ತತ್ತ್ವನಿರ್ಣಯವು ॥ ೧೦೫ ॥

ನರನೆ ರಕ್ಷಪರೀಕ್ಷಕೋತ್ತಮ- ।
ಪುರುಷರಿರುವಾ ನಗರದಲ್ಲಿಯೆ ।
ಮೆರೆವ ಗಂಡಕಿಶಿಲೆಯ ವ್ಯಾಪಾರವನು ನಡೆಸಿದರೆ ॥
ಬರಿದೆ ಯದರಲ್ಲವಗೆ ಯಶವಿರ- ।
ದಿರಲು ಗುಂಡುಗಳಾರು ಬಿಚ್ಚುವ- ।
ರರರೆ ಕೊರಳಲಿ ಮರು-ಳುತನವವಗಧಿಕ ಬರುತಿಹುದು ॥ ೧೦೬ ॥

ಸರಸತಿಯ ಮುಂದಾರು ಮೂರ್ಖರು ।
ಮೆರೆಸುವರು ಪಾಂಡಿತ್ಯ ಸಂತರೆ ।
ನರನು ಒಯಸುವನೇನು ಕರ್ಪೂರ ಹಿಟ್ಟಿ ಬಯಸದಲೆ ॥
ಮೆರೆವ ನಿಮ್ಮಾ ಸಭೆಯೊಳಗೆ ನಾ- ।
ನಿರುವೆ ಘನಪಂಡಿತನೆನುತಲೀ- ।
ಪರಿ ದುರಭಿಮಾನವನು ಧರಿಸಲು ಮರುಳುತನವಲ್ಲೈ ॥ ೧೦೭ ॥

ತರುವುದೇನು ವಿಶೇಷವಥವಾ ।
ಯಿರುವುದೇನ್ ಸಾಮಾನ್ಯವೆಂಬೀ- ।
ಪರಿಯನರಿಯದೆ ಒರಿದೆ ಒರಳಿದರೇನು ಭೂಷಣವೆ ॥
ಭರದೊಳದ ಕಿವಿಯೊಳಗೆ ತಾರದೆ ।
ಮರುಳ ನಾನೆಂದರಿಕು ನೀವ್ ಧಿ- ।
ಕ್ಕರಿಸಲಾರದೆ ಯಿರುವಿರೇನೈ ತತ್ತ್ವ ತಿಳಿದಿಹೆನು ॥ ೧೦೮ ॥

ವಸ್ತುಗಳ ನಿಜರೂಪವನು ನಾ ।
ವಿಸ್ತರಿಸುತಿರುವಾಗ ಶಂಕೆಯ ।
ಗೊತ್ತು ಹಚ್ಚದೆ ನಿರಸನವ ಮಾಡದಿರೆ ವರ್ಣನದಿ ॥
ಸ್ವಸ್ಥಚಿತ್ತದೊಳೆನಗೆ ಕೊಡುತಿಹ ।
ಶ್ರೋತೃವೃಂದದ ಚಿತ್ತಸೂರಿಯ- ।
ನಸ್ತವಾಗುವನಲ್ಲವೇ ನೀ ಶಂಕೆಸಂಜೆಯಲಿ ॥ ೨೦೯ ॥

ಕೆರೆಯೊಳಗೆ ಶೇವಾಳ ಪಸರಿಸೆ ।
ಬರುವುದೇನೈ ಹಂಸವಲ್ಲಿಗೆ ।
ಮೆರೆಯೋ ಭೃಗ ಹಿಂದೆ ಸುಂದರ ಚಂದ್ರಿಕೆಯು ತಿಳಿಯೆ ॥
ಬರುವುದೇನುಪಯೋಗವಾಸುಂ-
ದರವಿರುವ ಚಂದ್ರಿಕೆ ಚಕೋರನಿ- ।
ಗಿರುವುದೇನೈ ಭಕ್ಷಣಕೆ ತಾಂ ಯೋಗ್ಯ ನೋಡಿದರೆ ॥೨೧೦॥

ದೋಷವಿರಲು ನಿರೂಪಣದಿ ಸಂ-
ತೋಷದಿಂ ಗ್ರಂಥಾವಲೋಕನ ।
ಸೂಸುತಿಹುದೀ ಮನದಿ ಸರ್ವಜ್ಞರಿಗೆ ನಿಮ್ಮೊಳಗೆ ॥
ಈಪರಿ ಮತ್ತೇಕೆ ಯೆನ್ನನು ।
ರೋಷದಿಂದಲಿ ಬೈದರಲ್ಲದ ।
ಯಿಸು ಪರಿಯಲಹಿಂಸೆಯನು ನಾ ವಿಸ್ತರಿಸದಿರಲು ॥೨೧೧॥

ಮರಳಿ ಯಾಕ್ಷೇಪಗಳ ನಾ ನೆರೆ ।
ನಿರಸನವ ಮಾಡದಿರೆ ನಿರ್ಣಯ ।
ದರುಶನದ ದೊರಕುವುದೆ ಲಾಭವು ಭಾಷಣದೊಳೆನ್ನ ॥
ನಿರುತ ಸಜ್ಜನರಾದ ನಿಮ್ಮಯ ।
ಪರಮಮನವು ಪ್ರಸನ್ನವಾಗುತ ।
ಹರಸ ಬೇಕೆನಗೆಂತ ತ್ಸರನಿಹೆನು ಭಾಷಣದಿ ॥ ೨೧೨ ॥

ಗೀತೆಯರ್ಥವ ತಿಳಿದು ಕೊಳ್ಳನ ।
ಭೀಕ್ತರಾಗಿಹ ಸಜ್ಜನರು ನೀವ್ ।
ಶ್ರೋತೃಪುರುಷರು ತೋರ್ಪುದಧಿರುಚಿಯೆಂದು ತಿಳಿಯುತಲೆ ॥
ಭೂತಳದಿ ನಾ ಗೀತೆಯರ್ಥಕೆ ।
ಸೋತು ಕೈಹಾಕಿದೆನು ನೋಡಿರಿ ।
ನ್ಯಾರ್ಥದಿಂದೀ ತೆರದಿ ಕೊಂಡೆನು ಕೈಯೊಳಗೆ ಗೀತೆ ॥೨೧೩॥

ತಿಳಿದು ಕೊಳ್ಳಲು ಗೀತೆಯರ್ಥವ- ।
ನಿಳೆಯೊಳಗೆ ಬೇಮಿತ್ವ ತುಚ್ಛಿಸಿ ।
ಫಳಿಸಿ ಕೊಳ್ಳುವರಲ್ಲದೇ ಗೀತಾರ್ಥಲಾಭವನು ॥

ಇಳೆಯೊಳಗೆ ಸಾಮಾನ್ಯಗ್ರಂಥವೆ ।
ತಿಳಿಯಲಿದು ಸಜ್ಜನರ ಕೈಪಿಯನು ।
ಫಳಿಸಲುತ್ತಮ ಯೋಗ್ಯನಿಹುದೈ ಪೊತ್ತೆ ವಸ್ತುವಲಾ ॥ ೨೧೪ ॥

ಮರಳಿ ನೀವ್ ಸರ್ವಸ್ವಲೋಭವ ।
ಧರಿಸಿ ಗೀತಾರ್ಥವನು ತೊರೆದರೆ ।
ಬರುವುದೆನಗೂ ಜೊಡ ಗೀತೆಗೆ ಬರುವುದೇ ಗತಿಯು ॥
ಅರುಹುವೆನು ಸಂಕ್ಷೇಪದಿಂದಲಿ ।
ಧರಿಸಿ ನಿಮ್ಮ ಕೃಪಾಪ್ರಸಾದದ ।
ವರದೊಳಾಶಯ ಗೀತೆಯನ್ನೆ ನಿಮಿತ್ತ ಮಾಡಿದೆನು ॥ ೨೧೫ ॥

ಸರಸವಾಗಲು ಜೇಕು ನಿಮ್ಮಂ-
ತಿರುವ ರಸಿಕರ ಮನದಿ ಗೀತೆಯು ।
ಧರಿಸುತೀ ಸರ್ವಜ್ಞಿ ವಾಖ್ಯಾನವನು ನಡೆಸಿಪೆನು ॥
ಅರುಹ ಬೇಕಾಯ್ತಾದಕಾರಣ ।
ಸರಿಪರಿಯಲಿಯಹಿಂಸೆತ್ವವನ-
ನರಿತೆನಾಕಾರಣದಿ ವಿಷಯಾಂತರವು ಬಹುವಾಯ್ತು ॥ ೨೧೬ ॥

ಮೂಲಗೀತಾಶ್ಲೋಕದರ್ಥವ ।
ಮೂಲೆಗೊಗೆದಂತಾಯ್ತು ನಿಜವಿದು ।
ಲೀಲೆಯಿಂದೀ ತಪ್ಪನೆನ್ನಯ ಕ್ಷಮಿಸಿಕೈ ಬುಧರೆ ॥
ಹೇಳಿಯಿದು ನಿಷ್ಫಲವೆನುತ್ತಳ ।
ತಾಳದಿರಿ ಶಂಕೆಯನು ಮನದಲಿ ।
ಕೂಳನುಣುತಿರೆ ತುತ್ತಿನಲಿ ಸೇರಿರಲು ದರಳುಗಳು ॥ ೨೧೭॥

ಹರಳು ಹೊರತೆಗೆಯದಲೆ ಮತ್ತಾ-
ಹರಿಯಲಾರಣುತಿಹರು ಭೋಜನ ।
ಹರಳನಾರಿಸಿ ತೆಗೆವ ವೇಳೆಯು ವ್ಯರ್ಥ ನಿಶ್ಚಲವೆ ॥
ತರಳ ತನ್ನಯ ಬರಿತ ಹಾದಿಯೆ-
ಕಿರುವ ಚೋರರು ತಪ್ಪಲೋಸುಗ ।
ಚರಿಸಿ ಮಾರ್ಗಾಂತರದಿ ಬರಲು ಸಿಳಂಬವಾಗಿರಲು ॥ ೨೧೮ ॥

ಮರುಳನೆನ್ನೈ ತಾಯಿ ಬೈಸಳೆ ।
ತಿರಿಗಿ ಸುಖದಲಿ ಮನೆಗೆ ತಾಂ ಬಂ-
ದಿರುವಸೆನುತ ನಿವಾಳಿಸುವಳೈ ಸಂತಸದೊಳವನ ॥
ಅರಿಯೆ ನಾ ಕಾರಣವ ನಿಜ ವಿ-
ಸ್ತರಿಸಿ ದೃಷ್ಟಾಂತವನು ಕೊಡುವರೆ ।
ದೊರಕಿಹುದು ಕ್ಷಮೆಯೆನುತ ಮನಕಾಲ್ತ್ಯೈ ಸಮಾಧಾನ ॥೨೧೯॥

ಅರುಹುತೀಪರಿ ಜ್ಞಾನರಾಯನು ।
ಮರಳಿ ಬಿನ್ನೈಸಿದನು ಸಂತರೆ ।
ಯರುಹುವೆನು ನಾನೀಗ ಶ್ರೀಹರಿ ಯೇನ ಹೇಳಿದನೊ ॥
ನರನೆ ಜ್ಞಾನೋತ್ತಮನಿಲೋಚನ ।
ಭರದಿ ಜಾಗೃತನಾಗು ನಿನಗಾಂ ।
ಗುರುತ ಹಚ್ಚುವೆ ಜ್ಞಾನವೆಂತಹುದೆಂದು ಪೇಳುವೆನು ॥೨೨೦॥

[ಕ್ಷಾಂತಿ] ನರನೆ ಕೇಳೈ ಕ್ಷಮೆಯು ಖೇದದ ।
ಹೊರತು ವಾಸಿಪುದೆಲ್ಲಿ ಯಲ್ಲಿಯೆ ।
ನಿರುತ ಜ್ಞಾನದ ವಾಸವಿರುವುದು ನೋಡು ಕೌಂತೇಯ ॥
ಕೆರೆಯೊಳಗೆ ನೀರೆಷ್ಟುವಿದ್ದರು ।
ಬರುವುದಲ್ಲವೆ ಕಮಲ ಮೇಲೂ ।
ಕ್ಕರಳಿ ಲಕ್ಷ್ಮಿಯು ವಾಸಿಪಳು ಸದ್ಭಾಗ್ಯವಿದ್ದಲ್ಲಿ ॥ ೨೨೧ ॥

ನರನೆ ಕೇಳೈ ಕ್ಷಮೆಯು ವರ್ಧಿಸು ।
ತಿರುವ ಲಕ್ಷಣಗಳನು ಪೇಳ್ವೆನು ।
ಬರುವುದಾಗಲೆ ಪೂರ್ಣ ನಿನ್ನಯ ಮನದಿ ಬಿಂಬವದು ॥
ತರಳನಂಗದ ಮೇಲೆ ತಾಯ್ ।
ಕ್ಕರದಿ ಚಿನ್ನಾಭರಣವೇರಿಸೆ ।
ಧರಿಸುವನು ಬಾಲಕನುದಾಸೀನತೆಯಲವ್ವಗಳನು ॥ ೨೨೨ ॥

ಧರೆಯಲೀಪರಿ ಸರ್ವಭೋಗನಿ ।
ಕರವನನುಭವಿಸುವನು ಕೇಳೈ ।
ಯಿರುವುದಾಪರಿ ಯವಗುದಾಸೀನತೆಯು ಕೌಂತೇಯ ॥
ಬರಲು ದುಃಖಪ್ರಸಂಗ ನರನಿಂ ।
ಗಿರುವುವೈ ಪರಿ ಮೂರು ವಾರ್ತೆಗೆ ।
ಯರಿಯಲಾಧ್ಯಾತ್ಮಿಕವು ಭೌತಿಕವಾಧಿದೈವಿಕವೂ ॥ ೨೨೩ ॥

ಬಂದರೀ ದುಃಖದ ಪ್ರಸಂಗಗ ।
ಳೊಂದೆ ಹೊತ್ತಿಗೆ ಕೂಡಿ ಸರ್ವವು ।
ಕುಂದಲಾರನು ಮನದಿ ಧರಿಸನುದಾಸವೃತ್ತಿಯನು ॥
ಮುಂದಪೇಕ್ಷಿತ ವಸ್ತು ಕೈಯಲಿ ।
ಬಂದರೆವ್ವಾನಂದ ಕುಂತೀ ।
ನಂದನನೆ ಕೇಳಾಪ್ರಮಾಣದಿ ತಪ್ಪಿಸೊಡಿನೆಯಲಿ ॥ ೨೨೪ ॥

ದೊರೆಯದಿರೆ ದುಃಖದಲಿ ಕುಗ್ಗನು ।
ದೊರೆಯಲಾನಂದದಲಿ ಹಿಗ್ಗನು ।
ಯೆರಡರಲ್ಲಿ ಸಮಾನವೃತ್ತಿಯ ಧಾರಣವೆ ಕ್ಷಮೆಯು ॥
ನರನೆ ಕೇಳ್ ಮಾನಾಪಮಾನವ ।
ಧರಿಪನೊಂದೇತೆರದಿ ಮನದಲಿ ।
ಪರಿಯಲಾ ಸುಖ ದುಃಖ ನಿಂದಾ ಸ್ತುತಿ ಸಮಾನವಿವು ॥ ೨೨೫ ॥

ಬಾರದವನಿಗೆ ಮೋದ ತುತಿಯಲಿ ।
ಬಾರದೈ ನಿಂದೆಯಲಿ ಖೇದವು ।
ಬಾರದೈ ಬಿಸಿಲಿನಲಿ ತಾಪವ್ವ ಕಂಪ ಶೀತದಲಿ ॥
ಬಾರದವನಿಗೆ ಭೀತಿ ವಿಕಟಪ್ರ ।
ಕಾರ ಬಂದರೆ ತಲೆಯನೊಡ್ಡುವ ।
ಮೇರುಪರ್ವತ ಶಿಖರಭಾರವ ತಾಳುವಂದದಲಿ ॥ ೨೨೬ ॥

ಹರಿ ವರಾಹದ ರೂಪದಿಂದಾ ।
ಧರೆಯ ಭಾರವ ತಾಳ್ವನಲ್ಲವೆ ।
ಯರುಹುವನೆ ಧರೆ ಭಾರವಾಯ್ತೆಂದುಸುರ ಕಟ್ಟುವನೆ ॥
ಧರೆಯು ಸ್ಥಾವರಜಂಗಮಂಗಳ ।
ಪರಿಪರಿಯ ಭೂತಂಗಳೆಲ್ಲವ ।
ಧರಿಸುತಿಹುದೈ ಕ್ಷಮೆಯು ಮೂರ್ತಿಯ ರೂಪ ನೋಡಿದಿಯಾ ॥ ೨೨೭॥

ಕ್ಷಾಂತಿಯುತ ಪುರುಷನಿಗೆ ದುಃಖದ ।
ಸಂತತಿಯು ನಾನಾಪ್ರಕಾರದೊ ।
ಳಂತು ಸುಖದಾಗರವು ಬಂದರು ಭೇದಕಾಣನಲಾ ॥
ಕುಂತಿತನಯನೆ ನದಿನದಂಗಳ ।
ಬಂತು ಪೂರವೆನುತ್ತ ಶರಧಿಯು ।
ಚಿಂತಿಪುದೆ ಸರ್ವವನು ಹೊಟ್ಟೆಯೊಳಿಟ್ಟು ಸಲಹುವನು ॥ ೨೨೮ ॥

ನರನೆ ಕೇಳಾ ಪರಿಯಲೀ ಕ್ಷಮೆ ।
ಗಿರುವುದೈ ಬಹು ಸಹನಶೀಲತೆ ।
ಯರಿಯಲಾರದು ಪಾರ್ಥ ಕೇಳಭಿಮಾನಲೇಶವನು ॥
ಬರುವ ಸಕಲಾವಸ್ಥೆ ದೇಹಕೆ ।
ನಿರುತ ತಾನೇ ಸಹಿಪೆನೆಂಬೀ ।
ಪರಿಯಲಭಿಮಾನವನು ತಾಳದು ಕ್ಷಮೆಯು ನಿಜವಾಗಿ ॥ ೨೨೯ ॥

ಖೇದರಹಿತಕ್ಷಮೆಗೆ ಮಂದಿರ ।
ನಾದ ಪುರುಷನೊಳಿಹುದು ಜ್ಞಾನವು ।
ಸಾದರತೆ ಜ್ಞಾನಕ್ಕೆ ಬರುವುದು ಕ್ಷಮೆಯ ಮೂಲಕದಿ ॥
ಮೇದಿನಿಯಲೀತೆರದ ಪುರುಷ ।
ನಾದಪನು ಜ್ಞಾನಕ್ಕೆ ಪ್ರೇಮದ ।
ಸೋದರನು ಕೇಳವನ ಮಹಿಮೆಯನೆಂತು ವರ್ಣಿಸಲಿ ॥ ೨೩೦ ॥

[ಆರ್ಜವಂ] ನರನೆ ನಿನಗಾರ್ಜವದ ಲಕ್ಷಣ.
ವರುಹುವೆನು ಮನಗೊಟ್ಟು ಕೇಳೈ.
ಯಿರುವುದೆರಡನೆ ಹೆಸರು ನರಳತೆ ಯೆನುತಲೀ ಗುಣಕೆ ॥
ತರಣಿಗಿರುವುದೆ ಭೇದಬುದ್ಧಿಯು.
ವುರುಷ ದುಷ್ಟನು ಶಿಷ್ಟನಂಜೀ.
ಸರಿಯನರಿಯದೆ ಬಳಿಕ ಕೊಡುವನು ಸಕಲಲೋಕಕ್ಕೆ
॥ ೨೩೧ ॥

ಪ್ರಾಣಿಗಳ ಸೌಜನ್ಯದಿಂದಲಿ.
ಕ್ಷೋಣಿಯಲ್ಲಾರ್ಜವವು ಮೆರೆವುದು.
ಮಾನಿಸುವುದಾಕಾಶ ಜಗಕವಕಾಶ ಸರ್ವತ್ರ ॥
ಪ್ರಾಣಿಯೆಲ್ಲವು ಲೋಕದೊಳಗೆ ಸ.
ಮಾನವೆಂದೇ ಭಾವಿಸುವನೈ.
ಕಾಣುವುದು ಜಗವೆಲ್ಲ ನೆಂಟರಿದೇಂಬ ಭಾವದಲಿ ॥ ೨೩೨ ॥

ನಾನು ನೀನೆಂಬೆರಡು ಭಾವದಿ.
ಹೀನನವನೈ ಜಗದಿ ಮೈತ್ರ್ಯವು.
ಕಾಣುವುದು ಮೇಣ್ ಜಗದಿ ನಮ್ರತೆಯಮನ ನೀರಿನೊಲು ॥
ಕಾಣನಾತಗೆ ಭೇದಭಾವವು.
ಮಾನನದಿ ಪಕ್ಷಪಾತವಿಲ್ಲೈ.
ಮಾನಿಸನು ಶಂಕೆಯನು ನೋದ್ ಕನಸಿನಲಿ ಮನಸಿನಲಿ
॥ ೨೩೩ ॥

ಹುಡುಗನೇರುತ ಕೂತು ತಾಯಿಯ.
ತೊಡೆಯಲಾಡಲು ಶಂಕೆ ಬರುವುದೆ.
ಯೆಡೆಬಿಡದಲೆರಡನೆಯ ಭಾವವೆ ಮನದಿ ತೋರದಲಾ ॥
ಜಡಜವರಳಲು ವಾಸ ಬರುವುದು.
ಒಡಗಿಸಲು ತಾಂ ಬಲ್ಲುದೇನದ.
ಕೊಡವಿಯಲಿ ಹೊರಗೊಂದು ಪೊಳಗೊಂದೆಂಬ ಪರಿಯಿಲ್ಲ
॥ ೨೩೪ ॥

ನರನ ದೃಷ್ಟಿಗೆ ಬೀಳ್ವ ಮೊದಲೇ.
ಹರಿವುದಲ್ಲವೆ ರಕ್ಷತೇಜವು.
ಧರೆಯೊಳೀಪರಿ ಮನದ ನರಳತೆ ಮೆರೆವುದವನಲ್ಲಿ ॥
ಒರುವುದೈ ವ್ಯವಹಾರ ತದನಂ.
ತರದಿ ಬೆನ್ನಿನ ಹಿಂದೆ ಯವನಿಗೆ.
ಯಿರದಲಾ ಚಿಂತನದ ಭಾವವು ವಾರ್ಧ ಮನದೊಳಗೆ
॥ ೨೩೫ ॥

ನಿರುತವಿರುವುದು ತೃಪ್ತಿ ಮನದಲಿ.
ಮೆರೆವುದೀಯನುಭವ ನಿರಂತರ.
ನಿರದಲಾ ಪರಿಪರಿಯ ಭೇದದ ಭಾವ ಮನದೊಳಗೆ ॥

ತೋರೆಯಬೇಕೀ ಸಂಗತಿಯ ಮ.
ತ್ತೊರಡನೆಯ ವ್ಯಕ್ತಿಯದ ತಾಂ ಸ್ವೀ.
ಕರಿಸ ಬೇಕೆಂಬೋದ ಭಾವವಿಯು ಸಲ್ಲದಿಲ್ಲಿ ॥ ೨೩೬ ॥

ದೃಷ್ಟಿಯಲಿ ಕಾಪಟ್ಯ ತೋರದು.
ಹುಟ್ಟದೈ ಸಂದಿಗ್ಧಶಬ್ದವು.
ದುಷ್ಟತನ ಬೇರಿಲ್ಲ ವರ್ತನದಲ್ಲಿ ಯನ್ಯರಲಿ ॥
ಸೃಷ್ಟಿಯಲಿ ಸಕಲೇಂದ್ರಿಯಂಗಳು.
ಮುಟ್ಟಲಾರವು ಶಾಠ್ಯನಿಷಯವ.
ತೊಟ್ಟಿವೆಂಬೊ ಮುಕ್ತತೆಯ ಪಂಚಪ್ರಾಣವೀಪರಿತೆ ॥ ೨೩೭ ॥

ನರಳವಮೃತದ ಧಾರೆಯಂದದಿ.
ಯಿರುಸ್ರದಾತನ ಮನ ಧನಂಜಯ.
ಯಿರುವನೈ ಸದ್ಗುಣಕೆ ಮೂಲಾಧಾರನಾತ ಕಣಾ ॥
ಪುರುಷನಾರೀಸರಿಯಲಾರ್ಜವ.
ದಿರುವನೈ ಮೂರ್ತಸ್ವರೂಪನು.
ಧರೆಯೊಳಾತನೆ ಜ್ಞಾನನಿಧಿಯಾಗಿಹನು ಕೌಂತೇಯ ॥ ೨೩೮ ॥

[ಆಚಾರ್ಯೋಪಾಸನಂ] ನರನೆ ಸುಭಟಶಿರೋಮಣಿಯೆ
ಗರುಹುವೆನು ನಾನೀಗ ಪ್ರೇಮದಿ. ನಿನ.
ಗುರುಚರಣಸದ್ಭಕ್ತಿಪರಿಯನು ಕೇಳು ಮನಗೊಟ್ಟು ॥
ಗುರುಚರಣಸದ್ಭಕ್ತಿಯೆಂಬುದು.
ನರನ ಭಾಗ್ಯೋದಯಕೆ ಸರ್ವಕೆ.
ಮೆರೆವುದೈ ನಿಜ ಜನ್ಮಭೂಮಿಯು ಮೂರುಲೋಕದಲಿ ॥ ೨೩೯ ॥

ಧರೆಯೊಳಗೆ ಸಂಸಾರಶೋಕದಿ.
ನರಳುತಿಹ ಜೀವನನು ನೋಡೈ.
ತರುವುದಾತ್ಮಜ್ಞಾನಪರಮಾನಂದಮಂದಿರಕೆ ॥
ಗುರುಚರಣಸೇವಾಪ್ರಕಾರವ.
ನರಿಹುವೆನು ವಿಸ್ತರದಿ ನಿನಗಾ.
ನಿರಲಿ ನಿನ್ನಯ ಲಕ್ಷ್ಯವೆನ್ನಯ ಭಾಷಣದಿ ವಾರ್ಧ ॥ ೨೪೦ ॥

ಜಲವನೆಲ್ಲವ ತನ್ನೊಳಿರುತಿಹ.
ಜಲಧಿಗರ್ಜಣ ಮಾಡಿ ಗಂಗೆಯು.
ಜಲಧಿಯಲಿ ತಾನೈಕ್ಯ ಹೊಂದುವ ತೆರದಿ ಕಲಿವಾರ್ಧ ॥
ಒಳಗೊಳಗೆ ಶ್ರುತಿನಿಕರವೆಲ್ಲವು.
ಮುಳುಗುವುದು ತಾಂ ಬ್ರಹ್ಮಸದದ.
ಬೆಳಗೆಯೊಳೆಲ್ಲವ ಗುರುವಿಗರ್ಪಿಸಬೇಕು ತದ್ವತ್ತು ॥ ೨೪೧ ॥

ಸತಿಯು ಸುಗುಣಳು ತನ್ನ ಗುಣಜೀ- ।
ವಿಶವನರ್ಪಿಸುತಿಹಳು ತನ್ಮಯ ।
ಪತಿಗೆ ಧರಿಸುತನನ್ಯಭಾವವ ಪತಿಯು ಸೇವೆಯಲಿ ॥
ಪ್ರೀತಿಯೊಳಗೆ ಕೇಳೀತೆರದಿ ಸಂ- ।
ತತದಿ ಕಾಲಕ್ರಮವ ಮಾಳ್ಪಳು ।
ಮತಿಯುತನು ಕೇಳಾತೆರದಿ ಗುರುಸೇವೆ ಮಾಡುವುದು
॥ ೨೪೨ ॥

ಧರೆಯೊಳಾವನ ಬಾಹ್ಯದೇಹವ ।
ಗುರುಚರಣಸಕ್ತ್ಯಿಯಾಗರ- ।
ವಿರುವುದಾತನ ಮಹಿಮೆಯನು ನಾನೆಂತು ಬಣ್ಣಿಸಲಿ ॥
ಅರುಹುವೆನು ನಿನಗಾನು ಬಹುವಿ- ।
ಸ್ತರದಿ ಭಕ್ತಿಯ ಪರಿಯನೆಲ್ಲವ- ।
ನಿರುವುದದು ನವವಿಧವು ಕೋವಿದರರಿವರವನೆಲ್ಲ ॥ ೨೪೩ ॥

[ನವವಿಧಾ ಭಕ್ತಿ– ಸ್ಮರಣಂ]

ವಿರಹಿ ಸುಪತಿವ್ರತೆಯು ನಿಜಪತಿ- ।
ಚರಣವನೆ ಮನದಲಿ ನಿರಂತರ ।
ಸ್ಮರಿಸುವಳಲಾ ಪಾರ್ಥ ನೋಡಾತೆರದಿ ಮಾನವಗೆ ॥
ಗುರುವು ವಾಸಿಸುತಿರುವ ದೇಶವ ।
ತಿರಿತಿರಿಗಿ ಮನದೊಳಗೆ ಒರೆವುದು ।
ಸ್ಮರಣಪಥದಿಂದಡ್ಡವಾಗದು ಪಾರ್ಥ ದೇಶವದು ॥ ೨೪೪ ॥

ಗುರುವು ವಾಸಿಸುತಿರುವ ದಿಶೆಯಿಂ ।
ಬರುವ ಗಾಳಿಯನೆದುರುಗಾಣಿಸಿ ।
ಪರಿಪರಿಯಲಾದರಿಸಿ ಸಾಷ್ಟಾಂಗವನು ಮಾಡುವನು ॥
ಗುರು ನಿರಂತರ ತನ್ನ ಮನಯಲಿ ।
ಒರಲು ಬೇಕೆಂದಾಶೆ ಹಿಡಿವನು ।
ಮರುಳನಾಗುವನೇನ ಹೇಳಲಿ ಪ್ರೇಮದಲಿ ಪಾರ್ಥ ॥೨೪೫॥

ಗುರುವು ವಾಸಿಪ ದಿಶೆಯೆದುರೆ ಹೊರ ।
ಬರುವುದೈ ಬಾಯಿಂದ ಶಬ್ದವು ।
ಸರಸ ಕೋರ್ವುದದನ್ಯ ಶಬ್ದವು ವಿರಸವಾಗುವುದು ॥
ಮರಳಿ ನಿಜಜೀವವ ನಿರಂತರ ।
ಗುರುಗೃಹದಿ ತಾನೊತ್ತೆಯಿಡುವನು ।
ಕರುವ ಹೊರಕಟ್ಟಿದರೆ ಹಗ್ಗದಿ ಹೊಲನೊಳಗೆ ಪಾರ್ಥ
॥ ೨೪೬ ॥

ಕರುವು ತಾಯಿಯ ಹಂಬಲಿಸುತಲೆ ।
ಯಿರುವುದಲ್ಲವೆ ದೇಹಮಾತ್ರದಿ ।
ತೊರೆಗೆ ಮನವಾಕಳೆನ ಮೇಲಿಹುದಲ್ಲವೇ ಪಾರ್ಥ ॥

ಗುರುವಿನಾಜ್ಞೆಯ ಧರಿಸಿ ಶಿರದ- ।
ಲ್ಲಿರುವುದಾತನ ದೇಹವೂರ- ।
ಲ್ಲಿರುವುದಾತನ ಮನವು ಗುರುಚರಣದಲಿ ಭಕ್ತ್ಯಿಯಲಿ ॥ ೨೪೭ ॥

ಗುರುವಿನಾಜ್ಞೆಯ ಕೊರಡ ಕೊರಳಿಂ ।
ಹೊರಗೆ ಹಾಕುವುದೆಂತು ನಿಜಗುರು- ।
ಚರಣವಿರಹದಿ ಕ್ಷಣವೆ ಯುಗಸಮವಾಗಿ ತೋರುವುದು ॥
ಗುರುನಿವಾಸದ ಗ್ರಾಮದಿಂದಲಿ ।
ಪುರುಷನವನಲಿ ಬಂದರಧವಾ ।
ಗುರುವು ಕಳುಹಿಸಿ ಕೊಡಲು ತನ್ನೂರಿಂಗೆ ಬರಲವನೆ ॥ ೨೪೮ ॥

ಹರುಷವಾಗುವುದೇನ ಹೇಳಲಿ ।
ನರಗೆ ಮರಣೋತ್ಸವಕೆ ಬೇಗದಿ ।
ಭರದಿ ದೀರ್ಘಾಯ ಷ್ಯ ಸೊರಕಿದ ತೆರದೊಳಾಗುವುದು ॥
ಸೊರಗಿ ಬಾಡಿದ ಮೊಳಕೆಗೆಮೃತವ ।
ಸುರಿಸಿದರೆ ಲವಲವಿಕೆ ಯೇರುವ ।
ತೆರದಿ ಜಾವಿಯ ನಿಮಿನಿಗೀಸಲು ಕಡಲು ಸಿಕ್ಕಂತೆ ॥ ೨೪೯ ॥

ಹುಟ್ಟು ನಿರ್ಧನನಿಂಗೆ ಚಿನ್ನದ ।
ಬೆಟ್ಟ ಕೈವಶವಾದ ಪರಿಯಲಿ ।
ಹುಟ್ಟುಕುರುಡಗೆ ದೃಷ್ಟಿ ಯೇಕಾಯೇಕಿ ಬಂದಂತೆ ॥
ಹುಟ್ಟುತಿರುಕನಿಗೊಂದೆ ನಿಮಿಷದಿ ।
ಶ್ರೇಷ್ಠ ಸುರಪನ ಪದವಿ ದೊರಕಲು ।
ಯೆಷ್ಟ ಹೇಳಲಿ ಹರ್ಷವಾಗುವ ತೆರದೊಳಾತನಿಗೆ ॥ ೨೫೦ ॥

ಗುರುಕುಲದ ವಾರ್ತೆಯನು ಕೇಳುತ ।
ಹರುಷಪತಿಶಯವಾಗುವುದಲಾ ।
ಭರದೊಳಾಕಾಶಕ್ಕೆ ಮುಟ್ಟುವನೆಂದು ಯೋಚಿಪನು ॥
ಗುರುಕುಲದ ಸೇವೆಯಲಿ ಯಾರೀ- ।
ತೆರದಿ ತತ್ಪರನಿಹನೊ ಕೇಳಾ- ।
ನರನ ಮನೆಯಲಿ ಜ್ಞಾನ ಕಿಂಕರವಾಗಿ ತಿರುಗುವುದು ॥ ೨೫೧ ॥

[ಅರ್ಚನಂ] ನರನು ಸ್ವಾಂತಃಕರಣಪ್ರೇಮದ ।
ಭರದಿ ಶ್ರೀಗುರುಮೂರ್ತಿ ಹೃದಯದೊ- ।
ಳಿರಿಸಿ ಧ್ಯಾನೋಪಾಸನೆಯ ಮಾಡುವುದು ಸಂತತದಿ ॥
ನರನ ಭಾವನಶುದ್ಧಹೃದಯವೆ ।
ಮೆರೆವುದೈ ದೇವಾಲಯದ ಸರಿ ।
ಯಿರಿಸಿ ಶ್ರೀಗುರುಮೂರ್ತಿಯೆಂಬಾರಾಧ್ಯದೇವತೆಯ ॥ ೨೫೨ ॥

ಮರಳಿ ನಿಜಭಾವನೆಯೊಳಾತನೆ । ಮರಳಿ ಗುರುವಿನ ಚರಣವೊತ್ತುತ ।
ಪರಿಪರಿಯ ಸಾಹಿತ್ಯವಾಗುತ । ಸರಿಯು ತಾನಾಗುವನು ತಾನೇ ।
ವಿರಚಿಸುವನೈ ಪೂಜೆಯನು ತದ್ಭೃದಯಮಂದಿರದಿ ॥ ಗರುಡನಾಗುತ ಕರಗಳನು ಜೋಡಿಸುತ ನಿಲ್ಲುವನು ॥ ೨೫೮ ॥
ನರನು ಕಿಂವಾ ಜ್ಞಾನರೂಪದ ।
ಸರಳ ತಳಹದಿಯುಪರಿ ಪರಮಾ- । ಮರಳಿ ತಾನಾಗುವನು ನಾಭಿಯ ।
ದರದಿ ಪರಮಾನಂದದೇವಾಲಯವ ಕಟ್ಟುವನು ॥ ೨೫೩ ॥ ಹೊರಗೆ ಬಂದಿಹ ಸರಸಿಜಾಸನ ।
ತಿರುತಿರಿಗಿ ಗುರುವಿಷ್ಣುಪ್ರೇಮದ ಸುಖವ ಭೋಗಿಪನು ॥

ಬಿರದಲಾ ದೇವಾಲಯದ ಪೊಳ- । ಗುರುವು ತಾಯಿಹನೆಂದು ಪ್ರೇಮದಿ ।
ಗಿರಿಸುವನು ಸದ್ಗುರುಸ್ವರೂಪದ । ಶರಣಿ ಮನದೊಳು ಕಲ್ಪಿಸುತಲಾ ।
ಹರನ ಲಿಂಗವ ಸುರಿಸುವನು ಧ್ಯಾನಾಮೃತದ ಧಾರೆ ॥ ಸುರಸಸುಖಸ್ತನಪಾನದಿಂದುರೆ ಹರ್ಷ ತಾಳುವನು ॥ ೨೫೯ ॥
ಮರಳಿ ಬೋಧದ ತರಣಿಯುದಯಕೆ ।
ಬರಲು ಬುದ್ಧಿಸರೋವರದಲಾ । ಜ್ಞಾನವೃಕ್ಷದ ಕೆಳಗೆ ಛಾಯಾ- ।
ಅರುಳುವುವು ಕೇಳೆಂಟು ಸಾತ್ತ್ವಿಕಭಾವಕಮಲಗಳು ॥೨೫೪॥ ಸ್ಥಾನದಲಿ ವಿಶ್ರಮಿಸಿರುವ ಗುರು ।
ಧೇನು ವೆನುತಲೆ ತಾನು ಕರುವಾಗುವನು ಹಿಂಬದಿಗೆ ॥

ಹರಿಯುತೀಕಮಲಂಗಳನು ಶಂ- । ಏನ ಹೇಳಲಿ ಗುರುಕರುಣೆಯಂ- ।
ಕರಸ್ವರೂಪದ ಗುರುಸಿಗರ್ಪಿಸಿ । ಭೋನಿಧಿಯ ವೊಳಗಾಡುತಿರುತಿಹ ।
ಭರದಲುತ್ತಮವೇಳೆ ಸಂಧ್ಯಾಕಾಲ ಹರಗೆನುತ ॥ ನಿಮಿನು ತಾನಾಗುತ್ತ ವಿಹರಿಪನವನು ಪ್ರೇಮದಲಿ ॥ ೨೬೦ ॥
ಉರಿಸುತಿಹನಭಿಮಾನಧೂಪವ ।
ನಿರುತ ಸದ್ಗುರುರೂಪಶಂಕರ- । ಗುರುಕೃಪಾವೃಷ್ಟಿವೃಷ್ಟಿ ಸುರಿವುದು ।
ಗಿರವೆ ಜ್ಞಾನಾರತಿಯ ಬೆಳಗುವನೇಕಭಾವದಲಿ ॥ ೨೫೫ ॥ ಯಿರುವೆ ತಾನಂಕುರವು ಯೆಂದೀ- ।
ಪರಿಪರಿಯ ಸಂಕಲ್ಪತೆರೆಗಳು ಬರುವುವವನೊಳಗೆ ॥

ಗುರುಚರಣದೊಳಗೈಕ್ಯ ಪಡೆವುದು । ಇರುವುದೆಂತಾ ಪ್ರೇಮನಿರುಪಮ- ।
ಗುರುವಿಗಿದು ನೈವೇದ್ಯನೆಂತಾ- । ವರುಹಲೆನಗಸದಳವು ಮೆರೆವನು ।
ದರದಿ ಪೂಜಾವಿಧಿಯುನೀರೆರದಿಂದ ಮಾಡುವನು ॥ ಮರಿಯು ರೂಪದಿ ಪಕ್ಷಚಕ್ಷುಗಳೆಲ್ಲದಲೆ ನೋಡೆ ॥ ೨೬೧ ॥
ಗುರುವೆ ಶಂಕರನೆಂದು ಭಾವಿಸಿ ।
ಸರಿಸರಿಯಲಾತನನೆ ತುತಿಪನು ಗುರುವು ಸ್ವಪ್ನಿಣಿಯೆಂದು ಭಾವಿಸಿ ।
ಮೆರೆವುದೀಸ್ಥಿಯರ್ಜನೆಯ ಲಕ್ಷಣವು ತಿಳಿಯುವುದು ॥೨೫೬॥ ಯಿರುವುದೇನಾ ಚಂಚುವಿನಲದ ।
ಹರುಷದಿಂ ಗುರುಮುಖದೊಳಂಗೀಕವಿಸಿ ಗ್ರಹಿಸುವನು ॥

[ಸಖ್ಯಂ] ಗುರುವು ನಿಜಪತಿಯೆಂದು ಭಾವಿಸಿ । ಗುರುವೆ ತಾರಕನೆಂದು ಮನದೊಳ- ।
ವಿರಚಿಸುತ ಜೀವನೆನೆ ಪಯ್ಯೆಯ । ಗರಿತು ಹಿಂದಿನ ಕಚ್ಚ ಹಿಡಿವನು ।
ಗುರುವಿನುಪಭೋಗವನು ಕೊಳುಹನು ಸತಿಯ ತೆರದಿಂದ ॥ ಗುರುಚರಣಧ್ಯಾನದಲಿ ಹರ್ಷದ ತೆರೆಗಳೇಳುವುವ ॥ ೨೬೨ ॥
ಧರೆಯೊಳೀಪರಿ ಪ್ರೇಮಯೋಗದಿ ।
ಧರಿಸುವನು ಬುದ್ಧಿಯಲಿ ಕೌತುಕ । ಬರಲು ಚಂದ್ರೋದಯವು ಕಡಲಲಿ ।
ಗುರುಚರಣಸದ್ಭಕ್ತಿ ಪಾಲ್ಗಡಲೆಂತ ಮನ್ನಿಪನು ॥ ೨೫೭ ॥ ಪರಿಪರಿಯಿ ತರಂಗವೇಳ್ವವು ।
ಭರತಿಯಲಿ ನಾಗರವು ಮೇಲಕ್ಕೇರಿ ಬರುತಿಹುದು ॥

ಗುರುಚರಣಭಜನದಲಿ ಹುಟ್ಟುವ । ಧರೆಯಲಾಪರಿ ಹರ್ಷ ತೆರೆಗಳು ।
ಹರುಷಸುಖವೇ ಶೇಷಶಯ್ಯೆಯು । ಒರೆಸಿ ದೇಹದಿ ಹರ್ಷವೇಳುವು- ।
ಗುರುವೆ ಭಗವಾನ್ ನಿಸು ಮಲಗಿಹನೆಂದು ಭಾವಿಸುತ ॥ ದರುಹಲೆಂತೀನಿಸ್ತರವ ನಾ ಶಬ್ದಸೃಷ್ಟಿಯಲಿ ॥ ೨೬೩ ॥

ಧರಿಸಿ ಸದ್ಗುರುಮೂರ್ತಿ ಹೃದಯದಿ ।
ಪರಿಪರಿಯ ಧ್ಯಾನದಲಿ ಸದ್ಗುರು- ।
ಚರಣಸುಖದನುಭವವ ಭೋಗಿಸುತಿರುವನೆಡೆಬಿಡದೆ ॥
ಮರಳಿ ಶ್ರೀಗುರುವರನ ಸೇವೆಯ ।
ಹೊರಗಿನಿಂದವನೆಂತು ಮಾಳ್ಪನು ।
ಪರಿಯ ನಾ ವಿಸ್ತರಿಪೆ ಕೇಳ್ವುದು ಸಜ್ಜನರು ತಿಳಿಯೆ ॥೨೬೪॥

[ದಾಸ್ಯಂ] ಬರುವುದೀ ನಿರ್ಧಾರ ಮನದಲಿ ।
ಗುರುವಿನುತ್ತಮ ಸೇವೆ ಮಾಡುತ ।
ದೊರಕಿಸುವೆ ನಾ ಗುರುಪ್ರಸಾದವ ಚರಣಸೇವೆಯಲಿ ॥
ಗುರುವು ಹರ್ಷದ ಭರದೊಳೆನ್ನನು ।
ಹರಸಿ ಕೇಳಲು ಬೇಕು ಶಿಷ್ಯನೆ ।
ವರವ ಬೇಡೈ ನಿನಗೆ ನಾನು ಪ್ರಸನ್ನನಾಗಿಹೆನು ॥ ೨೬೫ ॥

ಧರೆಯಲೀಪರಿ ಶುದ್ಧಸೇವೆಯ ।
ಭರವಿ ನಾ ಪ್ರಾರ್ಥಿಸುವೆನೀಪರಿ ।
ಗುರುವೆ ನಾನಾಗುವೆನು ನಿನ್ನಯ ಸಕಲಪರಿವಾರ ॥
ಇರುವುದೇನೈ ವಸ್ತು ಜಗದಲಿ ।
ನಿರುತ ನಿನ್ನುಪಯೋಗಕಾಂ ಪರಿ- ।
ಪರಿಯ ವಸ್ತುಗಳೆಲ್ಲ ನಿನೆ ಯಾಗುವೆನು ಪ್ರೇಮದಲಿ ॥೨೬೬॥

ಪರವನೀಪರಿ ಬೇಡಿದಾಕ್ಷಣ ।
ಗುರುವೆನಗೆ ಸಂಮತಿಯ ಕೊಡುವನು ।
ಹರುಷದಿಂ ನಾ ಸರ್ವವಸ್ತ್ರುಗಳಾಗಿ ಸೇವಿಪೆನು ॥
ಧರೆಯೊಳೀಸೇನಿಹುದೊ ಸದ್ಗುರು- ।
ವರನ ಸೇವೆಗೆ ಯೋಗ್ಯನಾಧನ ।
ಧನಿಸಿ ನಾನಾರೂಪ ಗುರುವಿನ ಸೇವೆ ಮಾಡುವೆನು ॥೨೬೭॥

ಗುರುವು ಪುಷ್ಕಳ ಭಕ್ತಸೈಂದ- ।
ಕ್ಕಿರುವನಲ್ಲವೆ ತಾಯಿಯಾದರು ।
ಗುರುಕೃಪೆಗೆ ನಾನಾಕೆ ಹಾಕುತಲೊಲಿಸಿಕೊಳ್ಳುವೆನು ॥
ಗುರುವು ನನಗೊಬ್ಬನೆನೆ ತಾಯಿಯು ।
ಯಿರುವನೆನುತಲಿ ಯೆನಿಸಿ ಕೊಳುವೆನು ।
ಗುರುವಿಗೆನ್ನ ಪ್ರೇಮ ಹಚ್ಚುತ ಮಾಳ್ಪೆ ಮರುಳನನು ॥೨೬೮॥

ಗುರುವೆ ನನ್ನನೆ ವರಿಸುತೆರಡನೆ- ।
ತರಣಿಗಳ ಬಿಡುವಂತೆ ಮಾಳ್ಪೆನು ।
ಧರೆಯೊಳೀತೆರದೇಕಪತ್ನೀವ್ರತವ ಹೆಚ್ಚುವೆನು ॥

ಗುರುವು ನನ್ನಲಿ ಲೋಭ ಮಾಡುತ ।
ನಿರುತವೆನ್ನ ಪ್ರೇಮವಾಶದೂ- ।
ಳಿರುವ ತೆರದಲಿ ಕ್ಷೇತ್ರಸಂನ್ಯಾಸವನು ಹಚ್ಚುವೆನು ॥ ೨೬೯ ॥

ಬೀಸಲೇನ್ಯೆ ಗಾಳಿ ಸುತ್ತಲು ।
ಸೂಸುತಿಹುದಾಕಾಶದಲ್ಲಿಯೆ ।
ಲೇಸಿನಿಂದಾತೆರದಿ ಗುರುಕೃಪೆಗಾನೆ ಸುತ್ತುವೆನು ॥
ತೋಷದಿಂ ನಾ ಪೇಳ್ವೆನೆನ್ನ ವಿ- ।
ಶೇಷ ಗುರುಸೇವಾಪ್ಯವೋತೆರಿಗೆ ।
ಭೂಷಣವ ತೊಡಿಸುವೆನು ಸದುಣದಿಂದ ಪೋಣಿಸುತ ॥ ೨೭೦ ॥

ಎನ್ನ ಹೊರತನ್ಯರಿಗೆ ಸದ್ಗುರು- ।
ರನ್ನಲಾಭವು ದೊರೆಯಲಾಗದು ।
ಯೆನ್ನುತೀಪರಿ ಯತ್ನಮಾಡುವೆ ಸಂತಪಡೊಳಾನು ॥
ಮುನ್ನ ಸದ್ಗುರುನ್ನೇಹವೃಷ್ಟಿಗೆ ।
ಯೆನ್ನ ದೇಹದ ಪೃಥ್ವಿ ಮಾಡುವೆ ।
ನೆನ್ನತವ ಪರಿಪರಿಯ ಕಲ್ಪನೆಗಳಲಿ ತೇಲುವನು ॥ ೨೭೧ ॥

ಗುರುವಿಗಾಲಯವಾಗಿ ನಾನಾ- ।
ಗುರುಚರಣಸೇವೆಯಲಿ ಬಹುತ- ।
ಪರತೆಯನು ತೋರಿಸುವ ದಾಸನೆನುತ್ತ ಮೆರೆಯುವೆನು ॥
ಗುರುವು ನಿತ್ಯದಿ ಡಾಟುತಿಹ ಮನೆ- ।
ಗಿರುವೆ ನಾ ಹೊಸ್ತಲದ ರೂಪದಿ ।
ನಿರುತ ಸದ್ಗುರುಚರಣ ತಗಲುವ ಭಾಗ್ಯ ಭೋಗಿಪೆನು ॥ ೨೭೨ ॥

ಗುರುಗೃಹದಿ ನಾ ದ್ವಾರಪಾಲಕ- ।
ನಿರುವೆನಥವಾ ದ್ವಾರವಾಗುವೆ ।
ಗುರುಚರಣದಲಿ ನಾನು ಪಾದುಕೆಯಾಗಿ ಮೆರೆಯುವೆನು ॥
ಗುರುಚರಣದಾಭರಣ ನಾನಾ- ।
ಗಿರುವೆ ಸುಖಸಂತೋಷದಿಂದಲಿ ।
ನಿರುತವಾಧೂಳಿಯಲಿ ನಾನು ಪವಿತ್ರನಾಗುವೆನು ॥ ೨೭೩ ॥

ಛತ್ರಚಾಮರವಾಗಿ ಗುರುವಿಗೆ ।
ನಿತ್ಯದಲಿ ನಾನವ್ವಗಳನು ಜೀ- ।
ಸುತ್ತಿರುವೆ ನಡೆಯಲಿಕೆ ಗುರುವಿಗೆ ಹಾದಿಯಾಗುವೆನು ॥
ಭೃತ್ಯನಾಗುವೆ ನಾನು ಗುರುವಿನ ।
ಸುತ್ತಮುತ್ತಲು ದೇಹ ರಕ್ಷಿಪೆ ।
ಹಸ್ತಗಳನೀಯುತ್ತ ಗುರುವಿನ ಸೇವೆ ಮಾಡುವೆನು ॥ ೨೭೪ ॥

ಗುರುವರನ ಸಂಮುಖದೊಳೋಡುವ ।
ಪರಮಭೃತ್ಯನು ನಾನೆನಿಸುವೆನು ।
ಗುರುನಿಂದುರಿಗೆ ಹಿಡಿದು ತೀರ್ಥದ ಗಿಂಡಿ ಕೊಡುವೆನು ॥
ಗುರುವರಗೆ ಬಾಯ್ಮುಕ್ಕಳಿಸುವರೆ ।
ಬರುವ ನೀರಾಗುವೆನು ನಾನೇ ।
ಮರಳಿ ನೀರುಗುಳುವರೆ ನಾನೇ ಪಾತ್ರವಾಗುವೆನು ॥೨೭೫॥

ಗುರುವರನ ಹಸಿಬಿಯನು ಹೆಗಲೊಳ- ।
ಗಿರಿಸಿ ತಿರುಗುವೆ ಗುರುಸಂಪದಿ ।
ಮರಳಿ ಶೈಲಾಭ್ಯಂಗ ನಾನಾಗುವೆನು ಗುರುಪಿಂಗೆ ॥
ಗುರುನಿನಾಸನವ್ರಡಿಗೆತೊಡಿಗೆಗ- ।
ಳರಿವೆಹ್ಚಡಚಂದನಾದಿಗ- ।
ಳೆರದೆ ನಾನು ಮಹೋಪಚಾರಗಳೆಲ್ಲವಾಗುವೆನು ॥ ೨೭೬ ॥

ಆಡಿಗೆಯನು ನಾ ಮಾಡಿ ಗುರುಪಿಗೆ ।
ಒಡಿಸುವೆನು ಪಕ್ವಾನ್ನಗಳ ನಾ- ।
ನೊಡನೆ ನೀವಾಳಿಸುವೆನಾತ್ಮತ್ವದಲಿ ಗುರುವರನ ॥
ಬಡಿಸಲೆಲೆಯಲಿ ಭೋಜನವ ನಾ ।
ಸಡಗರದಿ ಪಂಕ್ತಿಯಲಿಯುಣುವೆನು ।
ಕೊಡುವೆ ಭೋಜನವಾದನಂತರ ಪಿಳ್ಯನನು ನಾನೆ ॥೨೭೭॥

[ಪಾದಸೇವನಂ] ಗುರುಪಿನೆಂಜಲ ನಾನೆ ಒಳಿಸುವೆ ।
ಗುರುವರನ ಶಯ್ಯೆಯನು ಹಾಕುವೆ ।
ಗುರುವರನ ಪಾದಗಳನೊತ್ತುತ ಸೇವೆ ಮಾಡುವೆನು ॥
ಮರಳಿ ಸಿಂಹಾಸನವು ನಾನಾ- ।
ಗುರುಪಿಗಾಗುವೆನೆನ್ನ ಮೇಲೆಯೆ ।
ಗುರುಪಿಗಾರೋಹಣವು ದೊರೆಯಲಿ ಯೆನ್ನ ರೂಪದಲಿ
॥ ೨೭೮ ॥

ಪರಿಪರಿಯಲೀತೆರದಿ ಸದ್ಗುರು- ।
ವರನ ಸೇವಾಲಾಭ ಸಂತತ ।
ದೊರೆಯಲೆನುತಲಿ ಪ್ರಾರ್ಥಿಸುವನೈ ಭಕ್ತ ಸಂತತದಿ ॥
[ಶ್ರವಣಂ] ಧರೆಯೊಳಾವ ಚಮತ್ಕೃತಿಯು ಕಡೆ- ।
ಗಿರುವುದೈ ಗುರುವರನ ಲಕ್ಷ್ಯವು ।
ಬರಲಿಯೆನಗಾರೂಪ ಸದ್ಗುರುವಿನ ಚಮತ್ಕೃತಿಯ ॥೨೭೯॥

ಗುರುವರನ ಕರ್ಣಾಂಗಣದಿ ಒರು- ।
ವರುವ ಶಬ್ದದ ವೃಂದವಗಣಿತ ।
ಧರೆಯೊಳಾನಾಗುವೆನು ಗುರುಸ್ಪರ್ಶಿಸಿದ ಥಳ ನಾನು ॥

ಗುರುವರನ ನೇತ್ರದ ಕಟಾಕ್ಷವು ।
ತಿರುಗುತಿಹುದೋ ಯಾವ ರೂಪದಿ ।
ಧರೆಯೊಳಾನಾಗುವೆನು ತ್ರಿಜಗದ ರೂಪವೆಲ್ಲವದು ॥ ೨೮೦ ॥

ಗುರುವರನ ನಾಲಿಗೆಗೆ ರುಚಿಕರ- ।
ವಿರುವ ವಸ್ತುಗಳೆಲ್ಲ ನಾನಾ- ।
ವಿರುವೆ ಪರಿಮಳರೂಪದಲಿ ಮೂಗಿನಲಿ ಸೇರುವೆನು ॥
ಪರಿಪರಿಯಲೀ ತೆರದಿ ಬಾಹ್ಯದ ।
ಗುರುವರನ ಸೇವೆಯನು ಮಾಡುತ ।
ನಿರುತ ನಾನಾವಸ್ತುರೂಪದಿ ಗುರುವ ವ್ಯಾಪಿಸುವೆ ॥ ೨೮೧ ॥

ಜೀವ ದೇಹದೊಳಿರುವನಕ ಗುರು- ।
ಸೇವೆ ದೊರೆಯಲಿ ನಿರುತವೆಂದೀ- ।
ಭಾವನೆಯ ಯೋಚಿಪನು ಮನದಲಿ ಗುರುಚರಣಭಕ್ತ ॥
ಈಪ್ರಧಿ ಜ್ಞಾನೇತನೆಂದನು ।
ಭಾವಿಕರಿಗಾಶ್ರೋತೃಜನರಿಗೆ ।
ಭೂವಲಯದಲಿ ಮೋಕ್ಷಸಾಧನವಿಹುದು ಗುರುಭಕ್ತಿ ॥ ೨೮೨ ॥

[ಆತ್ಮನಿವೇದನಂ] ಮರಣ ದೇಹಕೆ ಬರಲು ತದನಂ- ।
ತರದಿ ಬುದ್ಧಿಯು ಸೇವೆಯಾಸ್ಥೆಯ ।
ಧರಿಸುವುದಲಾ ಚಿತ್ರವಿಹುದೀಪರಿ ಜಗತ್ತ್ರಯದಿ ॥
ಗುರುಚರಣಸದ್ಭಕ್ತನೀಪರಿ ।
ಯರುಹುವೆನು ಮನದೊಳಗೆ ಕೇಳೆರಿ ।
ಗುರುಚರಣ ತಗಲುವ ನೆಲದಲೇ ಜೀಳಲೀದೇಹ ॥ ೨೮೩ ॥

ಸುಟ್ಟು ದೇಹವು ಬೂದಿಯಾಗಲು ।
ಘಟ್ಟನಾದೇಹದ ವಿಭೂತಿಯು ।
ಸೃಷ್ಟಿಯಲಿ ಗುರುಚರಣವೆಲ್ಲಿಹುದಲ್ಲಿ ಜೀಳುವುದು ॥
ನಷ್ಟವಾದ ಶರೀರದೊಳಗವ- ।
ಶಿಷ್ಟ ನೀರಿನ ಭಾಗ ನೀರಿಗೆ ।
ಮುಟ್ಟುವುದು ಗುರುಚರಣ ಸ್ಪರ್ಶವನೆಲ್ಲಿ ಮಾಡುವುದೊ ॥೨೮೪॥

ಮರಳಿ ದೇಹದ ತತ್ತ್ವ ತೇಜವು ।
ಒರುತ ತೇಜದಿ ಸೇರ್ವುದೆಂತೆನೆ ।
ಗುರುವರನಿಗಾರತಿಯ ಬೆಳಗುವ ತೇಜದಲಿ ನೋಡೆ ॥
ತಿರಿಗಿ ಯಥವಾ ಗುರುವರನ ಮಂ- ।
ದಿರದಿ ಬೆಳಗುವ ದೀಪದೊಳಗದು ।
ಬರುತ ಸೇರ್ವುದು ಚೋದ್ಯವಿದನೇನೆಂತ ಬಣ್ಣಿಸಲಿ ॥ ೨೮೫ ॥

ನರಶರೀರದ ಪ್ರಾಣವಾಯುಗ- ।
ಳೆರದೆ ಲಯಹೊಂದುವ್ರವು ಶ್ರೀಗುರು- ।
ವರನ ಪೈಯಲಿ ಬೀಸುತಿರುತಿಹ ವಾಯುನಿಲಿ ನೋಡೆ ॥
ತಿರಿಗಿ ಕೇಳಾಕಾಶಭಾಗವ್ತ ।
ಗುರುವರನು ಪರಿವಾರಸಹಿತಲಿ ।
ಯಿರುವನೆಲ್ಲಿಂಹೊ ಸೇರ್ವೆದಲ್ಲಿಂಸೆ ಗಗನತತ್ತ್ವದಲಿ ॥೨೬೬॥

ಜೀವ ದೇಹದೊಳಿರಲಿ ಯಥವಾ ।
ಜೀವ ದೇಹವ ಬಿಟ್ಟು ಹೋಗಲಿ ।
ಯಾವಗಂ ಶ್ರೀಗುರುವರನ ಸೇವೆಯನೆ ಮಾಡುವ್ರದು ॥
ಭಾವಿಸುತಲೀ ತೆರದೊಳನ್ಯರ ।
ಸೇವೆಯಿಂ ಗುರುವರನ ತಪ್ಪಿಸಿ ।
ಭೂಪಲಯದಲಿ ತನ್ನ ಕುದುರೆಯ ಮುಂದೆ ಮಾಡುವನು
॥ ೨೬೭ ॥
ಗುರುಚರಣಸೇವೆಯಲಿ ನಾ ತ- ।
ತ್ಪರನಿರುವೆನೈ ಕಲ್ಪಕಲ್ಪದಿ ।
ಧರಿಸುತೀ ನಿರ್ಧಾರ ಮನದಲಿ ಸೇವೆ ಮಾಡುವನು ॥
ಇರುಳು ಹಗಲೆನ್ನದಲೆ ಸಂತತ ।
ಕೊರತೆಕುಂದುಗಳನ್ನು ಮನದಲಿ ।
ತರದೆ ಒಂದೇಸವನೆ ಗುರುಸೇವೆಯನು ಮಾಡುವನು
॥ ೨೬೮ ॥
ಗುರುವು ಮೇಣಾಜ್ಞೆಯನು ಕೊಟ್ಟರೆ ।
ಸ್ಫುರಣವೇರುವ್ರದವಗೆ ಮನದ- ।
ಲ್ಲಿರುವ್ರದೊಂದೇ ಬೆರಳು ನೋಡಾಕಾಶ ಮುಟ್ಟುವರೆ ॥
ಅರೆನಿಮಿಷದಲ್ಲೊರ್ವನೇ ಗುರು- ।
ವರನು ಹೇಳಿದ ಕೆಲಸ ಮಾಳ್ಪನು ।
ಧರಣಿ ಮನ ಹಿಂದಿಕ್ಕಿ ಮುಂದೋಡುವ್ರದು ದೇಹವೆದು
॥ ೨೬೯ ॥
ಮರಳಿ ಗುರುಸೇವೆಚ್ಛೆ ಮನದೊಡ- ।
ನಿರದೆ ಸ್ಪರ್ಧೆಯ ಮಾಡುವ್ರದು ಹಿಂ- ।
ದಿರಿಸಿ ಮುಂದಕ್ಕೋಡುವ್ರದು ವರ್ಣಿಸುವ್ರಂತಿದನು ॥
ಶರಣಿ ತನ್ನಯ ಜೀವವ ಶ್ರೀ- ।
ಗುರುವರನ ಲೀಲಾಚಮತ್ಕೃತಿ- ।
ಗಿರದೆ ನೀವಾಳಿಸುತ ಪರಮಾನಂದ ತಾಳುವನು ॥ ೨೭೦ ॥

ಗುರುಚರಣಸೇವೆಯಲಿ ಕೈಶನಾ- ।
ಗಿರುತ ಪ್ರೇಮದಿ ಪುಷ್ಟನಾಗುವ ।
ಗುರುವಿನಾಜ್ಞಾಸ್ಥಾನ ತಾನಾಗುವನು ನೋಡಿದಿಂಹಾ ॥
ಗುರುಕುಲದ ಯೋಗದಲಿ ನಿಜಕುಲ- ।
ಕಿರುವ್ರದೈ ಭೂಷಣವೆನುತಲೀ- ।
ಪರಿಯ ಭಾವದಿ ಮನದಿ ಹಿಗ್ಗುವನವನು ಸಂತಸದಿ ॥ ೨೭೧ ॥

ಇರುವರೈ ಗುರುಬಂಧುಗಳು ಬಹು- ।
ಪರಿಯಲಾತಗೆ ಪೂಜ್ಯರೆಂದೇ ।
ಯರಿತು ಸೌಜನ್ಯದಲಿ ವರ್ತಿಪನವರೊಡನೆ ನಿರುತ ॥
ಗುರುಚರಣಸೇವೆಯಲಿ ಸಂತತ- ।
ನಿರುವ್ರದಾತಗೆ ವ್ಯಸನ ನೋಡಲು ।
ಗುರುಪರಂಪರೆ ಕೊಟ್ಟ ಧರ್ಮವೆ ಶಾಸ್ತ್ರಮಾರ್ಗವದು ॥ ೨೭೨ ॥

ನಿತ್ಯನೈಮಿತ್ತಿಕದ ಕರ್ಮವು ।
ಧಾತ್ರಿಯಲಿ ಗುರುಚರಣಸೇವೆಯೆ ।
ತತ್ತ್ವ ನೋಡಲು ಗುರುವೆ ಕ್ಷೇತ್ರವು ಗುರುವೆ ದೈವತವು ॥
ಹೆತ್ತ ತಾಯಿಯು ಗುರುವೆ ಮತ್ತಾ- ।
ಹೆತ್ತತಂದೆಯು ಗುರುವೆ ಗುರುವಿನ ।
ಹೊರ್ತು ಜಗದೊಳಗನ್ಯ ತತ್ತ್ವನನರಿಯುಲಾರನಲಾ ॥ ೨೭೩ ॥

ಧರೆಯಲಿ ಗುರುದ್ವಾರವೊಂದೇ ।
ಯಿರುವ್ರದವನಿಗೆ ಸಕಲಸಾರವು ।
ಗುರುಚರಣಸೇವಕರು ಬಂಧುಗಳೆಂತ ಭಾವಿಪನು ॥
[ಕೀರ್ತನಂ] ನಿರುತ ರಾತ್ರಿಂದಿವದಿ ಶ್ರೀಗುರು- ।
ವರನ ನಾಮೋಚ್ಚಾರ ಮಾಳ್ಪನು ।
ಗುರುವಚನ ಹೊರತನ್ಯ ವಿಷಯವ ಮುಟ್ಟಲಾರನಲಾ ॥ ೨೭೪

[ವಂದನಂ] ಧರೆಯೊಳಗೆ ಗುರುವರನ ಪದಮು- ।
ಟ್ಟಿರುವ ನೀರದು ಯಾವ್ರದಾಗಲಿ ।
ಪರಮಪಾವನತೀರ್ಥರಾಶಿ ಯೆನುತ್ತ ನಂಬುವನು ॥
ಪರಮಪಾವನ ಮೂರುಜಗದೊಳ- ।
ಗಿರುವ ತೀರ್ಥವನೆಲ್ಲವದರಲಿ ।
ತರುವನೈ ಯಾತ್ರಾಭಿಲಾಷದೊಳೇನ ಹೇಳುವೆನು ॥ ೨೭೫ ॥

ಗುರುವರನ ಬಾಂಲೆಂಜಲವನಿಗೆ ।
ದೊರೆಯೆ ಸಹಜದಿ ಯದನೆ ತಿಳಿವನು ।
ಗುರುಪ್ರಸಾದವೆನುತ್ತ ಕುಣಿವನು ಸೌಖ್ಯಭರದಿಂದ ॥
ಇರುವ್ರದದುವೆ ಸಮಾಧಿಸುಖದಿಂ ।
ಹಿರಿದು ಕೇಳಾತನಿಗೆ ನೋಡೈ ।
ಗುರುಪ್ರ ಹಾದಿಯ ನಡೆಯಲೇಳುವ ಪದರಜಃಕಣವ ॥ ೨೭೬ ।

ಧರಿಸುವನು ಮಸ್ತಕದೊಳಾತನು ।
ದೊರೆಯಲದು ಮೋಕ್ಷಕ್ಕೆ ಮಿಗಿಲಾ ।
ಗಿರುವದೆನುತಲಿ ಮೋಕ್ಷಸುಖವನು ಧಿಕ್ಕರಿಸುವನಲಾ ॥
ಗುರುಚರಣನದ್ಭಕ್ತಿಮಹಿಮೆಯು ।
ನರುಹಲಾನಿನ್ನೆಸ್ಟು ಪರಿಯಲಿ ।
ಹೊರಗೆ ಸೂಸಲು ಭಕ್ತಿಮುರಿ ಯಿಹಕಾಮ್ಯನದಿಯಾಯ್ತು
॥ ೫೯೭ ॥

ಇರಲು ಸದ್ಗುರುಭಕ್ತಿಯಿಚ್ಛೆಯು ।
ಬರಲು ಗುರುಭಕ್ತಿಯಲಿ ಕೌತುಕ ।
ಗುರುಚರಣಸೇವೆಯು ಹೊರತು ಬೇರಿರುವ ವಿಷಯದಲಿ ॥
ಬರುವುದೆಂತಭಿರುಚಿಯು ಕೇಳೀ ।
ಪರಿಯು ಗುರುಭಕ್ತನು ವಿಶೇಷದೊ ।
ಳಿರುವನಾತ್ಮಜ್ಞಾನದಾಗರ ಜ್ಞಾನಕಾಭರಣ ॥ ೫೯೮ ॥

ಗುರುಚರಣಸೇವಕನೆ ದೇವನು ।
ಯಿರುವುದಾತನ ಭಕ್ತ ಜ್ಞಾನವು ।
ಯಿರುವುದೆಲ್ಲೀ ಭಕ್ತಿ ಗುರುವಿಲಿ ಪ್ರೇಮಪೂರ್ವಕದಿ ॥
ಇರುವುದಲ್ಲಿ ಜ್ಞಾನರಾಶಿಯು ।
ಹರಿದು ಮೂಜಗ ತುಂಬಿ ತುಳುಕುವ ।
ಪರಿಯಲಾತನೊಳಿರುವುದೈ ನೋಡಲಿಕೆ ಜ್ಞಾನವದು ॥೫೯೯॥

ಗುರುಚರಣಸೇವೆಯಲಿ ಕೇಳೀ ।
ತೆರದಲುಕ್ಕುಂರಾತಿರೇಕವು ।
ಪೆರೆವುದೆಂದೀತೆರದಿ ನಿರುಪಮವರ್ಣನೆಯು ಕೊಟ್ಟಿ ॥
ಒರೆತನದಿ ನಾನೆನ್ನ ದೋಷವ ।
ನರುಹಲಿಕ್ಕೆ ಪ್ರಯತ್ನ ಮಾಡುವೆ ।
ನಿರುವೆ ನಾನೆಂಬೆನುತ ನಿರ್ಲಜ್ಜೆಯಲಿ ಪೇಳುವೆನು ॥ ೬೦೦ ॥

ಕರಗಳಿದ್ದರು ಸೇವೆಗವು ಸೊ ।
ಟ್ಟಿರುವುವೈ ನಿಜ ನೇತ್ರವಿದ್ದರು ।
ಕುರುಡ ನಾನಾಗಿರುವೆ ಶ್ರೀಗುರುವರನ ಭಜನೆಯಲಿ ॥
ಚರಣವಿದ್ದರದೇನು ಶ್ರೀಗುರು ।
ವರನ ಸೇವೆಗೆ ಹೆಳವನಿಂ ನಾ ।
ಪಿರಿಹೆಳವನೈ ನಾಲಿಗೆಯು ಮೇಣಿದ್ದರೇನು ಫಲ ॥ ೬೦೧ ॥

ಗುರುವರನ ಗುಣವರ್ಣನೆಗೆ ನಾ ।
ನಿರುವೆ ಮೂಕನಭಾಗ್ಯನೆನ್ನದು ।
ಬರುತ ನಾನಾಲಸ್ಯಪಂಕದಿ ಸಿಲುಕಿ ಬಿದ್ದಿಹೆನು ॥

ಪರಿಪರಿಯಲೀದೋಷರಾಶಿಗ ।
ಳೆರುಪ್ರಹಾದರು ಯೆನ್ನ ಶ್ರೀಗುರು ।
ಒರಿದೆ ಯುದರಂಭರಿಯಿನೆನ್ನನು ಪೋಷಿಸುವನಲ್ಲೈ ॥ ೬೦೨ ॥

ಧರೆಯಲೀಪರಿ ಭಕ್ತಿಯೆನ್ನಲಿ ।
ಬರಲು ಬೇಕೆಂದಿಚ್ಛೆಯಿರುವುದು ।
ಯಿರುವುದದು ಕಾರಣವು ದೇಹದ ಪೋಷಣಕೆ ತಿಳಿಯೆ ॥
ಗುರುವೆ ನಾನೀಪರಿಯು ವಿಷಯಾಂ ।
ತರವ ಮಾಡುತ ನಿನ್ನ ಭಕ್ತಿಯ ।
ಭರದಿ ವಿಸ್ತರಿಸಿದೆನು ಕ್ಷಮಿಸೈ ಮೂಢಭಾಷಣವ ॥ ೬೦೩ ॥

ಗುರುವೆ ತವ ಪದಸೇವೆಯಂಗೀ ।
ಕರಿಸುವೆನು ನನಗಭಯ ಕರುಣಿವು ।
ದರುಹುವೆನು ಗೀತಾರ್ಥವೆಲ್ಲವ ಹಸ್ಸದದಿ ತಿಳಿಯೆ ॥
ಹರಿಯು ಶ್ರೀಗೋಪಾಲಕೃಷ್ಣನು ।
ಧರಿಸಿದಾತನು ಭೂಭಭಾರವ ।
ನರನ ವೇಷದಿ ಬಂದಿರುವಶ್ರೀಹಿಸ್ಸು ಪ್ರಭವಿಸ್ಣು ॥ ೬೦೪ ॥

ಅರುಹುತಿರುವನು ಭಕ್ತನಾರ್ಥಗೆ ।
ನರನು ಭಗವದ್ಗೀತೆ ಕೇಳುವ ।
ನರುತುವೆನು ನಾ ನಿಮಗೆ ಯೆನ್ನಯ ಗುರುನಿಷಾಜ್ಞೆಯಲಿ ॥
ಹರುಷದಿಂದೀಕೃಷ್ಣನುಸುರಿದಂ ।
ಸುರಿವ ಗೀತಾಮೃತವ ಶ್ರವಣದೊ ।
ಳಿರಿಸಿ ನೀವ್ ಕೃತಕೃತ್ಯರಾಗಿರಿ ಯೆಂದ ಜ್ಞಾನೇಶ ॥ ೬೦೫ ॥

[ಶೌಚಂ] ಹೊರಗೊಳಗೆ ಪರಿಶುದ್ಧವೈ ಕ ।
ರ್ಪುರವು ಕೋರ್ಪುದು ಕಣ್ಣಿಗಲ್ಲವೆ ।
ಯಿರುವುದಾಪರಿ ಶೌಚ ಸ್ವಚ್ಛವು ಹೊರಗೊಳಗೆ ನೋಡೆ ॥
ಬರುವುದಾಪರಿ ರತ್ನತೇಜವು ।
ಹೊರಗೊಳಗೆ ಝಗಮಗಿಸುತಿಹುದೈ ।
ತರಣಿಯಾಪರಿ ತೇಜ ಹೊರಗೊಳಗೊಂದೆ ಪರಿಯಲ್ಲೈ ॥ ೬೦೬ ॥

ಹೊರಗೆ ಕರ್ಮದ ಯೋಗದಿಂ ಬಂ ।
ಬರುವುದೆಲ್ಲವು ಬಾಹ್ಯಶುದ್ಧಿಯು ।
ತರಿಗಿ ಜ್ಞಾನದ ಯೋಗದಿಂದೊಳಶುದ್ಧಿ ಬಂದಿಹುದು ॥
ಹೊರಗೊಳಗೆ ಕೇಳೀತೆರದಿ ಬಂ ।
ದಿರುವುದಾರಿಗೆ ಶುದ್ಧಿಯವನೇ ।
ಯಿರುವ ಶೌಚಕ್ಕೀ ಜಗದೊಳಾಧಾರಸ್ತಂಭನಲಾ ॥ ೬೦೭ ॥

ನರನೆ ವೇದಪುರಾಣಮಂತ್ರೋ- ।
ಚ್ಚರಣದಿಂ ಮೇಣ್ ಮೃತ್ತಿಕಾಜಲ- ।
ವಿರಿಸೆ ಬಾಹ್ಯಶರೀರದಲಿ ಹೊರಗಾಗುವುದು ಶುದ್ಧಿ ॥
ಹೊರಗೆ ಕನ್ನಡಿಯುವರಿ ಸಂಚಿತ- ।
ವಿರುವ ಧೂಳೆಯ ತೊಳೆಯುವಂದದಿ ।
ಯರಿವಿಯಖಿಲವ ಮಲವನಗೆಸನು ತೊಳೆಯುವಂದದಲಿ
॥ ೩೦೮ ॥

ಧರೆಯಲೀಪರಿ ಬಾಹ್ಯಶುದ್ಧತೆ ।
ಬರಲು ಮೇಲಂತರದಿ ಜ್ಞಾನದಿ ।
ಬರುವುದವನಿಗೆ ನೋಡು ಬಹಿರಂತರದಿ ಶುದ್ಧತೆಯು ॥
ನರನೆ ಯಂತರ ಶುದ್ಧಿಯಿಲ್ಲದೆ ।
ಬರಿದೆ ಬಾಹ್ಯದಿ ಮಾತ್ರ ಕರ್ಮಾ- ।
ಚರಣ ಮಾಡಲು ಬರುವುದು ವಿಡಂಬನವು ನಿಜವಾಗಿ ॥೩೦೯॥

ಪ್ರೇತಕಾಭರಣಗಳನಿಟ್ಟರೆ ।
ಭೂತಳದಿ ಶೃಂಗಾರವೇನದು ।
ತೀರ್ಥದಿಂ ಸ್ನಾನವನು ಹಾಕುವುದೇಕೆ ಗರ್ದಭಗೆ ॥
ಏತಕ್ಕೆ ಸಕ್ಕರೆಯ ವಾಕವು ।
ಭೂತಳದಿ ಕಹಿಕುಂಬಳಕೆ ಮೇ- ।
ನೇತಕ್ಕೆ ತೋರಣವು ನಿರ್ಜನ ಹಾಳು ಮನೆಯೊಳಗೆ ॥೩೧೦॥

ನರನೆ ಕೇಳುಪವಾಸದಿಂದಲಿ ।
ನರಲುತಿರೆ ಹೊರಹೊಟ್ಟೆ ಮೇಲಾ- ।
ನರಗೆ ಭೋಜನದನ್ನ ಕಟ್ಟಲು ಹಸಿವೆ ತೀರುವುದೆ ॥
ಇರುವುದೇನುಪಯೋಗ ವಿಧವಾ- ।
ತರುಣಿಗಾಕುಂಕುಮದ ಲೇಪದಿ ।
ಯಿರುವುದೇನುಪಯೋಗ ಗಿಲಿಟಿನ ಕಲಶದಿಂ ಪಾರ್ಥ ॥೩೧೧॥

ಚಿತ್ರದೊಳಗಿನ ಫಲವು ಕೇಳ- ।
ತ್ಯುತ್ತಮವು ತೋರುವುದು ಕಣ್ಣಿಗೆ ।
ಕೆತ್ತಿ ನೋಡಲು ತುಂಬಿಹುದು ಗೋನುಯವು ವೃತ್ತಿಕೆಯೂ ॥
ಧಾತ್ರಿಯಲ್ಲೀ ಬಾಹ್ಯಕರ್ಮಾ- ।
ಸಕ್ತಿಯಲಿ ತೋರುವುದು ಪರಿಯಿದು ।
ವ್ಯರ್ಥವಿಹುದಾಕರ್ಮ ಜ್ಞಾನ ಪವಿತ್ರವಿಲ್ಲದಿರೆ ॥ ೩೧೨ ॥

ಕೇಳು ಚಿನ್ನದ ವಸ್ತು ಮಾಡಲು ।
ಮೌಲ್ಯ ಒರುವುದೆ ಭಾರಿ ಪಾರ್ಥನೆ ।
ಕೇಳು ಮದ್ಯದಿ ತುಂಬಿರುವ ಕೊಡ ಗಂಗೆಯಲ್ಲಿದ್ದಲು ॥

ತಾಳದು ಪವಿತ್ರತೆಯ ಪಾರ್ಥನೆ ।
ಕೇಳು ನೀನಾವರಿಯಲೊಳಗಿನ ।
ಕೇಳುತನ ಹೋಗದಲೆ ಬಾಹ್ಯಾಚರಣ ವ್ಯರ್ಥವಲಾ ॥ ೩೧೩ ॥

ಒಳಗೆ ಜ್ಞಾನ ಪ್ರಾಪ್ತವಾಗಲು ।
ಬೆಳಗುವುದು ಬಾಹ್ಯದಲಿ ಶುದ್ಧಿಯು ।
ಬೆಳೆಯ ಬೇಕಾಶೆರದಿ ಕರ್ಮಾಚರಣ ಹೊರಗಿಂದ ॥
ಇಳೆಯೊಳೇವರಿ ಯೆರಡುಕಡೆಯಿಂ ।
ಬೆಳಗಲಂತರಬಾಹ್ಯಶುದ್ಧತೆ ।
ನಿಲುವುದಲ್ಲಿಯೆ ಶುದ್ಧಪಾವನಶೌಚ ಸಹಜದಲಿ ॥ ೩೧೪ ॥

ನರನೆ ಕೇಳಂತರದೊಳಾ ಪರಿ ।
ಬರಲು ಪಾವನವಾದ ವಾಸನೆ ।
ಹೊರಗೆ ಪ್ರತಿಬಿಂಬಿಸುವುದಲ್ಲವೆ ತತ್‌ಕ್ಷಣದಿ ನೋಡೆ ॥
ನರನೆ ದೀಪವ ಕಾಚಗೃಹದೊಳ- ।
ಗಿರಿಸಲದರ ಪ್ರಕಾಶ ಪೊಳೆಗೆನೆ ।
ಯಿರುವುದೇನೈ ಹೊರಗೆ ಜ್ಯೋತಿಯು ಬಾರದಿಹುದೇನೈ ॥೩೧೫॥

ಪರಿಪರಿಯ ಸಂಶಯಗಳೇಳಲು ।
ಪರಿಪರಿಯಲಿ ವಿಕಾರವೇರಲು ।
ಪರಿಪರಿಯಲಿ ಕುಕರ್ಮದಲ್ಲಿ ಪ್ರವೃತ್ತಿ ಯೇಳೆರಲು ॥
ಪರಿಣಮಿಸದದು ಮನದಿ ಪಾರ್ಥನೆ ।
ಪರಿಪರಿಯ ರಂಗಗಳು ಮೇಘದೊ- ।
ಳರಲು ಕೇಳೈ ಗಗನದಲಿ ಪರಿಣಾಮವಾಗುವುದೆ ॥ ೩೧೬ ॥

ನರನೆ ಕೇಳೇತರದೊಳಾತನ ।
ತಿರಿತಿರಿಗಿ ವಿಷಯಗಳು ತ್ರಾಸಿಸು- ।
ತಿರುವುವಾದರು ವಿಷಯವಾಶದಿ ಸಿಲುಕಲಾರದಲಾ ॥
ಬರುವುದ್ದೆ ಕಿವಿಯೊಳಗೆ ಶಬ್ದವು ।
ಒರುವುದೈ ನೇತ್ರದಲಿ ರೂಪವು ।
ಪರಿಯಿದಾದರು ಮನದೊಳೇಳದು ವಿಷಯಪರಿಣಾಮ ॥ ೩೧೭ ॥

ಇಂದ್ರಿಯಂಗಳು ವಿಷಯಭೋಗವ ।
ಚಂದದಿಂ ಕೊಳುತಿರುವುವಾದರು ।
ಛಂದ ಹತ್ತುವುದೇನು ತತ್ತದ್ವಿಷಯಸಂಗದಲಿ ॥
ಮಂದಗಜಗಾಮಿನಿಯು ಹಾದಿಯ- ।
ಲಂದದಿಂ ನಡೆವಾಗಲಾಕೆಯು ।
ಮಿಂದು ಮಡಿಯಾಗಿಹಳೊ ಮೈಲಿಗೆಯಿಹಳೊ ತೋಚುವುದೆ॥೩೧೮॥

ಧರೆಯೊಳ್ಮೇಲಣ ಪಾವನಾತ್ಮಕ- ।
ನಿರುವ ಪುರುಷನು ಗೋಚರದಿ ತಾ- ।
ನಿರುವನೈ ಸಂಸಾರದಲಿ ನೋಡನ್ಯರಿರುವಂತೆ ॥
ಪರಿಯಿದಾದರು ವಿಷಯವಾಶದೊ- ।
ಳಿರನು ಮನವನ್ನೊತ್ತಿ ಹಿಡಿಯುವ- ।
ನರಿಯಲಾ ವಿಷಯದ ವಿಕಾರವು ಬಾರದವನೊಳಗೆ ॥೩೧॥

ತರುಣಿ ನಿಜಪತಿಪುತ್ರರಿಬ್ಬರಿ- ।
ಗಿರದೆ ತಾನಪ್ಪುವಳು ಪ್ರೇಮದಿ ।
ಬರುವುದೇನೈ ಕಾಮವಾಸನೆ ಮಗನನಪ್ಪಿದರೆ ॥
ನರನೆ ಕೇಳಾತೆರದಿ ಮಾನಸ- ।
ವಿರುವುದೈ ನಿರ್ಮಲವು ಕೇಳಾ- ।
ನರನಿಗರಿನಿಹುದಿಲ್ಲ ಕೃತ್ಯಾಕೃತ್ಯಗಳ ಜಗದಿ ॥ ೩೨॥

ದುಷ್ಟವಾವುದು ಶಿಷ್ಟವಾವುದು ।
ಹುಟ್ಟುತಿರುವುದು ಮನದಿ ಜ್ಞಾನವು ।
ತಟ್ಟಲಾರದು ಮನವನದರ ವಿಕಾರಪರಿಣಾಮ ॥
ಇಟ್ಟು ನೀರಿಲಿ ರತ್ನವನ್ನದ ।
ಮುಟ್ಟಿದರೆ ಕರಗುವುದೆ ನೀರಲಿ ।
ಘಟ್ಟಿಕಲ್ಲನು ಜೀರ್ಯಿಸಿದರದು ಜೀರ್ಯವಹುದೆ ಪಾರ್ಥ ॥೩೩॥

ವೃತ್ತಿಯೊಪರಿ ಮನದೊಳಾಗಲು ।
ಧಾತ್ರಿಯಲ್ಲಿ ಶುಚಿತ್ವವೆನುವರು ।
ಚಿತ್ತಶುದ್ಧಿಯು ಬರಲು ಜ್ಞಾನೋದಯವು ಬಹುದಲ್ಲಿ ॥
[ಸ್ಥೈರ್ಯಂ] ಮತ್ತೆ ನೋಡೈ ಸ್ಥೈರ್ಯವೆಲ್ಲಿಹು- ।
ದತ್ತ ಬರುವುದು ಜ್ಞಾನದುದಯವೆ ।
ಚಿತ್ತಸ್ಥೈರ್ಯವು ಜ್ಞಾನಕಿಹುದೈ ಜೀವನವೆ ಪಾರ್ಥ ॥೩೪॥

ಹೊರಗೆ ಜೀಕಾದಲ್ಲಿ ನೋಡಲು ।
ತಿರುಗುತಿಹನೈ ಸ್ವೇಚ್ಛೆಯಿಂದಲಿ ।
ಸ್ಥಿರವಿರುವುದೈ ಮನದ ವಸತಿಸ್ಥಾನವೊಂದೆಡೆಗೆ ॥
ತರುವೆ ಮೇಯಲಿಕಡಿಮೆ ಸೇರಿದ- ।
ರಿರುವುದಲ್ಲವೆ ಲಕ್ಷ್ಯ ಕರುವಿನ- ।
ಲಿರುವುದಲ್ಲಿವೆ ದೃಷ್ಟಿ ಸಂತತ ಧನದಿ ಕೃಷಣನಿಗೆ ॥ ೩೫॥

ತರುಣಸತಿ ನಿಜಪತಿಯೊಡನೆ ಬಹು- ।
ಹರುಷದಿಂ ಚಿತೆ ಯೆರ್ವಳಲ್ಲವೆ ।
ಹರುಷದಾಯಕವೆನು ನೋಡೆ ಪ್ರಸಂಗ ಕಾರಣವಲಾ ॥

ಪರಿಯಿದಾದರು ಸತಿಯ ಮಾನಸ- ।
ಸ್ಥಿರತೆ ನಿರುಪಮವಲ್ಲವೇನಾ- ।
ಪರಿಯಲಿರ ಜೀಕೈ ಮನದ ಸುಸ್ಥಿರತೆ ಸಂಕತದಿ ॥ ೩೬॥

ಪರಿಪರಿಯ ವ್ಯಾಪಾರವೆಲ್ಲವು ।
ನಿರುತ ನಡೆಯುತಲಿಹುದು ದೇಹದಿ ।
ಸ್ಥಿರತೆಯಿಹುದೈ ಮನದಿ ಕೇಳ್ ಭ್ರಾಂತಿಲ್ಯವಂತಿಲ್ಲ ॥
ಸ್ಥಿರವಿರುವುದಾಕಾಶಮಂಡಲ ।
ಚರಿಸುತಿಹ ಮೇಘಂಗಳೊಡನದು ।
ಚರಿಸುತಿಹುದೇ ಮೇಘಸಂಚಯವೋಡಲೇನದಕೆ ॥ ೩೭॥

ತಾರೆಗಳು ಸಂಚರಿಸಿದರೆ ಸಂ- ।
ಚಾರಮಾಳ್ಪುದೆ ಧ್ರುವವು ನೋಡೈ ।
ದಾರಿ ನಡೆಯುವುದೇನು ಪಥಕನ ಕೂಡೆ ಕೌಂತೇಯ ॥
ಧಾರುಣಿಯೊಳಿಹ ಗಿಡಮರವ್ ಸಂ- ।
ಚಾರ ಮಾಳ್ಪುವೆ ಪಥಕನೊಡನೆ ಶ- ।
ರೀರ ಜಲಿಸಿದರೇನು ಮನ ನಿಶ್ಚಲವಲಾ ಪಾರ್ಥ ॥ ೩೮॥

ಒರಲು ಝಂಝಾವಾತ ನೋಡದು ।
ಧರೆಯನಗಲಾಡಿಸುವುದೇನೈ ।
ಪರಿಪರಿಯಲಿ ವಿಕಾರನೇಳಲು ಮನವ ಮುಟ್ಟಿದಲಾ ॥
ಪರಿಪರಿಯ ದಾರಿದ್ರ್ಯದುಃಖವು ।
ಒರಲು ಮನವನು ಪೀಡಿಸದಲಾ ।
ಬರುವುದೇನೈ ವ್ಯಾಕುಲತೆಯಾ ಭೀತಿಶೋಕದಲಿ ॥ ೩೯॥

ಮರಣವೇ ಬರಲೀಶರೀರಕೆ ।
ಭರದಿ ಭೀತಿಯು ತಟ್ಟಲಾರದು ।
ಬರಲು ವಾರ್ದ್ಧಕ್ಯವು ಶರೀರದಿ ವ್ಯಾಧಿ ಬಂಮಿರಲು ॥
ಮರಳಿ ವಸ್ತುವಿನಾಶೆ ಬಲವ- ।
ತ್ತರದಿ ಪೀಡಿಸುತಿರ್ದ್ದಾದರು ।
ಸ್ಥಿರತೆಯನು ಬಿಡದಿಹುದು ಮನವಾತೆರದಿ ಕೌಂತೇಯ ॥ ೪೦॥

ನಿಂದೆಯಸಮಾನವದು ದಂಡವು ।
ಮುಂದೆ ಕಾಮ ಕ್ರೋಧ ಲೋಭವು ।
ಒಂದು ಬಹುಪೀಡೆಯನು ನೂಡಿದರಾಡಲೇನದನು ॥
ಒಂದೆ ಕೂದಲಿನಷ್ಟು ಪೀಡೆಯು ।
ಒಂದು ತಟ್ಟದು ಮನಕೆ ಕುಂತೀ- ।
ನಂದನನೆ ಕೇಳೀತೆರದಿ ಮನವಕ್ಕು ಸುಸ್ಥಿರವು ॥ ೪೧॥

ತಲೆಯ ಮೇಲಾಕಾಶ ಬೇಳಲು ।
ನೆಲವೆ ಪದತಳದಿಂದ ಕರಗಲು ।
ಚಲಿಸಲಾರದು ಚಿತ್ತವೃತ್ತಿಯು ಹಿಂದೆ ಕೌಂತೇಯ ॥
ನಳಿನದಳದಿಂ ಹೊಡೆಯಲಾನೆಯ-।
ನಿಳೆಯೊಳೇನದು ಮನ್ನಿಸುವುದೇ ।
ಖಳರ ದುಃಶಬ್ದಪ್ರಹಾರದಿ ಮನವು ಚಲಿಸದಲಾ ॥ ೩೩೦ ॥

ಕ್ಷೀರಶರಧಿಯಲಿರುವ ತೆರೆಯ ಪ್ರ-।
ಹಾರದಿಂ ಚಲಿಸುವುದೆ ಮಂದರ ।
ಭಾರಿ ಬೇಗೆಯ ಜ್ವಾಲೆಯಿಂದಾಕಾಶ ಸುಡುತಿಹುದೆ ॥
ಧಾರುಣಿಯಲೀತೆರದೊಳೆಂದ್ರಿಯ- ।
ವೇರಿ ವಿಷಯಂಗಳನು ಸೋಕಲು ।
ಬಾರಲಾರದು ಮಾನಸದಿ ಪರಿಣಾಮ ತಿಲದಷ್ಟು ॥ ೩೩೧ ॥

ನರನೆ ಕಲ್ಪಾಂತದಲಿ ಯಾದರು ।
ತೊರೆಯನ್ಯೆ ಧೈರ್ಯವನು ಕೇಳೀ- ।
ತೆರದಲಿಹುದೈ ಸ್ಥೈರ್ಯಲಕ್ಷಣ ನೋಡು ಕೌಂತೇಯ ॥
ಇರುವುದೀಯವಿನಾಶಿ ಸ್ಥೈರ್ಯವು ।
ಧರೆಯೊಳಾವನ ಕೂಡೆ ಯಾತನೆ ।
ಇರುವನಾತ್ಮಜ್ಞಾನನಿಧಿ ನಾಕ್ಷಾತ್ತು ಕೌಂತೇಯ ॥ ೩೩೨ ॥

ನರನೆ ಯಂತಃಕರಣನಿಗ್ರಹ- ।
ಕಿರುವ ಲಕ್ಷಣಗಳನು ಪೇಳ್ವೆನು ।
ಪರಿಪರಿಯ ದೃಷ್ಟಾಂತದಿಂದವ ನಿಸ್ತರಿಪೆ ಪಾರ್ಥ ॥
ಹರಿಯು ಕೇಳೀತೆರದಿ ಪಾರ್ಥನಿ- ।
ಗರುಹಿದನು ನಿಸ್ತಾರಪೂರ್ವಕ- ।
ವರಿವ ತೆರದಲಿ ನೋಡಿರಾತ್ಮವಿನಿಗ್ರಹದ ಪರಿಯ ॥ ೩೩೩ ॥

[ಆತ್ಮವಿನಿಗ್ರಹಃ] ಉರಗ ಭೂತ ಪಿಶಾಚ ಮೇಣಾ- ।
ತೆರದಿ ಪಾರ್ಥನೆ ಬ್ರಹ್ಮರಾಕ್ಷಸ- ।
ನರುಹಲೇನ್ಯೆ ತೊರೆಯಲಾರರು ತಮ್ಮ ಮನೆಗಳನು ॥
ಮರೆವನೇ ಶಸ್ತ್ರಗಳ ಯೋದ್ಧನು ।
ಮರೆಯಲಾರನು ಕೃಪಣ ನಿಧಿಯ- ।
ನ್ನಿರುವುದೆಂತ್ಯೆ ಪ್ರೀತಿ ತಾಯಿಗೆ ಕುವರನೊರ್ವನಿರೆ ॥ ೩೩೪ ॥

ನರನೆ ಮಧುಕರ ಮಧುವಿನಲಿ ಬಹು- ।
ಪರಿಯಲಾಸಕ್ತಿಯನು ತೋರಿಪ- ।
ತೆರದಿ ಸ್ವಾಂತಃಕರಣವನು ಸಂಗ್ಲಿಸುವನಲ್ಲೈ ॥

ಮರಳಿ ಯಿಂದ್ರಿಯದ್ವಾರದಲಿ ಮನ- ।
ವಿರಿಸನ್ಯೆ ದೂರಕ್ಕೆ ದೂಡುವ- ।
ನರರೆ ಕೇಳೈ ಹೇಳ್ವುದೆಂತಾ ಜಾಗ್ರತೆಯ ಪಾರ್ಥ ॥ ೩೩೫ ॥

ನರನು ಸ್ವಾಂತಃಕರಣನಿಗ್ರಹ- ।
ವಿರಿಸಿದೆನು ತಾನೆಂಬ ಸುದ್ದಿಯ- ।
ನರಿಯಲಾಗದು ಕಾಮಖಳಗೋಸಾಪಿ ತ್ರಾಸಿಸುವ ॥
ಮರಳಿ ಯಾಶಾಡಾಕಿನಿಗೆ ಯೊ- ।
ಪರಿಯ ಸ್ಥಿತಿಯನು ತಿಳಿಸಲಾಗದು ।
ಅರಿವ ಬಂದರೆ ಕೊರಳ ಹಿಸುಕುವಳೆಂದು ಬೆದರುವನು ॥ ೩೩೬ ॥

ತರುಣಿಯನು ವ್ಯಭಿಚಾರರತಳ- ।
ನ್ನರಿವ ಗಂಡ ಒಲಿತ್ಯ ತನ್ನಾ- ।
ತರುಣಿಯನು ಕಟ್ಟಿಡುವನೊಳಗೆಂಪಿ ಬಿಡನು ತಿರುಗಲಿಕೆ ॥
ಧರೆಯಲೀಪರಿ ನರನು ಸ್ವಾಂತಃ- ।
ಕರಣವನು ಕಟ್ಟಿಡುವನಲ್ಲವೆ ।
ತಿರುಗಲಿಂದ್ರಿಯದೊಡನೆ ಬಿಡನಾಧೂರ್ತಪತಿಯಂತೆ ॥ ೩೩೭ ॥

ಪುರುಷ ಜೀವಿತನಿರಲು ದೇಹದ ।
ಪರಿವೆ ಮಾಡದೆ ದುಃಖಜಿಂತೆಗೆ ।
ನಿರುತ ದೇಹವ ದಂಡಿಸುವನೈ ಸ್ವಾತ್ಮನಿಗ್ರಹದಿ ॥
ಇರುವುದೀಮನದಾಲಯಕೆ ಪರಿ- ।
ಪರಿಮಹಾದ್ವಾರಗಳು ನೋಡಿದ- ।
ರಿರುವುನೈ ಕೇಳಲ್ಲಿ ಪ್ರತ್ಯಾಹಾರಸ್ಥಾನಗಳು ॥ ೩೩೮ ॥

ಇರುಳು ಹಗಲೆನ್ನದಲೆ ಸಂತತ- ।
ವಿರಿಸಿಹನು ಯಮದಮವನಿಲ್ಲಿಂಪಿ ।
ಎರಡುಮಂದಿಗಳಿರುವರಲ್ಲಿಯ ದ್ವಾರಪಾಲಕರು ॥
ನರನೆ ಕೇಳೈ ಮೂಲಬಂಧವ- ।
ನಿರದೆ ಯುಡ್ಡೀಮಾನಬಂಧವ ।
ಮರಳಿ ಬಾಲಂಧರವ ಬಂಧವ ಸ್ಥಿರಪಿಡಿಸಿ ಪಾರ್ಥ ॥ ೩೩೯ ॥

ನರನೆ ಯಿಜೆಪಿಂಗಳೆಗಳೆಂಬೀ- ।
ಎರಡರೊಳಗಿಹ ಮಧ್ಯವರ್ತಿಯ ।
ಮೆರೆಯುತಿರುವ ಸುಷುಮ್ನೆಯಲಿ ಚಿತ್ತವನು ಲಯಮಾಡಿ ॥
ಭರದಿ ಧ್ಯಾನವ ನೋಡು ಪಾರ್ಥನೆ ।
ಯಿರಿಸುತಿಹನು ಸಮಾಧಿಶಯ್ಯೆಯೊ- ।
ಳೆರದೆ ಕೈಕಾಲ್ಕಟ್ಟಿ ಯಂತಃಕರಣನಿರಿಸುವನು ॥ ೩೪೦ ॥

ಚಿತ್ತವನು ಚೈತನ್ಯದೊಳಗತಿ- । ಧರೆಯೊಳೀಪರಿ ಯಿರುವ ನಾಧಕ- ।
ಸಕ್ತಿಯಿಂದಲಿ ಕಟ್ಟಿಡುವನೈ । ನಿರದೆ ಕೊಡಲಾಜ್ಞೆಯನು ಚಿತ್ತವು ।
ವಾರ್ಥ ಕೇಳಂತಃಕರಣನಿಗ್ರಹದ ಪರಿಯದುವೆ ॥ ಶಿರದೊಳದ ಧರಿಸುತ್ತ ವಂದ್ಯವೆಸುತ್ತ ಮನ್ನಿಸಲು ॥
ಧಾತ್ರಿಯಲ್ಲೀತೆರದ ನಿಗ್ರಹ । ಇರುವನಾತನೆ ಜ್ಞಾನಮೂರ್ತಿಯು ।
ವಿಸ್ತರಿಪುದಾರಲ್ಲಿ ಯಾತನೆ । ನರಶರೀರಪಿದಾದೇನೈ ।
ಯುತ್ತಮೋತ್ತಮಜ್ಞಾನಸಂಪಾದನೆಯ ಮಾಡಿಹನು ॥೩೪೧॥ ಯರಿಯಲಾತ್ಮಜ್ಞಾನ ನರರೂಪದಲಿ ಚಲಿಸುವುದು ॥ ೩೪೨ ॥

ಇಂದ್ರಿಯಾರ್ಥೇಷು ವೈರಾಗ್ಯಮನಹಂಕಾರ ಏವ ಚ ।
ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಮ್ ॥ ೮ ॥

[ವೈರಾಗ್ಯಂ] ವಿಷಯದುಪಭೋಗವನು ಕೊಳುವರೆ । ಪುರುಷನಾತ ತಪೋವ್ರತದಿ ತ- ।
ವಿಷದ ಪರಿ ಧಿಕ್ಕಾರ ಮಾಡುತ- । ತ್ವರನಲಾ ಮಾನವರ ತ್ಯಜಿಪನು ।
ಲಸಮ ತೆರದ ವಿರಕ್ತಿ ಜಾಗೃತವಿರುವುದೈ ಮನದಿ ॥ ನರರ ರಾಪಿಗೆ ಬರುವುದಾದರೆ ದುಃಖವತಿಶಯವ್ರ ॥
ಉಸುರುಗಟ್ಟಿಹ ಪ್ರೇತವನು ಸಂ- । ನಿರುತ ಯೋಗಾಭ್ಯಾಸದಿಚ್ಛೆಯು ।
ತಸದೊಳಾರಾಲಿಂಗಿಸುವರೈ । ಬರುವುದಾತನ ಮನದಿ ಪಾರ್ಥನೆ ।
ವಸುಮತಿಯೊಳಾರಿಹರು ಪ್ರೇತವನಪ್ಪಿಕೊಳುವವರು ॥೩೪೩॥ ಯಿರುವುದಾತಗೆ ಪ್ರೀತಿ ನಿಜಿಡಾರಣ್ಯವಾಸದಲಿ ॥ ೩೪೩ ॥

ಓಕರಿಸಿದನ್ನವರು ತಿನುವರೆ । ಮುಂದಿಯಲಿ ಸಹವಾಸ ಮಾಡುವ- ।
ವ್ಯಾಕುಲಿಸುವುದು ಜಿಹ್ವೆಯಲ್ಲವೆ । ದೆಂದರವನಿಗೆ ಮುಳ್ಳು ಪೈಯಲಿ ।
ಜೇಕೆನುತ ನಾಲಿಗೆಯು ವಮನವ ಬುಸುಬುಸುತಿಹುದೇನೈ ॥ ಬಂದ ಪರಿಯಾಗುವುದು ನಿರ್ಜನವನವ ಸೇರುವನು ॥
ಜೇಕೆನುತ ವಿಷ ತಿನುವರಾರೈ । ಬಂದು ಬಾಣದ ಶಯ್ಯೆಯಲಿ ಸುಖ- ।
ಯಾಕಿರುವರೈ ಸುಡುವ ಮನೆಯಲಿ । ದಿಂದ ಶಯನವ ಮಾಳ್ಪರೇನ್ಸೈ ।
ನಾಕೆನುತ ಜಿಟ್ಟೋಡುವರಲಾ ವ್ಯಾಘ್ರಗಹ್ವರವ ॥ ೩೪೪ ॥ ಮುಂದೆ ಕೆಸರೊಳಗಾಡುವಂದದಿ ವಿಷಯಸುಖ ತೊರೆವ ॥೩೪೫॥

ಉರಿವ ಲೋಹದ ರಸದಿ ಧುಮುಕುವ- । ನರನೆ ಸ್ವರ್ಗಪ್ರಾಪ್ತಿಯೆಂಬೀ- ।
ರಿರುವರೇ ಮೂಜಗದಿ ನೋಡಲು । ತೆರದ ಮಾತನೆ ತೆಗದ ಕೂಡಲೆ ।
ಧರೆಯೊಳಜಗರವನ್ನು ತಲೆಗಿಂಬಾರು ಮಾಡುವರು ॥ ಬರುವುದೈ ಯೋಕರಿಕೆ ಧಿಕ್ಕರಿಸುವನು ಕೌಂತೇಯ ॥
ನರನೆ ಕೇಳೀತೆರದಿ ಬಾಯಿಂ- । ಅರಿವನಾ ಸುಖಭೋಗವೆಂಬುದು ।
ದರುತಹನಲ್ಲಾ ವಿಷಯನಾಮವ । ಕುರಸಕೊಳೆಯುವ ನಾಯಿಮಾಂಸದ ।
ಮರಳೆ ವಿಷಯೇಂದ್ರಿಯದ ಸಂಯೋಗವನು ಮಾಡನಲಾ ಪರಿ ಯೆನುತ ಮನ್ನಿಸುತ ಹೀಯಾಳಿಪನು ಸ್ವರ್ಗವನು ॥ ೩೪೪ ॥
॥ ೩೪೬ ॥

ವಿಷಯಸೇವನವಿಷಯದಲ್ಲಾ- । ಇರುವುದಿದು ವಿಷಯದ ವಿರಕ್ತಿಯು ।
ಲಸಿಯ ತುಂಬಿಹುದೆಲ್ಲ ದೇಹದಿ । ಯಿರುವುದಾತ್ಮಪ್ರಾಪ್ತಿಭಾಗ್ಯವು ।
ವಿಷಯಸೇವನಮಾಳ್ಪರವನಿಂಗಿಲ್ಲ ಸಾಮರ್ಥ್ಯ ॥ ದೊರೆವುದಿದರಿಂ ನರಗೆ ಬ್ರಹ್ಮಾನಂದದುಪಭೋಗ ॥
ಉಸುರಗೆಡಿಸುತ ಶಮದಮಗಳಾ- । ಏರಡುಲೋಕದೊಳಿರುವ ಸುಖಗಳ ।
ವಿಷಯವಾಸನೆಯಟ್ಟಿ ಬಿಡುವುವು । ತೊರೆವನಾರೊ ವಿರಕ್ತಿಭಾವದಿ ।
ವಸುಮತಿಯೊಳವಗಿಹುದು ಪ್ರೇಮವ ಶಮದಮಗಳಲ್ಲಿ ॥೩೪೭॥ ಯಿರುವನವನೇ ನೋಡು ಜ್ಞಾನಸ್ಥಾನ ಸಂಪೂರ್ಣ ॥ ೩೪೦ ॥

[ಅನಹಂಕಾರಃ] ನಿರಭಿಮಾನದ ವರ್ಣನೆಯು ನಾ- ।
ನರುಹುನೆನು ವಿಸ್ತಾರಪೂರ್ವಕ ।
ನರನೆ ಕೇಳೈ ಸಾವಧಾನದೊಳೆಂದನಸುರಾರಿ ॥
ಕೆರೆಯ ಬಾವಿಯ ಧರ್ಮಶಾಲೆಯ- ।
ನಿರದೆ ಸ್ಥಾಪಿಸುತಿಹನು ಯಜ್ಞವ ।
ಭರದಿ ಮಾಳ್ಪನು ಕರ್ಮದಲ್ಲಾಸಕ್ತಿ ತೋರಿಸುತ ॥ ೩೫೧ ॥

ಪರಿಯಿದಾದರು ಕರ್ತ ತಾನೆಂ- ।
ದಿರದಲಾ ಅಭಿಮಾನವಾತಗೆ ।
ಹೊರಗೆ ಹಾಕುವನವನು ಕೇಳಭಿಮಾನ ಮನದಿಂದ ॥
ಪರಿಪರಿಯ ವರ್ಣಾಶ್ರಮಂಗಳೆ- ।
ಗಿರುವ ಪೋಷಕ ಕರ್ಮಧರ್ಮವ ।
ನಿರುತವಾಚರಿಪನು ಯಥಾವಿಧಿ ಯೆಜೆಪೆಡದೆ ಪಾರ್ಥ ॥೩೫೨॥

ಮಾಡಿದೆನು ಕರ್ಮಗಳನದರಿಂ- ।
ಕೂಡಿದುದು ಕರ್ಮದಲಿ ಸಿದ್ಧಿಯು ।
ಮೂಡದೀಪರಿ ಭಾವ ಮನದಲಿ ನೋಡು ಕೌಂತೇಯ ॥
ರೂಢಿಯಲಿ ಸರ್ವತ್ರ ವಾಯು ಸು- ।
ಗಾಢದಿಂದೋಡುವ ತೆರದಲೇ ।
ಮೂಡುತಿಹನಾ ಸೂರ್ಯ ದಿನದಿನ ನಿರಭಿಮಾನದಲಿ
॥ ೩೫೩ ॥

ಶ್ರುತಿನಿಕರವು ಸ್ವಭಾವದಿಂದಲೆ ।
ಹಿತವಿರುವ ಸಂಗತಿಯ ಪೇಳ್ವುದು ।
ಕ್ಷಿತಿಯಲಾ ಗಂಗಾಪ್ರವಾಹವು ಮನದೊಳೆಣಿಸದಲೆ ॥
ಸತತವೊಂದೇತೆರದಿ ಹರಿವುದು ।
ಕ್ಷಿತಿಯಲೀಪರಿ ನಿರಭಿಮಾನದ ।
ಗತಿಯಿರುವುದೈ ಪಾರ್ಥ ನೀ ನೋಡಿದಿಂದೊ ಸಹಜದಲಿ
॥ ೩೫೪ ॥

ತರುಗಳಿಗೆ ಕಾಲೋಚಿತದ ಫಲ ।
ಬರುವುದೈ ಯರಿವಿಹುದೆ ಮರಕಾ- ।
ತೆರದಿ ಕರ್ಮದ ಫಲದಲಿರುವುದುದಾಸತನವಹಗೆ ॥
ಹರಿದು ಹೋಗಲು ಹಗ್ಗ ಹಾವಿ- ।
ನಿರುವುದೇನೈ ಹಿಂದೆ ಮುಂದ- ।
ಕ್ಕಿರುವುದೇನೈ ಯೈಕ್ಯವಾವುವ್ವಂಗಳಲಿ ತಿಳಿಯೆ ॥ ೩೫೫ ॥

ಮನದೊಳಾಚರಣದೊಳು ವಾಙ್ಮೆ- ।
ಳಿರುವಹಂಕೃತಿಸೂತ್ರ ಹರಿಯಲು ।
ಯಿರುವುದೇನಾವರ್ತನದಲಭಿಮಾನ ಶೂನ್ಯನಲಾ ॥
ಇರುವುದೇನೈ ಮೋಡ ಗಗನದಿ ।
ಒರುವುದಾಸಂಬಂಧ ದೃಷ್ಟಿಗೆ ।
ಪರಿಯಲಾತನು ಕರ್ಮದಿಂ ನಿರ್ಲಿಪ್ತನಾಗಿಹನು ॥ ೩೫೬ ॥

ನರಗೆ ಮದ್ಯೋನ್ಮಾದವಾಗಲು ।
ಯಿರುವುದೇನೈ ಭಾನ ದೇಹದ- ।
ಲರಿವಿ ಮೈಮೇಲಿಹುದೊ ಒತ್ತಲೆ ಯಿಹೆನೊ ತಿಳಿಯಲಾ ॥
ಕರದಿ ಕೊಟ್ಟಿಹ ಶಸ್ತ್ರದಂದವ- ।
ನರಿವನೇನೈ ಚಿತ್ರವೀರನು ।
ಯಿರುವುದೇನೈ ಜ್ಞಾನ ಶಾಸ್ತ್ರವ ಹೊತ್ತ ಕೋಣನಿಗೆ ॥ ೩೫೭ ॥

ನರನೆ ನಿರಹಂಕೃತಿತೆಯೆಂದಿದ ।
ಕರೆವೈ ಕೋವಿದರು ಜಗದ- ।
ಲ್ಲಿರುವುದಿದು ನಿರಹಂಕೃತಿಯ ವರ್ತನವ ನೋಡಿದರೆ ॥
ಇರುವುದೀವರ್ತನವ ಯಾರೊಳು ।
ದೊರೆವುದವನಿಗೆ ಜ್ಞಾನಸಿದ್ಧಿಯೈ ।
ಯಿರುವುದೇ ಸಂದೇಹವಿದನೇನೆಂತ ವರ್ಣಿಸಲಿ ॥ ೩೫೮ ॥

ಮರಣ ಜನ್ಮ ವ್ಯಾಧಿ ದುಃಖವು ।
ಜರೆಯು ವಾರ್ದ್ಧಕ್ಯವು ಕಣಾ ಮೇಣ್ ।
ದುರಿತ ದೂರದೊಳಿರಲು ಬಂದುವು ಹತ್ತರಕ್ಕೆಸುತ ॥
ಅರಿತು ಮನದಲಿ ಸಾವಧಾನದೊ- ।
ಳಿರುವನೈ ನೋಡಿದಿಂದೊ ಪಾರ್ಥನೆ ।
ತೊರೆಯಲುಪಸರ್ಗವನು ಯೋಗಿಯು ಯತ್ನ ಮಾಳ್ಪಂತೆ ॥೩೫೯॥

ತಟ್ಟಿ ಬಾರದು ಜಾಢ್ಯವೆನುತಲಿ ।
ತಿಷ್ಟನೂಂತ್ರಿಕ ಪೊದಲೆ ತನ್ನಲಿ ।
ಕಟ್ಟಿಕೊಳುವನು ಮಂತ್ರತಂತ್ರವನಾಸ್ಥೆಯಲಿ ಪಾರ್ಥ ॥
ಕಟ್ಟುತಿರಲುಪ್ಪಾರ ಗೋಡೆಯ- ।
ನಿಟ್ಟು ಲಂಬವ ನೋಳ್ಪ ಸರಳತೆ ।
ಸೃಷ್ಟಿಯಲ್ಲೀತೆರದಿ ನೋಳ್ಪನು ವರ್ತನವ ತಾನು ॥ ೩೬೦ ॥

[ಜನ್ಮ] ಧಾರುಣಿಯೊಳಾಸರ್ಪಗಿರುತಿಹ ।
ವೈರ ಜನ್ಮಾಂತರದೊಳಾದರು ।
ಹಾರಿಹೋಗದು ಮನದೊಳಾಪರಿ ಪೂರ್ವಸಂಸ್ಕಾರ ॥
ಸೇರಿ ಮನದಲಿ ಪೂರ್ವಜನ್ಮದ ।
ಘೋರದುಃಖದ ರಾಶಿ ಮುಂದಕೆ ।
ಬಾರಲಾಗದೆನುತ್ತ ದುಃಖವು ಸತತ ಯುಕ್ತಿಸನು ॥ ೩೬೧ ॥

ಹರಳು ಲೋಚನದೊಳಗೆ ಸೇರಲು ।
ಕರಗಿ ಹೋಗುವುದೇನು ಪಾರ್ಥನೆ ।
ಬರುವುದೇನೈ ನಾಶ ಶಲ್ಯಕೆ ಘಾಯದೊಳಗಿರಲು ॥
ಅರಿವು ಬರಲಾತನಿಗೆ ಮನದಲಿ ।
ತಿರಿತಿರಿಗಿ ಮಾಳ್ಪನು ವಿಚಾರವ ।
ನರನೆ ಮಿತ್ರದ್ವಾರದಿಂದಲಿ ದೇಹದಲಿ ಜನಿಸಿ ॥ ೩೬೨ ॥

ಅರನೆ ತಾಯಿಯ ಗರ್ಭದಲಿ ತಾ- ।
ನಿರುತ ದುರ್ಗಂಧದಲಿ ನೆರಳೆದೆ ।
ಮರಳೆ ತಾಯಿಯ ಹೊಲೆಯ ಹಾಲನು ಕುಡಿಯುತಿರುನಾಗ ॥
ಅರನೆ ಹೊಲೆಯುಚ್ಚರದ ಜೆವರನು ।
ಭರದಿ ಕುಡಿದೆನು ಮರುಳನಲ್ಲವೆ ।
ಧರೆಯಲೀಪರಿ ಒಂದುದ್ಯೆ ಯೋಕರಿಕೆ ಜನ್ಮದಲಿ ॥ ೩೬೩ ॥

ಮರಳೆ ಕೇಳೀತೆರದಿ ದುಃಖಗ- ।
ಳಿರುವ ಜನ್ಮವು ನಾಕುನಾಕ್ಕೈ ।
ನಿರುತ ನಾನಾಚರಿಪೆ ಕರ್ಮವ ಜನ್ಮ ಹರಿಸುವುದ ॥
ಧರೆಯೊಳಗೆ ಜೂಜಿನಲಿ ಸೋತವ- ।
ನಿರುವನಲ್ಲವೆ ನಾವಧಾನದಿ ।
ತರಳ ತನ್ನಯ ಹಿತನ ಯೈರವ ಸಾಧಿಸುವ ತೆರದಿ ॥ ೩೬೪ ॥

ಕೊಂದು ಬಿಡಲೊರ್ವನನು ಬಹುಮುನಿ- ।
ನಿಂದ ಬೆಂಬಲಕಿರುವ ಮನುಜನು ।
ಬಂದು ತನ್ನಯ ಸೇಡ ತೀರಿಸುವಂತೆ ಕೌಂತೇಯ ॥
ಮುಂದೆ ಜನ್ಮವು ಬಾರಲಾಗದು ।
ಎಂದು ಸಂತತ ಯತ್ನ ಮಾಳ್ಪನು ।
ಬಂದ ಹಾದಿಯ ನೆನೆದು ಲಜ್ಜೆಯಲಿಹನು ಸಂತತದಿ ॥ ೩೬೫ ॥

[ಮೃತ್ಯು-] ಮೃತ್ಯು ಕಲ್ಪಾಂತದಲಿಯಾದರು ।
ಸತ್ಯವಾಗಿಯೆ ಒರುನ್ನದೆನುತಲಿ ।
ನಿತ್ಯಜೀಗಲೆ ನಾವಧಾನದೊಳಿಹನು ಕೌಂತೇಯ ॥
ಮೃತ್ಯು ಬರುವದಕಿಂತ ಮೊದಲೇ ।
ಪಥ್ಯವಾನೀಯೌಷಧಂಗಳ ।
ನಿತ್ಯ ಸೇವನಪ್ರತ್ತಮವಲಾ ನೋಡು ಕಲಿಪಾರ್ಥ ॥ ೩೬೬ ॥

ಇರುವುದ್ಯೆ ಹೇರಾಳ ನೀರೆಂ ।
ದರಿವು ಮೊದಲಿರಲೀಸ ಹೋಗುವ ।
ನರನು ಜಾಗೃತನಿರುವನ್ಯೆ ಬೀಳುವರೆ ನದಿಯೊಳಗೆ ॥

ಧುರವ ಸೇರುವ ಮೊದಲೆ ಯೋದ್ಧನು ।
ಮರಣ ಸಂನಾಹವನು ಮಾಳ್ಪನು ।
ಕರದ ಢಾಲವ ಮುಂದೆ ಮಾಳ್ಪನು ಘಾಯಕಿಂ ಮುಂಚೆ ॥೩೬೭॥

ನಾಳೆಗೇಳುವ ಮೋಸದಲಿ ಸಂ- ।
ಪಾಲಿಸುವ ಯತ್ನವನೆ ಯಿಂದಿಗೆ ।
ಮೇಳವಿಸುವನು ನಾವಧಾನದಿ ನೋಡು ಕೌಂತೇಯ ॥
ಬ್ಬಾಲೆ ಮನೆಯನು ಸುಟ್ಟ ಬಿಡುತಿಹ ।
ಬೇಳೆಯಲಿ ಬಾವಿಯನು ತೋಡಲು ।
ಖೂಳನಲ್ಲವೆ ಒರುವುದೇನುಪಯೋಗ ಯತ್ನದಲಿ ॥ ೩೬೮ ॥

ಜಲದ ಮಡುಹಿಲಿ ಕಲ್ಲ ರಾಶಿಯು ।
ಮುಳುಗಿ ಹೋಗದೆ ತೇಲುತಿಹುದೇ ।
ಯಿಳೆಯೊಳಾಪರಿ ಮುಳುಗುವನು ಸಂಸಾರಸಾಗರದಿ ॥
ಇಳೆದು ಹೋಗುವನಲ್ಲವೆನುತಲಿ ।
ತಿಳಿಪರಾರೀಜಗದಿ ಪಾರ್ಥನೆ ।
ಕಲಹ ನೋಡು ಸಮರ್ಥರೊಳು ಬಂದೊದಗಿದರೆ ಪಾರ್ಥ ॥೩೬೯॥

ನಿರುತ ರಾತ್ರಿಂದಿವದಿ ಜಾಗೃತ- ।
ನಿರಲು ಬೇಕು ಸಶಸ್ತ್ರನಾಗುತ ।
ಮರಣವನೆ ಒಯಸುವನು ತಾಂ ತುರ್ಯಾಶ್ರಮಸ್ಥಿತನು ॥
ಇರಲು ಮನೆಯೊಳು ಕುವರಿಯುಪವರ- ।
ಳರಿವನಾಕೆಯ ತಂದೆ ಮನದಲಿ ।
ಭರದಿ ಮಾವನ ಮನೆಗೆ ಕೋಪಳು ತೌರುಮನೆಯಿಂದ ॥ ೩೭೦ ॥

ನರನೆ ಕೇಳ್ಚೀವಂತನಾತನು ।
ಬಿರುವನಾದರು ಜಗದಿ ನೋಡಲು ।
ಒರುವುದಾತನ ಮನದಿ ಮೃತ್ಯು ಸಹಿಪಹಿಹನೆಂದು ॥
ಬರುವುದವನೆ ವಿಚಾರ ಮನದಲಿ ।
ಧರೆಯಲೀಜನ್ಮದಲೆ ತಾನಿರು- ।
ತಿರಲು ಮುಂದಿನ ಜನ್ಮವನು ಪರಿಪರಿವುದುತ್ತಮಪ್ರ ॥ ೩೭೧ ॥

ಮೃತ್ಯು ಬರಲೀನರಶರೀರಕೆ ।
ಮೃತ್ಯುವನೆ ಸಂಹಾರಮಾಳ್ಪನು ।
ಮತ್ತೆ ತಾನಾಬ್ರಹ್ಮರೂಪದೊಳೈಕ್ಯ ತಾಳುವನು ॥
ಕೆತ್ತು ತೆಗೆದೀಪರಿಯ ಜನ್ಮದ ।
ಮೃತ್ಯುವಿನ ಭಯ ಜಗದಿ ಪಾರ್ಥನೆ ।
ಮತ್ತೆ ಜ್ಞಾನವ ಬಾರದಾತನಿಗೆಲ್ಲಿ ಹೋಗುವುದು ॥ ೩೭೨ ॥

[ಜರಾ–] ಜರೆಯು ಬರುವುದಕಿಂತ ಮೊದಲೇ ।
ತರುಣ ತಾನಿರುವಾಗ ಜರೆಯಲಿ ।
ಬರುತಿರುವ ಸುವಿಚಾರವೆಲ್ಲವು ಬರುವೈ ವಾರ್ಧ ॥
ಇರುವುದೀ ಯೌವನ ಶರೀರದಿ ।
ಯಿರುವುದೆನ್ನಲಿ ಶಕ್ತಿಯಿಂದಿಗೆ ।
ಜರೆಯು ಬಂದಾಕ್ಷಣದೊಳೊಣಗುವುದೆಲ್ಲನೀದೇಹ ॥೩೭೩॥

ಅರಸನಿಂಗೆ ಪ್ರಧಾನನಿರದಿರೆ ।
ಬರುವುದೆಂತಾಸ್ಥಿತಿಯು ತದ್ವತು ।
ಬರುವುದೈ ನಿರ್ಬಲತೆ ಜರೆ ಬಂದಿರಲು ದೇಹದಲಿ ॥
ಬರಲು ದುರ್ದೈವಪ್ರಹಾರವು ।
ಬರಿದೆ ನಿಷ್ಫಲವೆಲ್ಲ ಯತ್ನವು ।
ಬರುವುದಾಸ್ಥಿತಿ ಮುರಿಯೆ ಕೈಕಾಲುಗಳು ಜರೆಯಿಂದ ॥೩೭೪॥

ಪರಿಮಳವನಾಘ್ರಾಣಿಸುತ್ತಿಹ ।
ನರನ ನಾಸಿಕೆಯೊಂತಿಕಾಲಿನ ।
ತೆರದಿ ಜೊಂಕಾಗುವುದು ಜರೆ ಬಂದಿರೆ ಶರೀರದಲಿ ॥
ಬರಲು ನೋಡಾಷಾಢಮಾಸವು ।
ಸುರಿವ[ಳ್ಳು]ಡಿಮಳೆಯಿಂದ ಹುಟ್ಟುತ- ।
ಲಿರುವ ಕೆಸರಲಿ ಸಿಲುಕುವಾಕಳಿನಂತೆ ತಾನಾಗಿ ॥ ೩೭೫ ॥

ಕೆಸರಿನಲಿ ಸಿಲುಕಿರ್ದ ಕಾಲಿಗೆ ।
ಸಿಷದ ಮಣ್ಣಿನ ಸ್ಪರ್ಶವಾಗಲು ।
ವೊಸರಿ ಕಾಲದು ಕೊಳೆತು ಹೋಗುವ ಪರಿಯಲೆನ್ನಂಗ ॥
ಕುಸುರಿ ಕೆಸವಾಗುವುದು ದೇಹವು ।
ಕುಸುಮದಂದದಿ ಮೆರೆವ ನೇತ್ರವು ।
ವಿಷಮಜರೆ ಬಂದಿರಲು ಹೇಳುವುದೇನು ದುಃಸ್ಥಿತಿಯ ॥೩೭೬॥

ಸರಸಿಜದ ದಳಗಳೊಲು ಬೆಳುಗುತ- ।
ಲಿರುವ ಕಣ್ಗಳು ಕೊಳೆತಪಡುವಲ- ।
ತೆರದಿ ನಿಸ್ತೇಜದಲಿ ಹೊಂಡಗಳಂತೆ ರಾಜಿಪುವು ॥
ಮೆರೆವ ಹುಬ್ಬುಗಳೆರಡು ವ್ಯೋಗಿದ ।
ಮರದ ತ್ವಕ್ಕುಗಳಂತೆ ಜೋಲುತ- ।
ಲಿರುವೈ ಕಣ್ಣಿಂದ ಸೂಸುವ ನೀರಿನಿಂದೆದೆಯು ॥ ೩೭೭ ॥

ಕೊಳೆತು ಹೋಗುವದೇನ ಹೇಳಲಿ ।
ಕೆಳಗೆ ಮೇಲಕು ವ್ಯೋತಿ ಜಾಲಿಯ ।
ಸುಲಿದ ಮರದಲಿ ಮಾಡುತಿರೆ ಸಂಚಾರ ನೋದದಲಿ ॥

ಬುಳುಬುಳಿತವಾಗುವೆದು ಸರ್ವವು ।
ಯಿಳೆಯೊಳೀತೆರನಾಗಿ ಕಳವೆಂ- ।
ಜಲಿನಲಾಮುಖವಾಗುವೆದು ಬುಳುಬುಳಿತನೇಂಬಿ ॥ ೩೭೮ ॥

ಒಲೆಯ ಮುಂದಕೆ ಹೊಂಡ ತೆಗೆದರೆ ।
ಕೊಳೆದ ನೀರದು ಕೂಡೆ ಗುಳ್ಳಿಯು ।
ಜಲದೊಳೇಳುವ ತೆರದಿ ಸಿಂಬಳವೇಳುವೆದು ವಾರ್ಧ ॥
ಬೆಳಗುತಿಹುದೀ ದಂತಪಂಕ್ತಿಯು ।
ಬೆಳಗುತಿಹುದಾರಕ್ತ ತುಪಿ ತಂ- ।
ಬುಲದಿ ನಾನಾತೆರದಿ ಭಾಷಣ ಸರಸ ಮಾಡುವನು ॥ ೩೭೯ ॥

ಪರಿಯಿದೇ ತಾರುಣ್ಯಭರದಲಿ ।
ಜರೆಯು ಬಂದಿರಲೇನ ಹೇಳಲಿ ।
ಬರುವನೈ ಬಾಯಿಂದ ಕಫದೆಂಜಲಿನ ವೂರಗಳು ॥
ಹರಣ ಬರುವದು ದಂತಪಂಕ್ತಿಗೆ ।
ಒರಲು ಸಾಲದ ಭಾರ ತಲೆಯಲಿ ।
ಧರೆಯೊಳೊಕ್ಕಲತನವು ಮುಳುಗುವ ತೆರದಿ ಕೌಂತೇಯ ॥೩೮೦॥

ಸುರಿವ ಮಳೆಯಲಿ ಪಂಕದಲಿ ದನ ।
ಕರುವು ಸಿಲುಕಲು ಕಾಲ ಮುರಿಯುತ ।
ಒರುವುವೇನೈ ಮೇಲೆ ಬೀಳುವವಪ್ಪ ನಿಶ್ಚಲದಿ ॥
ಪರಿಯೊಳೀ ನಾಲಿಗೆಯು ಮಾತನು ।
ತೆರೆಯಲಾರದು ಬೀಳ್ವುದಲ್ಲವೆ ।
ಯರುಹಲೇನಾದಕೆಯ ನೋಡಲು ಗಡ್ಡೆಮೊಸೆಗಳ ॥ ೩೮೧ ॥

ಕರಡ ಬಿಸಿಲಿನಲೊಣಗಿ ಬೀಸು ।
ತ್ತಿರಲು ಗಾಳಿ ತದಗ್ರವೆಲ್ಲವು ।
ಭರದಿ ಹಾರುವವಲ್ಲವೇ ದೆಸೆದೆಸೆಗೆ ನೋಡಿನಿಯಾ ॥
ಜರೆಯು ಬರಲಾತೆರದಿ ದೇಹದಿ ।
ತರಳರಾ ಬಿಳಿಕೂದಲೆಲ್ಲವ ।
ಹರಿದು ಚೇಷ್ಟೆಯ ಮಾಳ್ಪರಲ್ಲವೆ ನೋಡಲತಿಕರಿಣ ॥ ೩೮೨ ॥

ಬರಲು ನೋಡಾಷಾಢಮಾಸವು ।
ಸುರಿವುದೊಂದೇಸವನೆ ಮಳೆಯದು ।
ಗಿರಿಶಿಖರದಲಿ ಹುಟ್ಟಿ ಝರಿಗಳು ಹರಿವುದೈ ನೀರು ॥
ಜರೆಯು ಬರಲಾತೆರದಿ ಮುಖದಿಂ ।
ಹರಿವುವಲ್ಲವೆ ಜೊಲ್ಲಧಾರೆಗ- ।
ಳರುಹಲೇನಾಸ್ಥಿತಿಯು ದುಃಸಹವಿಹುದಲಾ ವಾರ್ಧ ॥ ೩೮೩ ॥

ಬಾರದೈ ಬಾಯಿಂದ ಶಬ್ದೋ- ।
ಚ್ಚಾರ ಕೆವಿಯಲಿ ಸ್ಪಷ್ಟ ಶಬ್ದವ ।
ಜಾರದೈ ಕೇಳಲಿಕೆ ವೃದ್ಧಕಪೀಶಸಮನಹನು ॥
ಮಾರುತನು ಜೀಸಲ್ಕಿ ಹೊಲದೊಳ- ।
ಗೇರಿಸಿದ ತೃಣಗೊಂಬೆಯಂದದಿ ।
ಧಾರುಣಿಯಲಾತೆರದಿ ದೇಹವ ಕಂಪಿಸುವ್ರದಲ್ಲಿ ॥ ೩೮೪ ॥

ಕಾಲು ಕಾಲಿಂಗಡ್ಡ ಬರುವುದು ।
ಯೆಳುವುದು ಕೈಯೊಳಗೆ ಕಂಪವ ।
ಹೇಳಲೇನದ ಜರೆಯ ಚೇಷ್ಟೆಯ ವೇಷವಾಗುವುದು ॥
ಮೇಲೆ ಮಲಮೂತ್ರಗಳ ಒಥಗಳು ।
ಹಾಳುಗಡಿಗೆಗಳಂತೆ ಪೆರೆವುವ ।
ಹೇಳೆ ಕೇಳವ್ರ ತಮ್ಮ ಕರ್ಮದ ಮೇರೆ ಮುರಿಯುವವು
॥ ೩೮೫ ॥

ಒರಲಿ ನಾಹೀತನಿಗೆ ಬೇಗದಿ ।
ಧರೆಯಲೀತನು ಬಾಳ್ವ ನೀತಿಕೆ ।
ಪರಿಪರಿಯಲೀ ತೆರದಲನ್ನುತ ಹರಕೆ ಮಾಡುವರು ॥
ಧರೆಯೊಳೀಪರಿ ಯೆನ್ನ ನೋಡುತ ।
ನರರು ಧಿಕ್ಕರಿಸುವರು ಹಾಪಾ- ।
ಮರಣಬಾರದು ಭಾರವಾಗಿತೆನಾಪ್ತರಿಂಗಾನು ॥ ೩೮೬ ॥

ಕರೆವರೆನ್ನ ಪಿಶಾಚನೆನಿಸುತಲಿ ।
ಮರುಳನೆಂದೇ ಹೆಣ್ಣುಮಕ್ಕಳು ।
ಪರಿಪರಿಯ ಚೇಷ್ಟೆಯನು ಪರಿಹಾಸವನು ಮಾಡುವರು ॥
ಧರಿಸುವರು ಭೀತಿಯನು ಜಾಲಕ- ।
ರರುಹಲತಿಸ್ತಾರ ನಾಕೆದು ।
ನರಶರೀರವು ಹೊಲಸು ವೋಕರಿಕೆಯನು ಮಾಡುವ್ರದು
॥ ೩೮೭ ॥

ಒರಲು ಕೆಮ್ಮಿನ ಮೇಲೆ ಕೆಮ್ಮಿನ ।
ಸರಣಿ ರಾತ್ರಿಯೊಳೆಲ್ಲ ನೆರೆಮನೆ- ।
ಯಿರುವ ಮಂದಿಗೆ ತ್ರಾಸವಗಣಿತವಾಗುವ್ರದು ತಿಳಿಯೆ ॥
ನೆರೆಮನೆಯ ಮಂಡಳಿಗಳೆಲ್ಲರು ।
ಪರಿಪರಿಯಲೆನ್ನನ್ನೆ ಬೈವರು ।
ಮರಣವೆಂದಾಗುವ್ರದು ಯೆನುತಲಿ ಹಾದಿ ನೋಡುವರು
॥ ೩೮೮ ॥

ಪರಿಪರಿಯಲೀತೆರ ವಿಚಾರದ ।
ಸರಣಿ ಬರುವ್ರದು ಮನದಿ ಕೇಳಾ- ।
ಜರೆಯು ಒರಲೀಸ್ಥಿತಿಯು ಬರುವ್ರದೆನುತ್ತ ಯೋಚಿಸುತ ॥

ನರನು ಕೇಳತ್ತಾರುಣ್ಯ ಭರದ- ।
ಲ್ಲಿರುತಲಿದರ ವಿಚಾರ ಮಾಳ್ಪನು ।
ಜರೆಯು ಬಂದರೆ ವಿಷಯಭೋಗವ್ರ ವಿಷದ ಪರಿಯಲ್ಲಿ ॥ ೩೮೯ ॥

ಬಂದು ಮನದಿ ವಿಚಾರನೀಪರಿ ।
ಮುಂದೆ ಸ್ವಹಿತವ ಸಾಧಿಸುವ ತೆರ- ।
ದಿಂದ ಮಾಳ್ಪನು ಪೂರ್ವದಲ್ಲಿ ತಯಾರಿಯಾಸ್ಥೆಯಲಿ ॥
[ವ್ಯಾಧಿ-] ಮುಂದೆ ಕಿವಿಗಳು ಒಧಿರವಾಗುವ್ರ- ।
ವೆಂದು ಮೊದಲೇ ಸ್ವಾತ್ಮಜ್ಞಾನವ ।
ನಂದದಿಂ ಕೇಳುವನು ಒಧಿರತೆ ಬರುವ ಮೊದಲಾಗಿ ॥ ೩೯೦ ॥

ನರಶರೀರದಿ ಶಕ್ತಿಯಿಂದ್ರಿಯ- ।
ಕಿರುವನಕ ಯಾತ್ರೆಗಳ ತೀರಿಸಿ ।
ದೊರಕಿಸುವನೈ ಪುಣ್ಯರಾಶಿಯ ಧರ್ಮಮಾರ್ಗದಲಿ ॥
ಮರಳಿ ದೃಷ್ಟಿಯ ಸ್ಪಷ್ಟವಿದ್ದಾ- ।
ಗಿರುವುದೆಲ್ಲವ ನೋಡಿ ಕೊಳುವನು ।
ಪರಮನಿಗಮಾಗಮದ ಸಾರವ ನೋಡಿ ಗ್ರಹಿಸುವನು ॥ ೩೯೧ ॥

ಶಕ್ತಿ ನಾಲಿಗೆಯೊಳಗಿರುವ ತನ- ।
ಕುತ್ತಮೋತ್ತಮ ಹರಿಯ ಭಜನಾ- ।
ಸಕ್ತಿಯನು ತೋರುವನು ಹರಿಗುಣಗಣವ ವರ್ಣಿಸನು ॥
ಹಸ್ತಗಳು ನಿರ್ದೋಷವಿರುವಾ- ।
ಗೆತ್ತಿ ದಾನವ ಮಾಡಿ ಬಿಡುವನು ।
ವೃತ್ಯ ಬಂದರೆ ಬೋಧ ತಪ್ಪಿ ವ್ಯರ್ಥವಾಗುವ್ರದು ॥ ೩೯೨ ॥

ಒರುತಲೀತೆರದೆಲ್ಲ ಯೋಚನೆ- ।
ಯಿರಿತು ಕೊಳುವನು ಸ್ವಾತ್ಮಜ್ಞಾನದ ।
ಪರಿಯನೆಲ್ಲವ ಮೊದಲೆ ಮಾಳ್ಪನು ಧರ್ಮಸಂಗ್ರಹವ ॥
ಮರುದಿವಸ ಸುಲಿಯುವರು ತಸ್ಕರ- ।
ರರಿಯುತೀಪರಿ ಭೀತಿಯಿಂದಲೆ ।
ನರನು ಪೂರ್ವತಯಾರಿಯಿಂದಲೆ ಪಿತ್ತ ಬಚ್ಚಿಡುವ ॥ ೩೯೩ ॥

ಹಸ್ತದೊಳಗಿನ ದೀಪ ನೊಂದಿಸೆ ।
ಕತ್ತಲೆಯು ಮುಂದಾಗಿ ಬರುವುದೆ- ।
ನುತ್ತ ಮನೆಯೊಳಗಿರುವ ವಸ್ತುವನೆಲ್ಲ ಮುಚ್ಚಿಡುವ ॥
ಮತ್ತೆ ಬರೆ ವಾರ್ದ್ಧಕ್ಯ ತರುಣಾ- ।
ವಸ್ಥೆಯಲ್ಲಿಯೆ ಸ್ವಾತ್ಮಜ್ಞಾನದ ।
ಪ್ರಾಪ್ತಿ ಮಾಡದೆ ವ್ಯರ್ಥ ಕಾಲಕ್ಷೇಪ ಮಾಡಿದರೆ ॥ ೩೯೪ ॥

ಮರಣಜನನಗಳುಗ್ರಚಕ್ರವು ।
ತಿರುಗುತಿರುವುದು ಜಗದಿ ಜೀವನು ।
ತಿರುಗುವನು ನೆರೆ ಸಿಲುಕಿ ಕೇಳೀಪರಿಯ ಚಕ್ರದಲಿ ॥
ಪರಿಪರಿಯಲೀತೆರದಿ ಮುಂದಕೆ ।
ಬರುವ ದುಃಖಪ್ರಸರಕೆಲ್ಲಕೆ ।
ಧರದಿ ಪೂರ್ವತಯಾರಿ ಮಾಳ್ಪನು ಚತುರತನದಿಂದ ।।೩೯೫।।

ದಾರಿ ನಡೆಯುವ ಪಥಿಕ ಮುಂದೂ ।
ಕ್ಯೂರ ಕಾಣದೆ ಗುಡ್ಡದಡವಿಯ ।
ದಾರಿ ಮೃಗಪಕ್ಷಿಗಳು ತಮ್ಮಯ ಗುಹೆಯ ಗೂಡುಗಳ ॥
ಸೇರುವುವು ಯೆಂಬೀತೆರದಲಿ ಮಿ- ।
ಚಾರ ವೇಳೆಯು ಸಂಜೆಯಾಗಲು ।
ಚಾರುವಸ್ತುಗಳೆಲ್ಲ ಬಿಟ್ಟೊಬ್ಬಂಟಿಗನು ಚರಿಸೆ ॥ ೩೯೬ ॥

ಚೋರರವನಿಂಗೇನ ಮಾಳ್ಪರು ।
ಸೇರುವುದು ವಾರ್ದ್ಧಕ್ಯವೆಂಬ ಮಿ- ।
ಚಾರದಿಂ ತಾರುಣ್ಯಭರದಲಿ ಸ್ವಾತ್ಮವಿದ್ಯೆಯನು ॥
ಯಾರು ಸಂಗ್ರಹ ಮಾಡುವನೊ ಯೊ- ।
ಧಾರುಣಿಯೊಳವ ವೃದ್ಧನೆನಿಸನು ।
ತೋರುವನು ನಿಜವಾಗಿ ವೃದ್ಧರಿಗವನೆ ವೃದ್ಧನಲಾ ॥೩೯೭॥

ಎಳ್ಳುಗಿಡಗಳ ಬಡಿಯೆ ನೆಲದೂ ।
ಲ್ಲೆಳ್ಳುಗಾಯಿಗಳುದುರಿ ಹೋಗಲು ।
ಯೆಳ್ಳುಗಿಡಗಳಲೇನಿಹುದು ತೂರಿದರೆ ಗಿಡಗಳನು ॥
ಎಲ್ಲಿ ಬೇಕಿಯು ಹಚ್ಚಿದರೆ ಮೇ- ।
ಣಲ್ಲಿರುವ ಕಾಷ್ಯವನು ಬೆಂಕಿಯು ।
ಮೆಲ್ಲನಾದರು ಸುಟ್ಟು ಬ್ಬಾಲೆಯ ತ್ರಾಸ ಕೊಡದಿಹುದೆ ॥೩೯೮॥

ಬೆನ್ನ ಹಿಡಿಯುವ ಪೊದಲೆ ಮುಪ್ಪದು ।
ಮುನ್ನವೇ ಮಾಡಲು ತಯಾರಿಯ ।
ಬನ್ನ ಒಡುವನೆ ಯವನು ಮುಪ್ಪಿನ ಬಾಧೆಯಿಂ ವಾರ್ಧ ॥
ವರ್ಣಿಸಲಿ ನಾನೆಂತು ಮುಖದಿಂ ।
ಪೂರ್ಣಸ್ವಾತ್ಮಜ್ಞಾನಿಯವನೇ ।
ವರ್ಣಿಸುವೆ ನಾನೀಗ ರೋಗಗಳ ಪ್ರಕಾರವನು ॥ ೩೯೯ ॥

ಪರಿಪರಿಯ ರೋಗಗಳು ದೇಹದಿ ।
ಒರುವ ಮೊದಲೆ ಯರೋಗತೆಯ ತಾ- ।
ನಿರದೆ ಸ್ವಾತ್ಮಜ್ಞಾನಕೋಸುಗ ಭೋಗಿಸನು ಪಾರ್ಥ ॥
ಉರಗಮುಖದಿಂ ಹೊರಗೆ ಬಿದ್ದಿಹ ।
ಸುರಸಸಕ್ಕರೆಯುಂಡೆಯಾದರು ।
ತೊರೆವನಲ್ಲವೆ ಬುದ್ಧಿಮಂತನು ಹಿತವ ಬಯಸುವನು ॥ ೪೦೦ ॥

[ದುಃಖದೋಷಾನುದರ್ಶನಂ] ಯಾವ ಸುಖದ ಸಿಂಹೋಗ
ಭೂವಲಯದಲಿ ದುಃಖಶೋಕವು । ದಿಂದಲಿ ।
ಹಾವಳಿಯ ಮಾಡುವುದು ಬಹುದು ವಿಪತ್ತಿಸಂತತಿಯ ॥
ಆ ವಿಷಯಸುಖವೆಲ್ಲಿರಲ್ಲಿಂದೆ ।
ಭಾವಜರುತಿಹುದಾದರವನಿಂ- ।
ಗಾವಿಭೂತಿಯು ದೋಷಕಾರಕಳರ್ಮ ತೊರೆಯುವನು ॥೪೦೧॥

ಒಳಗೆ ಕರ್ಮೇಂದ್ರಿಯದ ದ್ವಾರದಿ ।
ತಿಳಿತಿಳಿದ ದೋಷಗಳು ಸೇರ್ವವು ।
ತಿಳಿಯುತೀಪರಿ ನಿಯಮಕಲ್ಲಿಂದಡ್ಡ ಕಟ್ಟುವನು ॥
ಎಲೆ ಧನಂಜಯ ನೋಡು ಯೊಪರಿ ।
ಯಿಳೆಯೊಳೆರೆ ವರ್ತನವು ಕೇಳವ ।
ತಿಳಿಯಲಾ ಸುಜ್ಞಾನಮೂರುತಿ ಪುರುಷನೀತನಲಾ ॥ ೪೦೨ ॥

ನರನೆ ನಿನಗಾಂ ಪ್ರೇಮಭಾವದೊ- ।
ಳರುಹುವೆನು ಜ್ಞಾನಿಯ ಸುಲಕ್ಷಣ- ।
ಸಿರುವುದೊಂದದು ನೋಡಲೌಕಿಕ ಕೇಳು ಕಲಿಪಾರ್ಥ ॥

ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು ।
ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು ॥ ೯ ॥

[ಅಸಕ್ತಿಃ] ನರನೆ ನೋಡೈ ನಿಜಶರೀರದೊ- ।
ಳಿರುವುದವನಿಗುದಾಸವೃತ್ತಿಯು ।
ಧರೆಯಲೊರ್ವನು ಪಥಿಕನೆರಡನೆಯವನ ಕೈಯೊಳಗೆ ॥
ಇರಿಸಿರುವ ವಾಯಿದೆಯ ಗಂಟನು ।
ಮರಳಿ ಪಥಿಕನಿಗುಕ್ತಕಾಲದಿ ।
ತಿರಿಗಿ ಕೊಡುವಂತೀಶರೀರವ ಜತನ ಮಾಡುವನು ॥ ೪೦೩ ॥

ದಾರಿ ನಡೆಯುವ ಪಥಿಕನೊರ್ವನು ।
ಭಾರಿ ಬಿಸಿಲನು ತಾಳಲಾರದೆ ।
ಸೇರುವನು ಗಿಡನೆಳಲನಾಪರಿ ದೇಹವಾಸವಿದು ॥
ಯಾರಿಗಿಹುದೀದೇಹ ಶಾಶ್ವತ ।
ಧಾರುಣಿಯಲೀತೆರನಿಚಾರದಿ ।
ಜಾರುಶರದಲುದಾಸವೃತ್ತಿಯಲಿಹನು ದೇಹದಲಿ ॥ ೪೦೪ ॥

[ಅನಭಿಷ್ವಂಗಃ] ನರನು ಹೋಗುವನೆಲ್ಲಿ ಯಾತನು ।
ನೆರಳು ಹತ್ತರವಿರುವುದಲ್ಲವೆ ।
ಬಿರುವುದೇನೈ ನೆರಳ ವಿಷಯದ ಯೋಜನೆಯು ಮನದಿ ॥
ನಿರುತವಾಪರಿ ತನ್ನ ಹತ್ತರ ।
ವಿರುವ ನಿಜಸತಿವಿಷಯಪ್ರೇಮವು ।
ಬರುವುದೇ ಮಾನಸದಿ ನೋಡು ವಿಚಾರಪೂರ್ವಕದಿ
॥ ೪೦೫ ॥
ಸಂತತಿಯ ವಿಷಯದಲಿ ಮನದಲಿ ।
ಚಿಂತೆಯೇನೆಂದೆನುತ ಕೇಳ್ ।
ಸಂತೆಗೋಸುಗ ಬಂದ ಪಥಿಕರೆನುತ್ತ ನಂಬುವನು ॥

ಏಂತು ಸುಖಸಂಪತ್ತುಗಳ ಶ್ರೀ ।
ಮಂತಿಯನು ಭೋಗಿಸುವನೆಂದರೆ ।
ಪಾಂಥನೊರ್ವನು ಸಾಕ್ಷಿಭೂತನೆನಿತ್ತ ತಿಳಿಯುವನು ॥ ೪೦೬ ॥

ಗಿಳಿಯ ಮರಿಯನು ಸಾಕಿ ಪಂಜರ ।
ದೊಳಗೆ ಮುದ್ದಿಸಿ ಮಾತ ಕಲಿಸಲು ।
ಕಲಿಸಿದುದನೇ ನುಡಿವುದಲ್ಲನೆ ಬೇರೆ ನುಡಿಯುವುದೆ ॥
ಇಳೆಯಲೊಂದೇ ವೇದದಾಜ್ಞೆಯ ।
ತಿಳಿವನಲ್ಲವೆ ಅನ್ಯಮಾರ್ಗವ ।
ತಿಳಿಯನಲ್ಲಾ ವೇದಮಾರ್ಗವ ಮಾಶ್ರ ಸ್ವೀಕರಿಪ ॥ ೪೦೭ ॥

ಮಡದಿಮಕ್ಕಳು ವಿತ್ತಸಂಪ ।
ತ್ತೊಡನೆವಸ್ತುಗಳೆನ್ನದೆನುತಲಿ ।
ಕಡುಮಮತೆಯನು ಮಾಡದಾತನು ಪಥಿಕನೆಂದದಲಿ ॥
ಪೊಡವಿಯಲಿ ಕಾಲಕ್ರಮವ ತಾ ।
ನೊಡನೆ ಮಾಡುವನಾತ ಜ್ಞಾನದ ।
ಗುಡಿಯ ಕಲಶವೆನುತ್ತ ನಂಬಿಲೆ ವಾರ್ಥ ಮನಗೊಟ್ಟು ॥ ೪೦೮ ॥

[ಸಮಚಿತ್ತತ್ವಂ] ಶರಧಿ ಗ್ರೀಷ್ಮದೊಳಿತವರಿಯದು ।
ಭರತಿಯರಿಯದು ವರ್ಷಋತುವಿನ ।
ಲಿರದಲಾಪರಿ ಜಾಢ್ಯುವನಿಗೆ ಲಾಭಹಾನಿಯಲಿ ॥

ತರಣಿಗಾ ಗಗನದಿ ತ್ರಿಕಾಲದೊ ।
ಳಿರುವುದೇನು ತ್ರಿರೂಪ ನೋಡಲು ।
ಸರಿಯ ಸಮತೆಯು ವಾಸವಾತ್ಮಜ ।
ನಿರುವನಾತನೆ ಜ್ಞಾನನಿಧಿಗಾಸ್ಥಾನ ಸಂಪೂರ್ಣ ॥ ೪೦೯ ॥

ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।
ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ ॥ ೧೦ ॥

[ಮಯಿಚಾನನ್ಯಯೋಗೇನ] ಧರೆಯೊಳಗೆ ಪರಮಾತ್ಮ
ಹೊರತು ಕಾಣೆನು ವಸ್ತುವನ್ಯವ । ನೊರ್ವನ ।
ಧರಿಸುತೀ ನಿರ್ಧಾರವನು ವಾಕ್ಕನುಮನದಿ ಪಾರ್ಥ ॥
ಹರಿಯ ಹೊರತೀಜಗದೊಳನ್ಯರ ।
ನರಿಯದಾತನ ಮನಸು ಬಾಯು ।
ಚ್ಚರಿಸದನ್ಯರ ಮಾತ ದೇಹವ ನೋಡದನ್ಯರನು ॥ ೪೧೦ ॥

[ಅವ್ಯಭಿಚಾರಿಣೀಭಕ್ತಿಃ] ಇರಿಸುತೆನ್ನಯ ರೂಪದಲಿ
ಧರಿಸಿಹನು ಕೇಳೆನ್ನೊಳೈಕ್ಯವ । ಮನ ।
ನಿರುಕಿಪೆನ್ನಯ ರೂಪನನ್ನೇ ಹಾಸಿಗೆಯ ಮಾಡಿ ॥

ತರುಣಿ ನಿಜಪತಿಯೊಳು ಸಮಾಗಮ ।
ಪರತೆಯಲಿ ನಿಃಶಂಕೆ ತಾಳುತ ।
ಧರಿಸುವಳು ನಿಜಪತಿಯೊಳೈಕ್ಯವನಾತೆರದಿ ಪಾರ್ಥ ॥ ೪೧೧ ॥

ಸುರನದೀಭಾಗೀರಥಿಯು ಸಾ ।
ಗರದ ಸಂಗಮವಾದನಂತರ ।
ಸಿರುವಳಲ್ಲವೆ ಸಾಗರದ ರೂಪದಲಿ ಸಾಗರದಿ ॥
ಧರೆಯಲೀಪರಿ ಎನ್ನೊಳೈಕ್ಯವ ।
ಧರಿಸಿ ಎನ್ನೊಳು ನಿರುತ ವಾಸಿಪ ।
ನಿರುವನೆನ್ನಯ ಭಜನಪೂಜನದಲ್ಲಿ ಸಂತತದಿ ॥ ೪೧೨ ॥

ತರಣಿಯೊಡನಾ ತರಣಿಸುಪ್ರಭೆ ।
ಗಿರಿಯುದುದಯಾಸ್ತವು ಕಣಾ ಯೊ- ।
ತೆರದಿ ಮೆರೆಪುದು ವಾರತಂತ್ರ್ಯವು ಪ್ರಭೆಗೆ ನೋಡಿದರೆ ॥
ಶರಧಿಯುಪ್ಪರ ಗಾಳಿ ಬೀಸಲು ।
ತೆರೆಗಳೇಳ್ವವು ಮೇಲೆ ಮೇಲಾ ।
ತೆರೆಯು ನೀರಿನ ರೂಪವಲ್ಲವೆ ತತ್ತ್ವ ನೋಡಿದರೆ ॥ ೪೧೩ ॥

ಗಿರಿಯಕಂದರಗಳಲಿ ಮೇಣಾ- ।
ಕೆರೆಯ ಮೆರೆಯುವ ತೀರದಲ್ಲಿಯೆ ।
ನಿರುತ ವಾಸಸ್ಥಾನ ಯೋಗ್ಯವೆನುತ್ತ ಯೋಚಿಪನು ॥
ಪುರದಿ ಪಟ್ಟಣದೊಳಗೆ ಮೇಣಾ- ।
ತೆರದಿ ಪುಷ್ಕಳನರರ ಠಾವನು ।
ತೊರೆವನ್ಯೆ ವಾಸಿಸಲು ಮನ ಬಾರದು ಕಣಾ ಪಾರ್ಥ ॥ ೪೧೪ ॥

ಧರೆಯಲೀಪರಿ ಯೆನ್ನೊಳೈಕ್ಯವ ।
ಧರಿಸುತೆನ್ನನು ಭಜಿಸುತಿಹನೋ ।
ಯಿರುವನಾತನೆ ಮೂರ್ತರೂಪ ಜ್ಞಾನ ಕೌಂತೇಯ ॥
[ವಿವಿಕ್ತದೇಶಸೇವಿತ್ವಂ] ಧರೆಯಲೀಪುರುಷನಿಗೆ ಪಾವನ ।
ನಿರುವ ತೀರ್ಥಕ್ಷೇತ್ರವುತ್ತಮ- ।
ನಿರುವ ತಾಪಸವನವು ಗುಹೆಗಳು ಯೋಗ್ಯವಸತಿಗಳು ॥೪೧೫॥

[ಜನಸಂಸದಿ ಅರತಿಃ] ಧಾರುಣಿಯಲೇಕಾಂತವಾಸವು ।
ಸೇರುವುದು ಮನದಲ್ಲಿ ಯಾರಿಗೆ ।
ಯಾರಿಗಿಹುದ್ದೈ ನೈರ ಮನುಜರ ರಾನಿಸಲಿ ಪಾರ್ಥ ॥
ಧಾರುಣಿಯೊಳಾ ನರನೆ ಜ್ಞಾನದ ।
ಮೂರುತಿಯು ನಿಜ ಪಾರ್ಥ ನೋಡ್ಯೆ ।
ತೋರಿಸುವೆ ನಾನನ್ಯವಾತ್ಮಜ್ಞಾನಲಕ್ಷಣವ ॥ ೪೧೬ ॥

ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಮ್ ।
ಏತಜ್ಜ್ಞಾನಮಿತಿ ಪ್ರೋಕ್ತಮಜ್ಞಾನಂ ಯದತೋಽನ್ಯಥಾ ॥ ೧೧ ॥

[ಅಧ್ಯಾತ್ಮಜ್ಞಾನನಿತ್ಯತ್ವಂ] ಧರೆಯೊಳಗೆ ಪರಮಾತ್ಮ
ಯಿರುವುದಲ್ಲವೆ ನಿತ್ಯ ವಸ್ತುವು । ನೆಂದೇ ।
ಯಿರುವುದನ್ಯವು ಮಿಥ್ಯವೆಲ್ಲವಿದೆಂದು ಕೌಂತೇಯ ॥
ಅರಿವನೀಪರಿ ಕೊಡುವುದಾವುದೊ ।
ಯಿರುವುದಿದುವೇ ಜ್ಞಾನ ಲೋಕದೊ- ।
ಳಿರುವುದಿದ ಹೊರತೆಲ್ಲ ಕೇಳಜ್ಞಾನ ನೋಡಿದಿಯಾ ॥೪೧೭॥

ನರನೆ ಕೇಳೀತೆರದಿ ಜ್ಞಾನದ ।
ಪರಿಪರಿಯ ಪಂಥಗಳ ಪಸರಿಸಿ ।
ಯಿರುವುದುತ್ತಮ ರಾಜಮಾರ್ಗವ್ಯ ಯಾವುದದ ತೀದು ॥
ದೊರಕಿಸುವುದಧ್ಯಾತ್ಮವಿದ್ಯೆಯ ।
ನಿರುತವಾವುದೆನುತ್ತ ಹುಡುಕುತ- ।
ಲಿರಿಸುವನು ಕೇಳ್ದುದ್ದಿಮನಗಳನಲ್ಲಿ ಸಂತಸದಿ ॥ ೪೨೦ ॥

ಬರುವುವೈ ಸಂಸಾರ ಸ್ವರ್ಗವು ।
ನಿರುತವಾವುದರಿಂದ ಜಗದಲಿ ।
ಕರೆವರದನಜ್ಞಾನವೆನುತಲಿ ಕೋವಿದರು ಪಾರ್ಥ ॥
ಇರುವುದದುವಜ್ಞಾನದಾಗರ- ।
ವರಿಯುತೀ ನಿರ್ಧಾರ ಮನದಲಿ ।
ತೊರೆವನ್ಯೆ ಸ್ವರ್ಗೇಚ್ಛೆ ಮನದಿಂ ವಾರ್ಥ ನೋಡಿದಿಯಾ
॥ ೪೧೮ ॥

ಭ್ರಾಂತಿಮೂಲಕವನ್ಯಮಾರ್ಗವ- ।
ದಂತ ತಿಳಿದೀಬುದ್ಧಿ ತನ್ಮಯ ।
ಕಿಂತು ಹರಿದಾ ಮೇರುಪರ್ವತದಂತೆ ಸ್ಥಿರಪಡಿಸಿ ॥
ಸಂತಸದೊಳಧ್ಯಾತ್ಮ ವಿಷಯದಿ ।
ಸಂತತದಿ ಮನವಿಟ್ಟು ಮೇಣದ ।
ಚಿಂತಿಸುವನ್ಯೆ ರಾತ್ರಿ ಹಗಲೆನ್ನದಲೆ ಸ್ವಾಪ್ನವನು ॥ ೪೨೧ ॥

ಕೇಳನ್ಯೆ ಸಂಸಾರವಾರ್ಣೆಯ ।
ವ್ಯಾಳವೆನುತಲಿ ಬಿಟ್ಟು ನಿಡುವನು ।
ಬೇಳುವನು ತಾನಾಗಿ ಕೇಳಧ್ಯಾತ್ಮನಾಗರದಿ ।
ಕೇಳು ಪಾರ್ಥನೆ ಹಾದಿ ಬಹಳವಿ- ।
ತಾಲತನದಿಂ ಪಸರಿಸಿರಲದ ।
ಮೇಲೆ ಸುನಿಶ್ಚಾರದಲಿ ಹಾದಿಯ ಹುಡುಕಿ ಪಿಡಿಯುವನು ॥೪೧೯॥

ತಾರೆಗಳ ಮಧ್ಯದಲಿ ಯಾಧ್ರುವ- ।
ತಾರೆ ನಿಶ್ಚಲ ಚಲಿಸಲಾರದು ।
ಧಾರುಣಿಯೊಳಾತರೆದಿ ನಿಶ್ಚಲನವನು ಯುಕ್ತದಲಿ ॥
ಚಾರುಸ್ವಾತ್ಮಜ್ಞಾನದಿ ನಿ- ।
ರ್ಧಾರವೂರ್ವಕ ದೊರೆಯು ಬೇಕೆಂ- ।
ದಾರುಭಟದಲಿ ಯುಕ್ತ ಮಾಳ್ಪನು ಸಂತತದಿ ಪಾರ್ಥ ॥ ೪೨೨ ॥

ಇರುವುದವನೊಳು ಜ್ಞಾನ ನಿಶ್ಚಯ- । ಪರಿಯಿದಾದರು ವಾರ್ಥ ನೋಡೈ ।
ವಿರುವುದೇನಿದಕಿನ್ನು ಸಂಶಯ । ಯಿರುವುವನ ಜ್ಞಾನದಿಚ್ಛೆಯ ।
ಬರುತಲೀಪರಿ ಜ್ಞಾನ ಮನದಲಿ ವಾಸಿಸಲು ವಾರ್ಥ ॥ ನರನೆ ಜ್ಞಾನದ ಮೇಣು ಯೋಗ್ಯತೆ ಸರಿ ಸಮಾನಗಳು ॥
ಪುರುಷನಾತನು ಜ್ಞಾನದಿಂದಲಿ । [ತತ್ತ್ವಜ್ಞಾನಾರ್ಥದರ್ಶನಂ] ನರನೆ ತತ್ತ್ವಜ್ಞಾನದಿಂದಲೆ ।
ಭರಿತನಿಹ ಸಂಪೂರ್ಣನೆನುತಲಿ । ದೂರಕುವುದು ಕೇಳಾವುದೊಂದದು ।
ಒರುವುದವನಿಗೆ ಕೊನೆಗೆ ಮದ್ಭಾಸವು ಧನಂಜಯನೆ ॥೪೨೩॥ ಕರೆವರದನೇ ಜ್ಞೇಯವೆಂಬೀಹೆಸರಿನಿಂ ಜಗದಿ ॥ ೪೨೫ ॥

ಎಲೆಯ ಮೇಲೂಟವನು ಒಡಿಸಿದ- । ಇರುವುದವನಿಗೆ ದೃಷ್ಟಿ ಸರಳವು ।
ರೆಲೆ ಧನಂಜಯ ವೂಟ ತೀರಿತೆ । ನರನೆ ಕೇಳೈ ಜ್ಞಾನಲಾಭವ ।
ತಿಳಿಯಲದ ಕೈಯಿಂದ ಬಾಯೊಳಗಿಕ್ಕ ಬೇಕಲ್ಲೈ ॥ ದೊರಕಿದರು ತಜ್ಜ್ಞಾಂ ದೊರೆಯದೆ ವ್ಯರ್ಥವಾಗುವುದು ॥
ಇಳೆಯೊಳಾರಿಗೆ ಜ್ಞಾನದಿಚ್ಛೆಯು । ಕುರುಡನಿಗೆ ಕೈಯೊಳಗೆ ದೀಪವು ।
ಫಳಗಳಿಗೆಗೆ ಯಾದಕೂಡಲೆ । ದೊರಕಲೇನುಪಯೋಗವಿರುವುದೆ ।
ತಿಳಿದೆ ಯೇನೈ ಜ್ಞಾನಿಮನದಲಿ ಜ್ಞಾನ ನಿಂಬಿಸದೆ ॥ ೪೨೪ ॥ ಒರಿದೆ ಜ್ಞಾನದ ಮನದ ನಿಶ್ಚಯವಾದರೇನಹುದು ॥ ೪೨೬ ॥

ತಿರಿಗಿ ಕೇಳೈ ಯಾತ್ಮದರ್ಶನ ।
ದೊರೆಯುದಿರಲದು ವ್ಯರ್ಥವಲ್ಲವೆ ।
ಧರೆಯಲಾಜ್ಞಾನಪ್ರಕಾಶದಿ ನೋಡು ಕೌಂತೇಯ ॥

ದೊರೆಯುದಿರೆ ಪರಮಾತ್ಮಲಾಭವ । ಜ್ಞಾನನಿಧಿ ಜ್ಞಾನೇಶ ನೀನೀ- ।
ಕುರುಡನಂದದಿ ಬುದ್ಧಿಯಿರುವುದು । ಜ್ಞಾನದತಿಶಯ ವಿಸ್ತರದಲಿ ನಿ- ।
ತೆರೆಯ ಬೇಕಾಬುದ್ಧಿಕಣ್ಣನು ಸ್ವಚ್ಛದೃಷ್ಟಿಯಲಿ ॥ ಧಾನ ಮಾಡುವುದೇನು ಕಾರಣ ತಿಳಿಯಲಾರೆವಲಾ ॥
ಧರೆಯಲೀಪರಿ ನೋಡಿದಲ್ಲಿಯೆ । ಶ್ರೀನಿವಾಸನ ಗೀತೆಯರ್ಥಕೆ ।
ದೊರೆಯು ಬೇಕೈ ಪರಮತತ್ತ್ವವ । ನೀನು ವಿಷಯಾಂತರವ ಮಾಡಿದಿ ।
ಬರಲು ಕೇಳೀತೆರದಿ ಲಾಭವು ಜ್ಞಾನ ನಿಶ್ಚಿತವು ॥ ೪೨೭ ॥ ಮಾನಸದೊಳಾಗುವುದು ಗೀತಾರ್ಥಶ್ರವಣದಿಚ್ಛೆ ॥೪೨೯॥

ಜ್ಞಾನದಸ್ಪೇ ಬುದ್ಧಿ ವಿಸ್ತೃತ । ಚಂದದಿಂದಧ್ಯಾತ್ಮವಿದ್ಯೆಯು ।
ಜ್ಞಾನವಿರುವುದು ನೋಡು ತತ್ತ್ವವ । ಬಂದುದೈ ಯಾತಿಶ್ಯರೂಪದಿ ।
ಜ್ಞಾನದಿಂ ಸಂಪೂರ್ಣಭರಿತನು ಹೇಳಲೇನದನು ॥ ಸಂದುದೈ ವಕ್ತೃತ್ವದನುಭವವೆಮಗೆ ಸಂಪೂರ್ಣ ॥
ಜ್ಞಾನವೆಂಬ ಪ್ರಕಾಶದಿಂದಲಿ । ಬಂದಿಹುದು ಯೆಮಗನ್ಯ ಕವಿಗಳ ।
ಮಾನವನ ಸದ್ಬುದ್ಧಿ ಪ್ರಸಿದ್ಧದಿ । ಚಂದವಿಪ ವರ್ಣನೆಯುದನುಭವ ।
ತಾನೆ ಪರತತ್ತ್ವಕ್ಕೆ ಮುಟ್ಟಲು ಯೋಗ್ಯವಪ್ಪುದಲಾ ॥೪೩೦॥ ಒಂದ ವಿಷಯವ ಬಿಟ್ಟು ಹಿಡಿವರುಪಾಂಗವರ್ಣನೆಯು ॥ ೪೩೧ ॥

ಯಿರುವನಾತ ಜ್ಞಾನಮೂರುತಿ- । ಧರೆಯಲೀಪರಿ ಮುಖ್ಯ ವಿಷಯವ ।
ಯಿರುವುದೇನದರೊಳಗೆ ಚೋದ್ಯವ । ಸರಿಸಿ ಒದಿಗೆ ಯುಪಾಂಗವರ್ಣನೆ ।
ತರಣಿಗೀಜಗದೊಳಗೆ ತರಣಿ ಯೆಸುತ್ತ ಕರೆವರಲಾ ॥ ಸರಸತನದಿಂ ಮಾಳ್ಪ ಮಂತ್ರವ ಕಲಿತಿರುಪಯಲ್ಲೈ ॥
ಪರಿಪರಿಯಲೀ ಜ್ಞಾನತತ್ತ್ವವ- । ತಿರಿಗಿ ನೀನದ ಮುಖ್ಯವಿಷಯದೊ- ।
ನರುಹಿದನು ವಿಸ್ತರದಿ ಜ್ಞಾನೇ- । ಳರಿಸುವಿಯಲಾ ಕೌತುಕದೊಳೆದು- ।
ಶ್ವರನು ಕೇಳುತ ಶ್ರೋತೃವೃಂದವು ಪೇಳತೀತೆರದಿ ॥ ೪೩೨ ॥ ಪಿರುವನೇನೈ ಯೋಗ್ಯವೀಪರಿ ವಂಜನೆಯ ಹಾದಿ ॥ ೪೩೪ ॥

ಕರೆಯುತತಿಥಿಯಸೂಟಕೆನುತಲಿ ।
ಪರಿಪರಿಯ ರಂಗೋಲೆ ಹಾಕುತ ।
ತರುಣಿ ಮನೆಯಲಿ ಮನೆಯ ಹಾಕುತ ಪ್ರೇಮಪೂರ್ವಕದಿ ॥
ಒರುತಲತಿಥಿಯು ಮನೆಯ ಮೇಲ್ಮೂ- ।
ತಿರಲು ಭೋಜನ ಬಡಿಸದೆಲೆಯಲಿ ।
ಸುರಸದಡಿಗೆಯ ದೂರಕೋಡಿಸಲೇನ ಹೇಳುವುದು ॥೪೩೩॥

ಮನೆಗೆ ಭೋಜನಕೆನುತಲಾಮಂ- ।
ತ್ರಣವ ಪಡೆದಿರುವತಿಥಿಪುರುಷನಿ- ।
ಗಿರುವುದೇನುಪಯೋಗ ತರುಣಿಯ ಬೇರೆತರದಿಂದ ॥
ಗುಣವಿಭೂಷಿತವಿದ್ದು ಸುಂದರ ।
ದನವು ನೋಡಲು ಚಂದವಾಯಿತು ।
ಸ್ತನಕೆ ಕೈ ಹಾಕಿದರೆ ಕಾಲಿಂದೊದ್ದರೇನು ಫಲ ॥ ೪೩೪ ॥

ಬಾದೆ ಕೇಳಾದನವ ಪೋಷಿಸು- ।
ತಿರುವರೇ ಜಗದೊಳಗೆ ಸುಮ್ಮನೆ ।
ಯಿರುಹದಾತ್ಮಜ್ಞಾನವೆರಡನೆ ಕವಿಗಳೇನೆಂಬೆ ॥
ಪರಿಪರಿಯಲನ್ಯಪ್ರಕಾರವ ।
ಬರಿದೆ ವಿಸ್ತಾರವನು ಮಾಡುವ- ।
ರಿರುವುದೇನುಪಯೋಗ ಸೇರದು ಯೆಮ್ಮ ಮನದೊಳಗೆ
॥ ೪೩೫ ॥

ಜ್ಞಾನನಿಧಿ ಜ್ಞಾನೇಶ ನೀನಾ- ।
ಜ್ಞಾನ ವಿಸ್ತಾರವನು ಮಾಡುತ ।
ಪೂರ್ಣವೀಪರಿ ಜ್ಞಾನದನುಭವವನ್ನು ಕೊಟ್ಟಿಯಲಾ ॥
ಕ್ಷೋಣಿಯಲಿ ಜ್ಞಾನಾಂಶಕಾದರು ।
ಜ್ಞಾನಕಾಮಿಗಳವರು ಯೋಗ- ।
ಧ್ಯಾನ ಮೊದಲಾಗಿರುವ ಸಾಧನ ಮಾಳ್ಪರೈ ನೋಡೆ ॥೪೩೬॥

ಧರೆಯಲೀಪರಿ ಯಿರುವ ಜ್ಞಾನವ- ।
ನರಿವ ಪರಿಯಲಿ ಹೇಳಿ ಬುದ್ಧಿಗೆ ।
ತರಿಸಿ ಕೊಟ್ಟಿಯೊ ಪೂರ್ಣತೃಪ್ತಿಯ ನೀನು ಜ್ಞಾನೇಶ ॥
ಪರಿಯೊಳೀ ಪೀಯೂಷವೃಷ್ಟಿಯ ।
ಸುರಿಯಲೀಜಗದೊಳಗೆ ಯಾರಿಗು ।
ಬರುವುದೇನೈ ಮಾನಸದೊಳೋಕರಿಕೆ ನೋಡಿದರೆ ॥೪೩೭॥

ನರನೆ ಕೋಟ್ಯವಧಿಪ್ರಮಾಣದಿ ।
ಬರಲು ಸುಖದುಪಭೋಗದಿನಗಳು ।
ಬರಿದೆ ಗಣನೆಯು ಮಾಡಿ ಯೋಕರಿಸುವನೆ ನೋಡವನು ॥

ನಿರುತ ಯುಗಪರ್ಯಂತ ವೊಂಬೇ- ।
ತೆರದಿ ರಾಕೆಯ ರಾತ್ರಿ ಯಿದ್ದರೆ ।
ಬರಿದೆ ನೋಡದೆ ಯಿರುವುದೇನು ಚಕೋರವದನೆಲ್ಲ ॥ ೪೩೮ ॥

ನಿನ್ನ ತೆರದ ಸುರಸಿಕವಕ್ತನು ।
ವರ್ಣಿಸುತ್ತಿರೆ ಜ್ಞಾನವೆಲ್ಲವ- ।
ನಿನ್ನು ಸಾಕೆಂದೆನ್ನುವನು ಯಾರಿಹನು ಲೋಕದಲಿ ॥
ಸನ್ನುತಾತ್ಮಳು ಪ್ರೇಮದಲಿ ಸ- ।
ನ್ನಾನ್ನಗಳ ಬಡಿಸಲಿಕೆ ತತ್ಪರ- ।
ಳೆನ್ನ ಬಹುದೇ ಸಾಕೆನುತ ಭೋಜನದ ಮಧ್ಯದಲಿ ॥ ೪೩೯ ॥

ಇರುವುದಿದುವಿಂದಿನ ಪ್ರಸಂಗವ ।
ಯಿರುವುದೆಮಗೀಶ್ರವಣದಿಚ್ಛೆಯು ।
ಯಿರುವುದಾಪರಿ ನಿನಗೆ ಜ್ಞಾನದ ಕಥನದಿಚ್ಛೆಯಲಾ ॥
ಬರ್ಪುವುದಾಕಾರಣದಿ ನಿನ್ನಯ ।
ಸುರಸವ್ಯಾಖ್ಯಾನಕ್ಕೆ ಪುಷ್ಟಿಯು ।
ಯಿರುವುದಿದು ನಾಲ್ಗುಣದಿ ಬಲವತ್ತರವು ನೋಡಿದರೆ ॥ ೪೪೦ ॥

ಜ್ಞಾನರಾಜನೆ ನಿನಗಿಹುದು ಪರಿ- ।
ಪೂರ್ಣ ಜ್ಞಾನವೆನುತ್ತಲೆಮ್ಮಯ ।
ವಾಣಿಯಿಂದುಚ್ಚಾರ ಮಾಡದೆ ಬಗೆಯೆ ಬೇರಿಲ್ಲ ॥
ಮಾನಿಸೆಮ್ಮ ವಿನಂತಿಯೊಂದನು ।
ಕ್ಷೋಣಿಯಲಿ ಹದಿನೆಂಟುಸದ್ಗುಣ- ।
ಹೀನವಿರುವಜ್ಞಾನವನು ವಿಸ್ತರಿಸಿ ಹೇಳುವುದು ॥ ೪೪೧ ॥

ಕೇಳುತಾ ಸಂತರ ವಿನಂತಿಯ ।
ಹೇಳಿದನು ಜ್ಞಾನೇಶನಾಕ್ಷಣ ।
ಲೀಲೆಯಿಂದಜ್ಞಾನವನು ಹೇಳುವಕೆ ಮನವಿಚ್ಛೆ ॥
ಏಳುತಿತ್ತಾ ಮೇಲೆ ಗುರುವಿದ ।
ಹೇಳಿದನು ವಿಸ್ತಾರ ಮಾಡಲು ।
ತಾಳಿದೆನು ಸಂತಸವ ನೀವ್ ಹೇಳಿದುದ ಮಾಡುವೆನು ॥ ೪೪೨ ॥

ಹರಿಯು ಪಾರ್ಥನಿಗರುಹಿದನು ಪರಿ- ।
ಪರಿಯಲೀ ಹದಿನೆಂಟುಲಕ್ಷಣ- ।
ವಿರುವವೆಲ್ಲೀ ಯಲ್ಲಿ ಜ್ಞಾನವು ವಾಸಿಸುವುದಲ್ಲೈ ॥
ಇರುವುದಲ್ಲವೆ ಯೆನ್ನ ಮತವೀ- ।
ಪರಿಯಲಲ್ಲದೆ ಜ್ಞಾನಿಪೈಂದ- ।
ಕ್ಕಿರುವುದೀ ಮುಖವೆಂದು ಪೇಳ್ದನು ಕೃಷ್ಣನಸುನಗುತ ॥ ೪೪೩ ॥

ಕರತಲದ ಮೇಲಾಮಲಕ ಗರ- ।
ಗರನೆ ತಿರುಗುವ ಪರಿಯಲಿದ ನಾ- ।
ನರುಹಿದೆನು ವಿಸ್ತರದಿ ಜ್ಞಾನವ ನೋಡು ಕೌಂತೇಯ ॥
ನರನೆ ನೋಡೈ ಬುದ್ಧಿಶಾಲಿಯೆ ।
ಪರಿಪರಿಯಲಜ್ಞಾನಲಕ್ಷಣ- ।
ವರುಹುವೆನು ನಿನಗಾನು ಕೇಳೈ ನೀನು ಮನಗೊಟ್ಟು ॥೪೪೪॥

ನರನೆ ಕೇಳೈ ಜ್ಞಾನಲಕ್ಷಣ ।
ದರಿವು ಬಂದರೆ ನಿನಗೆ ತದನಂ- ।
ತರದಿ ಕೇಳಜ್ಞಾನಲಕ್ಷಣ ಸಹಜ ತಿಳಿಯುವುದು ॥
ಇರುವುದಾವುದೊ ಜ್ಞಾನವಲ್ಲದು- ।
ಸಿರುವುದದುವಜ್ಞಾನ ಲೋಕದ- ।
ಲಿರುಳು ಮುಗಿಯಲು ಹಗಲು ಬಾರದೆ ಬರುವುದೇನಿನ್ನು
॥ ೪೪೫ ॥
ಇರುಳು ಹಗಲೆಂಬ ಪ್ರಕಾರಗ- ।
ಳೆರಡು ಲೋಕದೊಳಿರುವವಲ್ಲನೆ ।
ಯಿರುಳು ಮುಗಿಯಲು ಹಗಲು ಹಗಲಳಿಯಲ್ಕೆ ಮೇಣಿರುಳು ॥
ಇರುವುದೇನ್ಯೆ ಬೇರೆ ಮೂರನೆ ।
ಪರಿಯು ಜಗದಲಿ ನೋಡು ಪಾರ್ಥನೆ ।
ಯಿರುವುದಾಪರಿ ಜಗದಿ ಜ್ಞಾನಾಜ್ಞಾನಗಳ ದ್ವಂದ್ವ ॥ ೪೪೬ ॥

ಧರೆಯಲೀಪರಿ ಯಾದವೇನದ- ।
ನರುಹುವೆನು ವಿಸ್ತರದಲದ ನಾ ।
ನರನೆ ಕೇಳೈ ತತ್ತ್ವವದ ನೀ ಲಕ್ಷಪೂರ್ವಕದಿ ॥
[ಮಾನಿತ್ವಂ] ಬರಲು ಬೇಕು ಪ್ರತಿಷ್ಠೆ ಜಗದಲಿ ।
ದೊರೆಯು ಬೇಕ್ಕೆ ತನಗೆ ಮಾನವು ।
ನಿರುತವೀಪರಿ ಧರಿಸುತಖಿಲಾಷಪನು ಕೌಂತೇಯ ॥೪೪೭॥

ನರರು ಸತ್ಕಾರವನು ಮಾಡಲು ।
ಹರುಷವನು ತಾಳುವನು ಕೇಳಾ- ।
ತೆರದಿ ಮಾನವು ದೊರೆಯಲುಬ್ಬುವನವನು ಗರ್ವದಲಿ ॥
ಗಿರಿಯ ಶಿಖರವನೇರಿ ಕೂಡಲು ।
ನಿರುತವಾಪರಿ ಗರ್ವ ಮಾಡುವ- ।
ನಿರುವನಜ್ಞಾನಕ್ಕೆ ವಸತಿಸ್ಥಾನ ನರನವನು ॥ ೪೪೮ ॥

[ದಂಭಿತ್ವಂ] ನರನೆ ಕೇಳಶ್ವತ್ಥತರುವಿಗೆ ।
ವಿರಚಿಸುತಲುಪನಯನಕರ್ಮವ- ।
ನಿರುವನನು ಬಂಧನವ ದೋರಲನದರ ಸುತ್ತಿನಲಿ ॥

ಧರೆಯೊಳಗೆ ಯಂಗಾತ ಮಾರ್ಜನಿ- ।
ಯಿರಿಸಿ ಗುಡಿಯಲಿ ಖ್ಯಾತಿ ಬಯಸುವ- ।
ನರನೆ ನೋಡೀಪರಿಯ ಧಾಂಭಿಕವರ್ತನವ ಪಾರ್ಥ ॥ ೪೪೯ ॥

ತಾನು ಮಾಡಿದ ಧರ್ಮವನ್ನಭಿ- ।
ಮಾನದಿಂದಲಿ ತನ್ನ ಬಾಯಿಂ ।
ಕ್ಷೋಣಿಯಲಿ ಮಾಳ್ಪನು ಪ್ರಸಿದ್ಧವನೇನ ಹೇಳುವೆನು ॥
ತಾನು ಕಲಿತಿಹ ವಿದ್ಯೆಯೆಲ್ಲವ ।
ಮಾನಕೋಸುಗ ಕೀರ್ತಿಗೋಸುಗ ।
ತಾನು ಜಗದಿ ಪ್ರಸಿದ್ಧ ಮಾಳ್ಪನು ದಾಂಭಿಕನು ನೋಡೈ ॥೪೫೦॥

ತಾನು ಮಾಡುವ ಸತ್ಕೃತಿಯ ಪರಿ ।
ತಾನು ಡಂಗುರ ಹೊಡಿಸಿ ಪಸರಿಪ- ।
ನೇನ ಹೇಳಲಿ ಕೀರ್ತಿ ದೊರೆಯಲು ಕೃತಿಗಳನು ಮಾಳ್ಪ ॥
ತಾನು ದಿನದಿನ ಮೂರು ಬಾರಿಗೆ ।
ಸ್ನಾನವನು ಮಾಡುತ್ತ ಬಹುವಿಧ- ।
ಮಾನ್ಯ ಪನ್ನೀರಾದಿಯಿಂ ದೇಹವನು ಶೋಭಿಪನು ॥ ೪೫೧ ॥

ತನ್ನ ದೇಹಾರಾಧನೆಯು ತಾಂ ।
ಮಾನ್ಯತನದಿಂ ಮಾಡುತಿರುವನು ।
ಮಾನ್ಯತೆಯನನ್ಯರಿಗೆ ಕೊಡನ್ಸೆ ಮಾನ್ಯ ತಾನೆನಿಸುವ ॥
ವರ್ಣಿಸಲಿ ನಾನೆಂತು ಯಿವನೇ ।
ಪೂರ್ಣವಜ್ಞಾನಕ್ಕೆ ಖಾನಿಯು ।
ಮುನ್ನ ನಾ ಪೇಳುವೆನು ದಾಂಭಿಕನಿವನೆ ನೋಡಿದರೆ ॥ ೪೫೨ ॥

[ಹಿಂಸಾ] ಅಡವಿಯಲಿ ದಾವಾಗ್ನಿ ಬೀಳಲು ।
ಸುಡುವುದಲ್ಲವೆ ಸಕಲವಸ್ತುವ- ।
ನೆಡೆಬಿಡದಲಾ ಜಂಗಮಸ್ಥಾವರಗಳೆಲ್ಲವನು ॥
ಕೊಡವಿಯಲ್ಲೀನರನ ಸಹಜದ ।
ನಡತೆಯಿಂ ಜಗಕೆಲ್ಲ ಬಾಧೆಯು ।
ಬಿಡದೆ ಬೆನ್ನಟ್ಟುವುದು ದುಃಖವ ಬಹುದು ನೋಡಿದಿಯಾ ॥೪೫೩॥

ನುಡಿನಡೀತನು ಸಹಜಗತಿಯಲಿ ।
ಒಡಿಯುವುದು ವಾಗ್ಬಾಣ ಹೃದಯಕೆ ।
ಸುಡುವುದಗ್ನಿಯ ಕೆಂಡದಂದದಿ ತೀಕ್ಷ್ಣಶಬ್ದವದು ॥
ನಡತೆ ಯಿತನದೇನ ಹೇಳಲಿ ।
ಕೊಡವಿಯಲಿ ವಿಷವಾಗಿ ಸುಡುವುದು ।
ನುಡಿವುದೇನಾಪರಿಯನತಿಸ್ತಾರ ಸಾಕಿನಿತು ॥ ೪೫೪ ॥

ಪುರುಷನಿವನಜ್ಞಾನಸಾಗರ- ।
ನಿರುವನಜ್ಞಾನದ ನಿಧಾನವು ।
ಮೆರೆವುದೀತನ ಜೀವನವು ನಿಜ ಹಿಂಸೆಗರಮನೆಯು ॥

[ಅಕ್ಷ್ಮಾಂತಿಃ] ನರನೆ ಕೇಳೈ ತಿದಿಯನೂದುತ- ।
ಲಿರಲು ಗಾಳಿಯಲುಬ್ಬಿ ಹೋಗುವ ।
ಪರಿಯು ನೀ ನೋಡಿದಿಯೊ ಗಾಳಿಯು ಹೋದನಂತರದಿ ॥೪೫೫॥

ತಿರಿಗಿ ಕೇಳದು ಕುಂದಿ ಹೋಗುತ- ।
ಲಿರುವುದಲ್ಲವೆ ನೋಡು ಯೊಪರಿ ।
ದೊರಕಿದರೆ ಧನಸೌಖ್ಯಲಾಭವು ಪರಿಯನೇನೆಂಬೆ ॥

ಹರುಷಭರದಿಂದುಬ್ಬಿ ಹೋಗುವ- ।
ನರೆಗಳಿಗೆಯಲಿ ನೋಡು ಪಾರ್ಥನೆ ।
ಮರಳಿ ಹಾನಿಯು ಬರಲು ದುಃಖದಿ ಕುಗ್ಗಿ ಹೋಗುವನು ॥
ಧರಣಿಯಲಿ ಸುಳಿಗಾಳಿ ಬೀಸುತ ।
ಬರಲು ಧೂಳಿಯು ಗಗನಪರ್ಯಂ- ।
ತರದೊಳೇಳುವುದಲ್ಲವೇ ನೋಡಿದರೆ ಕೌಂತೇಯ ॥ ೪೫೬ ॥

ಧರೆಯಲೀಪರಿ ತುತಿಯ ಮಾಡಲು ।
ಹರುಷದಿಂದುಬ್ಬುವನು ಗರ್ವದಿ ।
ಪರರು ನಿಂದೆಯ ಮಾಡಲಾಕ್ಷಣ ಕುಗ್ಗುವನು ನಿಜದಿ ॥
ಬರಿದೆ ನೀರಿನ ಹನಿಗೆ ಮಣ್ಣಿಲಿ ।
ಬರುವುದೈ ಕೆಸರಿನ ವಿಕಾರವು ।
ಮರಳಿ ಗಾಳಿಯು ಬೀಸಿದರೆ ಮೇಗೊಣಗಿ ಹೋಗುವ್ದು
॥ ೪೫೭ ॥

ಮಾನ ಬಂದರೆ ಹಿಗ್ಗಿ ಮೇಣಪ- ।
ಮಾನ ಬಂದರೆ ಕುಗ್ಗಿ ಹೋಗುವ ।
ಮಾನವನು ನೋಡಿದರೆ ಕೇಳಜ್ಞಾನಖಾನಿಯಲಾ ॥
[ಅನಾರ್ಜವಂ] ಮಾನನದಿ ಯೋಚಿಸುವುದೊಂದಿ- ।
ಮಾನನಿಲ್ಲದೆ ಮಾಳ್ಪುದೆಂದನೆ- ।
ಯಿ ನಿಧಾನದಿ ಕೃತಿಮತಿಗೆ ಮೇಳವನು ಹಾಕರಲಾ ॥೪೫೮॥

ಮಾರಕನು ಮೃಗಗಳಿಗೆ ತಾನಾ- ।
ಹಾರವನು ಕೊಡುತಿಹನು ದುಷ್ಟನಿ- ।
ಚಾರದಿಂದಲೆ ಪ್ರೇಮವೆಳ್ಳಿನಿತಿಲ್ಲ ಹೃದಯದಲಿ ॥
ಧಾರುಣಿಯಲೀತೆರದಿ ಮನದ ವಿ- ।
ಕಾರಗಳ ತಾಂ ಹೊರಗೆ ಜನರಿಗೆ ।
ತೋರಿಸದೆ ಪರರೊಡನೆ ವೈರವ ಸಾಧಿಪನು ನಿಜದಿ ॥೪೫೯॥

ಶಿಲೆಯ ಕಲ್ಲಿನಮೇಲೆ ಶೇವಲ ।
ಬೆಳೆಯಲದು ಹಸುರಾಗಿ ರುಳಿರ್ರುಳ ।
ಹೊಳೆಯುವ್ದು ಕೆಳಗದರ ಶಿಲೆಕಲ್ಲುಳಿವುದಿಲ್ಲೇನೈ ॥

ಹಳದಿ ಬಣ್ಣದಿ ಹೊಳೆವ ಫಲಗಳು ।
ಬೆಳೆಯುವುವು ಬೇವಿನಲಿ ತಿಂದರೆ- ।
ಯೊಳಗೆ ವಿಷದಂದದಲಿ ಕಹಿಯಹುವಲ್ಲವೇ ನೋಡು ॥ ೪೬೦ ॥

ನರನೆ ಕೇಳೀತೆರದಿ ಹೊರಗೊಳ- ।
ಗಿರಲು ನಿಜವ್ಯತ್ಯಾಸವಲ್ಲಿಯೆ ।
ಯಿರುವುದೈ ಸಹಜದಲಿ ಕೇಳಜ್ಞಾನವಾಸವದು ॥
[ಆಚಾರ್ಯೋಪಾಸನರಾಹಿತ್ಯಂ] ಗುರುಕುಲದ ನಾಮೋಚ್ಚ
ರ್ಲಿರುವುದಾರಿಗೆ ಲಜ್ಜೆ ಜಗದಲಿ । ರಣಿಯ- ।
ಗುರುಚರಣಸೇವೆಯನು ಮಾಳ್ಪರೆ ಯಾರು ತುಚ್ಛ ಪರೊ ॥ ೪೬೧ ॥

ನರಗೆ ವಿದ್ಯಾದಾನವಾರಿಂ ।
ದೊರಕಿಹುದೊ ತದ್ಗುರುವ ಮನ್ನಿಸ- ।
ದಿರುವ ಪುರುಷಾಧಮನ ಹೆಸರನು ಬಾಯಲುಚ್ಚರಿಸೆ ॥
ಧರಣಿಯೊಳಗಂತ್ಯಜನ ಮನೆಯಲಿ ।
ತಿರುಕನಂದದಿ ಕೂಳನುಂಬುವ ।
ಪರಿಯದಲ್ಲವೆ ಯೇನ ಹೇಳಲಿ ಯೆನ್ನ ದುರ್ಭಾಗ್ಯ ॥ ೪೬೨ ॥

ಒರಿದೆ ನಾನಾಹೆಸರನೀಗಲೆ ।
ಯರಿತರಿತು ವುಚ್ಚಾರಮಾಡಿದೆ ।
ಹರಿದು ಬೀಳುವ್ದಲ್ಲನೇನೀ ದುಷ್ಪ್ರನಾಲಿಗೆಯು ॥
ದುರಿತನಿದ ಪರಿಹರಿಸಲೋಸುಗ ।
ಗುರುಚರಣಪದ್ಮಕ್ತರಾರೀ- ।
ಧರೆಯೊಳಿರುವರೂ ಅವರ ನಾಮೋಚ್ಚರಣ ಮಾಡುವೆನು ॥೪೬೩॥

ಧರೆಯಲೀ ಗುರುಚರಣಭಕ್ತರು ।
ಮೆರೆವರಜ್ಞಾನಾಂಧಕಾರಕೆ ।
ತರಣಿಯಂದದೊಳವರ ನಾಮಸ್ಮರಣೆ ಮಾಡುತಲಿ ॥
ದುರಿತಗಳ ಪರಿಹರಿಪೆನೆನ್ನಯ ।
ದುರಿತ ನಿರಸನವಾಯ್ತು ನಿಶ್ಚಯ- ।
ವಿರುವ್ದೀಪರಿ ಶಕ್ತಿ ಗುರುಭಕ್ತರ ಭಜನೆದೊಳಗೆ ॥ ೪೬೪ ॥

ತಿರಿಗಿ ನಾನಾನಾಮ ತೆಗೆಯೆನು ।
ಅರುಹುವೆನು ಮುಂದಕ್ಕೆ ನಾನಾ- ।
ಪರಿಯ ಲಕ್ಷಣಗಳನು ಕೇಳಜ್ಞಾನಪರವಾದ ॥
[ಅಶೌಚಂ] ನರನು ಸ್ವತಹವೆ ಕರ್ಮಗಳನಾ- ।
ಚರಿಸದಲೆ ಸಂಶಯವ ಧರಿಸುವ- ।
ನಿರುವನೈ ನಿಜ ವನದೊಳಿರುತಿಹ ಹಾಳು ಬಾವಿಯಲಾ ॥೪೭೫॥

ಇರುವುದೆಂತೆನೆ ಹಾಳು ಬಾವಿಯು ।
ಯಿರುವುದೈ ಮುಳುಗಳ್ಳಿ ಬಾಯುಲಿ ।
ಪರಿಪರಿಯ ಜಂತುಗಳು ಕೊಳೆತಿಹುವೊಳಗೆ ನೀರೊಳಗೆ ॥
ಇರುವುದೈ ಯೆಲುರಾಶಿ ಕೊಳೆತಿಹು- ।
ದಿರುವನಾಪರಿ ಹೊರಗೊಳಗೆ ತುಂ- ।
ಬಿರುವುದೈ ನರದೇಹವಲ್ಲಿಯಶೌಚವೇನೆಂಬೆ ॥ ೪೭೬ ॥

ಶ್ವಾನವಸ್ನವ ತಿನುವ ಸಮಯದಿ ।
ಮಾನಿಪುದೆ ಮಡಿಮೈಲಿಗೇಗಳ ।
ಕ್ಷೋಣಿಯಲ್ಲೀತೆರದಿ ಪರಿತ್ಯವನು ಗ್ರಹಿಸುವನು ॥
ಶ್ವಾನಕೆ ಸ್ತ್ರೀಸಂಗ ಮಾಳ್ಪರೆ ।
ಶ್ವಾನವಲ್ಲ ಸಮಾನವಾಪರಿ ।
ಮಾನಿಸನು ಲಜ್ಜೆಯನು ಸ್ತ್ರೀಸಂಗದಲಿ ಯೆಂದೆಂದು ॥೪೭೭॥

ನಿತ್ಯನೈಮಿತ್ತಿಕದ ಕರ್ಮಕೆ ।
ವೃತ್ಯಯವು ಬಂದಿರಲು ಧರ್ಮಪ್ರ- ।
ವೃತ್ತಿಗಡಚಣೆ ಬಂದರವನಿಗೆ ಖೇದ ಬಾರದಲಾ ॥
ಮತ್ತೆ ಪಾಪಾಚರಣ ಮಾಡಲು ।
ನಿತ್ಯವಾಸಕ್ತಿಯನು ತೋರಿಸಿ ।
ಚಿತ್ತದಲಿ ಧಿಕ್ಕರಿಪನೈ ಪುಣ್ಯಾಚರಣಮಾರ್ಗ ॥ ೪೭೮ ॥

ಚಿತ್ತದಲಿ ಪರಿಪರಿ ವಿಕಲ್ಪಗ- ।
ಳೊತ್ತಿ ಬರುವುಪ್ಪ ಪಾಪಪುಣ್ಯವ ।
ಕಿತ್ತಿ ಧನಸಂಪಾದನೆಯಲಾಸಕ್ತಿ ತೋರಿಪನು ॥
ಧಾತ್ರಿಯಲ್ಲೀತೆರದಿ ಮಾನವ ।
ಸತ್ಯವಜ್ಞಾನದ ಸುಮೂರುತಿ ।
ವಾರ್ಥ ಕೇಳೈ ವಿಸ್ತರಿಪೆನಸ್ಥೈರ್ಯಲಕ್ಷಣವ ॥ ೪೭೯ ॥

[ಅಸ್ಥೈರ್ಯಂ] ಕಾಸಿನಾದರು ಲಾಭ ದೊರಕುವು- ।
ದಾಶೆ ಹುಟ್ಟಲು ಮನದೊಳೀಪರಿ ।
ಬಾಸೆಗಳ್ಳನ ಪರಿಯ ಮಾಡುವನಲ್ಲವೇ ವಾರ್ಥ ॥

ಈಸುಸೂಕ್ಷ್ಮವು ಯಿರಿವೆಯಾದರು ।
ತೋಷದಿಂ ತೃಣಕಡ್ಡಿಯೇರಲು ।
ಬಾಸಿಗದ ತೆರನಾಗಿ ಬೊಗ್ಗುವುದಲ್ಲವೇ ನೆಲದಿ ॥ ೪೮೦

ನೀರಿನಲಿ ಹೊಂಡದಲಿ ಕಾಲ್ಗಳು ।
ನೇರಿದಾಕ್ಷಣ ರಾಡಿ ನೀರದು- ।
ವೇರುವುದು ಮೇಲಕ್ಕೆ ಕಸರಾಗುವುದು ನೀರೆಲ್ಲ ॥
ಧಾರುಣಿಯಲಾತೆರದಿ ಭೀತಿ ಪ್ರ- ।
ಕಾರ ನೋಡಿದ ಕೂಡಲವನಿಗೆ ।
ಭಾರಿ ಬೆದರಿಕೆಯಾಗುವುದು ಮನದೊಳಗೆ ಕೌಂತೇಯ ॥ ೪೮೧ ॥

ಹಾಲುಗುಂಬಳವೊಣಗಿದರೆ ಮಳೆ- ।
ಗಾಲದಲಿ ನೆರೆಯೊಳಗೆ ಸಿಲುಕಲು ।
ತೇಲಿಹೋಗುವುದಲ್ಲವೇ ನೀರಿನ ಪ್ರವಾಹದಲಿ ॥
ಗಾಳಿ ಸುಳಿವಿಲಿ ಹುಲ್ಲುಕಡ್ಡಿಯು ।
ಧೂಳಿ ಸಿಲುಕಲು ಗಗನದನಕವ- ।
ದೇಳುವುದು ನೋಡಿದರೆ ಸ್ಥಿರವೆಲ್ಲಿಯದು ಕೌಂತೇಯ ॥ ೪೮೨ ॥

ಧರೆಯೊಳಾಪರಿ ತೀರ್ಥಕ್ಷೇತ್ರದಿ ।
ಪರಮಪಾವನನಗರದಲಿ ಮನ- ।
ಸಿರದು ಸ್ಥಿರವಚ್ಚಾಡುತಿಹುದೈ ನಾಯಿಯುಂದದಲಿ ॥
ಬರಿದೆ ಸರಟಕೆ ಮದವ್ರ ಬಂದಿರೆ ।
ಮರದೊಳೋಡಾಡುವುದು ನೋಡೈ ।
ಯಿರುವ್ರದೇನಾಲಾಭ ಕೆಳಗಿಂ ಮೇಲಕ್ಕೊಡಿದರೆ ॥ ೪೮೩ ॥

ನೀರರಂಜಣಿಗೆಯು ಹುಗಿಯಿದಲೆ ।
ಧಾರುಣಿಯೊಳೊಂದೆಡೆಯಲಿರದ್ಯೆ ।
ನೇರಲಾರನು ಸ್ಥೈರ್ಯ ನಿದ್ರೆಯ ಹೊರತು ದಿನದಿನದಿ ॥
ಧಾರುಣಿಯೊಳಡ್ಡಾಡುತಿರುವನು ।
ಚಾರುತರಶೀಲವನು ನೋಡಲು ।
ತೋರುವನು ವಾನರನ ಸೋದರನೆಂದು ಖರೆಯಾಗಿ ॥ ೪೮೪ ॥

ಪುರುಷನಸ್ಥಿರನಿರ್ದೊಡೀಪರಿ ।
ಯಿರುವನವನಜ್ಞಾನವಾರಿಧಿ ।
ಮರಳಿ ಯಾತ್ಮನಿನಿಗ್ರಹಾಭಾವವನು ಪೇಳುವೆನು ॥
[ಆತ್ಮನಿನಿಗ್ರಹಾಭಾವಃ] ನರನೆ ಕೇಳೈ ಪುರುಷನಂತಃ- ।
ಕರಣದಲಿ ಸಂಯಮನವೆಳ್ಳ -।
ಷ್ಟಿರದು ಶಾಸ್ತ್ರನಿಷಿದ್ಧಕರ್ಮದ ಬೆದರಿಕೆಯೆ ಯಿಲ್ಲೈ ॥ ೪೮೫ ॥

ಮಳೆಯ ಪೂರದಿ ಹಳ್ಳ ಹರಿಯಲು ।
ನಿಲುವುದೇನು ಪ್ರವಾಹ ಹರಳಿನ- ।
ಲಿಳೆಯೊಳಾವರಿ ಶಾಸ್ತ್ರವಿಧಿಯುಲ್ಲಂಘಿಪನು ನಿಜದಿ ॥
ಕೊಳನು ವ್ರತನಿಯಮಗಳ ಮನದಲಿ ।
ತುಳಿದು ಬಿಡುವನು ಧರ್ಮವಿಧಿಗಳ ।
ಮುಳಿಸಿನಿಂ ಶಾಸ್ತ್ರದ ವಿರೋಧಕ್ರಿಯೆಯ ಮಾಡುವನು
॥ ೪೩೬ ॥

ಹೇಸನ್ಯೆ ಪಾಪಾಚರಣದಲಿ ।
ಲೇಶವಾದರು ಪುಣ್ಯದಭಿರುಚಿ ।
ಪಾಸವಾಗದು ಮನದೊಳವನಿಗೆ ಲಜ್ಜೆ ತೊರೆದಿಹನು ॥
ಘಾಸಿಪನು ಕುಲಧರ್ಮವೆಲ್ಲವ ।
ದೂಷಿಪನು ಶ್ರುತಿಯಾಜ್ಞೆಯೆಲ್ಲವ ।
ನಾಶಿಸುವನೈ ಸತ್ಯನೀತಿಯ ಧರ್ಮಮಾರ್ಗವನು ॥ ೪೩೭ ॥

ಹೋರಿ ತಿರಿದುಂಬುವ ತೆರದಲಿ ತ- ।
ಯಾರಿ ಮಾಳ್ಪನು ಮುರಿದು ವಿಧಿಯನು ।
ಮಾರುತನು ಜೀಸಿದರೆ ಯುಂಟೀ ವಿಧಿನಿಷೇಧಗಳು ॥
ನೀರ ಪಾಟವ ಮೀರಿ ತಪ್ಪಲು ।
ಹಾರಿ ಹಾಯ್ವುದು ಕಂಡಕತೆಯಲಿ ।
ಜೀರಿದರೆ ದಾವಾಗ್ನಿ ಸುಡುವುದು ಸರ್ವವಸ್ತುಗಳ ॥ ೪೩೮ ॥

ಕುರುಡಿರುವ ಗಜಕೇರಿದರೆ ಮದ ।
ಮುರುಡಗೆಡಿವುದು ಕಂಡಕಡೆಯು- ।
ಲ್ಲಿರುವುದಾವರಿ ವಿಷಯವಾಸನೆಯೆಂಬ ಮದಗಜವ್ಯ ॥
ನರನೆ ಹೊಲಸೆಲ್ಲವನು ತಾವ್ ತಂ- ।
ದಿರಿಸುವರಲಾ ಬುಟ್ಟಿಯಲ್ಲಾ- ।
ಪರಿಯಲಾಹೋರಿಪನು ನಾಕುವರಾರು ಪ್ರೇಮದಲಿ
॥ ೪೩೯ ॥

ವೇಶಿವೇಲಿನ ಕಲ್ಲಿನಿಂದ ಪ್ರ- ।
ವೇಶ ಮಾಳ್ಪರು ಸರ್ವರೂರೊಳು ।
ಕ್ಲೇಶ ಕೊಡುವನು ನೀಚನಿಂಗಧಿಕಾರ ದೊರೆತಿರಲು ॥
ಲೇಸಿನಿಂ ನಾಣಿಯನು ಸುಲಿವರೆ ।
ಲೇಶವಾದರು ಭೀತಿಯಿರುವುದೆ ।
ಯೀಸುಪರಿ ಚಂಡಾಲತೆಯಜ್ಞಾನಕ್ಕೆ ನೀಜವಲಾ ॥ ೪೪೦ ॥

[ಇಂದ್ರಿಯಾರ್ಥೇಷು ಅನೈರಾಗ್ಯಂ] ನರನು ನಾಯುವ
ತರದಿ ವಿಷಯದೊಳಾಶೆ ನಿಡದಲೆ । ಮೊದಲು ತದನಂ ।
ನಿರುತ ತಾಂ ವಿಷಯೋಪಭೋಗದಲಿಚ್ಛೆ ತೋರಿಪನು ॥

ಮರಣ ಬಂದರದೇನು ಸ್ವರ್ಗದಿ ।
ದೊರೆಯ ಬೇಕಾವಿಷಯಸುಖಗಳು ।
ಬಿರುವುದಾವರಿ ಯಿಚ್ಛೆ ಕರ್ಮಾಚರಣವಾವರಿಯ ॥ ೪೪೧ ॥

ಪರಿಪರಿಯ ವಿಷಯೋಪಭೋಗವು ।
ದೊರೆಯ ಬೇಕೆಂದಿಚ್ಛೆಯಿಂದಲಿ ।
ನಿರುತ ಮಾಳ್ಪನು ತಾನು ದೀರ್ಘೋದ್ಯೋಗ ಹಗಲಿರುಳು ॥
ನಿರುತ ಮಾಳ್ಪನು ಕಾಮ್ಯ ಕರ್ಮವ- ।
ನೆರಡನೆಯ ಪರಿ ಕನಸಿನಲಿ ಯಾ- ।
ದರು ಕಣಾ ತಾನರಿಯದಿರುವನಕಾಮ್ಯ ಕರ್ಮವನು ॥ ೪೪೨ ॥

ದೃಷ್ಟಿಸಲು ವೈರಾಗ್ಯಯುಕ್ತರ ।
ಭ್ರಷ್ಟರೆನುತಲಿ ನ್ಹಾನ ಮಾಳ್ಪನು ।
ದೃಷ್ಟಿಯಿಂದಲೆ ಮುಟ್ಟಿದರು ತಾಂ ದೋಷವೆನ್ನುವನು ॥
ಕುಷ್ಠರೋಗಿಯು ತನ್ನ ಕೊಳೆತಿಹ ।
ಭ್ರಷ್ಟಕೈಯಿಂದನ್ನ ತಿನುವುದ- ।
ನಿಷ್ಟವೆನುವನೆ ಹರ್ಷದಿಂದದರಿಂದ ತಿನುವನಲಾ ॥ ೪೪೩ ॥

ಹೇಸಿಕೆಯು ವಿಷಯೋಪಭೋಗದಿ ।
ನಾಸಿಸುವುದೆಂದರವು ಒಂದರು ।
ಹೇಸದಲೆ ತದ್ವಿಷಯದುಪಭೋಗವನು ಮಾಡುವರು ॥
ನಾಶ ಮಾಡರು ಕರ್ಮದಿಚ್ಛೆಯ ।
ನಾಶ ಮಾಡರು ಕರ್ಮಫಲವ- ।
ನ್ನೇನುನರಿಯಲಿ ನಿನಗೆ ವರ್ಣಿಸಲಿದನು ಕೌಂತೇಯ ॥ ೪೪೪ ॥

ಕತ್ತೆಹೆಣ್ಣಿನ ಬೆನ್ನ ಮೇಲಕೆ ।
ಕತ್ತೆಗಂದೇರಿದರೆ ಕಾಲಿಂ ।
ಲತ್ತೆ ತಿಂದರು ಮೂಗಿನಿಂದಾ ರಕ್ತ ಸೋರಿದರು ॥
ಕತ್ತೆಗಂದದು ಬೆನ್ನ ಸಿಡುವುದೆ ।
ಮತ್ತೆ ಹಿಂಬಾಲಿಸುವುದಲ್ಲವೆ ।
ಲತ್ತೆ ಪೆಟ್ಟದು ಪೆತ್ತಗಾಗುವುದಲ್ಲವೇ ವಾರ್ಥ ॥ ೪೪೫ ॥

ವಿಷಯದುಪಭೋಗವನು ಬಯಸುತ ।
ವಿಷದ ಪರಿಣಾಮವನು ತಿಳಿಯದೆ ।
ವಿಷಯಲಂಪಟತನದಿ ಬೆಂಕಿಗೆ ಹಾರಿಸೀಳುವರು ॥
ವಸನುತಿಯಲಾಮೃಗಜಲವ ತಾಂ ।
ತೃಷಿತಮೃಗ ಕುಡಿಯಲ್ಕೆ ಪೋಪುದು ।
ವಿಷಮತನವನು ನೋಡದಲೆ ಜೆಂತಾಗಿ ಬಳಲುವರು ॥ ೪೪೬ ॥

ಹುಟ್ಟಿದಾಕ್ಷಣ ಹಿಡಿದು ಮರಣವು ।
ಮುಟ್ಟಿ ಹಿಡಿಯುವ ತನಕ ವಿಷಯದ ।
ದುಷ್ಪವಾಸನೆಗಳಲಿ ಲಂಪಟನಾಗಿ ತಿರುಗಿದರು ॥

ಕಟ್ಟಕಡೆಗದು ಸಿಗದೆ ಮನದಲಿ ।
ಸಿಟ್ಟು ಬರುವುದು ಮುರಿವುದಾಶೆಯು ।
ದೃಷ್ಟಿಪಥದಲಿ ನಷ್ಟವಹುದೈ ದುಷ್ಟಪರಿಣಾಮ ॥ ೪೮೩ ॥

ನಾಶವಾಗದಲಾಶೆಯದು ವಿ- ।
ಲಾಸ ಹೆಚ್ಚುತ ಪೋಪುದಲ್ಲಿವೆ ।
ವಾಸನೆಯ ಪರಿಣಾಮವನು ನಾನೆಂತು ಬಣ್ಣಿಸಲಿ ॥

ಭಾಷೆ ಸಾಲದು ಬಲತನದಲಿ- ।
ಲಾಸ ತಾಯ್ತಂದೆಯರ ಪ್ರೇಮವು ।
ಯೋಷಿತೆಯರ ಕಟಾಕ್ಷಪಾಶವು ಯೌವನದಿ ವಾರ್ಧ ॥
ಹೇಸಿಕೆಯು ಸ್ತ್ರೀಸುಖದಿ ಬರುತಿರೆ ।
ಯಾಶೆಯೇರ್ವುದು ಮಕ್ಕಳಲ್ಲಿಂಪೆ ।
ಯಾಶೆ ಸಾಯ್ವುದೆ ಯಾಶೆಯಜರಾಮರವಲಾ ವಾರ್ಧ ॥ ೪೮೪ ॥

ಇರುವೆ ನಾ ಸರ್ವಜ್ಞನೆನುತಲಿ ।
ಧರಿಸುವನು ಮನದೊಳಗೆ ಗರ್ವವ ।
ನರನೆ ನೋಡ್ಯೆ ಗರ್ವವೆಂಬುದು ವ್ಯಾಧಿರೂಪವಲಾ ॥ ೪೮೫ ॥

ಕುರುಡತಾಯಿಯು ತನ್ನ ಮಕ್ಕಳ- ।
ನಿರದೆ ಲಾಲನ ಮಾಳ್ಪ ತೆರದಲಿ ।
ನರನು ತನ್ನಯ ಪುತ್ರಪೌತ್ರರ ಮಾಳ್ಪ ಮುದಿತನದಿ ॥
ಇರುವನಾರೀಪರಿಯು ವಿಷಯಾ- ।
ತುರನು ಕೇಳಜ್ಞಾನಸಾಗರ ।
ನರನೆ ನಾ ನಿಸರ್ಗಜ್ಯಲಕ್ಷಣಗಳನು ಪೇಳುವೆನು ॥ ೪೮೬ ॥

ನರನು ವ್ಯಾಧಿಗ್ರಸ್ತ ತಾಂ ಧಿ- ।
ಕ್ಕರಿಸುವನಲಾ ಭೋಗಗಳನಾ- ।
ಪರಿಯಲಾತನು ಸಹನಮಾಡನು ಪರಜನೋತ್ಕರ್ಷ ॥
ಇರುವುದಾತನೊಳಲ್ಪ ವಿದ್ಯೆಯು ।
ದುರಿತರಾಶಿಯೆ ತುಂಬಿಹುದಲಾ ।
ಪರಿಯ ನೋಡಲು ದೀಪದಂತಿಹನವನು ಲೋಕದಲಿ ॥ ೪೮೭ ॥

[ಅಹಂಕಾರಃ] ತಿಳಿದು ದೇಹವನಾತ್ಮನೆನುತಲಿ ।
ತಿಳಿಗೆಡುಕ ಕರ್ಮವನು ಮಾಳ್ಪನು ।
ಗಳಿಗೆಯುಳಿ ಕರ್ಮಾಚರಣದಿಂದುಬ್ಬಿ ಹೋಗುವನು ॥
ತಲೆಯ ಮೇಲೆ ಪ್ರಸಾದವಿಡುತಲೆ ।
ಫಲಿಸದರ ಪ್ರತಾಪದಿಂದಲೆ ।
ಮೊಳಗುವನು ತದ್ಭಕ್ತನಾಪರಿ ಯುಬ್ಬುವನು ಮನದಿ ॥೪೮೮॥

ಅರುಹುವೆನು ನಾ ದೀಪಗುಣಗಳ- ।
ನುರಿದು ಗುಣವನು ತಿಂದು ಬಿಡುವುದು ।
ಹರಿಸುವುದು ಸ್ನೇಹವನು ಸುತ್ತಲು ಮಸಿಯ ಪಸರಿಪುದು ॥
ಮರೆತು ನೀರಿನ ಹನಿಯು ಜೀಳಲು ।
ಮರಳಿ ಧಡಧಡಿಸುವುದು ಸಿಟ್ಟಿನ- ।
ಲರಿಸಲದ ಚಪ್ಪರದಿ ಮನೆಯನೆ ಸುಟ್ಟು ಬಿಡುವುದಲಾ ॥ ೪೮೯ ॥

ನಾನು ವಿದ್ಯಾಶೀಲನೆಂಬಭಿ- ।
ಮಾನ ವಯದಲಿ ತರುಣನೆಂಬಭಿ- ।
ಮಾನ ಕುಲಸಂಪನ್ನನೆಂಬಭಿಮಾನ ಮೆರೆಯುವುದು ॥
ಕ್ಷೋಣಿಯೆಲ್ಲೆದೆಯುಬ್ಬರಿಸಿ ಮದ- ।
ದಾನೆಯಂದದಿ ನಡೆವನಲ್ಲನೆ ।
ವಾನಿಸುವನ್ನೆ ನನಗೆ ಯಾರು ಸಮಾನರಿಲ್ಲೆನುತ ॥ ೪೯೦ ॥

ನೊಂದಿ ಪೋಪುದೆ ಗಾಳಿ ಬೀಸಲು ।
ಬಿಂದುವಾದರು ಸುಡಲು ಹತ್ತಲು ।
ಬಿಂದು ಮನೆಗಳ ಸಾಲನಾಲನು ಸುಟ್ಟುಬಿಡುವುದಲಾ ॥
ಬಿಂದುಮಾತ್ರ ಪ್ರಕಾಶ ಕೊಡುವುದು ।
ಮಂದರಾಚಲದಂತೆ ದೋಷವು ।
ಬಂದು ಹತ್ತರ ಕೂಡಲುಷ್ಮನ ಕೊಡುವುದಪರಿಮಿತ ॥ ೪೯೧ ॥

ಧರೆಯೊಳಗೆ ಯಾರಿಹರು ವಿದ್ಯಾ- ।
ವರರು ಗುಣಸಂಪನ್ನರೆನ್ನನು ।
ಹೊರತು ನಾನೇ ಶ್ರೇಷ್ಠನೆಲ್ಲರಿಗೆನುತ ಮನ್ನಿಪನು ॥

ನರನೆ ಕೇಳೀತೆರದಿ ದೀಪದ ।
ತೆರದೊಳಿರುವನು ಗರ್ವಪೂರಿತ- ।
ನರನು ಗುಣದೋಷಗಳ ನಾ ನಿಸ್ತರಿಸಿದೆನು ನಿನಗೆ ॥
ಸುರಸನೆನುತಲಿ ಹಾಲನಿತ್ತರೆ ।
ಮರಳಿ ವಿಷಪರಿಣಾಮವಲ್ಲಿಂಪೆ ।
ನರಗೆ ವಿಷಮಜ್ವರದಿ ಪೀಡಿತನಾದವಗೆ ವಾರ್ಧ ॥ ೪೯೨ ॥

ಹಾಲನೆರೆದರೆ ಹಾವಿಗದರಿಂ-।
ದೇಳುವುದು ವಿಷಮಾತ್ರ ಪಾರ್ಥನೆ ।
ಕಾಳಕೂಟದ ತೆರದಿ ವಿಷವನೆ ವೋಕರಿಸುವ್ದಲಾ ॥
ತಾಳುವನು ಮತ್ಸರವನನ್ಯಗು-।
ಣಾಳಿಗಳ ನಿಂದಿಪನು ಬಹು ಹೀ-।
ಯಾಳಿಸುವನನ್ಯರನು ತಪದಿಂ ಗರ್ವಭರಿಯಹನು ॥ ೪೯೭ ॥

ಅಂಕ್ಯಜನು ಸಿಂಹಾಸನದ ಪದ ।
ಬಂತೆನುತ ಮರ ಕಟ್ಟಿದಂದದಿ ।
ಸಂತಸದೊಳಜಗರನು ಖಂಬವ ನುಂಗಿದಂದದಲಿ ॥
ಎಂತು ಲಟ್ಟಣಿ ಬಗ್ಗುವುದು ಆದ-।
ರಂತೆ ತಲೆಯನು ಬಾಗಿಸನಲಾ ।
ಯೆಂತು ದಯೆಯಿಂ ಬಿವರು ಬರುವ್ದದು ಘಟ್ಟಿ ಕಲ್ಲವನು
॥ ೪೯೮ ॥

ಸರುಪ ಕಚ್ಚಲು ಗಾರುಡಿಗನದ-।
ಕಿರದೆ ಮಂತ್ರವ ಹಾಕಲಾವಿಷ ।
ಹರಿಯಲಾರದು ಶ್ರಮವೆ ವ್ಯರ್ಥವು ನೋಡಲಾಪರಿಯ ।।
ಇರುವುದಾಪರಿ ನೋಡಹಂಕೃತಿ ।
ಪೆರೆವುದೈ ಯೆದೆ ಯುಬ್ಬರಿಸುತಲೆ ।
ಹಿರಿಯನೊರ್ವನೆ ತಾನು ಕಿರಿದೀ ನಿಖಿಲ ಜಗವೆನುತ
॥ ೪೯೯ ॥

ಇರುವುದೀ ಪರಿ ಸ್ಥಿತಿಯು ಯಾರೊಳು ।
ಯಿರುವನಾತನೆ ಜಗದಿ ನೋಡಲು ।
ನೆರುವುದಜ್ಞಾನಕ್ಕೆ ವಸತಿಸ್ಥಾನವೇ ಯವನು ॥
[ಜನ್ಮಾದರ್ಶನಂ] ನರನು ಯಿಂದಿನ ನರಜನುಮದಲಿ ।
ದೊರಕಿರುವ ಚುನೆ ಮಡದಿ ಮಕ್ಕಳು ।
ಪರಿಪರಿಯ ಸಂಪತ್ತಿ ಸುಖನಿರ್ವಗಳನೆ ನೆನೆವನಲಾ ॥ ೫೦೦ ॥

ಚೋರನಿಗೆ ವ್ಯಾಪಾರಕೆನುತ ನಿ- ।
ಚಾರವಿಲ್ಲದೆ ಗಂಟೆ ಕೊಟ್ಟರೆ ।
ಚೋರನಾವ್ಯಾಪಾರ ಮಾಳ್ಪನೆ ಗಂಟೆ ತಿನುವನಲಾ ॥
ಧಾರುಣಿಯಲಿ ಕೃತಘ್ನನಿಂಗುಪ-।
ಕಾರ ಮಾಡಲು ಲಾಭ ಬರುವುದೆ ।
ಯಾರಭಿಸಿದರೆ ತುತಿಯ ನಿರ್ಜಜ್ಞನಿಗೆ ಫಲವೇನು ॥ ೫೦೧ ॥

ಕೆಟ್ಟ ನಾಯಿಯಿದೆಂದು ಕಿವಿಗಳ ।
ಸುಟ್ಟು ಬಾಲವ ಕಡಿದು ಹೊರಗದ-।
ನಟ್ಟದಳು ನೋನಿಂದ ಬರುವ್ದದು ತಿರಿತಿರಿಗಿ ಮನೆಗೆ ॥

ಘಟ್ಟಿಕಪ್ಪೆಯ ಸರ್ಪ ಬಾಯೊಳ- ।
ಗಿಟ್ಟು ನುಂಗುವ ವೇಳೆಯಲಿ ತದ್- ।
ಭೃಸ್ಟಕಪ್ಪೆಯು ನೋಣವ ನುಂಗುವ ಯತ್ನ ಮಾಳ್ಪದಲಾ ॥೫೦೨॥

ತನ್ನ ನಿಜಸ್ಥಿತಿಯೇನು ಯೆಂಬುವ್- ।
ದನ್ನು ಕಪ್ಪೆ ವಿಚಾರ ಮಾಡದು ।
ತನ್ನ ನವದ್ವಾರಗಳು ಸಂತತ ಸೂಸುತಿರುವ್ದವಲಾ ॥
ಎನ್ನು ತೀಪರಿಸ್ಥಿತಿಯನರಿಯದೆ ।
ಖಿನ್ನತನ ಮನದಿಂದಲಟ್ಟುತ ।
ಪೂರ್ಣಸುಖಸಂತೋಷದಿಂ ಗುರುಕಿಡುತ ಮಲಗಿಹನು ॥ ೫೦೩ ॥

ಮಾತೆಯುದರದ ಕುಹಕದಲಿ ತಾಂ ।
ಭೀತಿಯಿಂದೊಂಭತ್ತು ತಿಂಗಳು ।
ಮೂತ್ರವಿಷ್ಠಾದ್ವಾರದಲಿ ಒಳಲಿರುವ ತಾಪಗಳ ॥
ಭೂತಳದಿ ಜನಿಸಿದರೆ ಮರೆಯುವ- ।
ನಾತ ತದನಂತರದಿ ತನ್ನಯ ।
ಮೂತ್ರಮಲದಲಿ ತೇಲುತಿದ್ದರು ಹೊಲಸನರಿಯನಲಾ ॥ ೫೦೪ ॥

ಹೇಗೆ ಬಂದೆನು ನರಜನುಮದಲಿ ।
ಹೇಗೆ ಜೀವನಕ್ರಮವ ಮಾಳ್ಪೆನು ।
ಹೇಗೆ ಬರುವುದು ಜನ್ಮ ಮುಂದಕೆ ತಾಪಹೇನಿಹುದು ॥
ಈಗಲದರ ವಿಚಾರ ಮಾಡ ನ- ।
ರಾಗದಿಂದೀತಾಪ ತಪ್ಪುವ ।
ಯೋಗವಾವ್ದದು ಮನದಿ ಬಾರದು ಕೇಳ್ವಿಚಾರವಿದು ॥ ೫೦೫ ॥

[ಮೃತ್ಯೋರದರ್ಶನಂ] ಮೃತ್ಯು ತನ್ನಯ ಹಿಂದೆ ಬಿನ್ನನು ।
ಹತ್ತಿರುವ್ದೆನುತವಗೆ ಯೋಚನೆ ।
ಚಿತ್ತದಲಿ ಬರಲಾರದಲ್ಲಾ ಯೌವನದಿ ನೋಡೆ ॥
ನಿತ್ಯ ಶಾಶ್ವತ ತನುವೆನುತ ನಂ- ।
ಬುತ್ತ ಸುಖಸಂತೋಷದಿಂದಲೆ ।
ಮೃತ್ಯುವನು ಧಿಕ್ಕರಿಸಿ ವರ್ತನ ಮಾಳ್ಪನೈ ಯವನು ॥ ೫೦೬ ॥

ಒತ್ತಿ ತೋಗದು ನೀರ ಹೊಂಡವೆ ।
ನುತ್ತಲದರೊಳಗಿರುವ ಮೀನು ನ- ।
ಮತ್ತವದರೊಳಗಿರುವ್ದೈ ಸಂತಸದಿ ಹೊಂಡದಲಿ ॥
ಚಿತ್ತಮೋಹಕವಾದ ಗಾಯನ- ।
ದತ್ತ ಲಕ್ಷವನಿತ್ತು ಬೇಡನು ।
ಯೆತ್ತ ಹಾಡುವನತ್ತ ಮೃಗಗಳು ಲುಬ್ಧವಾಗುವ್ದವು ॥ ೫೦೭ ॥

ಮಿನು ಗಾಳದ ಮಾಂಸಖಂಡವ ।
ತಾನು ಲೋಭವಿ ನುಂಗಿಯದರಿಂ ।
ಹಾನಿಗಾಮಂತ್ರಣವ ಕೊಡುವುದು ಪ್ರಾಣಸಂಕಟದಿ ॥
ಏನಹೇಳಲಿ ದೀಪಜ್ಯೋತಿಯ ।
ತಾನು ನುಂಗಲು ಮರಣ ಬರುವುದು ।
ಯೀನಿಧಾನವನರಿಯದಲೆ ಹಾರ್ವುದು ಪತಂಗವಲಾ ॥೫೦೮॥

ಹಿಡಿದು ಬೆಂಕಿಯು ಮನೆಯ ಸುಡುವುದು ।
ಜಡಭರತಗದು ತಿಳಿಯದಲಸತೆ ।
ಹಿಡಿದ ಹೊರಗೋಡದವ ಮನೆಯಲಿ ಸುಟ್ಟುಹೋದಂತೆ ॥
ಒಡಿಸಿದನ್ನದಿ ವಿಷವ ಕಲಿಸಿದ- ।
ರೊಡನೆ ತಿಳಿಯದೆ ತಿಂಬ ತೆರದಲಿ ।
ಜಡಮತಿಯು ತಾಂ ತಿಳಿಯಲಾರನು ತತ್ತ್ವ ನಿಜವಾಗಿ ॥೫೦೯॥

ಧಾತ್ರಿಯಲ್ಲೀ ಜೀವರೂಪದಿ ।
ಮೃತ್ಯು ತಾನಡಗಿರುವನೆಂಬುದ ।
ತತ್ತ್ವ ತಿಳಿಯನು ವಿಷಯಸುಖದುಪಭೋಗದಲಿ ವಾರ್ಥ ॥
ನಿತ್ಯ ದೇಹದ ಪುಷ್ಟಿಯನು ದಿನ ।
ರಾತ್ರಿಯೆನ್ನದೆ ಬೆಳೆಸುತಿರುವನು ।
ನಿತ್ಯ ಶಾಶ್ವತ ವಿಷಯಸೌಖ್ಯವೆನಿತ್ತ ಮನ್ನಿಪನು ॥ ೫೧೦ ॥

ಆರಿಯನಾತನು ಕುಲಕಳಂಕನು ।
ಹರುಷದಲಿ ವೇಶ್ಯಾತರುಣಿ ನಿಜ ।
ಮೆರೆವ ತನು ಮನೆ ಧನವನರ್ಪಿಸುತಿರುವ ಕಾರಣವ ॥
ಪರಪುರುಷನನು ತನ್ನ ಮುಷ್ಟಿಯೊ- ।
ಳಿರಿಸಿ ಸುಖದಿಂ ಸುಲಿಯ ಬೇಕೀ- ।
ತೆರದ ದುರ್ವಾಸನೆಯಲಲ್ಲವೆ ಪ್ರೇಮಪೂರ್ವಕವೆ ॥ ೫೧೧ ॥

ದಾರಿ ನಡೆಯುವ ವೇಳೆಗತಿಪಟು ।
ಚೋರ ಸಂಗತಿಸಿದರೆ ಪ್ರೇಮವ ।
ತೋರಿಪನಲಾ ಮಿತ್ರನೋಲಾಚರಣ ಮಾಡುವನು ॥
ದಾರಿಯಲಿ ನಿರ್ಜನ ಪ್ರದೇಶದಿ ।
ಹಾರಿ ಪೈಯಲಿ ಕೊರಳ ಹಿಸುಕುವ ।
ಚೋರನಲ್ಲವೆ ವಿಷಯಸಂಗತಿ ಯೀಪರಿಯೆ ವಾರ್ಥ ॥೫೧೨॥

ಮಣ್ಣುಗೊಂಬೆಗೆ ಸ್ನಾನ ಹಾಕಿ ಪ್ರ- ।
ಸನ್ನತೆಯ ಪೂಜೆಯನು ಮಾಳ್ಪುದು ।
ಮಾನ್ಯವೇನೈ ಕರಗಿ ಹೋಗುವುವೆಲ್ಲ ಗೊಂಬಿಗಳೆ ॥

ಪೂರ್ಣಬರಲು ಜಲೋದರವ ಕೇಳ್ ।
ಕಣ್ಣಿಗವ ತೋರ್ಪನು ಸುಪುಷ್ಟನು ।
ಮುನ್ನ ನೋಡಲು ಮೃತ್ಯುವವಗೆ ಸಮೀಪ ಬಂದಿಹುದ ॥೫೧೩॥

ಧರೆಯೊಳಾಹಾರದಿ ನಿಹಾರದೊ- ।
ಳಿರುವನಾವನು ತತ್ಪರನು ನರ- ।
ನರಿಯನಾತನು ಮೃತ್ಯು ಬೆನ್ನಿನೊಳಿಹನೆನಿತ ಮನದಿ ॥
ನರನ ಶೂಲದ ಕಡೆಗೆ ವೈಯ್ಯುತ- ।
ಲಿರಲು ತಾನೇ ವೋಡಿ ಹೋದರೆ ।
ಬರುವನದರಿಂ ಹೆಜ್ಜೆಹೆಜ್ಜೆಗೆ ಮೃತ್ಯು ಹತ್ತರಕೆ ॥ ೫೧೪ ॥

ಪುಷ್ಟಿಯನು ವರ್ಧಿಸಿ ಶರೀರದಿ ।
ಭ್ರಷ್ಟವಿಷಯಾತುರತೆಯೇರಲು ।
ಥಟ್ಟನವನು ವಯಸ್ಸಿನಲ್ಲೇರುತ್ತ ಬರುಬರುತ ॥
ಮೆಟ್ಟುಮೆಟ್ಟಿಗೆ ಮೃತ್ಯುವಿನ ಮನೆ ।
ಮುಟ್ಟುತಿಹನು ಸಮೀಪಕಾಗಿಯೆ ।
ಯಿಷ್ಟವ ತತ್ತ್ವವನರಿಯದಾತನು ಕೆಟ್ಟುಹೋಗುವನು ॥ ೫೧೫ ॥

ಕಾಲನಾಪರಿ ಹೆಜ್ಜೆಹೆಜ್ಜೆಗೆ ।
ಬೀಳುವನು ಹತ್ತರಕೆ ವಾರ್ಥನೆ ।
ಲೀಲೆಯಿಂದವ ಕೈಯ ಹಿಡಿದರೆ ಘಾತವಾಗುವುದು ॥
ಹೇಳಲೇನದನುಪ್ಪು ನೀರಲಿ ।
ಬೀಳಲಾಕ್ಷಣ ಕರಗಿಹೋಪುದು ।
ಕಾಲನಾತರ ಮುಟ್ಟಿದಾಕ್ಷಣ ದೇಹ ಕರಗುವುದು ॥ ೫೧೬ ॥

ಆರಿಯನಲ್ಲ ತತ್ತ್ವವಿದನಾ ।
ಮರುಳನಲ್ಲವೆ ವಾರ್ಥ ಸೋತೈ ।
ಪುರುಷ ವಯದಲ್ಲೇರುವಂದದಿ ಚಿತ್ರ ನೋಡಿದಿಯಾ ॥
ಮರಣಗೃಹಕೆ ಸಮೀಪ ಬರುವನು ।
ಯಿರುವನೈ ವಿಷಯಾಂಧನಾತನು ।
ಕುರುಡನಂದದಿ ಮುಂದೆ ಬರುತಿಹ ಮರಣ ಕಾಣನಲಾ ॥೫೧೭॥

ನರನೆ ಕೇಳೀತೆರದ ಪುರುಷನು ।
ಮೆರೆವನೈ ಯಜ್ಞಾನರಾಜ್ಯದೊ- ।
ಳರಸನಂದದಿ ನೋಡು ನಿಃಸಂಶಯದ ವಾಕ್ಯವಿದು ॥
[ಜರಾಯಾ ಅದರ್ಶನಂ] ನರನೆ ಕೇಳು ವಯೋಭರದಲಾ- ।
ಮರಣದ ವಿಚಾರವನು ಮಾಡದೆ ।
ಪುರುಷನೆಂತಿಹನೆಂದು ಪೇಳ್ವೆನು ವಿಸ್ತರದಿ ನಿನಗೆ ॥ ೫೧೮ ॥

ಧರೆಯಲಾವರಿ ಮೂರ್ಖನಜ್ಞನು ।
ಜವೆಯು ಬರುವುದೆನುತ್ತ ಮನದ-।
ಲ್ಲರಿಯನಲ್ಲಾ ನೋಡು ತಾರುಣ್ಯದಲಿ ಕೌಂತೇಯ ॥
ಗಿರಿಪ್ರಪಾತದ ಶಿಖರದಿಂದಲೆ ।
ಯುರುಳೆ ಗಾಡಿಯು ಕಲ್ಲು ಬಿದ್ದರೆ ।
ಯಿರುವುದೇನವಕರವು ಗತಿ ಮುಂದೇನು ಬಹುದೆಂದು ॥೫೧೯॥

ತರುಣನಾವರಿ ಮುಂದೆ ಬರುತಿಹ ।
ವಿರಸವಾರ್ದ್ಧಕ್ಯದಲಿ ತನ್ನಯ ।
ಪರಿಯು ಯಾವುದು ಬರುವುದೆಂಬುದನರಿಯಿಲಾರನಲಾ ॥
ನೆರೆಯು ಮಳೆಗಾಲದಲಿ ಹಳ್ಳಕೆ ।
ಬರಲು ದಾಟಲು ಬಿಡುವುದೇನದು ।
ಭರದ ವೇಗದಿ ಹರಿವುದದರ ಪ್ರವಾಹವಾತೆರದಿ ॥ ೫೨೦ ॥

ಕೋಗಗಳ ಜೂಜಾಟವೇರಲು ।
ಮಾನವರ ಹತ್ತರಕೆ ಬಿಡುವುವೆ ।
ಕ್ಷೋಣಿಯಲ್ಲೀತೆರದಿ ತರುಣನ ಮದ ವಿರಾಜಿಪುದು ॥
ಕ್ಷೀಣವಹುದು ಶರೀರಶಕ್ತಿಯು ।
ಹಾನಿ ಬಹುದೈ ದೇಹಕಾಂತಿಗೆ ।
ಗೋಣು ಬಹುಕಂಪಾಯಮಾನತೆ ತಾಳ್ವುದೈ ನಿಜದಿ ॥೫೨೧॥

ಬೆಳ್ಳಗಾಗುವುದೆಲ್ಲ ಗಡ್ಡವು ।
ಯಿಲ್ಲನಿಲ್ಲವೆನುತ್ತ ಹೇಳುವ-।
ದಲ್ಲನೇ ಮುಖ ಕಂಪಿಸುವುದೀತೆರದಿ ನೋಡಿದರೆ ॥
ಮೆಲ್ಲಮೆಲ್ಲನೆ ನೋಡಲೀಸ್ಥಿತಿ-।
ಯೆಲ್ಲ ಬಂದರು ತಿಳಿಯಲಾರದೆ ।
ಯಲ್ಲಗಳೆವನು ಮೂರ್ಖನಂದದಿ ದುಃಖದನುಭವವ ॥೫೨೨॥

ಕುರುಡನಿಗೆ ಮುಂದಿರುವ ಪಿಂಬವೆ ।
ಶಿರದಲಪ್ಪಳಿಸುವ ವರೆಗೆ ಬಹು-।
ತ್ವರಿತದಿಂದಲೆ ನಡೆವನಲ್ಲವೆ ಕಣ್ಣು ಕಾಣದಲೆ ॥
ಮರದ ಮೇಲಿಂ ಬಿದ್ದ ನೀರಲು-।
ನೆರಡನೆಯ ನರ ತನ್ನ ಬಾಯೊಳ-।
ಗಿರಿಸಿದರೆ ಸಂತೋಷವಾಗುವುದೇನ ಹೇಳುವುದು ॥ ೫೨೩ ॥

ತಾನು ಕೈಯಿಂದೆತ್ತಿ ಬಾಯೊಳು ।
ಸಾನುರಾಗದಿ ಹಾಕಲಾರನು ।
ಕ್ಷೋಣಿಯಲ್ಲೀತೆರದಲಿಹುದಾಲಸ್ಯಲಕ್ಷಣವು ॥

ಈ ನಿಧಾನದ ಮಾನವನು ತನ-।
ಗೇನು ಬೇಕೆಂಬುದನು ತಿಳಿಯದೆ ।
ಹಾನಿಮಾಳ್ಪನು ತನ್ನ ವರತಾರುಣ್ಯಕಾಲವನು ॥ ೫೨೪ ॥

ಧರೆಯಲೀಪರಿ ಮೂರ್ಖನಜ್ಞನು ।
ಯಿರುವನಜ್ಞಾನಸ್ವರೂಪನು ।
ನರನೆ ನಿನಗಿದ ವಿಸ್ತರಿಸಿ ಪೇಳೆದೆನು ನೋಡಿದಿಯಾ ॥
[ವ್ಯಾಧ್ಯದರ್ಶನಂ] ತರುಣ ನಿಜತಾರುಣ್ಯಭರದಲಿ ।
ಕುರುಡಕುಂಟರ ನೋಡಿದಾಕ್ಷಣ ।
ಭರದಿ ಹೀಯಾಳಿಸುವನಾಕೊರತೆಗಳನನುಕರಿಸಿ ॥ ೫೨೫ ॥

ಮುಂದೆ ತನಗೀಸ್ಥಿತಿಯು ಬಂದರೆ ।
ಮಂದಿ ತನಗಾಪರಿಯ ಮಾಡುವ-।
ರೆಂದು ಬಾರದು ಮನದಿ ಗರ್ವದೊಳುಬ್ಬಿಹೋಗುವನು ॥
ಮುಂದೆ ಮೃತ್ಯುವು ಜೆನ್ನ ಹಿಂದೆಯೆ ।
ಬಂದಿರುವುದೆಂಬುದರ ಚಿಹ್ನವು ।
ಬಂದಿರುವ ವಾರ್ದ್ಧಕ್ಯವೆನುತಲಿ ತಿಳಿಯನೈ ಮೂರ್ಖ ॥ ೫೨೬ ॥

ಬಿಡನಲಾ ತಾರುಣ್ಯಚೇಷ್ಟೆಯ ।
ಪೊಡವಿಯಲ್ಲುಜ್ಞಾನದಾಗರ ।
ಜಡಭರತನವನೆಂದು ತಿಳಿಯೈ ಪಾರ್ಥ ನಾ ನಿನಗೆ ॥
ಸಡಗರದೊಳಜ್ಞಾನಲಕ್ಷಣ-।
ವೆಡೆಬಿಡದೆ ಪೇಳುನೆನು ಕೇಳ್ಮೈ ।
ಕೆಡುವನವ ತಾರುಣ್ಯವಿಶ್ವಾಸದಲಿ ಕೌಂತೇಯ ॥ ೫೨೭ ॥

ಆಡಪಿಯಲ್ಲೆಜ್ಞೊಂದು ಮೇಯುತ ।
ಸಡಗರದೊಳಿರಲದನು ಹುಲಿ ಬಂ-।
ದೊಡನೆ ಹಿಡಿದರೆ ಹುಲಿಯ ಬಾಯಿಂ ತಪ್ಪಿಸುವ ಭರದಿ ॥
ಒಡನೆ ಜೆತ್ತೋಡಿದರು ಮರುದಿನ-।
ವೆಡೆಬಿಡದೆ ಮೇಣಲ್ಲೆ ಒರುವುದು ।
ಕೆಡುವುದೊಂದಿನವಾತ್ಮವಿಶ್ವಾಸದಲಿ ಕೌಂತೇಯ ॥ ೫೨೮ ॥

ಪಿತ್ತರಾತಿಯ ಮೇಲೆ ನಾಗನ ।
ವಸ್ತಿಯಿರುವುದೆನುತ್ತ ಮಾತಿದು ।
ಸತ್ಯವಲ್ಲವೆ ಪುರುಷನೊರ್ವನು ಮಾನಿಸದಲದನು ॥
ಎತ್ತಿ ಪಿತ್ತದ ಪೊತ್ತ ತಂದರ-।
ಸತ್ಯವೀಮಾತೆಂದು ಸೇಳ್ವನು ।
ಧಾತ್ರಿಯಲ್ಲೀಕೆರದಿ ವಿಶ್ವಾಸದಲಿ ಕೆಡುವನಲಾ ॥ ೫೨೯ ॥

ಬಾರದಿರೆ ಕೆಲದಿವಸ ರೋಗವು ।
ಬಾರದೆಂದಿಗು ರೋಗವೆಂದು ನಿ- ।
ಚಾರದಿಂದಲಿ ಹಾಳು ಜಾನಿಯಲಿರದೆ ಬೀಳುವನು ॥
ವೈರಿ ಮಲಗಿಹನೆಂದು ತೋರಲು ।
ವೈರವಳಿದುದು ಯೆನುತ ತಾನು ನಿ- ।
ಚಾರ ಮಾಳ್ಪುದು ಸಹಜವೇ ಕೇಳಾತ್ಮಘಾತಕವು ॥ ೫೩೦॥

ವೈರಿ ಜಾಗೃತನಾದರವ ಪರಿ- ।
ವಾರಸಹಿತಲೆ ಮೇಲೆ ಬರೆ ಸಂ- ।
ಹಾರಮಾಡದೆ ನಿಲುವನೇನೈ ವೈರ ನಾಧಿಸನೆ ॥
ಧಾರುಣಿಯಲಾತೆರದಿ ತನಗೆ ನಿ- ।
ಹಾರವಾಹಾರಾದಿ ಸರ್ವವು ।
ಸೇರಿಹುವೆ ವಾರ್ದ್ಧಕ್ಯದಲಿ ಮೇಣೇನು ಭರವಸವು ॥೫೩೧॥

[ದುಃಖಾದರ್ಶನಂ] ಮಡದಿ ಮಕ್ಕಳು ಧನ ಕನಕಬಹು- ।
ವೊಡವೆ ವಸ್ತು ಸಮಸ್ತ ಸೌಖ್ಯವು ।
ಯೆಡೆಬಿಡದಲಡಿಗಡಿಗೆ ಹೆಚ್ಚುತ ಬರಲು ಕೌಂತೇಯ ॥
ಪೊಡವಿಯಲಿ ಮದವೇರಿ ಕಣ್ಣಿಗ- ।
ಳೊಡೆದು ಹೋಗಿಹ ಪರಿಯಲಾತನು ।
ಗಡಬಡಿಸುವನು ಮಾತನಾಡಲು ಹೆಮ್ಮೆ ಒರುವುದಲಾ ॥೫೩೨॥

ತರುಣಿಪುತ್ರಾದಿಗಳ ಲೋಕದೊ- ।
ಳರೆಗಳಿಗೆಯಲಿ ತ್ಯಾಗವಾಗಲು ।
ಬರುವುದಗಣಿತ ದುಃಖವೆಂಬುದನರಿಯಲಾರನಲಾ ॥
ನರನೆ ಕೇಳಿಂದ್ರಿಯಕೆ ಸರ್ವಕೆ ।
ನಿರುತ ಸ್ವೈರಾಚರಣ ಕೊಡುವನು ।
ಯಿರುವನಾತನು ವಸುಮತಿಯೊಳಜ್ಞಾನರೂಪನಲಾ ॥೫೩೩॥

ನರನು ಕೇಳಾರುಣ್ಯಭರದಲಿ ।
ಸಿರಿಯ ಮದದುದ್ಬಿನಲಿ ನೋಡೈ ।
ಪರಿಪರಿಯ ವಸ್ತುಗಳ ಸೇವ್ಯಾಸೇವ್ಯ ನೋಡದಲೆ ॥
ಭರದೊಳುಪಭೋಗಿಪನಲಾ ಕಂ- ।
ದೆರೆಯನಲ್ಲಾ ದುಷ್ಪಶಿಷ್ಪವ- ।
ನರಿಯನಲ್ಲಾ ಫಲವನಿವ್ವಾನಿವ್ವಾನಾಗುವ್ರದು ॥ ೫೩೪ ॥

ಮಾಡಲಾರದ ಸಂಗತಿಯ ತಾಂ ।
ಮಾಡಿ ಪಿಡುತಿಹನಾಡಲಾಗದ ।
ಗೂಢತತ್ವವನಾಡಿಸಿಡುವನು ಹೇಳಲೇನದನು ॥
ನೋಡಲಾಗದ ವಸ್ತುಗಳನವ ।
ನೋಡಿ ಪಿಡುವನು ವಿಸ್ತರವ ನಾ- ।
ನಾಡಲಾರೆನು ವಿಧಿನಿಷೇಧವ ನೋಡಲಾರನಲಾ ॥ ೫೩೫ ॥

ಹೋಗಲಾರದ ಸ್ಥಳಕೆ ಹೋಗುತ ।
ಸಾಗಲಾರದ ಕೆಲಸ ಸಾಗಿಸಿ ।
ತ್ಯಾಗಮಾಡುವ ವಿಷಯ ಗ್ರಹಿಸುವನೇನಹೇಳುವೆನು ॥
ಯೋಗ್ಯವಲ್ಲದ ಸಂಗ ಮಾಳ್ಪನು ।
ತ್ಯಾಗ ಮಾಡುವ ಹಾದಿ ಹಿಡಿವನು ।
ಯೋಗ್ಯವಾವುದಯೋಗ್ಯವಾವುದ ನೆನಸನ್ಯೆ ಮನದಿ ॥ ೫೩೬ ॥

ನರನು ಸ್ವೇಚ್ಛಾಚಾರ ಮಾಳ್ಪನು ।
ದುರಿತ ಒರುವುದೊ ಸುಕೃತ ಬರುವುದೊ ।
ಅರಿಯಲಾರನು ಕ್ಷಣಿಕಸುಖವನು ಬಯಸುತಿರುವನಲಾ ॥
ನರಕಯಾತನೆ ಬರುವುದೆಂಬೀ- ।
ಪರಿಯ ಮನದಿ ವಿಚಾರ ಬಾರದು ।
ತಿರುಗಲಾರದು ಮನದಿ ಮುಂದಿನ ಕರ್ಮಫಲವಾಕ ॥ ೫೩೭ ॥

ನರನೆ ಕೇಳೀ ಧರ್ಮಭ್ರಷ್ಟನ ।
ದುರಿತಕಾರಕಸಂಗದಿಂದಲೆ ।
ಬರುವುದೈ ಯಜ್ಞಾನವಿಸ್ತಾರವು ಕಣಾ ಜಗದಿ ॥
ಒರುಬರುತ ಸಂಪರ್ಕದಿಂದಲೆ ।
ನೆರಗ ಹಿಡಿದಾ ಜ್ಞಾನಿವುರುಷರ- ।
ನಿರದೆ ಕೇಳಜ್ಞಾನಪಂಕದಿ ದೂಡಿ ಪಿಡುವುದಲಾ ॥ ೫೩೮ ॥

ಮರಳಿ ನಿನಗಾಂ ಪ್ರೇಮಭಾವದ- ।
ಲರುಹುವೆನು ಅಜ್ಞಾನಲಕ್ಷಣ- ।
ನಿರುವುದೈ ಬಹುಪರಿಯಲಿದು ಜಗದೊಳಗೆ ವಿಸ್ತೃತದಿ ॥
[ಆಸಕ್ತಿಃ] ಅರಳಿರಲು ಹೊಸದಾಗಿ ತಾವರೆ- ।
ಯಿರುವದದರಲಿ ಪ್ರೀತಿ ಭೃಂಗ- ।
ಕ್ಕಿರುವುದಾಪರಿ ಪ್ರೀತಿ ಮನೆಮಾರಿನಲಿ ಮೂಢನಿಗೆ ॥ ೫೩೯ ॥

ಅರಿವೆಮೃತ್ತಿಕೆಗಳಿಗೆ ಸಕ್ಕರೆ ।
ದೊರಕಿರಲು ದೂರಕ್ಕೆ ಹೋಪುವೆ ।
ಯಿರುವುವಲ್ಲಿಯೆ ಸಕ್ಕರೆಯನುಪಭೋಗಿಸುವ ಭರದಿ ॥
ಧರೆಯಲಾಪರಿ ಮೂಢ ತನ್ನಯ ।
ತರುಣಿಯಲ್ಲಾಸಕ್ತನಿರುವನು ।
ಹೊರಗೆಬರುವುದೆ ಕಪ್ಪೆ ನೀರಲಿ ಸುಖದೊಳಿರುವುದಲಾ ॥ ೫೪೦॥

ನೋಣವು ಸಿಂಬಳದಲ್ಲಿ ಕೂತಿರ- ।
ಳೊಣಗಿ ಹೋದರು ಬಿಡುವುದೇನದ ।
ಮನವು ಕೇಳಾತೆರದಿ ಮನೆಮಾರಿನಲಿ ತಂದಿಡಲು ॥
ಕ್ಷಣವದಾದರು ಬಿಡದೆ ಯದರಲಿ ।
ಮನವನಿಡುವವನಜ್ಞನಲ್ಲವೆ ।
ಕೊನೆಗೆ ಸತ್ತರದೇನ ಮುಂದಿನ ಜನ್ಮದಲಿ ವಾರ್ಧ್ಯ ॥೫೪೧॥

ಬರುವನ್ಯೆ ಹಾವಾಗಿ ತನ್ನಯ ।
ಪರಮಪ್ರೇಮದ ಮನೆಯೊಳಿರುವನು ।
ತರುಣಿ ತನ್ನಯ ಪ್ರೇಮವಾತ್ರನನಪ್ಪುವಂದದಲಿ ॥
ಅರಮನೆಗೆ ಸರಿಯಾಗಿ ಗುಡಿಸಲು ।
ನರಿತು ಪ್ರೇಮವ ಮಾಳ್ಪನ್ಯೆ ಮಧು- ।
ಕರಗಳಾಮಧುರಾತಿಯನು ಸಂರಕ್ಷಿಸುವತೆರದಿ ॥ ೫೪೨ ॥

ಒರಲು ಕೇಳ್ವಾರ್ದ್ರಕ್ಯವದರೊಳು ।
ತರಳನೊರ್ವನೆ ಪ್ರೇಮಪಾತ್ರನು ।
ಬಿರಲು ನೋಡಾಮಗನ ತಾಯ್ತಂದೆಗಳು ಪ್ರೀತಿಪರು ॥
ಧರೆಯಲಾಪರಿ ಪ್ರೇಮ ಮನೆಮೇ- ।
ಲಿರುವುದದನಾನೆಂತು ಹೇಳಲಿ ।
ನರನೆ ಕೇಳಾತನು ಕಣಾ ಅಜ್ಞರ ಚಿರೋಮಣಿಯು ॥೫೪೩॥

[ಪುತ್ರಾದಿಷು ಅಭಿಷ್ವಂಗಃ] ತರುಣಿಯಲಿ ಒಲು ಪ್ರೇಮ
ನಿರಿಸನ್ಯೆ ಯನ್ಯತ್ರ ಜಗದೊಳ- । ಪಿರಿಸುವ- ।
ಗಿರುವುದೊಂದೇ ಸ್ತ್ರೀಯೆನುತ ತನುಮನವನರ್ಪಿಸುವ ॥
ಬರುವ ಕಾರಣವೇನು ಜಗದ- ।
ಲ್ಲಿರುವುದೇನ್ ವುರುವಾರ್ಥ ಜೀವದಿ ।
ತರುಣಿಲಂಪಟನರಿಯನಲ್ಲಾ ಮೂಢನಜ್ಞ ನಿಜ ॥ ೫೪೪ ॥

ಸಿದ್ಧಸತ್ಪುರುಷನಿಗೆ ಚಿತ್ತವು ।
ಶುದ್ಧಬ್ರಹ್ಮದಿ ಲೀನವಾಗಲು ।
ಒದ್ದನಾಗನು ಸರ್ವವ್ಯವಹಾರದಲಿ ಜಗದೊಳವ ॥
ಒಗ್ಗಚಿತ್ತನು ಸ್ತ್ರೀಯೊಳಾಗಲು ।
ಶುದ್ಧನಿರ್ಲಜ್ಜಾತ್ಮನಾತಗೆ ।
ಸದ್ದುಗೊಡವೆಯೆ ಬಿರದು ಲಾಭಾದಿಕವು ಮೊದಲಿರದು
॥ ೫೪೫ ॥

ನರನೆ ಕೇಳ್ಗಾರುಡಿಯ ಕೈಯೊಳ- ।
ಗಿರುವ ಹಗ್ಗವು ಕುಣಿಸಿದೋಲ್ ವಾ- ।
ನರವು ಕುಣಿವುದು ಪೆಟ್ಟ ಭಯದಿಂದಲಿ ಕಣಾ ತಿಳಿಯೆ ॥

ತರುಣಿಯೂಪರು ಕುಣಿಸಿದಂದದಿ ।
ಭರದಿ ಕುಣಿವನು ಸ್ತ್ರೈಣನಲ್ಲವೆ ।
ತರುಣಿ ಮೂಗಿಗೆ ದೋರವನು ಹಾಕಿಹಳು ನೋಡಿದಿಯಾ
॥ ೫೪೬ ॥

ದುಷ್ಟಕೃಪಣನು ತನ್ನ ದೇಹಕೆ ।
ಕಷ್ಟದಾಯಾಸಗಳ ಕೊಡುತಲೆ ।
ಬಿಟ್ಟಮಿತ್ರರ ಗೋಣ ಮುರಿಯುತ ದ್ರವ್ಯಸಂಚಯವ ॥
ಕಷ್ಟದಿಂ ಮಾಡುವನು ತಾಂ ರಸೆ- ।
ಯಷ್ಟು ದಾನವ ಮಾಡನ್ಯೆ ಮೇಣ್ ।
ಕಷ್ಟವನ್ನತಿಶಯದಿ ಕೊಡುತಿಹನಾಪ್ತನೆಂಟರಿಗೆ ॥ ೫೪೭ ॥

ಪರಿಯಿದಾದರು ತರುಣಿ ಹೇಳಿದ ।
ತೆರದಿ ಕುಣಿವನು ವಿಷಯದಿಚ್ಛೆಯ- ।
ನರೆಗಳಿಗೆಯಾದರು ಕಣಾ ಒಂಧಿಸನು ಸ್ತ್ರೀಯೊಡನೆ ॥
ನರನೆ ಕೇಳಾದ್ರವ್ಯಸಂಚಯ ।
ಪರಿಯ ಪೇಳ್ವೆನು ಹೀಗೆ ವಂಚಿಸು- ।
ತಿರುವನೆನುತಲಿ ನಿನಗೆ ಕೇಳ್ದೆ ಲಕ್ಷಪೂರ್ವಕದಿ ॥ ೫೪೮ ॥

ಮರೆವನ್ಯೆ ಯಾರಾಧ್ಯದೈವತ ।
ಗುರುವ ಸಹಿಮಾತಿಸಲಿ ವಂಚಿಸಿ ।
ಹಿರಿಯ ತಾಯ್ತಂದೆಗಳ ಪೇಳ್ವನು ಹಣಾಪ ಯಲ್ಲಿಸುತ ॥
ತರುಣಿ ಮಾತ್ರವೆ ಹೇಳಿದಂದದಿ ।
ತರುವನ್ಯೆ ಭೋಗಾರ್ಥ ವಸ್ತುವ- ।
ನರೆಗಳಿಗೆಯಾದರು ವಿಲಂಬವ ಮಾಡಲಾರನಲಾ ॥ ೫೪೯ ॥

ಭಕ್ತಸೇಕಾಗ್ರದಲಿ ಭವಿಪನು ।
ಚಿತ್ತದಲಿ ನ್ವಾರಾಧ್ಯದೈವತ ।
ಸ್ವಸ್ಥಚಿತ್ತದಿ ಸ್ತ್ರೀಯನಾತೆರದಲ್ಲಿ ಭವಿಪನಲಾ ॥
ಉತ್ತಸೋತ್ತನುವೌಲ್ಯಪಿರುತಿಹ- ।
ವಸ್ತುಗಳ ಸ್ತ್ರೀಗಾಗಿ ತರುವನು ।
ಮತ್ತಿತರಿಂಗೇನ ಕೊಡುವನು ಹೊಟ್ಟಿಗೋಸುಗವೆ ॥ ೫೫೦ ॥

ತರುಣಿಯಲಿ ಪರ ಸಹಜ ದೃಷ್ಟಿಯ- ।
ನಿರಿಸಲವನಿಗೆ ಸಿಟ್ಟು ಬರುವುದು ।
ತರುಣಿಯಾಜ್ಞೆಯ ಜೀರೆ ವರ್ತನ ಯಾರು ಮಾಡಿದರೆ ॥
ಮರುಗುವನು ಕಲ್ಪಾಂತ ಒಂದಿಹ ।
ತೆರದಿ ನೋಡಾನಾಗಶಪಥವ ।
ನರರು ಮುರಿಯರು ನಾಗಪಿಜ್ಜಿಯ ಭೀತಿಯಲಿ ವಾರ್ಧ್ಯ ॥೫೫೧॥

ಧರೆಯಲಾಪರಿ ಸ್ತ್ರೀಯ ಭೀತಿಯ- ।
ಲಿರದೆ ಸ್ತ್ರೀಮುಖಶಬ್ದ ಝೇಲಿಪ- ।
ನರರೆ ಮೂಢಗೆ ಸ್ತ್ರೀಯೆ ದೈವತ ಲೋಕದಲಿ ಪಾರ್ಥ ॥
ತರುಣಿ ಪ್ರೇಮದ ಪಾತ್ರಳಾಗಲು ।
ತರುಣಿಯಲಿ ಹುಟ್ಟಿರ್ದ ಮಕ್ಕಳು।
ಯಿರುವರತಿಶಯ ಪ್ರೇಮಪಾತ್ರರು ನೋಡು ಕೌಂತೇಯ
॥ ೫೫೨ ॥

ತರುಣಿಗಿರುತಿಹ ನೆಂಟರಿಷ್ಟರು ।
ಯಿರುವರವನಿಗೆ ಪ್ರೇಮಪಾತ್ರರು ।
ಪೆರೆವನ್ಯೆ ಸ್ತ್ರೀಲಂಪಟನೆ ಯಜ್ಞಾನಮೂರುತಿಯು ॥
[ಅಸಮಚಿತ್ತತ್ವಂ] ಶರಧಿಯತ್ಯುದ್ರೇಕ ಧರಿಸಲು ।
ತೆರೆಗಳೇಳ್ವವು ಗಿರಿಗಳಂದದಿ ।
ಶರಧಿಯಲಿ ಸಿಕ್ಕಿರ್ದ ನಾಕೆಯು ಕುಣಿವುದಾತೆರದಿ ॥೫೫೩॥

ಅಪ್ಪವಸ್ತುವ ದೊರಕಿರಲು ಸಂ- ।
ತುಷ್ಟಿಯಿಂ ಸುಖಪಿಪಿರಕೇರ್ವನ- ।
ನಿಷ್ಟವಸ್ತುವು ಸಿಗಲು ದುಃಖಿಪೊಳ್ಪಳಿಸುವನಲಾ ॥
ಶಿಷ್ಟರಲ್ಲಿ ಶಿರೋಮಣಿಯೆ ನಿನ- ।
ಗೆಷ್ಟು ಹೇಳಲಿ ಕೇಳು ಯೊಪರಿ ।
ಯಿಷ್ಟಲಾಭಾಲಾಭಚಿಂತೆಗೆ ಮೂಲವಜ್ಞಾನ ॥ ೫೫೪ ॥

[ವ್ಯಭಿಚಾರಿಣೀ ಭಕ್ತಿಃ] ನರನು ಮಾಡುತಲೆನ್ನ ಭಕ್ತಿ
ಧರಿಸುವನು ಫಲದಿಚ್ಛೆಮನದಲಿ । ಯ ।
ಹೊರಗೆ ಒಹಳ ವಿರಕ್ತಿ ತೋರಿಪನೇನ ಹೇಳುವೆನು ॥
ಧರಿಸುವನು ಮನದೊಳಗೆ ವಿತ್ತದ ।
ಪರಮವಾಶಾಪಾಶವಿಲ್ಲವ ।
ತರುಣಿ ತಾಂ ವ್ಯಭಿಚಾರಿ ನಿಜಪತಿಯೊಡನೆ ಪ್ರೇಮವನು
॥ ೫೫೫ ॥

ಹೊರಗೆ ತೋರಿಸುಹೊಳಗಿನಿಂದಲೆ ।
ಪರರ ಮೇಲೆಯೆ ತನ್ನ ಪ್ರೇಮವ- ।
ನಿರಿಸುಮಳು ಹಗಲಿರುಳು ಪಾರ್ಥನೆ ಗುಟ್ಟ ನೋಡಿದರೆ ॥
ಹೊರಗೆ ಪ್ರೇಮವನೆನ್ನ ಮೇಲವ- ।
ನಿರಿಸುತೊಳಗೀ ವಿಷಯಸುಖದ- ।
ಲ್ಲಿರಿಸುವನು ಪ್ರೇಮವನು ಹೊರಗೊಳಗೊಂದು ಪರಿಯಲ್ಲೈ
॥ ೫೫೬ ॥

ವಿಷಯಸುಖಕೋಸುಗವೆ ಯೆನ್ನ- ।
ಲ್ಲಿಸಗುವನು ಭಕ್ತಿಯನು ಕೇಳೀ- ।
ವಿಷಯಸುಖ ಕೈ ಬಿಡಲು ಭಕ್ತಿಯ ಬಿಟ್ಟು ಬಿಡುವನಲಾ ॥

ಉಸುರುವನಲಾ ವ್ಯರ್ಥನೀಶ್ವರ ।
ಒಸವಳಿದು ಬೈಯುವನು ಯೆನ್ನನು ।
ವಸುಮತಿಯಲ್ಲೀಪರಿಯ ಭಕ್ತನನೆಂತು ವರ್ಣಿಸಲಿ ॥ ೫೫೭ ॥

ಹಲವು ಹೊಲಗಳ ಮಾಳ್ಪನ್ಯೆ ಯೊ- ।
ಕ್ಕಲಿಗನಾಪರಿ ದೇವದೇವೀ- ।
ಕುಲವನವ ಪೂಜಿಪನು ಫಲದಿಚ್ಛೆಯಲಿ ಕೌಂತೇಯ ॥
ಗಳಿಗೆಗಳಿಗೆಗೆ ದೇವದೇವತೆ- ।
ಗಳನು ಹಿಡಿವನು ಬಿಟ್ಟು ಜಿಡುವನು ।
ಫಲವ ಕೊಡದಿಹ ದೇವರನು ಬೈಯುವನು ಸತಿಯೆನುತ ॥೫೫೮॥

ಹೊರಗೆ ಒಹುಪರಿ ಘಾಟಮಾಟದೊ- ।
ಳಿರುವನಾರೆಂದೆನುತ ನೋಡುತ ।
ಗುರುವನಾತನು ಹಿಡಿದು ಗುರುಮಂತ್ರವನು ಕೊಳ್ಳುವನು ॥
ಅರುವುದವಗನ್ಯರಲಿ ಸಿಟ್ಟೀ ।
ಯಿರುವೆವನ್ಯಪ್ರಾಣಿಮಾತ್ರದಿ ।
ವಿರಸಬಹುಲತಿರಸ್ಕೃತಿಯು ಬಹುಕಠಿನಶಬ್ದಗಳೂ ॥ ೫೫೯ ॥

ಕಲ್ಲು ಪಾಷಾಣದಲಿ ಮೂರ್ತಿಯ- ।
ನೆಲ್ಲಮಾಡುತ ಭಕ್ತಿಪೂರ್ವಕ- ।
ವಿಲ್ಲದಲೆ ಪೂಜೆಯನು ಮಾಳ್ಪನು ಫಲದೊಳಾಲೆಯಲಿ ॥
ಮೆಲ್ಲನೆನ್ನಯ ಮೂರ್ತಿ ಮಾಡುತ ।
ನಿಲ್ಲಿಸುವನ್ಯೆ ಕೋಟಿಮೊಲೆಗೆ ।
ಮೆಲ್ಲನವನಾಬಳಿಕ ತಿರುಗುವ ಪರರ ಜಾತ್ರೆಯಲಿ ॥ ೫೬೦ ॥

ಅರುಳು ಹಗಲೆನ್ನನ್ನು ಪೂಜಿಪ ।
ಮರಳಿ ಕುಲದೇವತೆಯ ಪೂಜಿಸಿ ।
ದೊರೆಯುವರೆ ಸಂಪತ್ತು ನಿತ್ಯದಿ ಹರಕೆಗಳ ಮಾಳ್ಪ ॥
ಬರಲು ಪರ್ವಣಿ ಬೇರೆ ದೇವರ ।
ಭರದಿ ಪೂಜೆಯು ಮಾಳ್ಪನಾತನು ।
ಯಿರುವೆನಾದರು ಮನೆಯೊಳನ್ಯರ ಹರಸಿ ಹಾಡುವನು ॥ ೫೬೧ ॥

ಪಿತರರನು ಪೂಜಿಪನು ಶ್ರದ್ಧದ ।
ತಿಥಿಯು ದಿನವೇಕಾದಶಿಯ ದಿನ ।
ವ್ರತವ ಕೈಕೊಂಡಿಹನು ಭಕ್ತ್ಯೆಯಲೆನ್ನ ಭಜಿಸುವನು ॥
ತಿಥಿಯು ಪಂಚಮಿ ಬರಲು ನಾಗನ- ।
ಗತಿಭಕುತಿಯಲಿ ಪೂಜಿಪನು ಗಣ- ।
ಪತಿಯ ಪೂಜಿಪನಾತೆರದಿ ಗಣಪನ ಚತುರ್ಥಿಯಲಿ ॥ ೫೬೨ ॥

ಮರಳಿ ಬರಲು ಚತುರ್ದಶಿಯ ದಿನ- ।
ನಿನ್ನದೆ ದೇವಿಯ ಪೂಜೆ ಮಾಡುತ- ।
ಲಿರುವೆ ನಿನ್ನಯ ದಾಸ ಬೊರೆ ಜಗದಂಬ ಯೆನ್ನುವನು ॥
ತೊರೆದು ದಿನದಾಹ್ನಿಕವನೆಲ್ಲವ ।
ನಿರುತವೊಂದೇ ಸ್ಥಳದಿ ಹತದಲಿ ।
ನಿರಟಿಸುವ ನವಚಂಡಿವಾಶವನಾಶ್ವಿನದಿ ಪಾರ್ಥ ॥ ೫೬೩ ॥

ಬಂದರಾರನಿವಾರವೈ ಬಹು- ।
ಚಂದದಿಂದಲಿ ಭೈರವಗೆ ನಲ- ।
ವಿಂದ ಬಿಚ್ಚಡಿ ತಂದು ನೈವೇದ್ಯವನು ಮಾಡುವನು ॥'
ಇಂದುವಾರದಿ ಬಿಲ್ವದಳಗಳ- ।
ನಿಂದುಶೇಖರಗರ್ಪಿಸುವನೈ ।
ಮುಂದೆ ಕೇಳೀತೆರದಿ ಪರಿಪರಿದೇವತೆಯ ಭಟಿಪ ॥ ೫೬೪ ॥

ಊರೊಳಿಹ ವೇಶ್ಯಾಂಗನೆಯು ನಿಜ ।
ಮೋರೆ ಸುಂದರವೆಲ್ಲಿಜನರಿಗೆ ।
ತೋರಿಸುತ ಮಾಳ್ಪಳು ಕಣಾ ಚಿತ್ತಕ್ಕೆ ರಂಜನವ ॥
ಧಾರುಣಿಯಲಾತೆರದಿ ರಂಜನ- ।
ಕಾರಿಯಿಹ ವಿಷಯಗಳ ಪ್ರಾಪ್ತಿಗೆ ।
ಭೂರಿವಿಧದೈವತಗಳನ್ನಾಗಾಗ ಪೂಜಿಪನು ॥ ೫೬೫ ॥

ಪರಿಪರಿಯ ದೈವತಗಳನ್ನೀ- ।
ತೆರದಿ ಪೂಜಿಸಿ ತಿರುಗುವಾತನು ।
ಧರೆಯೊಳಜ್ಞಾನಾವತಾರವೆನುತ್ತ ನೀ ನಂಬು ॥
[ಅವಿವಿಕ್ತದೇಶಸೇವಿತ್ವಂ] ಪರಿಪರಿಯ ಯೇಕಾಂತತಳ
ವರತಪೋವನತೀರ್ಥತಟಗಳ- । ಗಳ ।
ನಿರದೆ ನೋಡುತ ತನ್ನ ಚಿತ್ತವ ಮಲಿನಮಾಡುವನು ॥೫೬೬॥

[ಜನಸಂಸದಿ ರತಿಃ] ಇರುವನವನಜ್ಞಾನಮೂರ್ತಿಯು ।
ಪರಮಪುರಪಟ್ಟಣದೊಳಿರುವುದು ।
ನರರ ಪುಷ್ಕಳವಸ್ತಿಯಿರುವಾಸ್ಥಳದಿ ವಾಸಿಪುದು ॥
ಮರಳಿ ಜನಸಮುದಾಯದಲ್ಲಿಯೆ ।
ಪರಿಪರಿಯ ವಿಷಯಗಳ ಪೇಳುವ- ।
ದಿರುವುದಾರಿಗೆ ಸೌಖ್ಯವವನಜ್ಞಾನಮೂರುತಿಯು ॥ ೫೬೭ ॥

[ಅಧ್ಯಾತ್ಮಜ್ಞಾನನಿತ್ಯತ್ವಾಭಾವಃ] ನರನೆ ಕೇಳಧ್ಯಾತ್ಮ
ಭರದಿ ಕವಿಯಲಿ ಬಂದು ಬೇಗಲು । ವಿದ್ಯೆಯು ।
ಒರೆದೆ ಕೇಳವ ಧಿಕ್ಕರಿಸುವನು ಮಾಳ್ಪನುಪಹಾಸ ॥

ತೊರೆವನುಪನಿಷದಗಳನೆಲ್ಲವ- ।
ನರಿಯಲಾರನು ಯೋಗಶಾಸ್ತ್ರವ ।
ತಿರುಗಿಸನು ದೃಷ್ಟಿಯನು ಕೇಳಧ್ಯಾತ್ಮತತ್ತ್ವದಲಿ ॥ ೫೬೮ ॥

ಬುದ್ಧಿಯಾತ್ಮಾನಾತ್ಮತತ್ತ್ವದ ।
ಶುದ್ಧಗುಹ್ಯವ ತಿಳಿಯಲೆತ್ನಿಸೆ ।
ಬುದ್ಧಿಯನ್ನೆರಡನೆಯ ವಿಷಯದಿ ಒಲದಲೆಳೆಯುವನು ॥
ಬದ್ಧಕಂಕಣ ಕರ್ಮಕಾಂಡದೊ- ।
ಳೆದ್ದು ಸರ್ವವನರಿವನಾತನು ।
ಯಿದ್ದ ನಿಖಿಲಪುರಾಣಗಳನರಿತಿಹನು ಸಂಪೂರ್ಣ ॥ ೫೬೯ ॥

ಇರುವನೈ ದೈವಜ್ಞ ಜೋಯಿಸ- ।
ನರಿವನೈ ಭೂತವ ಭವಿಷ್ಯವ ।
ಬರುವುದೈ ವಾಕ್ಸಿದ್ಧಿ ಪ್ರಶ್ನೋತ್ತರದಿ ನಿಪುಣನಲಾ ॥
ಇರುವನೈ ಕಲೆಗಳಲಿ ಸುಕುಶಲ- ।
ನರಿವನಲ್ಲೈ ವಾಕಶಾಸ್ತ್ರವ ।
ಕರತಲಾಮಲಕಗಳು ಚಾರಣಮಾರಣಾದಿಗಳು ॥ ೫೭೦ ॥

ನರನೆ ಕೇಳೈ ಕಾಮಶಾಸ್ತ್ರದೊ- ।
ಳಿರುವನೈ ಮರ್ಮಜ್ಞನಾತನು ।
ನರಸಕಥೆಯನು ಭಾರತದ ಸರಿ ವಿಸ್ತರಿಸುವನವ ॥
ಕರಗಳನು ಜೋಡಿಸುತ ಶಾಸ್ತ್ರಗ- ।
ಳಿರುವುವೈ ಕಿಂಕರರ ಪರಿಯ- ।
ಲ್ಲರಿವನಾತನು ನೀತಿವೈದ್ಯನ್ಯಾಯಶಾಸ್ತ್ರಗಳ ॥ ೫೭೧ ॥

ನೋಡಿದರೆ ನಾಟಕದಿ ಕಾವ್ಯದಿ ।
ಜೋಡಿಯನು ನಾ ಕಾಣೆನಾತಗೆ ।
ಮಾಡುವನು ಸ್ಮೃತಿಚರ್ಚೆ ಗಾರುಡಿಮಂತ್ರವಿದ್ಯೆ ಸಹ ॥
ಮಾಡುವನು ಕೋಶವನು ವೇದದ ।
ಗೂಢಶಬ್ದಾರ್ಥಗಳ ಸ್ಪಷ್ಟದಿ- ।
ನಾಡಲೇನದ ವ್ಯಾಕರಣವದು ಕಾಲನೊತ್ತುವುದು ॥ ೫೭೨ ॥

ಇರುವನತಿನಿಷ್ಣಾತ ತರ್ಕದಿ ।
ಪರಿಪರಿಯಲವ ಶಾಸ್ತ್ರನಿಪುಣನು ।
ಕುರುಡನೊಂದೇವಿಷಯದಲ್ಲ ಧ್ಯಾತ್ಮವಿದ್ಯೆಯಲಿ ॥
ಇರುವುದೇನುಪಯೋಗವಾತನ ।
ನರನೆ ಸುಡು ಸುಡು ಕುಶಲತೆಯನೀ- ।
ಪರಿಯ ಜ್ಞಾನವು ಜ್ಞಾನವೇನದು ವ್ಯರ್ಥ ಕಲಿಪಾರ್ಥ ॥ ೫೭೩ ॥

ಮೂಲನಕ್ಷತ್ರದಲಿ ಹು'ಟ್ಟಿದ ।
ಬಾಲನತಿಸುಂದರನು ನೋಡಲು ।
ಹಾಳಮಾಳ್ಪುದು ಕುಲವನೆಲ್ಲವ ಸುಡುಸುಡಾ ಮಗುವ ॥
ಏಳುವುವು ನವಿಲಿಂಗೆ ಮೈಗೆ ಮಿ ।
ಶಾಲ ಕಣ್ಣುಗಳುಳ್ಳ ಗರಿಗಳು ।
ಹೇಳು ಹೇಳೆನಗವುಗಳಂ ನೋಡೋಣವಾದೀಶೆ ॥೫೭೪॥

ಸತ್ತ ಮನುಜಗೆ ಜೀವದಾನವ ।
ನಿತ್ತು ಪುನರುಜ್ಜೀವಿಸುವ ಪಟು ।
ವಸ್ತು ಪರಮಾಣುವಿನ ಮಾನದಲಿದ್ದರೇನಾಯ್ತು ॥
ಮತ್ತುಳಿದ ವಸ್ತುಗಳು ಸರ್ವವ ।
ವ್ಯರ್ಥವಲ್ಲವೆ ಶಕಟಭಾರವು ।
ಪಾರ್ಥ ಕೇಳಾತೆರದಲಿಹುದಾಕುರಲತೆಯು ಪಾರ್ಥ ॥೫೭೫॥

ನರನು ಕೇಳುತ್ತಮಸುಲಕ್ಷಣ-।
ನಿರಲು ಫಲವೇನಾಯುಷಿಲ್ಲದೆ ।
ಶಿರನೆ ಯಿರದಿರೆ ಮಕುಟನೆಲ್ಲೇರಿಸುವುದೈ ಪಾರ್ಥ ॥
ವರವಧುಗಳೆಲ್ಲದಿರೆ ಮತ್ತಾ- ।
ಮೆರೆವಣಿಗೆಯಲಿ ಶೋಭೆ ತೋರ್ಪುದೆ ।
ಯಿರುವುದೆಲ್ಲ ವ್ಯರ್ಥ ಕೇಳಧ್ಯಾತ್ಮವಿಲ್ಲದಿರೆ ॥ ೫೭೬ ॥

ನರನೆ ಕೇಳಧ್ಯಾತ್ಮವಿದ್ಯೆಯು ।
ಹೊರತು ನರ ಶತಮೂರ್ಖನಲ್ಲನೆ ।
ಯಿರುವುದಾತನ ದೇಹವಜ್ಞಾನಕ್ಕೆ ಬೀಜವದು ॥
ಮೆರೆವುದೈ ಪಾಂಡಿತ್ಯವಲ್ಲಿಯು ।
ಯಿರುವುದಾತನ ಪುಣ್ಯಕರ್ಮಾ- ।
ಚರಣವಜ್ಞಾನಕ್ಕೆ ಬಂದಿಹ ಫಲವು ನೋಡಿದಿಯಾ ॥೫೭೭॥

[ತತ್ತ್ವಜ್ಞಾನಾರ್ಥದರ್ಶನಾಭಾವಃ]

ನರನೆ ಕೇಳಧ್ಯಾತ್ಮವಿದ್ಯೆಯೊ- ।
ಳರದೆ ಶ್ರದ್ಧೆಯು ಬೇರೆ ಶಾಸ್ತ್ರದೊ- ।
ಳಿರಲು ಸತ್ಫಲವನಿಗುಂಟೀ ಹೇಳ ಬೇಕಿಲ್ಲ ॥
ಬರುತ ನದಿ ಪಾಟದಲೆ ಯಿಚೆಯೊ ।
ಳಿರುವ ತೀರವ ನೋಡಿ ಹಿಂದಕೆ ।
ತಿರುಗಲಾತನಿಗೆರಡನೆಯ ನದಿತೀರ ದೊರೆಯುವುದೆ ॥೫೭೮॥

ಪಾರ್ಥ ಮನೆಯಲಿ ನುಗ್ಗಲಿತ್ಥಿಪ ।
ಧೂರ್ತ ಚೋರನ ಹಿಡಿದು ಮನೆಯಾ- ।
ಹೊಸ್ತಿಲದಿ ನೂಡಲು ಶಿರಶ್ಛೇದನವು ಒಡ್ಡಲಲಿ ॥

ಅರ್ಧವೊಳಗಿಹುದೇನೆನುತ್ತಲಿ ।
ಗೊತ್ತ ಹಚ್ಚುವ ಪರಿಯದೆಂತೈ ।
ಗೊತ್ತಿರದಲಧಾತ್ಮವಿದ್ಯೆಯು ತತ್ತ್ವ ತಿಳಿಯುವುದೆ ॥ ೫೭೯ ॥

ನರನೆ ಕೇಳೀ ತೆರದಿ ಮಾನವ ।
ನಿರದಲಾ ತತ್ತ್ವಾರ್ಥಬೋಧವು ।
ಅರುಹಬೇಕೇ ನಿನಗೆ ಕವಡಿಗಳಟ್ಟಿ ಲೆಕ್ಕದಲಿ ॥
ಗರುಭವತಿಗೀಡಿದೊಡೆ ಭೋಜನ ।
ಬರುವುದೈ ಸಂಕೃಷ್ಟಿ ಗರ್ಭಕೆ ।
ಧರೆಯಲಾಪರಿ ಗರ್ಭವತಿಯಧ್ಯಾತ್ಮವಿದ್ಯೆಯಲಾ ॥ ೫೮೦ ॥

ನರನೆ ಮಿಂದಕೆ ಜ್ಞಾನಲಕ್ಷಣ ।
ಪರಿಪರಿಯಲಾ ನಿನಗೆ ಒಹುಮಿ ।
ಸ್ತರದಿ ಪೇಳ್ದೆನು ತದ್ವಿರುದ್ಧದ ಲಕ್ಷಣಗಳೆಲ್ಲ ॥
ಇರುವುದೈ ಯಜ್ಞಾನವೆಂಬುದು ।
ಕುರುಡನಿಗೆ ಭೋಜನಕೆ ಕರೆಯಲು ।
ಕರೆಯ ಬೇಕೈ ಕುರುಡನಿಂಗಿಹ ಹಸ್ತಕನ ಕೂಡ ॥ ೫೮೧ ॥

ಜ್ಞಾನಲಕ್ಷಣಗಳನು ಹೇಳಲು ।
ಹೀನತರವಜ್ಞಾನಲಕ್ಷಣ ।
ಮಾನಸದಿ ಒರುತಿಹುವು ನೋಡಾಗಂತುಕರ ತೆರದಿ ॥
ನಾನು ಕೇಳ್ ಹದಿನೆಂಟುಲಕ್ಷಣ ।
ನಾನುರಾಗದಿ ಪೇಳ್ದೆನಿಲ್ಲಿನ- ।
ಮಾನಿತೆಯು ಹಿಡಿದಿಲ್ಲ ನೆನಪಿಸುದಲ್ಲನೇ ನಿನಗೆ ॥ ೫೮೨ ॥

ಇರುವುವೇನು ವಿರುದ್ಧವಕಾ- ।
ಪರಿಯಲಿಹುವಜ್ಞಾನಲಕ್ಷಣ- ।
ವಿರುವುವದ ನಿದ್ಧಾಂತ ನಿಸ್ಪೃಹದಿಂದ ಪೇಳಿದೆನು ॥
ತರಿಯೂ ಹನ್ನೊಂದನೆಯು ಶ್ಲೋಕದ- ।
ಲರುಹಿದನು ತಾನುತ್ತರಾರ್ಧದಿ ।
ಯಿರುವುದೈ ಯಜ್ಞಾನ ಜ್ಞಾನವಿರುದ್ಧಲಕ್ಷಣದಿ ॥ ೫೮೩ ॥

ಹರಿಯು ಸಂಕ್ಷೇಪದಲಿ ಪೇಳ್ದುದ- ।
ನರಿವ ಪರಿಯಲಿ ವಿಸ್ತರದಲಾ ।
ನರುಹಿದೆನು ನಿಮಗದನು ಕನ್ನಡಭಾಷೆಯಲಿ ನಾನು ॥
ಒರೆದೆ ಕ್ಷೀರದಿ ನೀರನೆರೆದರೆ ।
ಸುರಸವಹುದೇ ಜಿಹ್ವೆಗಾನೀ- ।
ರೆರೆದ ಕ್ಷೀರವ ಮೆಚ್ಚುವರೆ ಪಂಡಿತರು ಹಂಸಗಳೆ ॥ ೫೮೪ ॥

ಅರಿಯುತೀ ಸಿದ್ಧಾಂತತತ್ತ್ವವ ।
ಹರಿಯ ವಚನಾಮೃತಕೆ ಯೆನ್ನಯ ।
ನಿರಸಶಬ್ದವ ಕೂಡಿಸದೆ ಪೇಳಿದೆನು ಗೀತಾರ್ಥ ॥
ಹರಿಯ ಬಾಯಿಂ ಬಂದ ಶಬ್ದ- ।
ಕ್ಷರವನೊಂದನು ಕಡಿಮೆ ಮಾಡದೆ ।
ಯರುಹಿದೆನು ಪಂಡಿತರು ಮೆಚ್ಚುವ ತೆರದಿ ಗೀತಾರ್ಥ
॥ ೫೮೫ ॥

ಜ್ಞಾನರಾಜನ ನುಡಿಯಿನೀಪರಿ ।
ನಾನುರಾಗದಿ ಶ್ರೋತೃವೃಂದವ ।
ಮಾನಿಸುತ ತಲೆದೂಗಿ ಪೇಳಿತು ಹರ್ಷನಿರ್ಭರದಿ ॥
ಜ್ಞಾನರಾಜನೆ ಖಾತಕೀಪರಿ ।
ದೀನವಾಣಿಯ ಪೇಳ್ದೆ ಯೆಮ್ಮ- ।
ಲ್ಲೀನು ನಿನ್ನಪರಾಧ ನಿನಗೀತಂಕೆ ಯೇಕೆನ್ನ ॥ ೫೮೬ ॥

ಜ್ಞಾನವಿಹುದೈ ಕಾವ್ಯಶೋಷಕ ।
ಜ್ಞಾನರಾಜನು ನೀನು ಕವಿಗಳೊ- ।
ಳಾನೆ ಕವಿಕುಲತಿಲಕ ನಿನಗಿದು ಸರಿಯೆ ಪರಿಹಾರ ॥
ಶ್ರೀನಿವಾಸನು ಗುಪ್ತವಿಟ್ಟಹ ।
ಸಾನುರಾಗದ ವಾಕ್ಯನೆಲ್ಲವ ।
ನೀನು ಸ್ಪಷ್ಟೋಕ್ತಿಯಲಿ ಪೇಳೆಂದಾಜ್ಞೆಯಿತ್ತನಲಾ ॥ ೫೮೭ ॥

ಅರುಹಿದಿ ಯಲಾ ಹರಿಮನೋಗತ- ।
ವಿರದೆ ಸ್ಪಷ್ಟೀಕರಿಸಿ ಯೆಂದೀ- ।
ತೆರದಿ ನಾವರುಹಿದರೆ ನಿನಗದು ಯೋಗ್ಯವೆನಿಸದಲಾ ॥

ತೊರೆದು ನಾವಾವಿಷಯನೆಲ್ಲವ ।
ಮುರಳಿ ಬಿನ್ನನಿಸುವೆವು ಸಾಕದು ।
ದೊರಕಿತೆಮಗೀ ಜ್ಞಾನನೌಕೆಯು ಶ್ರವಣಸುಖರೂಪ ॥ ೫೮೮ ॥

ಹರುಷವಾಂತ್ಯೈ ಮನದೊಳೆಮ್ಮಯ ।
ಮುರಳಿ ಶ್ರೀಗೋಪಾಲಕೃಷ್ಣನು ।
ನರನಿಗರುಹಿದ ಗೀತೆಯರ್ಥವ ಪೇಳು ಪೇಳೆನುತ ॥
ಹರುಷನಿರ್ಭರದಿಂದ ಸಂತರು ।
ಮುರಳಿ ಜ್ಞಾನೇಶನಿಗೆ ಪೇಳ್ದರು ।
ಹರುಷದಿಂ ಜ್ಞಾನೇಶನೀಪರಿ ಪೇಳ ತೊಡಗಿದನು ॥ ೫೮೯ ॥

ನರನೆ ನಾನಜ್ಞಾನಲಕ್ಷಣ- ।
ವರುಹಿದೆನು ನಿನಗೀಗ ನೀನದ- ।
ಕಿರದೆ ದೌರ್ಬಲ್ಯವನು ಮಾಡುತ ಜ್ಞಾನ ದೊರಕಿಸಲಾ ॥
ದೊರೆಯ ಬೇಕಾ ಜ್ಞಾನವೆಂದೇ ।
ಧರಿಸು ನಿರ್ಧಾರವನು ಮನದಲಿ ।
ಬರಲು ನೋಡಾಜ್ಞಾನ ಜ್ಞೇಯದ ವ್ಯಾಪ್ತಿಯಾಗುವುದು ॥ ೫೯೦ ॥

ನರನು ಕೇಳ್ದಿದ ಹರಿಯ ವಚನವ ।
ಧರಿಸಿದನು ನಿರ್ಧಾರ ಮನದ- ।
ಲ್ಲಿನಿತನೈ ಶ್ರೀಕೃಷ್ಣ ಪಾರ್ಥನ ಮನದ ಒಯ್ಯಕೆಯನು ॥
ನರನೆ ಕೇಳ್ಲೆ ನಿನ್ನ ಭಾವವ ।
ನರಿತೆ ನಿನಗಾ ಜ್ಞೇಯಲಕ್ಷಣ- ।
ವರುಹುವೆನು ನಾನೆಂದು ಪೇಳ್ದನು ಹರಿಯು ಸರ್ವಜ್ಞ ॥ ೫೯೧ ॥

ಜ್ಞೇಯಂ ಯತ್ತತ್ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥ ೧೨ ॥

ನರನೆ ನೋಡೈ ಜ್ಞೇಯವೆಂಬುವ- ।
ದಿರುವುದೈ ಪರಮಾತ್ಮವಸ್ತುವ ।
ಕರೆವರಿದ ಕೋವಿದರು ಜ್ಞೇಯನೆನುತ್ತ ಲೋಕದಲಿ ॥
ಅರುಹುವೆನು ಕಾರಣವ ಜ್ಞಾನದ ।
ಹೊರತು ಕೇಳನ್ಯಪ್ರಕಾರದಿ ।
ದೊರೆಯದೀ ಪರಮಾತ್ಮವಸ್ತುವ ಜೀರೆಸಾಧನದಿ ॥ ೫೯೨ ॥

ಅರಿಯಲೀಪರತತ್ತ್ವ ಕದನಂ ।
ತರ ಮುಮುಕ್ಷುಗೆ ದೊರೆವುದೆಲ್ಲವ ।
ಸಿರದಲಾ ಮೇಲೆನ್ನ ತಿಳಿಯುವ ತತ್ತ್ವ ಪಿಶ್ಚದಲಿ ॥

ದೊರೆಯಲೀಪರತತ್ತ್ವ ಪಾರ್ಥನೆ ।
ಒರುವುದೈ ತದ್ಭಾವವನಿಂ- ।
ಗಿರುವುದೇನೈ ಛೇದ ಜ್ಞೇಯಜ್ಞಾತೃಜ್ಞಾನದೊಳು ॥ ೫೯೩ ॥

ಅರಿಯಲಿದನು ಮುಮುಕ್ಷುವರ್ಗವು ।
ತೊರೆದು ಸಂಸಾರವನು ಸಾಕವ ।
ಹರಿದು ನಿತ್ಯಾನಂದಸಾಗರದಲ್ಲಿ ತೇಲುವೆರು ॥
ಅರದು ಜ್ಞೇಯಕ್ಕಾಗಿ ವಿಶ್ವದಿ ।
ಕರೆವರದ ಪರಬ್ರಹ್ಮವೆನುತಲಿ ।
ಸಿರವೆನುತ ಪೇಳಿದರು ಕೋರ್ವರು ವಿಶ್ವರೂಪವದು ॥ ೫೯೪ ॥

ಇರುವುದದುವೇ ವಿಶ್ವರೂಪವು ।
ಧರೆಯಲೀಪರಿ ಮಾತನಾಡಲು ।
ಬಿರುವುದೆಲ್ಲವು ವಿಶ್ವರೂಪವು ಮಾಯೆಯಾಕೃತಿಯು ॥
ಇರವು ರೂಪವ್ಯಕ್ತಿವರ್ಣವು ।
ಧರೆಯೊಳಗೆ ಗೋಚರಕೆ ಬಾರದು ।
ಮರಳಿ ಜಗದಲಿ ನೋಡದನ್ಯರ ತಾನು ದೃಷ್ಟಿಯಲಿ ॥೪೯೫॥

ಇರುವುದದು ಹೇಗೆನುತ ಪೇಣದು ।
ವಿರುವುದಾದೆನುತರುಹಲಹುದೇ ।
ಬಿರದೆನುತಲರುಹಿದರೆ ಕೇಳ್ಮಹದಾದಿತತ್ತ್ವಕ್ಕೆ ॥

ಸ್ಫುರಣವೆಲ್ಲಿಂದಾಯ್ತು ನೋಡದ ।
ಹೊರತು ಜಗದೊಳಗಿರುವುದೇನದು ।
ಬರುವುದೆಂತ್ಕೆ ತರ್ಕವುಂಟೆಲ್ಲೆನುತಲರುಹುವರೆ ॥ ೪೯೬ ॥

ಅರಿಯಲಾರದೆ ನೇದತತಿಗಳು ।
ಧರಿಸಿದುವು ಮೌನವನು ವಾರ್ಥನೆ ।
ಹರಿದು ಹೋಯ್ತು ವಿಚಾರವೆಂಬುನ ಹಾದಿಯಡವಿಯಲಿ ॥
ಧರೆ ಘಟಾಕೃತಿ ಘಟದಲಿರುವಂ ।
ತಿರುವುದೈ ಯಾತತ್ತ್ವ ಜಗದು ।
ಬಿರುವುದಾಪರತತ್ತ್ವ ಜಗದಾಕೃತಿ ಜಗದ್ಬರಿತ ॥ ೪೯೭ ॥

ಸರ್ವತಃಪಾಣಿಪಾದಂ ತತ್ ಸರ್ವತೋಽಕ್ಷಿಶಿರೋಮುಖಮ್ ।
ಸರ್ವತಃಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥ ೧೩ ॥

ಪರಿಪರಿಯ ಕಾಲದಲಿ ದೇಶದಿ ।
ಹಿರಿಕಿರಿದುವಸ್ತುಗಳ ಬಾಲದಿ ।
ಹೊರಡುತಿಹ ಕ್ರಿಯೆಯೆಲ್ಲವದರಿಂ ಹುಟ್ಟಿ ಬರುವುದಲಾ ॥
ಒರುವುದೆಲ್ಲಾ ಸತ್ತೆಯಿಂದಲಿ ।
ಬಿರುವುದದು ಸರ್ವತ್ರವ್ಯಾಪಕ ।
ಕರೆವರದನಾಕಾರಣದಿ ಕೇಳ್ ವಿಶ್ವಕರವೆಂದು ॥ ೪೯೮ ॥

ಇರುವುದದುವೇ ವಿಶ್ವಬಾಹುವು ।
ನಿರುತವದು ಸರ್ವತ್ರ ತನ್ನಯ ।
ಕರಗಳಿಂ ಕ್ರಿಯೆಗಳನು ಮಾಡಿಸುತಿಹುದು ಕೌಂತೇಯ ॥
ನರನೆ ಕೇಳದುವೊಂದೆಕಾಲಕೆ ।
ಸರುವ ದೇಶದೊಳಿರುವಕಾರಣ ।
ಕರೆವರದ ವಿಶ್ವಾಂಘ್ರಿಯೆನುತಲಿ ಕೋವಿದರು ಜಗದಿ ॥೪೯೯॥

ತರಣಿಗಂಗವು ಪೇಣು ನೇತ್ರಗ ।
ಳಿರುವುನೇನೈ ಬೇರೆಬೇರಾ ।
ಗಿರುವನಲ್ಲವೆ ಸರ್ವರೂಪದಿ ಸರ್ವ ನೋಡುವವ ॥
ಇರದೆ ನೇತ್ರಗಳೇಸುತತ್ತ್ವಕೆ ।
ಸರಸತೆಯಲಾವೇದನಿಕರವು ।
ಕರೆವುದದನೇ ವಿಶ್ವಚಕ್ಷುವೆನುತ್ತ ನೋದದಲಿ ॥ ೫೦೦ ॥

ಇರುವುದದು ಪರತತ್ತ್ವ ನಿತ್ಯದಿ ।
ಬಿರುವುದೆಲ್ಲರಿಗುದ್ದನದರಿಂ ।
ಕರೆವರದನೇ ವಿಶ್ವಮೂರ್ಧನೆನುತ್ತ ಲೋಕದಲಿ ॥

ಉರಿವ ಜಿಂಕೆಗೆ ಮೂರ್ತಿಯೆಂಬುದೆ ।
ನರನೆ ಕೇಳುರುಮುಖವಿರುವುದೈ ।
ಧರೆಯಲಾಪರಿ ಸರ್ವತನದಿಂ ಸರ್ವಭಕ್ಷಿಪುದು ॥ ೫೦೧ ॥

ನರನೆ ಯದರಿಂ ವಿಶ್ವತೋಮುಖ ।
ವಿರುವುದೀಪರಿ ಹೆಸರು ಬಹ್ಮಕೆ ।
ಪೊರೆವುದಲ್ಲನೆ ಸರ್ವತತ್ವಾಕಾಶ ತತ್ತ್ವವಿದು ॥
ಇರುವುದೈ ಪರಬ್ರಹ್ಮವೀಪರಿ ।
ಭರಿತವೇ ಸರ್ವತ್ರ ನಿಶ್ಚಿದು ।
ಲಿರುವುದದಕಾ ಶಬ್ದಮಾತ್ರದಿ ಶ್ರವಣ ಸರ್ವತ್ರ ॥ ೫೦೨ ॥

ಇರುವುದದರಿಂ ಸರ್ವತಃಶ್ರುತಿ ।
ಪೊರೆವ ಹೆಸರಾಬ್ರಹ್ಮತತ್ತ್ವ ।
ಕ್ಕಿರುವುದದು ಪರತತ್ತ್ವ ಸರ್ವವ್ಯಾಪಕವು ನೋಡು ॥
ನರನೆ ನಿನಗೀತೆರದೊಳಾಂ ವಿ ।
ಸ್ತರಿಸಿದವಯವವೆಲ್ಲವಾಪರಿ ।
ಬಿರುವುವಾಪರತತ್ತ್ವಕೆಂಬುದು ಶ್ರುತಿಗೆ ಸಂಮತವು ॥ ೫೦೩ ॥

ಬರಿದೆ ನೇತ್ರಾದಿಗಳ ನಾ ವಿ ।
ಸ್ತರಿಸಿದೆನಲಾ ವ್ಯಾಪಕತ್ವದ ।
ಪರಿಯ ಸಿದ್ಧಾಂತವನು ಪೇಳ್ವರೆ ವಾರ್ಥ ನೋಡಿದಿಯಾ ॥
ಇರುವುದೈ ಯದು ಸರಿಯು ಶೂನ್ಯಕೆ ।
ಬರುವುದೆಂತ್ಕೆ ಹಸ್ತವಾದಗ ।
ಳುರುತರದ ಪರತತ್ತ್ವನದಕವಯವಗಳೇ ಬಿಲ್ಲ ॥ ೫೦೪ ॥

ತಿರುಗಿಸಲು ಕಡಲೊಳಗೆ ದೃಷ್ಟಿಯ ।
ಕರಿದು ತೆರೆಯನು ಹಿರಿದುತೆರೆ ನುಂ ।
ಗಿರುವುದೆಂಬುದು ದೃಷ್ಟಿಗೋಚರವಾಗುವುದು ವಾರ್ಥ ।
ತೆರೆತೆರೆಗಳಲ್ಲಿರುವುದೇನಂ ।
ತರವು ಕಡಲದು ಬಿಟ್ಟಿರುವುವೇ ।
ಶರಧಿರೂಪಗಳಲ್ಲವೇ ತೆರೆಯೆಲ್ಲ ನೋಡಿದರೆ ॥ ೬೦೫ ॥

ನರನೆ ಬ್ರಹ್ಮವು ಸರ್ವಜಗದಲಿ ।
ಭರಿತವಾದರೆ ವ್ಯಾಪ್ಯವ್ಯಾಪಕ ।
ವಿರುವ ಭಾವವಿದೆಂತು ಒರುವುದು ಶಾಸ್ತ್ರಸಂಮತವು ॥
ಪರಿಯಿದಾದರು ಶಾಸ್ತ್ರವೆಲ್ಲವು ।
ಅರುಹುತಿಹುದೇಕೆಂತ ಕೇಳಲು ।
ಅರಿಯಬೇಕು ಯಥಾರ್ಥಬೋಧವ ವಿವ್ಯೈದವದು
। ೬೦೬ ।
ನರನೆ ಕೇಳೈ ಗಣಿತಶಾಸ್ತ್ರದ ।
ತೆರದಿ ಸಿದ್ಧಾಂತವನು ಪೇಳ್ವೆನು ।
ಒರಲು ಬಾಕಿಯು ಶೂನ್ಯವನು ತೋರಿಸುವ ಪರಿಯೆಂತು ॥

ಬರುವುದೇ ವರ್ತುಲವ ಶೂನ್ಯವೆ ।
ನರಿವ ವರಿಯುವಯೋಗವೇನೈ ।
ನರನೆ ಕೇಳದ್ವೈತ ಸ್ಪಷ್ಟೀಕರಣಮಾಡುವರೆ ॥ ೬೦೭ ॥

ಧರಿಸಿ ದ್ವೈತವ ಸಿದ್ಧ ಮಾಡುವು ।
ದಿರುವುದೈ ಸಿದ್ಧಾಂತವೀ ಪರಿ ।
ತೊರೆಯಲಿದ ಗುರುಶಿಷ್ಯದ್ವೈತಾಚಾರ ಮುಳುಗುವುದು ॥
ಹರಣವಾಗಲು ಶಿಷ್ಯಗುರುಗಳು ।
ಹರಣವಹುದೈ ತತ್ತ್ವಬೋಧವು ।
ಅರಿಯಲಾ ಅದ್ವೈತವಿಷಯದ ಭಾಷೆ ಮುಗಿಯುವುದು ॥ ೬೦೮ ॥

ಧರೆಯಲಾಶ್ರುತಿನಿಕರವೇ ಸ್ವೀ ।
ಕರಿಸಿ ದ್ವೈತವನದರ ಮುಖದಿಂ ।
ದುರತರದಲದ್ವೈತತತ್ತ್ವವ ಸಿದ್ಧಪಡಿಸುವುದು ॥
ಇರುವುದಿದುವೇ ರಾಜಮಾರ್ಗವು ।
ನರನೆ ಗೋಚರವೆನಿಪ ವಿಶ್ವದೊ ।
ಳಿರುವುದೆಂತಾಬ್ರಹ್ಮ ವ್ಯಾಪಕವೆಂಬುದನ್ನೊರುವೆ ॥ ೬೦೯ ॥

ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಮ್ ।
ಅಸಕ್ತಂ ಸರ್ವಭೃಚ್ಚೈವ ನಿರ್ಗುಣಂ ಗುಣಭೋಕ್ತೃ ಚ ॥ ೧೪ ॥

ನರನೆ ಕೇಳಾಕಾಶವೆಲ್ಲವು ।
ಭರಿತವಿಹುದವಕಾಶದಲ್ಲೀ ।
ತೆರದಿ ಬ್ರಹ್ಮವು ತುಂಬಿಹುದು ವಿಶ್ವದಲಿ ಸಂಪೂರ್ಣ ॥
ಅರಿವಿಯಲಿ ತಂತುಗಳು ಪೂರ್ಣದಿ ।
ಲಿರುವುವಲ್ಲವೆ ಯರಿನಿರೂಪದಿ ।
ಯಿರುವುದಾಪರಿ ಬ್ರಹ್ಮತತ್ತ್ವವು ವಿಶ್ವದೊಳಗೆಲ್ಲ ॥ ೬೧೦ ॥

ನರನೆ ಕೇಳುದಕದಲಿ ರಸ ಗೋ ।
ಚರಿಪುದೈ ಯುದಕಸ್ವರೂಪದ ।
ಲಿರುವುದಾಪರಿ ತೇಜ ದೀಪದಿ ದೀಪರೂಪದಲಿ ॥
ಇರುವುದೈ ಕರ್ಪೂರದಿ ಗಂಧವು ।
ನರನೆ ಕೇಳ್ ಕರ್ಪೂರದ ರೂಪದ ।
ಲಿರುವುದೈ ಕ್ರಿಯೆ ದೇಹದಲಿ ಕೇಳ್ ದೇಹರೂಪದಲಿ
॥ ೬೧೧ ॥
ನರನೆ ಚಿನ್ನವು ಚಿನ್ನರೂಪದೊ ।
ಳಿರುವುದೈ ಗೋಚರಕೆ ನಿಜವಿದು ।
ಸಿರುವುದಾಪರಿ ಬ್ರಹ್ಮ ವಿಶ್ವದಿ ವಿಶ್ವರೂಪದಲಿ ॥

ಹರಳಿನಲಿ ಚಿನ್ನವನು ನೋಡಲು ।
ಹರಳಿನಂದದಿ ತೋರ್ಪುದಲ್ಲವೆ ।
ಹರಳುಚಿನ್ನದಿ ಭೇದನೈಸೈ ಯೊಂದೆ ತತ್ತ್ವವಲಾ ॥ ೬೧೨ ॥

ಹರಿಯುತಿಹ ಕಾಲಿನೆಯ ರೂಪದೊ ।
ಳಿರುವುದಲ್ಲವೆ ನೀರು ನೀರಿಂ ।
ಗಿರುವುದೇನಾಕಾರ ನೀರಿಗೆ ಬೇರೆ ತೆರವಾಗಿ ॥
ಉರಿವ ಬೆಂಕಿಯಲಿಟ್ಟ ಲೋಹವ ।
ಹೊರಗೆ ತೆಗೆದರೆ ಕೆಂಡದಂತಿರ ।
ಲಿರುವುದೇನದು ಬೆಂಕಿ ಲೋಹವು ಲೋಹವೇ ಪಾರ್ಥ ॥೬೧೩॥

ನರನೆ ಘಟದಾಕಾಶ ವರ್ತುಲ ।
ವಿರುವುದೈ ಘಟದಾಕೃತಿಯಲೇ ।
ಮರಳಿ ಮನೆಕೋಣೆಯಲಿ ಯದು ತೋರ್ಪುದು ಚತುಸ್ಕೋಣೆ ॥
ಹರಿದು ಹೋಗಲು ಘಟಚಯಂಗಳು ।
ಬರುವುದೇನಾಕಾಶನಾಶವು ।
ನಿರುತ ಮಾಯಾಧಾರದಿಂ ತೋರುವುದು ವಿಶ್ವವಿದು ॥ ೬೧೪ ॥

ಇರುವುದೀಪರಿ ಬ್ರಹ್ಮತತ್ತ್ವವು । ಬ್ರಹ್ಮವೆಂದರೆ ಗುಣಗಳಲ್ಲೆನ್ನ ।
ಯಿರದಲಾ ಮಾಯೆಯುಳಿ ಬ್ರಹ್ಮವು । ಬ್ರಹ್ಮಕವಕೂ ಯೋಗವಿಲ್ಲೆನ್ನ ।
ಧರಿಸುತಿಹುದೀತತ್ತ್ವವಾಕೃತಿಯಿಂದ್ರಿಯದ ತೆರದಿ ॥ ಬ್ರಹ್ಮದಲಿ ತೋರುವುದು ನೋಡಾಭಾಸಮಾತ್ರನಲಾ ॥
ಮರಳೆ ತ್ರಿಗುಣದ ಯೋಗದಿಂದಲಿ । ಮರ್ಮವನು ತಿಳಿಯದಲೆ ಪಾರ್ಥನೆ ।
ಪರಿಪರಿಯ ಮನದಿಂದ್ರಿಯದ ತೆರ । ಸುಮ್ಮನೆನೆ ಭ್ರಮ ಮಾಡಿಕೊಳುವುದು ।
ಧರಿಸುವುದಲಾ ರೂಪ ತೋರ್ಪುದು ದೃಷ್ಟಿಗೀತೆರದಿ ॥೬೫॥ ಬ್ರಹ್ಮನೇ ಗುಣವೆಂದು ತೋರ್ಪುದು ಮೂಢಜನರಿಂಗೆ ॥ ೬೬ ॥

ನರನೆ ಕೇಳೈ ಬೆಲ್ಲಸಕ್ಕರೆ- । ಒರಲು ಮೇಘಸಮೂಹ ಗಗನದಿ ।
ಗಿರುವ ಸವಿರುಚಿ ಮುದ್ದೆಯೊಳಗೇ- । ಧರಿಸುವುದೆ ಮೇಘಗಳ ಗಗನವ ।
ನಿರುವುದೇನಾತೆರದೊಳಿರದಾಬ್ರಹ್ಮಗುಣಗಳಲಿ ॥ ಮೆರೆವುದೈ ಪ್ರತಿಬಿಂಬ ಕನ್ನಡಿಯೊಳಗೆ ನೋಡಿದರೆ ॥
ಇರುವುದೈ ಕ್ಷೀರದಲಿ ಘೃತ ಕೇಳ್ । ಇರುವುದೇನ್ಯೆ ಕನ್ನಡಿಯೊಳದು ।
ನರನೆ ಕ್ಷೀರಾಕಾರದಲ್ಲಿಯೆ । ಧರೆಯಲಾತೆರದಲ್ಲಿ ಬ್ರಹ್ಮದೊ- ।
ಯಿರುವುದೇನದು ತತ್ತ್ವವೊಂದೇ ಘೃತದಲಿ ಕ್ಷೀರ ॥೬೭॥ ಕೆರದು ಗುಣಸಂಚಯವು ಮಿಥ್ಯಾಭಾಸಮಾತ್ರವದು ॥ ೬೭ ॥

ಭರಿತವಿದ್ದರು ಬ್ರಹ್ಮ ವಿಶ್ವದ- । ನೀರಿನಲಿ ರವಿಬಿಂಬ ತೋರಲು ।
ಲಿರುವುದೇನ್ಯೆ ವಿಶ್ವ ಬ್ರಹ್ಮವು । ಧಾರಣವ ಮಾಡುವುದೆ ನೀರದ ।
ಯಿರುವುದಲ್ಲವೆ ಚಿನ್ನ ನೋಡಾಭರಣದಲಿ ಪಾರ್ಥ ॥ ಸೂರಿಯನ ರಶ್ಮಿಯಲಿ ಮೃಗಜಲವೇಳುತಿಹುದಲ್ಲೆನ್ನ ॥
ಪರಿಪರಿಯ ಹೆಸರಿನಲಿ ಚಿನ್ನಾ- । ಧಾರುಣಿಯೊಳಾ ಬ್ರಹ್ಮಗುಣಗಳ ।
ಭರಣ ರಂಜಿಪುವಲ್ಲವೇನ್ಯೆ । ಜಾರದಲೆ ಸಂಬಂಧವೀಪರಿ ।
ಕರೆವರಲ್ಲವೆ ವಂಕಿ ಹೂ ಮೊದಲಾದ ನಾಮದಲಿ ॥೬೮॥ ತೋರುತಿಹುದಾಭಾಸ ಕೇಳೈ ಭ್ರಾಂತಿಮೂಲಕವು ॥ ೬೮ ॥

ಧರೆಯಲೀಪರಿ ಸ್ಪಷ್ಟಕನ್ನಡ- । ತಿರುಕನೋರ್ವನು ಸ್ವಪ್ನಭರದ- ।
ಸರಸಶಬ್ದದಲಾನು ಪೇಳುವೆ- । ಲ್ಲರಸುತನದುಪಭೋಗ ಕೊಂಡರೆ ।
ನಿರುವುದೈ ಪರಬ್ರಹ್ಮವಿಂದ್ರಿಯಗುಣದ ತೊರತಾಗಿ ॥ ಯಿರುವುದಲ್ಲಾ ಸರ್ವವಿಶ್ವಾಭಾಸಮಾತ್ರವದು ॥
ಪರಿಪರಿ ಕ್ರಿಯೆ ನಾಮ ರೂಪವು । ಇರುತ ಬ್ರಹ್ಮವು ನಿರ್ಗುಣಾತ್ಮಕ ।
ನರನೆ ಮೇಣ್ ಸಂಬಂಧ ಜಾತಿಯ- । ನಿರುತ ಗುಣದುಪಭೋಗ ಕೊಳುವುದು ।
ದಿರುವುವಾಕಾರಕ್ಕೆ ಬ್ರಹ್ಮಕ್ಕಿಲ್ಲ ಭೇದವಿವು ॥ ೬೯ ॥ ಯಿರುವುದೀಪರಿ ಭ್ರಮವು ಮಿಥ್ಯಾಭಾಸಕಾರಣವು ॥ ೬೯ ॥

ನರನೆ ಕೇಳೈ ಬ್ರಹ್ಮ ಗುಣಗಳ ।
ನಿರುತ ಸಂಗವ ಹೊಂದ್ವುದಥವಾ ।
ನಿರುತ ಗುಣದುಪಭೋಗ ಮಾಳ್ಪುದು ಮಿಥ್ಯವಿದು ಮಾತ್ರ ॥

ಬಹಿರಂತಶ್ಚ ಭೂತಾನಾಮಚರಂ ಚರಮೇವ ಚ ।
ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್ ॥ ೧೫ ॥

ನರನೆ ಪಂಕಿಯ ಕೆಂಡಗಳು ಪರಿ- । ಒರುವುನಾಪರಿ ಸರ್ವಸಚರಾ- ।
ಪರಿಯಲಾಕಾರದಲಿ ತೋರ್ದರು । ಚರದ ಭೂತಂಗಳಲಿ ಬ್ರಹ್ಮವು ।
ಯಿರುವುದೊಂದೇ ತತ್ತ್ವವೆನ್ನಣೆಯಲ್ಲಿ ನೋಡಿದಿಯಾ ॥ ಯಿರುವುದೊಂದೇ ತತ್ತ್ವ ಸರ್ವವ್ಯಾಪಕತೆ ನೋಡು ॥ ೭೨॥

ಇರುವುದೈ ಯಮಿನಾಶಿ ತತ್ತ್ವವು ।
ಭರಿತನಿಹುದೈ ಸೂಕ್ಷ್ಮರೂಪದಿ ।
ಕರೆವರದನೇ ಜ್ಞೇಯವೆನುತಲಿ ಕೋವಿದರು ಜಗದಿ ॥
ಇರುವುದದು ಹೊರಗೊಳಗೆ ದೇಹದೊ- ।
ಳಿರುವುದದು ಬಹುದೂರ ಹತ್ತರ- ।
ವಿರುವುದದು ನೋಡೇಕರೂಪವು ರೂಪವೆರಡಿಲ್ಲ ॥ ೬೪ ॥

ಕ್ಷೀರನಾಗರದಲ್ಲಿ ರುಚಿಯು ಪ್ರ- ।
ಕಾರವೊಂದಿಯದಲ್ಲವೇನೈ ।
ತೀರದಲಿ ರುಚಿ ಕಡಿಮೆ ಮಧ್ಯದಿ ರುಚಿಯು ಹೆಚ್ಚಿಹುದೆ ॥
ಧಾರುಣಿಯಲಾ ತೆರದಿ ಬ್ರಹ್ಮವು ।
ಸೇರಿಹುದು ಸರ್ವತ್ರ ವ್ಯಾಪಕ ।
ಕೋರಲಾರದು ಭೇದ ಬೇರಾಕಾರವರ್ಣದಲಿ ॥ ೬೫ ॥

ವರಚರಾಯುಜಸ್ವೇದಜಾಂಡಜ ।
ಮೆರೆವುವಾಪರಿ ಯುದ್ಭಿದಗಳೀ- ।
ಪರಿಯ ಸೃಷ್ಟಿಯ ಜಾತಿ ನಾಲ್ಕಿವ ಲೋಕದಲಿ ಸಾರ್ಥ ॥
ಇರುವುದೀ ನಾಲ್ಕರಲಿ ಯೊಂದೀ- ।
ತೆರದಿ ನೋಡಲು ಬ್ರಹ್ಮತತ್ತ್ವವು ।
ನರನೆ ನಿನಗಿನ್ನೊಂದು ದೃಷ್ಟಾಂತವನು ಪೇಳುವೆನು ॥ ೬೬ ॥

ನರನೆ ಕೇಳೈ ಸಾಸಿರಾರಾ- ।
ಪರಿಪರಿಯ ಘಟಗಳೊಳು ನೀರಿರ- ।
ಲಿರುವೈ ಸಾಸಿರದ ಮಾನದಿ ಚಂದ್ರಬಿಂಬಗಳು ॥
ಇರುವುದೇನೈ ಭೇದ ಚಂದ್ರಗೆ ।
ಧರೆಯಲೀಪರಿ ಬ್ರಹ್ಮತತ್ತ್ವ- ।
ಕ್ಕಿರುವುದೇನೈ ಭೇದ ಪರಿಪರಿಯಾಕೃತಿಯೊಳಿರಲು ॥ ೬೭ ॥

ಇರಲು ಲವಣದ ರಾಶಿ ಪರಿಪರಿ ।
ಯಿರುವುದೇನೈ ಭೇದ ರುಚಿಯಲಿ- ।
ನ್ನಿರುವುದಾಪರಿ ಸಸಿಯು ಕಬ್ಬುಗಳಲ್ಲಿ ಕೌಂತೇಯ ॥

ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್
ಭೂತಭರ್ತೃ ಚ ತಜ್ಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ ॥ ೧೬ ॥

ಪರಿಪರಿಯ ಪ್ರಾಣಿಗಳಲದರದು ।
ಮೆರೆವುದೇಕತ್ವದಲಿ ವ್ಯಾಪ್ತಿಯು ।
ನರನೆ ವಿಶ್ವದ ರಚನೆಗದುನೇ ಯಾದಿಕಾರಣವ ॥
ಶರಧಿಯಲಿ ತೆರೆ ಲೆಕ್ಕಪಿಲ್ಲದೆ ।
ಬರುವುವಾದರು ಸರ್ವತೆರೆಗಳಿ- ।
ಗಿರುವುದಾಧಾರವು ಕಣಾ ನಾಗರವೆ ನೋಡಿದರೆ ॥ ೬೮ ॥

ಪ್ರಾಣಿಗಳಿಗುತ್ಪತ್ತಿಕಾರಣ ।
ತಾನೆ ನೋಡಾಬ್ರಹ್ಮತತ್ತ್ವವು ।
ಕಾಣುವುದಲಾ ಸರ್ವಕಾಧಾರವು ಕಣಾ ಬ್ರಹ್ಮ ॥
ಏನ ಹೇಳಲಿ ಬಾಲ್ಯ ಯೌವನ ।
ಮೇಣು ವಾರ್ದ್ಧಕ್ಯವು ಶರೀರದಿ ।
ಕಾಣುವುವು ಸ್ಥಿತಿ ಮೂರು ಮಾತ್ರ ಶರೀರನಿಹುದೊಂದೆ ॥ ೬೯ ॥

ಸೃಷ್ಟಿ ಮೇಣ್ ಸ್ಥಿತಿಲಯಗಳೆಂಬೀ- ।
ಕಟ್ಟಳೆಗಳಿಗೆ ಮೂಲಕಾರಣ ।
ನೆಟ್ಟನೆ ನಿಚಾರಿಸಲು ಬ್ರಹ್ಮವು ಸರ್ವಕಾಧಾರ ॥

ಹುಟ್ಟಿದರೂ ಸಂಧ್ಯಾದಿಕಾಲದ ।
ಕಟ್ಟಳೆಗಳಾತೆರದಿ ಮೂರವು ।
ಹುಟ್ಟಲಾರದು ಭೇದವಾಕಾಶದಲವೃಗಳಿಂದ ॥ ೭೦ ॥

ನರನೆ ಜಗದುತ್ಪತ್ತಿಕಾಲದೊ- ।
ಳಿರುವುದದಕೆ ಬ್ರಹ್ಮನಾಮವು ।
ಯಿರುವುದದಕೆನೆ ವಿಷ್ಣುವೆಂಬೀಹೆಸರು ಸ್ಥಿತಿಯೊಳಗೆ ॥
ಹರಣವಾಗುವ ಕಾಲದಲಿ ಮೇ- ।
ಣಿರುವೈ ಹರನೆಂಬ ತೆಸರದು ।
ಒರಲು ಕೇಳೀಸ್ಥಿತಿಯ ಲೋಪವು ಶೂನ್ಯ ಪ್ರಕೃತಿಯದು ॥ ೭೧ ॥

ನರನೆ ಕೇಳಾಕಾಶಶೂನ್ಯತೆ ।
ಹರಿದು ತ್ರಿಗುಣವ ನುಂಗಿ ಪಡುತಿಹ ।
ಯಿರುವುದದುವೇ ಪ್ರಕೃತಿ ಶೂನ್ಯವು ಪಾರ್ಥ ನೋಡಿದಿಯಾ ॥
ಮರಳಿ ನೋಡಾ ಪ್ರಕೃತಿಶೂನ್ಯತೆ ।
ಹರಿದು ತಿಂಬುವ ಹಿರಿದು ಶೂನ್ಯವು ।
ಯಿರುವುದೆಮ್ಮದು ಜ್ಞೇಯ ಶ್ರುತಿಸಂಮತವು ಕೌಂತೇಯ ॥ ೭೨ ॥

ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸಃ ಪರಮುಚ್ಯತೇ।
ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ಧಿಷ್ಠಿತಮ್ ॥ ೧೭ ॥

ನರನೆ ಕೇಳೈ ಬ್ರಹ್ಮ ವೈಶ್ವಾ-।
ನರಗೆ ದೀಪನಶಕ್ತಿ ಕೊಡುವುದು।
ಸುರಿಸುವುದು ಚಂದ್ರಮನ ಕೈಯಿಂದಮೃತವನು ಜಗದಿ ॥
ತರಣಿಯಲಿ ತೇಜವನಿರಿಸಿ ತ-।
ತ್ತರಣಿಯಿಂ ವ್ಯವಹಾರ ನಡಿಪುದು।
ಬರುವುದದರಿಂ ಜಗಕೆ ದೃಷ್ಟಿಯು ಲೋಕಕೈ ಹಿತವು ॥ ೬೫೨ ॥

ಧರೆಗೆ ಧಾರಣಶಕ್ತಿ ಕೊಡುವುದು।
ದೊರೆಯುವುದು ಜೀವನವು ನೀರಿಗೆ।
ಭರದಿ ಜ್ಯೋತಿಗೆ ತೇಜ ಕೊಡುವುದು ಮೂಲ ಜ್ಯೋತಿಯಿದು ॥
ನರನೆ ಗಾಳಿಯ ಜೀಸ ಹಚ್ಚುತ।
ಪೆರೆವ ಗಗನಕೆ ವ್ಯಾಪ್ತಿ ಕೊಡುವುದು।
ಪೊರೆಸುವುದು ನಿಜವಿಶ್ವವೆಲ್ಲವ ತನ್ನ ಯೋಗದಲಿ ॥ ೬೫೬ ॥

ತಾರೆಗಳಿಗದು ತೇಜ ಕೊಡುವುದು।
ತೋರುವುದು ತೇಜಕ್ಕೆ ತೇಜವು।
ಕಾರಣಕೆ ಕಾರಣವು ಮೂಲಕೆ ಮೂಲವೀತತ್ತ್ವ ॥
ಚಾರುಬುದ್ಧಿಗೆ ಬುದ್ಧಿ ವೃದ್ಧಿಗೆ।
ಚಾರುವೃದ್ಧಿಯು ಮನಕೆ ಮನವದು।
ತೋರುವುದು ಜೀವಕ್ಕೆ ಜೀವವು ಕಣ್ಣಿಗದು ಕಣ್ಣು ॥೬೫೪॥

ನರನೆ ಜಗದಲಿ ಸರ್ವವಸ್ತುವಿ-।
ಗಿರುವುದೈ ಸರ್ವಸ್ವರೂಪವು।
ಒರುವುದೆಂತೋ ದ್ವೈತಭಾವವು ಲೇಶವಾದರುನು ॥
ದೊರೆಯಲಾದರ್ಶನವು ವಾರ್ಥನೆ।
ಪರಿದು ದೃಶ್ಯದ್ರಷ್ಟೃದರ್ಶನ-।
ಪರಿಗಳೆಲ್ಲವು ಬರುವುದೈಕ್ಯವು ಬ್ರಹ್ಮತತ್ತ್ವದಲಿ ॥ ೬೫೮ ॥

ನರನೆ ಕೀಗದು ಕೀಯು ಪಾಕೆಗೆ।
ಬಿರುವುದದು ಕೇಳ್ವಾಕೆ ಪ್ರಾಣ-।
ಕ್ಕಿರುವುದದು ಜೀವನವು ಗತಿಗದು ಚರಣವಾಗಿಹುದು ॥
ಇರುವುದದು ಕ್ರಿಯೆಗಳಿಗೆ ಕರ್ತವು।
ನರನೆ ವಿನ್ಯಾಸಿಸಂಯತಿಗಳಾ-।
ಪರಿಯಲಾಕೃತಿಯಿವಕು ಉದರಿಂ ರೂಪ ನೋಡಿದರೆ ॥೬೫೫॥

ಜ್ಞಾನಜ್ಞಾತೃಜ್ಞೇಯಸ್ಥಿತಿಗಳು।
ಹಾನಿಯೊಂದೀಕ್ಷಣದಿ ಪಡೆವುವು।
ಪೂರ್ಣವೊಂದೇ ಬ್ರಹ್ಮತತ್ತ್ವವು ಪೂರ್ಣ ಬಿಂಬಿಪುದು ॥
ಪೂರ್ಣವಾಗಲು ಲಕ್ಷ್ಯವಂಕಗ-।
ಳೇನು ಬೇರ್ಜೀರಿಹುವೆ ಸಾಧನ।
ಮೇಣು ಸಾಧಕಸಾಧ್ಯವೈರವು ಬ್ರಹ್ಮದರ್ಶನದಿ ॥ ೬೫೭ ॥

ನರನೆ ಕೇಳೈ ಬ್ರಹ್ಮರೂಪದೊ-।
ಳಿರುವುದೈ ದ್ವೈತಭಾವವು।
ಧರಿಸಿಹುದಾಬ್ರಹ್ಮತತ್ತ್ವವೆ ಸಾರ್ಥ ಸರ್ವತ್ರ ॥

ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ।
ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ ॥ ೧೮ ॥

ನರನೆ ಪ್ರಿಯಸನ್ಮತ್ತನರ್ಯನೆ।
ಯರುಹಿದೆನು ನಾ ಕ್ಷೇತ್ರದ ಸ್ಥಿತಿ।
ಯಿರವತೆರದಲಿ ಕವಡಿಗಳ ಮುಂದಿಟ್ಟು ಗುಣಿಸಂತೆ ॥
ನರನೆ ತದನಂತರದಿ ದೃಗ್ಜ್ಞೇ-।
ತರಕೆ ಬರುವಂದದಲಿ ಜ್ಞಾನದ।
ಪರಿಯನೆಲ್ಲವ ವಿಸ್ತರಿಸಿದೆನು ಪ್ರೇಮಪೂರ್ವಕದಿ ॥ ೬೫೯ ॥

ನರನೆ ಕೇಳಾತರದಿ ನಾಕೆಂ-।
ದೊರೆವವರೆಗಜ್ಞಾನಲಕ್ಷಣ।
ಪರಿಪರಿಯ ದೃಷ್ಟಾಂತದಿಂ ಕೌತುಕದಿ ಹೇಳಿದೆನು ॥
ಅರುಹಿದೆನು ಮರಳೀಗ ನಿನಗಾಂ।
ಪರುಷದಿಂದಲಿ ಜ್ಞೇಯಲಕ್ಷಣ-।
ವರಿತುಕೋ ನೀನಿದನು ಸರ್ವವ ಲಕ್ಷ್ಯಪೂರ್ವಕದಿ ॥ ೬೬೦ ॥

ನರನೆ ಕೇಳೀ ತತ್ತ್ವವೆಲ್ಲವ- ।
ನರಿತು ನನ್ನ ಪ್ರಾಪ್ತಿಯಿಚ್ಛೆಯ ।
ಧರಿಸಿ ಭಜಿಸಿದರೆನ್ನ ಮದ್ರೂಪವನೆ ತಾಳುವರು ॥
ತೊರೆದು ದೇಹಾದಿಗಳ ನೌಪ್ಯವ- ।
ನಿರಿಸುವರು ನಿಜಚಿತ್ತವೆನ್ನಲಿ ।
ದೊರಕಿಸುವರೆನ್ನಯ ಸುಭಕ್ತರು ಶ್ರೀಷ್ಣವುಂಬಳಿಯ
॥ ೬೪೧ ॥

ಭಕ್ತರೆನ್ನಯ ಹೇಳಲೇನದ ।
ಚಿತ್ತವನ್ನೆ ನಗರ್ಪಿಸುವರೈ ।
ಮತ್ತೆ ನೋಡ್ಪೆ ಯೆನ್ನ ಚಿತ್ತವನೆಳೆದುಕೊಳ್ಳುವರು ॥
ಚಿತ್ರತರದಿಂದೀಸು ಪರಿಯಲಿ ।
ಭಕ್ತರೆನ್ನಯ ರೂಪ ತಾಳ್ವರು ।
ಧಾತ್ರಿಯಲ್ಲೀ ಸುಲಭಮಾರ್ಗವ ಸ್ಥಾಪಿಸಿಹೆ ನಾನು ॥೬೪೨॥

ಜಗುಲಿಯೇರಲು ಮೆಟ್ಟು ಬೇಕೈ ।
ಗಗನವೇರಲು ನಿಚ್ಚಣಿಕೆಯೈ ।
ಜಗದಿ ನದಿದಾಟುವರೆ ನಾವೆಯು ಬೇಕು ನೋಡಿದಿಯಾ ॥
ಸುಗಮವಾಗುವತೆರದಿ ನಿನಗೀ- ।
ಬಗೆಗಳನು ಯೋಚಿಸಿದೆ ನಾಲ್ಕನು ।
ಸುಗಮವಾಯಿತೆ ನಿನ್ನ ಬುದ್ಧಿಗೆ ಬ್ರಹ್ಮತತ್ತ್ವವದು ॥ ೬೪೩ ॥

ಕೂಸನುಣಿಸುವ ತಾಯಿಯೊಂದೇ- ।
ಗ್ರಾಸವನು ಹಲವಾಗಿ ಮಾಳ್ಪಳು ।
ಕೂಸು ಬಾಯಲಿ ಹಿಡಿವತೆರದಲ್ಲುಣಿಸುವಂದದಲಿ ॥
ವಾಸವಾತ್ಮಜ ನಿನ್ನ ಬುದ್ಧಿಗೆ ।
ತ್ರಾಸವಾಗದ ತೆರದಿ ನಿನಗೆ ವಿ- ।
ಕೇಷವೀಪರಿ ನಾಲ್ಕು ಗ್ರಾಸ ವಿಭಾಗಮಾಡಿದೆನು ॥ ೬೪೪ ॥

ನರನೆ ನಿನಗೀತೆರದಿ ಸ್ಪಷ್ಟೀ- ।
ಕರಿಸಿದುದು ಮೇಣ್ ತಿಳಿಯದಿರಲದ- ।
ನೊರೆವೆ ನಿನಗಿನ್ನೊಂದುಪಾರಿಗೆ ಸ್ಪಷ್ಟ ತಿಳಿವಂತೆ ॥

ನರನೆ ನಿನಗಾಂ ನಾಲ್ಕು ಭಾಗವ ।
ವಿರಚಿಸಿದಲಿನ್ನೊಂದುಪರಿಯ- ।
ಲ್ಲರುಹುವೆನು ನಾನೆರಡು ಭಾಗಂಗಳನು ಮಾಡುವೆನು ॥ ೬೪೫ ॥

ಪುರುಷಪ್ರಕೃತಿಗಳೆಂದು ತತ್ತ್ವಗ- ।
ಳೆರಡಿಹುವೆ ವಿಶ್ವದಲಿ ಪಾರ್ಥನೆ ।
ಪುರುಷನಾತ್ಮನು ಪ್ರಕೃತಿ ನೋಡಲನಾತ್ಮವೆನ್ನುವರು ॥
ನರನೆ ನಾ ಬೇಡಿದುದನೆಲ್ಲವ- ।
ನಿರದೆ ಯೆನಗರ್ಪಿಸಲು ಬೇಕೈ ।
ಯರಿವಪರಿಯಲಿ ನಿನಗೆ ನಾ ವಿಸ್ತರಿಸಿ ಪೇಳುವೆನು ॥ ೬೪೬ ॥

ಮೃಡನ ಸರಿಜೋಡಿಯು ಸುನೀರನೆ ।
ಕೂಡು ಯೆನಗೆ ಕಿವಿಗಳನು ನಿನ್ನಯ ।
ಪೊಡನೆ ನಾ ಪೇಳುವ ವಚನದಲಿ ಲಕ್ಷ್ಯವಿಡಬೇಕು ॥
ಜಡಜನಾಭನ ಪ್ರೇಮಪೂರ್ವಕ- ।
ನುಡಿಗಳನು ಕೇಳಿದನು ಪಾರ್ಥನು ।
ಗಡಗಡನೆ ನಡುಗುತಲಿ ಪ್ರೇಮಾಶ್ರುಗಳ ಸುರಿಸಿದನು ॥ ೬೪೭ ॥

ನರನ ರೋಮಾಂಚವನು ನೋಡುತ ।
ಹರುಷವಾಯಿತು ಕೃಷ್ಣರಾಯಗೆ ।
ನರನಿಗರವಾಗಿಹುದೆನುತ್ತಲಿ ಹರಿಗೆ ತಿಳಿವಾಯ್ತು ॥
ಹರುಷದಲಿ ರೋಮಾಂಚವಾಪರಿ ।
ಹರಿಗೆ ಬಂದರು ಜಿಗಿಹಿಡಿಯುತದ ।
ನರನೊಡನೆ ಭಾಷಣವ ಶ್ರೀಹರಿ ಮಾಡತೊಡಗಿದನು ॥ ೬೪೮ ॥

ನರನೆ ಕೇಳೈ ಪ್ರಕೃತಿಪುರುಷಗ- ।
ಳೆರಡು ಕೂಡಿಯೆ ಬ್ರಹ್ಮತತ್ತ್ವವು ।
ವಿರಚಿಸುವರು ವಿವೇಚನವನಿದ ಕೋವಿದರು ಜಗದಿ ॥
ಕರೆವರಿದನೇ ಸಾಂಖ್ಯವೆನುತಲಿ ।
ಯರುಹಲಿದ ವಿಸ್ತಾರದಿಂದಲಿ ।
ಧರಿಸಿದೆನು ಕಪಿಲಾವತಾರವ ನಾನೆ ಕೌಂತೇಯ ॥ ೬೪೯ ॥

ನರನೆ ನಿನಗಾಂ ಪ್ರಕೃತಿಪುರುಷಗ- ।
ಳುರುತರವಿಚಾರವನು ಪೇಳುವೆ ।
ನಿರುವುದಿದು ನಿರ್ದೋಷನೆಂದನು ಹರಿಯು ನಸುನಗುತ ॥

ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ।
ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿಸಂಭವಾನ್ ॥ ೧೯ ॥

ನರನೆ ಪುರುಷನನಾದಿಯಾಗಿಯೆ ।
ಬಿರುವನ್ನೆ ತಾಂ ಪ್ರಕೃತಿಯಾದರು ।
ಬಿರುವದವನಿಂ ಕೂಡಿ ಯದು ಸಹ ನೋಡಿಹುದನಾದಿ ॥೬೫೫॥

ಇರುಳು ಹಗಲೀದ್ವಂದ್ವವಾಪರಿ ।
ಬಿರುವುವಲ್ಲನೆ ಪುರುಷ ಪ್ರಕೃತಿಯು ।
ನೆರಳು ರೂಪವದಲ್ಲ ರೂಪದ ಕೂಡೆಬಿರುವುದಲಾ ॥
ನರನೆ ಜೀವವ ಹೊಲದಿ ಬಿತ್ತಿರೆ ।
ಬರುವುದ್ಯೆ ಕಣದೊಡನೆ ತುಷವೈ ।
ಬಿರುವುದಾಪರಿ ಪುರುಷಪ್ರಕೃತಿಗಳೆರಡರಿದು ಜೋಡಿ
॥ ೬೫೬ ॥

ನರನೆ ನಿನಗಾಂ ಕ್ಷೇತ್ರವೆಂದರು- ।
ಹಿರುವ ತತ್ತ್ವವೆ ಪ್ರಕೃತಿಯಹುದೈ ।
ಪುರುಷನೆಂದರೆ ನೋಡು ಕ್ಷೇತ್ರಜ್ಞನು ಧನಂಜಯನೆ ॥
ಇರುವುನೀಪರಿ ಹೆಸರು ಬದಬದ- ।
ಲಿರದಲಾ ಗುಣದಲ್ಲಿ ಭೇದವು ।
ಅರಿಯ ಬೇಕೀಪರಿಯ ತತ್ತ್ವಾರ್ಥವನು ಮನಗೊಟ್ಟು ॥೬೫೭॥

ನರನೆ ಕೇಳವಿನಾಶಿ ತತ್ತ್ವವು ।
ಬಿರುವುದಾವುದೊ ಪುರುಷನೆನಿಪುದು ।
ಮರಳಿಕೇಳಾತತ್ತ್ವಯೋಗದಿ ಕ್ರಿಯೆಗಳುತ್ಪತ್ತಿ ॥
ಬರಲು ನೋಡದು ಪ್ರಕೃತಿಯೆನಿಸುವು- ।
ದಿರುವುದೀಪರಿ ಭೇದ ಪಾರ್ಥನೆ ।
ಬರುವುದಿದರಿಂ ಜನ್ಮ ಬುದ್ಧೀಂದ್ರಿಯಗಳಿಗೆ ಪಾರ್ಥ ॥ ೬೫೮ ॥

ಪರಿಪರಿಯ ದೇಹದ ವಿಕಾರಗ- ।
ಳಿರದೆ ಸತ್ತ್ವರಜಸ್ತಮೋಗುಣ ।
ಧರೆಯೊಳಗೆ ಜನ್ಮವನು ತಾಳ್ವವು ಪ್ರಕೃತಿಯಿಂ ಪಾರ್ಥ ॥
ಮರಳಿ ಕರ್ಮಗಳೆಲ್ಲ ನೋಡಿವು ।
ಬರುವುನೀಪ್ರಕೃತಿಯಲಿ ಜನ್ಮಕೆ ।
ನರನೆ ಕೇಳೀಪರಿಯ ಬ್ರಹ್ಮದ ರೂಪ ಕೌಂತೇಯ ॥ ೬೫೯ ॥

ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।
ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ ॥ ೨೦ ॥

ನರನೆ ಕೇಳೀ ಪ್ರಕೃತಿಯಲ್ಲಿಯೆ ।
ಬಿರುವುವಿಚ್ಛಾಜ್ಞಾಬುದ್ಧ್ಯಹಂಕೃತಿ ।
ಮರಳಿ ಬಿಚ್ಛಾಜ್ಞಾಬುದ್ಧಿಗಾಕಲ ವ್ಯಾಪ್ತವಾಗುವರೆ ॥
ಪರಿಪರಿಯಲಿಂದ್ರಿಯಗಳೆಲ್ಲವು ।
ಪರತೆಯನು ತೋರಿಪುವು ಕಾರ್ಯದಿ ।
ದೊರೆಯು ಬೇಕಾಗಲನೆನುತ ಮಾಡುವುವಾಯಗಳ ॥೬೫೬॥

ಕರೆವರಿದನೇ ಕಾರ್ಯವೆನುತಲಿ ।
ಒರುವುದೀಪರಿ ಮನವಿ ಜಾಗೃತಿ ।
ಪರಿಪರಿವ್ಯವಹಾರವೆಲ್ಲವ ಮಾಳ್ಪುದೀ ಮನವು ॥
ಧರೆಯಲಿವು ಕರ್ತೃತ್ವಕಾರಣ ।
ಮರಳಿ ಕಾರ್ಯವಿದೆಂಬ ತ್ರಿಪುಟಿಗೆ ।
ಬಿರುವುದಿದುವೇ ಪ್ರಕೃತಿಮೂಲವು ನೋಡು ಕೌಂತೇಯ
॥ ೬೫೭ ॥

ಆರುಹಿದನು ಹರಿ ಸಿದ್ಧರಾಜನು ।
ಪರಿಯಲೀ ಪಾರ್ಥನಿಗೆ ತದನಂ ।
ತರದಿ ಪೇಳ್ದನು ತ್ರಿಪುಟಿ ಕೂಡಲು ಕ್ರಿಯೆಗಳಾಗುವುವು ॥

ನರನೆ ಗುಣವೃದ್ಧಿಯ ಪ್ರಮಾಣದಿ ।
ಬರುವುದಾಗುಣ ಕ್ರಿಯೆಗಳಲಿ ನೀ- ।
ನರಿಯಲಾ ಕ್ರಿಯೆಗಳು ಕಣಾ ತ್ರಿಗುಣಾತ್ಮಕಗಳೆಹುವು ॥ ೬೫೭ ॥

ಸತ್ತ್ವಗುಣವೃದ್ಧಿಯಲಿ ಕ್ರಿಯೆಯು- ।
ತ್ಪತ್ತಿಯಾಗಲು ಸಕ್ರಿಯೆಯು ಕೇಳ್ ।
ಮತ್ತೆ ಗುಣರಜದಿಂದ ಕ್ರಿಯೆಯುದ್ಭವಿಸೆ ಮಧ್ಯಮವು ॥
ಮತ್ತೆ ಗುಣತಮದಿಂದ ಕ್ರಿಯೆಯು- ।
ತ್ಪತ್ತಿಯಾಗಲಶಾಸ್ತ್ರಕರ್ಮವೆ ।
ಸುತ್ತ ಪೇಳ್ವರು ಧರ್ಮಕಿಹುದು ವಿರುದ್ಧ ಕರ್ಮವದು ॥ ೬೫೮ ॥

ನರನೆ ಕೇಳೀ ಪ್ರಕೃತಿಯಿಂದಲೆ ।
ತೊರಡುವುವೆ ಸಕ್ರಿಯೆಯು ದುಷ್ಕ್ರಿಯೆ ।
ಬರುವುನೈ ಸುಖದುಃಖಸರಿಣಾಮಗಳು ಕ್ರಿಯೆಯಿಂದ ॥
ನಿರುತ ಸತ್ಕ್ರಿಯೆಯಿಂದ ಸೌಖ್ಯವು ।
ಮರಳಿ ದುಷ್ಕ್ರಿಯೆಯಿಂದ ದುಃಖವು ।
ಒರುವುವಲ್ಲನೆ ಪುರುಷನಿವುಗಳನುಣ್ಣಲೀ ಬೇಕೈ ॥ ೬೫೯ ॥

ನರನೆ ಕೇಳೀದುಃಖಸುಖಗಳು ।
ಒರುವುನೈ ವ್ಯವಹಾರದಿಂದಲೆ ।
ಯಿರುವುದೈ ವ್ಯವಹಾರ ಪ್ರಕೃತಿಗೆ ಭೋಗ ಪುರುಷನಿಗೆ ॥

ಪುರುಷಪ್ರಕೃತಿಗಳುಚಿತಯೋಗವು ।
ಯಿರುವ್ದೈ ಒಹುಚಿತ್ರವೀಪರಿ ।
ದೊರಕಿಸುವಳೈ ಸ್ತ್ರೀಯು ಗಂಡನು ಸ್ವಸ್ಥ ಕುಳಿತುಂಬ ॥ ೬೬೦ ॥

ನರನೆ ನಿನಗೆ ಚಮತ್ಕೃತಿಯ ನಾ- ।
ನರುಹುವೆನು ಬಹುಚಿತ್ರವಲ್ಲವೆ ।
ಪುರುಷಸಂಗದ ಹೊರತು ಸ್ತ್ರೀಯಲಿ ವಿಶ್ವ ಹುಟ್ಟಿತಲಾ ॥

ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ ಗುಣಾನ್ ।
ಕಾರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು ॥ ೨೧ ॥

ಪುರುಷ ಬ್ರಹ್ಮ ನಿರಾಕೃತಿಯಲಾ ।
ಯಿರುವನೈ ನಿರ್ಧಸನುದಾಸನು ।
ಯಿರುವನೊರ್ವನೆ ಜಗದಿ ಜೀರ್ಣನು ವೃದ್ಧತಮನಿಹನು ॥
ಪುರುಷನೆಂಬುದಿದಡ್ಡಹೆಸರದ- ।
ಕೆರುವುದವನಿಗೆ ಲಿಂಗವಿಲ್ಲೈ ।
ಯರಿಯಲಾರರು ಸ್ತ್ರೀ ನಪುಂಸಕವೇನು ಪರಿಯೆಂದು ॥೬೬೫॥

ಅನವರತ ಪ್ರತಿಕ್ಷಣವು ಹೊಸಒಳು ।
ಗುಣಒಲದಿ ರೂಪಗಳ ಬಲದಲಿ ।
ವನಿತೆ ಯಿವಳಾಗುವಳು ಜಡಗಳ ಸೇವೆ ಕೊಳ್ಳುವಳು ॥
ಮನ ನಪುಂಸಕವಿದ್ದರೇನದ ।
ಕುಣಿಸುವಳು ಮೂಜಗದಿ ಥೈಥೈ ।
ಮಿನುಗುತಿಹುದೀ ಖ್ಯಾತಿ ಯೇನೆಂಬೆನು ಧನಂಜಯನೆ ॥ ೬೬೫॥

ಇಲ್ಲವಾತಗೆ ಕಣ್ಣುಕಿವಿಗಳು ।
ಯಿಲ್ಲವಾತಗೆ ಕಾಲುಕೈಗಳು ।
ಯಿಲ್ಲವಾತಗೆ ರೂಪ ವರ್ಣವು ಹೆಸರು ಬೇರಿಲ್ಲ ॥
ಇಲ್ಲವಾತನಿಗವಯವಂಗಳು ।
ವಲ್ಲಭನಲಾ ಪ್ರಕೃತಿಗಾತನು ।
ಯೆಲ್ಲ ಸುಖದುಃಖಗಳನವ ಭೋಗಿಪನು ಕಲಿಪಾರ್ಥ ॥೬೬೭॥

ನರನೆ ಕೇಳೈ ಪ್ರಕೃತಿಮೂಲಕ ।
ಬರುವುವೈ ಹೆಸರುಗಳು ಖ್ಯಾತಿಗೆ ।
ಬರುವ್ದವಳೆಂ ಪ್ರೇಮ ಪ್ರೇಮದಲೇನ ಹೇಳುವೆನು ॥
ಮರಳಿ ಸಕಲೇಂದ್ರಿಯಗಳಿಲ್ಲವ- ।
ನಿರಿಸುವಳು ಜಾಗೃತಿಯಲಾಪರಿ ।
ಯಿರುವುದಲ್ಲವೆ ಪ್ರಸೃತಿಕರಣಿಯು ಕೀರ್ತಿ ಕಲಿಪಾರ್ಥ ॥ ೬೬೬ ॥

ನರನೆ ಕೇಳೈ ಕರ್ಮ ಮಾಡದೆ ।
ಯಿರುವನಾತನುದಾಸನಾದರು ।
ಮರಳಿ ಕರ್ಮಾಚರಣದುಪಭೋಗವನು ಬಿಟ್ಟಿರಲು ॥
ತರುಣಿಪ್ರಕೃತಿ ಪತಿವ್ರತೆಯಲಾ ।
ಪುರುಷನಿಂಗುಪಭೋಗ ಮಾಡಲು ।
ತಿರಿತಿರಿಗಿ ಹಚ್ಚುವಳು ಕಾಣನುಪಾಯುವಾ ಪುರುಷ ॥೬೬೮॥

ನರನೆ ತನ್ನಿಂ ತಾನೆ ವ್ಯಾಪ್ತಿಯ ।
ವಿರಚಿಸುತ ನಿರುಪಮವಿಕಾರವ- ।
ನಿರವೆ ಜಗದೊಳಗುಂಟುಮಾಳ್ಪಳು ಭ್ರಮದ ದ್ವೀಪವನು ॥
ಮೆರೆವಳವಳೇ ಕಾಮಮಂಟಪ- ।
ವಿರುವಳಲ್ಲವೆ ದೈವಿ ಮಾಯೆಯು ।
ಮೆರೆವಳೇಕೆಯು ಮೋಹವನಕೆ ವಸಂತರಾಜನಲಾ ॥ ೬೬೯ ॥

ತರುಣಿಯಂದದಿ ಪ್ರಕೃತಿ ತನ್ನಂ ।
ಪರಿಪರಿಯ ಗುಣರೂಪಗಳನನು- ।
ಸರಿಸಿ ಚಿತ್ರವಿಚಿತ್ರನಾಟಕ ಮಾಡಿ ತೋರಿಪಳು ॥
ಇರುವುದಾಕಾರಣದಿ ಗುಣಮಯಿ- ।
ಸರಸಹೆಸರೀಪ್ರಕೃತಿಗಲ್ಲವೆ ।
ನರನೆ ಕೇಳೀ ತ್ರಿಗುಣಮೂರ್ತಿಯು ಮೆರೆವಳೈ ಪ್ರಕೃತಿ ॥೬೬೪॥

ನರನೆ ನಿಯತಂ ಶಬ್ದಮಯನಾ- ।
ಗಿರುವ ಶಾಸ್ತ್ರಕೆ ಬೆಳೆಕೆ ಬಹುದೈ ।
ತರುವಳಾಕಾರವ ನಿರಾಕಾರಕ್ಕೆ ಯೀಪ್ರಕೃತಿ ॥
ನರನೆ ಕೇಳು ಪ್ರಪಂಚವೃಕ್ಷವ ।
ನಿರುತ ಬೆಳೆಸುವ ತೋಟವಿವಳೇ ।
ಧರೆಯೊಳಿಹ ಕಲಿಗಳಿಗೆ ಮೂಲಾಧಾರವಾಗಿಹಳು ॥ ೬೬೪ ॥

ನರನೆ ಕೇಳೈ ಸರ್ವವಿದ್ಯಾ- ।
ಕರಣದಲ್ಲಿ ನಿಶಾರದಳಲಾ ।
ಮೆರೆವಳೆಚ್ಚಾ ಚ್ಚಾ ನಕ್ರಿಯೆಗಳಲೆಲ್ಲ ಕೌಂತೇಯ ॥
ಇರುವಳೈ ವ್ಯಸನಗಳ ಯಂತ್ರವೆ ।
ಯಿರುವಳು ಚಮತ್ಕೃತಿಗೆ ಮಂದಿರ- ।
ನಿರುವಳೀಕೆಯು ಸೂತ್ರಧಾರಳು ವಿಶ್ವನಾಟಕಕೆ ॥ ೬೬೯ ॥

ಪ್ರಲಯ ಸಾಯಂಕಾಲವೀಕೆಗೆ ।
ತಿಳಿಯೆ ಪ್ರಾತಃಕಾಲವೆಂದರೆ ।
ಯಿಳೆಯ ಸಂಭವವದ್ಭುತಳು ಮೋಹಕಳು ನಿರುಪಮಳು ॥
ಮೆರೆವಳದ್ವಯದನ್ಯರೂಪವು ।
ಯಿರುವಳಾಪ್ತಳು ಸಂಗರಹಿತಗೆ ।
ಯಿರುವುದೀಕೆಯ ವಸತಿ ಶೂನ್ಯದಿ ಮೆರೆವಳೆವಳಲ್ಲಿ ॥೬೭೦॥

ಇರುವುದೈ ಸೌಭಾಗ್ಯವಗಣಿತ ।
ನಿರುಪಮಳು ತಾನೆಂದು ಬ್ರಹ್ಮ- ।
ಕ್ಕಿರುವಳೈ ವಶ ಬ್ರಹ್ಮವಿವಳಲಿ ಮುಗ್ಧವಾಗಿಹುದು ॥
ನರನೆ ಬ್ರಹ್ಮ ಏಕಾರಹೀನವು ।
ಪರಿಯಿದಾದರು ಬ್ರಹ್ಮದೊಳಗಾ- ।
ಪರಿಪರಿನಿಕಾರಗಳು ತಾನಾಗುತ್ತ ರಂಜಿಪಳು ॥ ೬೭೧ ॥

ಇರಲು ಬ್ರಹ್ಮ ಸ್ವಯಂಭುವೀಕೆಯು ।
ತರುವಳದಕುತ್ಪತ್ತಿಯನು ತಾಂ ।
ತರುವಳು ನಿರಾಕೃತಿಗೆ ಸಾಕೃತಿತೆಯನು ಕೌಂತೇಯ ॥
ಮರಳಿ ಬ್ರಹ್ಮಕೆ ತಾನೆ ಸ್ಥಿತಿಯಾ- ।
ಗಿರುತ ಮೆರೆವಳು ಮಾಯೆ ಯೀಕೆಯು ।
ತರುವಳಿಚ್ಛೆಯ ಬ್ರಹ್ಮದಲ್ಲಿ ನಿರಿಚ್ಛದಲಿ ತಿಳಿಯೆ ॥ ೬೭೨ ॥

ನರನೆ ಕೇಳಾ ಪೂರ್ಣತತ್ತ್ವಕೆ ।
ತರುವಳೈ ತೃಪ್ತಿಯನು ತಾನೇ ।
ಮರಳಿ ಕುಲರಹಿತಕ್ಕೆ ತಾನಾಗುವಳು ಕುಲಗೋತ್ರ ॥
ಮೆರೆವ ಬ್ರಹ್ಮವರ್ಣನೀಯವು ।
ಪರಿಯಿದಾದರು ಬ್ರಹ್ಮಲಕ್ಷಣ- ।
ಪರಿಯು ತಾನಾಗುವಳು ಸರ್ವವು ಹೇಳಲೇನದನು ॥೬೭೩॥

ಪಾರವಿಲ್ಲದ ವಸ್ತು ಬ್ರಹ್ಮವು ।
ಕೋರಿಪಳಲಾ ಅದಕೆ ಮಿತಿಯನು ।
ಧಾರುಣಿಯೊಳಮನಕ್ಕೆ ತಾಂ ಮನ ಬುದ್ಧಿಯಾಗುವಳು ॥

ಚಾರುನಿರ್ವ್ಯಾಪಾರಕಾವ್ಯಾ- ।
ಪಾರ ನಿರಹಂಕೃತಿಗೆ ತಾಂ ಹಂ- ।
ಕಾರ ಮೇಣ್ ನಿರ್ಮಮಕೆ ಮಮತೆಯು ತಾನೆಯಾಗುವಳು ॥ ೬೭೪ ॥

ತಾನನಾಮಕೆ ನಾಮ ಜನ್ಮವಿ- ।
ಹೀನಕೀಕೆಯು ಜನ್ಮವಹಳೈ ।
ಮೇಣು ಕರ್ಮಕ್ರಿಯೆಗಳಕ್ರಿಯಕಹಳು ತಾಂ ಪ್ರಕೃತಿ ॥
ಮೇಣು ಚರಣಕೆ ಚರಣ ಶ್ರವಣವಿ- ।
ಹೀನಕಾಗುವಳೀಕೆ ಶ್ರವಣವು ।
ಮೇಣನೇತ್ರಕೆ ನೇತ್ರವಾಗುವಳೀಕೆ ನೋಡಿದಿಯಾ ॥ ೬೭೫ ॥

ನರನೆ ನಿರ್ಗುಣಕಾಗುವಳು ಗುಣ ।
ನಿರವಯವಕವಯವಗಳಹಳೀ- ।
ತೆರದಿ ಬ್ರಹ್ಮಕೆ ಪುರುಷನಿಗೆ ಸರ್ವಸ್ವವೂ ಪ್ರಕೃತಿ ॥
ನರನೆ ಭಾವಾತೀತನಿಗೆ ತಾ- ।
ನಿರುವಳೈ ಭಾವಸ್ವರೂಪಳು ।
ಆರುಹಲೆಂತಾನಿರ್ವಿಕಾರಗೆ ಬ್ರಹ್ಮರೂಪನಿಗೆ ॥ ೬೭೬ ॥

ಕೊಡುತಿರುವಳು ಏಕಾರವೆಲ್ಲವ ।
ನಡಗುವುದಲಾ ಚಂದ್ರತೇಜವು ।
ಪೊಡವಿಯಲಮಾವಾಸ್ಯೆಯಲ್ಲಿಯೆ ನೋಡು ಕೌಂತೇಯ ॥
ನಡಗರದಲಾಪ್ರಕೃತಿದಶೆಯಲಿ ।
ಯಡಗುವುದಲಾ ಬ್ರಹ್ಮತೇಜವು ।
ಕೊಡದೆ ಸೈಜ್ಯವನುಚ್ಚಹೇಮಕೆ ನೀಚಮಿಶ್ರಣವು ॥ ೬೭೭ ॥

ನರನು ನೋಡು ಸದಾಚರಣದ- ।
ಲ್ಲಿರುವನಾದರು ಸಂಜೆಹೊತ್ತಿಲಿ ।
ಬರಲು ನೋಡಪವಿತ್ರನೆಲದಿ ಏಕಾಕಿ ತಟ್ಟುವುದು ॥
ಮರುಳನಾಗುವನಲ್ಲವೇನೈ ।
ಬರಲು ಮಧ್ಯಾಹ್ನದಲಿ ನೋಡವು ।
ತರುಣದಲ್ಲವೆ ದುರ್ದಿನತ್ವವ ಜಗದಿ ಸುದಿನಕ್ಕೆ ॥ ೬೭೮ ॥

ಪ್ರೀರ ಕೆಚ್ಚಲಲಿಯುದು ಪಶುವಿನ ।
ತೋರುವುದಲಾ ಬೆಂಕಿ ಕಾಷ್ಠದಿ ।
ಚಾರುರತ್ನದ ತೇಜವರಿಯಿಯವೊಳಗೆ ನೇಟ್ಟಿಸಲು ॥
ತೋರಲಾರದು ಹೊರಗೆ ಕೇಳೈ ।
ಧಾರುಣಿಪ ಸೆರೆಯಾಗೆ ಸಿಂಹವು ।
ಭಾರಿರೋಗಗ್ರಸ್ತವಾಗಲು ತೇಜವಡಗುವುದು ॥ ೬೭೯ ॥

ಧರೆಯಲಾಪರಿ ವಶದಿ ಪ್ರಕೃತಿಯು ।
ಪುರುಷನಾಗಲು ತೇಜ ಪೋಪುದು ।
ನರನೆ ನಿನಗಿದ ವರ್ಣಿಸುವೆ ದೃಷ್ಟಾಂತಪೂರ್ವಕದಿ ॥
ನರಗೆ ನಿದ್ರಾವಶತೆ ಬರುತಿರೆ ।
ಭ್ರ-ವ್ವೃ ಸುಖದುಃಖ ಸ್ವಪ್ನದೊ- ।
ಳೆರಡನಿವನುಪಭೋಗಿಸಲು ನರಘಚ್ಚುವುದು ಸ್ವಪ್ನ ॥೬೮೦॥

ಪುರುಷನೀಪರಿ ಪ್ರಕೃತಿವಶ ಬಂ- ।
ದಿರಲು ಸುಖದುಃಖಗಳ ಭೋಗಿಸ- ।
ನಿರುವುದಾಪರಿ ತ್ರಿಗುಣಗಳ ಪರಿಣಾಮ ಪುರುಷನಲಿ ॥
ಪುರುಷನಿರ್ದಾರುದಾಸನಾತನು ।
ತರುಣಿಗತಿವಶನಾಗಿ ನಡೆಯಲು ।
ಮರುಳನಾಗುವನಲ್ಲವೇನವ ಸ್ತ್ರೈಣನೆನಿಸುವನು ॥ ೬೮೧ ॥

ಇರುವನಜನ್ಯೆ ಬ್ರಹ್ಮ ನಿತ್ಯನು ।
ಪರಿಯಿದಾದರು ಪ್ರಕೃತಿಸಂಗದಿ ।
ಬರುವ ವವನಿಗೆ ಜನ್ಮಮೃತ್ಯುಗಳೆಂಬ ಬಾಧೆಗಳು ॥
ಉರಿವ ಕೆಂಡದ ಪರಿಯ ಲೋಹದೊ- ।
ಳೆರಿಸಲಾಘಾತಗಳ ನೋಳ್ಪರಿ- ।
ಗಿರಿಯುವರು ಬೆಂಕಿಯನೆನುತ್ತಾಭಾಸವಾಗುವುದು ॥೬೮೨॥

ನೀರಿನಲಿ ತೆರೆಗಳಲಿ ಚಂದ್ರನ ।
ತೋರುವುವು ಪ್ರತಿಬಿಂಬಗಳು ಬಹು ।
ಯಾರವನ್ನೊಂದೆನುವ ಚಂದ್ರರನೇಕರಿರುತಿಹರೆ ॥
ಚಾರುಕಾಚದ ಮಣಿಗೆ ಕುಂಕುಮ- ।
ವೇರಿಸಿದರಾರಕ್ತ ತೋರ್ಪುದು ।
ತೋರುವುದು ಕನ್ನಡಿಯ ಬಳಿ ಮುಖವೆರಡನೆಯದಾಗಿ ॥೬೮೩॥

ನರನೆ ಕೇಳ್ ತ್ರಿಗುಣಗಳ ಯೋಗದಿ ।
ಬರವುದಾ ಬ್ರಹ್ಮಕ್ಕೆ ಜನ್ಮವು ।
ನಿರುತ ಜನ್ಮವಿಹೀನತತ್ತ್ವವು ಬ್ರಹ್ಮವೈ ವಾರ್ಥ ॥
ಬರಲು ಯತಿವರನಿಂಗೆ ನಿದ್ರೆಯ ।
ಭರದಿ ಸ್ವಪ್ನವು ಸ್ವಪ್ನದಲ್ಲಿಯೆ ।
ಬರುವುದವಗಾಭಾಸವಂತ್ಯಜನಾದೆನಿಂದೆನುತ ॥ ೬೮೪ ॥

ಪುರುಷನಾಪರಿಯುತ್ತಮಾಧಮ ।
ಪರಿಪರಿ-ಯ ಯೋನಿಗಳ ಸೇರುವ- ।
ನಿರದಲಾ ಸುಖದುಃಖವುರುಷಗೆ ಪ್ರಕೃತಿನಿರಹಿತಗೆ ॥
ಮರಣಜನ್ಮವಿಹೀನನಾದರು ।
ಬರುವುವಿವು ಪ್ರಕೃತಿಯ ಗುಣಗಳೆಂ- ।
ದಿರುವುದೆಲ್ಲಕೆ ಹೇತು ಪ್ರಕೃತಿಯ ಗುಣಗಳಾಸಂಗ ॥ ೬೮೫ ॥

ಉಪದ್ರಷ್ಟಾನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ ।
ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ ॥ ೨೨ ॥

ಪುರುಷಪ್ರಕೃತಿಯೊಳಿಹನು ಪಾರ್ಥನೆ ।
ಪರಿಯು ನಾನದ ನಿನಗೆ ಪೇಳುವೆ- ।
ನಿರುವುದಲ್ಲವೆ ಕಂಭ ಮಲ್ಲಿಗೆಬಳ್ಳಿಗಾಧಾರ ॥
ಬರುವುವೇನವು ಖಂಬದಲಿ ಪರಿ- ।
ವಿ ವಿಕಾರಗಳಾಗೆ ಬಳ್ಳಿಗೆ ।
ಯಿರುವುದಲ್ಲವೆ ಖಂಬವದು ನಿರ್ಲಿಪ್ತ ಬಳ್ಳಿಯಲಿ ॥ ೬೮೬ ॥

ನರನೆ ದೃಷ್ಟಾಂತವನು ಪೇಳಿದೆ ।
ನಿರುವುದಿದರಲ್ಲಜಗಚ್ಚಾಂತರ ।
ಮರಳಿ ನಿನಗಿನ್ನೊಂದು ದೃಷ್ಟಾಂತವನು ಪೇಳುವೆನು ॥
ನರನೆ ಪ್ರಕೃತಿ ಮಹಾನದಿಯ ತೆರ- ।
ವಿರುವುದೈ ತೀರದಿ ಮಹಾಗಿರಿ ।
ಪುರುಷನೆಂಬುದು ಬಿಂಬ ನದಿಯಲಿ ಕಾಣ ಬಹುದಲ್ಲೈ ॥೬೮೭॥

ತೋರಲೀಪರಿ ಬಿಂಬ ನದಿಯಲಿ ।
ಪೂರ ಬಂದರೆ ಗಿರಿಯು ಹರಿವುದೆ ।
ಮೇರುವಿನ ತೆರವಿಹುದಲಾ ತೀರದಲಿ ನಿಶ್ಚಲವು ॥
ಧಾರುಣಿಯಲೀತೆರದಿ ಪುರುಷನು ।
ತೋರುವನು ಜಗದೊಳಗೆ ಯಾದರು ।
ಬಾರದವಗೆ ವಿಕಾರ ಮೇಣು ವಿನಾಶ ಕೌಂತೇಯ ॥ ೬೮೮ ॥

ಪುರುಷನಿರುವನು ಜಗಕೆ ಶಾಸಕ ।
ತರುವನಾಯುರ್ದಾಯ ಪ್ರಕೃತಿಗೆ ।
ಮರಳಿ ಪುರುಷನ ಯೋಗದಿಂದಲೆ ಜಗದ ನಿರ್ಮಾಣ ॥
ಪುರುಷನಾಕಾರಣದಿ ಪ್ರಕೃತಿಗೆ ।
ಪೆರೆವನ್ನೆ ನಿಜಭರ್ತನಂದದಿ ।
ನರನೆ ನೋಡಲನಂತಕಾಲದ ಸೃಷ್ಟಿಗಳ ನಿಜದಿ ॥ ೬೮೯ ॥

ಮರಳಿ ಕಲ್ಪಾಂತಗಳು ಬರುತಲೆ ।
ಪುರುಷನಲಿ ಲಯವಾಗಿ ಪೋಗುವು- ।
ನಿರುವನಾಕಾರಣದಿ ಪ್ರಕೃತಿಯು ಸ್ವಾಮಿ ಪುರುಷನಾ ॥

ಇರುವನಾತನು ಸೂತ್ರಧಾರನು ।
ನರನೆ ರಂಗಸ್ಥಳವು ನೋಡಲು ।
ಮೆರೆವುದೈ ಬ್ರಹ್ಮಾಂಡ ಲೌಕಿಕದೃಶ್ಯ ನಾಟಕವು ॥ ೬೦ ॥

ಇರುವುದೈ ಪರಮಾತ್ಮನಾಮದಿ ।
ನರಶರೀರದಿ ತತ್ತ್ವವದು ನೋ- ।
ಡರಿಯಲಾತನೆ ಪುರುಷ ಪ್ರಕೃತಿಗತೀತನಾಗಿರುವ ॥

ಯ ಏವಂ ವೇತ್ತಿ ಪುರುಷಂ ಪ್ರಕೃತಿಂ ಚ ಗುಣೈಃ ಸಹ ।
ಸರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ ॥ ೨೩ ॥

ನರನೆ ಕೇಳೀತೆರದಿ ಪುರುಷನ ।
ಮರಳಿ ಪ್ರಕೃತಿಯ ಕರ್ಮಗುಣಗಳ- ।
ನಿರವನಾರವನೇ ಧನಂಜಯ ಕೋವಿದನು ಜಗದಿ ॥
ಇರುವುದದು ನಿಜವಸ್ತು ಮೇಣದು ।
ಮೆರೆವ ಛಾಯೆಯು ಸತ್ಯಜಲವಿದು ।
ಮೆರೆವುದಾತೆಗೆ ಮಿಥ್ಯವಿಹ ಮೃಗಜಲವೆನುತ ಹೀಗೆ ॥೬೧॥

ಅರಿವನೈ ಕೋವಿದನು ತದ್ವತು ।
ಪುರುಷನ ಪ್ರಕೃತಿಯ ಸ್ವರೂಪವ- ।
ನರಿವ ಕೋವಿದ ಬರುವುದವಗೆ ಯಥಾರ್ಥಜ್ಞಾನವದು ॥
ಪರಿಪರಿಯ ಕರ್ಮಗಳ ದೇಹವು ।
ಪಿರಿಜಿಸಿದರನ್ನ ಪ್ರಕೃತಿಜನ್ಯಗ- ।
ಳರಿಯಲಾ ನಿರ್ಲಿಪ್ತನಿಹನೈ ಪುರುಷ ಕೋವಿದನು ॥ ೬೨ ॥

ಗಾಳಿ ಬಲವತ್ತರದಿ ಬೀಸಲು ।
ಧೂಳಿರಾಶಿಯು ಗಗನಕೇಳ್ವುದು ।
ಧೂಳಿಯಿಂತಾಗಗನ ಮಲಿನತ್ವವನು ಹೊಂದುವುದೆ ॥

ಕೇಳು ಪಾರ್ಥನೆ ಜೀವದಿಂದಿರೆ ।
ತಾಳಲಾರನು ಮೋಹ ದೇಹದಿ ।
ಬೀಳಲಾನರದೇಹವವಗಿಲ್ಲವು ಪುನರ್ಜನ್ಮ ॥ ೬೧ ॥

ಅರಿಯಲೀಪರಿ ತತ್ತ್ವ ವಾರ್ಥನೆ ।
ಮರಣಜನ್ಮಗಳಿಂದ ಮುಕ್ತಿಯು ।
ದೊರೆಯುವುದು ಕೇಳದುವಲೌಕಿಕಭಾಗ್ಯ ಜಗಕಲ್ಲೈ ॥
ಪುರುಷನ ಪ್ರಕೃತಿಯು ಸ್ವರೂಪವ- ।
ನರಿತವಗೆ ಕಲ್ಯಾಣವಪ್ಪುದು ।
ನರನೆ ಕೇಳೈ ಜ್ಞಾನವಿದ ಸಂವಾದಿಸುವ ಬಗೆಯ ॥ ೬೪ ॥

ನರನೆ ಮನದಿ ಯಥಾರ್ಥಬೀಪರಿ ।
ಪುರುಷನ ಪ್ರಕೃತಿಯ ಸ್ವರೂಪವ- ।
ನರಿವ ಸಾಧನಗಳು ಕಣಾ ಪುಷ್ಕಳವಿಹುವು ಪಾರ್ಥ ॥
ತರಣಿಯಿಂದದಿ ಸ್ವಚ್ಛ ಬೆಳಗುವ ।
ಪಿರಿದುವಾಯುವ ನಾನು ನಿನಗೀ- ।
ಗೊರುವೆ ಕೇಳೈ ಪಾರ್ಥ ಮನಗೊಟ್ಟಿದನು ಭಕ್ತಿಯಲಿ ॥ ೬೫ ॥

ಧ್ಯಾನೇನಾತ್ಮನಿ ಪಶ್ಯಂತಿ ಕೇಚಿದಾತ್ಮಾನಮಾತ್ಮನಾ ।
ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ ॥ ೨೪ ॥

ನರನೆ ಕೇಳಧ್ಯಾತ್ಮಕನಕವ- ।
ನರಿಸುತ ವಿಚಾರಾಗ್ನಿಯಲ್ಲಿಯೆ ।
ಭರದಲದಕ್ಕೆ ಪುಟವು ಕೊಡುವರು ಶ್ರವಣಮನನದಲಿ ॥
ಹೊರಗೆ ತೆಗೆವರನಾತ್ಮಧಾತುವ ।
ಬರುವುದಾತ್ಮಜ್ಞಾನಶುದ್ಧಿಯು ।
ಹರಿಸಿ ಮೂವತ್ತಾರುಭೇದವ ಮೂಲತತ್ತ್ವವನು ॥ ೬೬ ॥

ಪರಿಕಿಸುತಲಾಶುದ್ಧತತ್ತ್ವವ ।
ಪರುಷದಿಂದಾರಿಸುವರಲ್ಲವೆ ।
ನರನೆ ನೋಡುವರೈ ಸ್ವರೂಪವನಾತ್ಮಜ್ಞಾನದಲಿ ॥
ಧರೆಯಲನ್ಯರು ಭಕ್ತಿಮಾರ್ಗದಿ ।
ಬರುವರನ್ಯರು ಕರ್ಮಯೋಗದಿ ।
ಮರಳಿ ಕೆಲರು ವಿಚಾರಯೋಗದಿ ತಿಳಿವರಾತ್ಮನನು ॥ ೬೭ ॥

ಅನ್ಯೇ ತ್ವೇವಮಜಾನಂತಃ ಶ್ರುತ್ವಾನ್ಯೇಭ್ಯ ಉಪಾಸತೇ ।
ತೇಪಿ ಚಾತಿತರಂತ್ಯೇವ ಮೃತ್ಯುಂ ಶ್ರುತಿಪರಾಯಣಾಃ ॥ ೨೫ ॥

ಪರಿಪರಿಯಲೀಮಾರ್ಗಗಳ ಸ್ವೀ- ।
ಕರಿಸಿ ಭವಸಾಗರವ ದಾಟುವ- ।
ರಿರುವುದೇ ಸಂದೇಹ ಮನದಲಿ ನಿನಗೆ ಕೌಂತೇಯ ॥
ತೊರೆದು ಕೆಲರಭಿಮಾನವನು ತಾ- ।
ವಿರಿಸುವರು ಶ್ರದ್ಧೆಯನು ಮೇಣಾ- ।
ತೆರದಿ ಗುರುವಾಕ್ಯದಲಿ ವಿಶ್ವಾಸವನು ಕೊಡುವರಲಾ ॥೬೪॥

ನರನೆ ಕೇಳೈ ಯವರ ಬಾಯಿಂ- ।
ದೊರಗೆ ಬರುತಿಹ ಶಬ್ದಸರಣಿಯ ।
ಭರದಿ ನೀವಾಳಿಸುವರೈ ನಿಜದೇಹಸೌಖ್ಯವನು ॥
ತಿರಿತಿರಿಗಿ ತಪಲಿದಿರ್ಮವ ।
ಪರಿಪರಿಯ ಸತ್ಕರ್ಮ ಮಾಡುತ ।
ದೊರಕಿಸುವರೈ ಸತ್ಪುರುಷರ ವರಪ್ರಸಾದವನು ॥ ೭೧ ॥

ಇರಿಸುವುದು ಯಾರಲ್ಲಿ ಶ್ರದ್ಧೆಯ- ।
ನೊರೆವೆ ನಾ ನಿನಗಿದನು ಪಾರ್ಥನೆ ।
ವುರುಸರಾರೀಪ್ರಾಣಿಮಾತ್ರದ ಹಿತವನರಿಯುತಲೆ ॥
ಧರೆಯೊಳಹಿತವಿದಾವುದೆಂಬುದ- ।
ನರಿತು ಜಗದಹಿತವನು ತಾವೇ ।
ಹರಿಸುವರು ಜಗಕೆಲ್ಲ ಸುಖ ಕೊಡುತಿಹರು ನೇಮದಲಿ ॥ ೬೯ ॥

ಪರಿಪರಿಯಲಾ ಧರ್ಮಮಾರ್ಗದಿ ।
ಮರಣಸಾಗರ ದಾಟಿ ಪೋಗುವ- ।
ರಿರುವುದೀಪರಿ ಬ್ರಹ್ಮಸಾಧಿಪ ಹಲವು ಮಾರ್ಗಗಳು ॥
ಪರಿಪರಿಯ ಮಾರ್ಗಗಳು ಸಾಕೈ ।
ನರನೆ ನಿನಗಾನೊರೆವೆ ಸಾರವ- ।
ನರುಹುವೆನು ಸಿದ್ಧಾಂತ ತನ್ನವನೀತ ನಿನಗೀವೆ ॥ ೭೨ ॥

ಧರೆಯಲೀತೆರನಿರುವ ಪುರುಷರ- ।
ನರಿಯುತವರಾಡುವುದ ಕೇಳುತ- ।
ಲರಿಸುವರು ತತ್ಪುರುಷರಲಿ ಶ್ರದ್ಧೆಯ ಧನಂಜಯನೆ ॥
ಮರಳಿ ಯವರಾಡಿರ್ದ ಶಬ್ದನ ।
ಹರುಷದಿಂದಲಿ ಕೇಳಿ ಮತ್ತಾ- ।
ದರದಿ ತನುಧೀಧನಪನರ್ಪಿಸುವರು ಸರಾಗದಲಿ ॥ ೭೦ ॥

ನರನೆ ಪರಿಪರಿಮತದ ಖಂಡನ ।
ವಿರಚಿಸುತ ಸಿದ್ಧಾಂತತತ್ತ್ವವ- ।
ನೊರೆವೆ ನಿನಗಾಂ ಸುಲಭವಾಗಿಹ ರಾಜಮಾರ್ಗವನು ॥
ದೊರೆವುದದರಿಂ ಬ್ರಹ್ಮ ಸಹಜದಿ ।
ಸುಲಭದಲಿ ಕೇಳೈ ಧನಂಜಯ ।
ಬರಿದೆ ನಿನಗಾಯಾಸನೇತಕೆ ಮಾರ್ಗ ಹುಡುಕುವರೆ ॥ ೭೩ ॥

ಯಾವತ್ಸಂಜಾಯತೇ ಕಿಂಚಿತ್ ಸತ್ತ್ವಂ ಸ್ಥಾವರಜಂಗಮಮ್ ।
ಕ್ಷೇತ್ರಕ್ಷೇತ್ರಜ್ಞಸಂಯೋಗಾತ್ತದ್ವಿದ್ಧಿ ಭರತರ್ಷಭ ॥ ೨೬ ॥

ಒರೆದೆ ನಿನಗಾಂ ಕ್ಷೇತ್ರವರ್ಣನೆ- ।
ಯೊರೆವೆ ನಾ ಕ್ಷೇತ್ರಜ್ಞದರ್ಥವ ।
ಪರಿಯನದ ವಿಸ್ತರದಿ ಹೇಳ್ವೆ ಬೋಧ ನಿನಗಾಯ್ತೆ ॥

ಬರೆ ಪರಸ್ಪರವೈಕ್ಯವೆರಡಕೆ ।
ಒರುವೆದುತ್ಪತ್ತಿಯು ಜಗಕ್ಕೆನೆ ।
ತೆರೆಗಳೇಳುವ ತೆರದಿ ಗಾಳಿಯು ಬೀಸೆ ಸಾಗರದಿ ॥ ೭೪ ॥

ತರಣಿಕಿರಣವ ನೆಲದಿ ಬೀಳಲು ।
ಬರುವುದೈ ಮೃಗಜಲವು ಸರಿಸರಿ ।
ಸುರಿಯಶಾಮಳೆ ಭರದಿ ನೆಲದಲಿ ಬೆಳೆವುದೈ ಹುಲ್ಲು ॥

ನರನೆ ಸಕಲಚರಾಚರದಿ ತುಂ- ।
ಬಿರುವ ಜೀವನಿದೆಂಬ ತತ್ತ್ವವು ।
ವುರುಸಪ್ರಕೃತಿಗಳೊಟ್ಟುಗೂಡಲು ಹುಟ್ಟುವುದು ತಿಳಿಯೆ ॥

ಅರಿಯಲಾ ಕೌಂತೇಯ ಕೇಳರಿ ।
ಯೆರಡು ತತ್ತ್ವಗಳನ್ಯವಲ್ಲೈ ।
ಪುರುಷಪ್ರಕೃತಿಗಳೊಂದು ಕೂಡಿಯೆ ಮೆರೆವುದೀಸೃಷ್ಟಿ ॥ ೭೫ ॥

ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಮ್ ।
ವಿನಶ್ಯತ್ಸ್ವವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ ॥ ೨೭ ॥

ಪಾರ್ಥ ಕೇಳೈ ಲಕ್ಷಪೂರ್ವಕ ।
ವಸ್ತ್ರತನವದು ತಂತುವೆಲ್ಲೈ ।
ವಸ್ತ್ರತನವದು ತಂತುವೇ ಯಿಹುದಲ್ಲವೇ ನೋಡು ॥
ವಿಸ್ತರದಲೀತೆರದಿ ನಿಜ ತ- ।
ತ್ವಾರ್ಥವನು ನೋಡಲು ಧನಂಜಯ ।
ಚಿತ್ತಿದಲಿ ಕೇಳ್ ಪ್ರಕೃತಿಪುರುಷರೊಳೈಕ್ಯ ತೋರುವುದು ॥ ೨೦೬ ॥

ಬಂದರಿಂದುತ್ಪನ್ನವಹುದೇ- ।
ಸಂದಭೂತಗಳೆಲ್ಲ ಜಗದಲಿ ।
ಬಂದಿಹುವು ಪರಿಪರಿಯ ಹೆಸರುಗಳಾತೆರದಿ ನಡತೆ ॥
ಕುಂದು ಹೆಚ್ಚಿಹುವಾ ಪರಿಯಲೇ ।
ಕಂದೆರೆದು ನೀನೈಕ್ಯ ನೋಡವೆ ।
ಬಂದುದಾತ್ಮಗೆ ಭೇದವೆನುತಲಿ ಯೋಚಿಸಲು ಪಾರ್ಥ ॥೨೦೭॥

ಜನುಮಜನ್ಮಾಂತರದಿ ಮುಂದಕು ।
ಕೊನೆಯೆ ಯಿಲ್ಲದ ಭವಪರಂಪರೆಯಲಿ ।
ಗಣನೆಯಿಲ್ಲದೆ ಮುಳಗುತೇಳುತ ಒಳಲುತಿರುವಿ ಕಣಾ ॥
ವಿನಯಶೀಲನೆ ತುಂಬಿಲತೆಯದು- ।
ವೊಣಗುವನಕವೆ ಕೊಡುವ ಕಾಯಿಗ- ।
ಳನಿತು ವರ್ತಿಪವುದ್ದ ಡೊಂಕಾದರುನು ತುಂಬಗಳೆ ॥೨೦೮॥

ಮರನು ಡೊಂಕಾದರುನು ನೋಡೈ ।
ಒರುಪ್ಪಲ್ಲವೆ ಬದರೆಫಲಗಳು ।
ಮರವ ಕಡೆವರು ಬದರಿತರುವೆನುತಲ್ಲನೇ ಪಾರ್ಥ ॥
ಧರೆಯಲಾಪರಿ ಜೀವಿಮಾತ್ರವು ।
ಕುರುಡ ಕುಂಟವು ಕಿವುಡವಾದರು ।
ಯಿರುವನಾತ್ಮನು ಸರಳನೊಳಗೆಲ್ಲರಲಿ ಕೌಂತೇಯ ॥ ೨೦೯ ॥

ಪರಿಪರಿಯ ಕೆಂಡಗಳ ತಂಡಗ- ।
ಳೆರಲು ನೋಡುಪ್ಪಣ್ಣೆನೆ ಭೇದನೆ ।
ಪರಿಪರಿಯ ಜೀವಿಯಲಿ ತಾಂ ಪರಮಾತ್ಮನೊಬ್ಬನಲಾ ॥
ಸುರಿವ ಮಳೆಧಾರೆಗಳನೇಕಗ- ।
ಳೆರುವುದೊಂದೇ ತತ್ತ್ವ ನೀರಾ- ।
ತೆರದಿ ಭೂತಾಕಾರಭೇದದೊಳೊರ್ವ ಪರಮಾತ್ಮ ॥ ೨೧೦ ॥

ಪರಿಪರಿಯ ಘಟಿಮಠದೊಳಾಕೃತಿ- ।
ಯಿರುವುದೊಳಗಾಕಾಶವೊಂದೇ ।
ಪರಿಯೊಳಾ ಭಿನ್ನಸ್ವರೂಪದ ಭೂತನಿಕರದಲಿ ॥
ಇರುವನವ ಪರಮಾತ್ಮ ನೀರ್ವನೆ ।
ಪರಿಪರಿಯ ಚಿನ್ನಾಭರಣದ- ।
ಲಿರುವುದಲ್ಲವೆ ನಿತ್ಯತತ್ತ್ವ ಸುವರ್ಣ ಕೌಂತೇಯ ॥ ೨೧೧ ॥

ಧರೆಯಲಾಪರಿ ಸರ್ವಭೂತದೊ- ।
ಳಿರುವನಾತುಮನೊರ್ವನಲ್ಲವೆ ।
ಮರಣವಿಲ್ಲವನಿಂಗೆ ದೇಹಗಳೆಲ್ಲ ನಾಯುವುವು ॥
ಇರುವನೀಪರಮಾತ್ಮ ಜೀವಿಯೆ ।
ತಿರಿಗು ಜೀವಾಭಿನ್ನನೇ ಯೀ- ।
ತೆರದಿ ನೋಡುವನಾವನೋ ನಿಜದೃಷ್ಟಿ ಯಿಹುದವಗೆ ॥ ೨೧೨ ॥

ನರನೆ ನೋಡೈ ಜ್ಞಾನ ನಿಜನಾ- ।
ಗಿರುವ ದೃಷ್ಟಿಯಿದಿರೊಳೀಪರಿ ।
ಯಿರುವ ದೃಷ್ಟಿಯು ಭವ್ಯದೃಷ್ಟಿಯು ನೋಡು ಕೌಂತೇಯ ॥
ಒರೆದೆ ನಾನಾತನನು ತುತಿಸುವೆ ।
ನರನೆ ನೀ ಹೀಗೆಂದು ತಿಳಿಯುವೆ ।
ಪುರುಷನವನತಿಭಾಗ್ಯವಂತನೆನುತ್ತ ತಿಳಿ ಪಾರ್ಥ ॥ ೨೧೩ ॥

ಸಮಂ ಪಶ್ಯನ್ಹಿ ಸರ್ವತ್ರ ಸಮವಸ್ಥಿತಮೀಶ್ವರಮ್ ।
ನ ಹಿನಸ್ತ್ಯಾತ್ಮನಾತ್ಮಾನಂ ತತೋ ಯಾತಿ ಪರಾಂ ಗತಿಮ್ ॥ ೨೮ ॥

ನರಶರೀರ ಗುಣೇಂದ್ರಿಯದಿ ತುಂ- ।
ಬಿರುವ ಚೀಲವಲಾ ಧನಂಜಯ ।
ಭರಿತವಿಹುನಾನಾತಳಕ್ಷಪಿತ್ತದ ವಿಕಾರಗಳು ॥
ಇರುವುದಿದರಲಿ ಪಂಚಭೂತಗ- ।
ಳುರುತರದಲವು ರಂಪವಲಾ ।
ಮೆರೆಯುವುವು ನೋಡೈದು ಹಾವಿನ ಹೆಡೆಗಳಂದದಲಿ ॥ ೨೧೪ ॥

ಉರಿವ್ರದೈನಿಧಕಡಿತದಿಂದಿದು ।
ಮೆರೆವ ಕಂಠೀರವನು ಜೀವನೆ ।
ದೊರೆಯಿತೀತಗೆ ದೇಹವೆಂಬುದೆ ಪಂಜರವು ಪಾರ್ಥ ॥
ದೊರೆದ ಪಂಜರವಿದನು ನಿಮಿಷದಿ ।
ಹರಿದು ಹಾಕಲಶಕ್ಯನೇನೈ ।
ಮೆರೆವಕಂಠೀರವಗೆ ನೋಡು ವಿಚಿತ್ರಸಂಗತಿಯ ॥ ೭೧೫ ॥

ಪರಿಯನಿದನಾಚರಿಸದಲೆ ಕೇ- ।
ಸ್ಯ ರೂಪದ ಜೀವ ಸೌಖ್ಯದೊ- ।
ಳಿರುವನಲ್ಲವೆ ಮರೆತನಿತ್ಯತ್ವವನು ಕೌಂತೇಯ ॥
ಇರಿಯದಿರೆ ನಿತ್ಯತ್ವಶಸ್ತ್ರನ ।
ಹರಿಯದುದರವು ದೇಹವೆಂಬುದು ।
ತಿರಿಗಿ ನಾಶವು ಬರುವುದೆಂತೈ ತೋರುವುದನಾಶಿ ॥ ೭೧೬ ॥

ನರನೆ ಕೇಳೈ ಜ್ಞಾನಿಪೂರುಷ- ।
ನಿರುತಲೀದೇಹದಲಿ ಘಾತವ- ।
ನಿರಿಯದಲೆ ಪರಬ್ರಹ್ಮಪದವಿಯ ಸೇರುವನು ಪಾರ್ಥ ॥
ಪರಿಪರಿಯ ಯೋಗಿಗಳು ಜನ್ಮಾಂ- ।
ತರವ ದಾಟುತ ಕೊನೆಗೆ ಪೋಪ್ಪರು ।
ತಿರಿಗಿ ಸಾಕೀಜನ್ಮಮರಣದ ಯಾತನೆಗಳೆನುತ ॥ ೭೧೭ ॥

ಹೇಳುತೀ ನಿರ್ವಾಣವಚನವ ।
ಸಾಲಿನಲಿ ಮುಳುಗುವರು ಯಿದರಲಿ ।
ಹೇಳಲೇನದ ಬ್ರಹ್ಮಪದವಿದು ದುರ್ಲಭವು ಪಾರ್ಥ ॥
ಮೇಲೆ ನೋಡಾಕಾರಹೀನವು ।
ಕೇಳು ನಾದಾತೀತಶಬ್ದವಿದು ।
ಅಲಿವೈ ತುರ್ಯಸ್ಥಿತಿಗೆ ನೋಡಿದುವೆ ಮಂದಿರವು ॥ ೭೧೮ ॥

ಶರಧಿಯಲಿ ನದಿಯೆಲ್ಲ ಕೂಡುವ- ।
ತೆರದಿ ಗತಿಗಳು ಮೋಕ್ಷಸಹಿತಲಿ ।
ಬರುತಲೈಕ್ಯವ ಹೊಂದುವುವಲಾ ಬ್ರಹ್ಮಪದನಿಯಲಿ ॥
ಮೆರೆವುದೈ ವಿಶ್ರಾಂತಿಸ್ಥಳವಿದು ।
ತೊರೆಯೆ ವೈಷಮ್ಯವನು ಪಾರ್ಥನೆ ।
ಚರಣದಡಿಗಿದು ಬರುವುದೈ ಯಾಯಾಸವಿಲ್ಲದಲೆ ॥ ೭೧೯ ॥

ಮೆರೆವವಲ್ಲನೆ ದೀಪ ಪರಿಪರಿ ।
ಯಿರುವುದವುಗಳಲೊಂದೆ ತೇಜವು ।
ಭರಿತನಿಹನಾತುಮನನಾದಿಯು ಸರ್ವರೊಳಗೊರ್ವ ॥
ಅರಿವನಾರೀತತ್ತ್ವ ಸಮತೆಯ ।
ಹರಿದು ಬಿಡುವನು ಜನ್ಮಮರಣವ ।
ವುರುಷನಾತನು ಭಾಗ್ಯಶಾಲಿಯು ಹೇಳಲೇನದನು ॥ ೭೨೦ ॥

ತಿರಿತಿರಿಗಿ ನಾನವನ ತುತಿಸುವೆ- ।
ನಿರುವನಾಪರಿ ಭಾಗ್ಯಶಾಲಿಯು ।
ನಿರುತವಾತನ- ನಾಮ್ಯಶಯ್ಯೆಯ ಮೇಲೆ ಮಲಗಿಹನು ॥

ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ।
ಯಃ ಪಶ್ಯತಿ ತಥಾತ್ಮಾನಮಕರ್ತಾರಂ ಸ ಪಶ್ಯತಿ ॥ ೨೯ ॥

ನರನೆ ಧೀಮನಃಆದಿಕೇಂದ್ರಿಯ ।
ಮರಳಿಯದರಿಂದಪ್ಪ ಕೆಲಸಗ- ।
ಳಿರುವುವೀವಿಧವಾಟವೆಲ್ಲವು ಪ್ರಕೃತಿಸಂಭವವು ॥
ಅರಿವನಾರೀ ಪೂರ್ಣತತ್ತ್ವವ- ।
ನಿರುವನವನೇ ಜ್ಞಾನಿಪುರುಷನು ।
ಧರೆಯಲವನೇ ಭಾಗ್ಯಶಾಲಿಯು ನೋಡು ಕೌಂತೇಯ
॥ ೭೨೧ ॥

ಮನುಜರಿರುವರನೇಕರೊಂದೇ- ।
ಮನೆಯೊಳಗೆ ವ್ಯವಹಾರ ಮಾಳ್ಪರು ।
ಮನೆಯು ವ್ಯವಹಾರವನು ಮಾಳ್ಪದೆ ನೋಡು ಕೌಂತೇಯ ॥

ಕ್ಷಣಕ್ಷಣದಿ ಗಗನದಲಿ ಪೋಡವು ।
ಮಿನುಗುತಿರುವುದು ಭ್ರಮಣ ಮಾಳ್ಪು- ।
ದಣುಕವಾದರು ಭ್ರಮಣ ಮಾಳ್ಪುದೆ ಗಗನ ಥಿರನಿಹುದು ॥೭೨೨॥

ನರನೆ ಕೇಳೈ ಪ್ರಕೃತಿ ತನ್ನಯ ।
ಪರಿಪರಿಯ ಗುಣಗಳ ಸಹಾಯದಿ ।
ಭರದಲಾತ್ಮನ ಯೋಗದಿಂದಾಟಗಳ ಮಾಡುವಳು ॥
ಇರುವನಾತ್ಮನು ಕಂಭದಂದದಿ ।
ಥಿರನು ನಿಶ್ಚಲ ನಿರ್ವಿಕಾರನು ।
ಧರೆಯಲೀತತ್ತ್ವವನು ತಿಳಿಯರು ಮೂಢಮಾನವರು ॥ ೭೨೩ ॥

ಅರಿವನಾರಾವರಿಯ ತತ್ತ್ವವ- । ಪುರುಷನಾತನೆ ಜ್ಞಾನದೀಪವ- ।
ನಿರುವನವನೇ ಜ್ಞಾನಿ ಲೋಕದೊ- । ನುರಿದು ಹೃದಯದೊಳಿಟ್ಟನಲ್ಲವೆ ।
ಅರಿವನಾತನಕರ್ತನಾತ್ಮನೆನಿತ್ತ ನಿಜವಾಗಿ ॥ ಯಿರುವನಾತನೆ ಭಾಗ್ಯಶಾಲಿಯು ಯೆಂದನಾ ಹರಿಯು ॥ ೭೨೪ ॥

ಯದಾ ಭೂತಪೃಥಗ್ಭಾವಮೇಕಸ್ಥಮನುಪಶ್ಯತಿ ।
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ ॥ ೩೦ ॥

ಭಿನ್ನಭಿನ್ನ ಪ್ರಾಣಿಮಾತ್ರಗ- । ನರನೆ ಕೇಳಾನರಗೆ ದೃಗ್ಗೋ- ।
ಳನ್ನು ಸಮರೂಪದಲಿ ನೋಡೆ ಪ್ರ- । ಚರಕೆ ಬರುವುದು ಬ್ರಹ್ಮವೆಲ್ಲವು ।
ಸನ್ನವಾಯ್ತುವನಿಂಗೆ ಬ್ರಹ್ಮವಿದೆಂದು ನೀ ನಂಬು ॥ ಯಿರಿಸುವನೊ ಯೆಲ್ಲೆಲ್ಲಿ ದೃಷ್ಟಿಯ ಬ್ರಹ್ಮಮಯವದದು ॥
ಸನ್ನುತಾತ್ಮನೆ ಜಲದ ತೆರೆಗಳು । ಬರುವುದವನಿಗವಾರ ಸೌಖ್ಯವು ।
ಮುನ್ನ ತೋರುವ ಸೂರ್ಯಕಿರಣಗ- । ವೊರೆವುದೆಂತಿದ ನಾನು ಶಬ್ದದಿ ।
ಳೆನ್ನು ಪೃಥ್ವಿಯು ಧೂಲಿಕಣಗಳು ದೇಹದವಯವವು ಪುರುಷಪ್ರಕೃತಿಗಳೊರೆದಿರುವ ಲಕ್ಷಣಗಳರವಾಯ್ತೆ ॥ ೭೨೮ ॥
॥ ೭೨೫ ॥

ನರನೆ ನೋಡೈ ಮನದ ಭಾವವು । ನರಗೆ ಕೈಯೊಳಗಮೃತ ದೊರೆಯಲು ।
ಹೊರಡುತಿಹ ಬೆಂಕಿಯ ಕಿಡಿಗಳೈ । ದೊರೆಯಲಾಪರಿ ನಿಧಿಯು ಸಹಜದಿ ।
ಬರುತ ಹೊರಗವು ಭಿನ್ನಭಿನ್ನಪ್ರಕಾರ ತೋರುವುವು ॥ ಯಿರುವುದಾಪರಿ ಲಾಭವಿದು ನೋಡ್ ವಾರ್ಥ ಮನಗೊಟ್ಟು ॥
ಅರಿಯಲಾನಿಜತತ್ತ್ವ ವಾರ್ಥನೆ । ವರಸುಭದ್ರಾಪತಿಯೆ ನಾ ನಿನ- ।
ಯಿರುವುದೇನೈ ಭೇದ ವಸ್ತುವಿ- । ಗೊರೆದ ತತ್ತ್ವಾಧಾರದಿಂದಲೆ ।
ಗಿರದಲಾ ತದ್ಭೇದ ಭೇದಾಭಾಸ ರಂಜಿಪುದು ॥ ೭೨೬ ॥ ಬರಿದೆ ತರ್ಕಿಸ ಬೇಡ ನಿನಗಾನೊರೆವೆ ಬೇರೊಂದ ॥ ೭೨೯ ॥

ಕ್ಷೋಣಿಯಲಿ ಕೇಳಾತ್ಮನಿಂದಲೆ । ಒತ್ತೆಯೆನಗದ ನಿನ್ನ ಮಾನಸ- ।
ಪ್ರಾಣಿಗಳಿಗುತ್ಪತ್ತಿಯಾಯಿತು । ವಿತ್ತರದ ನಾ ನಿನಗೆ ಪೇಳುವೆ ।
ಮಾನಸದಲೀತತ್ತ್ವ ಬಲ್ಲವನಿರುವನೈ ಜ್ಞಾನಿ ॥ ಸ್ವಸ್ಥಚಿತ್ತದಿ ಕೇಳು ವಾರ್ಥನೆ ತತ್ತ್ವ ಪೇಳುವೆನು ॥
ಜ್ಞಾನಿಯಾತಗೆ ಬ್ರಹ್ಮರೂಪವು । ವಾರ್ಥನೀಪರಿ ಕೇಳಿ ವಚನವ ।
ಸಾನುರಾಗದಿ ದೊರೆಯಿತೆಂಬ ನಿ- । ಚಿತ್ತದಲ್ಲವಧಾನ ತಂದನು ।
ಧಾನ ಮಾಳ್ಪರೆ ಕುಂದ ಬಾರದು ತರ್ಕಸರಣಿಯಲಿ ॥ ೭೨೭ ॥ ಮತ್ತೆ ಶ್ರೀಪತಿಯಾಡುವುದ ಕೇಳಲಿಕೆ ತೊಡಗಿದನು ॥ ೭೩೦ ॥

ಅನಾದಿತ್ವಾನ್ನಿರ್ಗುಣತ್ವಾತ್ಪರಮಾತ್ಮಾಯಮವ್ಯಯಃ ।
ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ ॥ ೩೧ ॥

ತರಣಿಬಿಂಬವು ಜಲದಿ ತೋರುವ- । ಮೂಢರಜ್ಜುರ ಮತದಿ ಜಲದೊಳು ।
ದಿರುವುದದು ಜಲದಲ್ಲುಲಿಪ್ತವು । ಮೂಡಿಹುದು ಪ್ರತಿಬಿಂಬ ಸೂರ್ಯನ ।
ಯಿರುವನೀಪರಿ ದೇಹದಲಿ ನಿರ್ಲಿಪ್ತ ಪರಮಾತ್ಮ ॥ ನೋಡಲಾಪರಿ ಯಾತ್ಮನಿದ್ದರು ದೇಹಕಿಂ ಹಿಂದೆ ॥
ನರನೆ ನೋಡೈ ನೀರಿನಿಂ ಹಿಂ- । ರೂಢಿಯಲ್ಲೀದೇಹ ಮಡಿಯಲು ।
ದಿರುಚನಲ್ಲವೆ ಸೂರ್ಯ ಮೇಣ್ ಮುಂ- । ಗೂಢರೂಪದೊಳಾತ್ಮನಿರುವನು ।
ದಿರುವನಲ್ಲವೆ ನೀರು ಬತ್ತಿದರರ್ಕ ಬತ್ತುವನೆ ॥ ೭೩೧ ॥ ನೋಡಿದರೆ ಕನ್ನಡಿಯೊಳಾಭಾಸಿಸುವುದೈ ರೂಪ ॥ ೭೩೨ ॥

ನರನೆ ನೋಡಾತ್ಮನೊಳು ದೇಹದೊ- ।
ಳಿರುವುದೈ ಸಂಬಂಧವೆಂದರೆ ।
ಬರಿದೆ ಮಿಥ್ಯಾಭಾಸವಲ್ಲದೆ ತತ್ತ್ವ ಬೇರಿಲ್ಲ ॥
ನರನೆ ಕೇಳೈ ಗಾಳಿಗುಸುಬಿನ ।
ಬರುವುದೇನೈ ಗಂಟ ಹಾಕಲು ।
ಸರಲಮೇಲನವುಸುಬಿಲಿಲ್ಲೈ ಗಾಳಿಯಗ್ರಾಹ್ಯ ॥ ೭೩೨ ॥

ಹತ್ತಿಯಿಂದುರಿಯನ್ನು ಕಟ್ಟಲು ।
ಶಕ್ತರಾರೀಜಗದಿ ಪಾರ್ಥನೆ ।
ಮತ್ತೆ ಕಲ್ಲಾಕಾಶಗಳ ಕೂಡಿಸುವ ಬಗೆ ಹೇಗೆ ॥
ಧಾತ್ರಿಯಲಿ ನರನೊರ್ವ ಪಡ್ಡಿಮಿ ।
ಯೆತ್ತ ನಡೆದು ಪ್ರಯಾಣ ಮಾಡಲು ।
ಮತ್ತೆ ಯೊರ್ವನು ಪೂರ್ವದಿಶೆಗೆ ಪ್ರಯಾಣ ಮಾಡಿದರೆ
॥ ೭೩೪ ॥
ನರನೆ ನೋಡೈ ನರರವರು ಬರು- ।
ವರೆ ಪರಸ್ಪರಸಂಮುಖತ್ವದಿ ।
ಯಿರುವುದೀಪರಿ ಯಾತ್ಮಗೂ ದೇಹಕ್ಕು ಸಂಬಂಧ ॥
ಇರುಳು ಹಗಲಾಬೆಳಕು ಕತ್ತಲೆ ।
ಮರಣ ಜೀವನವಿವುಗಳಿಂಗೆ- ।
ಷ್ಟಿರುವುದಂತರವಷ್ಟೆ ನೋಡಾತ್ಮನಿಗು ದೇಹಕ್ಕೂ ॥೭೩೫॥

ಇರುಳುಹಗಲಿಗೆ ಸಾಮ್ಯವಿಹುದೇ- ।
ನರಳೆಭಂಗಾರಕ್ಕೆ ಸಾಮ್ಯವೆ ।
ಯಿರದಲಾ ಕೇಳ್ ಸಾಮ್ಯವಾಪರಿ ದೇಹಕಾತ್ಮನಿಗೂ ॥
ಪರಿಕಿಸಿದರಿದು ದೇಹವೆಂಬುದು ।
ಭರಿತವಿಹುದೈ ಪಂಚತತ್ತ್ವದಿ ।
ತಿರುಗುತಿಹುದೈ ಜನ್ಮಮೃತ್ಯುಗಳೆಂಬ ಚಕ್ರದಲಿ ॥ ೭೩೬ ॥

ನರನೆ ದೇಹವು ಕರ್ಮಬದ್ಧವು ।
ಮೆರೆವುದೈ ಕಾಲನಿಗೆ ತುತ್ತಿದು ।
ಕರಗುವುದು ಕಾಲಾಗ್ನಿಮುಖದಲಿ ಬಿಸ್ಟಿಯಂದದಲಿ ॥
ಅರರೆ ಕಣ್ಣಿವೆ ಮುಚ್ಚುವನಿತಕೆ ।
ಬರುವುದೀದೇಹಕ್ಕೆ ಮರಣವು ।
ವುರಿಯ ಸಂಪರ್ಕದಲಿ ದೇಹವು ಬೂದಿಯಾಗುವುದು॥೭೩೭॥

ಹೊಟ್ಟೆಯಲಿ ಸಿಕ್ಕಿದರೆ ನಾಯಿಯ ।
ವಿಷ್ಠೆಯಹುದೀದೇಹವಲ್ಲವೆ ।
ಬಿಟ್ಟರೀಯುಭಯಪ್ರಕಾರವ ದೇಹ ಬಿದ್ದಲ್ಲೆ ॥
ಕೆಟ್ಟು ಕೊಳೆಯುವುದಲ್ಲವೇನೈ ।
ಹುಟ್ಟುವುದು ಕ್ರಮಿಪುಂಜಪುಂಜವು ।
ಕೆಟ್ಟರೀದೇಹಕ್ಕೆ ಬರುತಿಹ ಭ್ರಷ್ಟತನ ನೋಡೈ ॥ ೭೩೮ ॥

ನರನೆ ದೇಹದ ಪರಿಯಿದಲ್ಲವೆ ।
ಮರಳಿ ನೋಡಾತ್ಮನಪ್ರಕಾರವ- ।
ನಿರುವನಾತನು ನಿತ್ಯಶುದ್ಧನನಾದಿ ನಿರ್ಗುಣನು ॥
ಇರನವೂರ್ಣನು ವೂರ್ಣನೆಂಬೀ- ।
ಪರಿಯು ಸಲ್ಲದು ನಿರುತ ನಿಷ್ಕ್ರಿಯ ।
ತಿರಿಗಿ ನೋಡು ಕ್ರಿಯಾಪರನು ಮೇಣಲ್ಲ ಕೌಂತೇಯ ॥ ೭೩೯ ॥

ಸ್ಥೂಲನಲ್ಲೈ ಸೂಕ್ಷ್ಮನಲ್ಲೈ ।।
ತಾಳನಾಕಾರವನು ಕಾರಣ ।
ಹೇಳಲೇನದ ದೃಶ್ಯನೆಂತಾಗುವನು ಕೌಂತೇಯ ॥
ತಾಳಲಾರನು ರೂಪವದರಿಂ ।
ಹೇಳಲೇನದನಲ್ಪ ಬಹುವೆಂ- ।
ದಾಲಿಸೈ ನಿಸ್ತೇಜನಲ್ಲ ಸತೇಜನೂ ಅಲ್ಲ ॥ ೭೪೦ ॥

ಇರುವನಾತನು ಶೂನ್ಯನದರಿಂ ।
ಭರಿತನಲ್ಲ ರಿಕಾಮಿಯಲ್ಲೈ ।
ಮರಳಿ ಯಾತನು ರಹಿತನಲ್ಲೈ ಸಹಿತನೂ ಅಲ್ಲೈ ॥
ಇರದು ಮೂರ್ತಿಯ ಮೌರ್ತ್ಯವಾತನಿ- ।
ಗಿರದು ಸೌಖ್ಯಾಸೌಖ್ಯಗಳು ಮೇ- ।
ಣಿರವನೇಕತೆಯೇಕತೆಯು ಮೇಣ್ಮುಕ್ತಿಬಂಧಗಳೂ ॥ ೭೪೧ ॥

ಇರುವುನಾತನಲಕ್ಷನವನ- ।
ನ್ನರಿವುದೆಂತವನ ಪ್ರಮಾಣವ ।
ಮರಳಿ ಯಕೃತನೊ ಕೃತನೊ ವಕ್ತನೊ ಮೂಕನೋ ಯೆನುತ ॥
ಬರಲು ಸೃಷ್ಟಿಯು ಬಾರನಾತನು ।
ಹರಿಯೆ ಸೃಷ್ಟಿಯು ಹರಿಯನಾತನು ।
ಯಿರುವನಿಲ್ಲೆಂಬೀಸ್ಥಿತಿದ್ವಯಕವನು ಲಯಭೂಮಿ ॥ ೭೪೨ ॥

ಇರುವನವ್ಯಯನಾದಕಾರಣ ।
ಬರುವುದೆಂತೈ ವರ್ಣನೆಯ ಪರಿ- ।
ಯಿರನು ಮೇಯನು ಕಡಿಮೆಯಾಗನು ಮೇಣು ಹೆಚ್ಚಾಗ ॥
ಇರದು ಮಡಿಮೈಲಿಗೆಯ ಬಗೆಯವ- ।
ಗಿರವವಾಯವ್ಯಯಗಳವಗೀ- ।
ಪರಿಯ ಲಕ್ಷಣವುಳ್ಳವನು ತಾನಾತ್ಮನಿಹ ಪಾರ್ಥ ॥ ೭೪೩ ॥

ಇರುವನಾತ್ಮನು ದೇಹದಲ್ಲೆಂ- ।
ದೊರುವರೈ ವ್ಯವಹಾರಮಾತ್ರದಿ ।
ನರನೆ ನೋಡೈ ಘಟಮಠದೊಳಾಕಾಶನಿರುವಂತೆ ॥

ಇರುವುದಾತ್ಮಗೆ ವ್ಯಾಪಕತ್ವವು ।
ಬರುತ ಹೋಗುತ್ತಿರುವುದಾಕೃತಿ ।
ಬರಲು ದೇಹವು ದೇಹದಾಕೃತಿಯಾತ್ಮ ಧರಿಸನಲಾ ॥ ೭೪೪ ॥

ಮರಣ ಬಂದರೆ ದೇಹಕಲ್ಲವೆ ।
ಮರಣನಿಲ್ಲಾತ್ಮನಿಗೆ ನೋಡೈ ।
ಯಿರುವನಾತ್ಮನು ಮುಂದೆ ಹಿಂದೆಂತಿದ್ದನಾ ತೆರದಿ ॥

ಇರುಳುಹಗಲುಗಳೆರಡು ಗಗನದಿ ।
ತಿರುತಿರಿಗಿ ಬರುತಿಹುವು ಹೋಪುವು ।
ಯಿರುವುದೈ ನಿರ್ಲಿಪ್ತ ಗಗನವು ನೋಡು ಕೌಂತೇಯ ॥

ಬರುವುವಳಿವುವು ದೇಹಗಳು ಪರಿ- ।
ಪರಿಯಲಾದರು ನೋಡಲಾತುಮ- ।
ನಿರುವನೈ ನಿರ್ಲಿಪ್ತ ದೇಹಾಕಾರವವಗಿಲ್ಲ ॥ ೭೪೫ ॥

ಯಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ ।
ಸರ್ವತ್ರಾವಸ್ಥಿತೋ ದೇಹೇ ತಥಾತ್ಮಾ ನೋಪಲಿಪ್ಯತೇ ॥ ೩೨ ॥

ನರನೆ ಕೇಳಾಕಾಶತತ್ತ್ವ ಪ- ।
ಸರಿಸಿಹುದು ಸರ್ವತ್ರವಾದರು ।
ಯಿರುವುದೇನೈ ಪೀಡೆಯದಕಾವ್ಯಾಪಕತ್ವದಲಿ ॥
ಇರುವನಾತ್ಮನು ಸರ್ವದೇಹದಿ ।
ಯಿರುವನೈ ನಿರ್ಲಿಪ್ತ ದೇಹದಿ ।
ನರನೆ ದೇಹದುಪಾಧಿಯೆಲ್ಲವ್ರ ತಟ್ಟದಾತನನು ॥ ೭೪೬ ॥

ತಿರುತಿರಿಗಿ ನಾ ಶುದ್ಧತತ್ತ್ವದ ।
ಪರಿಯ ಪೇಳ್ದೆನು ಮರೆಯ ಬೇಡೈ ।
ಯರಿಯಲಾ ನೀ ಕ್ಷೇತ್ರವೆಂದರೆ ದೇಹವೇ ಕ್ಷೇತ್ರ ॥
ನರನೆ ವೀರನೆ ಕ್ಷೇತ್ರವೆಂಬುದು ।
ಮೆರೆವುದಿದು ಬೀರೆಂದು ತಿಳಿ ಮೇ- ।
ಣರಿಯಲಾ ಬೇರಾತ್ಮನವ ಕ್ಷೇತ್ರಜ್ಞನಿಹನೆಂದು ॥ ೭೪೭ ॥

ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ ।
ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ॥ ೩೩ ॥

ನರನೆ ನೀ ನೋಡಾತ್ಮಯೋಗದಿ ।
ಪರಿಪರಿಯ ಚೇಷ್ಟೆಗಳು ದೇಹದಿ ।
ನಿರುತ ತೋರುವುವಾದರೇನೈ ದೇಹವಾತ್ಮನಲಾ ॥
ಬರಲು ಚುಂಬಕ ಹತ್ತರಕೆ ಗೋ- ।
ಚರಕೆ ಬರುವುದು ಲೋಹ ಚಲಿಸುವು- ।
ದಿರುವುದೇನೈ ಲೋಹ ನೋಡೈ ಲೋಹಚುಂಬಕವು ॥ ೭೪೮ ॥

ಹೊಟ್ಟೆಯೊಳಗಿರುತಿಹುದು ಬೆಂಕಿಯು ।
ಕಾಷ್ಠದಲ್ಲವ್ಯಕ್ತರೂಪದಿ ।
ದೃಷ್ಟಿಸಲು ಕೇಳಗ್ನಿಯಾಗಿಹುದೇನು ಕಾಷ್ಠವದು ॥
ಹುಟ್ಟುವುವು ಗಗನದಲಿ ಮೇಘಗ- ।
ಳೆಷ್ಟೆನುತ ನಾ ಪೇಳಲಾರೆನು ।
ಮುಟ್ಟುವುವೆ ಗಗನವನು ರವಿಯನು ಮೃಗಜಲವು ವಾರ್ಥ ॥ ೭೪೯ ॥

ಧರೆಯಲೀಪರಿ ಯಾತ್ಮ ದೇಹದೊ- ।
ಳಿರುವನೈ ತತ್ತ್ವಾರ್ಥ ನೋಡಿದ- ।
ರುರಿವದೀಪಸಹಾಯದಿಂ ಮನೆಯೊಳಗೆ ವ್ಯವಹಾರ ॥
ನರನೆ ಚರಿಸುವುದಾದರಾಮನೆ- ।
ಯಿರುವುದೇನೈ ದೀಪ ಬೇರಾ- ।
ಗಿರುವುದಲ್ಲವೆ ದೀಪ ಮನೆಗೇನಿಹುದು ಸಂಬಂಧ ॥ ೭೫೪ ॥

ಅರುಹಿದೀದೃಷ್ಟಾಂತವೆಲ್ಲವ- ।
ನಿರಿಸಿ ಬದಿಗಿನ್ನೊಂದ ಪೇಳುವೆ ।
ತರಣಿಯೊರ್ವನು ಗಗನದಿಂ ಜಗವೆಲ್ಲ ಬೆಳಗಿಸುವ ॥
ಧರೆಯಲಾಪರಿ ಯಾತ್ಮ ದೇಹದೊ- ।
ಳಿರುತ ಸರ್ವವ ಬೆಳಗಿಸುವನೈ ।
ತಿರುತಿರಿಗಿ ತಾಳದಿರು ಶಂಕೆಯನಾತ್ಮನಾರೆಂದು ॥ ೭೫೧ ॥

ಕ್ಷೇತ್ರಕ್ಷೇತ್ರಜ್ಞಯೋರೇವಮಂತರಂ ಜ್ಞಾನಚಕ್ಷುಷಾ ।
ಭೂತಪ್ರಕೃತಿಮೋಕ್ಷಂ ಚ ಯೇ ವಿದುರ್ಯಾಂತಿ ತೇ ಪರಮ್ ॥ ೩೪ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ
ಶ್ರೀಕೃಷ್ಣಾರ್ಜುನಸಂವಾದೇ ಕ್ಷೇತ್ರಕ್ಷೇತ್ರಜ್ಞಯೋಗೋ ನಾಮ ತ್ರಯೋದಶೋಽಧ್ಯಾಯಃ ॥ ೧೩ ॥

ಧರೆಯಲೀಪರಿ ಯಾತ್ಮದೇಹಗ- ।
ಳೆರಡರೊಳಗಿನ ಭೇದತತ್ತ್ವವ- ।
ನರಿವುದಾವುದೊ ಅದುವೆ ನೋಡೈ ನಿಜದಿ ಬುದ್ಧಿಯಲಾ ॥
ಅರಿಯ ಬೇಕೀ ತತ್ತ್ವವೆನುತಲಿ ।
ನಿರುತ ಚತುರಮುಮುಕ್ಷುಗಳವರು ।
ತಿರಿತಿರಿಗಿ ಜ್ಞಾನಿಗಳ ಮನೆ ಹಾರ್ಯೆಸಿ ಸೇರುವರು ॥ ೭೫೨ ॥

ನರನೆ ಶಬ್ದಗಳರ್ಥಸಾರವ- ।
ನರಿವುದರಲಿ ವಿಶಾರದನೆ ನೀ- ।
ನರಿತೆ ಯಲ್ಲೈ ಯಾತ್ಮ ದೇಹವಿದಲ್ಲವೆಂಬುದನು ॥
ಅರಿಯಲೀಪರಿ ತತ್ತ್ವಸಾರವ ।
ದೊರಕಿಸುತ ಸಂಪತ್ತ ಶಾಂತಿಯ ।
ನಿರುತ ಶಾಸ್ತ್ರದ ಹಿಂಡುವಾಕಳುಗಳನು ಪೋಷಿಪರು ॥೭೫೩॥

ಅರಿಯ ಬೇಕೀತತ್ತ್ವವೆನುತಲಿ ।
ನಿರುತ ಯೋಗಾಕಾಶವೇರಲು ।
ಪರಿಪರಿಯ ಯತ್ನಗಳ ಮಾಡುವರೆಡೆಬಿಡದೆ ನೋಡು ॥
ನರನೆ ದೇಹಾದಿಗಳು ತೃಣವೆಂ- ।
ದರಿತು ಸಂತರ ಪಾದುಕೆಗಳನು ।
ಶಿರದೊಳೇರಿಸಿ ಯವರುಗಳ ಚರಣಗಳ ಸೇವಿಪರು ॥೭೫೪॥

ಪರಿಪರಿಯಲೀಸಾಧನವನಾ- ।
ಚರಿಸಿ ನಿಜತತ್ತ್ವವನು ಕಲಿವರು ।
ಬರುವುದ್ದೆ ತರುವಾಯ ಜ್ಞಾನೋದಯವು ನಿಜವಾಗಿ ॥
ನರನೆ ದೇಹವಿದಲ್ಲವಾತುಮ- ।
ನರಿವರೀತತ್ತ್ವಾರ್ಥಸಾರವ ।
ಬರುವುದಂತರ ದೃಷ್ಟಿಗೆಂದನು ನಗುತ ನಳಿನಾಕ್ಷ ॥೭೫೫॥

ಕೇಳು ಪಾರ್ಥನೆ ಯೆನ್ನ ಜ್ಞಾನ ನಿ- ।
ವಾಳಿಸುವೆ ನಾನವರ ಮೇಲಿಂ- ।
ದಾಲಿಸೈ ಪೃಥ್ವಿಯಲಿ ಬೇರೆ ಪ್ರಕಾರ ಕಾಣಿಸುವ ॥

ಕೀಳು ಮೇಲೆಂದೆನಿಪ ಮಾಯೆ ವಿ- ।
ಶಾಲತನದಿಂ ಪಸರಿಸಿರುವುದು ।
ಹೇಳಲೇನದು ಮಿಥ್ಯವಲ್ಲೈ ಬರಿದೆ ಯಾಭಾಸ ॥ ೭೫೬ ॥

ಹತ್ತಿದಿಲ್ಲೀಮಾಯೆ ಬೆನ್ನನು ।
ಹತ್ತಿರುವುದಿದುವೆನುತ ಜೀವನು ।
ವ್ಯರ್ಥ ಮನದಲಿ ನೆನಸುವನು ಶುಕನಳಕೆನ್ಯಾಯದಲಿ ॥
ಸತ್ಯವಾಗಿಹ ವಸ್ತುಸ್ಥಿತಿಯನು ।
ಗೊತ್ತುಹಚ್ಚಿದರವರೆ ಜಾಣರು ।
ತತ್ತ್ವವನು ತಿಳಿಯುವರು ದೇಹಾತ್ಮರ ವಿಭಿನ್ನತೆಯ ॥ ೭೫೭ ॥

ಹಾರ ಕತ್ತಲೆಯಲ್ಲಿ ನೋಡಿ ವಿ- ।
ಚಾರ ತಾಳ್ದನು ಸರ್ಪವೆನುತಲೆ ।
ಹಾರೆ ಮಿಥ್ಯಾಭಾಸ ಗೋಚರವಹುದು ನಿಜಹಾರ ॥
ತೋರುವುದಲಾ ಸಿಂಪಿ ರಜತಾ- ।
ಕಾರದಿಂದಲೆ ತರಣಿಕಿರಣದಿ ।
ಹಾರಿಹೋಗಲು ಕಿರಣ ಗೋಚರಿಸುವುದು ನಿಜತತ್ತ್ವ ॥ ೭೫೮ ॥

ಹಿರಿದು ಕೇಳಾಕಾಶಕಿಂತಲು ।
ಮೆರೆವುದೈ ವ್ಯಾಪಕವು ಬ್ರಹ್ಮವು ।
ಯಿರುವುದೈ ನಿಜವಾಗಿ ಪ್ರಕೃತಿಯ ದಂಡಿಯೆರಡನೆದು ॥
ದೊರೆಯಲೀಪರಬ್ರಹ್ಮತತ್ತ್ವವು ।
ಯಿರಿಸದೈ ತನ್ನಿಂದ ದೂರಕೆ ।
ಹರಿದು ಪೋಪುದು ಪ್ರಕೃತಿಗುಣದಿಂ ಹುಟ್ಟ್ವುದಾಕಾರ ॥ ೭೫೯ ॥

ಕರಗುವುದು ಜೀವತ್ವವೆಲ್ಲವು ।
ಹರಿದು ಪೋಪುದು ದ್ವೈತಭಾವವು ।
ಯಿರುವುದದ್ವಯಪರಮತತ್ತ್ವವು ನೋಡು ಕಲಿಪಾರ್ಥ ॥
ಪುರುಷನಾ ಪರತತ್ತ್ವವಾಗುತ- ।
ಲರಿವನ್ಯೆ ದೇಹಾತ್ಮತತ್ತ್ವವ ।
ಪರಿಕಿಸುವ ತೆರದಂತೆ ನೀರ್ಕ್ಷೀರಗಳ ಹಂಸ ॥ ೭೬೦ ॥

ಪರಿಪರಿಯಲೀ ತೆರದಿ ಪಾರ್ಥನಿ- ।
ಗರುಹಿ ಯಿತ್ತನು ಕೃಷ್ಣದೇವನು ।
ಪ್ರಕೃತಿಯಾತ್ಮನ ನಿಜಪ್ರಕಾರದ ಸ್ವಾನುಭವಗಳನು ॥
ಹರಿಯು ತನ್ನಯ ಹೃದಯದಿಂದಾ- ।
ನರನ ಹೃದಯದಿ ಸುರಿದನನುಭವ ।
ಸುರಿವರಲ್ಲವೆ ನೀರ ಕೊಡದಿಂ ಕೊಡದಿ ಯದರಂತೆ ॥೬೬೧॥

ಧರೆಯೊಳೀನು ವಿಶೇಷವಾಯಿತು ।
ನರನು ನಾರಾಯಣನಿ ಭಿನ್ನರೆ ।
ಧರೆಯೊಳಿತ್ತನು ಯಾರು ಯಾರಿಗೆ ತತ್ತ್ವ ನೋಡಿದರೆ ॥
ಹರಿಯು ಕೈಬೆರಳನ್ನು ಪಸರಿಸಿ ।
ನರನೆ ನೀನಿಹೆ ನಾನೆ ಹರಿಯೆಂ- ।
ದರುಹಿದನು ಜಗಕೆಲ್ಲವಾಯ್ತಿದು ಖ್ಯಾತ ಮೂಜಗದಿ
॥ ೬೬೨ ॥

ಕೇಳದಲೆ ನಾನೀಸುತತ್ತ್ವವ ।
ಹೇಳಿಬಿಟ್ಟೆನು ತಪ್ಪಮಾಡಿದೆ ।
ಖೂಳತನ ಸಾಕಿನ್ನು ಸಂಕ್ಷೇಪದಲಿ ಪೇಳುವೆನು ॥
ಶ್ರೀಲಲಾಮನು ತನ್ನ ಸರ್ವವ ।
ಭೋಳೆತನದಿಂ ಪಾರ್ಥಗಿತ್ತನು ।
ತಾಳಲಾರದೆ ತೃಪ್ತಿ ಪಾರ್ಥನು ಕೇಳಿದನು ತಿರಿಗಿ ॥ ೬೬೩ ॥

ಸುರಿಯಲೆಣ್ಣೆಯ ದೀಪದಲಿ ಬಹು- ।
ವುರಿವುದಲ್ಲವೆ ಶಾಂತವಹುದೇ ।
ನರನ ಮನವಾತೆರದಿ ಕೇಳಿಯು ತೃಪ್ತವಲ್ಲವಲಾ ॥
ತಿರಿತಿರಿಗಿ ಯಾಸರಸಭಾಷಣ ।
ಹರಿಯು ಸೇಳ್ದರೆ ಕೇಳ್ವೆನೆನುತೀ- ।
ಪರಿಯಲಾಶೆಯು ಹುಟ್ಟತಂತಃಕರಣದಲಿ ನರಗೆ ॥ ೬೬೪ ॥

ಭೂರಿಕುಶಲಳು ಪಾಕಶಾಸ್ತ್ರದಿ ।
ಭಾರಿಪ್ರೇಮದಿ ಬಡಿಸಲಡಿಗೆಯ- ।
ನಾರಿಗಾಗದು ಭೋಜನದ ರುಚಿ ಹಸಿವೆಯೊಂದಿರಲು ॥
ಶ್ರೀರಮಾವರ ಚತುರವಕ್ತನು ।
ಚಾರುಶ್ರೋತನು ಶಿಷ್ಯಪಾರ್ಥನು ।
ಯೇರಿತ್ತೈ ಸಂವಾದದಲಿ ಬಹು ಸರಸತೆಯು ನಿಜದಿ ॥೬೬೫॥

ಗಾಳಿಯನುಕೂಲವದು ಬೀಸಲು ।
ಬೀಳುವುದು ಬೇಕಾದ ವೃಷ್ಟಿಯು ।
ಹಾಳು ಬೀಳದು ಮೇಘರಾಶಿಯು ಚದರಿ ದಿಶೆದಿಶೆಗೆ ॥

ಏಳಲಾಪರಿ ಚಂದ್ರನುದಯದೊ- ।
ಳೇಳುವುದು ಸಾಗರವು ಹರ್ಷದಿ ।
ಪೇಳುವವರಿಗೆ ಸ್ಫುರಣಿ ಕೇಳುವರಿದ್ದರನುಕೂಲ ॥ ೬೬೬ ॥

ಹರುಷದಿಂ ಸಂಜಯನು ಸೇಳ್ದನು ।
ಧರಣಿಪತಿಧೃತರಾಷ್ಟ್ರ ಕೇಳೈ ।
ನರನ ಶ್ರವಣೇಚ್ಛೆಯನು ನೋಡುತ ಯಾದವರ ರಾಯ ॥
ಹರುಷಪುಳಕಿತನಾಗಿ ತನ್ನಯ ।
ಸರಸಭಾಷಣದಿಂದ ಮೋಹಿಪ ।
ಭರದಲೀತ್ರಿಭುವನವ ಕೇಳಾ ಸರಸಭಾಷಣವ ॥ ೬೬೭ ॥

ಮುನಿಪವೇದವ್ಯಾಸ ತನ್ನಯ ।
ಯೆಣಿಕೆಯಿಲ್ಲದ ಬುದ್ಧಿಬಲದ- ।
ಲ್ಲುಣಿಸಿದನು ಜಗಕೆಲ್ಲ ಭಾರತವರಕಥಾಮೃತವ ॥
ಮಿನುಗುತಿಹುದಾಭಾರತದೊಳಾ- ।
ನಿನುತಚರಿತವು ಭೀಷ್ಮಪರ್ವವು ।
ಮಿನುಗುತಿದೆ ಯದರೊಳಗೆ ಭಗವದ್ಗೀತೆ ರತ್ನನಿಧು ॥ ೬೬೮ ॥

ನರಹರಿಯ ಸಂವಾದರೂಪದೊ- ।
ಳೆರುವುದೈ ಯಾರರ್ಥ ನಾನದ- ।
ರಿವಪರಿಯಲಿ ಕನ್ನಡದಿ ಭಾವಾರ್ಥ ಪೇಳುವೆನು ॥
ಸರಸಭಾಮಿನಿಷಟ್ಪದಿಯ ಗತಿ ।
ಸರಸ ತೋರದೆ ರಸಿಕ ಜನರಿಗೆ ।
ಯಿರುವುದಿದು ಕೇಳಲು ಮನೋಹರ ಪಂಚಮಸ್ವರವು ॥೬೬೯ ॥

ಅರುಹುವೆನು ನಾ ಶಾಂತರಸವನು ।
ತೊರೆವೆ ಬೇರೆಪ್ರಕಾರವೆಲ್ಲವ ।
ಧರೆಯಲಿದು ಶೃಂಗಾರವನು ಹಿಂದಿಕ್ಕಿ ಬಿಡುವ್ರದಲಾ ॥
ಇರುವುದಿದು ಕನ್ನಡದ ಕಾವ್ಯವು ।
ಮೆರೆವುದಿದು ಸಾಹಿತ್ಯಕನ್ನಡಿ ।
ಸರಸತೆಯ ನೋಡಿದರೆ ಪೀಯೂಷಕ್ಕೆ ಮಿಗಿಲಿಹುದು ॥ ೬೭೦ ॥

ಧರೆಯಲೆನುವರು ಚಂದ್ರನುದಯಕೆ ।
ಬರಲು ದ್ರವಿಪುದು ಚಂದ್ರಕಾಂತವು ।
ಯಿರಲಿ ಹಾಗದು ಸಂದ್ರವಿಪೆನಾಚಂದ್ರನನೆ ನಾನು ॥
ಅರುಹಿದೀಮತತ್ಕಾವ್ಯದಮೃತವ ।
ಕಿರಣದಿಂ ಹೀರುತ್ತ ಚಂದ್ರಮ- ।
ನುರುತರದಿ ತಾನಮೃತಕಿರಣನೆ ಯೆನಿಸಿಕೊಳ್ಳುವನು ॥ ೬೭೧ ॥

ಎನ್ನ ಕಾವ್ಯದ ರಸವ ಕೇಳುತ । ತೊರೆಯುದಾನೊಂದಕ್ಷರವನಾ- ।
ಬನ್ನ ಬಡುವುದು ನಾದಬ್ರಹ್ಮವು । ಪರಿಯಲಾಂ ಬಿಡೆನುಚ್ಚಶಬ್ದವ ।
ಬೆನ್ನ ತೋರಿಸಿ ಯಡಗಿ ಪೋಪುದು ಲಜ್ಜೆಯಲಿ ಬರಿದೆ ॥ ಪರಿಯ ಪೇಳುವೆನೆಂತು ಗುರುವಿಷ್ಣುವಿನ ಮಹಿಮೆಯದ ॥
ಚನ್ನು ಸಾತ್ತ್ವಿಕಭಾವವದುವು- । ಅರುಹಿದೆನು ದರ್ಶೋಕ್ತಿಯಿದನಿದು ।
ತ್ವನ್ನವಹುದಜ್ಞನಿಗು ಜ್ಞಾನಿಗೆ । ಗುರುಚರಣದ ಪ್ರಭಾವವೆನುತಲಿ ।
ಯೆನ್ನ ಕಾವ್ಯದಿ ಬರುವುದೈ ಕ್ಷಣದಲಿ ಸಮಾಧಿಸುಖ ಬರುವುದೆಂತೀಪರಿಯ ದರ್ಪವು ಯೆನಗೆ ಪಾಮರಗೆ ॥ ೭೭೭ ॥
॥ ೭೭೨ ॥

ಅರುಹುವೆನು ಗೀತಾರ್ಥವೆಲ್ಲವ । ಇರುವುದೆನ್ನಯ ಭಾಗ್ಯವೀದಿನ ।
ಸರಸತೆಯ ಕಾವ್ಯದಲಿ ಮೇಣದು । ಗುರುಕೃಪೆಯದಿದು ಲಾಭ ನೋಡಲು ।
ಧರೆಯೊಳಗೆ ವಿಸ್ತರಿಸಿ ಜಗಕಾನಂದ ಕೊಡುವುದಲಾ ॥ ದೊರಕಿದುದು ಸಜ್ಜನರ ಸಂತರ ಚರಣದರ್ಶನವು ॥
ಹರಿಯಿತ್ತೈ ದೈನ್ಯವು ವಿಚಾರಕೆ । ತಿರಿಗಿ ನಿಮ್ಮಯ ಮುಂದೆ ಗೀತೆಯು ।
ತರುವುದು ಸಜೀವತ್ವ ಕರ್ಣಕೆ । ಸರಸತರ ಭಾಷಣವ ಮಾಡುವ ।
ಬರುವುದೈ ಮಾನಸಕೆ ದೀರ್ಘಾಯುಷ್ಯವಿದರಿಂದ ॥ ೭೭೩ ॥ ಪರಿಯ ಭಾಗ್ಯವು ಸಣ್ಣದೇನೈ ಸದಯ ಗುರುರಾಯ ॥ ೭೭೮ ॥

ಏತಕೀವಿಸ್ತಾರವೀದಿನ । ಗುರುವೆ ನಿನ್ನಯ ಶಿಷ್ಯಗಿದರಲಿ ।
ಭೂತಳದೊಳಧ್ಯಾತ್ಮವಿದ್ಯೆಯ । ಬರುವುದೇನೈ ವಿಘ್ನ ನೋಡಲು ।
ಖ್ಯಾತವೇ ದೊರಕಿಹುದು ಪುಣ್ಯದ ಖಾನಿ ತೆರೆದಿಹುದು ॥ ಸರಸತಿಗೆ ಹುಟ್ಟಿರ್ದ ಬಾಲಕ ಮೂಕನಾಗುವನೆ ॥
ಔತು ಕೈಜೋಡಿಸಿಯು ಸುಜನ- । ಧರೆಯೊಳಗೆ ಸರ್ವರಿಗೆ ಮೂಕತೆ ।
ವ್ರಾತ ಕರ್ಣಿಂ ನೋಡಿ ಪರಮಸು- । ಹರಿಸುತಿಹಳಾ ಸರಸತಿಯಲಾ ।
ಖ್ಯಾತಿಶಯವನು ಪೊಡವಿಯಲಿ ಪುಣ್ಯದಲಿ ಪಡಲೆನುವೆ ಹರಿಸಳೇ ನಿಜಬಾಲನೊಳಗಿಹ ಮೂಕತೆಯ ನಿಜದಿ ॥ ೭೭೯ ॥
॥ ೭೭೪ ॥

ಸುರಿದುದಾತ್ಮಜ್ಞಾನವೃಷ್ಟಿಯು । ಸಿರಿಯು ಕೈ ದೈವಜ್ಞ ಪರಿಕಿಸೆ ।
ಧರಣಿಯಲಿ ಬಂತೈ ಸುಕಾಲವು । ದೊರೆಯುವುದೆ ದಾರಿದ್ರ್ಯರೇಖೆಯು ।
ದೊರೆಯಿತೆನಗಾ ವಿಷ್ಣುಸದ್ಗುರುವಿನ ಪ್ರಸಾದವಿದು ॥ ಧರೆಯೊಳಾನಜ್ಞಾನಿಯಿದ್ದರು ನಿಮ್ಮ ಸಭೆಯೊಳಗೆ ।
ಗುರುವಿನಂತಃಕರಣಪೂರ್ವಕ- । ದೊರೆತಿರಲು ನಿಮ್ಮಯ ಪ್ರಸಾದವು ।
ವರದಹಸ್ತವು ಮಸ್ತಕದೊಳಿರೆ । ಹರಿದುಹೋಗದೆ ಚಾದ್ಯವೆನ್ನದು- ।
ಯರುಹಬೇಕೇ ಸರಸಭಾಷಣ ವಿಸ್ತರಿಪೆ ಮುಂದೆ ॥೭೭೫॥ ವಿರುವುದೇನಜ್ಞರಿಯು ನಿಮ್ಮ ಕೃಪಾಕಟಾಕ್ಷದಲಿ ॥ ೭೭೦ ॥

ಸತ್ಯವಾಗಿ ಪ್ರತಿಜ್ಞೆ ಮಾಡುವೆ- । ಗುರುವೆ ವಿಷ್ಣುವೆ ಸಂತವೃಂದವೆ ।
ನುತ್ತಮೋತ್ತಮ ಕಾವ್ಯರಸವದ । ಚರಣಕೆರಗುವೆ ನಿಮಗೆ ಹರ್ಷದಿ ।
ವಿಸ್ತರಿಸ ಬೇಕಾನು ಪೇಳ್ವಕ್ಷರಗಳಲ್ಲೆಲ್ಲ ॥ ಕರುಣದಲಿ ಗೀತಾರ್ಥಕಥನದ ವರವದನು ಕೊಡಿರಿ ॥
ಮತ್ತೆ ದೃಷ್ಟಾಂತೋಪಮೆಗಳಾ- । ದೊರೆಯಿತೆಂದರೆ ನಿಮ್ಮ ಚರವದು ।
ಮೊತ್ತ ಸಾಗರವಾಗಿ ಹರಿಯಲಿ । ಮರಳಿ ಗೀತಾರ್ಥವನು ಪೇಳ್ವೆನು ।
ಯುಕ್ತಪದಸರ್ವಸ್ವ ರಸದಿಂ ಸೂಸಬೇಕಲ್ಲೈ ॥ ೭೭೬ ॥ ಧರೆಯೊಳುತ್ತಮಸೌಖ್ಯ ಬ್ರಹ್ಮಾನಂದ ವರ್ಧಿಸಲಿ ॥ ೭೭೧ ॥

ಇತಿ ಶ್ರೀಮೂಡಕಟ್ಟಿಸುಬ್ಬರಾವಾತ್ಮಜರಾಘವೇಂದ್ರರಾಯಕೃತವಾದ ಕನ್ನಡಜ್ಞಾನೇಶ್ವರಿಯಲ್ಲಿ
(೧೩) ಹದಿಮೂರನೆಯ ಅಧ್ಯಾಯ ಮುಗಿದುದು.

ಸಂಸ್ಕೃತ ಮೂಲಶ್ಲೋಕಗಳು ೩೪, ಕನ್ನಡ ಷಟ್ಪದಿಗಳು ೭೭೧

ಕನ್ನಡ ಜ್ಞಾನೇಶ್ವರಿ.

೧೪ ಹದಿನಾಲ್ಕನೆಯ ಅಧ್ಯಾಯ.

ಗುರುವೆ ನೀನಾಚಾರ್ಯಪದನಿಯ ।
ಧರಿಸಿ ಮೆರೆಯುವ ಸಗುಣ ಮೂರುತಿ- ।
ಗುರುವೆ ಪರಮಾನಂದಬುದ್ಧಿಗಳೆಂಬ ಕಿರಣಗಳ ॥
ಮೆರೆಸುತಿಹ ವಾಸರಮಣಿಯಲಾ ।
ಗುರುವೆ ಸುರವರನಿತಚರಣನೆ ।
ಗುರುವೆ ಜಯಜಯಕಾರವೆನುವೆನು ನಿನ್ನ ಚರಣದಲಿ ॥೧॥

ಗುರುವೆ ವಿಶ್ವಾತ್ಮಯ ಸುಮೂರುತಿ ।
ಗುರುವೆ ಸೋಽಹಂ ಬ್ರಹ್ಮನೆಂಬುವ ।
ಪರಮ ತತ್ತ್ವದ ಬೀಜ ಹೃದಯದಿ ಬಿತ್ತುತಿರುನಿಯಲಾ ॥
ಗುರುವೆ ನೀನು ಸಮುದ್ರನಲ್ಲವೆ ।
ತೆರೆಗಳೀ ಭುವನಂಗಳೆಲ್ಲವು ।
ತಿರಿಗಿ ಜಯಜಯಕಾರವೆನುವೆನು ನಿನ್ನ ಚರಣದಲಿ ॥ ೨ ॥

ಗುರುವೆ ದೀನದಯಾಳು ಮೂರುತಿ- ।
ನಿರುತ ಕರುಣಾಸಾಗರನಲಾ ।
ಗುರುವೆ ಶುದ್ಧಬ್ರಹ್ಮವಿದ್ಯಾತರುಣಿವಲ್ಲಭನೆ ॥
ಅನಿಯಲಾರದ ನಿನ್ನ ತತ್ತ್ವವ ।
ನರರಿಗಿರುವುದು ವಿಶ್ವ ಸತ್ಯವು ।
ಅರಿತವರಿಗಾಗುವುದು ವಿಶ್ವವು ಮಿಥ್ಯವೇ ಯೆನುತ ॥ ೩ ॥

ಗಾರುಡಿಯು ನೀನೆಂದು ಕರೆವರೆ ।
ತೋರುವುದು ಕೇಳೊಂದು ಕೊರತೆಯು ।
ಬೇರೆಯವರನು ವಂಚಿಸುವನ್ಯೆ ಗಾರುಡಿಯು ತಿಳಿಯೆ ॥
ಯಾರಿಗಾದರು ಕಾಣಿಸದಲೇ ।
ತೋರಿಸುವಿ ನಿನ್ನಾಟವೆಲ್ಲವ ।
ಗಾರುಡಿಯುವಿಗೆ ತಿಳಿಯದೀಪರಿ ಮಾಯೆಯಾಟವನಿದು ॥ ೪ ॥

ಕೆಲವರಿಗೆ ನೀ ಜ್ಞಾನಬೋಧವ ।
ತಿಳಿಸಿ ಮೋಕ್ಷದ ಹಾದಿ ಹಚ್ಚುವಿ ।
ಕೆಲವರಿಗೆ ಮಾಯಾಬಲೆಗೆ ನೀನೆತ್ತಿ ಹಾಕುವಿಯೆ ॥
ತಿಳಿಯೆ ನಿನ್ನೀ ಮಾಟದಾಟವ- ।
ನಿಳೆಯೊಳೀಪರಿ ಲೀಲೆ ಮಾಡುವಿ ।
ತಿಳಿಯದಜ್ಞನು ನಿನ್ನ ಚರಣದಿ ಲೀನನಾಗಿಹೆನು ॥ ೫ ॥

ನೀರಿಗಿತ್ತೈ ಸರಸತೆಯ ನೀ- ।
ಧಾರುಣಿಗೆ ಸಹನತೆಯ ಕಲಿಸಿದಿ ।
ಕಾರಣನಲೈ ನೀನು ಶಶಿಸೂರ್ಯರ ಪ್ರಕಾಶಕಲಾ ॥
ಮೂರುಲೋಕದಿ ತೇಜವದು ನಿ- ।
ಸ್ತಾರವಾಗುವುದೆಲ್ಲ ನಿನ್ನಯ ।
ಕಾರಣಿಕನಾಶೀರ್ವಚನ ಬಲದಿಂದಲೇ ನೋಡು ॥ ೬ ॥

ಗುರುವೆ ನಿನ್ನ ಕೃಪಾಕಟಾಕ್ಷದ ।
ಹೊರತು ಶಶಿಸೂರಿಯರು ಗಗನದಿ ।
ಮೆರೆವ ಮುಕ್ತಾಫಲದ ಚಿಪ್ಪಿನ ತೆರದಿ ನಿಷ್ಪ್ರಭರು ॥
ಹೊರಗೊಳಗೆ ಸರ್ವತ್ರ ತ್ರಿಜಗದಿ ।
ತಿರುಗುತಿಹ ಮಾರುತನು ನಿನ್ನಯ ।
ವರಪ್ರಸಾದದ ಬಲದಿ ತಿರುಗುವನಲ್ಲವೇ ಗುರುವೆ ॥ ೭ ॥

ಇರುವುದತಿವಿಸ್ತೀರ್ಣ ಗಗನವು ।
ಯಿರುವುದೇನ್ಯೆ ನಿನಗೆ ಮಿಗಿಲದು ।
ಗುರುವೆ ನಿನ್ನಯ ಮಾಲೆಯೊಂದರಲದು ವಿರಾಜಿಪುದು ॥
ಅರುಹಲೇನದ ನಾನು ನಿನ್ನಯ ।
ಪರಮ ಮಹಿಮೆಯಗಾಧನಿರುವುದು ।
ಯಿರುವುದ್ಯೆ ನಿನ್ನೊಳಗೆ ಮಾಯಾಜಾಲ ತ್ರಿಭುವನದ ॥ ೮ ॥

ಇರುವುದಾಪರಿ ಜ್ಞಾನ ನಿನ್ನೊಳು ।
ಬಿರುವುದೈ ವಿಸ್ತಾರ ನಿನ್ನಿಂ ।
ಪರಮ ಶ್ರುತಿಶಾಸ್ತ್ರಗಳು ದಣಿದುವು ನಿನ್ನ ವರ್ಣಿಸಲು ॥
ಇರುವುದಾ ವೇದದಲಿ ಚತುರತೆ ।
ಪರಿಪರಿಯ ವರ್ಣನೆಯ ಮಾಳ್ಪುದು ।
ದರುಶನವು ದೊರಕಿದರೆ ನಿನ್ನಯ ಚರಣಕಮಲಗಳ ॥ ೯ ॥

ಪರಿಯನರಿಯದ ಮೂಕತನ ಸ್ವೀ- ।
ಕರಿಪ ಭಾಗವ್ಯ ಬಂದು ತಟ್ಟುವು- ।
ದರರೆ ನಾವಿಬ್ಬರು ಕಣಾ ವೊಂದಾದೆವೀ ತೆರದಿ ॥
ಬರುವ್ಯದೇ ಬಾಯ್ ವರ್ಣನೆಗೆ ನೀ- ।
ನಿರುವೀ ಶಬ್ದಾತೀತ ನಿನಗಾ- ।
ಪರಮ ಶ್ರುತಿಗಳು ವರ್ಣಿಸುವ ಪರಿಯರಿಯಲಾರವಲಾ ॥೧೦॥

ಧರೆಯು ಜಲಮಯವಾಗೆ ಸರ್ವವು ।
ಅರಿವುದೆಂತೈ ಬಿಂದುವದರಲಿ ।
ವರಮಹಾನದಿಗಳನು ತಿಳಿಯುವುದೆಂತು ಜಲಮಯದಿ ॥
ತರಣಿಯುದಯಾಚಲಕೆ ಬರೆ ಹಿಮ- ।
ಕಿರಣ ಮಿಂಚಿನ ಹುಳವಲಾ ಸರಿ- ।
ಯಿರುವರೀ ಯೀರ್ವರು ಕಣಾ ದಿನಮಣಿಯ ಸಂಮುಖದಿ ॥ ೧೧ ॥

ಆದ ಕಾರಣ ಶ್ರುತಿಗಳೆನ್ನೋ- ।
ವಾದಿ ಮೂಕತ್ವವನು ಪಡೆದುವು ।
ಭೇದ ತೋರಿಪ ದ್ವೈತತೀರಲು ವಾಣಿ ವೈಖರಿಯು ॥
ಬೋಧವಿಲ್ಲದೆ ಸ್ತಬ್ಧವಿಹುದೈ ।
ಹೇ ದಯಾನಿಧಿ ನಿನ್ನಮಹಿಮೆಯ ।
ಮೇದಿನಿಯಲಾರಿಹರು ವರ್ಣಿಪ ಚತುರತನದವರು ॥ ೧೨ ॥

ವಿಸ್ತರಿಸದಲೆ ತುತಿಯ ಶಬ್ದದಿ ।
ಸ್ವಸ್ಥ ಚಿತ್ತದಿ ಭಕ್ತಿಭಾವದಿ ।
ಮಸ್ತಕವ ನಾ ನಿನ್ನ ಚರಣದಲಿಡುವೆ ಗುರುರಾಯ ॥
ಉತ್ತಮವಲಾ ಹಾದಿ ಯೆನಗಿದು ।
ವ್ಯರ್ಥ ನಿಷ್ಫಲ ಯತ್ನವೇತಕೆ ।
ಚಿತ್ತವಿಸು ನಾ ನಿನ್ನ ವಂದಿಪೆನಿದ್ದ ಪರಿಯಲ್ಲೆ ॥ ೧೩ ॥

ಮಾಡಿಹೆನು ಗೀತಾರ್ಥ ಕಥನವ ।
ಗಾಢ ವ್ಯಾಪಾರವನು ನೀನೆನ- ।
ಗೀಡೊ ಲಾಭವ ಧಣಿಕ ನೀನಾಗೆನಗೆ ಮೋದದಲಿ ॥

ನೀಡು ನಿನ್ನ ಕೃಪಾಧನದ ಮುಂ- ।
ದಾಡುತಿಹ ಚೀಲವನು ಬಿಚ್ಚುತ ।
ಕೂಡಿಸೆನ್ನೀ ಮತಿಯರೂಪದ ಚೀಲದಲಿ ಧನವ ॥ ೧೪ ॥

ಗುರುವೆ ನೀನು ಮಹಾಧನಿಕನೈ ।
ಬಿರುವುದಂತಃಕರಣವುರುತರ ।
ಬರುವುದದರಿಂ ಲಾಭ ವ್ಯಾಪಾರದಲಿ ಜ್ಞಾನವದು ॥
ಗುರುವೆ ಯೆನಗೀ ಲಾಭವಾಗಲು ।
ವಿರಚಿಸುವೆ ಸುವಿಚಾರ ಚನ್ನಾ- ।
ಭರಣಗಳ ನಾನೀವೆ ಸಂತರ ಕರ್ಣಭೂಷಣವ ॥ ೧೫ ॥

ಗುರುವೆ ಗೀತಾರ್ಥನಿಧಿ ದೃಗ್ಗೋ- ।
ಚರಕೆ ಬರುವಂದದಲಿ ನಿನ್ನಯ ।
ಪರಮಸ್ನೇಹಾಂಜನವನಿರಿಸೈ ಯೆನ್ನ ನೇತ್ರದಲಿ ॥
ಕರುಣೆಯರುಣನ ಕಿರಣಗಳನೊಳ- ।
ಗಿರಿಸಿ ಶಬ್ದದ ಸೃಷ್ಟಿಯನು ನೀ- ।
ತರಿಸು ಯೆನ್ನಯ ಬುದ್ಧಿ ದೃಷ್ಟಿಗೆ ಸದಯ ಗುರುರಾಯ ॥ ೧೬ ॥

ಗುರುವೆ ನೀನು ವಸಂತ ಋತುವಾ- ।
ಗಿರುವಿ ಯೆನ್ನೀ ಬುದ್ಧಿಲತೆ ಬಹು ।
ಪರಿಯಲದು ವಿಸ್ತರಿಸಿಹುದು ಬೆಳೆದಿಹುದು ದಿಶೆದಿಶೆಗೆ ॥
ಸುರಸಕವಿತಾಫಲಗಳದರಲಿ ।
ಬರುವ ತೆರದಲಿ ಮಾಡು ಭರದ ।
ಲ್ಲಿರುವುದೇನೈ ಚೋದ್ಯ ಶ್ರೀಗುರುಕರಣೆಗಿದು ನಿಜದಿ ॥ ೧೭ ॥

ಗುರುವೆ ಕರುಣಾದೃಷ್ಟಿಯಿಂದಲೆ ।
ಸುರಿಸು ನೀನೌದಾರ್ಯದೃಷ್ಟಿಯ ।
ಬರಲು ಬೇಕದರಿಂದ ಗಂಗಾನದಿಯ ಪರಿ ಬುದ್ಧಿ ॥
ಬರಲು ಬೇಕರ್ಥಸ್ವರೂಪದ ।
ಪರಿಪರಿಯ ಸಿದ್ಧಾಂತವೂರವು ।
ಸುರಸತೆಯ ಬೀರುತ್ತ ಜಗಕಾಹ್ಲಾದ ಕೊಡುವಂತೆ ॥ ೧೮ ॥

ಗುರುವೆ ನೀ ವಿಶ್ವೈಕಧಾಮನು ।
ವರಪ್ರಸಾದದ ಚಂದ್ರಮನಲಾ ।
ಬರುತ ಗಗನದಿ ಶೋಭಿಸೈ ಪೂರ್ಣಮೆಯ ದಿನದಂತೆ ॥
ಇರುವುದೆನ್ನಲಿ ಜ್ಞಾನಸಾಗರ ।
ಬರುವುದದಕುಲ್ಲಾಸಭರತಿಯು ।
ಪರಿಪರಿಯ ನವರಸಗಳೆಲ್ಲ ತರಂಗವೇಳುವುವೆ ॥ ೧೯ ॥

ಜ್ಞಾನದೇವನ ನುಡಿಯ ಕೇಳುತ- ।
ಲಾ ನಿವೃತ್ತಿಯು ನುಡಿದನುತ್ತರ ।
ನೀನು ಯಾಕೇತರದಿ ತುತಿಯಲಿ ದ್ವೈತ ವರ್ಧಿಸುವಿ ॥
ನಾನು ನಿನಗೆ ಪ್ರಸನ್ನನಾಗಿಹೆ ।
ನೀನು ಗೀತಾರ್ಥವನು ಹೇಳ್ಗೆ ।
ಶ್ರೀನಿವಾಸನ ಗೀತೆ ಕೇಳ್ವರೆ ತಲ್ಲಣಿಸುತಿಹೆನು ॥ ೨೦ ॥

ವ್ಯರ್ಥ ನಿನ್ನೀ ಸ್ತುತಿಯು ಸಾಕೈ ।
ವಿಸ್ತರಿಸದಲೆ ಯಡ್ಡಕಥೆಯನು ।
ಸ್ವಸ್ಥ ಚಿತ್ತದಿ ಹೇಳು ಗೀತಾರ್ಥವನು ಮನಗೊಟ್ಟು ॥
ಶ್ರೋತೃವೃಂದವಿದಾತುರತೆಯಿಂ ।
ಚಿತ್ರದಂತೆ ತಟಸ್ಥವಾಗಿದೆ ।
ವ್ಯರ್ಥ ಹೆಚ್ಚಿಸ ಬೇಡ ನೀನಾತುರತೆಯವರಲ್ಲಿ ॥ ೨೧ ॥

ಹರುಷನಿರ್ಭರನಾಗಿ ಜ್ಞಾನೇ- ।
ಶ್ವರನು ಪ್ರತ್ಯುತ್ತರವನಿತ್ತನು ।
ಗುರುವೆ ನಿನ್ನಾಜ್ಞೆಯಿ ನಿರೀಕ್ಷಿಸುತಿದ್ದೆನೀವರಿಗೆ ॥
ಆರುಹು ಗ್ರಂಥನನೆಂದು ನಿನ್ನು- ।
ತ್ತರವು ಬಾಯಿಂ ಬಂದ ಕೂಡಲೆ ।
ಸ್ಫುರಣೆಯಾಯಿತು ಮನದಿ ಗ್ರಂಥವನಾರಭಿಪೆನೀಗ ॥ ೨೨ ॥

ಧರೆಯೊಳಮರವು ಸೊದಲೆ ದುರ್ವಾಂ- ।
ಕುರವು ಪೀಣದಕೊಳಗೆಯಮೃತದ ।
ವರಸುಧಾರಸವೃಷ್ಟಿಯಾಗಲು ನೋದತೇನದನು ॥
ದೊರೆಯಲೆನಗೀ ಗುರುಪ್ರಸಾದವು ।
ಹರಿಗದಿತ ಗೀತೆಯಲಿ ಮೂಲದೊ- ।
ಳಿರುವ ಪದವಾಕ್ಯಗಳನೆಲ್ಲವ ವಿಸ್ತರಿಪೆ ನಾನು ॥ ೨೩ ॥

ಹರಿಯ ಗೀತಾಮೃತವ ಕುಡಿಯಲು ।
ಹರಿವುದೆಲ್ಲವು ಮನದ ಸಂಶಯ ।
ಬರುವದಲ್ಲನೆ ಶ್ರವಣದಿಚ್ಛೆಯು ದ್ವಿಗುಣಮಾನದಲಿ ॥

ಅರಿಕೆಯೆನ್ನೊಂದಿಹುದು ನಿನ್ನಯ ।
ಚರಣದಲಿ ಗುರುರಾಯ ನಿನ್ನಯ ।
ಕರುಣೆಯಿಂ ಬರ ಬೇಕು ಕಾವ್ಯದಿ ಸರಸಮಧುರತೆಯು ॥ ೨೪ ॥

ಹಿಂದಿನಧ್ಯಾಯದಲಿ ಶ್ರೀಗೋ- ।
ವಿಂದ ಪಾರ್ಥಗೆ ಪೇಳ್ದನೀಪರಿ ।
ಬಂದೊಡಾತ್ಮನ ಯೋಗ ಪ್ರಕೃತಿಗೆ ಬರುವುದೈ ಭವವ ॥
ಮುಂದೆ ಮಾಯೋಪಾಧಿಯಿಂದಲೆ ।
ಬಂದವುದು ಸುಖದುಃಖಭೋಗವು ।
ಕೊಂದರಾ ಗುಣಸಂಗವನು ಮೋಕ್ಷವನು ಪಡೆಯುವನು ॥ ೨೫ ॥

ಇರುವನಾತ್ಮನು ಸಂಗರಹಿತನು ।
ಒರುವದೆಂತೀ ಪ್ರಕೃತಿಸಂಗವ ।
ಪರಿಯಿದಾವುದು ಪ್ರಕೃತಿಯಾತ್ಮನ ಯೋಗವಾಗುವುದು ॥
ಬರುವನೆಂತೀ ದುಃಖಸುಖಿಗಳು ।
ಪಿರುವನೆಂತೈ ಐನಿತು ಗುಣಗಳು ।
ಒರುವದಾತ್ಮಗೆ ಗುಣದ ಬಾಧೆಯು ಯಾವ ರೀತಿಯಲಿ ॥ ೨೬ ॥

ಗುಣರಹಿತಲಕ್ಷಣಗಳಾವುವು ।
ಐನಿತು ವಿಷಯಗಳೆಲ್ಲ ಮುಂದಕೆ ।
ವಿನುತಚರಿತನು ಕೃಷ್ಣರಾಯನು ಪೇಳ್ದನರ್ಜುನಗೆ ॥
ವಿನಯದಿಂದಾ ಕಥೆಯನೆಲ್ಲವ ।
ಮನದ ಸಂತಸ ಬರುವ ತೆರದಲಿ ।
ಗುಣಿಗಳಾಗಿಹ ಶ್ರೋತೃಜನರಿಗೆ ವರ್ಣಿಸುವೆ ನಾನು ॥ ೨೭ ॥

ಪರಿಪರಿಯಲಾನೊರೆದೆ ನಿನಗೀ- ।
ವರಿಗೆ ಜ್ಞಾನವ ವಿಸ್ತರದಲೇ ।
ಯರವು ಬಾರದು ನಿನಗೆ ವಿಸ್ತರಿಸುವೆನು ಮತ್ತೊಮ್ಮೆ ॥
ನರನೆ ಸಿದ್ಧತೆ ಮಾದು ಶ್ರವಣಕೆ ।
ಹರುಷದಲಿ ನೀ ಸಾವಧಾನದಿ ।
ತಿರಿಗಿ ಕೇಳ್ಗೈ ಪೇಳ್ವೆನೆಂದನು ದಾಸವಧ್ವಂಸಿ ॥ ೨೮ ॥

ಶ್ರೀಭಗವಾನುವಾಚ—

ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಮ್ ।
ಯಜ್ಜ್ಞಾತ್ವಾ ಮುನಯಃ ಸರ್ವೇ ಪರಾಂ ಸಿದ್ಧಿಮಿತೋಗತಃ ॥ ೧ ॥

ನರನೆ ನಾ ಮತ್ತೊಮ್ಮೆ ಪೇಳುವೆ ।
ಪರವೆನುವ ಜ್ಞಾನದ ಮಹಿಮೆಯನು ।
ಪರವೆನುತಲೇತಕ್ಕೆ ಕರೆವರು ಸ್ವಾತ್ಮಜ್ಞಾನವನು ॥

ಇರುವುದೈ ಸಂಸಾರಸ್ವರ್ಗವು ।
ವರಮನೋಹರ ತೋರುವುದಲಾ ।
ಕರೆವರಾಕಾರಣದಿ ಸ್ವಾತ್ಮಜ್ಞಾನ ಪರವೆನುತ ॥ ೨೯ ॥

ಇರುವುದಾತ್ಮಜ್ಞಾನವದರಿಂ ।
ಧರೆಯೊಳುತ್ತಮವೆನ್ನ ಮತವಿದು ।
ಮೆರೆವುದಿದುವಗ್ನಿಸ್ವರೂಪವು ಜಾಜ್ವಲಿಸುತಿಹುದು ॥
ಇರುವುದನ್ಯ ಜ್ಞಾನವೆಲ್ಲವು ।
ಒರಿದೆ ತೃಣದಂದದಲಿ ನೋಡಲು ।
ಸರಿಯ ಸ್ವಾತ್ಮಜ್ಞಾನಕಾವುದ ಕಾಣೆನೀಜಗದಿ ॥ ೩೦ ॥

ತರಣಿಯುದಯಾಚಲಕೆ ಬಂದರೆ ।
ನರನೆ ಚಂದ್ರಾದ್ಯುಡುಗಣಂಗಳು ।
ವಿರಸ ನಿಸ್ತೇಜಗಳು ರಂಜಿವುವಲ್ಲವೇ ನೋಡೆ ॥
ಧರೆಯು ಜಲಮಯವಾಗೆ ಪ್ರಳಯದಿ ।
ಯಿರುವುನೇನೈ ನದಿನದಂಗಳು ।
ಯಿರುವುದಾಪರಿ ಸ್ವಾತ್ಮಜ್ಞಾನದ ಮುಂದಿತರ ಜ್ಞಾನ ॥ ೩೩ ॥

ಯಾವುದೈ ಸಂಸಾರಸ್ವರ್ಗಸು- ।
ಖಾವಲೋಕನತತ್ಪರವು ಮ- ।
ತ್ಯಾವಗಂ ಮುಂದರಿಯದಲೆ ಹಿಂತಿರಿಗಿ ನೋಡುವುದು ॥
ಯಾವುದಾ ಯಜ್ಞಾದಿ ಕರ್ಮವ ।
ಭಾವಿಸುವುದುತ್ತಮವೆನಿತ್ತಲಿ ।
ರಾವನರಿಯದು ದ್ವೈತ ಹೊರತೀ ಜಗದಿ ನೋಡಿದರೆ ॥೩೧॥

ಪೃಥ್ವಿಯಲ್ಲಾ ಕಾರಣದೊಳ- ।
ತ್ಯುತ್ತಮವಲಾ ಸ್ವಾತ್ಮಜ್ಞಾನವು ।
ಮುಕ್ತಿಯನು ಮಾಳ್ಪುದು ಸುಲಭದಲಿ ಕರತಲಾಮಲಕ ॥
ವ್ಯಾಪ್ತ ಸ್ವಾತ್ಮಜ್ಞಾನವಾಗಲು ।
ಮುಕ್ತವಾಗಲು ಸ್ವಾನುಭವದು- ।
ವೆತ್ತಲಾಗದು ಮತ್ತಕವ ಮೇಲಕ್ಕೆ ಸಂಸಾರ ॥ ೩೪ ॥

ಜ್ಞಾನವೀತೆರದೆಲ್ಲ ಜಗದಲಿ ।
ಹೀನನಿಹುದೈ ಸ್ವಾತ್ಮಜ್ಞಾನಕೆ ।
ಜ್ಞಾನವನ್ಯವು ಸ್ವಪ್ನದೋಲ್ ರಂಜಿವುದು ಕಣ್ಣಿಂಗೆ ॥
ಬಾನುವಿನಲಾ ದೊಡ್ಡ ದೊಡ್ಡ ಪ್ರ- ।
ಮಾಣ ವಾಯುವು ಹುಟ್ಟಿದರು ತ- ।
ಲ್ಲೀನವಾಗುತ ಲಯವ ಹೊಂದುವುದಲ್ಲಿಯೇ ಪಾರ್ಥ ॥ ೩೨ ॥

ವಿಷಯಗಳ ಕಡೆಗೋಡುತಿಹ ಮಾ- ।
ನಸವ ಹಿಂಡಟ್ಟುವುದು ಮೇಣದು- ।
ಕುಸುರಗಟ್ಟುತ ಕೊಡುವುದೈ ಶಾಶ್ವತದ ವಿಶ್ರಾಂತಿ ॥
ವಸುಮತಿಯಲೀ ತೆರದ ಪುರುಷರು ।
ವಿಷಮತನವನು ಬಿಟ್ಟು ಯೆನ್ನಯ ।
ಅಸಮಯೋಗ್ಯತೆ ತಾಳ್ದರೈ ನರದೇಹ ಧರಿಸಿದರು ॥ ೩೫ ॥

ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ ।
ಸರ್ಗೇಽಪಿ ನೋಪಜಾಯಂತೇ ಪ್ರಲಯೇ ನ ವ್ಯಥಂತಿ ಚ ॥ ೨ ॥

ಎನ್ನ ನಿತ್ಯತೆಯಿಂದ ನಿತ್ಯರು ।
ಯೆನ್ನ ಪೂರ್ಣತೆಯಿಂದ ಪೂರ್ಣರು ।
ಯೆನ್ನ ತೆರದಲನಂತಪರಮಾನಂದರೂಪರಲಾ ॥
ಎನ್ನ ತೆರದಲಿ ಸತ್ಯಸಿದ್ಧರು ।
ಭಿನ್ನಭಾವವೆ ಯಿಲ್ಲವೆಮ್ಮೊಳು ।
ಸನ್ನುತಾತ್ಮರು ನೋಡಲೀಪರಿ ಜ್ಞಾನಸಂಯುತರು ॥ ೩೬ ॥

ನಾನು ನೀನೆಂದಿರುವ ದ್ವೈತವು ।
ಹಾನಿಯಾಗಲು ಭೇದ ವ್ಯಥೆವುದೆ ।
ನಾನು ನೀನೀ ಜಗವಿದೆಲ್ಲ ದ್ವೈತವಾಗುವುದು ॥
ಮಾನವಂಗೀ ಸ್ಥಿತಿಯು ಬಂದರೆ ।
ಕಾಣರವರೀ ಜನ್ಮ ಗರ್ವದಿ ।
ಹಾನಿ ಕೇಳಿಂತವರಿಗಿರುವುದು ಪ್ರಳಯಕಾಲದಲಿ ॥ ೩೮ ॥

ನಾಶವಾಗಲು ಘಟವು ಘಟದಾ- ।
ಕಾಶ ಮೂಲಾಕಾಶದಲ್ಲಿ ಪ್ರ- ।
ವೇಶವಾಗುವುದಲ್ಲವೇನೀ ನೋಡು ತತ್ತ್ವವನು ॥
ಭಾಸಿಸುತ್ತಿಹ ಬತ್ತಿಯೊಂದಿರ- ।
ಲೇಸು ಬತ್ತಿಯ ಹಚ್ಚಲೇನವು ।
ಮಾಸಿಯೊಂದಾಗುವುವು ಕೂಡಿಸಲೊಂದೆ ರಾಶಿನಲಿ ॥ ೩೭ ॥

ದೊರೆಯಲಾತ್ಮಜ್ಞಾನ ನರನಿಗೆ ।
ಬರುವುದೈ ಮದ್ಯೂಪವನನಿಗೆ ।
ಮರಣಜನ್ಮಾತೀತನಾಗುವನಾತನೈ ಪಾರ್ಥ ॥
ಹರಿಯು ಕೇಳೇ ತೆರದಿ ಪಾರ್ಥನಿ- ।
ಗರುಹಿ ಸ್ವಾತ್ಮಜ್ಞಾನಪ್ರೌಢಿಯ ।
ಮೆರೆಸಿದನು ಗೋಪಾಲಕೃಷ್ಣನು ಶರಣಿ ಪಾರ್ಥನಿಗೆ ॥ ೩೯ ॥

ನರನಿಗೀ ಜ್ಞಾನದಲಿ ಪ್ರೇಮವು ।
ಒರುವ ತೆರದಲಿ ಕೃಷ್ಣನರುಹಲು ।
ನರನ ದೇಹದಿ ಕಿವಿಗಳೆದ್ದುವು ರೋಮರೋಮದಲಿ ॥
ನರ ಶಿಖಾನಖಸಾವಧಾನನು ।
ಹರಿಯು ನೋಡಿದನೀ ತೆರನ ಬಹು- ।
ಹರುಷದಿಂದರುಹಿದನು ಮುಂದಿನ ಗೀತೆಯನು ನರಗೆ ॥೪೦॥

ತಾನು ವಿಸ್ತರಿಸಿರುವ ತತ್ತ್ವ- ।
ಜ್ಞಾನವಿಸ್ತಾರಕ್ಕೆ ನಾಗದು ।
ಒನು ಮೇಣದ ಧಾರಣವ ಮಾಡುವನು ಕಲಿಪಾರ್ಥ ॥

ಏನ ಹೇಳಲಿ ನರನ ಯೋಗ್ಯತೆ ।
ಮಾನಿಸುತಲೀ ತೆರದಿ ಭಕ್ತ- ।
ಪ್ರಾಣಸಖನಾ ಶ್ರೀನಿವಾಸನು ಪೇಳ್ದನಾನರಗೆ ॥ ೪೧ ॥

ನರನೆ ಮಮ ವಕ್ತೃತ್ವಕನ್ಯೆಗೆ ।
ವರನು ಸುಂದರ ನಿನ್ನ ಬುದ್ಧಿಯು ।
ಪೆರೆಯಿತಿವರ ಸ್ವಯಂವರವು ಬಹು ಘಾಟಮಾಟದಲಿ ॥
ನರನೆ ನಾ ಹೇಳ್ದುದನು ಕೇಳ್ದೆಯೆ ।
ಪರನು ಶ್ರೋತೃಶಿರೋಮಣಿಯಲಾ ।
ಅರುಹುವೆನು ನಾ ವಿಸ್ತರದಲೀ ಜ್ಞಾನಮಹಿಮೆಯನು ॥ ೪೨ ॥

ಇರುವೆ ವಿಶ್ವದೊಳೊರ್ವ ನಾನೇ ।
ಯಿರುವನಾ ತ್ರಿಗುಣಾತ್ಮ ಬೇಡನು ।
ಸರಿಪರಿಯಲಾ ದೇಹವೆಂಬುವ ಒಲೆಯನೋಡ್ಡುವನು ॥

ಮೆರೆವ ಮಾಯೋಪಾಧಿಯಿಂದಲೆ ।
ಬರುವುದೈ ವಿಶ್ವಕ್ಕೆ ಜನ್ಮವು ।
ಪರಿಂಪಿದನೆಲ್ಲವನು ವಿಸ್ತರಿಸುವೆನು ನಾ ನಿನಗೆ ॥

ನರನೆ ಯೆನ್ನಯ ಸಂಗದೀಜದಿ ।
ಒರುವರಲ್ಲವೆ ಪ್ರಾಣಿಗಳ ಬೆಳೆ ।
ಕರೆಪರದರಿಂ ಜ್ಞೇತ್ರವೆನುತಲಿ ಪ್ರಕೃತಿಯನು ಪಾರ್ಥ ॥ ೪೩ ॥

ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಮ್ ।
ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥ ೩ ॥

ನರನೆ ಕೇಳೀ ಮಾಯೆ ನೋಡಲಿ- ।
ಕಿರುವುದು ಮಹತ್ತತ್ತ್ವ ಮೂಲವು ।
ಯಿರುವುದಾಕಾರಣದಿ ವಿಶ್ರಾಂತಿಸ್ಥಳವು ನಿಜದಿ ॥
ಇರುವುದಿದು ಜಗತಿಂತ ಬಹುಪರಿ ।
ಹಿರಿದೆನಿಸಿ ಭಾಸಿಸುವುದದರಿಂ ।
ಧರೆಯಲಿ ಮಹದ್ಬ್ರಹ್ಮನೆಂತಿದ ಕರೆವರೈ ಪಾರ್ಥ ॥ ೪೪ ॥

ಧರೆಯಲೀಕೆಯ ಯೋಗದಿಂದಲೆ ।
ಮೆರೆವುದೈ ಸುಖಿಕಾರಗುಣಗಳು ।
ಯಿರುವುದೀ ಬ್ರಹ್ಮಕೆ ಮಹತ್ತೆಂಬೀಪದವಿ ಪಾರ್ಥ ॥
ಕರೆವರಿದನವ್ಯಕ್ತವೆನುತಲಿ ।
ಭರದೊಳೈ ಯವ್ಯಕ್ತಮತದವ- ।
ರಿರದೆ ಸಾಂಖ್ಯರು ಪ್ರಕೃತಿ ಯೆನುತಲಿ ಕರೆವರೀಕೆಯನು ॥ ೪೫ ॥

ನರನೆ ಪ್ರಜ್ಞಾಶಿಖಾಮಣಿಯೆ ಕೇಳ್ ।
ಕರೆವರೀಕೆಯ ಮಾಯೆ ಯೆನುತಲಿ ।
ಮೆರೆವ ವೇದಾಂತಿಗಳ ಮತವಿದು ನೋಡು ಕೌಂತೇಯ ॥

ವಿಸರಿಯಿಸಿ ವಿಸ್ತಾರ ನಾಕಿದು ।
ಸರಿಕಿಸಲಿಕಜ್ಞಾನವಿದುವೇ ।
ಮೆರೆವನೈ ಸ್ವಾತ್ಮಸ್ವರೂಪವನಜ್ಞತನದಿಂದ ॥ ೪೬ ॥

ನರನೆ ದೃಷ್ಟಾಂತವನು ನಾ ವಿ- ।
ಸ್ತರಿಸುವೆನು ಸ್ವಪ್ನದಲಿ ನೋಡೈ ।
ಕರದಿ ದೀಪವ ಪಿಡಿದು ಕತ್ತಲೆಯನ್ನು ಹುಡುಕಿದರೆ ॥
ಒರುವರೇನದು ಕೃಷ್ಟಿಗೋಚರ ।
ಪರಿಯೊಳಾ ಕೇವಾತ್ಮರೂಪವು ।
ಒರುವರೇನದು ದೃಷ್ಟಿಗೋಚರ ಹುಡುಕಲೀ ತೆರದಿ ॥ ೪೭ ॥

ಹಾಲ ಕಡೆಯುತ ಕೂತರದರ- ।
ಶ್ಲೇಷವಲ್ಲದೆ ಕೆನೆ ಕಡೆಯದಿರಲಾ ।
ಹಾಲಿನಲಿ ಹುಟ್ಟುವುದು ಕೆನೆಯದು ನೋಡಿದಿಯೊ ಪಾರ್ಥ ॥
ಕೇಳು ಸ್ವಪ್ನಸಮಾಧಿಜಾಗೃತಿ- ।
ತಾಳದಿರೆ ಘನನಿದ್ರೆ ಬರುವುದು ।
ಗಾಳಿ ಯಿಲ್ಲದ ವೇಳೆ ಗಗನವೆ ರಂಜಿಸುತಲಿಹುದು ॥ ೪೮ ॥

ನರನೆ ಕೇಳೀ ತೆರದವಸ್ಥೆಯು ।
ಭರದಿ ನಿದ್ರಾವಸ್ಥೆ ಗಾಢವು ।
ಯಿರುವುದಜ್ಞಾನಸ್ವರೂಪವು ವಾರ್ಥ ನೋಡಿದಿಯಾ ॥
ಮರದ ಬುಡವನು ನೋಡಿ ಖಂಬವೊ ।
ಪುರುಷನೋ ನಿಜ ತಿಳಿಯದಲೆ ಗೋ- ।
ಚರಕೆ ಬರುವುದು ವಸ್ತುವೆಂದಾಭಾಸವಾಗುವುದು ॥ ೪೪ ॥

ತಿಳಿಯದಾತ್ಮಜ್ಞಾನ ನಿರ್ಮಲ ।
ತಿಳಿಯಲಾಗದು ಬೇರೆ ಯೇನದು ।
ತಿಳಿಯೆ ಸಂಧ್ಯಾಕಾಲದಂತೆ ವಿರಾಜಿಸುತ್ತಿಹುದು ॥
ಬೆಳಗಲಾಗದು ಹಗಲು ಮೇಣ್ ಕ- ।
ತ್ತಲೆಯು ರಾಜಿಪುದಲ್ಲಿ ಮೇಣೀ- ।
ಯಿಳೆಯೊಳೀತೆರ ರಂಜಿಸುವುದಜ್ಞಾನಸಾಮ್ರಾಜ್ಯ ॥ ೫೦ ॥

ತಿಳಿಯದಾತ್ಮಜ್ಞಾನ ನಿರ್ಮಲ । -
ತಿಳುವಳಿಕೆ ಮೇಣಿಲ್ಲ ಜಗದದು- ।
ವಿಳೆಯೊಳಿದಕಜ್ಞಾನವೆನುವರು ಕೋವಿದರು ನರನೆ ॥
ತಿಳಿಯಲೀ ಯಜ್ಞಾನ ಸುತ್ತಿಹ ।
ಹೊಳೆವ ಚೈತನ್ಯವನೆ ನಿಜದಲಿ ।
ತಿಳಿಯಲಾ ಕ್ಷೇತ್ರಜ್ಞನೆನುತಲಿ ಮನದಿ ಕೌಂತೇಯ ॥ ೫೧ ॥

ಅರಿಯದಲೆ ಶುದ್ಧಸ್ವರೂಪವ ।
ಬರುವುದಜ್ಞಾನಕ್ಕೆ ವೃದ್ಧಿಯು ।
ಯಿರುವುದದು ಜೀವಾತ್ಮಕ್ಷೇತ್ರಜ್ಞನ ಸ್ವರೂಪವಲಾ ॥
ನರನೆ ನೀ ಚೈತನ್ಯಮಾಯೆಯು ।
ಪರಮ ಸಂಯೋಗವನು ಮನದೊಳ- ।
ಗರಿತುಕೊಳ್ಳಿ ಮೂಲಮಾಯೆಯ ನೋಟ ಬಹುಮಾಟ
॥ ೫೨ ॥

ನರನೆ ಕೇಳಾ ಮಾಯೆ ಮಾಟದ ।
ಮರೆತು ಮೂಲಾತ್ಮಸ್ವರೂಪವ ।
ಧರಿಸುವುದು ಚೈತನ್ಯ ಬಹುಪರಿ ರೂಪಗಳ ವಾರ್ಥ ॥
ಮರುಳನಾ ಪರದೇಶಿ ಭ್ರಮದಲಿ ।
ತಿರುಗುತಿರೆ ದಾರಿಯಲಿ ಬರುತಿಹ ।
ಪುರುಷನರಸನೆನುತ್ತಲೊದರುವನೇನ ತಿಳಿಯದಲೆ ॥ ೫೩ ।

ನರನು ಮೂರ್ಛೆಯ ತಾಳ್ದನಂತರ ।
ತಿರಿಗಿ ಶುದ್ಧಿಯ ಪಡೆದ ಕೂಡಲೆ ।
ಬರಳುವನು ತಾಂ ಸ್ವರ್ಗ ನೋಡಿದೆನೆಂದ್ರಪದ ಪಡೆದೆ ॥

ನರನು ಕೇಳೀತೆರದಿ ಸ್ವಾತ್ಮನ ।
ಮರೆತು ಸುತ್ತಲು ದೃಷ್ಟಿ ಹಾಕಲು ।
ಪರಿಪರಿಯ ರೂಪಗಳು ತೋರ್ಪುವು ಸೃಷ್ಟಿ ಯೆಂಬುದದು ॥೫೪॥

ಸೃಷ್ಟಿ ಯಿದು ಕಾಣುವುದು ಸರ್ವವು ।
ಹುಟ್ಟಿರುವುದೆನ್ನಿಂದ ನೋಡ್ದೆ ।
ಭ್ರಷ್ಟಮತಿ ಭ್ರಾಂತಿಯಲಿ ನೋಳ್ಪನು ಬಹಳರೂಪಗಳ ॥
ಬಿಟ್ಟು ಜಾಗರಸ್ವಪ್ನದಲಿ ತಾಂ ।
ದೃಷ್ಟಿಸುವನು ವಿಶೇಷರೂಪವ- ।
ನೆಷ್ಟು ಪರಿಯಲಿ ವಿಸ್ತರಿಸಲೀ ಮಾಯೆಯಾಟವನು ॥ ೫೫ ॥

ಮರೆಯೆ ನರನಾತ್ಮಸ್ವರೂಪವ ।
ಬರುವುದೈ ಗೋಚರಕೆ ನಿಜ ಪರಿ- ।
ಪರಿಯ ರೂಪವು ನೋಡು ಚೈತನ್ಯಕ್ಕೆ ಕೌಂತೇಯ ॥
ತಿರಿಗಿ ಭ್ರಾಂತಿಯು ಶುದ್ಧರೂಪಕೆ ।
ಬರುವುದೆಂಬ ಪ್ರಕಾರವೆಲ್ಲವ- ।
ನರುಹುವೆನು ನಾ ಮುಂದೆ ವಿಸ್ತಾರದಲಿ ನೋಡಿದಿಯಾ ॥ ೫೬ ॥

ಮೂಲರೂಪದ ಮೇಲೆ ಮಾಯೆಯು ।
ತಾಳುವಳು ಮೇಣೀ ಸ್ವರೂಪವ ।
ಜೀಳಲಾಗದು ಮರೆವು ನಿನಗಾಂ ನಾರಿ ಹೇಳುವೆನು ॥
ಕೇಳು ಮಾಯೆಯು ನನ್ನ ವಳೆ ಗುಣ- ।
ಶೀಲೆ ತರುಣಳು ಮೇಣಲೌಕಿಕೆ ।
ಹೇಳುವೆನು ನಿಜವಾದಿಯಂತವಿಹೀನಳೆರುವಳಲಾ ॥ ೫೭ ॥

ಪರಿಕಿಸುತ ನೋಡಿದರೆ ರೂಪವ- ।
ನರಿತವರು ಪೇಳುವರು ಮಾಯೆಗೆ ।
ಬರುವುದೆಲ್ಲಿಂ ರೂಪ ರೂಪಾತೀತಳೆವಳೆಂದು ॥
ಇರುವುದಾಕೃತಿ ಬಹಳವ್ಯಾಪಕ- ।
ವಿರುವಳಜ್ಞಾನದ ಸಮೀಪದೂ- ।
ಳೆರಿಸುವಳು ಜ್ಞಾನಿಗಳ ದೂರದಿ ಲೀಲೆ ಚಿತ್ರವಲಾ ॥ ೫೮ ॥

ನರನೆ ಕೇಳೀ ಮಾಯೆ ಯೆನ್ನಯ ।
ನಿರುತವಾತ್ಮಸ್ವರೂಪಸಂಗದಿ ।
ಧರಿಸುವಳು ಗರ್ಭವನು ಚೋದ್ಯವಿದಲ್ಲವೇ ನೋಡು ॥
ತಿರಿಗಿ ಕೇಳಾ ಮೂಲ ಮಾಯೋ- ।
ದರದಿ ವ್ಯಾಕೃತವೆಂಟು ರೂಪಗ- ।
ಳೆರದೆ ತೋರ್ಪುವು ಗರ್ಭವೀಪರಿ ಹುಟ್ಟಿ ಬೆಳೆಯುವುದು ॥ ೫೯ ॥

ಧರೆಯಲಾತ್ಮಪ್ರಕೃತಿಯೋಗದಿ ।
ಧರಿಸುವುದು ಜನ್ಮವನು ಬುದ್ಧಿಯು ।
ಬರುವುದದರಿಂ ಮನವು ಮನಕಾಗುವುದು ಸ್ತ್ರೀಮನುತೆ ॥
ಬರುವುದಾ ಮಬುತೆಯು ಜತರದಲಿ ।
ಮೆರೆವಹಂಕಾರವು ಕಣಾ ಮು- ।
ತ್ತಿರುವುದದರಲಿ ಜನ್ಮ ಕೇಳ್ದೈ ಪಂಚಭೂತಗಳ ॥ ೬೦ ॥

ವಿಷಯಗಳು ವಿಷಯೇಂದ್ರಿಯಂಗಳ ।
ವಸುಮತಿಯೊಳಿಪ್ಪತ್ತ್ಯಾಂತರ- ।
ವ್ವಸುರ ಜೀಕೀ ಪಂಚಭೂತಗಳೊಡನೆ ಒರುನ್ನವಲಾ ॥
ವಿಷಯವಿಷಯೇಂದ್ರಿಯದ ಕ್ಷೋಭೆ ।
ಒಸುಳೊಳಗೆ ತ್ರಿಗುಣಗಳು ಒರುನ್ನವ್ ।
ಹೆಸರವಕೆ ರಜ ಸ್ಸ್ವ ತಮವೆಂದಿಹುವ್ ಜಗದೊಳಗೆ ॥೬೧॥

ಗುಣದ ವಾಸನೆ ಹುಟ್ಟಿದಂದದಿ ।
ಜನುಮ ತಾಳ್ವುದು ಜೀವಜೆಲ್ಲವ್ವೆ ।
ಮನದಿ ಯೋಚಿಸಿ ನೋದು ಜೀವನ್ವ ಜಲದ ಯೋಗದಲಿ ॥
ಗಣನೆಯಿಲ್ಲವ ಮರನ ಪೃಚ್ಛಿಸು- ।
ತನುಚರಣವನು ಸುಳ್ಳುರ್ಲ್ಲನೆ ।
ನೆನೆಯುಲೆನ್ನಯ ಸಂಗದಿಂದಲಿ ಮೂಲಪ್ರಕೃತಿಯದು ॥೬೨॥

ಪರಿಸರಿಯ ಜಗದಂಚುರಂಗಳ ।
ಧರಿಸುವುದು ಜನ್ಮಗಳ ನೋಲ್ಕೈ ।
ಧರಿಸುವುದು ನೋಣೆಂಕ ರೂಪಂಗಳನು ನಾ ಪೇಳ್ದಿ ॥
ಧರಿಸುವುದು ರೂಪನ ಚತುರ್ವಿಧ ।
ನರನೆ ನೀ ಪರಿಸಲು ನೋಮುನಿ ।
ಯಿಂತನ್ನವಂವಲಲ್ಲೋದೋಗ್ಗಿದ ಪೊಣ್ ಜರಾಯುಜನ್ವ
॥ ೬೩ ॥

ಇರುವುದ್ಕೆ ಯಂದಜವ್ ಪ್ರಥಮವ್ ।
ಯಿರದಿದುಕೆ ಸ್ವಾತಂತ್ರ್ಯಂದೊಳು ।
ಮೆರೆಯೆ ವಾಯ್ವಾಕಾತರನದಾಧಿಕ್ಯ ಗರ್ಭದಲಿ ॥
ಇರುವುದೊಂದವಯವವ್ ಮೊಣದ- ।
ಕಿರುವುದಿಲ್ಲ ಸ್ವತಂತ್ರಭಾವವ್ ।
ಪರಪಯಿಲಿದ ವಿಸ್ತರಿಸುವೆನು ಗುಣವಿಭಾಗವನು ॥ ೬೪ ॥

ಇರಲು ರಜತಮವಧಿಕವದರ- ।
ಲ್ಲಿರಲು ಜಲತೇಜಂಗಳಧಿಕತೆ ।
ಮೆರೆವುವೈ ಸ್ವೇದಜಗಳೀ ಜಗದಲ್ಲಿ ಕೌಂತೇಯ ॥

ಇರಲು ಪೃಥ್ವೀಜಲವಧಿಕವೀ- ।
ತೆರದಿ ಕೇವಲಗುಣತಪೋನ್ವಿತ- ।
ವಿರಲು ಧಾತ್ರಿಯಲುದ್ಭಿದಗಳಾಗುವುವು ನೋಡಿದರೆ ॥ ೬೫ ॥

ಪಂಚಕರ್ಮೇಂದ್ರಿಯಗಳಾ ಪರಿ ।
ಪಂಚ ಜ್ಞಾನೇಂದ್ರಿಯ ಸಹಿತಲಾ ।
ಪಂಚಭೂತಾತ್ಮಕ ಜರಾಯುಜ ಬುದ್ಧಿಮನಯುತವು ॥
ವಂಚಿಸದೆ ನಾ ನಿನಗೆ ಪೇಳ್ದೆ ವಿ- ।
ರಿಂಚಿನಿರ್ಮಿತ ಸೃಷ್ಟಿಯೆಲ್ಲವ ।
ಸಂಚಕದಿ ನೀನೆನಗೆ ನಿರುಪಮ ಮಿತ್ರ ದೊರಕಿದಿಯೆ ॥ ೬೬ ॥

ಸೀರಪೂರ್ಣನೆ ಯಂದಜಾದಿಕ ।
ದಾರುಣಿಯುಲಿವು ನಾಲ್ಕು ವಿಧಗಳು ।
ಚರಚರತಲವೆರಡುಪಾದಗಳೆರಡು ಜೊ ತೆರದಿ ॥
ತೋರುವೆಂಟೇತರದ ಪ್ರಕೃತಿಯು ।
ಯಾರಿಗೀತರ ತಿರಿವಿರುವ್ದೋ ।
ಯಾರಿಗಹುದು ಪ್ರವೃತ್ತಿ ಜರತ ನಿವೃತ್ತಿ ಬೆನ್ನಿಹುದೊ ॥ ೬೭ ॥

ಯಾತ ನಾಭಿಯ ಹೇಳೆ ಸುರಜನ- ।
ವಾಪವೆಂಬು ವಿರಾಜಿಸುವ್ಯೈ ।
ಯಾರ ತಂಪವೆ ಸ್ವರ್ಗಮಪ್ಪವು ಮರ್ತ್ಯಲೋಕವಿದು ॥
ಯಾರ ದೇಹನಿತಂಬ ಭಾಗವು ।
ತೋರುನಾ ಪಾತಾಳ ಲೋಕ ತ- ।
ದೀರಪೀ ಪರಿ ಯಿರುವ ಚಾಲನ ಹಡದಳಾ ಮಾಯೆ ॥ ೬೮ ॥

ಮೂರುಲೋಕವೊಳದುವೆ ಬಹುವಿ- ।
ನ್ತರವಾಗುವುದೇನ ಹೇಳಲಿ ।
ತೋರುವೀ ಯೆಂಭತ್ತುನಾಲುಕುಲಕ್ಷ ಯೋನಿಗಳು ॥
ತೋರುವೀ ಬಾಲಕನ ಬೆರಕಿನ ।
ಪೇರರಗಳು ಸುಧಗಳು ಪ್ರತಿದಿನ ।
ಸೇರುವುವು ನೈಗ್ಧ್ಯನು ಬಾಲನರೋಗಿಯಾಗಿಹನು ॥ ೬೯ ॥

ಪರಿಸರಿಯ ದೇಹಾವಯವಗಳ ।
ಪರಿಸರಿಯ ನಾಮಗಳನಿಡುತಾ- ।
ಭರಣಗಳನೇರಿಸುವಳೈ ತಾಯ್ತಾಯಿ ಬಾಲಕಗೆ ॥
ಮರಳಿ ಮೋಹವಿದೆಂಬ ಸ್ತನದೊಳ- ।
ಗಿರುವ ಹಾಲನು ಕುಡಿಸಿ ನಾಕುವ ।
ಳರರೆ ಮಾಯಾಲೀಲೆ ವರ್ಣಿಪರಾರು ತ್ರಿಭುವನದಿ ॥ ೭೦ ॥

ಪರಿಪರಿಯ ಸೃಷ್ಟಿಗಳು ಬಾಲಕ- ।
ಗಿರುವ ಬೆರಳುಗಳೇನ ಹೇಳಲಿ ।
ಪರಿಪರಿಯ ದೇಹಂಗಳುಂಗುರಗಳು ವಿರಾಜಿಪುವು ॥
ಇರುವುದೊಂದೇ ಕೂಸು ಮಾಯೆಗೆ ।
ಮೆರೆವುದದು ವಿಶ್ವಸ್ವರೂಪವು ।
ಯಿರುವುದಜ್ಞಾನಸ್ವರೂಪದ ಪ್ರಕೃತಿ ಮಾಯೆಯಿದು ॥ ೭೧॥

ಮೆರೆಸುವಳು ತಾಯ್ಮಾಯೆ ಕೂಸನು ।
ಸರಸ ಪ್ರೇಮದಿ ಪರ್ಧಿಸುವಳ್ಳೆ ।
ಯರಿತಿಹಳು ತಾಂ ಧನ್ಯಳೆಂದೇ ಕೂಸು ಹುಟ್ಟಿಹುದು ॥
ಸರಸಿಜಾಸನಜನ್ಮಕಾಲವು ।
ಮೆರೆವ ಪ್ರಾತಃಕಾಲ ಕೂಸಿಗೆ ।
ಹರಿಯೆ ಸ್ಥಿತಿ ಮಧ್ಯಾಹ್ನಕಾಲವು ಕೂಸಿಗೇನೆಂಬೆ ॥ ೭೨ ॥

ಹರನೆ ಸಾಯಂಕಾಲ ಲಯವಿೀ- ।
ತೆರದಿ ಬಾಲನ ಕಾಲ ಮೂರಿವ ।
ಮೆರೆವುದಾ ಹಾಸಿಗೆಯು ಕೂಸಿಗೆ ಪ್ರಳಯಕಾಲವದು ॥

ಪರಿಪರಿಯಲಾಟಗಳನಾಡುತ ।
ಭರದಿ ನಿದ್ರಿಪನಲ್ಲಿ ಬಾಲನು ।
ಮರಳಿ ಕಲ್ಪೋದಯದಿ ಬಾಲಕಗೆಚ್ಚರಾಗುವುದು ॥ ೭೩ ॥

ನರನೆ ಮಿಥ್ಯಾಜ್ಞಾನವನ್ನನು- ।
ಸರಿಸಿ ವ್ಯವಹಾರದಲಿ ಪದಗತಿ- ।
ಯಿರಿಸುವನು ಬಾಲಕನು ಮೇಣಾ ಕಾಲಗತಿಯಿಂದ ॥
ದೊರೆವನ್ನೆ ಸಂಕಲ್ಪವಿತ್ತ್ರನು ।
ಮೆರೆವುದೈ ಶೋಭೆಯಲತಂಕೃತಿ ।
ಮರಣ ತಟ್ಟುವದಿವಗೆ ಸ್ವಾತ್ಮಜ್ಞಾನವಿಷದಿಂದ ॥ ೭೪ ॥

ಪರಿಪರಿಯ ವಿಸ್ತಾರ ನಾಕಿದು ।
ನರನೆ ನಿನಗಾಂ ತತ್ತ್ವವೇಳ್ದಿನು ।
ಬರಿದೆ ಕಾಲವ್ಯಯದೊಳರ್ಥವ ಕಾಣೆ ಕೌಂತೇಯ ॥
ನರನೆ ಕೇಳೀ ಮಾಯೆಯಿಂದೀ- ।
ಪರಿಯ ತೋರುವ ವಿಶ್ವವೆಲ್ಲವು ।
ಧರಿಸಿಹುದು ಜನ್ಮವನು ಯೆನ್ನಧಿಕಾರದೋಗದಲಿ ॥ ೭೫ ॥

ಸರ್ವಯೋನಿಷು ಕೌಂತೇಯ ಮೂರ್ತಯಃ ಸಂಭವಂತಿ ಯಾಃ ।
ತಾಸಾಂ ಬ್ರಹ್ಮ ಮಹದ್ಯೋನಿರಹಂ ಬೀಜಪ್ರದಃ ಪಿತಾ ॥ ೪ ॥

ನರನೆ ಕೇಳೀ ಕಾರಣದೊಳಾ- ।
ನಿರುವೆ ತಂದೆಯು ವಿಶ್ವವೆಲ್ಲ ।
ಕ್ಕಿರುವಳಾ ತಾಯ್ಮಾಯೆ ವಿಶ್ವವ ಕೂಸಿಹುದು ನಮ್ಮ ॥
ಪರಿಪರಿಯ ದೇಹಗಳು ದೃಗ್ಗೋ- ।
ಚರಕೆ ಬಂದರು ಸರ್ವಕೆನ್ನವ- ।
ರಿರುವರರ್ಭಕರೆಂದು ತಿಳಿಯೈ ಬೇಡ ಸಂಶಯವು ॥ ೭೬ ॥

ಸೃಷ್ಟಿಯಲ್ಲಿಹ ಭೂತನಿಕರವ ।
ಹುಟ್ಟಿದುದಲಾ ಬುದ್ಧಿಮನದಿಂ ।
ಸೃಷ್ಟಿ ಯಿಹುದೈ ನೋಡು ಸಂಚೇಂದ್ರಿಯದ ಮೂಲಕದಿ ॥
ದೃಷ್ಟಿಸಿದರೀ ದೇಹದೊಳಗೆ- ।
ಷ್ಟೆಷ್ಟು ಭಿನ್ನಾಂಗಗಳು ತೋರ್ಪುವು ।
ಸೃಷ್ಟಿಯಲ್ಲೀ ತೆರದಿ ತೋರ್ಪುವು ಭಿನ್ನದೇಹಗಳು ॥ ೭೭ ॥

ತೋರಲೇನವು ಭಿನ್ನಭಿನ್ನಾ- ।
ಕಾರಗಳು ನೋಡಿದರೆ ವಿಶ್ವಾ- ।
ಕಾರವೊಂದೇ ದೇಹವಿರುವುದು ತತ್ತ್ವ ನೋಡಿದರೆ ॥

ಧಾರುಣಿಯಲಿಹ ಮರವನೊಂದು ವಿ- ।
ಚಾರಿಸುತ ನೀ ನೋಡು ಭಿನ್ನಾ- ।
ಕಾರವಿರುವುವನೇಕವದರಲಿ ಶಾಖೆಗಳು ತಿಳಿಯೆ ॥ ೭೮ ॥

ಪರಿಪರಿಯ ಮಾನದಲಿ ಯಾಕೃತಿ- ।
ಯಿರುವುದಾದರು ಭೇದವೇನದು ।
ಮರವು ಬಂದಿಹುದಲ್ಲವೇ ನೋಡೊಂದೆ ಬೀಜದಲಿ ॥
ಪರಿಯಲೀ ಸಂಬಂಧ ನೋಡಲು ।
ಯಿರುವುದೆನ್ನೀ ವಿಶ್ವವೆನ್ನಲಿ ।
ಬರುವುದಾಪರಿ ಘಟಕೆ ಭಿನ್ನಾಕೃತಿಯು ಮಣ್ಣಿಂದ ॥ ೭೯ ॥

ಹತ್ತಿಯಿಂ ನೇಯುತ್ತ ಪರಿಪರಿ- ।
ವಸ್ತ್ರಗಳನು ತಯಾರಿಸುವರೈ ।
ವಸ್ತ್ರ ಪರಿಪರಿ ಯಿರಲು ಭೇದವೆ ಸೂತ್ರದಲಿ ನೋಡೈ ॥
ಧಾತ್ರಿಯಲ್ಲೀ ತೆರದೆ ತೆರೆಯು- ।
ತ್ಪತ್ತಿಯಹುದಗಣಿತವು ನೋಡಲು ।
ಪ್ರಥ್ವಿಯಲ್ಲಿ ಸಮುದ್ರಸಂತತಿ ಯಿರುವುದೇ ಹೇಳು ॥ ೮೦ ॥

ಇರುವುದೀಪರಿ ಯೆನ್ನ ಸಚರಾ- ।
ಚರದ ಸಂಬಂಧವು ಕಣಾ ನಾ- ।
ನಿರುವೆನೊಂದೇ ರೂಪನಲ್ಲವೆ ಜಗವು ನಾನಂತು ॥
ಉರಿವ ಬೆಂಕಿಜ್ವಾಲೆ ವೈಶ್ವಾ- ।
ನರನ ರೂಪಗಳಲ್ಲವೇ ಬೇ- ।
ರಿರುವೆ ಬೆಂಕಿಯೆನು ಜಿಟ್ಟಾ ಜ್ವಾಲೆಗಳು ಜಗದಿ ॥ ೪೧ ॥

ನಾನಿಹೆನು ವಿಶ್ವಸ್ವರೂಪನು ।
ಕಾಣುವುದು ನೀನೆಂತು ಶಕ್ಯವೆ ।
ಪೂರ್ಣವಿದ ನೀ ನಂಬು ಸಿದ್ಧಾಂತವಿದು ನಿಜನಿಜವು ॥
ಕಾಣಲೀ ಪುಷ್ಕಳ ಶರೀರವ ।
ನಾನೆ ತುಂಬಿಹೆನೊಂದೆ ಗುಣದಿಂ- ।
ದೀನಿಧಾನವ ತಿಳಿಯಲಾ ಕೌಂತೇಯ ಮನಗೊಟ್ಟ ॥ ೪೨ ॥

ಹುಟ್ಟಲೀಪರಿ ಜಗವಿದೆನ್ನಿಂ- ।
ತಟ್ಟುವುದು ಲಯವೆನಗೆನುತ ನೀ ।
ದುಷ್ಟ ಕಲ್ಪನೆ ಮಾಡಿ ಕೊಳದಿರು ಶಕ್ಯವೆಂತಿಹುದು ॥
ಸೃಷ್ಟಿಸಿದ ಜಗವಾರ ತೇಜವ ।
ತೊಟ್ಟು ರಂಜಿಸುತಿಹುದು ನೋಡಲು ।
ಕೊಟ್ಟೆನಾದರೆ ತೇಜ ಜಗಕಾಂ ಲಯವ ಹೊಂದುವೆನೆ ॥ ೪೩ ॥

ನರನೆ ಸ್ವಪ್ನಾವಸ್ಥೆಯೊಳಗಿಹ ।
ನರಗೆ ಸತ್ತಿಹೆನೆಂದು ಕನಸಾ- ।
ಗಿರಲು ನಿಜನೇ ಸತ್ತನವನಾಭಾಸಮಾತ್ರವಲಾ ॥
ಒರಲು ಕಾಮಿಣಿರೋಗ ನರನಿಗೆ ।
ಒರೆವುದರಿಸಿಣ ನೇತ್ರದಲಿ ಗೋ- ।
ಚರಕೆ ಒರುತಿಹ ವಸ್ತುವೆಲ್ಲವು ಹಳದಿ ತೋರುವುದು ॥ ೪೪ ॥

ಪೊಡವಿಯಲಿ ಮಾಣಿಕದ ತೇಜದೊ- ।
ಳಡಗುವುದೆ ಮಾಣಿಕವು ಚಿನ್ನದಿ- ।
ನೆಡನೆ ವಸ್ತುಗಳನ್ನು ಮಾಡಲು ಚಿನ್ನವಡಗುವುದೆ ॥
ಒಡನೆ ತಾವರೆಯುರಿಕಿಡಾಕ್ಷಣ ।
ವೊಪೆವುದೇ ಕಮಲತ್ವವದರಿಂ- ।
ದ ಗುವುದೆ ಜೀವವು ಕಣಾ ಅವಯವವ ಧರಿಸಿದರೆ ॥ ೪೫ ॥

ತರಣಿಯನು ಮೋಡಗಳು ಮುಚ್ಚಲು ।
ತರಣಿಯಾಗುವನಡ್ಡನಾದರು ।
ತರಣಿಕಿರಣಸಹಾಯದಿಂದಲೆ ತೋರ್ಪುದೀಪರಿಯು ॥
ನರನು ತನ್ನಯ ಛಾಯೆ ನೋಡುತ- ।
ಲರದೆ ಬೆದರಿದರೇನು ಛಾಯೆಯೆ ।
ಬಿರುವುದೇ ಬೇರಾಗಿ ಛಾಯೆಯಲೇನಿಹುದು ಭ್ರಾಂತಿ ॥ ೪೬ ॥

ಧರಿಸಲವಯವಗಳನು ಜೀವನು ।
ಪರಿಸರಿಯ ಪುಷ್ಕಳ ಶರೀರದ ।
ಪರಿಯು ಗೋಚರಮೆನಿಪುದಾದರು ।
ಧರಿಸಿರುವ ರೂಪವು ಕಣಾ ಮೇಗೊಂದು ನೋಡಿದರೆ ॥
ಧರೆಯೊಳಗೆ ಜೋಳವನು ಬಿತ್ತಲು ।
ಒರುವುವದರಿಂ ಗಿಡವು ತೆನೆಗಳು ।
ಮರಣ ಬಂತಾ ಜೀಜಕೆಂದರೆ ತತ್ತ್ವ ಸರಿ ಯಿಹುದೆ ॥ ೪೭ ॥

ಅರಿಯಲಾ ಸರ್ವರಲಿ ನಾನಿಹೆ ನಂಬು ನೀನಿದನು ॥
ಅರಿತಿಹೆನು ನಾನೆಲ್ಲರಲಿ ಬಹು- ।
ಪರಿಯುಲೇಕತ್ವವನು ಶಾಶ್ವತ- ।
ಬಿರುವ ತತ್ತ್ವವದೆಲ್ಲ ನಾನೇ ತಿಳಿವೆ ನಿಜವಾಗಿ ॥ ೪೮ ॥

ಪರಿಕಿಸಲು ನಿಜ ತತ್ತ್ವ ವಾರ್ಥನೆ ।
ಮರಣವಲ್ಲಾ ಜೀವಕದು ಪಿ- ।
ಸ್ತರವಲಾ ನೋಡಿದಿಯೊ ಮನಗೊಟ್ಟದನು ಕೌಂತೇಯ ॥
ಸರಿಸುತಲಿ ಬದಿಗೊಮ್ಮೆ ವಿಶ್ವವ ।
ನರನೆ ಯೆನ್ನೊರ್ವನನೆ ನೋಡುವ ।
ಪರಿಯು ಯಾವುದು ಕೇಳಿದರೆ ನಾ ಪೇಳ್ವೆ ವ್ಯರ್ಥವಲ ॥ ೪೯ ॥

ಬಂಧಮೋಕ್ಷಗಳೆರಡು ಕೇಳೆ- ।
ನ್ನಿಂದಲೇ ತೋರುವುವು ಜಗದಲಿ ।
ಸಂದಣಿಯಿಸಿದ ತಿಳಿಯುವರೆ ಮದ್ರೂಪನಿರಬೇಕು ॥
ಅಂಧನಜ್ಞನು ತಿಳಿಯಲಾರನು ।
ಬಂಧಮೋಕ್ಷಗಳೆರಡು ತನ್ನಲೆ ।
ಯೆಂದು ತಿಳಿವನು ನೋಡು ನಿಜ ತತ್ತ್ವವನೆ ತಿಳಿಯನಲಾ ॥ ೫೦ ॥

ಎಂತು ನನ್ನಲಿ ನಾನು ಬಂಧನ- ।
ವಾಂತು ಕೊಳ್ಳುವೆನೆಂದು ಪೇಳ್ವೆನು ।
ಕುಂತಿತನಯನೆ ಕೇಳು ನೀನದಕಿಂತ ಮುಂಚಿತದಿ ॥

ಎಂತು ಗುಣಗಳು ಧರ್ಮವಾವುದು ।
ಯೆಂತಿಹುದು ಗುಣಗಳ ಸ್ವರೂಪವು ।
ಯೆಂತು ಹುಟ್ಟಿದವೇನ ಮಾಳ್ಪುವು ಮರ್ಮವೇನವಕೆ ॥

ಇಂತು ವಿಸ್ತಾರವನು ನಾನತಿ- ।
ಸಂತಸದಿ ಪೇಳುವೆನು ಕೇಳ್ ।
ಕುಂತಿತನಯನೆ ಕೊಟ್ಟು ಮನವನು ಭಕ್ತಿಭರದಲಿ ॥ ೧೧ ॥

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್ ॥ ೫ ॥

ಸತ್ತ್ವ ರಜ ತಮವೆಂಬ ಹೆಸರ ಗು- ।
ಣತ್ರಯವದೀ ವಿಶ್ವದಲ್ಲು- ।
ತ್ಪತ್ತಿಯವಕೀ ಮಾಯೆಯೇ ನೀ ನೋಡು ಕೌಂತೇಯ ॥
ಸತ್ತ್ವಗುಣವೇ ಯದರೊಳಗೆ ಸ- ।
ರ್ವೋತ್ತಮುವಲಾ ರಜವು ಮಧ್ಯನು ।
ಮತ್ತೆ ತಮವು ಕನಿಷ್ಠವೆಂದೇ ತಿಳಿಯೊ ಕೌಂತೇಯ ॥೧೨॥

ಹತ್ತಿ ಬರಲಜ್ಞಾನವದರಿಂ ।
ವೃತ್ತಿಗಳು ಒದಲಾಯಿಸುವುವೈ ।
ಸತ್ತ್ವ ರಜ ತಮ ಗುಣಗಳೆಲ್ಲವು ವರ್ಧಿಸುವವಲ್ಲಿ ॥
ವೃತ್ತಿಗಳು ಹೆಚ್ಚುತ್ತ ಹೋಗಲು ।
ಮತ್ತೆ ಗುಣಗಳು ವರ್ಧಿಸುವ್ಯೆ ।
ಮತ್ತೆ ಗುಣಗಳು ಯೆಂತು ಬಂಧನವಾಗುವುವು ಪೇಳ್ವೆ ॥ ೧೩ ॥

ನರನೆ ಕೇಳೀ ಮೂರು ಗುಣಗಳು ।
ಬರುವುವಂತಃಕರಣವೃತ್ತಿಯೊ- ।
ಳೆರದೆ ಯದರಿಂ ತೋರ್ಪುದೈ ಯಾವೃತ್ತಿ ತ್ರಿಗುಣಾತ್ಮ ॥
ಬರುವುವಾಪರಿ ದೇಹಕೊಂದೇ ।
ಭರದಿ ಬಾಲ್ಯವು ತರುಣತನವೈ ।
ಮರಳಿ ವಾರ್ದ್ಧಕ್ಯವು ಕಣಾ ಮೂರಿಹುವವಸ್ಥೆಗಳು ॥ ೧೩ ॥

ಎಂದು ಜೀವಾತ್ಮನು ಶರೀರದಿ ।
ತಂದು ಧರಿಸಿನೊ ದುರಭಿಮಾನ- ।
ನಿಂದೆ ಜೀವಾತ್ಮನಿಗೆ ಒಂತೈ ನೋಡು ದುಃಕರುನ ॥
ಬಂದುರೀ ದುಃಕರುನ ಫಲವೇ- ।
ನೆಂದು ಕೇಳಲು ಭಾವನೆಯು ತಾಂ ।
ಬಂದು ತಟ್ಟುವುದೀರೀರವ ತನ್ನದೇ ಯೆಂದು ॥ ೧೬ ॥

ಕೇಳು ಚಿನ್ನದ ವಿಶ್ರಾಣವು ಬಹು- ।
ಮೇಲು ಚಿನ್ನದೊಳಾಗೆಯದರಲಿ ।
ಕೇಳು ಮಿಶ್ರಣಮಾನದಲಿ ಕಳೆಗುಂದುವುದು ಚಿನ್ನ ॥
ಆಲಸಿಯ ಬಂದಿರಲು ಜಾಗರ ।
ಹಾಳೆನಿಸಿ ವರ್ಧಿಪುದು ನಿದ್ರೆಯು ।
ತಾಳಲಜ್ಞಾನವನು ತ್ರಿಗುಣಗಳೇಳುವುವು ಭರದಿ ॥ ೧೪ ॥

ಒರಲು ಕೇಳಭಿಮಾನಿಯಿರಿ ।
ಮರಣಪರ್ಯಂತರವು ಬರುವೀ- ।
ಪರಿಪರಿಯ ದುಃಖಿಗಳ ಭೋಗಿಸ ಬೇಕು ದೈಹಿಕವ ॥
ನರನೆ ಗಾಳವ ನುಂಗಿದಾಕ್ಷಣ ।
ಕೊರಳ ಹಿಡಿದಾ ಬೆಸ್ತನವನತಿ- ।
ಭರದೊಳೆಳೆಯುವ ಮೀನು ತಪ್ಪಿಸ ಬಹುದೆ ಮರಣವನು ॥ ೧೭ ॥

ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಮ್ ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ ॥ ೬ ॥

ಸತ್ತ್ವವೆಂಬುವ ಜೇಡ ಸುಖಸಂ- ।
ಪತ್ತು ಜ್ಞಾನಗಳೆಂಬ ಬಲೆಗಳ ।
ಬೆತ್ತುವನು ಜೀವಾತ್ಮನನು ಹಿಡಿದೆಳೆವನದರಿಂದ ॥
ಧಾತ್ರಿಯಲ್ಲೀ ಮೀನು ಬಲೆಯಲಿ ।
ಬೆತ್ತಿನಲು ಥಡಪಡಿಸುತಿರುವುದು ।
ಪಾರ್ಥ ಕೇಳೀ ತೆರದಿ ಥಡಪಡಿಸುವನು ಮಾನವನು ॥ ೧೮ ॥

ನರನು ಸಿಲುಕಲು ಸತ್ತ್ವಪಾಶದಿ ।
ಬರುವ್ವುದವನಿಗೆ ಜ್ಞಾನಮದನೈ ।
ಧರೆಯೊಳೆನ್ನ ಸಮಾನ ಜ್ಞಾನಿಗಳೆಲ್ಲವೆನ್ನುವನು ॥
ಹರಿಪರಿಯಲೀ ಜ್ಞಾನವಲ್ಲನೆ ।
ಹೊರಟು ಬಾಯಿಂಪಾತ್ಮಸುಖದಿಂ ।
ಬರುವ ಸುಖವನು ತೊಲಗುವನು ನೋಡಿವನ ದೌರ್ಭಾಗ್ಯ ॥೧೯॥

ಈತನಿಹ ವಿದ್ವಾಂಸನೆಂಬೀ- । ಪರಿಯಲೀ ಜೀವಾತ್ಮ ತನ್ನಯ ।
ಮಾತ ತೆಗೆದರೆ ಯುಬ್ಬಿ ಹಸ್ರೋ- । ದೊರೆತನವ ಮರೆಯುವನು ಸಿಕ್ಕಿದ ।
ಪೇತನಾಗುವನೆನುವನೈ ಬಹುಮಾನವಾಂಪ್ತೆನುತ ॥ ಎರಡು ರೊಟ್ಟಿಗಳಿಂದ ಸಂತೋಷವನು ತಾಳುವನು ॥
ಈತನಿಗೆ ತುಸ ಲಾಭವಾದರೆ । ಅರರೆ ಬಾಹ್ಯಜ್ಞಾನದಲಿ ಬಹು- ।
ಭೂತಳದೊಳಿನ್ನಂತೆ ಸುಖಿಯಾ- । ಪರಿಯಲಭಿಮಾನವನು ತೋರಿಸೆ ।
ವಾತನಿರುವನೆನುತ್ತ ಹರ್ಷವ ತಾಳುವನು ನಿಜದಿ ॥೧೦೦ ॥ ಒರುವುದೀ ಸ್ಥಿತಿಯಲ್ಲವೇ ಕೌಂತೇಯ ನೋಡಿದಿಯಾ ॥ ೧೪೪ ॥

ಅಷ್ಟ ಸಾತ್ವಿಕ ಭಾವದಿಂ ಗ- । ನರನೆ ಕುಶಲ ಪ್ರವೃತ್ತಿಶಾಸ್ತ್ರದಿ ।
ರ್ವಿಷ್ಣನಾಗುವನೇನ ಹೇಳಲಿ । ಯಿರುವನತಿನಿಪ್ಣಾತ ಯಜ್ಞದಿ ।
ಯಿಷ್ಟು ಸಾಲದೆ ತಾನೆ ಘನವಿದ್ವಾಂಸನೆನ್ನುವನು ॥ ಸುರರ ನಗರಿಯ ವಾರ್ತೆಯನ್ನರಿಯುವನು ನಿಮಿಷದಲಿ ॥
ಸೃಷ್ಟಿಯಲ್ಲೀ ತೆರದ ವಿದ್ವ- । ಧರೆಯಲೆನ್ನೀ ತೆರದ ಜ್ಞಾನಿಗ- ।
ಚ್ಛ್ರೇಷ್ಠನಾರಿಹನೆಂದು ಹುಡುಕುತ । ಳೆರುವರೇ ಬೇರಿಲ್ಲವೆನುತಲಿ ।
ಕಷ್ಟದಾಯಾಸವನು ಮಾಳ್ಪನು ಶ್ರೇಷ್ಠ ತಾನೆನುತ ॥೧೦೧ ॥ ಪರಮಗರ್ವದಲುಬ್ಬಿ ಮರೆವನು ಸ್ವಾತ್ಮಜ್ಞಾನವನು ॥ ೧೦೫ ॥

ಜ್ಞಾನರೂಪನು ತಾನಿರುವೆನೀ- । ಧರೆಯಲೀ ಚಾತುರ್ಯಚಂದ್ರಮ- ।
ಜ್ಞಾನನಿಲ್ಲೈಯವಗೆ ಮೇಣೀ- । ಗಿರುವುದೆನ್ನಯ ಚಿತ್ತಗಗನವು ।
ಜ್ಞಾನಲಯವಾದುದರ ದೆಸೆಯಿಂ ದುಃಖವೆಂಬಿಸನಲಾ ॥ ಪೆರೆಸುವನು ಚಾತುರ್ಯವೆನುತಲಿ ಯೋಚಿಪನು ಮನದಿ ॥
ಕ್ಷೋಣಿಯಲ್ಲೀ ವಿಷಯಜ್ಞಾನವೆ । ನರನೆ ಕೇಳೀ ಸತ್ವ ಬೇಡನು ।
ತಾನರಿವೆನೆಂಬೀತೆರದ ಬಹು- । ಯೆರಡು ತೆರದೀ ಜ್ಞಾನಸುಖಗಳ ।
ಮಾನದಿಂದುಬ್ಬುವನು ಗಗನವೆ ನಾಲದುಬ್ಬಿಕೆಗೆ ॥ ೧೦೨ ॥ ಪೆರೆವ ಹಗ್ಗವ ಕಿವಿಗಳಲಿ ಜೀವಾತ್ಮನಿಗೆ ಕಟ್ಟಿ ॥ ೧೦೬ ॥

ಅರಸನೊರ್ವನು ಸ್ವಪ್ನದಲಿ ತಾ- । ಕರದೊಳಾ ಹಗ್ಗವ ಹಿಡಿದು ಬಹು- ।
ನಿರದೆ ತಿರುಕನ ತೆರದಿ ಪುರದಲಿ । ಪರಿಯಲೀ ಜೀವಾತ್ಮನನು ತಾಂ- ।
ತಿರಿಗಿ ಭಿಕ್ಷೆಯ ಬೇಡುತಿರೆ ನಿಜಕರ್ಮವಶದಿಂದ ॥ ತರುವನೈ ಕೈವಶಕೆ ಬೇಡನು ಬಹಳ ನಿಪುಣನಲಾ ॥
ಎರಡನೆಯುರಿಂದಧಿಕ ರೊಟ್ಟಿಗ- । ನರನೆ ನಾನೀಗೊರೆವೆ ರಜವಾ- ।
ಳೆರಡು ದೊರಕಿದರವಗೆ ನೋಡೈ । ಪರಿಯಗುಣ ಜೀವಾತ್ಮನನು ತಾಂ ।
ಹರುಷವನು ತಾಳುವನು ಸುರಪದ ದೊರಕಿದಂದದಲಿ ॥೧೦೩॥ ತರುವುದೆಂತೈ ವಶಕೆ ತನ್ನಯ ಕೇಳು ಮನಗೊಟ್ಟು ॥ ೧೦೭ ॥

ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಮ್ ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್ ॥ ೭ ॥

ಧರೆಯಲೀ ಜೀವಾತುಮನ ಪರಿ- । ಈಸು ಜೀವಾತ್ಮನಲಿ ಗುಣಕೆ ಪ್ರ- ।
ಪರಿಯಲೀ ಗುಣ ರಂಜಿಸುವುದೈ । ಪೇಶ ಸಿಗಲಾಕ್ಷಣದಿ ಕಾಮನ ।
ನಿರುತವೆಂದೀ ಖ್ಯಾತಿಯಾಯ್ತು ರಜೋಗುಣಕೆ ಪಾರ್ಥ ॥ ಪಾಶದಿಂದಾತನನು ಬಿಗಿವನು ಮನಕೆ ಬಂದಂತೆ ॥
ನಿರುತ ಜಾಗೃತಿ ಕಾಮವಾಸನೆ- । ಭಾಸುರದ ಮನದಿಚ್ಛೆಗಳು ಹ- ।
ಗಿರುವುದೀ ಗುಣಲಕ್ಷಣವಲಾ । ವ್ಯಾಸಗಳು ಗಾಳಿಯು ತೆರದಿ ಬಹು- ।
ಧರೆಯಲಾ ಕಾರಣದಿ ರಂಜನವೈ ರಜೋಗುಣದಿ ॥೧೦೪ ॥ ಸೂಸುವವು ಸ್ವೇಚ್ಛೆಗಳು ಮನದಲಿ ಹೇಳಲೇನದನು ॥ ೧೦೮ ॥

ಉರಿವ ಬೆಂಕಿಯ ಕುಂಡದಲಿ ಘೃತ ।
ಸುರಿಸಿದರೆ ವಜ್ರಾಗ್ನಿ ಯೇಳುವ ।
ತೆರದಿ ರಂಬಿಸುವುದು ದುರಾಶೆ ರಜೋಗುಣದ ಬಲದಿ ॥
ಹಿರಿದು ಕಿರಿದೀ ಭಾವ ವುಳಿಯದೆ ।
ಸರುವವನು ವಿಧ್ವಂಸ ಮಾಳ್ಪುದು ।
ನರನಿಗಿಚ್ಛಾ ಪ್ರಬಲವಾಗಲು ಹೇಳಲೇನದನು ॥ ೧೧೦ ॥

ನರನೆ ಕೇಳೈ ದುಃಖದಾಯಕ- ।
ವಿರುವ ಸಂಗತಿ ಸೌಖ್ಯವೆನುತಲಿ ।
ಪರಿಪರಿಯಲದನನುಸರಿಸುವನು ದಿವಸದಿವಸದಲಿ ॥
ಸುರಸ ಲೋಕವು ಪ್ರಾಪ್ತವಾಗಲು ।
ಒರುವುದೇನೈ ತೃಪ್ತಿ ಯವನಿಗೆ ।
ನರನೆ ಕೇಳೀ ವಿಷಯವಾಸನೆ ಹೆಚ್ಚುವುದು ನಿಜದಿ ॥೧೧೧॥

ಪರಿಯಲೀ ವಿಷಯೇಚ್ಛೆಯಾಗಲು ।
ದೊರೆಯಲೇನದು ಮೇರುಪರ್ವತ ।
ದೊರೆಯದವನಿಗೆ ತೃಪ್ತಿ ಮೇಣಧಿಕವನು ಬಯಸುವನು ॥
ದೊರೆತ ಕವಡಿಯ ಬಿಟ್ಟು ಬಿಡನೈ ।
ದೊರೆತ ತೃಣವೇ ಧನವೆನುವನೈ ।
ಮರಳಿ ತಾನೇ ಧನ್ಯನೆನುತಲಿ ಸಂತಸವ ತಾಳ್ವ ॥ ೧೧೨ ॥

ತನ್ನ ಹತ್ತರವಿರುವ ಧನ ಸಂ- ।
ಪೂರ್ಣ ನಾಳೆಗೆ ನಾಶವಾಗಲು ।
ಮುನ್ನ ಮಾಡುವುದೇನೆನುತ ಭಯದಿಂದ ದಿನದಿನದಿ ॥

ತೃಷ್ಣೆಯಿಂದುದ್ಯೋಗರಾಶಿಗ- ।
ಳನ್ನು ಮಾಡುತ ದ್ರವ್ಯ ಘಳಿಪನು ।
ಯಜ್ಞ ಸತ್ರಾದಿಗಳ ಮಾಡುತ ಸ್ವರ್ಗ ಬಯಸುವನು ॥ ೧೧೩ ॥

ಪರಿಪರಿಯ ವ್ರತಗಳನು ಮಾಳ್ಪನು ।
ಕೆರೆಸರೋವರಬಾವಿಗಳ ತಾ- ।
ನಿರದೆ ಕಟ್ಟಿಸಿ ಕಾಮ್ಯವ್ರತಗಳ ಹೊರತು ಬೇರೊಂದ ॥
ಚರಿಸದಿರುವನು ಪಾರ್ಥ ಕೇಳೈ ।
ನಿರುತವೀ ಹವ್ಯಾಸದಲಿ ಹಗ- ।
ಲಿರುಳು ಕಾಲವ್ಯಯವ ಮಾಡುವನೇನ ಹೇಳುವೆನು ॥ ೧೧೪ ॥

ನರನೆ ಕೇಳಾಪಾಥಮಾಸದಿ ।
ಮೆರೆವ ಗ್ರೀಷ್ಮದ ಕಡೆದಿವಸಗಳ- ।
ಲಿರದೆ ಯೊಂದೇ ಸವನಿ ಬೇಸುವ ಗಾಳಿಯಂದದಲಿ ॥
ತರುಣಿಯರ ಮಿಸನಸಮ ಚಂಚಲ- ।
ವಿರುವುದೆನುವರಲಾ ಕಟಾಕ್ಷವು ।
ತಿರಿಗಿ ಮಿಡ್ಡುವ್ವಳ್ಳಿ ಚಂಚಲವೆನುವರೀ ಜಗದಿ ॥ ೧೧೫ ॥

ಪರಿಕಿಸುತ ತುಲನೆಯನು ಮಾಡಲು ।
ಹಿರಿದಿಹುದು ಚಂಚಲತೆ ಯದಕಿಂ ।
ಸರಿಯು ಕಾಣೆ ರಜೋಗುಣದ ಚಂಚಲತೆಗೇನುಪಮೆ ॥
ತ್ವರಿತದಲಿ ಸ್ವರ್ಗೀಯ ಸೌಖ್ಯವು ।
ದೊರೆಯು ಬೇಕು ಪ್ರಪಂಚ ಸುಖ ಬಹು- ।
ಪರಿಯ ಸುಖಸೌಭಾಗ್ಯ ಸಿಗಬೇಕೆಂದು ಹಗಲಿರುಳು ॥ ೧೧೬ ॥

ನಿರುತವವ್ಯಾಹತ ಪರಿಶ್ರಮ- ।
ನಿರುತ ಕಾಮಿತ ದೊರಕಿಸುವೆನೆಂ- ।
ದರಿತರಿತು ಬೆಂಕಿಯಲಿ ಹಾರಲು ಹಿಂದೆ ಸರಿಯುವಲಾ ॥

ಪರಿಯಲೀ ದೇಹದಲಿ ಸಿಲುಕಿದ ।
ಹೊರಗಿರುವ ಜೀವಕ್ಕೆ ತೃಷ್ಣೆಯು ।
ಭರವು ದೊರಕಲು ಕೊರಳೊಳಗೆ ಹಿರಿದೊರಳು ದೊರಕಿತಲಾ ॥

ಅರಿಯಲೀ ದೇಹದಲಿ ವಾಸಿಪ ।
ಮೆರೆವ ಜೀವಾತ್ಮಗೆ ರಜೋಗುಣ- ।
ದಿರುವುದೈ ಬಂಧನವು ಪೇಳ್ವೆ ತಮೋಗುಣವನೀಗ ॥ ೧೧೭ ॥

ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಮ್ ।
ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ ॥ ೮ ॥

ಪರಿಯನರುಹುವೆ ನಾ ತಮೋಗುಣ- ।
ವಿರುವುದೈ ಕತ್ತಲೆಯು ರಾತ್ರಿಯೊ- ।
ಳಿರುವ ಮೇಘಗಳಂತೆ ಮೋಹಸ್ವರೂಪ ರಾತ್ರಿಯಲಾ ॥

ನರನ ವ್ಯವಹಾರಘನದೃಷ್ಟಿಗೆ ।
ಬರುವುದೈ ಮಂದತ್ವ ಕತ್ತಲೆ- ।
ಯಿರುವ ಕಾರಣ ಕಾಣರೈ ಮುಂದಿರುವ ಪರಿಣಾಮ ॥ ೧೧೮ ॥

ಧರೆಯಲಿ ತಪೋಗುಣಕೆ ನೋಡೈ ।
ಬರುವುದಜ್ಞಾನದಲಿ ಜನ್ಮವು ।
ಭರವಸವನೆಲ್ಲವನು ಹರಿಸುತ ತಮವು ಕುಣಿಸುವುದು ॥
ಇರುವುದನಿವಾರಕ್ಕೆ ಮಂತ್ರವು ।
ಇರುವುದಜ್ಞಾನ ಸ್ವರೂಪದ ।
ಮೆರೆವ ಮದ್ಯವ ಕುಡಿವ ಪಾತ್ರವೆ ಗುಣವು ತಮ ನೋದು
॥ ೧೫೯ ॥

ಆರುಹಲೇನಾನಿದರ ಬಹು ವಿ- ।
ಸ್ತಾರವ ಸಂಕ್ಷೇಪದಲಿ ಪೇಳ್ವೆನು ।
ಮೆರೆವುದೈ ಜೀವಾತ್ಮನಿಂಗಿದು ಪೋಪನಾಸ್ವವಲಾ ॥
ಇರುವುದೀ ಲಕ್ಷಣ ತಪೋಗುಣ- ।
ಪರಿಯಲಾರರು ಜೀವದೇಹಗ- ।
ಳೆರಡು ಮೇಗೊಂದೆನುತ ಪೋಜಿಪರೀ ಮಹಾತಮರು
॥ ೧೬೦ ॥

ಧರೆಯಲೀಗುಣ ಜೀವಿಯ ಹತ್ತಿರ- ।
ಲಿರುವುದೇನನ್ಯರ ಪ್ರವೇಶವು ।
ಭರದಿ ಸಚರಾಚರ ಜಗತ್ತನು ವ್ಯಾಪಿಸುವುದಿದುವೆ ॥
ಒರುವುದಿಂದ್ರಿಯಗಳಿಗೆ ಬಾಧ್ಯವು ।
ತರುವನೈ ಮೂಢತ್ವ ಮನದಲಿ ।
ಭರದಲಾಲಸ್ಯಕ್ಕೆ ಮೇಣಾಮಂತ್ರಗಳವ ಕೊಡುವ ॥ ೧೬೧ ॥

ಇದರ ಪೋಗದಿ ನರನು ಸಂತತ ।
ಮುರಿವನೈ ತನ್ನಂಗವೆಲ್ಲವ ।
ಬರುವುದೆಲ್ಲಿಂ ದಕ್ಷತೆಯು ವ್ಯವಹಾರದಲಿ ನಿರುತ ॥
ತಿರಿತಿರಿಗಿ ಜಾಯಾತಳೆಕೆಯಲಿ ।
ನಿರುತ ತತ್ಪರತೆಯನು ತೋರ್ಪುದು ।
ತೆರದಿರಲು ನೇತ್ರಗಳು ಮುಂದಿಹ ವಸ್ತು ತೋರದಲಾ
॥ ೧೬೨ ॥

ಕರೆವ ಮೊದಲೇ ಓಕೊಡುತ ತಾಂ ।
ಭರದೊಳೇಳುವ ಹಾಸಿಗೆಯಲೇ ।
ನಿರುತ ನಿದ್ರಾಸಕ್ತನಿರುವನು ಹೇಳಲೇನದನು ॥
ಹಿರಿದು ಜಡಕಲ್ಲೊಂದು ಬಿದ್ದರೆ ।
ತಿರುಗಲಾರದು ಬದಿಗೆ ಕೇಳಾ- ।
ತೆರದಿ ಮಲಗಿರಲೊಂದೆ ಪಕ್ಕದಲಿಹನು ತಿರುಗದಲೆ ॥೧೬೩॥

ಮೇಲಿನಿಂದಾಕಾಶ ಜೀಳಲಿ ।
ಸೀಳಿಹೋಗಲಿ ಧರೆಯು ಮೇಣ್ ಪಾ- ।
ತಾಳವೇ ಚೂರಾಗಿ ಜೀಳಲಿ ಮಲಗಿದಲ್ಲಿಂದ ॥

ಏಳಲಾರನು ಹಾಸಿಗೆಯ ಬಿ- ।
ಟ್ಟಾಲಸಿಯ ತುಂಬಿಹುದು ಮೈಯಲಿ ।
ಮೇಲಿಮೇಲಾಹ್ಲಿಕದ ನೆನಪಾದರು ಬರುವುದಿಲ್ಲ ॥ ೧೬೪ ॥

ಹಾಸಿಗೆಯ ಮೇಲಿಂದಲೇಳನು ।
ಹಾಸಿಗೆಯಲೇ ತಿರುತಿರುಗುವನು ।
ಹಾಸಿಗೆಯುಲೇ ಯೆದ್ದು ಕೂಡುವ ಪರಿಯ ಪೇಳುವನು ॥
ಲೇಸಿನಿಂ ಕೈ ಬೆತ್ತಿ ಜೈಬೆರ- ।
ಳೀಸುಕರಿಯಲಿ ಬೆರಳೊಳೇರಿಸಿ ।
ಯಾಶಿರದೊಳಟ್ಟಾ ತಿರವ ಮೊಣಕಾಲೊಳಗೆ ತುರುಕಿ ॥ ೧೬೫ ॥

ನರನೆ ಕೇಳಾ ನರನು ನಿದ್ರಾ- ।
ಭರದಿ ಮಲಗಿರೆ ಹಾಸಿಗೆಯಲಿತ- ।
ಹರುಷನೌಷ್ಯವ ತಾಳುವನು ಸ್ವರ್ಗೀಯ ಸುಖ ತುಚ್ಛ ॥
ಒರುವುದಿಚ್ಛೆಯು ಮನದೊಳಪವಗೆ ।
ಬರಲು ಜೀಕಾ ಬ್ರಹ್ಮನಾಯುವು ।
ನಿರುತೋಪರಿ ನೌಷ್ಯನಿದ್ರಾ ಜೀಕು ಮಗಲರುಳು ॥ ೧೬೬ ॥

ಜೀರೆ ವ್ಯಸನಗಳೆಲ್ಲವನಸನಿಗೆ ।
ದಾರಿಯಲಿ ಕಾಲ್ಜಾರಿ ಜೀಳಲು ।
ಚಾರು ನಿದ್ರೆಯು ಸೂಳ್ಪನಲ್ಲಿಯೆ ಹರ್ಷವಾಗುವುದು ॥
ಜಾರೊ ನಿನಗಾನನ್ಯತ ಕುಡಿಸುವೆ ।
ಜಾರೊ ಜಾರೆಂದವನ ಕರೆಯಲು ।
ನೇರದನ್ಯತದ ಮಹಿಮೆಯುದಯಿಂದಧಿಕ ನಿದ್ರೆಯಲಾ ॥ ೧೬೭ ॥

ಸಿಟ್ಟಿನಲಿ ತಾನೊಂದು ಜಾರಿಗೆ ।
ಬಿಸ್ಟ ವ್ಯಾಪಾರವನು ಮಾಡಲು ।
ಹುಟ್ಟಿದರೆ ಮನದಿಚ್ಛೆ ಹುಚ್ಚಿನ ತೆರದಿ ಮಾಡುವನು ॥
ಇಷ್ಟವಾವುದನಿಷ್ಟವಾವುದು ।
ಭ್ರಷ್ಟನಾವನು ಶ್ರೇಷ್ಠನಾವನು ।
ದುಷ್ಟನಾವನು ಶಿಷ್ಟನಾವನು ತಿಳಿಯಲಾರನಲಾ ॥ ೧೬೮ ॥

ಅಡವಿಯಲಿ ದಾವಾಗ್ನಿ ಯೇಳಲು ।
ಸುಡುತಿರುವುದೈ ಬೆಂಕಿ ದಾರುಣ ।
ಬಡಪತಂಗವು ತನ್ನ ರೆಕ್ಕೆಗಳಿಂದ ನೊಂದಿಸಲು ॥
ಬಿಡದಲವ್ಯಾಹತ ಪ್ರಯತ್ನವ- ।
ನಡಿಗಡಿಗೆ ಮಾಡಿದರೆ ನಾಧ್ಯವೆ ।
ಬಡಪತಂಗವೆ ಸುಟ್ಟು ಭಸ್ಮೀಭೂತವಾಗುವುದು ॥ ೧೬೯ ॥

ವೇದಬಾಹ್ಯವೊ ವೇದಗ್ರಾಹ್ಯವೊ ।
ಬೋಧವಿಲ್ಲದೆ ಕರ್ಮಮಾಳ್ಪನು ।
ಮೇದಿನಿಯಲೀತೆರದ ಸಾಹಸದಿಚ್ಛೆಯಿದ್ದರದು ॥
ವೇದಬಾಹ್ಯವದೆಂದು ಬಿಡದಲೆ ।
ಸಾಧಿಸುವನೈ ಬಿಡದೆ ಯದನು ಪ್ರ- ।
ಮಾದವೀಪರಿಯಾಗಲದರಲಿ ಮಾನ್ಯತನವವಗೆ ॥ ೧೩೦ ॥

ವರಪ್ರಮಾದಾಲಸ್ಯನಿದ್ರೆಗ- ।
ಳಿರುವುವೀ ಪಾಶಗಳು ತ್ರಿವಿಧವು ।
ಧರಿಸುತಿವುಗಳ ಬಂಧಿಪುದು ಜೀವನ ತಮೋಗುಣವು ॥

ಇರುವನಾದರುಪಾಧಿರಹಿತನು ।
ಬರುತಲೀ ಪಾಶದಲಿ ಸಿಲುಕುವ- ।
ನರರೆ ಕಾವ್ಯಾಕಾರವಲ್ಲವೆ ಸುಡುವ ಬೆಂಕಿಯದು ॥ ೧೩೧ ॥

ನರನೆ ನೋಡಾಕಾಶ ಘಟದಲಿ ।
ಬರಲು ಘಟದಾಕಾರ ತಾಳ್ವುದು ।
ಕೆರೆಸರೋವರಗಳಲಿ ನೋಡರೆ ಚಂದ್ರಬಿಂಬವನು ॥
ಪರಿಯಲೀ ಜೀವಾತ್ಮದೇಹದೊ- ।
ಳಿರುವ ಗುಣಪಾಶದಲಿ ಬದನು ।
ಯಿರುವುದೇನಚ್ಚರಿಯು ಗುಣಲಕ್ಷಣದಿ ರಾಜಿಸಲು ॥ ೧೩೨ ॥

ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ ।
ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ ॥ ೯ ॥

ರಜಸ್ತಮಶ್ಚಾಭಿಭೂಯ ಸತ್ತ್ವಂ ಭವತಿ ಭಾರತ ।
ರಜಃ ಸತ್ತ್ವಂ ತಮಶ್ಚೈವ ತಮಃ ಸತ್ತ್ವಂ ರಜಸ್ತಥಾ ॥ ೧೦ ॥

ಪಿತ್ತವೃದ್ಧಿಯದಾಗೆ ದೇಹದಿ ।
ಕಿತ್ತಿ ಕಫವಾತಂಗಳೆರಡನು ।
ತಪ್ತ ಮಾಳ್ಪುದು ದೇಹವನು ಕೇಳ್ ಪಿತ್ತ ವರ್ಧಿಸಲು ॥
ಪೃಥ್ವಿಯಲಿ ಮಳೆಬಿಸಿಲುಕಾಲಗ- ।
ಳಿಪ್ಪವಾಗಲು ಶೀತಕಾಲವು ।
ವಿಸ್ತರಿಪುದೈ ಸುತ್ತಮುತ್ತಲು ಶೀತವೇ ಶೀತ ॥ ೧೩೩ ॥

ತೊರೆದು ಜಾಗರ ಸ್ವಪ್ನವೆರಡನು ।
ಬರಲು ನಿದ್ರೆಯು ಗಾಢ ನರನಿಗೆ ।
ಬರುಪುದೊಂದೇ ತೆರದ ಚಿತ್ತದ ವೃತ್ತಿ ಶಾಂತಿಯದು ॥
ನರನಿಗೀತೆರ ಸತ್ತ್ವಗುಣ ಹೆ- ।
ಚ್ಚಿರಲು ರಜತಮವಡಗಿ ಹೋಗುವ- ।
ವಿರುವೆ ನಾ ಸುಖಿ ಯೆಂದು ಜೀವಾತ್ಮನನು ರಂಜಿಪುದು ॥ ೧೩೪ ॥

ಸತ್ತ್ವ ರಜ ಗುಣ ಲುಪ್ತವಾಗುತ ।
ವಿಸ್ತರಿಸಲಾ ತಮದ ರಾಜ್ಯವು ।
ಸುತ್ತುಮುತ್ತು ಪ್ರಮಾದಗಳೆಯುತ್ಪನ್ನವಾಗುವುವು ॥

ಸತ್ತ್ವತಮಗಳ ಕಿತ್ತಿ ತೆಗೆಯಲು ।
ಹತ್ತುವುದು ಗುಣ ರಜದ ರಾಜ್ಯವು ।
ಚಿತ್ತದೊಳಗಾಗುವುದು ಕರ್ಮಾಸಕ್ತಿ ದೃಢವಾಗಿ ॥

ಪಾರ್ಥ ಕೇಳೈ ಮೂರುಗುಣಗಳ ।
ಚಿತ್ತರಿಸಿದೆನು ಮೂರು ಪದ್ಯದಿ ।
ಬಿತ್ತರಿಪೆ ನಾ ಮೂರುಗುಣಗಳ ಬುದ್ಧಿಲಕ್ಷಣವ ॥ ೧೩೫ ॥

ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ ।
ಜ್ಞಾನಂ ಯದಾ ತದಾ ವಿದ್ಯಾದ್ವಿವೃದ್ಧಂ ಸತ್ತ್ವಮಿತ್ಯುತ ॥ ೧೧ ॥

ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ ।
ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ ॥ ೧೨ ॥

ಅಪ್ರಕಾಶೋಽಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ ।
ತಮುಸ್ಯೇತಾನಿ ಜಾಯಂತೇ ವಿವೃದ್ಧೇ ಕುರುನಂದನ ॥ ೧೩ ॥

ಯದಾ ಸತ್ತ್ವೇ ಪ್ರವೃದ್ಧೇ ತು ಪ್ರಲಯಂ ಯಾತಿ ದೇಹಭೃತ್ ।
ತದೋತ್ತಮವಿದಾಮಲ್ಲೋಕಾನಮಲಾನ್ ಪ್ರತಿಪದ್ಯತೇ ॥ ೧೪ ॥

ರಜಸಿ ಪ್ರಲಯಂ ಗತ್ವಾ ಕರ್ಮಸಂಗಿಷು ಜಾಯತೇ ।
ತಥಾ ಪ್ರಲೀನಸ್ತಮಸಿ ಮೂಢಯೋನಿಷು ಜಾಯತೇ ॥ ೧೫ ॥

ಸೋಲಿಸುತ ರಜವನ್ನು ತಮವ- ।
ಸ್ನೇಳಲಾ ಪ್ರಾಬಲ್ಯ ಸತ್ತ್ವ- ।
ಕ್ಕಾಲಿಸೈ ದೇಹದಲಿ ಹುಟ್ಟುವ ಲಕ್ಷಣಂಗಳನು ॥
ಹೇಳಲೇನ ವಸಂತ ಋತುವಿನ ।
ಕಾಲಬರಲಾ ಕಮಲವಾಸನ- ।
ದೇಳುವ್ರದು ವಿಸ್ತರಿಸುವ್ರದಲಾ ನಾಲ್ಕು ದಿಶೆಗಳಲಿ ॥ ೧೩೬ ॥

ಕೇಳ ಬಾರದ ಶಬ್ದಗಳ ಕಿವಿ ।
ಕೇಳಲಾರದು ನೋಡಬಾರದ ।
ಹೂಳು ವಸ್ತುವ ನೋಡಲಾರದು ಕಣ್ಣು ನಿಜನಾಗಿ ॥
ಹೇಳಬಾರದ ಭಾಷಣವನಾ- ।
ನಾಲಿಗೆಯೆ ಮೇಣಿಂತು ಹೇಳ್ವುದು ।
ಹೇಳಲೇನ ನಿಷಿದ್ಧವಾದುದು ಮುಂದೆ ಬಾರದಲಾ ॥ ೧೪೦ ॥

ನರನೆ ಯಂತರ್ಗತವು ಜ್ಞಾನವು ।
ಹೊರಗೆ ತುಳುಕುತ ಬರುವ್ರದಲ್ಲವೆ ।
ಬರುವ್ರದೈ ಸುನಿಚಾರವಿಂದ್ರಿಯನಿಕರದಲಿ ಪಾರ್ಥ ॥
ಕರಚರಣಗಳಿಗೇನ ಹೇಳಲಿ ।
ಬರುವ್ರದೈ ಸುಜ್ಞಾನಲೋಚನ- ।
ವರಿವ್ರದೈ ಸತ್ಕರ್ಮದುಷ್ಕರ್ಮಗಳ ಕೈಕಾಲು ॥ ೧೩೭ ॥

ಒರಿವ ದೀಪದ ಮುಂದೆ ಕತ್ತಲೆ ।
ಬರುವ್ರದೇನ್ಯೆ ಹೇಳು ಪಾರ್ಥನೆ ।
ದುರಿತಸಂತ್ತಿಯು ಚಾರದೀಪರಿ ಸತ್ತ್ವದೆದುರಿನಲಿ ॥
ಹರಿವ ನದಿ ಪರ್ಜನ್ಯಕಾಲದಿ ।
ಸುರಿವ ಮಳೆಯಿಂ ತುಂಬಿ ತುಳುಕವ ।
ಪರಿಯಲಾತನ ಬುದ್ಧಿ ಶಾಸ್ತ್ರದಿ ತುಂಬಿ ತುಳುಕುವ್ರದು ॥ ೧೪೧ ॥

ಧಾರುಣಿಯೊಳು ವಿಚಾರ ಮಾಳ್ಪ ಜ- ।
ರೂರಿಯೇ ಬೇರಿರದು ಪಾರ್ಥನೆ ।
ನೀರಮಿತ್ರಿತ ಕ್ಷೀರವಿಟ್ಟಡೆ ರಾಜಹಂಸನದು ॥
ಚಾರು ಚತುರತೆಯಿಂದಲದನೇ ।
ಬೇರೆಮಾಡುವ್ರದಲ್ಲನೇನು ವಿ- ।
ಚಾರ ಮಾಳ್ಪ ಜರೂರಿ ಯೆನಿಸುದದಕೆ ನೋಡಿದಿಯಾ ॥ ೧೩೮ ॥

ಪೂರ್ಣಿಮೆಯು ದಿವಸದಲಿ ಗಗನದಿ ।
ಪೂರ್ಣ ಚಂದ್ರನ ಬೆಳಕು ಪಸರಿಸಿ ।
ಪೂರ್ಣವೃದಯಾನಂದ ಕೊಡುವಂದದಲಿ ಕೌಂತೇಯ ॥
ಏನ ಹೇಳಲಿ ವೃತ್ತಿ ನಾತ್ತ್ವಿಕ- ।
ಜ್ಞಾನದಿಂ ಸಂಪೂರ್ಣ ಪಸರಿಸಿ ।
ಕ್ಷೋಣಿಯಲ್ಲಾನಂದ ಪಸರಿಸುತಿರುವ್ರದೈ ಪಾರ್ಥ ॥ ೧೪೨ ॥

ಇಂದ್ರಿಯಂಗಳು ಸರ್ವತ್ರೈ ತ- ।
ಮ್ಮಿಂದ ತಾವೇ ತಿಳಿದು ಕೊಳುವುವು ।
ಚಂದವಾವುದು ನಿಂದ್ಯವಾವುದು ತಿಳಿವ್ರುನೀ ತೆರದಿ ॥
ಬಂದು ನಿಯಮಗಳೆಲ್ಲ ತಾವೇ ।
ಯಿಂದ್ರಿಯಂಗಳ ಸೇವೆ ಮಾಳ್ಪುವು ।
ಚಂದನಿದ ನಾನೆಂತು ಬಣ್ಣಿಪೆ ಪಾರ್ಥ ನೋಡಿದಿಯಾ ॥೧೩೯॥

ವಾಸನೆಗಳೇಕತ್ರವಾಗುತ ।
ಮಾಸನೈ ಮಾರ್ಗ ಪ್ರವೃತ್ತಿಯು ।
ಹೇಸುವ್ರದು ಮನ ವಿಷಯುಗಳನುಪಭೋಗಿಸಲು ಪಾರ್ಥ ॥
ಈಸು ಪರಿಯಲಿ ಸತ್ತ್ವಗುಣಹ- ।
ವ್ಯಾಸವೇರಲು ಮರಣವವನಿಗೆ ।
ಗ್ರಾಸಿಸಲು ಕೇಳೀ ಪರಿಸ್ಥಿತಿಯಲ್ಲಿ ಕೌಂತೇಯ ॥ ೧೪೩ ॥

ತೀರಲೈ ದುವ್ಯಾಲದಿನಗಳು ।
ಚಾರು ಸುಖದ ಸುಕಾಲ ಬರಲಾ- ।
ಚಾರು ದಿವಸಂಗಳಲಿ ಬರಲೈ ಹಬ್ಬ ಹುಣ್ಣಿವೆಯು ॥
ಧಾರುಣಿಯೊಳಾ ಸಮಯದಲಿ ಪಿತೃ- ।
ಕಾರಣಿಕ ಮಾನವರು ಬಂದರೆ ।
ಯಾರಿಗಾಗದು ಮನದಿ ಬಹಳಾನಂದವಾ ತೆರದಿ ॥ ೧೪೪ ॥

ಮನೆಯೊಳಗೆ ರಂಜಿಪುದು ಸಂಪ- ।
ದ್ಧನವು ಪುಷ್ಕಳ ದಾನ ಮಾಳ್ಪರೆ ।
ಮನುಜನಿಂಗಾತೆರದಿ ಮನದೊಳು ದಾನ ಮಾಡುವರೆ ॥
ಮಿನುಗುತಿರಲೌದಾರ್ಯವದರಿಂ ।
ಗಣನವಿಲ್ಲದ ಕೀರ್ತಿ ಜಗದಲಿ ।
ಮನುಜಗಾಗದೆ ಮುಂದೆ ಸ್ವರ್ಗಪ್ರಾಪ್ತಿಸಿಗದಿಹುದೆ ॥೧೪೫॥

ಪರಿಯಲೀ ಮಾನವನ ಧರ್ಮಾ- ।
ಚರಣವಿರಲೇನಿಂಬಿ ಜಗದಲಿ ।
ಸರಿಯು ಮೇಣೇನಿಹುದು ತನ್ಮಾನವಗೆ ಸುಖದೊಳಗೆ ॥
ಪುರುಷನಿಂಗೀತೆರದಿ ಸಾತ್ತ್ವಿಕ- ।
ತರದ ಗುಣದಭಿವೃದ್ಧಿಯಾಗಲು ।
ಮರಣ ಪಡೆಯಲನಂತರದಲವನಿಲ್ಲಿ ಹೋಗುವನು ॥೧೪೬॥

ಉತ್ತಮಾಚರಣವನು ಮಾಳ್ಪ ನಿ- ।
ಮಿತ್ತವಿಲ್ಲೈ ದೇಹಭೋಗಗ- ।
ಳುತ್ತಮೋತ್ತಮ ಭೋಗಿಸುತ ದೇಹವನು ತ್ಯಜಿಸುವನು ॥
ಸತ್ತ್ವಗುಣದಭಿವೃದ್ಧಿಯಿಂದಲೆ ।
ಸತ್ತ್ವಗುಣದೇ ಮೂರ್ತಿಯಾಗುತ- ।
ಲೆತ್ತುವನು ಜನ್ಮವನು ಶುದ್ಧಜ್ಞಾನಿಯರ ಕುಲದಿ ॥ ೧೪೭ ॥

ಧರೆಯನಾಳುವ ದೊರೆಯು ಪರ್ವತ- ।
ಗಿರಿಯ ತಿಪ್ಪರದಿ ಕೂತರೇನೈ ।
ಬರುವುದೇನುಪವಾಸವಾತಗೆ ವಾಸವಾತ್ಮಜನೆ ॥
ಬರುವುದೇನಂತರವು ದೀಪದೊ- ।
ಳಿರುವ ತೇಜಕೆ ಮಾಡಲು ಥಳಾ- ।
ತರವನೊಂದೂರಿಂದ ಬೇರೊಂದೂರಿಗೊಯ್ದಿರಲು ॥ ೧೪೮ ॥

ಸತ್ತ್ವಗುಣ ವರ್ಧಿಸಲು ಜ್ಞಾನವು ।
ವಿಸ್ತರಿಪುದೈ ಬಹಳ ಪರಿಯಲಿ ।
ನಿತ್ಯ ಬುದ್ಧಿ ವಿಚಾರದಲಿ ತೇಲಾಡುವೆದು ಬಿಡದೆ ॥

ಮತ್ತೆ ಸುಮಹತ್ತತ್ತ್ವಪೂರ್ವಕ- ।
ತತ್ತ್ವವಸ್ತುವಿಚಾರದಿಂದಲೆ ।
ಸ್ವಾತ್ಮರೂಪದಿ ತಾನು ಸಂತತ ಮಗ್ನನಾಗುವನು ॥ ೧೪೯ ॥

ಹಿಂದಿನಧ್ಯಾಯದಲಿ ನಾ ಪೇ- ।
ಳ್ದಂದೆ ಮೂವತ್ತಾರು ತತ್ತ್ವಗ- ।
ಳೆಂದ ಮೇಲಿಹ ತತ್ತ್ವ ಮೂವತ್ತೇಳನೇಯದಲಿ ॥
ಮುಂದೆ ಸಾಂಖ್ಯಮತಪ್ರಮಾಣದೊ- ।
ಳೊಂದು ಯಿಪ್ಪತ್ತೈದನೆಯದದು ।
ಚಂದದಿಂ ಪರತತ್ತ್ವವಿಪ್ಪತುನಾಲ್ಕನೆಯ ಮೇಲೆ ॥ ೧೫೦ ॥

ಮೂರುಗುಣಗಳ ಮೇಲಿರುವುದಾ- ।
ಬೇರಿರುವ ಸರ್ವೋತ್ತಮದ ವರ- ।
ಚಾರುಬ್ರಹ್ಮಪ್ರಾಪ್ತಿಯಾದ ಸುವಂಶದಲಿ ಜನ್ಮ ॥
ಧಾರುಣಿಯಲುತ್ತಮವಿರುವ ಸುಶ- ।
ರೀರವನು ತಾಳುವನು ಪಾರ್ಥನೆ ।
ವೀರಫಲ್ಗುಣ ವಿಸ್ತರಿಸುವೆ ರಜೋಗುಣವನೀಗ ॥ ೧೫೧ ॥

ಹಿಂದಕಟ್ಟುತ ಸತ್ತ್ವತಮಗಳ ।
ಮುಂದರಿಸಲು ರಜೋಗುಣವು ತಾ ।
ನಂದು ಕೇಳು ಶರೀರವುರದಲಿ ಜೀವ ಬಹುವಿಧದಿ ॥
ಬಂಧುರದ ನಿಜಕೃತಿಗಳನ್ನವ- ।
ನೊಂದಿಸವನೇ ಪ್ರಕಟಗೊಳಿಸುವ- ।
ನೆಂದು ನೀ ತಿಳಿ ವಿಸ್ತರಿಪೆ ನಾನವನ ಲಕ್ಷಣವ ॥ ೧೫೨ ॥

ಏನ ಹೇಳಲಿ ಪಾರ್ಥ ಜಗದಿ ತು- ।
ಫಾನು ಬಹುಪರಿ ಯೇಳಲದರಲಿ ।
ಹಾನಿಯನು ಮಾಡುವೆದು ವೇಗವನಾರು ಸಹಿಸುವರು ॥
ಕ್ಷೋಣಿಯಲ್ಲೀ ತೆರ ರಜೋಗುಣ ।
ಮಾನವನ ಹುರಿದುಂಬಿಸುತ ಪರಿ- ।
ಮಾಣವಿಲ್ಲದೆ ಯಿಂದ್ರಿಯಂಗಳನೆಬ್ಬಿಸುವುದಲ್ಲೈ ॥ ೧೫೩ ॥

ಪರವನಿತೆ ಸುಂದರಳು ದೃಗ್ಗೋ- ।
ಚರಕೆ ಬರಲಾ ತರುಣಿ ತ್ಯಾಜ್ಯಳೆ ।
ಯಿರುವಳೆಂಬುದ ಮರೆತು ಪಾಪಾಚರಣ ಮಾಡುವನು ॥
ತೊರೆದು ನಿಯಮವ ವಿಧಿನಿಷೇಧಗ- ।
ಳರದೆ ಭೋಗವ ಭೋಗಿಸುವನೈ ।
ಯಿರುವುದೇನಾಡಿಂಗೆ ಮೇಯಲು ವಿಧಿನಿಷೇಧವದು ॥ ೧೫೪ ॥

ನರನ್ಗೆ ಲೋಭವಿಕಾರವೇಳ್ವುದು ।
ಕರಕೆ ಸಿಗದಲೆ ಯುಳಿವುದಾವುದೊ ।
ಧರೆಯೊಳೆಲ್ಲವನಿಚ್ಛಿಸುವನ್ಗೆ ಲೋಭ ನಿರುಪಮವು ॥
ಪರಿಪರಿಯಲುದ್ಯೋಗ ಮಾಡುತ ।
ದೊರಕಿಸುವನ್ಗೆ ಧನದ ರಾಶಿಯ- ।
ನಿರದು ಮನದಲಿ ಶಂಕೆಯಂಬಿಕೆ ಸಾಹಸದಿ ಪಾರ್ಥ
॥ ೧೫೫ ॥

ಅರಮನೆಯ ಕಟ್ಟಿಪುದು ರಮ್ಯವ ।
ತುರಗಮೇಧವ ಮಾಳ್ಪುದನುಪಮ- ।
ಧಿರುವುದೀಪರಿ ಸಾಹಸದ ಛಂದಗಳು ಮನದೊಳಗೆ ॥
ಕೆರೆಸರೋವರಗಳನು ಕಟ್ಟಿಸಿ ।
ಪುರಗಳನು ಸಂಸ್ಥಾಪಿಸುವುದತಿ- ।
ಸರಸತರವನ ವೈಪವನಂಗಳ ಮಾಡಿ ನೋಡುವುದು ॥೧೫೬॥

ನರನೆ ಕೇಳೀ ತೆರದ ಸಾಹಸ- ।
ನಿರುವ ದೀರ್ಘೋದ್ಯೋಗದಲಿ ತ- ।
ತ್ಪರನು ನಾಶ್ಯವನಿಚ್ಛಿಸುವನಿಹಪರಗಳೆರಡರಲಿ ॥
ಶರಧಿಯನು ದಾಟುವನು ವೈಶ್ವಾ- ।
ನರನ ಕವಡಿಯು ತೆರದಿ ತುಚ್ಛಿಪ- ।
ನಿರುವುದೈ ಯಖಿಲಾಷ ನೋಡು ರಜೋಗುಣದಿ ತಿಳಿಯೆಂ
॥ ೧೫೭ ॥

ಮನದ ಗತಿಯಿಂದಧಿಕವೀತನ ।
ಮನದ ಒಯ್ಯಕೆಯು ಗತಿಯಿರುವುದೈ ।
ನೆನಸುವನು ಸಂಚರಿಸಲೀಜಗ ಕಿರಿದೆನುತ ಮುನದಿ ॥
ಗುಣಗಳೀಪರಿ ರಾಜಸವು ತ- ।
ದ್ಗುಣದ ಭರದಲಿ ಮರಣ ತಾಳಲು ।
ಮನುಜದೇಹದಿ ಜನ್ಮವೆತ್ತುವನೀಗುಣಗಳಿಂದ ॥ ೧೫೮ ॥

ತಿರುಕನೊರ್ವನು ಬಂದು ಭೂಪತಿ- ।
ಯರಮನೆಯ ಮಧ್ಯದಲಿ ತಾಂ ಕೂ- ।
ತಿರಲು ಸುಖಸಾಮ್ರಾಜ್ಯವಾದರು ರಾಜನೆನಿಸುವನೆ ॥
ಅರಸನೊಡನಾದರು ಸದಾ ಸಂ- ।
ಚರಿಸುವನೆತ್ತಿಗೆ ಕಡ್ಡಿಯಲ್ಲದೆ ।
ಬರುವುದೇ ಪಕ್ವಾನ್ನಹೋಳಿಗೆಕಡಬ ತಿನುವುದಕೆ
॥ ೧೫೯ ॥

ಎಂತು ಹಗಲಿರುಳೆಲ್ಲ ಕರ್ಮದ ।
ಸಂತತಿಯ ನಡೆಸುವನು ಮಾನವ- ।
ನಂತವಾಗಲು ತಿರಿಗಿ ಸತ್ಕರ್ಮದಲಿ ಹುಟ್ಟುವನು ॥
ಸಂತತ ರಜೋಗುಣದ ಮಡುವಿಲಿ ।
ನಿಂತು ಪ್ರಾಣತ್ಯಾಗ ಮಾಡಲು ।
ಬಂತೆನುತ ತಿಳಿ ಕರ್ಮತತ್ಪರರಲ್ಲಿ ಜನ್ಮವದು ॥ ೧೬೦ ॥

ನಾಶಿಸುತ ಸತ್ತ್ವವನು ರಜವನು ।
ಲೇಸಿನಿಂ ವರ್ಧಿಸಲು ತಮವದು ।
ಭಾಸಿಸುವುವೈ ಯಾವಲಕ್ಷಣವೆಂದು ಪೇಳುವೆನು ॥
ಈಸುಪರಿಯಲಿ ತಮವು ವ್ಯಾಪಿಸೆ ।
ಭಾಸಿಸುವುದಜ್ಞಾನ ದೇಹದೊ- ।
ಳೀಸುಪರಿ ಕತ್ತಲೆಯುಮಾವಾಸ್ಯೆಯ ತಮಿಸ್ರೆಯಲಿ ॥ ೧೬೧ ॥

ಪೂರ್ಣವಂತಃಕರಣದಲ್ಲಿ ।
ಜ್ಞಾನ ತುಂಬಿರೆ ಪಾರ್ಥ ಕೇಳೈ ।
ಹಾನಿಯಾಗದಲುಳಿವುದೇ ಸುವಿಚಾರ ಮೇಣಲ್ಲಿ ॥
ಕ್ಷೀಣ ಬುದ್ಧಿಯು ಕಠಿಣತನದಲಿ ।
ಕ್ಷೋಣಿಯಲಿ ಕಲ್ಲಿಂಗಧಿಕನಿಹ- ।
ದೇನ ಹೇಳಲಿ ಸ್ಮೃತಿಯು ದಿಕ್ಕಾಪಾಲು ಚದರುವುದು ॥ ೧೬೨ ॥

ಹೊರಗೊಳಗೆ ದೇಹದಲಿ ದೃಗ್ಗೋ- ।
ಚರಕೆ ಬಹುದವಿಚಾರಸಂತತಿ ।
ಮರುಳತನ ತೋರುವುದು ವ್ಯವಹಾರದಲಿ ಕುರುಮೀರ ॥
ಬರುಸೆದಿಂದ್ರಿಯಕೈ ನಿರಂತರ ।
ಪೆರೆವ ಸುದುರಾಚಾರವಾರವು ।
ಮರಣವಾಗಲು ಬರುವುದು ದುರಾಚಾರ ಸಂಘಾತ ॥ ೧೬೩ ॥

ರಾತ್ರಿಕಾಲದಿ ಗೂಗೆಗಿಹುದೈ ।
ನೇತ್ರಗಳು ಬಹುಸ್ವಚ್ಛವದರೋಲ್ ।
ವೃತ್ತಿತಾಮಸ ವರ್ಧಿಸಲು ದುಷ್ಕರ್ಮದಲಿ ಸತತ ॥
ರಾತ್ರಿದಿನ ತತ್ಪರತೆ ಬರುವುದು ।
ಕೃತ್ರಿಮವ್ಯವಹಾರದಲಿ ಬಹು ।
ಚಿತ್ತವನು ಹಾಕುತ್ತ ಸಂಕಟ ತರುವನೈ ಜಗಕೆ ॥ ೧೬೪ ॥

ವೇದಬಾಹ್ಯ ಕುಕರ್ಮಗಳ ತಾ- ।
ನಾದರದಿ ಮಾಡುವನು ಯಿಂದ್ರಿಯ- ।
ವೈದೆ ತತ್ಕರ್ಮದಲಿ ಪ್ರಾಣೀಂದ್ರಿಯವನು ತೋರ್ಪುವಲಾ ॥
ಮಾದಕವ ಸೇವಿಸದೆ ಮಧ್ಯದಿ ।
ಬೋಧ ತಪ್ಪುವುದವಗೆ ನೋಡೈ ।
ಮೇದಿನಿಯಲವ ಬಳುವನು ಜ್ವರನಿಲ್ಲದಲೆ ನೋಡೆ ॥ ೧೬೫ ॥

ಮರುಳನಂದದಿ ಪ್ರೇಮವಿಲ್ಲದೆ ।
ಬರಿದೆ ಕೂಗಾಡುವನು ಪಾರ್ಥನೆ ।
ಯಿರದು ಠಾವಿಲಿ ಮನಸು ನೋಡೆ ಸಮಾಧಿ ಯದಕಿಲ್ಲ ॥
ಇರುವುದವನಿಗೆ ಮೋಹವೂರವು ।
ಬರುವುದವನಿಗೆ ಜ್ಞಾನಶೂನ್ಯತೆ ।
ಧರೆಯಲೀತೆರದಲಿ ತಮೋಗುಣಲಕ್ಷಣಗಳಿಹುವು ॥೧೬೬॥

ಉರಿಯಲಥವಾ ನೊಂದು ಹೋಗಲಿ ।
ಯಿರುವುದೆಲ್ಲಿಂದೊ ದೀಪವಲ್ಲಿಯೆ ।
ಹರಿವ್ವದಲ್ಲವೆ ನೋಡು ವೈಶ್ವಾನರನ ತೇಜವದು ॥
ಪರಿಯಲಾ ಸಂಕಲ್ಪ ತಮವಿರೆ ।
ಬರಲು ಮರಣ ತಮೋಗುಣದಲೇ ।
ಬರುವನವನು ತಮೋಗುಣದಲೆರಡನೆಯ ಜನ್ಮದಲಿ ॥೧೬೭॥

ಮರಣ ಬರಲಾ ತೆರದಿ ಮುಂದಕೆ ।
ಬರುವನ್ಯೆ ತಮದಲ್ಲಿ ಜನ್ಮಕೆ ।
ನರನೆ ಕೇಳೀ ತೆರದಿ ಗುಣಲಕ್ಷಣದ ಪರಿಣಾಮ ॥
ನರನೆ ಕೇಳೈ ಕಾಳು ಸಾಸಿವೆ- ।
ಯಿರುವುದದರಲಿ ಸಾಸಿವೆಯ ಗಿಡ ।
ಬರುವುದೇನದರಲ್ಲಿ ಸಾಸಿವೆ ಗಿಡದ ಹೊರತೇನು ॥೧೬೮॥

ವಿಸ್ತರವು ನಾಕಿಂತು ತಮದಲಿ ।
ಮೃತ್ಯು ಬರಲಾತನಿಗೆ ನೋಡ್ಯೆ ।
ಯೆತ್ತುವನು ಜನ್ಮವನು ತರುಮೃಗಪಕ್ಷಿಯೋನಿಯಲಿ ॥
ಪಾರ್ಥ ನಿನಗೀ ತ್ರಿಗುಣಗಣದ ಸ- ।
ಮಸ್ತಲಕ್ಷಣಗಳನು ಪೇಳಿದೆ ।
ವಿಸ್ತರಿಪೆ ನಾನೀಗ ಲಕ್ಷಣಫಲಗಳೆಲ್ಲವನು ॥೧೬೯॥

ಕರ್ಮಣಃ ಸುಕೃತಸ್ಯಾಹುಃ ಸಾತ್ತ್ವಿಕಂ ನಿರ್ಮಲಂ ಫಲಮ್ ।
ರಜಸಸ್ತು ಫಲಂ ದುಃಖಮಜ್ಞಾನಂ ತಮಸಃ ಫಲಮ್ ॥ ೧೬ ॥

ಆದ ಕಾರಣದಿಂದ ಸತ್ತ್ವಗು- ।
ಣೋದಯದ ಫಲ ಸುಕೃತವೆಂಬರು ।
ವೇದಸಂಮತವಿಹುದು ವರಸಿದ್ಧಾಂತ ತತ್ತ್ವವಿದು ॥
ಆದ ಕಾರಣ ಸತ್ತ್ವಗುಣದ ಫ- ।
ಲೋದಯವು ಸುಜ್ಞಾನಸೌಖ್ಯವು ।
ಮೇದಿನಿಯಲಿವು ನೋಡು ಸತ್ಕರ್ಮದಲಿ ಹುಟ್ಟುವುವು ॥೧೭೦॥
ಮಂದೆ ರಾಜಸಗುಣದ ಫಲಗಳು ।
ಯಿಂದ್ರವಾರುಣಿಯಂತೆ ನೋಡಲು ।
ಸುಂದರವು ಹೊರಗಿಹುವು ತಿನ್ನಲು ಕಹಿಯಲಾ ಪಾರ್ಥ ॥

ಸುಂದರವಲಾ ನಿಂಬ ಫಲ ಹೊರ- ।
ಗಿಂದ ನೋಡಲು ಬಾಯೊಳಿಕ್ಕಲು ।
ಸುಂದರವೆ ವಿಷದಂತೆ ಕಹಿಯಲ್ಲವೆ ಧನಂಜಯನೆ ॥೧೭೧॥

ಒರುನ್ನದೀಪರಿ ದುಃಖವಂತದಿ ।
ಪರಿಣಮಿಸುತಿಹ ಫಲವು ರಾಜಸ- ।
ವಿರುವ್ವದಾದಿಯಲದನು ನೋಡಲು ಸೌಖ್ಯವೆನಿಸುವುದು ॥
ಧರೆಯೊಳಗೆ ಬಿತ್ತಲು ವಿಪಾಂಕುರ ।
ಬರುನ್ನದಲ್ಲವೆ ವಿಷದ ಗಿಡವಾ- ।
ಪರಿಯಲೀ ತಾಮಸದ ಫಲವಜ್ಞಾನಮಯವಹುದು ॥೧೭೨॥

ಸತ್ತ್ವಾತ್ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ ।
ಪ್ರಮಾದಮೋಹೌ ತಮಸೋ ಭವತೋಽಜ್ಞಾನಮೇವ ಚ ॥ ೧೭ ॥

ನರನೆ ಕೇಳ್ಸಿ ಸೂರ್ಯನುದಯಿಸೆ ।
ಬರುವುದಲ್ಲವೆ ಬೆಳಕು ಹಗಲಾ- ।
ಪರಿಯಲಾ ಸಾತ್ತ್ವಿಕ ಗುಣದಿ ಸುಜ್ಞಾನವ್ವುದಯಿಪುದು ॥
ಬರುವ್ವದು ರಜೋಗುಣದಿ ಲೋಭವು ।
ಧರದಿ ಕೇಳದ್ವೈತ ಬರುವರೆ ।
ಮರೆಯು ಬೇಕ್ಕೈ ತನ್ನ ತಾನಾ ಪರಿಯಲಾ ಪಾರ್ಥ ॥೧೭೩॥

ಧರೆಯೊಳಗೆ ತಾಮಸ ಗುಣಂಗಳ ।
ಪರಿಪರಿಯ ಫಲ ಪೇಳ್ವೆನೆಲ್ಲವ- ।
ನಿರುವುನ್ಯೆ ಯಜ್ಞಾನ ಮೋಹ ಪ್ರಮಾದವೀ ಮೂರು ॥
ಕರತಲಾಮಲಕದ ಪರಿಯಲಾ- ।
ನರುಹಿದೆನು ವಿಸ್ತರಿಸಿ ನಿನಗಿದ- ।
ನರಿಯು ಬೇಕು ವಿಚಾರಶೀಲನು ಲಕ್ಷವ್ಯೂರ್ವಕದಿ ॥೧೭೪॥

ನರಕಹಾದಿಗಳಾಗಿ ರಂಜಿಸು- । ಧರೆಯಲೀ ಸಾತ್ತ್ವಿಕ ಸುವೃತ್ತಿಯು ।
ತಿರುವುವೈ ರಜ-ತಮ ಗುಣಂಗಳು । ಧರಿಸುನರು ಕೋನಿದರು ಸಂತಸ- ।
ದೊರೆಯಲಾರದು ಜ್ಞಾನ ಸಾತ್ತ್ವಿಕ ಗುಣದ ಹೊರತಾಗಿ ॥ ವಲಯಲಾ ಜ್ಞಾನಿಗಳು ಪಿಡಿವಂದದಲಿ ಸಂನ್ಯಾಸ ॥ ೧೭೫ ॥

ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋ ಗಚ್ಛಂತಿ ತಾಮಸಾಃ ॥ ೧೮ ॥

ನರನೆ ಸಾತ್ತ್ವಿಕಗುಣಂವಿಭೂಷಿತ । ನರನೆ ಕೇಳೀತೆರದಿ ನಾ ನಿ- ।
ರಿರದೆ ದೇಹವ ತೊರೆದನಂತರ । ಸ್ತರಿಸಿ ಪೇಳ್ವೆನು ಬಹ್ಮಸತ್ತೆಯು ।
ಬರುತ ಸ್ವರ್ಗದಿ ವಾಸಿಪರಲಾ ಸುಖವ ಪಡೆವರಲಾ ॥ ಪುನಿನ ತ್ರಿಗುಣಂಗಳನು ತ್ರಿಗುಣದ ಲಕ್ಷಣಂಗಳನು ॥
ನರರು ರಾಜಸವೃತ್ತಿಯನ್ನಾ- । ತೊರೆಯಲಾರದೆ ನಿಜಸ್ವರೂಪವ ।
ಚರಿಸಿ ದೇಹತ್ಯಾಗ ಮ- ಡಲು । ಪರಿಸರಿಯು ಗುಣಲಕ್ಷಣದಲೇ ।
ಬರುವೈ ಮಾನವರ ಜನ್ಮದಿ ಮೃತ್ಯುಲೋಕದಲಿ ॥ ೧೭೬॥ ಬಿರುತ ಜಗದಲಿ ರಂಜಿಸುವೈ ಬ್ರಹ್ಮರೂಪವದು ॥ ೧೭೭ ॥

ಮೃತ್ಯುಲೋಕದಿ ಬಂದರವರಿಗೆ । ಅರಸನಾಗಿರಲೇನು ಸ್ವರ್ಗದಿ ।
ಹತ್ತುವುದು ಸುಖದುಃಖಪರಿಣಿಯು । ತಿರಿಗಿ ಶತ್ರುಗಳೆದ್ದರೈ ।
ವೃತ್ಯುವಶರಾಗುವರು ತಪ್ಪಿಸಲಾರರಾ ಮರಣ ॥ ಮರಳಿ ತನ್ನಲಿ ತಾನೆ ನೋಡುವನೈ ಜಯಾಪಜಯ ॥
ವೃತ್ತಿ ತಾಮಸ ಧರಿಸಲವರಿಗೆ । ಸುರನರೋರಗಲೋಕ ಮೂರಿವು ।
ಸತ್ತಸಂತರ ನರಕರಾಜ್ಯದ । ಪೆರೆವುದೀ ಗುಣವೃತ್ತಿಭೇದವು ।
ಪ್ರಾಪ್ತಿಯಹುದೈ ತಾಮ್ರಶಾಸನ ಪಡೆವರವರಲ್ಲಿ ॥ ೧೭೭ ॥ ಸರಿಸಲದ ಬದಿಗಾಗ ಕುಬ್ರಹ್ಮ ತೋರುವುದು ॥ ೧೭೯ ॥

ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾನುಪಶ್ಯತಿ ।
ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ ॥ ೧೯ ॥

ನರನೆ ಕೇಳೈ ಮಾತು ಸಾಕಿದು । ನರನೆ ಕೇಳೀ ತೆರದಿ ತ್ರಿಗುಣಗ ।
ಮರೆಯದಿರು ನೀ ತತ್ತ್ವ ವೊಂದ- । ಭರದ ಪಾಶದಿ ಸಿಲುಕಿ ಜೀವನ- ।
ನ್ನಿರುವುದೈ ನಿಜತತ್ತ್ವ ಬ್ರಹ್ಮವು ನಿತ್ಯದೊಳಗೆಲ್ಲ ॥ ನಿರುವುದಚ್ಛತ್ತಿ ಯೊಂದು ನೀ ನೋಡಿದಿಯೊ ಕಲಿಪಾರ್ಥ ॥
ಅರಿಯಲಾ ನಿಜತತ್ತ್ವಬಲದಿಂ । ಇರುವುದಾದರು ನಿಕಟ ಬಂಧನ ।
ಬರುವುವೈ ತ್ರಿಗುಣಗಳು ದೇಹದಿ । ನರಗೆ ಜ್ಞಾನಿಗೆ ಮೋಕ್ಷಸಾಧನ ।
ಯುರಿವ ಕಿಚ್ಚಿಗೆಯಂತೆ ಬೆಂಕಿಗೆ ಬರುವುದಾಕೃತಿಯು ॥೧೮೦॥ ದೊರಕಿಸುವ ವ್ಯವಹಾರಕಡ್ಡಿಯು ಜಾರದೈ ಪಾರ್ಥ ॥ ೧೮೧ ॥

ನೀರು ಪೃಥ್ವಿಯ ರಸವು ಮರದೊಳ- । ಮೂರು ಗುಣಗಳು ತಮ್ಮ ನಿಜನ್ಯಮ- ।
ಗೇರುವುದಲಾ ನೋಡು ಪಾರ್ಥನೆ । ಹಾರ ದೇಹವಿ ಮಾಳ್ಪವಾದರು ।
ಶ್ರೀರದಲಿ ಹೆಪ್ಪಿಡಲು ಮೊಸರಾಗುವುದಲೈ ನೋಡು ॥ ಜಾರದೈ ನ್ಯೂನತೆಯು ತ್ರಿಗುಣಾತೀತ ನಸ್ತನಿಲಿ ॥
ಧಾರುಣಿಯೊಳಾ ಸವಿಯು ಕಬ್ಬಾ- । ೀರಪಾರ್ಥನೆ ಸಹಜವಿದುವೆ ಪ್ರ- ।
ಕಾರವನು ತಾಳ್ವುದು ಧನಂಜಯ । ಕಾರನಾಗಿಹ ಮುಕ್ತಿಯನು ನಿ- ।
ಮೂರು ಗುಣಗಳು ಸೇರ್ವುವಾಪರಿ ಸೂಕ್ಷ್ಮದೇಹದಲಿ ॥೧೮೨॥ ಸ್ತಾರದಿಂದಲಿ ಪೇಳ್ವೆನಲಿ ನೀ ಜ್ಞಾನಕಮಲದಲಿ ॥ ೧೮೩ ॥

ನರನೆ ಕೇಳ್ ಚೈತನ್ಯ ತ್ರಿಗುಣದ ।
ಪರಿಪರಿಯ ಲಕ್ಷಣದ ಹೊರಗಿತ್ತು- ।
ದರಿಯಲಾ ನಿರ್ಲಿಪ್ತನಿದುನೇ ತತ್ತ್ವ ಸಿದ್ಧಾಂತ ॥
ಬರಲು ಜ್ಞಾನದ ಬೋಧನೀಪರಿ ।
ಯಿರುವುದೈ ನಿರ್ಲಿಪ್ತ ಚೇತನ- ।
ವರಿವು ಬರುವುದು ಸ್ವಸ್ಥದಿಂದೆದ್ದಿರುವ ನರನಂತೆ ॥ ೧೮೪ ॥

ತೀರದಲಿ ನಿಂತಿರುವ ಪೂರುಷ ।
ನೀರಿನಲಿ ಪ್ರತಿಬಿಂಬ ತನ್ನದೆ ।
ತೋರುವುದು ನದಿಯೊಳಗನಂತರ ತೆರೆಗಳೇಳುತಿರೆ ॥
ತೋರುವುದು ಪ್ರತಿಬಿಂಬ ಬಹಳತ- ।
ಕಾರದಲ್ಲಾ ನೀರಿನಲ್ಲಿಯೆ ।
ಪೂರುಷನಿಗಾತರೆದಿ ಭಿನ್ನಾಕಾರ ತೋರುವುದೆ ॥ ೧೮೫ ॥

ನರನೆ ಕೇಳೈ ನಾಟಕದಲಾ ।
ತರುಣಿವೇಷವ ಪುರುಷ ತಾಳಲು ।
ಮರೆವನೇ ನಿಜರೂಪ ಸ್ತ್ರೀತಾನೆಂದು ತಿಳಿಯುವನೆ ॥
ನಿರುತವೀಪರಿ ಸ್ವಾತ್ಮರೂಪವ- ।
ನರಿತು ಗುಣಗಳ ನೋಡು ಪಾರ್ಥನೆ ।
ಯೊರೆವೆ ನಿನಗಿನ್ನೊಂದು ದೃಷ್ಟಾಂತವನು ಪರಿಕಿಸಲು ॥ ೧೮೬ ॥

ಮೂರು ಋತುಗಳು ಗಗನದಲಿ ಬಂ- ।
ದೇರುವವು ಹೋಗುವವು ಗಗನ ನಿ- ।
ಕಾರವನು ತಾಳುವುದೆ ಗಗನವಲಿಪ್ತನೇ ಯಿಹುದು ॥
ಧಾರುಣಿಯಲೀ ತ್ರಿಗುಣಗಳ ವ್ಯವ- ।
ಹಾರ ನಡೆಯುವ ವೇಳಿಯಲ್ಲಿಯೆ ।
ಬಾರದಿರುವುದೆ ಮನದಿ ಸ್ವಾತ್ಮಜ್ಞಾನತತ್ತ್ವನದು ॥ ೧೮೭ ॥

ಮೂಲಸ್ವಾತ್ಮಸ್ಥಿತಿಯ ತತ್ತ್ವದ ।
ಮೇಲಹಂಕೃತಿ ಹೋಗಿ ಕೂಡಲು ।
ಹೇಳುವನಲಾ ಕರ್ಮ ಕರ್ತನು ತಾನು ಜೀರಲ್ಲ ॥
ತಾಳದಲಿ ಕರ್ತೃತ್ವ ಸುಮ್ಮನೆ ।
ಮೇಲಿರುವೆ ನಾ ಸಾಕ್ಷಿಭೂತನು ।
ಹೇಳಲೇನಾ ತ್ರಿಗುಣದಿಂದಲೆ ಕರ್ಮ ಜನಿಸುವುದು ॥ ೧೮೮ ॥

ಪರಿಯಲೀ ಸುಜ್ಞಾನವನಿಗೆ ।
ಬರುವುದೈ ಕಲಿವಾರ್ಥ ನೋಳ್ ।
ಪೆರೆವ ವನಶೋಭೆಗೆ ವಸಂತನು ಕಾರಣನು ಮಾತ್ರ ॥
ಮರಗಳೆಲ್ಲವು ಹಣ್ಣುಹಂಪಲು ।
ವಿರದೆ ಕೊಡುವುವು ನೋಡು ಪಾರ್ಥನೆ ।
ಯಿರುವನೇನು ವಸಂತ ಕರ್ಮದಿ ಲಿಪ್ತನಿಜವಾಗಿ ॥ ೧೮೯ ॥

ಪರಿಪರಿಯ ಕರ್ಮಗಳ ಮಾಡುತ- ।
ಲಿರುವೆನೈ ನಿರ್ಲಿಪ್ತ ನಾನೀ- ।
ಪರಿಯನೋಡು ಧನಂಜಯನೆ ನಿಜತತ್ತ್ವ ಗುಟ್ಟಪದು ॥
ತರಣಿಯುದಯಾಚಲಕೆ ಬರಲಾ ।
ಕೆರೆಯ ಕಮಲಗಳರಳುವುವು ಮೇಣ್ ।
ಮರಣ ತಿಮಿರಕೆ ಬಳ್ಕು ನಕ್ಷತ್ರಂಗಳಡಗುವುವು ॥ ೧೯೦ ॥

ತರಣಿಕಾಂತದ ಮಣಿಯೊಳಗ್ನಿಯು ।
ಬರುವುದಲ್ಲನೆ ತರಣಿಕಿರಣದಿ ।
ಪರಿಪರಿಯಲೀ ಕರ್ಮಗಳು ರವಿಯಿಂದಲಾಗುವುವು ॥
ತರಣಿಯದನೆಲ್ಲನನು ನೋಳ್ಪನೆ ।
ಪರಿಯಲೆನ್ನಯ ಸತ್ತೆಯಿಂದಲಿ ।
ಬರುವುನೈ ಕರ್ಮಗಳು ಕರ್ಮದ ಕರ್ತ ನಾನಲ್ಲ ॥ ೧೯೧ ॥

ಮಾನನನ ದೇಹದಲಿ ನಾನನು- ।
ಮಾನನಿಲ್ಲದೆ ವಾಸಿಸುವೆನೈ ।
ಮಾನಿಸೆನ್ನನು ಪಾರ್ಥ ಸತ್ತಾರೂಪಮಾತ್ರನನು ॥
ಏನ ಹೇಳಲಿ ಕರ್ಮವೆಲ್ಲ- ।
ಕ್ಷೋಣಿಯುಲ್ಲೆನ್ನಿಂದ ಹುಟ್ಟಿದ- ।
ರಾನು ಕರ್ಮದಿ ಲಿಪ್ತನಲ್ಲೈ ಬದ್ಧ ಜೀರಲ್ಲ ॥ ೧೯೨ ॥

ಹುಟ್ಟಿಸುವೆ ನಾ ಗುಣಗಳೆಲ್ಲವ ।
ಹುಟ್ಟಿದುದ ಬೆಳೆಸುವೆನು ನಾನೇ ।
ನಷ್ಟ ಮಾಡುವೆ ನಾನು ಗುಣಗಳು ನಷ್ಟವಾದೊಡೆಯು ॥
ಸೃಷ್ಟಿಯಲಿ ನಾನಿರುವೆನಿದನಾ- ।
ಗುಟ್ಟು ಯಿರುವುದೆನುತ್ತ ಹೇಳ್ದಿಸು ।
ಹುಟ್ಟಲೀಪರಿ ಜ್ಞಾನ ತ್ರಿಗುಣಾತೀತನಾಗುವನು ॥ ೧೯೩ ॥

ಗುಣಾನೇತಾನತೀತ್ಯ ತ್ರೀನ್ ದೇಹೀ ದೇಹಸಮುದ್ಭವಾನ್ ।
ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ ॥ ೨೦ ॥

ನರನೆ ನಿರ್ಗುಣಬ್ರಹ್ಮರೂಪನ- ।
ನರಿವನಾಕ್ಷಣ ತಪ್ಪದಲೆ ಯನ- ।
ನಿರುವುದಲ್ಲಿಯೆ ನ್ಞಾನವನಿಗೆ ಬ್ಞಾನೋತ್ತಮನೆಂದರಿ ॥
ಹರಿವ ನದಿಯಿಂತದಲಿ ಬಂದಾ- ।
ಶರಧಿಯಲಿ ತಾನೈಕ್ಯ ಪಡೆಯುವ ।
ತೆರದಲಾತನು ನನ್ನ ಸತ್ತೈಯಲೈಕ್ಯ ತಾಳುವನು ॥ ೧೯೪ ॥

ನಳಿಕೆಯಿಂದಲಿ ಹಾರಿ ಹೋಗುತ ।
ಗಳಿಯು ಮರದಲಿ ಕೂಡಲಾಕ್ಷಣ- ।
ವಳಿದು ಹೋಗುವುದಲ್ಲನೇ ಕೇಳ್ ನಳಿಕೆಬಂಧನವು ॥
ತಿಳಿಯಲೀಪರಿ ತ್ರಿಗುಣನೆಂಬುವ ।
ಬಲೆಯೊಳಗೆ ಸಿಲುಕಿರಲು ತ್ರಿಗುಣಾ- ।
ಗಳನು ದಾಟಲು ತತ್ತ್ವಸೋತಮಂ ಮೂಡುವದು ಮನದಿ
॥ ೧೯೫ ॥

ನರನೆ ಕೇಳಜ್ಞಾನರೂಪದ ।
ಭರದ ನಿದ್ರಾಸಕ್ತನಾಗುವ- ।
ನರೆಗಳಿಗೆಯಲಿ ಸ್ವಸ್ವರೂಪದಿ ಜಾಗ್ರತೆಯು ತಾಳ್ವ ।
ಕರದಿ ಹಿಡಿದಿಹ ಬುದ್ಧಿಭೇದದ ।
ಮರೆವ ದರ್ಪಣ ಬಿದ್ದು ಚೂರಾ- ।
ಗಿರಲು ಕಾಣುವನೇನು ಪ್ರತಿಬಿಂಬವನು ಮೇಣಲ್ಲಿ । ೧೯೬ ॥

ನರನೆ ಕೇಳ್ ಸುಖದುಃಖರೂಪದ ।
ಮರೆವ ರೂಪವ್ ತೋರದವನಿಗೆ ।
ಬರುವುದಾ ಕಾರಣದಿ ಮೋಕ್ಷವು ಪಾರ್ಥ ನೋಡಿಯಿದಾ ॥
ಪರುಠು ನಿಜ ದೇಹಾಭಿಮಾನವು ।
ತೊರೆಯಲದನೇ ನ್ವಾತ್ಮರೂಪದ ।
ಶರಧಿಯಲಿ ತೆರೆ ಜೀವ ಪರಮಾತ್ಮೀಯ ಲಯವಕ್ಕು ॥೧೯೭॥

ವರುಷ ಋತುವಿನ ಕೊನೆಯಲೇಳುವ ।
ಪರಿಪರಿಯ ಮೋಡಗಳು ಗಗನದಿ ।
ಬರುವುವಲ್ಲವೆ ಲಯಕೆ ಮಳೆ ಸುರಿಯದಲೆ ಕೌಂತೇಯ ॥
ಪರಿಯಲೀ ಮಾನವನು ಜ್ಞಾನವ ।
ದೊರಕಿಸಲು ಮದ್ರೂಪನಾಗುವ- ।
ನಿರುವನ್ಯೆ ನಿರ್ಲಿಪ್ತ ದೇಹವ ಧರಿಸಿದರು ಪಾರ್ಥ ॥ ೧೯೮ ॥

ಬೆಳಕ ಭಂಗದ ಮನೆಯೊಳಿಟ್ಟರೆ ।
ಬೆಳಕನಡ್ಡೈಸುವುದೆ ಭಂಗವು ।
ಜಲಧಿಯಲಿ ವಡವಾನಳನು ನೊಂದುವನೆ ನೀರಿಂದ ॥

ಮಲಿನವಾಗದು ಜ್ಞಾನ ಶುದ್ಧತ್ವ ।
ಅಳಿಯಲಾಗದು ತ್ರಿಗುಣಬಲದಲಿ ।
ಜಲದಿ ಚಂದ್ರನ ಬಿಂಬ ಜೀಳಲು ಶಶಿಗೆ ಬಂಧನವೆ ॥ ೧೯೯ ॥

ನರನೆ ಕೇಳೈ ತ್ರಿಗುಣಸಂತತಿ ।
ಪರಿಪರಿಯಲಾಟವನು ಮಾಡಿದ- ।
ರರರೆ ಯಾ ಜೀವಾತ್ಮನಿಗೆ ದೌರ್ಲಕ್ಷವಾ ಕಷ್ಟಿಗೆ ॥
ಇರುವನನಂತರ್ಯಾಮಿ ನಿಶ್ಚಲ- ।
ನಿಯುಸೈ ವ್ಯವಹಾರ ದೇಹದ ।
ಪರಿಯು ಬಿಮತಿಪಲುಗಳ ಯೋಚಿಸುತಿಹನೆ ಪರಿಯನ್ನು ॥ ೨೦೦ ॥

ಇನಸನೀಪರಿ ಜ್ಞಾನಿ ತನ್ನಯ ।
ಹಿರಿಯ ದೇಹದ ಲಕ್ಷ್ಯಮಾಡನು ।
ಪರಿಮಳವ ಹೊರತಂದು ಜಾರಿಗೆ ಸೇರೆ ಗಗನವನು ॥
ಮರಳಿ ಕಮಲದ ಕಳಿಕೆಗೆದ್ದು ಹಿಂ- ।
ದಿರುಗಿ ಬರುವುದ ಮೇಣು ಕಮಲವು ।
ಧರಿಸುವನೆ ಯೋಚನೆಯು ಪರಿಮಳದಲ್ಲಿ ಕೌಂತೇಯ ॥ ೨೦೧ ॥

ಒರಲು ನ್ವಾತ್ಮಜ್ಞಾನ ಜೀವಿಗೆ ।
ಬರುವುದೇ ಯೋಚನೆಯು ದೇಹದ ।
ಮರಳಿ ದೇಹದ ಚೇಷ್ಟೆಯಲಿ ನಿಶ್ಚಿಂತನಾಗಿರುವ ॥
ಜರೆ ಜನುಮಮರಣಾದಿ ಷಡ್ಗುಣ- ।
ಪರುವನ್ಯೆ ದೇಹಕ್ಕೆ ಜ್ಞಾನಿಯು ।
ತೊರೆಸನಿವುಗಳು ಬಂಧಿಸವು ಕೇಳಾತ್ಮಜ್ಞಾನದಲಿ ॥ ೨೦೨ ॥

ಗಡಿಗೆಯೊಡೆಯಲು ಗಡಿಗೆಯೊಳಗಿನ ।
ಯದಗಿರುವ ಆಕಾಶ ತತ್ತ್ವವು ।
ಒಡದೆ ಕೂಡುವುದೈ ಮಹಾಕ ಶದಲಿ ಕೌಂತೇಯ ॥
ಒಡೆಯಲಾ ಪರಿ ದೇಹಬುದ್ಧಿಯು ।
ಪಡೆಯಲಾತ್ಮಸ್ವರೂಪ ಜೀವಿಯು ।
ಪೊಡವಿಯಲಿ ಜೀವಿಯದೆ ನೋಡಿದರಲ್ಲಿ ನಾನಿಹೆನು ॥ ೨೦೩ ॥

ನರನೆ ನೋಡಂತಃಕರಣದಲಿ ।
ಒರಲು ನೋಡೀ ಪರಿಯ ಜ್ಞಾನವು ।
ಧರಿಸಿದರು ದೇಹವನು ತ್ರಿಗುಣಾತೀತನೆನಿಸುವನು ॥
ಜರಲು ಕಿವಿಯಲಿ ಮೇಘಗರ್ಜನೆ ।
ಹರುಷದಿಂ ಕುಣಿವುದು ಮಯೂರವು ।
ಪರಿಯಲೀ ಹರಿವಚನದಿಂ ನವಗಾಯ್ತು ಹರ್ಷಭರ ॥ ೨೦೪ ॥

ಅರ್ಜುನ ಉವಾಚ —

ಕೈರ್ಲಿಂಗೈಸ್ತ್ರೀನ್ ಗುಣಾನೇತಾನತೀತೋ ಭವತಿ ಪ್ರಭೋ।
ಕಮಾಚಾರಃ ಕಥಂ ಚೈತಾಂಸ್ತ್ರೀನ್ ಗುಣಾನತಿವರ್ತತೇ ॥ ೨೧ ॥

ಹರುಷಭರಿತಾಂತಃಕರಣದಿಂ। ನರನ ವಚನವ ಕೇಳಿ ಷಡ್ಗುಣ-।
ನರನು ಶ್ರೀಹರಿಗೆಂದನಾಕ್ಷಣ। ಭರಿತ ಹರಿ ಪರಮಾತ್ಮ ತಾನು-।
ಹರಿಯೆ ನೀ ಪೇಳ್ದಂತೆ ಬೋಧವು ಒರಲು ಮನದೊಳಗೆ ॥ ತ್ವರವ ಕೊಟ್ಟನು ಪ್ರೇಮಪೂರ್ವಕ ಕೇಳಿರೈ ಮುದದಿ ॥ ೨೦೬ ॥
ಇರುವನೆಂತಾ ನರನು ಕೇಳವ-। ನರನೆ ಕೇಳಿದೆ ನಿನ್ನ ಪ್ರಶ್ನೆಯ।
ಗಿರುವ ಲಕ್ಷಣವಾವುದೆಂಬುದ-। ಒರುವುದೆನಗಚ್ಚರಿಯು ಮನದಲಿ।
ನರಿವ ಪರಿಯಲಿ ಹೇಳು ಮೇಲಾಚರಣವೆಂತವನ ॥ ೨೦೫ ॥ ಪುರುಷ ತ್ರಿಗುಣಾತೀತನೆಂದುಚ್ಚರಿಸಿದಾಕ್ಷಣಕೆ ॥
ಹರಿಯೆ ಕರುಣಿಗೆ ತೌರುಮನಿಯಾ-। ಇರುವನೆಂತವನೆಂದು ಪ್ರಶ್ನೆಯು।
ಗಿರುವ ದೇವರ ದೇವ ಹೇಳೈ। ಹೊರಡುವುದೆ ಮನದಲಿ ವಿಚಾರಿಸು।
ಧರೆಯೊಳಗೆ ತ್ರಿಗುಣದ ನಿವಾರಣ ಮಾಳ್ಪನೆಂತೆನುತ ॥ ಪುರುಷ ತ್ರಿಗುಣಾತೀತ ತ್ರಿಗುಣಾಧೀನನಾಗುವನೆ ॥ ೨೦೭ ॥

ನಿರುತ ತ್ರಿಗುಣದೊಳಾಡುತಿದ್ದರು।
ಪುರುಷನಾತನು ಸಿಲುಕನದರಲಿ।
ನರನೆ ನಿನಗಾನೊಂದ ಕೇಳುವೆ ಪೇಳು ಯೆನಗದನು ॥

ಇರಲು ಗುಣಸಂಬಂಧವೀಪರಿ। ಅರುಹುವೆನು ನಾ ನಿನಗೆ ಹರ್ಷದಿ।
ಯಿರುವನೋ ತದಧೀನನಿಲ್ಲವೊ। ನರನೆ ಕೇಳಾ ಲಕ್ಷಣಂಗಳ।
ಪರಿಯನರಿಯುವುದೆಂತು ನಿನ್ನಯ ಪ್ರಶ್ನೆ ಯಿರಲದನು ॥ ಧರಿಸದಿರು ಸಂಶಯವ ಮನದಲಿ ಕೇಳು ಮನಗೊಟ್ಟು ॥ ೨೦೮ ॥

ಶ್ರೀಭಗವಾನುವಾಚ —

ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ।
ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ ॥ ೨೨ ॥

ನರನೆ ಕೇಳು ರಜೋಗುಣಂಗಳ। ತಿಳಿಯಲೆನ್ನೀ ತೆರದ ಜ್ಞಾನಿಯು ।
ಭರವು ಬರಲು ಶರೀರದಲ್ಲಂ-। ಯಿಳೆಯೊಳಗೆ ನಾ ಕಾಣೆನೆಂಬೀ ।
ಕುರವು ಕರ್ಮಕೆ ಪುಟ್ಟಿ ಮಾರ್ಗಪ್ರವೃತ್ತಿ ಸ್ವೀಕರಿಸೆ ॥ ತಿಳುವಳಿಕೆಯಲ್ಲುಪ್ಪ ಹೋಗನು ಹರ್ಷಭರದಿಂದ ॥ ೨೧೦ ॥
ಇರದಲಾ ಅಭಿಮಾನ ಕರ್ಮದಿ ।
ನಿರುತ ಮಾಡುವ ಕರ್ತ ತಾನೆಂ-। ಧರಿಯೊಳವನಿಗೆ ತಮದ ವೃದ್ಧಿಯು ।
ದಿರದು ನೋಡಭಿಮಾನನಾತಗೆ ಕರ್ಮ ಮಾಡಿದರು ॥೨೦೯॥ ಬರಲು ಮೋಹದಿ ಲಿಪ್ತನಾಗನು ।
ಧರಿಸನವ ಭೇದವನು ಮೇಣಜ್ಞಾನಮೂಲಕದಿ ॥
ಅಳೆದು ಹೋಗಲು ಕರ್ಮವೀ ಪರಿ। ಬರಲು ಮೋಹವು ಜ್ಞಾನದಿಚ್ಛೆಯ ।
ಮಲಿನವಾಗದು ಬುದ್ಧಿಯವನಿಂ-। ಧರಿಸನ್ಯೆ ವರ್ಧಿಸಲು ಜ್ಞಾನವು।
ಗಿಳಿಯೊಳಾ ಗುಣ ಸತ್ತ್ವವರ್ಧಿಸಿ ಜ್ಞಾನ ಬರಲವಗೆ ॥ ಚರಿಸನ್ಯೆ ಕರ್ಮವನಕರ್ಮದಿ ಖೇದ ತಾಳನಲಾ ॥ ೨೧೧ ॥

ಪುರುಷಗೀ ಗುಣಭೇದ ತಪ್ಪದು ।
ತರಣಿಗಿರುವುದೆ ಕಾಲಭೇದವು ।
ತರಣಿಯಿರಿವನೆ ಸಂಜೆಮುಂಜಾನೆಗಳ ನಡುಹಗಲ ॥

ಇರುವನಾತನೆ ಜ್ಞಾನಿಯನ್ಯರಿ- ।
ಗಿರುವ ಜ್ಞಾನದಿ ಧನ್ಯಸೆನಿಪನೆ ।
ಶರಧಿ ಮಳೆನೀರಿನಲಿ ಪರಿಪೂರ್ಣತೆಯ ತಾಳುವುದೆ ॥ ೪೧೨ ॥

ಪುರುಷನೀಪರಿ ಕರ್ಮಗಳನಾ- ।
ಚರಿಸುತಿರೆ ಯಭಿಮಾನ ಬರುತ್ತಿದೆ ।
ಬರಿದೆ ಕರ್ಮದ ಕರ್ತ ತಾನೆಂದಿರದು ಅಭಿಮಾನ ॥

ಧರೆಯೊಳಗೆ ಹಿಮಗಿರಿಯು ಶೀತವು ।
ಒರುವುದೆಸುತಲಿ ಬೆದರುತಿಹುದೇ ।
ನರನೆ ಕೇಳೀ ತತ್ತ್ವ ಪರಿಕಿಸಿ ನೋಡು ನಿಜವಾಗಿ ॥

ಬರಲು ಮೋಹೋತ್ಪತ್ತಿಯವನಲಿ ।
ಮರಣ ಹೊಂದುವುದೇಸು ಜ್ಞಾನವು ।
ಅರಿವುದೇನೈ ಬೆಂಕಿ ಬೆಸಿಲಿನ ತಾಪವನು ಪಾರ್ಥ ॥ ೪೧೩ ॥

ಉದಾಸೀವದಾಸೀನೋ ಗುಣೈರ್ಯೋ ನ ವಿಚಾಲ್ಯತೇ ।
ಗುಣಾ ವರ್ತಂತ ಇತ್ಯೇವ ಯೋಽವತಿಷ್ಠತಿ ನೇಂಗತೇ ॥ ೨೩ ॥

ನರನೆ ಗುಣದೇಹಗಳು ತಾನಿ- ।
ಗಿರುವಕಾರಣ ದುಃಖಿಸುಖಿಗಳ- ।
ನರಿಯನಾತನು ಜೀವ ಸಾವಿಂಗಂಜಲಾರನಲಾ ॥
ನರನು ಹಾದಿಯ ಚರಿಪ ನೇಳ್ಪದಿ ।
ಬರಲು ಹಾದಿಯಲಡಚಣಿಯು ತಾ- ।
ತ್ಪರತೆ ನಿಲ್ಲುತ ಮುಂದರಿಸುವನು ಮಾರ್ಗದಲಿ ಪಾರ್ಥ ॥ ೪೧೪ ॥
ಅರಿಯುತೀಪರಿ ಸಿದ್ಧತತ್ತ್ವನ ।
ಪುರುಷ ದೇಹದಿ ವಾಸ ಮಾಳ್ಪನು ।
ಧುರದಿ ಬರಲು ಜಯಾಪಜಯಗಳನರಿವುದೇ ಧ್ವಜವು ॥
ಹರುಷಶೋಕಾತೀತ ಧ್ವಜವಾ- ।
ಪರಿಯಲೀ ಜೀವಾತ್ಮನಿರುವನು ।
ಚರಿಸನೈ ಕರ್ಮಗಳ ತ್ರಿಗುಣಾಧೀನ ತಾನಾಗಿ ॥ ೪೧೫ ॥

ಅನ್ನಗ್ರಹಣವು ಪ್ರಾಣರಕ್ಷಣೆ- ।
ಯನ್ನು ಮಾಡುವ ಪೂರ್ತಿಯಲ್ಲವೆ ।
ಮನ್ನಿಸನಲಾ ಅನ್ನವೇನದು ಮಿಷ್ಟವೋ ಕ್ಲಿಷ್ಟ ॥
ಅನ್ನ ಹಾಕಲು ರುಚಿಯನರಿಯನು ।
ತಿನ್ನುವನು ಹಾಕಿದುದನೆಲ್ಲವ ।
ತಣ್ಣಗಿರುವನುದಾಸವೃತ್ತಿಲಿ ಸ್ಥಾಣುವಂದದಲಿ ॥ ೪೧೬ ॥

ಪೂರ ಬರಲಾ ಮೃಗಜಲದೊಳಗೆ ।
ಮೇರುಪರ್ವತ ಹರಿದು ಹೋಗದು ।
ಧಾರುಣಿಯಲೀ ತೆರದಿ ತ್ರಿಗುಣವು ತಟ್ಟಲಾರದಲಾ ॥

ಮಾರುತನು ವೇಗದಲಿ ಬೀಸಲು ।
ಹಾರಿಸುವನೇ ಗಗನಮಂಡಲ ।
ಸೂರಿಯನ ನುಂಗುವುದೆ ಕತ್ತಲೆರಾತಿ ಕೊಡಿದೆ ॥ ೪೧೭ ॥

ನರಗೆ ಜಾಗೃತಿ ಬಿರಲು ಸ್ವಪ್ನವು ।
ಬರುವುದೇ ಪಂಚಿಸಲಿಕಾತನ ।
ಬರಲು ಸ್ವಾತ್ಮಜ್ಞಾನ ತ್ರಿಗುಣವು ಮುಟ್ಟಲಾರದಲಾ ॥
ಪುರುಷಸಾತನು ತ್ರಿಗುಣದಾಟವ- ।
ನಿರದೆ ದೂರದಿ ನೋಳ್ಪನಲ್ಲವೆ ।
ಬರುವುನೇನಾ ತ್ರಿಗುಣಗಳು ಕೇಳ್ ಜ್ಞಾನಿಸಂಧಿಗೆ ॥ ೪೧೮ ॥

ಚಿತ್ರಗಳ ಪರಿ ತ್ರಿಗುಣನಿರುವುವು ।
ಮತ್ತೆ ಪ್ರೇಕ್ಷಕನಂತೆ ಜ್ಞಾನಿಯು ।
ಹತ್ತಿರಲುದಾಸೀನವೃತ್ತಿಯ ಧರಿಸಿ ನೋದುವನು ॥
ನಾತ್ತಿ ಕದ ಸತ್ಕರ್ಮ ಮಾಡಲಿ ।
ಮತ್ತೆ ರಾಜಸ ಗುಣದಿ ವಿಷಯಾ- ।
ಸಕ್ತಿಯಿರಲಜ್ಞಾನತಿಮಿರವು ಒರಲಿ ತಾಮಸವು ॥ ೪೧೯ ॥

ಏನು ಕರ್ಮವ ಮಾಡಲೇನವ ।
ಜ್ಞಾನಿಯಾಗಲು ತ್ರಿಗುಣಜಾಧೀನ ।
ನ್ಯೂನ ತಟ್ಟದು ಚೇಷ್ಟೆಯೆನುತಲೆ ತತ್ತ್ವತಿಳಿಯುವನು ॥
ಜಾನಿನಲಿ ಬೆಳಗುವನು ಸೂರ್ಯನು ।
ಕ್ಷೋಣಿಯಲ್ಲಿಯು ಸಾಕ್ಷಿಭೂತನು ।
ತಾನಿಹನು ನಿರ್ಲಿಪ್ತ ಗಗನದಿ ದೂರ ಬಹುದೂರ ॥ ೪೨೦ ॥

ಶರಧಿ ಹರ್ಷದೊಳುಕ್ಕಿ ಬರುವುದು ।
ಕೆರೆಯ ಕುಮುದಗಳರಳುವುವು ಮು- ।
ತ್ತಿರದೆ ಬೆವರುವುದಲ್ಲವೇ ಕೇಳ್ ಸೋಮಕಾಂತವದು ॥
ಇರುವುದೀಪರಿ ಚಂದ್ರನಾಟವು ।
ಮೆರೆವನೈ ಚಂದ್ರಮನಲಿಪ್ತನು ।
ಧರಿಸುವನೆ ಯವ ವಿಧಿನಿಷೇಧವನೀಸು ಕರ್ಮದಲಿ ॥ ೨೨೧॥

ಗಾಳಿಯಾಕಾಶದಲಿ ಪರಿಸರಿ ।
ಯೇಳುವುದು ಬೀಳುವುದು ನೋಡಲು ।
ಮೂಲಗಗನವು ನಿಶ್ಚಲವಲಾ ನೋಡು ಕಲಿಪಾರ್ಥ ॥
ಕೇಳು ಪಾರ್ಥನೆ ತ್ರಿಗುಣಗಣವಿದು ।
ಲೀಲೆಯನು ಮಾಡಿದರು ಬಹುಪರಿ ।
ಬೀಳಲಾರನು ಜ್ಞಾನಿ ತ್ರಿಗುಣದ ಪಾಶದಲಿ ಪಾರ್ಥ ॥ ೨೨೨ ॥

ನರನೆ ತ್ರಿಗುಣಾತೀತ ಚಿಹ್ನವ- ।
ನರುಹಿದೆನು ನಿನಗಾನು ಮುಂದಿ- ।
ನ್ನರುಹುವೆನು ಕೇಳಾಚರಣವನು ನೋಡು ಕೌಂತೇಯ ॥

ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮಸಂಸ್ತುತಿಃ ॥ ೨೪ ॥

ಅರಿನಿಯಲಿ ತಂತುಗಳ ಹೊರತೈ- ।
ನಿರುವುದೈ ಹೊರಗೊಳಗೆ ಯಿಪಪರಿ ।
ನರನು ಮದ್ರೂಪವನು ತಾಳುತಲಿನ್ನ ನೋಳ್ಪನಲಾ ॥
ನರನೆ ಪರಮಾತುಮನು ತನ್ನಯ ।
ಶರಣಿಯಾಗಲಿ ನೈರಿಯಾಗಲಿ ।
ಕರುಣಿಸುವನೈ ಮೋಕ್ಷವಾಪರಿ ಜ್ಞಾನಿಯಾದವನು ॥ ೨೨೩ ॥

ಧರಿಸುವನು ಸಮತೋಲ ಸಂತತ ।
ಬರಲಿ ಸುಖದುಃಖಗಳ ಸಂತತಿ- ।
ಯಿರುವನೊಂದೇ ತೆರದಲುಭಯಪ್ರಸಂಗದಲಿ ಪಾರ್ಥ ॥
ನರನೆ ಕೇಳೀ ದೇಹಜಲದ- ।
ಲ್ಲಿರುವುದೈ ಮನನೆಂಬ ಮಾನಿದು ।
ಪರಿಪರಿಯಲಾಡುತ್ತಲಿರೆ ಸುಖದುಃಖ ಬರುತಿಹುವು ॥ ೨೨೪ ॥

ತೊರೆಯಲಭಿಮಾನವನು ದೇಹದಿ ।
ಬರಲು ನ್ವಾತ್ಮಜ್ಞಾನ ಮನುಜಗೆ ।
ಧರಣಿಯಲಿ ಪತ್ತಿರುವ ಬೀಜದಿ ಬರಲು ಧಾನ್ಯವದು ॥
ಇರುವುದೈ ಪರಿವಾಕ ಬೀಜದಿ ।
ಹರಿದು ಗಂಗಾನದಿಯು ವೇಗದಿ ।
ಬರುತ ಶರಧಿಯ ಸೇರೆ ಬಳಿಕದು ಶಾಂತವಾಗುವುದು ॥ ೨೨೫ ॥

ನರನೆ ಕೇಳೈ ನ್ವಾತ್ಮರೂಪವ- ।
ನರಿತವನು ತಾನೈಕ್ಯವೆನ್ನೊಳು ।
ಧರಿಸಲಾತಗೆ ಬಾಧೆ ತಟ್ಟದು ದುಃಖಸುಖಗಳಲಿ ॥

ಮರದ ಖಂಬಕೆ ರಾತ್ರಿಪಗಲೀ- ।
ಯೆರಡು ಪರಿಯೊ ದಿರುವ ತೆರದಲಿ ।
ಪೆರೆವ ಜೀವಾತ್ಮನಿಗೆ ಸುಖದುಃಖಂಗಳೊಂದಿಯಪ್ಪ ॥ ೨೨೬ ॥

ನರನು ನಿದ್ರಾವಸ್ಥೆಯಲ್ಲಿರೆ ।
ಬರಲು ಮಗ್ಗಲಿಗೊಂದು ಸರ್ಪವು ।
ಯೆರಡನೆಯ ಮಗ್ಗಲಿಗೆ ರಂಭೆಯೆ ಬಂದರೇನವನ ॥
ಸರಿಯಲಾ ಯೆರಡವಗೆ ನೋಡಲು ।
ಬರಲು ನ್ವಾತ್ಮಜ್ಞಾನಲೀನತೆ- ।
ಯೆರಡು ಸುಖದುಃಖಗಳು ಸರಿಯವಗೇನ ಹೇಳುವೆನು ॥ ೨೨೭ ॥

ಹೊನ್ನುಮಣ್ಣುಗಳೊಂದೆ ಯೋಗ್ಯತೆ ।
ರತ್ನಕಲ್ಲುಗಳೊಂದೆ ಯೋಗ್ಯತೆ ।
ತಿನ್ನಲಿಕೆ ಬಂದಿರುವ ಹುಲಿ ಸುರಪುರದ ಸುಖ ವೊಂದೇ ॥
ಭಿನ್ನವಾಗದು ಬುದ್ಧಿ ಯಾತಗೆ ।
ತನ್ನ ಆತ್ಮಸ್ವರೂಪಜ್ಞಾನದಿ ।
ಮಗ್ನನಿರುವನು ಭಂಗವಾಗದು ಮನದ ಸಮತೋಲ ॥ ೨೨೮ ॥

ಸತ್ತು ಹೋದರೆ ಬದುಕುವವರು ಜ- ।
ಗತ್ತಿನಲ್ಲಾರಿಹರು ಬೆಂಕಿಯು ।
ಹತ್ತಿರುವ ಜೀವನು ಪೊತ್ತಲು ಬರುವುದೇ ಪೊಳೆಕೆ ।
ಪಾರ್ಥ ನ್ವಾತ್ಮಜ್ಞಾನದಲಿ ಸಮ- ।
ವೃತ್ತಿ ಬಂದರದಕ್ಕೆ ಜಗದಲಿ ।
ಮೃತ್ಯು ಬಾರದು ಭಂಗ ತಟ್ಟದು ನೋಡು ಕೌಂತೇಯ ॥ ೨೨೯ ॥

ಇರುವನಾತನು ಬ್ರಹ್ಮನೆಂದೀ- । ವಂದಿಸಲು ಜ್ಞಾನಿಯನು ವರಮಾ- ।
ಪರಿಯ ತುತಿಯನು ಮಾಡಲದರಲಿ । ನಂದವಾಗದು ನೀಚನೆನುತಲಿ ।
ಹರುಷವಾಗದು ನೀಚನೆನುತಲಿ ನಿಂದೆ ಬಾಡಿದರೆ ॥ ನಿಂದಿಸಲು ಮತ್ಸರವು ದ್ವೇಷವು ಬಾರದಾತನಲಿ ॥
ಇರದಲಾ ಮನದಲ್ಲಿ ಭೇದವ್ರ । ಚಂದ್ರಸೂರ್ಯಾರ ಮನೆಯಲೇತ- ।
ಪೆರೆಸ್ಪರದನನ ಸಮಕ್ಷವೀಸರಿ । ಕ್ಕಂಧಕಾರವು ಒರುವದುರ್ಯಾ ।
ಯುರಿದು ಹೋಗಲು ಬೆಂಕಿ ಬೂದಿಗೆ ಸುಡುವ ಭಯವಿಹುದೆ ಮುಂದೆ ದೀಪಾರತಿಯು ತೋರ್ಪ ಜತೂರಿ ಯೇನಿಹುದು ॥ ೨೩೧ ॥

॥ ೨೩೦ ॥

ಮಾನಾಪಮಾನಯೋಸ್ತುಲ್ಯಸ್ತುಲ್ಯೋಮಿತ್ರಾರಿಪಕ್ಷಯೋಃ ॥
ಸರ್ವಾರಂಭಪರಿತ್ಯಾಗೀಗುಣಾತೀತಃ ಸ ಉಚ್ಯತೇ ॥ ೨೫ ॥

ಇರುವನೀಶ್ವರನೆನುತ ಸಂಜ್ಞತ । ಪೆರೆವನಾ ಸೂರಿಯನು ಗಗನದೊ- ।
ಪರಿವರಿಯು ಪೂಜೆಯನು ಮಾಡಲು । ಕರವನೈ ನಿರ್ಲಕ್ಷನಾತನು ।
ಮರಳಿ ಚೋರನೆನುತ್ತ ಹೊಡೆದರು ಒಡಿದರಾತನನು ॥ ಧರೆಯೊಳೀವರಿ ಜ್ಞಾನಿಗಿಲ್ಲಿ ಬುದ್ಧಿಭಿನ್ನತೆಯು ॥
ಅರಸನಿರುವನೆನುತ್ತಲಾತನ । ನರನೆ ಕರ್ಮಾರಂಭ ಮಾಡುವ- ।
ಪರಿವರಿಯು ಚತುರಂಗ ಸೈನ್ಯದಿ । ನಿರದು ಕರ್ಮಾಸಕ್ತಿಯಾತನಿ- ।
ಪೆರೆಸಿದರು ಪಟ್ಟಣದಿ ಸನುತೋಲನೆಯು ಪಿಡಲಾರ । ಗುರಿದು ಹೋಗುವುದೆಲ್ಲ ಕರ್ಮದ ನೆಲವು ಜ್ಞಾನದಲಿ ॥ ೨೩೪ ॥

ಶತ್ರುಮಿತ್ರಾದಿಗಳ ಭಾವವು । ನರನೆ ಕೇಳಿಹಲೋಕವಥವಾ ।
ಹತ್ತಲಾರದು ಮನದೊಳವನಿಂ- । ಪೆರೆಯುತಿಹ ಪರಲೋಕವೆಂಬೀ- ।
ಗಾಪ್ತರಿಷ್ಟರು ಶತ್ರುಮಿತ್ರಗಳೊಂದೆ ಯಾತನಿಗೆ ॥ ಯೆರಡು ಕಲ್ಪನೆ ಯಿಲ್ಲನವ್ಗಾ ಜ್ಞಾನಿನಾಸನಗೆ ॥
ರಾತ್ರಿದಿವಸಗಳೆಂಬ ಭೇದವು । ದೊರೆತಿದುದು ಸೇಸಿನನ ವೃತ್ತಿಯು ।
ಹತ್ತುವುದೆ ಸೂರ್ಯನಿಗೆ ರವಿ ಸ- । ಪೆರೆವಾತನಲ್ತೀನ ಹೇಳಲಿ ।
ರ್ವತ್ರ ತನ್ನ ಪ್ರಕಾಶ ಕೊಡುವನು ಭೇದವೇನವಗೆ ॥ ೨೩೫ ॥ ತೊರೆದು ದ್ವೈತವ ದುಃಖಸುಖದಲಿ ಸಮಶೆ ಯಿಮನಸಲಾ ॥೨೩೫॥

ಬಂದರಾ ಸುಖದಿಂದ ಪರಮಾ- ।
ನಂದವಾಗದು ದುಃಖ ಬಂದರೆ ।
ಕುಂದನೆಣಿಸನು ಮನದ ಸಮತೋಲನನು ಪಿಡಲಾರ ॥

ಎಂದ ಮೇಲೀ ಜಗದಿ ನಡೆಯುವ । ನಂದಕಂದ ಪುರಂದರಾತ್ಮಜ- ।
ಸಂದುಕಿದ ವ್ಯಾಪಾರವಾತನ । ಗೆಂದನಂದದಿ ಕೇಳುಪಾರ್ಥನೆ ।
ಬಂಧಿಸುವುದೇ ನರನೆ ತ್ರಿಗುಣಾತೀತನೀ ತೆರನು ॥ ಯಿಂದು ಹೇಳುವೆನೆಂತು ತ್ರಿಗುಣಾತೀತನಾಗುವನು ॥ ೨೩೬ ॥

ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥ ೨೬ ॥

ಧರೆಯಲೆನ್ನನಭೇದಬುದ್ಧಿಯೊ- । ಧರೆಯೊಳಗೆ ನಾನಾರು ಯೆನ್ನಯ ।
ಳುರುತರದ ಭಕ್ತಿಯಲಿ ಭಜಿಪನೊ । ಪರಮಭಕ್ತಿಯ ಪರಿಯದಾವುದು ।
ಯಿರುವನಾತನು ಶಕ್ತ ತ್ರಿಗುಣಂಗಳನು ಕೊಲ್ಲುವನು ॥ ಯಿರುವುದವ್ಯಭಿಚಾರ ಭಕ್ತಿಯು ಯೆಂತು ಯೆನ್ನೊಳಗೆ ॥ ೨೩೭ ॥

ನನಸೆ ಕೇಳೀ ಪರಿಯ ನಾನಿ- ।
ಸ್ತುರಿಪೆ ನಿನಗೀ ಪ್ರೇಮಭಾವದಿ ।
ಹರುಷದಿಂದೀ ತತ್ತ್ವ ಕೇಳೈ ಪಾರ್ಥ ಮನಗೊಟ್ಟು ॥
ಮೆರೆವ ರತ್ನವ ಬಿಟ್ಟು ತೇಜವ ।
ಯಿರುವುದೇನೈ ಬೇರೆಬೇರೀ- ।
ಪರಿಯಲಾ ನೀರನ್ನು ಬಿಡುವುದೆ ದ್ರಾವಕವು ಪಾರ್ಥ ॥೨೩೮॥

ಇರುವುದೈ ಸನಿ ಸಕ್ಕರೆಯಲಾ- ।
ತೆರದಿ ಕೇಳವಕಾಶವಂಬರ- ।
ವುರಿವ ಬೆಂಕಿಯು ಜ್ವಾಲೆಯಿಂ ಬೇರಿಹುದೆ ಕಲಿಪಾರ್ಥ ॥
ಸರಸಿಜವು ಸರಸಿಜದ ದಳಗಳು ।
ಮರವು ಮರದಾ ಹೂವೆಲೆಗಳೈ ।
ಯಿರುವುದಾಪರಿ ಯೊಂದೆ ಶೀತವು ಶೀತಹಿಮಗಿರಿಯು ॥೨೩೯॥

ಹಾಲಿನಲಿ ಹೆಪ್ಪಿಡಲು ಮುಂದಾ- ।
ಹಾಲೆ ರೂಪಾಂತರದಿ ಮೊಸರೈ ।
ಕೇಳು ನೋಡೀ ತೆರದಿ ವಿಶ್ವವಿದೆಲ್ಲ ಮದ್ರೂಪ ॥
ಹೇಳಲೇನದ ಚಂದ್ರಮನ ಸುನಿ- ।
ಲೋಲ ತೇಜವ ನೋಳ್ಪುದಾದರೆ ।
ಸೀಳ ಬೇಕೇ ಚಂದ್ರನ ಪ್ರಭೆ ಚಂದ್ರನೊಂದೆಯಲಾ ॥೨೪೦॥

ಘಟ್ಟಿಯಾಗಲು ಘೃತವು ಶೀತದಿ ।
ಬಿಟ್ಟುಬಿಡುತಿಹುದೇ ಘೃತತ್ವವ- ।
ನಟ್ಟಿಸಲು ಚಿನ್ನವನು ಬಿಡುವುದೆ ಚಿನ್ನತನವನದು ॥
ಬಿಟ್ಟು ಬಿಡದಾ ವಸ್ತ್ರವನು ತಾಂ ।
ದೃಷ್ಟಿಸಲು ಕಾಣುವ್ವುದು ತಂತುವೆ ।
ನಷ್ಟ ಮಾಡದೆ ಗಡಿಗೆ ನೋಡಲು ಮೃತ್ತಿಕಾಮಯವು
॥ ೨೪೧ ॥

ಬೇರಿರಿಸಿ ವಿಶ್ವವನು ನನ್ನನು ।
ಬೇರೆ ನೋಡುವೆನೆಂದು ನೋಳ್ಪ ಪ್ರ- ।
ಕಾರವಲ್ಲಾ ವಿಶ್ವನೇ ಮದ್ರೂಪವಿರುವುದಲಾ ॥
ಯಾರು ಕೇಳೀ ಯೈಕ್ಯ ಬುದ್ಧಿಪ್ರ- ।
ಕಾರದಲಿ ಭಜಿಸುವರೊ ಅವ್ಯಭಿ- ।
ಚಾರಭಕ್ತಿಯಭೇದಭಕ್ತಿಯು ಯೆಂಬರೀ ಪರಿಯ ॥ ೨೪೨ ॥

ನಾನು ವಿಶ್ವದೊಳಿರದೆ ಬೇರಿಹೆ- ।
ನೀನಿಧಾನವ ಮಾಡುವಾತನು ।
ಮಾನಿಸುವನೈ ಭೇದವದು ವ್ಯಭಿಚಾರವಾಗುವುದು ॥
ಮಾನಿಸದಲೀ ತೆರದ ಭೇದವ ।
ನೀನು ನಿನ್ನ ಸ್ವರೂಪಸಹಿತಲೆ ।
ಲೀನನಾಗೆನ್ನೊಳಗೆ ತೊರೆದಾ ದ್ವೈತಭಾವವನು ॥ ೨೪೩ ॥

ಭಕ್ತನೆಂಬುವ ಭಾವದಿಂದ ವಿ- ।
ಭಕ್ತತನ ಬೇಡೆನಗೆ ಪಾರ್ಥನೆ ।
ಚಿತ್ತದಲಿ ನೀನೇಕನಿಷ್ಠೆಯಿಂದ ನೇರೆನ್ನ ॥
ಪಾರ್ಥಚಿನ್ನದ ಟಕ್ಕೆಯನು ಮೇ- ।
ಗೆತ್ತಿ ಚಿನ್ನದ ಗಟ್ಟಿ ಮೇಲಿಡೆ ।
ಸ್ವಸ್ಥ ಚಿತ್ತದಿ ನೋಡು ಚಿನ್ನದಿ ಭೇದತೋರುವುದೆ ॥ ೨೪೪ ॥

ನಾನು ಬೇರಿಹೆ ವಿಶ್ವ ಬೇರಿಹು- ।
ಧೀನಿಧಾನವ ಮಾಡ ಬಾರದು ।
ಕ್ಷೋಣಿಗಿಳಿದಿಹ ಕಿರಣ ರವಿಯಿಂ ಬೇರಿಹುದೆ ನೋಡು ॥
ಕ್ಷೋಣಿಯು ರಜಃಕಣಗಳೆಲ್ಲವು ।
ಕ್ಷೋಣಿಯಿಂ ಬೇರಿಹುವೆ ನೋಡಲು ।
ಮೇಣು ಹಿಮಕಣ ಹಿಮಗಿರಿಯು ಬಿಟ್ಟಿಹುದೆ ಕೌಂತೇಯ ॥೨೪೫॥

ಕಿರಿದಿರಲು ಬಹುಪರಿಯ ತೆರೆಗಳು ।
ಶರಧಿಯನು ಬಿಟ್ಟಿಹುವೆ ಪಾರ್ಥನೆ ।
ಯಿರುವುದಾರಿಗೆ ಜ್ಞಾನನೀಪರಿ ಭಕ್ತನವನಿಹನು ॥
ಇರುವುದೈ ಸರ್ವತ್ರನೈಕ್ಯವು ।
ಯಿರನು ಯೆನ್ನಯ ಹೊರತು ಯಿಶ್ವರ ।
ಪರಿಯಲೀ ಸುಜ್ಞಾನವಾಗಲು ಭಕ್ತಿಯೆನಿಸುವುದು ॥ ೨೪೬ ॥

ಜ್ಞಾನವಿದು ಸರ್ವೋತ್ತಮವಲಾ ।
ಜ್ಞಾನವಿದುವೇ ಯೋಗಸಾರವು ।
ಯೇನ ಹೇಳಲಿ ನಿನಗೆ ದೃಷ್ಟಾಂತವನು ತೋರಿಸುವೆ ॥
ಕ್ಷೋಣಿಯುಲಿ ಮಳೆ ಸುರಿಯ ಹತ್ತಲು ।
ಬಾನಿನಿಂ ಜಲಧಾರೆಯೊಂದೇ ।
ಮಾನದಲಿ ಶರಧಿಯನು ಮೇಘವ ಕೂಡಿಸುವುದಿಲ್ಲೈ ॥ ೨೪೭ ॥

ನನಸೆ ಭಕ್ತನು ಭಜ್ಯ ಭಜನವು ।
ಮೆರೆವುದೀ ತ್ರಿಪುಟಿಯು ಜಗತ್ತಿಲಿ ।
ಮೆರೆವನೈ ಪರಮಾತ್ಮನದರಲಖಂಡರೂಪದಲಿ ॥
ಇರುವುದೈ ಯಾಕಾಶ ರೂಪದ ।
ಕೊರಳೊಳಗೆ ತೋರುವುದೆ ಭೇದವು ।
ಮೆರೆವುದಲ್ಲವೆ ರೂಪಮುಖವಾಕಾಶವೊಂದಾಗಿ ॥ ೨೪೮ ॥

ತನ್ನೊಳಗೆ ಪರಮಾತ್ಮನೊಳಗವ ।
ಭಿನ್ನಭಾವವ ತೊರೆದು ವಿಶ್ವದಿ ।
ಪೂರ್ಣ ಪರಮಾತುಮನಿಹನು ಭಾವಿಸುಕಲೀ ತೆರದಿ ॥
ಕಣ್ಣಿಗಿದಿರಿಲಿ ಬರುವ ಕಿರಣಗ- ।
ಳನ್ನು ಪ್ರತಿಬಿಂಬವನು ಮೇಣ್ ಪ್ರಭೆ- ।
ಯನ್ನು ಸೂರ್ಯನ ತನಕ ಮಾನಿಪನೊಂದೆನುತ ನಿಜದಿ
॥ ೨೪೯ ॥

ಬರಲು ಸೋಽಹಂಬ್ರಹ್ಮವೃತ್ತಿಯು ।
ಯಿರುವುದೇನಂತರವು ವಿಶ್ವದಿ ।
ಯಿರುವುದಲ್ಲವೆ ವಿಶ್ವ ಬ್ರಹ್ಮಸ್ವರೂಪ ವೊಂದಾಗಿ ॥
ಶರಧಿಯಲಿ ಲವಣವನು ಹಾಕಲು ।
ಕರಗಿ ಶರಧಿಯೊಳೈಕ್ಯವಾಗಲು ।
ಕರಗುತಿರುವಾ ಗುಣವು ತನ್ನಿಂ ತಾನೆ ಲಯವಪ್ಪುದು
॥ ೨೫೦ ॥

ಸುಟ್ಟು ಹೋಗಲು ಹುಲ್ಲು ತಾಂತ- ।
ನ್ನಷ್ಟೆ ಬೆಂಕಿಯು ನೊಂದಿ ಪೋವುದು ।
ಶ್ರೇಷ್ಠ ಜ್ಞಾನದೊಳೈಕ್ಯವಾಗಲು ಬ್ರಹ್ಮರೂಪದಲಿ ॥
ನಷ್ಟವಾಗುವುದಾಗ ಜ್ಞಾನವು ।
ಶ್ರೇಷ್ಠನಾನಿಹೆನಿತ್ತ ಭಕ್ತ ಕ- ।
ನಿಷ್ಠನತ್ತಲೆನುತ್ತ ಭೇದವು ಸತ್ತು ಹೋಗುವುದು ॥ ೨೫೧ ॥

ನರನೆ ಕೇಳೀ ಭೇದ ನಾಯಲು ।
ಯಿರುತ್ತದೇನೈ ಹಿಂದನಂತರ ।
ಬರುವುದೈಕ್ಯವ ಭಜ್ಯಭಕ್ತರ ನಡುವೆ ಕೌಂತೇಯ ॥

ಇರುವುದೈಕ್ಯವನಾದಿಸಿದ್ಧವು ।
ಪೆರೆವುದಿದು ಸ್ವಾಭಾವಿಕವಲಾ ।
ಅರಿಯುತೈಕ್ಯವಿದಾಯಿತೆಂಬುವ ಮಾತೆ ಸಲ್ಲದಲಾ ॥ ೨೫೨ ॥

ಬರಲು ನೋಡೀ ತೆರದಿ ಸ್ಥಿತಿಯೈ ।
ಹರಿಸುವನು ತ್ರಿಗುಣಗಳನೆಂಬುವ ।
ಪರಿಯೆ ಹರಿವುದು ಕರೆವರಿದನೇ ಬ್ರಹ್ಮ ಹೆಸರಿನಲಿ ॥
ಧರೆಯಲವ್ಯಭಿಚಾರ ಭಕ್ತಿಯ ।
ಪರಿಯದೆಲ್ಲವ ನಿನಗೆ ತಿಳಿಸಿದೆ ।
ದೊರೆವುದೀ ಭಕ್ತಿಯಲಿ ಬ್ರಹ್ಮತ್ವವು ಸಹಜವಾಗಿ ॥ ೨೫೩ ॥

ಧರೆಯೊಳಾಗಲು ಭಕ್ತನೀಪರಿ ।
ಯಿರುವಳು ಪತಿವ್ರತೆಯು ಬ್ರಹ್ಮತೆ ।
ಹರಿವ ಗಂಗಾನದಿಗೆ ಪತಿ ಸಾಗರನಲಾ ನೋಡು ॥
ಪೆರೆವ ಜ್ಞಾನದ ದೃಷ್ಟಿಯಿಂದಲೆ ।
ಶರಣಿಗಳು ಸೇರಿಸಲು ಯೆನ್ನ- ।
ನ್ನಿರುವರೆನ್ನಯ ಬ್ರಹ್ಮತತ್ತ್ವದ ಮುಕುಟಮಣಿಗಳಲಾ ॥ ೨೫೪ ॥

ಅರಿಯಲಿದೆ ಸಾಯುಜ್ಯಮುಕ್ತಿಯು ।
ಯಿರುವುದಿದು ಪುರುಷಾರ್ಥ ನಾಲ್ಕನೆ ।
ನರನೆ ಯೆನ್ನಾರಾಧನೆಯು ಮೋಕ್ಷಕ್ಕೆ ಸೋಪಾನ ॥
ದೊರೆಯಲಾರಾಧನೆಯು ನನ್ನದು ।
ದೊರೆವುದೈ ಬ್ರಹ್ಮತ್ವ ನಿಜನಿದು- ।
ವರಿಯ ಬೇಡೈ ಬ್ರಹ್ಮ ಬೇರಿಹುದೆನ್ನ ಹೊರತೆಂದು ॥ ೨೫೫ ।

ಬ್ರಹ್ಮಣೋ ಹಿ ಪ್ರತಿಷ್ಠಾಹಮಮೃತಸ್ಯಾವ್ಯಯಸ್ಯ ಚ ।
ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ ॥ ೨೭ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ
ಶ್ರೀಕೃಷ್ಣಾರ್ಜುನಸಂವಾದೇ ಗುಣತ್ರಯವಿಭಾಗಯೋಗೋ ನಾಮ ಚತುರ್ದಶೋಽಧ್ಯಾಯಃ ॥

ನರನೆ ನಾನೇ ಬ್ರಹ್ಮವಿರುವೆನು ।
ಯಿರುವುದೀಪರಿ ಯೆನ್ನ ಹೆಸರೈ ।
ಯಿರುವುದೇನೈ ಭೇದ ಮಂಡಲದೊಳಗೆ ಚಂದ್ರನಲಿ ॥

ಇರುವುದೈ ಧರ್ಮಸ್ವರೂಪವೆ ।
ನಿರುತ ನಿಶ್ಚಲ ಸುಖವನಾವೃತ ।
ನಿರುಪಮನು ಪೇಣದ್ವಿತೀಯವು ನೋಡು ಕೌಂತೇಯ ॥ ೨೫೬ ॥

ನರನೆ ಕೇಳಜ್ಞಾನವನು ಸಂ- । ವ್ಯರ್ಥವೆನಗೀ ಮಾತುಗಳು ಪರ- ।
ಹರಿಸುತಲಿ ಸುಜ್ಞಾನವಂತದಿ । ಮಾರ್ಥಬೋಧಿಪ ಸಾಕು ಜಲ್ಪನೆ ।
ಬರುತ ಲಯ ಹೊಂದುವುದು ಯಾವುದರಲ್ಲಿ ನೋಡಿದಿಯಾ ॥ ವಾರ್ಥ ಸೋಲುವ ಪರಿಯ ಹೇಳೈ ಯೆನಗೆ ಸಂಜಯನೆ ॥
ಇರುವುದದು ಸಿದ್ಧಾಂತತತ್ತ್ವವು । ಸ್ವಾರ್ಥಪರವೀ ಮಾತ ಕೇಳ್ದು ವಿ- ।
ಮೆರೆವುದಂತದ ರೂಪವಲ್ಲವೆ । ಚಿತ್ರವೆನಿಸಿತು ಸಂಜಯಂಗದು ।
ಭರಿತವಿಹುದದು ವಿಶ್ವದಲಿ ಸಂಪೂರ್ಣತರವಾಗಿ ।' ೨೫೭ ;। ವ್ಯರ್ಥವೀ ಕುರುಡನಿಗೆ ಮನದಿ ವಿರೋಧ ಸೇರಿಹುದು ॥ ೨೬೦ ॥

ನರನಿಗೀ ಪರಬ್ರಹ್ಮತತ್ತ್ವವ- । ಮರಳಿ ಮನದಲಿ ಯೋಚಿಸುತಲೀ- ।
ನರುಹಿದನು ಪರಮಾತ್ಮ ಕೃಷ್ಣನು । ತೆರದಿ ಪ್ರಾರ್ಥಿಸುತೆಂದನಾಕ್ಷಣ ।
ಶರಣರಘಸಂಹರಣ ದೀನರನಾಥ ಶ್ರೀನಾಥ ॥ ಹರಿಯು ಕರುಣಿಸಲೀತನಿಂಗೌಷಧವಿವೇಕವನು ॥
ಹರಿಯ ಗೀತೆಯ ಕಥನ ಸಂಜಯ- । ಹರಿಯಿಲೀತನ ಮೋಹರೋಗವು ।
ನರುಹಿದನು ಧೃತರಾಷ್ಟ್ರಭೂಪಗೆ । ಕುರುಡನಿಂಗಾರೋಗ್ಯ ಬರಲೀ- ।
ಕುರುಡನದ ಮೆಚ್ಚದಲೆ ಪ್ರತ್ಯುತ್ತರವನರುಹಿದನು ॥ ೨೫೮ ॥ ತೆರದಿ ಸಂಜಯನಂದು ಕೊಂಡನು ಮನದಿ ಖೇದದಲಿ ॥ ೨೬೧ ॥

ಯಾರು ನಿನಗೀ ಪ್ರಶ್ನೆ ಕೇಳ್ದರು । ಬರಲು ಮನದಲಿ ಸಂಜಯಂಗೀ- ।
ನೇರದೆನ್ನಯ ಮನದೊಳದು ನಿನ- । ತೆರದಿ ರಣರಂಗದಲಿ ಯಾಚೆಗೆ ।
ಗೇರಿದುದು ಮರುಳಾಟ ಮನದಲಿ ನೋಡು ಸಂಜಯನೆ ॥ ನರಹರಿಯ ಸಂವಾದದಲಿ ಪೋಯ್ತುವಗೆ ನಿಜಲಕ್ಷ್ಯ ॥
ಯಾರು ಯುದ್ಧದಿ ಗೆಲುವನೆನ್ನ ಕು- । ಹರುಷವೂರಿತನಾಗಿ ಮುಂದೇ- ।
ಮಾರನಿಗೆ ಜಯಸಿರಿಯು ಕೊನೆಯಲಿ । ನರುಹುವನು ಶ್ರೀವಿಷ್ಣುವೆನುತಲಿ ।
ಹಾರವನು ಹಾಕುವಳು ನೀನಾ ಮಾತ ಹೇಳುವುದು ॥೨೫೯॥ ಮರಳಿ ಸಂಜಯ ಕವಿಯನಿತ್ತನು ಭಾಷಣದ ಕಡೆಗೆ ॥ ೨೬೨ ॥

ಇತಿ ಶ್ರೀಮೂಡಕಟ್ಟೆಸುಬ್ಬರಾವಾತ್ಮಜರಾಘವೇಂದ್ರರಾಯಕೃತವಾದ ಕನ್ನಡಜ್ಞಾನೇಶ್ವರಿಯಲ್ಲಿ
(೧೪) ಹದಿನಾಲ್ಕನೆಯ ಅಧ್ಯಾಯ ಮುಗಿದುದು.

ಸಂಸ್ಕೃತ ಮೂಲಶ್ಲೋಕಗಳು ೨೭, ಕನ್ನಡ ಷಟ್ಪದಿಗಳು ೨೬೨.

ಕನ್ನಡ ಜ್ಞಾನೇಶ್ವರಿ.

೧೫ ಹದಿನೈದನೆಯ ಅಧ್ಯಾಯ.

ಎನ್ನ ಹೃದಯವನೀಗ ನಾ ಸಂ- । ಗುರುಚರಣದಲಿ ಭೋಗಮೋಕ್ಷವ- ।
ಪೂರ್ಣ ತೊಳೆಯುತ ಸ್ವಚ್ಛ ಮಾಡಿಂಪೆ । ನೆರದೊಡವೆಗಳನೊತ್ತೆ ಯಿಡುವೆನು ।
ಚನ್ನ ಶ್ರೀಗುರುವರನ ಪಾದುಕೆಗಳನು ನ್ಥಾಪಿಸುವೆ ॥ ಧರೆಯಲೀ ತೆರ ನೇವೆಯತಿದುರ್ಘಟವಲಾನೋಪೆ ॥
ಸನ್ನಶೈಕ್ಯಸುಭಾವದಂಜಲಿ- । ದೊರಕುವರೆ ಗುರುಚರಣಸೇವೆಯು ।
ಯನ್ನು ಮಾಡುತಲಿಂದ್ರಿಯೌಘದ । ಪರಮಧನ್ಯತೆ ಜೀಕು ಸಂಚಿತ ।
ಮುನ್ನ ಪುಷ್ಪಾಂಜಲಿಯರೂಪದೊಳರ್ಘ್ಯವೀಯುವೆನು ॥೧॥ ನಿರುತ ಕೊಡುವುದು ನಾಲ್ಕು ಪುರುಷಾರ್ಥಗಳ ನಿಜವಾಗಿ ॥ ೫ ॥

ಏಕನಿಷ್ಠೆಯ ಶುದ್ಧಜಲದಲಿ । ಬರುವುದೈ ಬ್ರಹ್ಮಸ್ವರೂಪವು ।
ಹಾಕುತಲಿ ನ್ನಾನವನು ಗುರುವಿಂ- । ಗುರುಚರಣಭಜಕರಿಗೆ ತದನಂ- ।
ಗೇಕನಿಷ್ಠಾಭಾವವೆಂಬುವ ಗಂಧವನೆ ಹಚ್ಚಿ ॥ ತರದಿ ಪರಿಪಕ್ವತೆಯು ತಾಳ್ವುದು ಜ್ಞಾನವಾತನಲಿ ॥
ಬೇಕೆನಿಪ ಸುಪ್ರೇಮ ಚಿನ್ಮದೊ- । ನರನೆ ಕೇಳಾ ಜ್ಞಾನಿ ನುಡಿಯುತ- ।
ಳಾಕಲಿಸಿ ನೂವುರವ ಗುರುಪದ- । ಲರುವ ವಾಕ್ಯಗಳಮೃತದಿಂ ತುಂ- ।
ಶ್ರೀಕಮಲದಲ್ಲೇರಿಸುವೆನೈ ಭಕ್ತಿಭಾವದಲಿ ॥ ೨ ॥ ಬರುವ ಪನಧಿಗಳಂತೆ ರಂಜಿಪುವೈ ಜಗತ್ರಯದಿ ॥ ೬ ॥

ಗುರುಚರಣದೃಢಭಕ್ತಿಭಾವಗ- । ಅರುಹಲಾರೆನು ವಿಸ್ತರದೊಳದ- ।
ಳೆರದು ಜೋಡುಂಗುರವ ಗುರುವಿನ । ನಿರುವ್ರದೆಂತೀ ವಾಣಿ ಮಧುರತೆ- ।
ಬಿರಳಿನಲಿ ನಾನೇರಿಸುವೆನೈ ಮೋದದಿಂದೀಗ ॥ ಯುರುತುವೆನು ನಿಮಗೊಂದುದಾಹರಣೆಯನು ನಾದರದಿ ॥
ಹರುಷಪರಿಮಳಯುಕ್ತವಾಗಿಹ । ಧರೆಯೊಳಗೆ ಕೋಟ್ಯವಧಿಸಂಖ್ಯೆಯು ।
ಮೆರೆವ ಸಾತ್ತ್ವಿಕದಳಗಳೆಂಟಿಹ । ತೆರದ ರಾಕಾಚಂದ್ರುದಯಿಸೆ ।
ಸರಸಿಜವನರಳೆರುವ ಗುರುಚರಣಗಳಿಗರ್ಪಿಸುವೆ ॥ ೩ ॥ ಸರುವರವರ ನಿವಾಳಿಸಲು ಬೇಕಿದರ ಮೇಲಿಂದ ॥ ೭ ॥

ಉರಿಸುತಲಹಂಕಾರಧೂಪವ । ತರಣಿ ಪೂರ್ವದೊಳುದಯವಾಗಲು ।
ನಿರಭಿಮಾನಾರತಿಯ ಬೆಳಗುವೆ । ಧರಣಿಯಲಿ ಕೇಳ್ವುಪ್ರಕಾಶದ ।
ನಿರುತ ರಂಚಿಸುವೈಕ್ಯ ಭಾವದಿ ಗುರುವನಪ್ಪುವೆನು ॥ ನೆರೆಯು ಬರುವ ಪ್ರಕಾರದಲಿ ಭಾಷಣವ ಮಾಡಿದರೆ ॥
ಮೆರೆವ ದೇಹಪ್ರಾಣವೆಂಬೀ- । ಬರುವದಮೃತಜ್ಞಾನಪೂರವು ।
ಯೆರಡು ಪಾದುಕೆ ಮಾಡಿ ಶ್ರೀಗುರು- । ಭರಿತವಿಹುದೈ ಶ್ರೋತೃಹೃದಯವು ।
ವರನ ಚರಣದಲಿಡುತಲಂಗೀಕಾರ ಮಾಡಿಸುವೆ ॥ ೪ ॥ ಪರಮಸೌಖ್ಯಾನಂದ ಬರುವುದವರ್ಣನೀಯವಲಾ ॥ ೮ ॥

ಭಾಷಣದ ಮಾಧುರ್ಯ ನೋಡಲು ।
ಕೂಸೆನಿಸುವುದು ನಾದಬ್ರಹ್ಮವು ।
ಮೋಕ್ಷಸುಖದಿಂ ಮಿಗಿಲೆನಿಸಿ ರಂಜಿಪುದು ಲೋಕದಲಿ ॥
ಭಾಷಣದ ಶೈಲಿಯನು ನೋಡಲು ।
ಸೂಸುವುದು ಪೀಯೂಷವದರಿಂ- ।
ದೀಸು ಸದ್ಗುರುವಿನಕಟಾಕ್ಷದ ಮಹಿಮೆಯದು ನೋಡೆ ॥೪॥

ಶ್ರವಣಸುಖರೂಪದ ಸುಮಂಟಪ ।
ಭುವನರಂಜಕ ಋತುವಸಂತವು ।
ಲವಲವಿಕೆಯಿಂ ರಂಜಿಪುದು ವಾಗ್ಸಲ್ಲಿ ದಿಶೆದಿಶೆಗೆ ॥
ಭುವನದೊಳಗೇನಚ್ಚರಿಯು ಕೇಳ್ ।
ವಿವರಿಸುತ ಪರಮಾತ್ಮರೂಪನ ।
ಸ್ತವನ ತಿಳಿಯದೆ ವಾಣಿ ಹಿಂತಿರುಗುವುದು ಮನದೊಡನೆ
॥ ೧೦ ॥

ಇರುವನೈ ಪರಮಾತ್ಮನೀಪರಿ ।
ವರಿಯಿದಾದರು ನೋಡು ಚೋದ್ಯವ ।
ಗುರುಚರಣಸದ್ಭಕ್ತದಾಡಿದ ತೆರದಿ ಕುಣಿಯುವನು ॥
ಇರುವನಾಪರಮಾತ್ಮ ಜ್ಞಾನದ ।
ಹೊರಗೆ ಧ್ಯಾನಾತೀತನಾದರು ।
ಗುರುವ ಸೇವಿಪ ಭಜಕರಾಡಿದ ವಚನದೊಳಗಿರುವ ॥೧೧॥

ಇಷ್ಟು ಮಹದೈಶ್ವರ್ಯ ವಾಣಿಗೆ ।
ಹುಟ್ಟುವುದು ಕೇಳಾರದಯೆಯಿಂ ।
ಶ್ರೇಷ್ಠ ಸದ್ಗುರುಪಾದಪದ್ಮಪರಾಗವಶದಿಂದ ॥
ಇಷ್ಟು ಶ್ರೀಜ್ಞಾನೇಶ ನುಡಿದನು ।
ತುಷ್ಟಮಾನಸನಾಗಿ ಧರೆಯೊಳ- ।
ಗೆಷ್ಟು ಭಾಗ್ಯನಿದೆನ್ನ ದೆಂದನು ನಗುತ ಜ್ಞಾನೇಶ ॥ ೧೨ ॥

ಗುರುನಿವೃತ್ತಿಗೆ ನಾನೆ ಜ್ಞಾನೇ- ।
ಶ್ವರನು ಬಾಲಕನೊರ್ವ ಶಿಷ್ಯನು ।
ಹರಿವುದೆಂತಾ ಪ್ರೇಮಭಾಗೀರಥಿಯು ಬಿಟ್ಟೆನ್ನ ॥
ಸುರಿಯುವನು ಪರ್ಜನ್ಯವೃಷ್ಟಿಯ ।
ಹರುಷವನು ಜಾತಕಕೆ ಕೊಡುವರೆ ।
ಧರೆಗೆ ಪರಮಾನಂದನಾಗುವುದಿಲ್ಲವೇ ನೋಡು ॥ ೧೩ ॥

ಗುರುವು ತೋರಿದನೆನಗೆ ಕರುಣೆಯು ।
ಬರಿದೆ ಜಾಯಿಂ ಬರುವ ಶಬ್ದದಿ ।
ಸರಸಕಾವ್ಯವಿದಾಯ್ತು ಗೀತಾಸ್ಮೃತಿಪೆ ಹರಿದುದಲಾ ॥

ಇರುವುದೇನಾಶ್ಚರ್ಯವಿದರ- ।
ಲ್ಲಿರಲು ಪ್ರಾರಬ್ಧಾನುಕೂಲತೆ ।
ಕರದಿ ಹಿಡಿದಿಹ ಮಣ್ಣು ಹೊನ್ನಾಗುವದು ನಿಜವಾಗಿ ॥ ೧೪ ॥

ಘಟ್ಟಿ ಯಾಯುರ್ದಾಯನಿರಲಾ ।
ದುಷ್ಟ ಮಾರಕನವನೆ ತಾರಕ ।
ಥಟ್ಟನಾಗುವನೇನ ಹೇಳಲಿ ದೈವಕರಣಿಯಲಾ ॥
ಸೃಷ್ಟಿಗೊಡೆಯನು ತಾನು ಭೋಜನ ।
ಕೊಟ್ಟು ರಕ್ಷಿಪುದಿಚ್ಛೆ ಮಾಡಲು ।
ಕೆಟ್ಟಕಲ್ಲನು ಬೇಯಿಸಲು ಪಕ್ವಾನ್ನವಾಗುವುದು ॥ ೧೫ ॥

ಗುರುವು ಸ್ವೀಕಾರನನು ಮಾಡಿದ ।
ಶರಣಗೀ ದುಃಖಾರ್ಣವದ ಭವ ।
ತೆರೆವುದೈ ಸುಖಸಾಗರದ ಪರಿ ಮೋಕ್ಷತೆರೆಯಿಂದ ॥
ಹರಿಯ ಕರುಣದಿ ಪಾಂಡವರ ದು- ।
ಶ್ಚರಿತ ಕಷೆ ಬಹು ನಿಂದ್ಯವಾದರು ।
ದೊರಕಿಸಿತಲಾ ಯೋಗ್ಯತೆಯನದು ಭುವನಪಾವನದ ॥ ೧೬ ॥

ಪರಮ ಕರುಣೆಯು ಗುರುನಿವೃತ್ತಿಯು ।
ಕರುಣದೃಷ್ಟಿಯೊಳೆನ್ನ ನೋಡಲು ।
ಹರಿಯಿತಜ್ಞಾನಾಂಧಕಾರವು ಜ್ಞಾನ ಬೆಳಕಾಯ್ತು ॥
ಪರಿಯು ಸಾಕಿದು ಗುರುಮಹಿಮೆಗೆ ।
ಸ್ಮರದಿ ಪ್ರೇಮವು ವರ್ಧಿಸುವುದೈ ।
ಪಿರುವುದೇನೈ ಜ್ಞಾನ ಮೇಣಾ ಮಹಿಮೆ ವರ್ಣಿಸಲು ॥ ೧೭ ॥

ಗುರುಪ್ರಸಾದದಿ ನಿಮ್ಮ ಸಂತರ ।
ಚರಣದರ್ಶನವರಪ್ರಭಾವದಿ ।
ಸರಸಭಗವದ್ಗೀತೆಯರ್ಥವ ಪೇಳ್ದಿ ನಾನೀಗ ॥
ಹರಿಯು ಶ್ರೀಗೋಪಾಲಕೃಷ್ಣನು ।
ಪರಮಮೋಕ್ಷದ ದಾತ ಹದಿನಾ- ।
ಲ್ಕರಲಿ ಸಿದ್ಧಾಂತವನು ಪೇಳ್ದನು ನೆನಪು ನಿಮಗಿಹುದೆ ॥ ೧೮ ॥

ನೂರು ಯಜ್ಞಂಗಳನು ಮಾಡಲು ।
ಸೇರುವನು ಸುರಪತಿಯ ಗದ್ದುಗೆ ।
ಧಾರುಣಿಯಲೀ ಸಿದ್ಧತತ್ತ್ವವ ಸೋಡಲಾ ತೆರವಿ ॥
ಯಾರು ಬ್ರಹ್ಮಜ್ಞಾನ ತಾಳ್ವರೊ ।
ಸೇರುವರು ಮೋಕ್ಷವನು ನಿಜವಲಿ ।
ನೂರು ಜನ್ಮದಿ ಬ್ರಹ್ಮಕರ್ಮವ ಮಾಡಲವ ಬ್ರಹ್ಮ ॥ ೧೯ ॥

ಜ್ಞಾನಿಗೆನೆ ದೊರಕುವುದು ಮೋಕ್ಷವು ।
ಜ್ಞಾನವೆನು ದೊರಕಿಸುವ ಯೋಗ್ಯತೆ ।
ಕ್ಷೋಣಿಯಲ್ಲಾರಿಂಗಿಹುದು ಸಾ ಪೇಳ್ವೆನೊರ್ವನಿಹ ॥
ಕ್ಷೋಣಿಯಲಿ ಹುಗಿದಿಟ್ಟ ವಿತ್ತ- ।
ಶ್ರೇಣಿ ಪಾದಾಳುನಿಗೆ ಯಂಜನ ।
ಮಾನದಿಂ ನೋಡುವರೆ ಯಧಿಕಾರವೆ ಕಣಾನಿಜದಿ ॥ ೨೦ ॥

ಜ್ಞಾನದಿಂ ನಿಜ ಮೋಕ್ಷ ಬರುವುದು ।
ಜ್ಞಾನ ದೊರಕಿದರೇನು ಸ್ಥೈರ್ಯವಿ- ।
ಹೀನನಾದರದೇನು ವ್ಯರ್ಥವಿದಲ್ಲನೇ ನೋಡ್ಯೆ ॥
ಜ್ಞಾನವದು ವೈರಾಗ್ಯವಿಲ್ಲದೆ ।
ಕಾಣೆನಕಟಾ ಸ್ಥಿರವಿದೆನ್ನುತ ।
ಮಾನವಗೆ ವೈರಾಗ್ಯ ಬರುವುದು ಯೆಂತು ನಿಜವಾಗಿ ॥ ೨೧ ॥

ಗೊತ್ತ ಹಿಡಿದಿಹ ಹರಿಯು ಪಾರ್ಥನಿ- ।
ಗುತ್ತರವ ತಾನಿತ್ತನಾಕ್ಷಣ ।
ನಿತ್ಯನಿರ್ಮಲ ಹರಿಯು ಕೇಳ್ ಸರ್ವಜ್ಞನಿರುವನಲಾ ॥
ಮೃತ್ಯುರೂಪದ ವಿಷವದನ್ನದೊ- ।
ಳಿತ್ತೆನುತ ಗೊತ್ತಾಗೆ ತಾನು ವಿ- ।
ರಕ್ತಿಯಿಂ ಭೋಜನವ ಬಡುವನು ತೆರದೊಳಾ ನರನು ॥ ೨೨ ॥

ನಿತ್ಯನೇ ಸಂಸಾರವಿರುವುದ- ।
ನಿತ್ಯವೆಂಬುದ ತಿಳಿದು ಕೇಳ್ವೈ ।
ವಿಿಥ್ಯವದು ನೋಡಿದರೆ ತೋರ್ಪುದು ರಜ್ಜು ಸರ್ಪದೊಲು ॥
ಗೊತ್ತ ಹುಟ್ಟಿದರೀಪರಿಯಲಾ ।
ಮರ್ತ್ಯಸಂತತಿಕರಣದಲ್ಲಿ ವಿ- ।
ರಕ್ತಿಯಿರೆಗಳಿಗೆಯಲಿ ಸೇರ್ವುದು ಬೇಡ ಬೇಡೆನಲು ॥ ೨೩ ॥

ವಿಿಥ್ಯವಿದು ಸಂಸಾರವೆಂಬುದು ।
ತತ್ತ್ವವಿದ ಶ್ರೀಹರಿಯು ಪಾರ್ಥಗೆ ।
ವಿಸ್ತರಿಸನೈ ವೃಕ್ಷರೂಪಕದಿಂದ ಮುಂದಿನ್ನು ॥
ಕಿತ್ತು ಜೇಳಲು ವೃಕ್ಷವೆಲ್ಲವು ।
ಸತ್ತು ಜೇಳ್ವುದು ಬುಡಸಹಿತವೇ ।
ತತ್ತ್ವವಿದು ನಿಜವಲ್ಲ ಸಂಸಾರಕ್ಕೆ ನೋಡಿದರೆ ॥ ೨೪ ॥

ಹರಿಯು ಸಂಸಾರದ ವಿಷಯದಲಿ ।
ಪರಮ ಕುಶಲತೆಯಿಂದ ವೃಕ್ಷದ ।
ನರನರೂಪಕದಿಂದ ವಿಸ್ತರಿಸುವನು ಕೇಳುವುದು ॥

ಹರಿ ಮುಮುಕ್ಷುಗಳಿಂಗೆ ತಾಂ ವಿ- ।
ಸ್ತರಿಸಿ ನಿಜತತ್ತ್ವವನು ಪ್ರೇಮದಿ ।
ಹರಿದು ಬಿಡುವನು ಜನ್ಮಮರಣದ ಪಾಶವನು ಬಿಡದೆ ॥ ೨೫ ॥

ವಿಿಥ್ಯವಿದು ಸಂಸಾರ ತೋರ್ಪುದು ।
ಸತ್ಯ ಶಾಶ್ವತ ಬ್ರಹ್ಮ ನಾನೆಯೆ- ।
ನುತ್ತ ಸಿದ್ಧಾಂತವನು ತೋರ್ಪಧ್ಯಾತ್ಮವಿಷಯವಿದು ॥
ವಿಸ್ತರಿಪೆನಿದ ಸ್ಪಷ್ಟವಾಗಿಯೆ ।
ಯುತ್ತಮೋತ್ತಮ ವಿಷಯ ಗೀತಾ- ।
ಶಾಸ್ತ್ರ ಹದಿನೈದನೆಯದಧ್ಯಾಯದಲಿ ಕೇಳುವುದು ॥ ೨೬ ॥

ಇಂತು ಬಾನೇಶ್ವರನು ತಾನು ವಿ- ।
ನಂಪಿಯನು ಮಾಡಿದನು ಕೂಡಿದ ।
ನಂತಸಜ್ಜನರಿಂಗೆ ನಾದರವಿನಯಪೂರ್ವಕದಿ ॥
ಕಂತುಪಿತನಾನಂದವನಧಿಯ- ।
ನಂತಸಿದ್ಧರ ಪೂರ್ಣ ಚಂದ್ರಮ ।
ನಿಂತು ಕೌಂತೇಯನಿಗೆ ಪೇಳ್ದನು ದ್ವಾರಕಾಧೀಶ ॥ ೨೭ ॥

ನರನೆ ಕೇಳ್ನ ಸ್ವಾತ್ಮರೂಪಕೆ ।
ಒರುವ ನೋಡಲೇ ಯಿದ್ದ ಬರುವುದು ।
ಸುಲಭ ವಿಶ್ವಭಾಸನೆಂಬ ಪ್ರಸಂಗ ನೋಡಿದಿಯಾ ॥
ನರನೆ ನೋಡು ಪ್ರಸಂಗನಲ್ಲಿದು ।
ಮರಸಿಹುದು ವಿಸ್ತಾರವಾಗಿಯೆ ।
ಮರೆಯುವರು ಗೋವರಕೆ ಕಲ್ಪನೆ ಯೊರಿ ಸೊಕ್ಕಿರುದು ॥ ೨೮ ॥

ಬೇರೆ ವೃಕ್ಷದ ವಿಯದಿರಲ್ಕೆ ।
ತೋರುವುದು ವಿಸದೀತಲಕ್ಷಣ ।
ನೇರಲಾರದು ಬುಲೆ ಕೆಳಗಳಿದಿಹುವ ಶಾಖೆಗಳು ॥
ಧಾರುಣಿಯೊಳಿರ ವರ್ಣಿಸಲು ಕೇ- ।
ಳಾರು ಶಕ್ಯರು ಮುನಿವೆ ಯಿದರದ- ।
ಪಾರವಿರುವುದು ನೋಡಿದೆಯೊ ಕೌಂತೇಯ ಮನಗೊಟ್ಟು ॥ ೨೯ ॥

ಪೊವನಿಯುಲ್ಲಿಹ ಗಿಡಗಳೆಲ್ಲವು ।
ಬುಡವ ಕೊಡಲಿಯು ಹಿಡಿದು ಕಡಿದರೆ ।
ಮಡಿವುವಲ್ಲವೆ ಬುಡಸಹಿತ ಪಾಂಡವನೆ ನೋಡಿದಿಯಾ ॥
ಬುಡಕೆ ಬೆಂಕಿಯನಿಟ್ಟು ಸುಟ್ಟರೆ ।
ಗಿಡವೆ ಮಡಿವುದು ಜೆಳೆಯಲಾರದು ।
ಮಡಿಯಲಾರದು ವೃಕ್ಷ ನಿಶ್ವಾಭಾಸನೀರೆರದಿ ॥ ೩೦ ॥

ಬೇರುಗಳ ಕಿತ್ತಿದರೆ ಮರ ವಿ- ।
ಸ್ತಾರವೆಲ್ಲವು ನೆಲಕೆ ಬೀಳ್ವುದು ।
ಬೇರುಸಹಿತವ ಕೀಳುವರೆ ಸಾಮಾನ್ಯ ಮರವಲ್ಲ ॥
ಯಾರು ಬಣ್ಣಿಪರೀಮರದ ವಿ- ।
ಸ್ತಾರ ಕೌತುಕವೆಲ್ಲವನು ಕೇಳ್ ।
ಬೇರು ಸಹಿತವು ಬುಡವು ಮೇಲಾ ಟೊಂಗೆಗಳು ಕೆಳಗೆ॥೩೧।

ಎಷ್ಟು ಯೆತ್ಕರ ಸೂರ್ಯನಿರುವನು ।
ಕಷ್ಟವಲ್ಲೇನಳತಿ ಮಾಳ್ಪರೆ ।
ದೃಷ್ಟಿಸಲು ಕಿರಣಗಳ ಸಂತತಿ ಕೆಳಗಿಳಿದಿಹುದಲಾ ॥
ಸೃಷ್ಟಿಯಲ್ಲೀ ತೆರದಿ ರಂಜಿಪು- ।
ದಿಷ್ಟು ಪರಿಯ ಪ್ರಪಂಚವೃಕ್ಷವು ।
ಯೆಷ್ಟು ಹೇಳಲಿ ಚಿತ್ರತರವೈ ವೃಕ್ಷಲಕ್ಷಣವು ॥ ೩೨ ॥

ಏನಿರುವುದೀ ಜಗದೊಳೆಲ್ಲವು ।
ಕಾಣುವುದು ಸಂಸಾರವೃಕ್ಷದಿ ।
ಕ್ಷೋಣಿಯೆಲ್ಲಚ ವ್ಯಾಪಿಸಿಹುದೈ ಪ್ರಳಯಜಲದಂತೆ ॥
ಬಾನಿನಿಂದಸ್ತಮಿಸೆ ದಿನಮಣಿ ।
ಪೂರ್ಣ ಗಗನದಲಂಧಕಾರವು ।
ತಾನೆ ಹಬ್ಬುವ ತೆರದಲಿದು ಹಬ್ಬಿಹುದು ಸರ್ವತ್ರ ॥ ೩೩ ॥

ತಿನ್ನವರೆ ವೃಕ್ಷದಲಿ ಬೆಳೆಯದು ।
ಹಣ್ಣು ಮೂಸಲು ಹೂವು ಬೆಳೆಯದು ।
ಕಣ್ಣುಮುಂದಿಹುದಿಲ್ಲ ವೃಕ್ಷವೆ ವೃಕ್ಷನೇ ವೃಕ್ಷ ॥
ಉನ್ನತಿಯ ಮೇಲಿಹುದು ಒಡವದು ।
ಛಿನ್ನಮೂಲವಿದಲ್ಲ ಕಾರಣ ।
ಕಣ್ಣಿಗದು ರಂಜಿಪುದು ಲವಲವಿಕೆಯಲಿ ಸಂತತವು ॥ ೩೪ ॥

ಇರುವುದಿದಕಾ ಮೂಲ ಮೇಲಕೆ- ।
ಪರಿಯಿದಾದರು ನಿಜ ನಿರೀಕ್ಷಿಸಿ ।
ಪರಿಕಿಸಲು ಕಾಣುವುದು ಮೂಲವು ಕೆಳಗೆ ಕೌಂತೇಯ ॥
ಇರುವುದೈ ವಿಸ್ತಾರ ಸುತ್ತಲು ।
ಹರಿದಿಹುವ ಪಿಪ್ಪಲವಟಂಗಳ ।
ಪರಿಯಲಾ ಬೇರುಗಳವೃಗಳಲಿ ಟೊಂಗೆ ತೋರುವವು
॥ ೩೫ ॥

ನರನೆ ಕೇಳ್ ಸಂಸಾರವೃಕ್ಷಕೆ ।
ನಿರುತ ಕೆಳಗೆನೆ ಟೊಂಗೆಗಳು ವಿ- ।
ಸ್ತರಿಪೋಪರಿಯಲ್ಲ ಗೆಲ್ಲೆಗಳೆಹುವು ಸರ್ವತ್ರ ॥

ಮೆರೆಯುವುವು ಮೇಲಕ್ಕೆ ಯತಿವಿ- ।
ಸ್ತರದ ಪರಿಪರಿ ಶಾಖೆಗಳು ಹ- ।
ಬ್ಬಿರುವುವಿವು ಗಗನದಲಿ ದಿಶೆದಿಶೆಗಳಲಿ ತೋರುವೆವು ॥ ೩೬ ॥

ಇರುವುದಿದಕಾಕಾಶದಾಶ್ರಯ ।
ಮರುತಿನಂದದೊಳಿರುವುದೀ ಮರ- ।
ವಿರುವುದಿದುವಾಶ್ರಯವು ಸೃಷ್ಟಿಸ್ಥಿತಿಲಯಂಗಳಿಗೆ ॥
ಇರುವುದಥವಾ ಸ್ವಪ್ನಜಾಗರ- ।
ವರಸುಷುಪ್ತಿಸ್ಥಿತಿಗಿದಾಶ್ರಯ ।
ಮೆರೆವುದಿದು ನೋಡಿದರೆ ವಿಶ್ವಾಕಾರವಾಗಿಹುದು ॥ ೩೭ ॥

ಮೇಲೆ ರಂಜಿವುದಿದಕೆ ವೃಕ್ಷಕೆ ।
ಮೂಲವಾಗಿಹ ಬುಡವು ನೋಡು ವಿ- ।
ಶಾಲತರದಿಂ ವಿಸ್ತರಿಪುವೈ ಶಾಖೆಗಳು ಕೆಳಗೆ ॥
ಏಳಹುವು ಕೇಳೀತೆರದಲಿ ವಿ- ।
ಶಾಲ ಚಿತ್ರ ಸುವೃಕ್ಷವಿದಲಾ ।
ಹೇಳಲಾರೆನು ನಿಜದಿ ಬುಡನಡುತುದಿಗಳೆಲ್ಲಿಹುವು ॥ ೩೮ ॥

ಕೆಳಗೆ ನೋದಲು ಬುಡವಿದಾವುದು ।
ಯಿಳೆಯುವುವು ಶಾಖೆಗಳು ಹೇಗೀ- ।
ಯಿಳೆಯೊಳಿವಕೇನಿಹುವು ಶಾಖೆಗಳೆನ್ನ ನೋಡಿದರೆ ॥
ತಿಳಿಯುತೀಪರಿ ಯೆಲ್ಲ ಪಾರ್ಥಗೆ ।
ಜಲಜನಾಭನು ವಿಸ್ತರಿಸಿದನು ।
ಯಿಳೆಯೊಳಿದಕಶ್ವತ್ಥವೆಂಬರು ಯಾತಕೀ ಮರಕೆ ॥ ೩೯ ॥

ಜ್ಞಾನಿಗಳ ಹೃದಯದ ವಿಲಾಸಿಯು ।
ಶ್ರೀನಿವಾಸನು ನಿರ್ಣಯಿಸುತಾ- ।
ಜ್ಞಾನನಿಧಿ ಪಾರ್ಥನಿಗೆ ಪೇಳ್ದನು ಪ್ರೇಮಪೂರ್ವಕದಿ ॥
ಬಾಣತನದಿಂದಾನು ನಿನ್ನಯ ।
ಮಾನಸಕೆ ಒರುವಂತೆ ಪೇಳ್ವೆನು ।
ನೀನು ಕೇಳೈ ನಾವಧಾನದೊಳೆಂದನಾ ಕೃಷ್ಣ ॥ ೪೦ ॥

ನರನೆ ಕೇಳೀ ಧರಣಿಯಲಿ ನೀ- ।
ನಿರುವಿ ಯೊರ್ವನೆ ಕೇಳ್ವ ಚತುರನು ।
ಯಿರುವುದೈ ನಿನಗಿದನು ಕೇಳ್ವಧಿಕಾರ ಕೌಂತೇಯ ॥
ನರನೆ ಸರ್ವಾಂಗದಲಿ ಕಿವಿಗಳ- ।
ನಿರಿಸಿ ಕೇಳೈ ಸಾಗಲಾರದು ।
ಯೆರಡು ಕಿವಿಗಳಶಕ್ತವಿಹುವೈ ಕೇಳ್ವರಿದನೆಲ್ಲ ॥ ೪೧ ॥

ಹರಿಯು ಯಾದವವೀರ ಕೃಷ್ಣನು ।
ನರಸಿಗರುಹಿದನತುಲಪ್ರೇಮದಿ ।
ಸರಸವೀ ಭಾಷಣವ ಕೇಳುತ ಪಾರ್ಥನತಿಭರದಿ ॥
ಹರಿಯ ವಚನವ ಕೇಳಲತ್ಯಾ- ।
ತುರತೆಯಿನು ತೋರಿದನು ನೇತ್ರಕೆ ।
ನರನು ತೋರ್ದನು ಮೂರ್ತಿಯುತವವಧಾನವೆಂಬಂತೆ ॥೪೨॥

ಇರುವುದತಿವಿಸ್ತೀರ್ಣ ಗಗನವು ।
ಪರಿಯಿದಾದರು ದಶದಿಶೆಗಳೀ- ।
ತೆರದ ವಿಸ್ತೃತ ಗಗನಮಂಡಲವಪ್ಪಕೊಂಡಂತೆ ॥

ನರನ ಶ್ರೋತೃತ್ವವು ಕಣಾ ವಿ- ।
ಸ್ತರಿಸಿತೈಯಾಕಾಶದಂತೆಯೆ ।
ಹರಿಯ ಭಾಷಣ ಕೇಳ್ವ ಯೋಗ್ಯತೆ ಬಂತು ಪಾರ್ಥನಿಗೆ ॥ ೪೩ ॥

ಹರಿಯು ಭಾಷಣವೆಂಬ ಶರಧಿಯ- ।
ನಿರದೆ ಯೊಂದಾಚಮನದಿಂದಲೆ ।
ಹರಿದು ಕುಡಿಯುವ ಪಾರ್ಥನೆರಡನೆ ಕುಂಭಸಂಭವನು ॥
ನರನು ಶ್ರವಣಾಸಕ್ತಿ ತೋರಿಸೆ ।
ಹರಿಗೆ ಪರಮಾನಂದವಾಯಿತು ।
ಹರಿಯು ನೀವಾಳಿಸಿದನೈ ಪಾರ್ಥಗೆ ಸಮಾಧಾನ ॥ ೪೪ ॥

ಶ್ರೀಭಗವಾನುವಾಚ—

ಊರ್ಧ್ವಮೂಲಮಧಃಶಾಖಮಶ್ವತ್ಥಂ ಪ್ರಾಹುರವ್ಯಯಮ್ ।
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್ ॥ ೧ ॥

ಹರಿಯು ಮಗುಳಿಂತೆಂದ ಪಾರ್ಥಗೆ ।
ನರನೆ ಬ್ರಹ್ಮವು ವೃಕ್ಷರೂಪವು ।
ಬಿರುವುದೂರ್ಧ್ವವು ವಿಸ್ತರಿಪೆನಿದರರ್ಥವನು ಪಾರ್ಥ ॥
ಕರೆವರೂರ್ಧ್ವವೆನುತ್ತಲಿದನೇ ।
ಬಿರುವುದುಚ್ಚತ್ವ ಶ್ರೇಷ್ಠವನುಸರಿ- ।
ವಿರುವುದೀಪದದರ್ಥ ಸರ್ವೋತ್ತಮವಲಾ ಬ್ರಹ್ಮ ॥ ೪೫ ॥

ಮರದ ಮೂಲಕ ಪೂರ್ಧ್ವತೆಯ ತಾ- ।
ಳಿರುವುದೈ ನಿಜವಾಗಿಯಲ್ಲದೆ ।
ಬಿರುವುದೇನೈ ಮೂಲಮಧ್ಯೋರ್ಧ್ವಗಳು ಭೇದಗಳು ॥
ಭರಿತವಿಹುದೀ ಬ್ರಹ್ಮತತ್ತ್ವವು ।
ನಿರುತ ಶಾಶ್ವತವೆಲ್ಲ ಕಡೆಯಲಿ ।
ಮೆರೆವುದೊಂದೇ ರೂಪ ಭೇದವಿದೆಲ್ಲಿ ನೋಡುವುದು ॥ ೪೬ ॥

ನರನೆ ಕೇಳೈ ತಂತುವಾದ್ಯದಿ ।
ಹೊರಟು ಬರುವುದಕಿಂತ ಹಿಂದ- ।
ಕ್ಕಿರುವ ನಾದಬ್ರಹ್ಮ ಮೂಲದಲಿಲ್ಲವೇ ಹೇಳು ॥
ಸರಸಿಜದ ಮಕರಂದವಾಸವು ।
ಹೊರಡುವುದಕಿಂ ಹಿಂದಿರುವ ಬಹು- ।
ಪರಿಮಳವು ಕೇಳೈ ಧನಂಜಯ ಮೂಲಗಂಧವಲಾ ॥ ೪೭ ॥

ವಿಷಯಸೇವನಕಿಂತ ಮೊದಲೇ ।
ವಸುಮತಿಯಲಾನಂದನಿರುವುದು ।
ಹೆಸರಿದಕೆ ನೋಡೈ ಸ್ವರೂಪಾನಂದ ಕೌಂತೇಯ ॥

ವಸುಮತಿಯೊಳಿದಕಿಲ್ಲಭೇದವು ।
ವಿಷಮಸಮ ಪರವಪರವೆಂಬುದು ।
ಯೆಸೆಯುವುದು ತನ್ನಿಂದ ತಾನೆ ಸ್ವಯಂಪ್ರಕಾಶವಿದು ॥ ೪೮ ॥

ಧರೆಯೊಳಗೆ ನೋಟಕನು ತೋರದೆ ।
ಬಿರುವುದಿದು ಶಾಶ್ವತ ನಿರಂತರ ।
ಮೆರೆಯುವುದು ಸರ್ವತ್ರವಾದರದ್ರಿಶ್ಯ ಜೀರಿಹುದು ॥
ಒರುತ ಮಾಯೋಪಾಧಿಯೋಗದಿ ।
ಒರುವುದಿದಕೈ ನಾಮರೂಪವು ।
ಮೆರೆವುದದರಿಂದಲೆ ಪ್ರಪಂಚವ ನೋಡು ಕೌಂತೇಯ ॥ ೪೯ ॥

ಇರುವುದಿದು ಪರಿಶುದ್ಧ ಜ್ಞಾನವು ।
ಇರದು ಜ್ಞಾತೃಜ್ಞೇಯಭೇದವು ।
ಇರುವುದಿದು ನಿರುಪಾಧಿಕವು ಸುಖರೂಪವೈ ಪಾರ್ಥ ॥
ಇರದು ಕಾರಣಕಾರ್ಯಭೇದವು ।
ಇರದು ವೊಂದೆರಡೆಂಬ ಭೇದವು ।
ಮೆರೆವುದೈ ತನ್ನಿಂದ ತಾನು ಪ್ರಕಾಶರೂಪವಿದು ॥ ೫೦ ॥

ಇರುವುದೀ ಸಂಸಾರವೆಂಬುವ ।
ಮರಕೆ ಮೂಲವು ಪಾರ್ಥ ನೋಡೈ ।
ಯರಿಯಿತೇನೈ ನಿನಗೆಯಂಕುರ ಬರುವ ಪರಿ ಯಿದಕೆ ॥
ಒರಿದೆ ಮಾಯಾಸಂಗವೆಂಜೀ- ।
ಪರಿಯ ಖ್ಯಾತಿಯು ತಟ್ಟಿಹುದು ಕೇಳ್ ।
ಪರಿಕಿಸಲು ವಂಧ್ಯಾತರುಣಿಯಲಿ ಪುತ್ರನಾದಂತೆ ॥ ೫೧ ॥

ಧರಣಿಯಲಿ ಸುವಿಚಾರವಾಗಲು ।
ಮರಣವಪ್ಪುದು ಮಾಯೆಗದರಿಂ- ।
ದರಿಯಲಿದು ಸತ್ತೆಂಬುದೆಂತೈ ನೋಡು ಕೌಂತೇಯ ॥
ತಿರಿಗಿ ಜಗದಲಿ ಕಾರ್ಯರೂಪದಿ ।
ಬರುವುದೈ ಗೋಚರಕೆ ಯದರಿಂ- ।
ದಿರುವುದೆಂತಿದಸತ್ತೆನುತ ನಂಬುವುದು ಕೌಂತೇಯ ॥ ೫೨ ॥

ನರನೆ ಸದಸದ್ಭಾವವೆರಡನು ।
ಹೊರಗಿರಿಸಿ ದ್ವಂದ್ವವನು ವಿೂರಿಹ ।
ಯಿರುವುದು ವಿಲಕ್ಷಣವನಾದಿಯು ತತ್ತ್ವವಿದು ನೋಡು ॥
ಇರುವುದಿದು ಭೂತಾದಿ ತತ್ತ್ವಗ- ।
ಳಿರುವ ಮನೆ ಜಗದಭ್ರಕಿದು ಬಹು- ।
ಪರಿಯಲಾಧಾರವು ಪ್ರಪಂಚದ ಮರಕೆ ಬೀಜವಿದು ॥ ೫೩ ॥

ಇರುವುದೈ ಸಂಸಾರಚಿತ್ರವ- ।
ನಿರಿಸುತಿಹ ಭೂಮಿಕೆಯು ಕೇಳೈ ।
ಭರಿತವಿಹುದಿದು ನಿಖಿಲ ಜ್ಞಾನದ ತೇಜದಿಂ ನಿಜವೆ ॥
ಪರಿಪರಿಯಲೀತೆರದಿ ನಾ ವಿ- ।
ಸ್ತರಿಸಿರುವ ಜಗದಾದಿಮಾಯೆಯು ।
ಹೊರತು ಶ್ರೀಪರಮಾತ್ಮನಿರುವನು ಯೆಂದು ನೀ ನಂಬು ॥ ೫೪ ॥

ತೋರುವೀಜಗ ಜ್ಞಾನದ ವ್ಯಸ- ।
ಹಾರವೆಲ್ಲ ನಿರೀಕ್ಷಿಸಲು ಸುವಿ- ।
ಚಾರ ಪೇಳ್ವುದು ಸರ್ವವಿದು ಪರಮಾತುಮನ ತೇಜ ॥
ಧಾರುಣಿಯಲೀ ಪರಿಯ ಜ್ಞಾನವ ।
ಜಾರದೇತಕೆನುತ್ತಲೆನ್ನ ವಿ- ।
ಚಾರಿಸಲು ನಾ ಪೇಳ್ವೆ ದೃಷ್ಟಾಂತವನು ನಿನಗೊಂದ ॥ ೫೫ ॥

ನರನು ನಿದ್ರಾಭರದಿ ಮಲಗಲು ।
ಬರುವುದಮನಿಗೆ ಜ್ಞಾನಶೂನ್ಯತೆ ।
ತರುವುದಲ್ಲೈ ಕಜ್ಜಳೆಯು ದೀಪಕ್ಕೆ ಮಂದತ್ವ ॥
ನರನು ಸ್ವಪ್ನದೊಳೆರಲು ಕಲ್ಪಿತ- ।
ತರುಣಿ ಬಂದಪ್ಪಲಿ ಪುರುಷನೊ- ।
ಳೆರದೆ ಕಾಮೋದ್ರೇಕ ಮಾಳ್ಪಳು ತರುಣಿ ನಿಜನಿಮಳೆ ॥ ೫೬ ॥

ನರನೆ ಕೇಳೀ ತೆರದಿ ಬ್ರಹ್ಮನೊ- ।
ಳೆರದೆ ಮಾಯಾವೇಶವಾಗಲು ।
ಬರುವುದಾಚ್ಛಾದನವು ಕೇಳೈ ಬ್ರಹ್ಮರೂಪಕ್ಕೆ ॥

ಅರಿಯದಿಹುದು ನಿಜಸ್ವರೂಪವ ।
ಮರೆಯುವುದು ಬ್ರಹ್ಮಸ್ವರೂಪವ- ।
ನಿರುವುದಿದು ಸಂಸಾರವೈಕ್ಷದ ಮೊದಲನೆಯ ಮೂಲ ॥ ೫೭ ॥

ಬರಲು ಮಾಯಾವರಣ ಬ್ರಹ್ಮದಿ ।
ಬರುವುದೈ ವಿಸ್ಮರಣ ರೂಪಕೆ- ।
ಬರುವುದದರಿಂ ಪ್ರಥಮ ಕಂದ ಸ್ವರೂಪ ಮೂಲಕ್ಕೆ ॥
ಕರೆವರಿದ ಸಂಸಾರವೆಂಬುವ- ।
ಮರದ ಬೀಜವೆ ಯೆಂದು ತಜ್ಜ್ಞರು- ।
ಮೆರೆಸುವರು ವೇದಾಂತಿಗಳು ಕೇಳ್ ಸಿದ್ಧತತ್ತ್ವವಿದು ॥ ೫೮ ॥

ನರನೆ ನೋಡು ಸುಷುಪ್ತಿಭಾವವ ।
ಮೆರೆವ ಘನವಜ್ಞಾನಬೀಜಾಂ- ।
ಕುರವೆನುವರೈ ಕೋವಿದರು ನೋಡಿದಿಯೊ ಕೌಂತೇಯ ॥
ಪರಿಣಮಿಸುವುವು ಸ್ವಪ್ನಜಾಗರ- ।
ವೆರಡು ಪರಿಗಳವಸ್ಥೆ ಯವನೇ ।
ಕರವರೈ ಫಲವೆನುತ ನಿಗಮಾಗಮಗಳೇ ನಿಜದಿ ॥ ೫೯ ॥

ಪರಿಪರಿಯಲೀ ಮಾಯೆಯನು ವಿ- ।
ಸ್ತರಿಸಿಹುವು ನಿಗಮಾಗಮಂಗಳು ।
ನರನೆ ತಿಳಿ ಸಂಸಾರವೃಕ್ಷಕೆ ಮೂಲವಜ್ಞಾನ ॥
ನಿರುತ ನಿರ್ಮಲ ಬ್ರಹ್ಮರೂಪವೆ ।
ಯಿರುವನೈ ನಿಜವಾತ್ಮನವನೊಳು ।
ಬರುತ ಮಾಯೆಯು ಬೇರ ಬಿಡುವಳು ಮೇಲೆಕೆಳಗೆಲ್ಲ ॥ ೬೦ ॥

ಹೊರಡಲೀಪರಿ ಬೇರು ಮಾಯಾ- ।
ವರಣದಲಿ ನೀರುಂಡು ಬಲವ- ।
ತ್ತರದಿ ಬೆಳವುವನಂತ ದೇಹಗಳಧರ ಭಾಗದಲಿ ॥
ಬರುವುನೈ ಮೊಳಕೆಗಳು ನಾಲುಕು ।
ಪರಿಯಲೀ ವೃಕ್ಷಕ್ಯನಂತರ ।
ಬರುನ್ನದ್ದೈ ಬಲಶಕ್ತಿ ಕೇಳು ಪ್ರಪಂಚವೃಕ್ಷಕ್ಕೆ ॥ ೬೧ ॥

ಮೂಲನಿದಕಾ ಬ್ರಹ್ಮವದರಿಂ- ।
ದೇಳುವುದು ಗಿಡ ಬಹಳ ಭರದ- ।
ಲ್ಲೇಳುವುದು ಮೊಳಕೆಯಲಿ ಜ್ಞಾನಾಂತಃಕರಣವೃತ್ತಿ ॥
ಹೇಳಲೇನದಸಿನುವೆ ತೋರ್ಪ ವಿ ।
ಶಾಲ ಕೋಮಲವೆಲೆಯು ಗಿಡದಲಿ ।
ಮೇಲೆ ತ್ರಿಗುಣಾತ್ಮಕ ತ್ರಿಪರ್ಣವು ಹುಟ್ಟುವುದು ನೋಡೈ ॥ ೬೨ ॥

ಬುದ್ಧಿರೂಪದ ಶಾಖೆ ಹುಟ್ಟುತ ।
ವೃದ್ಧಿ ಮಾಳ್ಪುದು ಭೇದರೂಪವ- ।
ನಾರ್ಯತನವನು ತಂದು ಮನಶಾಖೆಯನು ಪೋಷಿಪುದು ॥
ಇದ್ದ ಕಾರಣ ಮೂಲ ದೃಢತರ ।
ಶುದ್ಧ ರಸವು ವಿಕಲ್ಪನಿದರಿಂ- ।
ದೆದ್ದುಚಿತ್ತ ಜತುಷ್ಪಯಗಳಾಗುವುವು ಟೊಂಗೆಗಳು ॥ ೬೪ ॥

ವೃಥ್ವಿಸಲಿಲಾದಿಕಗಳೈದೀ- ।
ತತ್ತ್ವಗಳು ಹೊರಡುವುವು ಕೊರಡುಗ- ।
ಳೆತ್ತರವು ಬೆಳೆವುವು ಕಣಾ ಬಹು ಸರಳಸ್ಥೂಲಗಳು ॥
ಶ್ರೋತ್ರಾದಿಂದ್ರಿಯಂಗಳು ।
ಸುತ್ತ ಹುಟ್ಟುವುವೆಲ್ಲ ಶಾಖೆಗ- ।
ಳುತ್ತರೋತ್ತರ ಪಲ್ಲವಗಳಾ ವಿಷಯುಗಳು ಪಾರ್ಥ ॥ ೬೫ ॥

ಹೊರಟು ಶಬ್ದಾಂಕುರವು ಕಿವಿ ಯೆಂ- ।
ಬುರುತರದ ಶ್ರವಣೇಚ್ಛೆ ಕೊಡುವುದು ।
ಮರಳಿಯಂಗತ್ವಕ್ಕು ಸ್ಪರ್ಶದ ವಲ್ಲಿಪಲ್ಲವವು ॥
ಪರಿಪರಿಯುಲಿ ವಿಚಾರ ಪುಟ್ಟುತ ।
ಬರುವುದೈ ಕೇಳ್ ರೂಪಪಲ್ಲವ ।
ತಿರುಗುವುದು ಭ್ರುವುದಿಂದ ನೇತ್ರವು ರೂಪ ಭೋಗಿಸಲು॥೬೫॥

ಹುಟ್ಟಿ ರಸಶಾಖೆಗಳು ಬೇಗದಿ ।
ವಿಸ್ತರಸದುಪಭೋಗ ರಸನೆಯು ।
ಮುಟ್ಟ ತಿನುವುದು ಗಂಧವೆಂಬುವ ಪೊಳಿಕೆ ಹುಟ್ಟುವುದು ॥
ಮುಟ್ಟಿ ನೂಗಿನ ತುದಿಯು ಲೋಭವ ।
ಹುಟ್ಟಿಸುವದೈ ನೋಡು ಪಾರ್ಥನೆ ।
ಯಷ್ಟಧಾ ಪ್ರಕೃತಿಯ ಸ್ವರೂಪವು ಹುಟ್ಟುವುದು ನೋಡೆ
॥ ೬೬ ॥

ನರನೆ ಕೇಳೆಂಟು ಪ್ರಕಾರದಿ ।
ಪರಿಪರಿಯ ರೂಪದಲಿ ವೃಕ್ಷವು ।
ಬರುವುದಲ್ಲೈ ಮೇಲೆಮೇಲೀ ತೆರದಿ ಸಂಸಾರ ॥
ನರನೆ ಸಂಪಿಯು ವೊಳಗೆ ಕಾಣು- ।
ತ್ತಿರುವ ರೂಪವು ಸಿಂಪಿಯಸ್ಟೇ ।
ಯಿರುವುದಲ್ಲವೆ ಸಾಗರದ ತೆರೆ ಯದುನೆ ಸಾಗರವು ॥ ೬೭ ॥

ನರನೆ ಕೇಳಾ ಜ್ಞಾನದಿಂ ಜಗ- ।
ಕಿರುವುದೈ ವಿಸ್ತಾರವದರಿಂ- ।
ದಿರುವುದಾಕಾರಣದಿ ವಿಶ್ವವೆ ವೃಕ್ಷಬ್ರಹ್ಮವದು ॥

ನರನು ಸ್ವಪ್ನಾವಸ್ಥೆಯಲ್ಲಿರೆ ।
ಭರದಿ ನೋಡುವ ವಸ್ತುತಾನಾ- ।
ಗಿರುವನಲ್ಲವೆ ಪಾರ್ಥನೋಡೈ ತತ್ತ್ವಮನಗೊಟ್ಟು ॥ ೬೮ ॥

ಪರಿಪರಿಯಲೀ ತೆರದ ಬಹುವಿ- ।
ಸ್ತರವು ಸಾಕು ವಿಚಿತ್ರ ವೃಕ್ಷವು ।
ಯಿರುವುದಚ್ಚರಿಯೈ ಮಹತ್ತತ್ತ್ವಾದಿ ಪಲ್ಲವವ ॥
ಹೊರಡುವುವಧಃಶಾಖೆ ಬಹುಪರಿ ।
ಕರೆವರಿದನಶ್ವತ್ಥವೆನುತಲಿ ।
ಯರುಹುವೆನು ಕೋವಿದರು ಯಾಕೀ ಹೆಸರನಿಟ್ಟರು ॥ ೬೯ ॥

ಮರುದಿನಸಸರ್ಯಂತ ಶಾಶ್ವತ- ।
ವಿರದ ವಸ್ತುವಿದೆಂದು ತಜ್ಜ್ಞರು ।
ಕರೆವರಿದನಶ್ವತ್ಥ ಸಂತತ ಭಿನ್ನರೂಪವಿದು ॥
ಪರಿಪರಿಯು ರೂಪಗಳನೆಲ್ಲವ- ।
ನರೆಗಳಿಗೆಯಲಿ ಮಾಯೆ ಧರಿಸುವ ।
ಪರಿಯ ನೋಡಲು ಯೋಗ್ಯವಿಹುದಶ್ವತ್ಥ ಹೆಸರಿದಕೆ ॥ ೭೦ ॥

ಪರಿಪರಿಯ ವರ್ಣಗಳ ಮೇಘವ ।
ಧರಿಸುವುದು ನೀ ನೋಡಲಿಲ್ಲವೆ ।
ಯಿರುವುದೇ ಸ್ಥಿರವರೆಗಳಿಗೆಯಾದರು ಕಣಾ ಮಿಂಚು ॥
ನರನು ವ್ಯಾಕುಲಚಿತ್ತನಾದರೆ ।
ಸ್ಥಿರವಿರುವುದೇ ಮನವು ಕೇಳಾ- ।
ನರಗೆ ಜಲ ಸ್ಥಿರವಿಹುದೆ ಕಮಲದ ಪತ್ರದಲಿ ಪಾರ್ಥ ॥ ೭೧ ॥

ಪರಿಯಿದೈ ಸಂಸಾರವೆಂಬುವ ।
ಮರವು ಸಾವುದು ನಿಮಿಷನಿಮಿಷಕೆ ।
ಕರೆವರಾದುದರಿಂದಲಿದನಶ್ವತ್ಥನಾಮದಲಿ ॥
ಧರೆಯೊಳಗೆ ವ್ಯವಹಾರದಲ್ಲೀ- ।
ಮರವ ಪಿಪ್ಪಲವೆಂದು ಕರೆವರು ।
ನರನೆ ಕೇಳೀ ಮಾತು ಗೌಣವು ನನ್ನ ಮತದಿಂದ ॥ ೭೨ ॥

ಧರೆಯೊಳಗೆ ಲೌಕಿಕದ ಮಾತಿಲಿ ।
ಕರೆವರಿದನಶ್ವತ್ಥವೆನುತಲಿ ।
ಮರವು ಪಿಪ್ಪಲವಲ್ಲ ಕೃಷ್ಣನ ಮತದ ಮಾತಲ್ಲ ॥
ಇರುವುದೆನಗಾ ಲೌಕಿಕದ ಪರಿ- ।
ಯರುಹ ಬೇಕೆಂದಿಚ್ಛೆಯಾದರು ।
ತಿರುಗಿಸಿದೆ ನಾ ಮತವ ಗ್ರಂಥದ ಲೌಕಿಕವ ನೋಡಿ ॥ ೭೩ ॥

ಇರುವುದೇನೀ ಗ್ರಂಥ ಲೌಕಿಕ ।
ಭರದಿ ಭಗವದ್ಗೀತೆ ಸಾಹ್ಯ- ।
ದ್ಧರಿಯ ಬಾಯಿಂ ಸೂಸುತಿರುವಧ್ಯಾತ್ಮಪೀಯೂಷ ॥
ಇರುವುದೀ ಸಂಸಾರ ಕ್ಷಣಭಂ- ।
ಗುರವೆನುತ್ತಲಿ ಕೃಷ್ಣನರಿತೀ- ।
ಪರಿಯ ಹೆಸರನು ಕೊಟ್ಟನೈ ಯಶ್ವತ್ಥವೇ ನಿಜವು ॥ ೭೪ ॥

ಇರುವುದವ್ಯಯವೆಂಬ ಹೆಸರೀ- ।
ಮರಕೆ ನಿತ್ಯವಿದಾದ ಕಾರಣ ।
ನರನೆ ನಿನಗಾಂ ಪೇಳ್ವೆ ಗರ್ಭಾರ್ಥವನು ನೋಡಿದಿಯಾ ॥
ಶರಧಿಯನು ಶೋಷಿಪುವು ಮೇಘಗ- ।
ಳೆರಡನೆಯ ಕಡೆ ನದಿನದಂಗಳು ।
ಬರುತಲೊಂದೇ ಸಮನೆ ಸೇರುತಲಿಹುವು ಶರಧಿಯಲಿ॥೭೫॥

ನೀರನಾ ಮೇಘಗಳು ಶೋಷಿಸೆ ।
ಬಾರದೈ ಶರಧಿಗೆ ವಿನಾಶವು ।
ಸೇರುತಿಹ ನೀರಿಂದ ಶರಧಿಗೆ ಪೂರ ಬಾರದಲಾ ॥
ತೋರುವುದು ಸಂತತದಿ ಪೂರ್ಣವೆ ।
ಧಾರುಣಿಯೊಳೀ ಶೋಷಣವು ನದಿ ।
ಸೇರಿ ಶೋಷಣವಾಗಿ ಸಂಪೂರ್ಣವು ಕಣಾ ಶರಧಿ ॥ ೭೬ ॥

ಪರಿಯಲೀ ಸಂಸಾರವೆಂಬುವ ।
ಮರಕೆ ಜನ್ಮವು ಮರಣವೆಂಬೀ- ।
ಯೆರಡವಸ್ಥೆಗಳೀನ ಹೇಳಲಿ ತ್ವರೆಯಲಾಗುವುವು ॥
ಅರಿಯಲಾರರು ಸೃಷ್ಟಿಲಯವನು ।
ಕರೆವರವ್ಯಯವೆನುತಲದರಿಂ- ।
ದಿರದು ವ್ಯಯವೆಂಬೀತೆರದ ಹೆಸರಾಯ್ತು ಕಲಿಪಾರ್ಥ
॥ ೭೭ ॥

ದಾನಶೀಲನು ಪುರುಷ ರೊಕ್ಕದ ।
ಹಾನಿ ಮಾಡುತ ದಾನ ಮಾಡಿ ನಿ- ।
ದಾನವನು ಪುಣ್ಯಾರ್ಜನವ ತಾಂ ಮಾಡುವಂದದಲಿ ॥
ಕ್ಷೋಣಿಯಲ್ಲೀ ವೃಕ್ಷ ಸಂತತ ।
ಮಾನವರ ದೃಷ್ಟಿಯಲಿ ಸ್ಥಿತಿಲಯ ।
ಕಾಣದಲೆ ಪೇಳುವರು ನಿತ್ಯವಿದೆನುತ ಲೋಕದಲಿ ॥ ೭೮ ॥

ಅತಿಭರದಲೋಡುತ್ತಲಿರುತಿಹ ।
ರಥದ ಚಕ್ರವ ನೋಡೆ ದೃಷ್ಟಿಗೆ ।
ಗತಿಸದಲೆ ಸ್ಥಿರವೆನುತ ತೋರ್ಪುದು ನೋಡಿದಿಯೊ ಪಾರ್ಥ ॥

ಸ್ಥಿತಿಯಲೀ ತೆರನಾಗಿ ಪ್ರಾಣಿಗ- ।
ಳತಿತ್ವರದಿ ಹುಟ್ಟುವುವು ಸಾಯ್ವುವು ।
ಮತಿಗೆ ತೋರುವುದೊಂದೆ ತೆರದಲಿ ನಡೆದಿಹುದು ವಿಶ್ವ ॥೭೪॥

ನರನೆ ಕೇಳಾವಾಧಮಾಸದೊ- ।
ಳೆರದೆ ಗಗನದಿ ಮೋಡ ಬಹುಪರಿ ।
ಬರುವವಾಪರಿ ಸುರಿಯುವುವು ಮಳೆ ಗಣನೆ ಯಿಲ್ಲದಲೆ ॥
ಅರಿಯ ಬಹುದೇ ಬಂದುದಾವುದು ।
ಸುರಿದುದಾವುದು ಲೆಕ್ಕಮಾಳ್ಪರೆ ।
ಯಿರುವುದೇನೈ ಸಾಧ್ಯ ಗಗನದಿ ಮೇಘ ತುಂಬಿಹುದು ॥ ೭೦ ॥

ಬಂದುದಾವುದು ಹೋದುದಾವುದು ।
ನಿಂದುದಾವುದು ಶಾಖೆ ಯೆಂಬುದು ।
ಬಂದವುದೆ ಮಾನವನ ದೃಷ್ಟಿಗೆ ತೋರ್ಪುದವ್ಯಯವು ॥
ತಿಂದು ಪ್ರಳಯಾಂತದಲಿ ವೃಕ್ಷದಿ ।
ಬಂದ ತೊಂಗೆ ಶರೀರಗಳು ತ- ।
ನ್ಮಿಂದ ತಾವೇ ಸಾಯುವುವು ಬೇಳುವುವು ಮರದಿಂದ ॥ ೭೧ ॥

ಮರಳೆ ಜಗದುತ್ಪತ್ತಿಯಾಗಲು ।
ಬರುವುದು ನವಾಂಕುರವು ನೋಡೈ ।
ಯಿರುವನೈ ಸಂಹಾರ ಕಾಲನು ಗಾಳಿಯೊ ಮರಕೆ ॥
ಉರುಳಿಸುವನೈ ದೇಹಶಾಖೆಯ- ।
ನಿರದೆ ಪ್ರಳಯಾಂತದಲಿ ಪುನರಪಿ ।
ಬರುವುದೈ ನವಪಲ್ಲವಾಂಕುರ ಕಲ್ಪವಾದಿಯಲಿ ॥ ೭೨ ॥

ಒಂದು ಮನ್ವಂತರದ ಶಾಖೆಯು ।
ಬೆಂದು ಬೀಳಲು ಬರುವುದೆರಡನೆ ।
ಮುಂದೆ ಮನ್ವಂತರವು ನಿಜವಿದು ನೋದ ಕೌಂತೇಯ ॥
ಚಂದ್ರಸೂರ್ಯಾನ್ವಯಗಳೀಪರಿ ।
ಹೊಂದುವುವು ಸುಂದರ ಸುಪಲ್ಲವ ।
ಮುಂದೆ ಬಿಳೆವುದು ಕಬ್ಬುಗಂಟಿನ ತೆರದಿ ಕೌಂತೇಯ ॥ ೭೩ ॥

ಕಲಿಯುಗಾಂತದಿ ದೇಹವೆಂಬೀ- ।
ಯೆಲೆಗಳುದುರುವುವೈ ಸುನಿಶ್ಚಿತ ।
ವೆಲೆಗಳೆಲ್ಲವು ಚಿಗಿಯುವುವು ಕೃತಯುಗದಿ ಕೌಂತೇಯ ।
ಪಳಪಳಿಟಿಕೆ ದಿನವರ್ಷವೀ ಪರಿ- ।
ಯಲಿ ಕಣಾ ಹೋಗುವುವು ಬರುವುವು ।
ತಿಳಿವರಾರೀ ವೃಕ್ಷ ಬೆಳೆಯುವ ಪರಿಯ ಕಲಿಪಾರ್ಥ ॥ ೭೪ ॥

ಗಾಳಿಯೊಂದೇಸಮನೆ ಜೀಸಲು ।
ಹೇಳ ಬಹುದೇ ಬಂದುದಾವುದು ।
ಮೇಲೆ ಹೋದುದು ಯಾವುದೆಂಬುದ ತಿಳಿಯ ಬಹುದೇನೈ ॥
ಹೇಳಲಾಗದುಯೆಷ್ಟು ದೇಹವು ।
ಬೀಳುತಿಹುದುತ್ಪತ್ತಿಯಪ್ಪುದು ।
ಬೀಳಲೊಂದೆಲೆ ಹುಟ್ಟುವುವು ಹತ್ತೆಲೆಗಳೈ ಪಾರ್ಥ ॥ ೬೫ ॥

ಮುಂದೆ ಹರಿಯಲು ನದಿಯ ನೀರದು ।
ಹಿಂದೆಯೊಂದೇಸಮನೆ ನೀರೇ ।
ಬಂದು ಸೇರಿ ಪ್ರವಾಹವೊಂದಾಗುವುದು ನೋಡಿದಿಯಾ ॥
ಸಂದಣಿಸುತೀಪರಿಯಲಾ ನದಿ- ।
ಯೆಂದಿಗಾದರು ನಾಶವಾಗದು ।
ಬಂದುದಲ್ಲನೆ ಸ್ಥಿರತೆ ಯವ್ಯಯತೇಯೆ ಕೌಂತೇಯ ॥ ೬೬ ॥

ನಾಶವಿದ್ದರು ನೋಡು ಮರಕಾ- ।
ಭಾಸವಪ್ಪುದು ಸ್ಥಿರವಿದೆನುತಲಿ ।
ಯೇಸು ಪ್ರಾಣಿಸಮೂಹ ನಿಮಿಷದಿ ಸತ್ತು ಹುಟ್ಟುವುವು ॥
ಆಸಮುದ್ರದ ಮೇಲೆ ತೆರೆಗಳು ।
ನಾಶವಾಗುತ ಹುಟ್ಟಿ ಬರುವುವು ।
ಭಾಸವಾಗುವುದಲ್ಲನೇ ನಿತ್ಯತ್ವ ತೆರೆಗಳಲಿ ॥ ೬೭ ॥

ಕಾಗೆಗಿರುವುದು ದೃಷ್ಟಿ ಯೇಕವು ।
ವೇಗದಿಂದದ ತಿರುಗಿಸಿದ ಸ- ।
ದ್ಯೋಗದಿಂದಲಿ ಯೆರಡು ದೃಷ್ಟಿಗಳೆಂತ ತೋರುವುದು ॥
ಸಾಗಲಾರದೆ ಬುದ್ಧಿ ತಿಮಿರದ ।
ಯೋಗದಿಂ ಶಾಶ್ವತವಿದಲ್ಲದ ।
ಭೋಗಯುತ ಸಂಸಾರ ನಿತ್ಯವೆನುತ್ತ ಪೇಳುವರು ॥ ೬೮ ॥

ತ್ವರಿತದಿಂದಾ ಬೊಗರಿ ತಿರುಗಿಸೆ ।
ತಿರುತಿರುಗುತಿಹ ಬೊಗರಿ ಕಣ್ಣಿಗೆ ।
ಸ್ಥಿರವಿರುವುದೆಂಬಂತೆ ತೋರ್ಪುದು ವಿಶ್ವದೀ ಪರಿಯು ॥
ಉರಿವ ಕೊಳ್ಳಿಯನೊಂದ ಮಾನವ ।
ಕರದಿ ಹಿಡಿಯುತ ತ್ವರಿತದಿಂದದ ।
ತಿರುಗಿಸಲು ಸ್ಥಿರಚಕ್ರದಂದದಿ ತೋರ್ಪುದೈ ಬೆಂಕಿ ॥ ೬೯ ॥

ನರನೆ ಕೇಳ್ ಸಂಸಾರವೃಕ್ಷವು ।
ಭರದಿ ನಾಯ್ವುದು ಹುಟ್ಟುವುದು ಯೀ- ।
ತೆರದಿ ಜನನವಿನಾಶವಿದ್ದರು ನಿತ್ಯವೆನ್ನುವರು ॥
ಅರಿಯುತೀ ಸಂಸಾರವೃಕ್ಷದ ।
ಪರಮವೇಗವ ಮನದಿ ಪಾರ್ಥನೆ ।
ಯಿರುವುದಿದುವತಿ ಕ್ಷಣಿಕವಿದರಲಿ ಭರವಸವನಿಡದೆ ॥ ೭೦ ॥

ಅರೆಗಳಿಗೆಗೆ ಯಿಹ ನಾಶಜನನಲ- ।
ಹರಿಗಳಿರುವುವು ಕೋಟ್ಯನಧಿ ಯಿದ- ।
ಕರಿತಿದನು ಸಂಹರಿಸುತಜ್ಞಾನಾಂಧಕಾರವನು ॥
ಇರುವುದೀ ಸಂಸಾರ ಮಿಥ್ಯವು ।
ಯಿರುವೆನ್ನೆ ನಾ ಸತ್ಯ ನಿತ್ಯನೆ ।
ಯರಿವನೀಪರಿ ಮರವನಾಮೂಲಾಗ್ರಪರ್ಯಂತ ॥ ೭೧ ॥

ಪುರುಷನವನೇ ಜ್ಞಾನಿ ಯೆನಿಸುವ ।
ಧರೆಯಲಿದನೇ ಜ್ಞಾನವೆನುವರು ।
ಪುರುಷನಾತನು ಶ್ರುತಿಯು ಸಿದ್ಧಾಂತಕ್ಕೆ ವಂದ್ಯನಿಪ ॥
ದೊರೆವುದವನಿಗೆ ಯೋಗನಲವೈ ।
ಯರುಹಲೇನಾ ಯೋಗಬಲದಿಂ ।
ಬರುಪುದೈ ಜ್ಞಾನಕ್ಕೆ ಜೀವನ ನೋಡು ಕೌಂತೇಯ ॥ ೭೨ ॥

ಪರಿಪರಿಯಲೀ ತೆರದ ಬಹು ವಿ- ।
ಸ್ತರವು ಸಾಕೈ ಪಾರ್ಥ ನಿನಗಾ- ।
ನೊರೆವೆನೊಂದೇ ಮಾತಿನಲಿ ನಿಜಗುಹ್ಯತತ್ತ್ವವನು ॥
ಅರಿವನಾರು ಪ್ರಪಂಚವೃಕ್ಷದಿ ।
ಸ್ಥಿರತೆಯಿಲ್ಲವೆನುತ್ತಲವನೇ ।
ಯಿರುವನೈ ಸುಜ್ಞಾನಿ ವರ್ಣಿಸಲಾರೆ ಬಾಯಿಂದ ॥ ೭೩ ॥

ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾ ಗುಣಪ್ರವೃದ್ಧಾ ವಿಷಯಪ್ರವಾಲಾಃ ।
ಅಧಶ್ಚ ಮೂಲಾನ್ಯನುಸಂತತಾನಿ ಕರ್ಮಾನುಬಂಧೀನಿ ಮನುಷ್ಯಲೋಕೇ ॥ ೨ ॥

ನರನೆ ಕೇಳು ಪ್ರಪಂಚವೃಕ್ಷಕೆ ।
ಬರುವುದೈ ಕೆಳಗಿಳಿದು ಶಾಖೆಗ- ।
ಳೆರದೆ ನೆಲದಲಿ ಸೇರುವುವು ಕೌಂತೇಯ ನೋಡಿದಿಯಾ ॥
ಮರಳಿ ಶಾಖೋತ್ಪತ್ತಿಯಾಗುತ ।
ಸರಳವಾಗಿಯೆ ಮೇಲಕೇಳುತ ।
ಮೆರೆವುವೈ ದಿಶೆದಿಶೆಗೆ ಕೇಳೈ ಪಾರ್ಥ ಮನಗೊಟ್ಟು ॥ ೪ ॥

ಕೆಳಗೆ ಬಂದಿಹ ಮೂಲ ವೊಡೆಯುತ ।
ಮೊಳಕೆಯೊಡೆಯುತ ಬಳ್ಳಿ ಹಬ್ಬುತ ।
ಬೆಳೆಯುತಿರುವುವು ನೆಲದಲೆಲೆಗಳು ಹಲವು ಪರಿಯಾಗಿ ॥
ತಿಳಿಸಿ ಹೇಳಿದೆ ನಿನಗೆ ಮೊದಲು ।
ಲ್ಲೆಲೆ ಧನಂಜಯ ಮತ್ತೆ ಪೇಳುವೆ ।
ನಿಳೆಯಲೀ ಯಜ್ಞಾನಮೂಲವು ಗಡ್ಡೆ ಕಟ್ಟಿಹುದು ॥ ೪೫ ॥

ಹೊರಡುತಿದರಿಂದೆಂಟು ರೂಪದ ।
ಪರಿಪರಿಯಲಾ ಪ್ರಕೃತಿ ಹುಟ್ಟುತ ।
ಬರುವುದೈ ಸುಜ್ಞಾನವೆಂಬೀ ನಿಜಿದ ವನನಿಚಯ ॥
ಬರುವುವೈ ಸ್ವೇದಜ ಜರಾಯುಜ ।
ಮೆರೆಯುವುದ್ಭಿದವಂಡಜಗಳೀ- ।
ಪರಿಯ ನಾಲುಕು ಕೊರಡುಗಳು ನೋಡಿಲ್ಲಿ ಹುಟ್ಟುವುವು ॥ ೪೬ ॥

ಬರುಬರುತ ಕೊರಡುಗಳು ಬೆಳೆಯಲು ।
ಬರುವುವೆಂಭತುನಾಲ್ಕು ಲಕ್ಷದ ।
ಪರಿಪರಿಯ ಯೋನಿಗಳು ಕೇಳಿವು ಪರ್ಣಶಾಖೆಗಳು ॥
ಬರುವುವೈ ಯುಪಶಾಖೆಗಳು ಕೇಳ್ ।
ಮೆರೆವ ಜೀವಿಗಳಾಗಿ ತೋರ್ಪುವು ।
ಸರಳ ಕೊಂಬೆಗಳಾಗಿ ತೋರ್ಪುವು ಜಾತಿಯುಪಜಾತಿ ॥೪೭॥

ಮರಳಿ ಸ್ತ್ರೀಪುರುಷಾದಿ ಲಿಂಗಗ- ।
ಳಿರದೆ ಭೇದಗಳಾಗಿ ಪರಿಪರಿ ।
ಯಿರುವ ವಿಷಯದ ಭಾರದಿಂದಲೆ ತುಂಬಿ ತುಳಕುವುವು ॥
ಪರಿಪರಿಯ ಮೇಘಗಳು ಗಗನದಿ ।
ಬರುವುವೈ ವರ್ಷರ್ತುಕಾಲದಿ ।
ತೆರದಲೀಯಜ್ಞಾನದಿಂ ಪರಿಪರಿಯ ಜಾತಿಗಳು ॥ ೪೮ ॥

ಹುಟ್ಟುವ್ರವು ಜಾತಿಗಳು ಲೆಕ್ಕವ- ।
ನೆಷ್ಟು ಮಾಡಲಿ ಬಳ್ಳಿರೂಪದಿ ।
ಸೃಷ್ಟಿಯಲ್ಲೀ ತೆರದಿ ವೃಕ್ಷವು ರಾಜಿಸುತ್ತಿಹುದು ॥
ಘಟ್ಟಿಯಾಗೀ ತ್ರಿಗುಣರೂಪದ ।
ಕೆಟ್ಟಗಾಳಿಯು ಹುಟ್ಟಿ ಬೀಸಲು ।
ವೊಟ್ಟುಗೂಡಿ ಪರಸ್ಪರದ ಸಂಘಟನೆಯಾಗುವುದು ॥ ೪೯ ॥

ವೃದ್ಧಿಯಾಗಲು ತ್ರಿಗುಣಸಂತತಿ ।
ಯೂರ್ಧ್ವಮೊಲದ ವೃಕ್ಷಕೇಳ್ವುವು ।
ಮಧ್ಯನಂತಾದಿಗಳು ಮೂರು ಪ್ರಕಾರಗಳು ಪಾರ್ಥ ॥

ವೃದ್ಧಿಯಾಗೆ ರಜೋಗುಣದ ನೆರೆ ।
ಯೆದ್ದು ಮಾನವಜಾತಿಶಾಖೆಯು ।
ವರ್ಧಿಪುದುಮಧ್ಯದಲಿ ಸರ್ವ ಮನುಷ್ಯಜಾತಿಗಳು ॥ ೫೦೦ ॥

ಮರ್ತ್ಯಲೋಕದೊಳೀಸು ಕೊಂಬೆಗೆ ।
ಹತ್ತಿಹುವು ಗೆಲ್ಲೆಗಳು ನಾಲ್ಕೈ ।
ಸತ್ತಮನೆ ಕೇಳ್ ನಾಲ್ಕು ವರ್ಣಾಶ್ರಮದ ರೂಪಗಳು ॥
ಪಾರ್ಥ ನೋಡೈ ವಿಧಿನಿಷೇಧವೆ ।
ನುತ್ತ ಪರ್ಣಶ್ರೇಣಿ ಹುಟ್ಟಿತು ।
ಸತ್ತಯಿಯು ನುಡಿ ಯಿಹುವು ನವಪಲ್ಲವಗಳರ್ಜುನನೆ ॥ ೫೦೧ ॥

ಅರ್ಥಕಾಮಗಳೆರಡು ಬಹುಪರಿ ।
ವಿಸ್ತರಿಸಿ ಯೈಹಿಕದ ನೌಶ್ಯವ ।
ಮತ್ತೆ ಮೊಳಕೆಗಳೇರುತಿರುವುವು ಪಾರ್ಥ ನೋಡಿದಿಯಾ ॥
ವಿಸ್ತರಿಸ ಬೇಕಿನ್ನು ಮಾರ್ಗಪ್ರ- ।
ವೃತ್ತಿ ಯೆನ್ನುತ ಹೇತು ಹಿಡಿದಾ ।
ಶೃಂಖ್ಯಯಲಿ ಕರ್ಮಂಗಳೇಳುವುವೈ ಶುಭಾಶುಭವ ॥ ೫೦೨ ॥

ತೀರಿದಾಕ್ಷಣ ಭೋಗ ವೊಂದು ಶ- ।
ರೀರ ಬೇಳುತಲೆರದನೆಯು ಕಡೆ ।
ಯೇರುವುದು ನವದೇಹ ಪರ್ಣದ ತೆರದಿ ಕೌಂತೇಯ ॥
ಧಾರುಣಿಯಲಾ ಪಂಚವಿಷಯದ ।
ಚಾರು ಯೋಗದ ಬಲದೊಳಿಚ್ಛೆಯು ।
ಯೇರುವುದು ಪಲ್ಲವದ ರೂಪದಿ ನಿತ್ಯ ನವನವವು ॥ ೫೦೩ ॥

ಬೀಸಲು ರಜೋಗುಣದ ಗಾಳಿಯು ।
ಸೂಸುವುದು ನರಲೋಕ ಶಾಖೆಯು ।
ಯೊಸು ನಿಂದಿರಲೀ ರಜೋಗುಣ ನೋಡು ಕೌಂತೇಯ ॥
ಬೀಸಲು ತಮೋಗುಣದ ಗಾಳಿಯು ।
ದ್ವೇಷಹಿಂಸಾಪ್ರಮುಖ ದುರ್ಗುಣ- ।
ವಾಸನೆಯು ಹುಟ್ಟುವುದು ಕೇಳೈ ಮರ್ತ್ಯ ಲೋಕದಲಿ ॥ ೫೦೪ ॥

ನರನೆ ಕೇಳೈ ಯಪ್ರವೃತ್ತಿಯ ।
ಸರಳ ಕೊರಡದು ಹುಟ್ಟಿಯದರಲಿ ।
ಪರಿಪರಿಯಲಿ ಪ್ರಮಾದಪರ್ಣಗಳೇಳುವುವು ನಿತ್ಯ ॥
ವರ ಮಹರ್ಷಿಗಳೇ ನಿಷೇಧಿಸು- ।
ತಿರುನಕರ್ಮಗಳೆಲ್ಲ ಪಲ್ಲನ- ।
ಪರಿಯಲಗ್ರದಿ ಹುಟ್ಟುವುವು ಕೇಳ್ ಚಿತ್ರ ಕೌಂತೇಯ ೫೦೫ ।

ನರನೆ ಜಾರಣಮಾರಣಂಗಳು ।
ಮರಳಿ ಪರಪೀಡನೆಗಳೆಂಜೀ- ।
ದುರುಳತನದ ತ್ರಿಪರ್ಣ ಬಳ್ಳಿಯು ಹಬ್ಬುವುದು ಜಗದಿ ॥
ಪರಿಪರಿಯ ದುಷ್ಕರ್ಮಮೂಲಗ- ।
ಳುರುಬಲಗಳಾಗುವುವು ಜನ್ಮದ ।
ಪರಿಪರಿಯ ಶಾಖೆಗಳು ಹೊರಡುವುವೇನ ಹೇಳುವೆನು
॥ ೧೦೬ ॥

ಚರಿಸೆ ದುಷ್ಕರ್ಮದಲಿ ಮಾನವ- ।
ನಿರದೆ ಚಾಂಡಾಲಾದಿಜನ್ಮದಿ ।
ಬರುವನಲ್ಲವೆ ಕರ್ಮಭ್ರಷ್ಟರ ಕುಲದಿ ಕೌಂತೇಯ ।।
ಕರಡಿ ಹುಲಿ ಮೃಗಖಗಭುಜಗಗಳ ।
ಪರಿಪರಿಯ ಜಂತುಗಳ ಜಾತಿಗ- ।
ಳೆರದೆ ಹುಟ್ಟುವುವಲ್ಲವೇ ಕೊಂಬೆಗಳು ದಿಶೆದಿಶೆಗೆ ॥ ೧೦೭ ॥

ನರನೆ ಕೇಳೀ ತೆರದಿ ಬಹುಪರಿ ।
ಮರಕೆ ಕೊಂಬೆಗಳೀಳುತಿರಲವ ।
ನರಕಭೋಗದ ಫಲವ ಮೆಲುವನು ಹೇಳಲೇನದನು ॥
ಮರಳಿ ಹಿಂಸಾದಿಗಳ ಪಾಪವ ।
ಶಿರದಿ ಮನ್ನಿಸಿ ದುಷ್ಟಸಂಗತಿ- ।
ಚರಿಸಿ ತಿರುಗುವನೈ ಕಣಾ ಪರಿಪರಿಯ ಯೋನಿಯಲಿ
॥ ೧೦೮ ।।

ತರುತೃಣವು ಪಾಷಾಣಲೋಹವು ।
ಪರಿಪರಿಯ ಕಲ್ಲುಗಳು ಮೃತ್ತಿಕೆ ।
ಬರುವುವಾಗಲು ಫಲಗಳಾ ತೆರನಾಗಿ ಕೌಂತೇಯ ।।
ನರ ಮೊದಲು ಸ್ಥಾವರದ ಪರ್ಯಂ- ।
ತರವು ವಿಶ್ವದ ಶಾಖೆಯೆಲ್ಲವು ।
ಯಿರುವುವೈ ಕೆಳಗಿಳಿವ ಕೊಂಬೆಯ ಮೂಲ ದೃಢತರವು
॥ ೧೦೯ ॥

ನರನ ರೂಪದ ಟೊಂಗೆ ಕೆಳಗೆನೆ ।
ಬರುತ ಸಂಸಾರವನು ಬೆಳೆಸುತ- ।
ಲಿರುವುದಲ್ಲವೆ ನೋಡು ವೃಕ್ಷಕ್ಕೆಂತು ವಿಸ್ತಾರ ॥
ನರನೆ ನೋಡು ನಿರೀಕ್ಷಿಸುತಲೀ- ।
ಮರದ ಮೇಲಕ್ಕೇಳ್ವ ಶಾಖೆಗ- ।
ಳೆರುವುನೈ ಮಧ್ಯದಲಿ ತೋರ್ಪುದು ಮರ್ತ್ಯಶಾಖೆಯಿದು
॥ ೧೧೦ ॥

ಸತ್ತ್ವಗುಣವಶದಿಂದ ಪಾರ್ಥನೆ ।
ಯುತ್ತಮ ಸುಕರ್ಮಗಳ ಶಾಖೆಗ- ।
ಳುತ್ತರೋತ್ತರವೇಳುವುವು ಮೇಲಕ್ಕೆ ಕೌಂತೇಯ ॥

ಮತ್ತೆ ದುಷ್ಕರ್ಮಗಳ ತಾಮಸ- ।
ವೃತ್ತಿಯಿಂ ತುಂಬಿರುವ ಶಾಖೆಗ- ।
ಳೆತ್ತ ನೋಡಿದಡತ್ತ ಕೆಳಗಿಳಿಯುವುವು ಕೌಂತೇಯ ॥ ೧೧೧ ॥

ಮೂರು ವೇದಂಗಳಲಿ ಹೇಳಿದ ।
ಚಾರುವಿಧಿಯುತ ಕರ್ಮಗಳದು ವಿ- ।
ಚಾರ ಮಾನವಯೋನಿಗಲ್ಲದೆ ಯನ್ಯರಿಂಗಿಲ್ಲ ॥
ಕಾರಣದಲಾ ಮನುಜಶಾಖೆಯು ।
ತೋರುವುದಲಾ ಮೇಲೆ ಕೆಳಗೈ ।
ತೋರುವುವ ಮೇಣ್ ಕರ್ಮಬುದ್ಧಿಗಳಡ್ಡಟೊಂಗೆಗಳು ॥ ೧೧೨ ॥

ನರನೆ ವೃಕ್ಷದ ಧರ್ಮವನು ನೀ- ।
ನರಿತೆಯಲ್ಲೈ ಮೂಲಬಲವ- ।
ತ್ತರವಿರಲು ನೋಡಿದೆಯೊ ಟೊಂಗೆಯ ಶಕ್ತಿ ವರ್ಧಿಪುದು ॥
ಇರಲು ಟೊಂಗೆಯ ವಿಸ್ತೃತತೆ ಬಹು ।
ಬರುವುದಲ್ಲದೆ ಬುಡಕೆ ಶಕ್ತಿಯು ।
ನರಶರೀರದ ಪರಿ ಯಿದಲ್ಲವೆ ನೋಡು ತತ್ತ್ವವನು ॥ ೧೧೩ ॥

ಇರಲು ಕರ್ಮದ ಶೇಷ ನರನಿಗೆ ।
ಧರಿಸುವನು ದೇಹವನು ನೋಡೈ ।
ಯಿರುವನಕ ನರದೇಹ ಕರ್ಮ ತ್ಯಾಜ್ಯ ಬೇರಲ್ಲ ॥
ನರಶರೀರವು ಬೇರೆ ಕರ್ಮ- ।
ಕ್ಕೆರುವುದೈ ದೃಢಮೂಲ ನಿಜವಿದು ।
ನರನಿಗೀಪರಿ ವೇಳೆದನು ಶ್ರೀಕೃಷ್ಣ ಜಗದೊಡೆಯ ।। ೧೧೪ ॥

ಹರಿಯು ಮಗುಳಿಂತೆಂದ ಪಾರ್ಥಗೆ ।
ಹರಿದು ಹೋಗಲು ತಮದ ಝಂಝೆಯು ।
ಬರುವುದಲ್ಲವೆ ಸತ್ತ್ವಗುಣಮಂದಾನಿಲವು ನಿಜದಿ ॥
ನರನೆ ಕೇಳೀತೆರದೊಳಾಗಲು ।
ನರಸ್ವರೂಪದ ಶಾಖೆಯಲಿ ಬಹು ।
ಪರಿಯ ಸದ್ವಾಸನೆಗಳಂಕುರವೇಳುವುವು ಪಾರ್ಥ ॥ ೧೧೫ ॥

ಜ್ಞಾನದಂಕುರ ಹುಟ್ಟಿಯದರಿಂ ।
ಜಾಣತನವುಂಟಾಗಿ ನಿಮಿಷದೊ- ।
ಳೇನ ಹೇಳಲಿ ಹುಟ್ಟುವುವು ಕಮಲಗಳು ಬುದ್ಧಿಯಲಿ ॥
ಕ್ಷೋಣಿಯಲಿ ಕಮಲಗಳ ವಿಸ್ತೃತಿ ।
ಸಾನುಕೂಲತೆ ಹೊಂದಿ ಸ್ಫೂರ್ತಿಯ ।
ಮಾನದಿಂದಲಿ ಹುಟ್ಟುವುವು ಬಹುಪರಿಯ ಕೊಂಬೆಗಳು ॥೧೧೬॥

ಬರುವುದೈ ಬುದ್ಧಿಗೆ ವಿಚಾರವು ।
ಸರಸ ಬುದ್ಧಿಯಲೆದ್ದನಿವ್ಯಾ- ।
ಪರಿಯ ನವವಲ್ಲವಗಳಿಂದಲೆ ಶೋಭೆಯನು ಹೊಂದಿ ॥
ಸರಳ ತೋರ್ವುದು ಸತ್ತ್ವಶಾಖೆಯು ।
ವರ ಸದಾಚಾರಾಂಕುರವು ಬಹು- ।
ಪರಿಯಲೇಳುತ ವೇದಘೋಷವು ನಡೆವುದಲ್ಲಲ್ಲಿ ॥ ೧೧೭ ॥

ಶಿಷ್ಟಸಂಮತ ಸದ್ವಿಚಾರವು ।
ಶ್ರೇಷ್ಠ ವೇದೋಕ್ತಾಚರಣವೈ ।
ಸುಷ್ಠು ಶೋಭಿಪ ಯಜ್ಞ ಸತ್ರಾದಿಗಳು ನಿಜಕರ್ಮ ।
ಹುಟ್ಟುವುವು ಗೊಂಚಲುಗಳೆಲೆಗಳ ।
ಹುಟ್ಟಿ ಯಮದಮತಪದ ಗೊಂಚಲು ।
ಹುಟ್ಟುವುದು ವೈರಾಗ್ಯರೂಪದ ಚಿಗಿತ ವಲ್ಲವವು ॥ ೧೧೮ ॥

ಮತ್ತೆ ಯೇಳ್ವ ವಿಶಿಷ್ಟ ಮತದ ವಿ- ।
ಚಿತ್ರ ಟೊಂಗೆಯು ಧೈರ್ಯವೆಂಬುವ ।
ವೃತ್ತಮದ ವೃಷಶಾಖೆ ಯೇಳ್ವುದು ಜನ್ಮ ವೇಗದಲಿ ॥
ಮತ್ತೆ ಮಧ್ಯಾಂತರದಿ ವೇದದ ।
ಸೂಕ್ತಿ ಯೆಂಬುವ ನಿಬಿಡಪರ್ಣದ ।
ಮೊತ್ತಗಳು ಕುಣಿದಾದುವುವು ಕೇಳ್ ಸತ್ತ್ವಗಾಳಿಯಲಿ
॥ ೧೧೯ ॥

ಸತ್ತ್ವರೂಪದ ಗಾಳಿ ಭರದಲಿ ।
ಸುತ್ತಮುತ್ತಲು ಬೀಸುತಿರಲಾ ।
ಹತ್ತುವುದು ಸುವಿಚಾರನೆಲ್ಲವು ಬೆಳೆಯಲಿಕೆ ಪಾರ್ಥ ॥
ಮತ್ತೆ ಧರ್ಮಸ್ವರೂಪಶಾಖೆಯು ।
ಶಕ್ತಿಯಿಂದೇಳುವುದು ಮಧ್ಯದೊ- ।
ಳೆತ್ತರದಲಿ ವಿರಾಜಿಸುವುದೈ ಗಗನಚುಂಬಿತವು ॥ ೧೨೦ ॥

ಬರುವುದದಕುಪಶಾಖೆ ಭರದಲಿ ।
ಮೆರೆವ ಸ್ವರ್ಗಾದಿಗಳ ಸುಖವೆಂ- ।
ತಿರುವ ಫಲಗೊಂಚಲುಗಳೇಳ್ವುವು ನೋಡು ಕೌಂತೇಯ ॥
ಎರಡನೆಯು ವುಪರತಿಸ್ವರೂಪದ- ।
ಲರುಣವರ್ಣದ ಶಾಖೆ ಹುಟ್ಟುತ ।
ನಿರುತವದರಲಿ ಮೋಕ್ಷರೂಪದ ಸುರಸಪಲ್ಲವವು ॥ ೧೨೧ ॥

ತರಣಿಶತಶಿಖಿಸುಪಿಶ್ಯಸುವಿದ್ಯಾ- ।
ಧರರು ಮೊದಲಾಗಿರುವ ಶಾಖೆಗ- ।
ಳೆರದೆ ಹುಟ್ಟುವುವನಡ್ಡವದರಿಂ ನೋಡು ಕೌಂತೇಯ ॥

ತಿರಿಗಿಯದರಲಿ ಹುಟ್ಟುವುವು ಬಹು- ।
ಪರಿಯಲುಪಶಾಖೆಗಳು ಜ್ಞಾನದಿ ।
ಹಿರಿಯರು ತಪೋನಿಧಿಗಳಾದ ಮರೀಚಿಪೂರ್ವಕರು ॥ ೧೨೨ ॥

ಪರಿಪರಿಯಲೀ ತೆರದ ಮಾಲಿಕೆ ।
ಹೊರಟು ವಿಸ್ತೃತವಾಗಿ ಮೇಲಕೆ ।
ಕೆರಿದು ಬುಡವಾಗಿದ್ದರೇನ್ಕೆ ಫಲವು ಹಿರಿದಿಹುದು ॥
ಒರುಬರುತ ಮುಂದಕ್ಕೆ ಶಾಖೆಗ- ।
ಳೆರುವುವೈ ಬ್ರಹ್ಮೇಶ ಮೊದಲಾ- ।
ಗಿರುವ ಪರಿಪರಿ ದಿವ್ಯ ಶಾಖೆಗಳೀನ ಹೇಳುವೆನು ॥ ೧೨೩ ॥

ನರನೆ ಕೇಳೈ ಫಲಫಲಾವಳಿ ।
ಬರಲು ಶಾಖೆಗಳದರ ಭಾರದಿ ।
ತಿರಿಗಿ ವೃಕ್ಷದ ಬುಡಕೆ ತಲೆಬಾಗುವುವು ನೋಡಿದಿಯಾ ॥
ಪರಿಯೊಳೀ ಸಂಸಾರವೃಕ್ಷಕೆ- ।
ಬರಲು ಜ್ಞಾನದ ಫಲವು ವಿನಯದ ।
ಭರದಿ ತಲೆಬಾಗುವುದು ಮೂಲಕೆ ಬರುವನ್ಯೆ ಜ್ಞಾನಿ ॥ ೧೨೪ ॥

ಸರಸಿಜಾಸನಶಂಕರರ ಮುಂ- ।
ದಿರದು ಜೀವರ ವೃದ್ಧಿ ತದನಂ- ।
ತರಕೆ ವಿಸ್ತರಿಸಿಹುದು ನೋಡೈ ಬ್ರಹ್ಮರೂಪವದು ॥
ಸರಸಿಜಾಸನಶಂಕರಾದ್ಯರು ।
ಸರಿ ಯೆನಿಸರೈ ಯೂರ್ಧ್ವಮೂಲದ ।
ವರಪರಬ್ರಹ್ಮಕ್ಕೆ ನೋಡೈ ಪಾರ್ಥ ಗುಹ್ಯವಿದು ॥ ೧೨೫ ॥

ಇರುವುವೈ ಸನಕಾದಿ ಶಾಖೆಗ- ।
ಳೆರದೆ ಮುಂದಕೆ ರಂಜಿಸುವುವೈ ।
ಯಿರವಿವಕೆ ಫಲಮೂಲವಿವರು ಬ್ರಹ್ಮರೂಪಗಳೆ ॥
ನರನ ಶಾಖೆಯು ಹಿಡಿದು ಮುಂದೀ- ।
ತೆರದಿ ಬ್ರಹ್ಮೇಶಾದಿ ಶಾಖೆಗ- ।
ಳೆರುವುವೈ ಬಹುಪರಿಯಲೆತ್ತರ ಮೇಲಮೇಲಾಗಿ ॥ ೧೨೬ ॥

ನರನೆ ಮೇಲಿನ ಶಾಖೆಗಳ ನಾ- ।
ನರುಹಿದೆನು ಮೂಲಗಳು ವೃಕ್ಷಕೆ ।
ಕಕೆದೆನದರಿಂದೂರ್ಧ್ವಮೂಲನೆನುತ್ತಲೀ ಮರವ ॥
ಅರಿಯಲಾ ನರಮರವಲೌಕಿಕ- ।
ವಿರುವುದಲ್ಲವೆ ನೋಡು ಪರಕಿಸೆ ।
ಹೊರಟಿಹುವು ಶಾಖೆಗಳು ನೋಡೈ ಸರ್ವದಿಶೆಗಳಲಿ ॥ ೧೨೭ ॥

ನರನೆ ನಿನಗಾಂ ವಿಸ್ತರಿಸಿದೆನು ।
ಪರಿಪರಿಯಲೀ ಯೂರ್ಧ್ವಮೂಲದ ।
ಮರವು ಸಂಸಾರವನು ಹೋಲುತ್ತದೆಂದು ಪೇಳಿದೆನು ॥

ಮರವಿದನು ಕಡಿಯುವ ವುಪಾಯವ- ।
ನರುಹುವೆನು ನಾ ನಿನಗೆ ವಾರ್ಥನೆ ।
ಭರದಿ ಮನಗೊಟ್ಟದನು ಕೇಳ್ಳೆ ಯೆಂದನಸುರಾರಿ ॥ ೧೨೮ ॥

ನ ರೂಪಮಸ್ಯೇಹ ತಥೋಪಲಭ್ಯತೇ ನಾಂತೋ ನ ಚಾದಿರ್ನ ಚ ಸಂಪ್ರತಿಷ್ಠಾ ।
ಅಶ್ವತ್ಥಮೇನಂ ಸುವಿರೂಢಮೂಲಮಸಂಗಶಸ್ತ್ರೇಣ ದೃಢೇನ ಛಿತ್ತ್ವಾ ॥ ೩ ॥

ಒರುವರ್ದೇನೈ ಶಂಕೆ ಮನದಲಿ ।
ಮರೆವುದಿದು ಸಂಸಾರವೈಕ್ಷವು ।
ವರಪ್ರಚಂಡವು ವಿಸ್ತರಿಸಿ ದಿಶೆದಿಶೆಗೆ ಹಬ್ಬಿಹುದು ॥
ಹರಿವುದೆಂತು ಸಮೂಲವಿದನೀ- ।
ಪರಿಯ ಸಾಧನವೇನೆನುತ ನೀ ।
ಥರಿಸ ಬೇಡೈ ಸಂಶಯವ ವ-ನದಲಿ ಧನಂಜಯನೆ ॥ ೧೨೯ ॥

ಮರದ ಮೇಲಿನ ತಾಖೆಗಳು ಹ- ।
ಬ್ಬಿರುವವಲ್ಲವೆ ಸತ್ಯಲೋಕದ ।
ವರಿಗೆ ಬೇರಿಹುದಿದಕೆ ಕೇಳು ನಿರಾಕೃತಿಯ ಬ್ರಹ್ಮ ॥
ಮರದ ಕೆಳಗಿಳಿದಿರುವ ಶಾಖೆಗ- ।
ಳಿರುವೈ ಸಚರಾಚರದಲೀ- ।
ಪರಿಯ ಶಾಖೆಯು ರಂಜಿಸುವುದೀ ಮರ್ತ್ಯಲೋಕದಲಿ ॥ ೧೩೦ ॥

ಮರವು ಕೇಳೀತೆರದಿ ಒಲವ- ।
ತ್ತರವು ಗಾಢವು ತುದಿಮೊದಲು ಗೋ- ।
ಚರಕೆ ಬಾರದು ಕಡಿವುದೆಂತಿದನೆಂದು ಮನದೊಳಗೆ ॥
ಧರಿಸದಿರು ಶಂಕೆಯನು ಪಾರ್ಥನೆ ।
ಹರಿದು ನಿರ್ಮೂಲವನು ಮಾಳ್ಪರೆ ।
ನರನಿಗಾಗವು ಕಷ್ಟದಾಯಾಸಗಳು ಕೌಂತೇಯ ೧೩೧ ॥

ರಾತ್ರಿಯಲ್ಲಳುತಿರುವ ಕೂಸಿಗೆ ।
ಭೀತಿ ಹಾಕುವ ನೆವದಿ ಬಂತ್ಯೆ ।
ಭೂತನೆಂದೊದರಿದರೆ ಕೇಳಾ ಭೂತ ನಿಜವಿಹುದೆ ॥
ಈ ತೆರದಿ ಭೂತಗಳನೋಡಿಸ- ।
ಲೇತಕೆರಡನೆ ಯತ್ನ ಬೇಕೈ ।
ಯಿಾ ತೆರದ ಮೋಡಗಳ ಕೋಟಿಯ ಮುತ್ತ ಬೇಕೇನೈ ॥ ೧೩೨ ॥

ಮೊಲದ ಕೋಡನು ಮುರಿವುದಾದರೆ ।
ಸುಲಭವಲ್ಲವೆ ಹೇಳು ಪಾರ್ಥನೆ ।
ಹೊಳೆವ ಗಗನದಿ ಪುಷ್ಪವಾದರೆ ಕೀಳ ಬಹುದೇನೈ ॥

ಎಲೆ ಧನಂಜಯ ಭವವೆನಿಪುದೀ- ।
ಮೊಲದ ಕೋಡಿನ ತೆರದಿ ಮಿಥ್ಯವು ।
ಯಿಳೆಯೊಳಿದ ಕೀಳುವರೆ ಹೇಳೈ ಕಷ್ಟವೇನಿಹುದು ॥ ೧೩೩ ॥

ವಿಸ್ತರಿಸಿದೆನು ವೃಕ್ಷಕಿರುವ ಸ- ।
ಮಸ್ತತರದುಪಶಾಖೆ ಶಾಖೆಯ ।
ಸ್ವಸ್ಥಚಿತ್ತದಿ ನೋಡೆ ಬಂಜೆಯ ಪುತ್ರ್ರಪೌತ್ರ್ರರಲಾ ॥
ಪೃಥ್ವಿಯಲಿ ಸ್ವಪ್ನದಲಿ ಕಂಡಸ- ।
ಮಸ್ತ ವಿಷಯವು ನಿಜವಿಹುದೆ ಕೇಳ್ ।
ಧಾತ್ರಿಯಲ್ಲೀ ಸ್ವಪ್ನದೋಳ್ ಸಂಸಾರವೃಕ್ಷವಿದು ॥ ೧೩೪ ॥

ನರನೆ ನಾ ವಿಸ್ತರಿಸಿದಂದದಿ ।
ಮರವು ಶಾಶ್ವತವಿದ್ದರೇನಿದು ।
ಹರಿದು ಬಿಡುವರೆ ಶಕ್ಯನೇನೈ ಹೇಳು ನೀನೆಸಗೆ ॥
ನರನು ಘೃತ್ಕಾರವನು ಹಾಕಲು ।
ಮುರಿವುದೇನಾಕಾಶ ನೋಡೀ- ।
ಪರಿಯಲೀ ಮರ ನಾಶವಾಗದು ಸತ್ಯಶನಿವರಲು ॥ ೧೩೫ ॥

ಒಡೆಯನಿಗೆ ಹೆಣ್ಣಾಪೆತುಪ್ಪವ
ಒಡಿಸುವೆನು ತಾನೆಂದು ಪೇಳಿದ ।
ನುಡಿಗಳಂದದೊಳಾಯ್ತು ಕೇಳೀ ವೃಕ್ಷವಿಸ್ತಾರ ॥
ಕೊಡನಿಯಲಿ ದೂರದಲಿ ಕಾಣುವ ।
ನಡಗರದ ಮೃಗಜಲವ ಕಣ್ಣಿಗೆ ।
ಕೊಡುವುದಾನಂದವನು ಗಿಡಗಳಿಗಿರುವುದೇ ನೀರು ॥ ೧೩೬ ॥

ಮಿಥ್ಯವಿಹುದಜ್ಞಾನವೆಲ್ಲವು ।
ಮಿಥ್ಯದಿಂ ಹುಟ್ಟಿರುವ ವಿಶ್ವಕೆ ।
ನಿತ್ಯತೆಯು ಸತ್ಯತೆಯು ಮೇಣಿಹುದೇನು ಕೌಂತೇಯ ॥
ಮಿಥ್ಯವಿದು ಸಂಸಾರವೃಕ್ಷವು ।
ಪೃಥ್ವಿಯಲ್ಲಿದನಂತವೆಂಬುದು ।
ಸತ್ಯವಾಗಿಹ ಮಾತು ವೊಂದುಪ್ರಕಾರದಲಿ ನೋಡು ॥ ೧೩೭ ॥

ನರಗೆ ಜಾಗ್ರತಿ ಬರುವನಕವೀ- ।
ನಿರುವುದೇನಾ ನಿದ್ರೆಗಂತವು ।
ಬರುವುದೇ ಮುಂಜಾವು ರಾತ್ರಿಯು ತೀರದಲೆ ವಾರ್ಥ ॥
ನರನೆ ಬ್ರಹ್ಮಜ್ಞಾನದುದಯವು ।
ಬರುವನಕ ಸಂಸಾರವೃಕ್ಷಕೆ ।
ಬರುವುದೇನೈ ಯಂತ ಶಾಶ್ವತವೆಂದು ಕಾಣುವುದು ॥೧೩೮॥

ಅಸ್ತನಾಗಲು ಸೂರ್ಯ ಮೃಗಜಲ ।
ವಿಸ್ತೃತತೆ ಲಯವಪ್ಪುದೆಲ್ಲವು ।
ಅಸ್ತವಾಗಲು ದೀಪ ದೀಪದ ಬೆಳಕು ಹೋಗುವುದು ॥
ಸತ್ಯವಿದು ಸಂಸಾರವೃಕ್ಷದ ।
ನಿತ್ಯವಿರುವಜ್ಞಾನಮೂಲವು ।
ಕೆತ್ತಿ ಹೋಗದು ಬ್ರಹ್ಮಸಾಕ್ಷಾತ್ಕಾರ ಬಾರದಲೆ ॥ ೧೩೯ ॥

ನರನೆ ಕೇಳಿದನಾದಿ ಯೆಂಬರು ।
ಧರೆಯಲೀ ಪರಿ ಭಾಷೆಯಾಡುವ- ।
ರರಿಯರಿದನಪವಾದಲಕ್ಷಣ ವಶದಿ ಬಂದಿಹುದು ॥
ಧರೆಯಲೀ ಸಂಸಾರವೃಕ್ಷ- ।
ಕ್ಕಿರದು ಸತ್ಯತೆ ಯೆಂದ ಮೇಲೀ- ।
ತೆರದ ನಾಸ್ತಿಯ ತತ್ತ್ವಕೆಂತೀ ಯಾದಿ ಹೊರಡುವುದು೧೪೦।

ಧರೆಯೊಳೊಂದಾನೊಂದು ವಸ್ತುವು ।
ಹೊರಟು ಬಂದರೆ ಸ್ಥಾನದಿಂದದ- ।
ಕಿರುವುದಾದಿಯು ಯಿರದ ವಸ್ತುವಿಗಿರುವುದೆಂತಾದಿ ॥
ಇರದೆ ಜನ್ಮವು ತಾಯಿ ಯಾರೆಂ- ।
ದರಹುವುದು ಕೇಳಾ ತೆರದಲೀ- ।
ಮರವೆ ಯಿಲ್ಲವೆನುತ್ತಸಿದ್ಧವ್ಯ ಆದಿ ಯೇನಿದಕೆ ॥ ೧೪೧ ॥

ಪುತ್ರನೇ ಮೊದಲಿಲ್ಲ ಬಂಜೆಗೆ ।
ಯೆತ್ತಣಿಂದಾತನಿಗೆ ಜಾತಕ ।
ಪತ್ರಿಕೆಯು ಗಗನಕ್ಕೆ ವರ್ಣವು ನೀಲವೆಲ್ಲಿಂದ ॥
ಎತ್ತಣಿಂದಾಕಾಶದಲಿ ಹೂ ।
ಹತ್ತುವುದು ಕೀಳುವುದು ಯೆಂತೈ ।
ನಾಸ್ತಿಯೇ ಸಂಸಾರವೃಕ್ಷವು ಮೂಲವೇಸಿದಕೆ ॥ ೧೪೨ ॥

ಮಣ್ಣ ತೆಗೆದು ಕುಲಾಲ ಘಟ ನಿ- ।
ರ್ಮಾಣ ಮಾಡುವ ಮೊದಲಭಾವವ ।
ನರ್ಣಿಸಲು ಜೀಕೇನನಾದಿತೆ ಸಿದ್ಧವಾಗಿಹುದು ॥

ಮುನ್ನವೀ ಸಂಸಾರಮರ ವು- ।
ತ್ಪನ್ನ ಮಾಡುವ ಮಾಯೆ ಸಹಿತಲೆ ।
ಸನ್ನುತಾತ್ಮನೆ ಕೇಳಭಾವವನಾದಿಯಾಗಿಹುದು ॥ ೧೪೩ ॥

ನರನೆ ಕೇಳೀ ಚರದಭಾವವು ।
ಯಿರುವುವೆಲ್ಲಿಂದಾದಿಯಂತವು ।
ಪರಿಯಿದಾದರು ಗೋಚರಿಸುವುದು ಕಣ್ಣಿಗೀ ವೃಕ್ಷ ॥
ನರನೆ ಕೇಳಿದು ಸತ್ಯವಲ್ಲೈ ।
ಮೆರೆವುದಿದು ಮೃಗಜಲದಪರಿಯ- ।
ಲ್ಲಿರುವುವೇನದಕಾದಿಯಂತವು ಗಿರಿಸಮುದ್ರದಲಿ ॥ ೧೪೪ ॥

ನರನೆ ಮಧ್ಯಾಂತರದಿ ದೃಗ್ಗೋ- ।
ಚರಕೆ ಬಂದರದೇನು ಸತ್ಯವೆ ।
ಪರಿಯಲೀ ಸಂಸಾರವೃಕ್ಷಕ್ಕಿಲ್ಲತುದಿಬುಡವು ॥
ಭರದಿ ನಡುವಿಲಿ ಗೋಚರಿಸಿದರು ।
ಬರುವುದೇನೈ ಸತ್ಯತೆಯು ನೀ- ।
ನರಿಯಲಾ ಬುಡನಡುತುದಿಗಳೆದಕಿಲ್ಲ ಕೌಂತೇಯ ॥ ೧೪೫ ॥

ಇರವು ಭೂತಭವಿಷ್ಯಕಾಲಗ- ।
ಳಿರದು ಕಾಲವು ವರ್ತಮಾನವು ।
ಯಿರುವುದಿದುವೆ ಚಮತ್ಕೃತಿಯು ನಿನಗಾನು ಪೇಳುವೆನು ।
ಇರದಲಿರುವುದೆನುತ್ತ ಭಾಸವು ।
ನರನ ದೃಗ್ಗೋಚರಕೆ ಬರುವುದು ।
ಪರಿಪರಿಯ ರಂಗಗಳು ತೋರ್ಪುವು ಜ್ಞಾನಿಗಿದು ಮಿಥ್ಯ । ೧೪೬ ।

ಸತ್ಯವೆಂದಜ್ಞಾನಿ ತಿಳಿವನು ।
ಮರ್ತ್ಯಲೋಕದ ಕಣ್ಣಿನಲಿ ಬಹು- ।
ಮೃತ್ತಿಕೆಯ ಹಾಕುತಲಿ ಭ್ರಾಂತಿಯ ಹುಟ್ಟಿಸುವುದಲ್ಲೈ ॥
ಧಾತ್ರಿಯಲಿ ಬಹುರೂಪಿ ತನ್ನಯ ।
ಕೃತ್ರಿಮದ ವೇಷದಲಿ ಜನರನು ।
ಹತ್ತಿಸುವನೈ ಭ್ರಮವ ಚಾತುರ್ಯದಲಿ ಕೌಂತೇಯ । ೧೪೭ ॥

ನೀಲವೆಂದೇ ತೋರ್ಪ ಗಗನವು ।
ಹೇಳಲೇನೈ ನಿಜವೆ ಯದು ಕ್ಷಣ- ।
ಕಾಲದಲಿ ಲಯವಾಗುವುದು ನೀ ನೋಡಿದಿಯೊ ವಾರ್ಥ ॥
ಬೀಳುವುದು ಸ್ವಪ್ನದಲಿ ಕಣ್ಣಿಗೆ ।
ಜಾಲವಲ್ಲವೆ ಸತ್ಯವಿರುವುದೆ ।
ಯಾಲಿನೈ ಸ್ವಪ್ನಜವು ಸತ್ಯವದೆಂದು ನಂಬುವರೆ । ೧೪೮ ॥

ನರನೆ ಕೇಳಾಭಾಸಮಾತ್ರದೊ- ।
ಳಿರುವುದೀ ಸಂಸಾರವೃಕ್ಷವು ।
ಯಿರದಲಾ ವಾಸ್ತವಿಕ ಸತ್ಯತೆ ನೋಡು ವೃಕ್ಷದಲಿ ॥
ಇರದಿದಕೆ ಕೇಳೀಕರೂಪತೆ- ।
ಯರೆಗಳೆಗೆಗಳೆಗೆಯಲಿ ರೂಪಾಂ- ।
ತರವ ಹೊಂದುವುದಲ್ಲವೇ ನೀ ನೋಡು ಕೌಂತೇಯ ॥೧೪೪॥

ತೋರುವುದು ಸಂಸಾರ ನೆಟ್ಟಗೆ ।
ಯಾರಿಗಿದು ಕೈವಶಕೆ ಬರುವುದೆ ।
ನೀರಿನಲಿ ವಾನರನ ಚೇಷ್ಟೆಯು ತೋರ್ಪ ತೆರನಲ್ಲೈ ॥
ವಾರಿನಿಧಿಯಲಿ ಹೊರಡುತಿರುವಾ- ।
ವಾರಿತೆರೆಗಳು ಹುಟ್ಟಿ ಸಾಯ್ವುವು ।
ಧಾರುಣಿಯಲಾ ಮಿಂಚುಬಳ್ಳಿಯು ಸ್ಥಿರವಿಹುದೆ ನೋಡು ॥ ೧೪೫ ॥
ಇರುವುದಿದಕಿಂ ಮಿಗಿಲು ವೇಗವು ।
ಮರಕೆ ಸಂಸಾರಸ್ವರೂಪ- ।
ಕ್ಕರವು ಬರುವುದೆ ಗ್ರೀಷ್ಮಕಾಲದಿ ಗಾಳಿಯೆಲ್ಲಿಂದ ॥
ಬರುವುದೆನುತಲಿ ಸುತ್ತಮುತ್ತಲು ।
ಹರಿದು ಬೀಸುವುದೊಂದೆಸಮನೇ ।
ಪರಿಯಲೀ ವೃಕ್ಷಕ್ಕೆ ತುದಿನಡುಬುಡವು ತೋರವಲಾ ॥೧೪೬॥

ಕಿತ್ತೊಗೆಯುವಾಯಾಸಕಷ್ಟವು ।
ವ್ಯರ್ಥವಲ್ಲನೆ ನೋಡು ಪಾರ್ಥನೆ ।
ಕತ್ತರಿಸಲಿದನಾತ್ಮಜ್ಞಾನದ ಕತ್ತಿಯೇ ಬೇಕು ॥
ಮಿಥ್ಯವಾದಜ್ಞಾನಬಲದಿಂ- ।
ನಾಸ್ತಿರೂಪದ ವೃಕ್ಷ ಬಹುಪರಿ ।
ವಿಸ್ತರಿಸಿತೈ ಕಡಿದು ಬಿಡು ಸುಜ್ಞಾನಖಡ್ಗದಲಿ ॥ ೧೪೭ ॥

ಯಾರಿಗಜ್ಞಾನದ ವಶದಿ ಜಗ ।
ತೋರುತಿಹುದಾಭಾಸವಾತಗೆ ।
ತೋರಲೈ ಸುಜ್ಞಾನವದರಿಂದಡಗುವುದು ಭಾಸ ॥
ಧಾರುಣಿಯಲೀ ಜ್ಞಾನಹೊರತಿಹ ।
ಬೇರೆಯಾಸುರಿಪರಿಯಲಿದ ಸಂ- ।
ಹಾರ ಮಾಡಲು ಬಾರದೈ ಯಶ ಬೇರೆ ಪರಿಯಲ್ಲಿ ॥ ೧೪೮ ॥

ಹುರವನೀ ರೀತಿಯಲಿ ಯಾಸುರಿ- ।
ಪರಿಯನುಪಭೋಗಿಸುತಲುರೆ ಸಂ- ।
ಹರಿಸುವರೆ ನೀನೆಷ್ಟು ಯತ್ನವ ಮಾಡಿವಿಯೊ ಅಷ್ಟೆ ॥

ನರನೆ ನೀ ಸಂಸಾರಜಾಲದಿ ।
ಬರುವಿ ನೀ ಸಂಕಟದಿ ಪಾರ್ಥನೆ ।
ಪರಿಪರಿಯ ಶಾಖೋಪಶಾಖೆಯೊಳೆರೆದೆ ತಿರುಗುತಲೆ ॥ ೧೪೪ ॥

ನರನೆ ನೋಡಜ್ಞಾನಮೂಲವ ।
ಹರಿದು ಬಿಡು ಖಡ್ಗದಲಿ ಪ್ರಥಮದಿ ।
ನರನೆ ಹಗ್ಗವ ಸರ್ಪವೆಂದರಿತದನು ಬಿಡಿಯುವರೆ ॥
ಪರಿಪರಿಯ ಶಸ್ತ್ರಾಸ್ತ್ರ ಸಜ್ಜೀ- ।
ಕರಿಸಿ ಮುತ್ತಿಗೆ ಹಾಕಲೇನದು ।
ಬರಿದೆ ಶ್ರಮವಲ್ಲದಲೆ ಸರ್ಪಕೆ ಸಾವು ಬರುತಿಹುದೆ ॥ ೧೪೫ ॥

ಹುವ ಮೃಗಜಲ ದಾಟಿ ಹೋಗಲು ।
ಪರಿಪರಿಯ ಸಾಧನವ ಮಾಡುತ ।
ನರನು ನದಿನೀರಿನ ಪ್ರವಾಹದಿ ಹುದು ಹೋದಂತೆ ॥
ನರನೆ ಮಿಥ್ಯೆಯಿನಾದ ಸಂಸೃತಿ- ।
ಹರಿವ ಯತ್ನವ ಮಾಡಿ ಭರದಲಿ ।
ಮರುಳನಾಗುವನೇನ ಹೇಳಲಿ ತಿಮಿರವಶದಿಂದ ॥ ೧೪೬ ॥

ಬರಲು ಸತ್ಯಜ್ಞಾನಲೋಪವು ।
ಬರುವುದೈ ಯಾವೇಶ ಮೈಯಲಿ ।
ಬರಳುವನು ಸಂಸಾರ ಸತ್ಯನೆನುತ್ತ ಭ್ರಮೆಯಿಂದ ॥
ನರನೆ ನೋಡೈ ಸ್ವಪ್ನದಲಿ ತಾ- ।
ನಿರುತ ಖಡ್ಗದ ಬಡತ ತಾಗಲು ।
ಸಿರುವುದಲ್ಲವೆ ಯೆಚ್ಚರಿಕೆ ಕೇಳ್ ಸಿದ್ಧ ಮಾತ್ರೆಯದು ॥ ೧೪೭ ॥

ನರನೆ ಕೇಳಜ್ಞಾನಮೂಲದ ।
ಮರವಲಾ ಸಂಸಾರವಿದ ಸಂ- ।
ಹರಿಸುವರೆ ಕೇಳ್ ಜ್ಞಾನಖಡ್ಗವು ಶಸ್ತ್ರವೃತ್ತಮವು ॥
ಧರಿಸುವರೆ ತಜ್ಞಾನಖಡ್ಗವ- ।
ನಿರಲು ಬೇಕು ವಿರಕ್ತಿ ಶಕ್ತಿಯು ।
ನರನೆ ಕೇಳು ವಿರಕ್ತಿಲಕ್ಷಣಗಳನು ನಾ ಪೇಳ್ವೆ ॥ ೧೪೮ ॥

ಶುನಕ ವ್ಯೋಕರಿಸಿದುದ ನೋಡಿದ- ।
ರೆನಿತು ಹೇಸಿಗೆ ಮನದಿ ಬರುವುದೊ ।
ಅನಿತು ಹೇಸಿಗೆ ಸರ್ವಭೋಗದ ಮೇಲೆ ಬರ ಬೇಕು ॥
ತೃಣಸಮಾನ ತ್ರಿಲೋಕದೊಡೆತನ- ।
ವೆನುತ ಬರಬೇಕೈ ವಿರಕ್ತಿಯು ।
ಯೆನಿತು ಶಕ್ತಿ ವಿರಕ್ತಿಯಾಗಲು ಜ್ಞಾನ ಮೂಡುವುದು ॥ ೧೪೯ ॥

ಛುರಿಕೆ ಯಿಹುದು ವಿರಕ್ತಿಯದಳ್ಳೆ ।
ಪೊರೆ ಯಹಂಕಾರವು ಕಣಾ ಅದ- ।
ನಿರಿಸು ಸುವಿಚಾರದಿ ಭರಿತ ಸದ್ಬುದ್ಧಿ ಕೈಯೊಳಗೆ ॥
ಹರತ ಮಾಡಿ ನಿನೇಕ ಸಾಣಿಯೊ- ।
ಳಿರದೆ ಸೋಽಹಂತತ್ತ್ವಬೋಧೆಯ ।
ಪರಮ ತೀಕ್ಷಣ ಧಾರೆ ಹಚ್ಚಡ್ಡೈತನೀರ್ಕುಡಿಸು ॥ ೧೬೦ ॥

ನರನೆ ನಿಶ್ಚಯಮುಷ್ಟಿಬಲದಲಿ ।
ತಿರುಗಿಸುತಲದ ಮನನಭರದಲಿ ।
ಗುರಿಹಿಡಿದು ನೀ ಕಡಿಯ ಬೇಕಾ ದ್ವೈತವನೆವಾರ್ಥ ॥

ನರನೆ ಯಾತ್ಮಜ್ಞಾನಖಡ್ಗವು ।
ಮೆರೆವುದೈ ಯದ್ವೈತತೇಜದಿ ।
ಹರಿದು ಬಿಡುವುದು ನೋಡು ಭವವೃಕ್ಷವನು ಸರ್ವತ್ರ ॥ ೧೬೧ ॥

ಆ ಶರದ ಋತುವಾಯು ಗಗನದಿ ।
ಬೀಸಲಾರಂಭಿಸಲು ದಿಶೆದಿಶೆ ।
ಲೇಸೆನಿಸಿ ಶುದ್ಧೀಕರಿಸುವುದು ಹರಿದು ಕಡ್ಡಿಕಸ ॥

ನೇಸರುದಯಕೆ ಬರಲು ನೋಡಾ- ।
ಕಾಶದಲಿ ಕತ್ತಲೆಯು ಹರಿವುದು ।
ನಾಶವಾಗುವುದೆಲ್ಲ ಸ್ವಪ್ನವು ಬರಲು ಜಾಗರ್ತಿ ॥ ೧೬೨ ॥

ನರನೆ ಸ್ವಾತ್ಮಜ್ಞಾನ ಧಾರೆಯು ।
ಹರಿಯುವುದು ಸಂಸಾರತರುವನು । .
ಹರಿವುದಲ್ಲಿ ಮೃಗಜಲವು ತಿಂಗಳಿನ ಬೆಳಕಿನಲಿ ॥

ಹರಿವುದೈ ಸಂಸಾರವೃಕ್ಷದ ।
ಮೆರೆವ ಬೇರುಗಳೆಲ್ಲ ಕಡೆಯಲಿ ।
ಹರಿವುದೈ ದಿಶೆದಿಶೆಯಲಿಹ ನಿಸ್ತೀರ್ಣ ಶಾಖೆಗಳು ॥

ನರನೆ ಕೇಳೀ ತೆರದಿ ನೀನಾ- ।
ಮೆರೆವ ಸ್ವಾತ್ಮಜ್ಞಾನಖಡ್ಗದಿ ।
ಹರಿದು ಬಿಡು ನಿರ್ಮೂಲ ಸಂಸೃತಿನೃಕ್ಷವಶ್ವತ್ಥ ॥ ೧೬೩ ॥

ತತಃ ಪದಂ ತತ್ಪರಿಮಾರ್ಗಿತವ್ಯಂ ಯಸ್ಮಿನ್ ಗತಾ ನ ನಿವರ್ತಂತಿ ಭೂಯಃ ।
ತಮೇವ ಚಾದ್ಯಂ ಪುರುಷಂ ಪ್ರಪದ್ಯೇ ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ॥ ೪ ॥

ನಾನು ಯೆಂಬುವ ಪೃತ್ತಿಗಿದು ಸಂ ।
ಪೂರ್ಣ ತಿಳಿಯದ ವಿಷಯ ವಾರ್ಥನೆ ।
ಜ್ಞಾನವಾಗದಲಾ ಯಿದೆಂಬುವ ಸರ್ವನಾಮದಲಿ ॥
ಜಾಣನಾದರು ತನ್ನ ಮೋರೆಯ ।
ತಾನೆ ದರ್ಪಣದಿಂದ ನೋಡುತ ।
ಮಾನಿಸುವನೆರಡನೆಯವನು ದರ್ಪಣದೊಳಿಹನೆಂದು ॥ ೧೬೪ ॥

ಈ ತೆರದಿ ಸ್ವಾತ್ಮದಲಿ ನೆನಸದೆ ।
ದ್ವೈತವನು ಕಲಿವಾರ್ಥ ಸೋಪೈ ।
ಯಾತುಮನ ನಿಜರೂಪ ತನ್ನಲ್ಲಿರುವುದೈ ಸೋಡೆ ॥
ಭೂತಳದಿ ಜಾಣಿಯನು ತೋಡದೆ ।
ಯಾತನದಿ ರಘರೆ ತುಂಬಿಹುದಲಾ ।
ಯಿತೆರದಲಿಹುದಾತ್ಮಜ್ಞಾನಜ್ಯೋತಿ ತನ್ನೊಳಗೆ ॥ ೧೬೫ ॥

ಕೆರೆಯು ಬತ್ತಿರಲದರೊಳಗೆ ಬಿ- ।
ದ್ದಿರುವ ನಿಜಪ್ರತಿಬಿಂಬ ಜಿಂಬದಿ ।
ಬರುತಲೈಕ್ಯವ ಪಡೆವುದಲ್ಲವೆ ವಾರ್ಥ ನೋಡಿದಿಯಾ ॥

ಧರೆಯೊಳಗೆ ಘಟ ವೊಡೆಯಲಾಕ್ಷಣ ।
ಮೆರೆವ ಘಟದಾಕಾಶ ವೊಳಗಿಂ ।
ಹೊರಗೆ ಬಂದೈಕ್ಯದಲಿ ಮಹದಾಕಾಶವಾಗುವುದು ॥ ೧೬೬ ॥

ಉರಿವ ಬೆಂಕಿಯು ಸೊಂದಲಾಕ್ಷಣ ।
ಒರುವುದೈಕ್ಯವು ತನ್ನ ರೂಪದಿ ।
ನರನೆ ಕೇಳೀ ತೆರದಿ ಸ್ವಾತ್ಮನ ನೋಡು ತನ್ನಲ್ಲಿ ॥

ನರನೆ ಬಿತ್ತೆಯೆ ತನ್ನ ಸ್ವಂತದ ।
ಸರಸತೆಯ ತಾಂ ನೋಡಿದಂತೆಯೆ ।
ನರನೆ ಕೇಳೈ ಕಣ್ಣು ನಿಜಕರೆಗುಡ್ಡಿನೋಳ್ಪಂತೆ ॥ ೧೬೭ ॥

ನರನೆ ಕೇಳೈ ಪ್ರಭೆಯು ಪ್ರಭೆಯಲಿ ।
ಬರುವುದಲ್ಲವೆ ಯೇಕತನದಲಿ ।
ಬರುವುದೈ ಯಾಕಾಶವಾಕಾಶದಲಿ ತಾನೈಕ್ಯ ॥

ಇರುವುದೇನೈ ಭೇದ ನೀರದು ।
ಬರುತ ನೀರೊಳು ತುಂಬುವುದಲಾ ।
ನರನೆ ಕೇಳೀ ತೆರದಿ ನೋಳ್ಪುದು ನಿಜಸ್ವರೂಪವನು ॥ ೧೬೮ ॥

ದ್ರಷ್ಟೃದೃಶ್ಯವಿದೆಂಬ ಭೇದವ ।
ಸುಟ್ಟು ತಾನರಿತಿರುವೆನೆಂಬೀ- ।
ದುಷ್ಟ ಭಾವನೆ ಬಿಟ್ಟು ಸ್ವಾತ್ಮನ ದೃಷ್ಟಿಸಲು ಬೇಕು ॥
ಸೃಷ್ಟಿಯಲ್ಲೀ ತೆರದ ಜ್ಞಾನವು ।
ಕಷ್ಟವಾಗಿಹುದಲ್ಲವೇ ನೀ- ।
ನಿಷ್ಟನರಿತರೆ ಸ್ವಾತ್ಮಜ್ಞಾನವಿದಾಯ್ತೆನುತ ನಂಬು ॥ ೧೬೪ ॥

ಇರುವನೀತನೆ ಯಾದ್ಯಪುರುಷನು ।
ಮೆರೆವ ಶ್ರುತಿಶಾಸ್ತ್ರಗಳ ಪರಿಪರಿ- ।
ತೆರದಿ ದೀರ್ಘೋದ್ಯೋಗದಲಿ ನಾಲಿಗೆಯ ಹೊರಳಿಸುತ ॥
ಬರಿದೆ ಪರಿಪರಿ ನಾಮರೂಪವ- ।
ನಿರದೆ ಕೊಡುತಲಿ ಬರಳುತಿಹರೈ ।
ಯಿರುವುದೈ ನಿಷ್ಫಲಪರಿಶ್ರಮಹವರಿಗೇನೆಂಬೆ ॥ ೧೬೫ ॥

ದೊರೆಯಬೀಕೀ ಸ್ವಾತ್ಮದನುಭವ ।
ಭರದೊಳೆಂದಾ ಸ್ವರ್ಗ ಸಂಸೃತಿ ।
ತೊರೆದು ಯೋಗಜ್ಞಾನದಭ್ಯಾಸವನು ಮಾಡುತಲಿ ॥
ತಿರಿಗಿ ಸಂಸಾರದಲಿ ಒತರದೆ ।
ನಿರುತವಿದ ಭೋಗಿಸುವೆವೆಂಬೀ- ।
ತೆರದ ನಿಶ್ಚಯ ಧರಿಸಿ ಸಂತತ ಸಾಧಿಸುವರಿದನು ॥ ೧೬೬ ॥

ಕರದ ಮೇಲಾ ಕರಹೊಡೆದು ನೆರೆ ।
ಮೆರೆವ ಸಂಸಾರಕ್ಕೆ ಮುಲ್ಲನ ।
ತೆರದಿ ಭುಜವಪ್ಪಳಿಸಿ ನಿಜವೈರಾಗ್ಯ ಬಲದಿಂದ ॥
ಉರುಳಿಸುತ ಸಂಸಾರ ನೆಲದಲಿ ।
ಪರಿಪರಿಯ ಕರ್ಮಗಳ ಯೋಗದಿ ।
ಬರುವ ಬ್ರಹ್ಮನ ಪದವ ತಾವ್ ಪಾಟುವರು ಯೋಗಿಗಳು ॥ ೧೬೭ ॥

ಪರಿಯಲೀ ವೈರಾಗ್ಯ ತಮ್ಮೊಳ- ।
ಗಿರುವುದಥವಾ ಜ್ಞಾನ ಪೂರ್ಣತೆ- ।
ಯಿರುವುದೆಂಬಭಿಮಾನ ಮನದೊಳಗಿರುವುದೈ ಸಹಜ ॥

ತೊರೆದು ಕೇಳಭಿಮಾನವೀಪರಿ ।
ಬರುವರೆನ್ನ ಸ್ಥಾನ ಮೂಲ- ।
ಕ್ಕಿರುವುದದುವೇ ಸ್ವಾತ್ಮರೂಪವು ನೋಡು ಕಲಿವಾರ್ಥ ॥ ೧೬೮ ॥

ಹೊರಟಿರುವುದಿಲ್ಲಿಂದ ವಿಶ್ವದ ।
ಮೆರೆವ ವಿಸ್ತಾರದ ಪರಂಪರೆ- ।
ಯಿರುವುದೀ ಪರಿ ಮಾತು ವ್ಯವಹಾರದಲಿ ಲೌಕಿಕದಿ ॥
ಇರುವುದೀ ಪರಿ ಮಾತು ಮಿಥ್ಯವು ।
ಧರೆಯೊಳಗೆ ದೌರ್ಭಾಗ್ಯಪುರುಷರ ।
ಮೆರೆವುದಾಶಾವಲ್ಲಿ ಯೆಂಬೀ ತೆರದ ಮಾತಿದುವೆ ॥ ೧೬೯ ॥

ಅರಿಯರೈ ಪರಮಾತ್ಮರೂಪವ ।
ನಿರುವುದಿದುವಜ್ಞಾನಮೂಲವು ।
ಯಿರುವುದಾ ಕಾರಣದಿ ವಿಶ್ವಜ್ಞಾನ ಓರಿದಾಗಿ ॥
ನರನೆ ಯೂ ಯಜ್ಞಾನದಿಂದಲೆ ।
ಧರಣಿಯಲಿ ಕಾಲತ್ರಯದೊಳಾ- ।
ದರು ಕಣಾ ಗೋಚರಕೆ ಬಾರದ ಭೇದ ನೀ ನಾನು ॥ ೧೭೫ ॥

ಮೆರೆದಿಹುದು ವಿಶ್ವದಲಿ ತಿಮಿರವು ।
ನರನೆ ಕೇಳೀ ವಿಶ್ವಕಿಂತಲು ।
ಮೆರೆದಿರುವುದಾದಿಯಲಿ ಕೇಳೈ ಬ್ರಹ್ಮರೂಪವದು ॥
ನರನೆ ಶೀತದಿ ಶೀತವನು ಪರಿ- ।
ಹರಿಪ ಪರಿಯಲ್ಲೈ ನಿನಗೆ ನಾ- ।
ನರುಹವೆನು ಬ್ರಹ್ಮಸ್ವರೂಪದ ಕುರುಹ ಕೇಳುವುದು ॥ ೧೭೬ ॥

ದೊರೆಯಲಾಪರಿ ನಿಜಸ್ವರೂಪವು ।
ತಿರಿಗಿ ಬರುವುದಶಕ್ಯವದರಿಂ ।
ಮೆರೆವುದಲ್ಲನೆ ಪ್ರಳಯದಲಿ ಜಲಮಯನೆ ವಿಶ್ವವಿದು ॥
ನರನೆ ಕೇಳೀ ಜ್ಞಾನಯೋಗದಿ- ।
ನರಿಯುವರು ಪರಬ್ರಹ್ಮರೂಪವ ।
ಭರಿತವಿದು ಸಚ್ಚಿತ್ಸ್ವರೂಪದಿ ವಿಶ್ವ ಸರ್ವತ್ರ ॥ ೧೭೭ ॥

ನಿರ್ಮಾನಮೋಹಾ ಜಿತಸಂಗದೋಷಾ ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ ।
ದ್ವಂದ್ವೈರ್ವಿಮುಕ್ತಾಃ ಸುಖದುಃಖಸುಜ್ಞೈರ್ಗಚ್ಛಂತ್ಯಮೂಢಾಃ ಪದಮವ್ಯಯಂ ತತ್ ॥ ೫ ॥

ವರುಷ ಋತು ಮುಗಿದಾಗ ಮೇಘಗ- ।
ಳರದೆ ನಭದಿಂದಡಗಿ ಹೋಪುವು ।
ಪುರುಷನಾಪರಿ ತೊರೆವನಭಿಮಾನವನು ಮೋಹವನು ॥

ನರನ ವಿಧನನ ನಿಷ್ಕುರನ ಪಿ- ।
ಟ್ಟಿರುವರೀಭೂತಳದೊಳಾಪ್ತರು ।
ತೊರವನಾ ತೆರದಲಿ ವಿಕಾರಂಗಳನು ಕೌಂತೇಯ ॥ ೧೭೮ ॥

ಬಾಳಿಗಿಡ ಗೊನೆ ಕೊಟ್ಟನಂತರ ।
ಬೀಳುವುದು ಧರಣಿಯಲನಂತರ ।
ಬಾಳುವುದೆ ಯಾತೆರದೊಳಾತ್ಮಜ್ಞಾನವುದಯಿಸಲು ॥
ಹಾಳು ಬೀಳುವೆವೆಲ್ಲ ಕ್ರಿಯೆಗಳು ।
ಜ್ವಾಲೆ ಹತ್ತಿದ ಗಿಡದಿ ಪಕ್ಷಿಯು ।
ಬಾಳಿವೆಯ ಮಾಡುವುದೆ ಗಿಡವನು ಬಿಟ್ಟು ಪೋಗುವುದು
॥ ೧೩೯ ॥
ಈ ತೆರದಲಿ ವಿಕಲ್ಪವೆಂಬುವ ।
ಮಾತನೆಲ್ಲವ ತೊರೆದರವರಿಗೆ ।
ಪಾತಕಗಳೆಂಬುವ ತೃಣವು ಬೆಳೆಯುವುದು ದ್ವೈತದಲಿ ॥
ದ್ವೈತವನೆ ಸುಟ್ಟರಲು ತೃಣಗಳು ।
ಪಾತಕಗಳೇಳುವವೆ ಪಾರ್ಥನೆ ।
ರಾತ್ರಿಯುಳಿವುದೆ ಸೂರ್ಯನುದಯಾಚಲದಿ ರಾಜಿಸಲು
॥ ೧೪೦ ॥
ಬರಲು ಸ್ವಾತ್ಮಜ್ಞಾನಲಾಭವು ।
ಹರಣವಹುವಜ್ಞಾನಸಹಿತಲೆ ।
ಮೆರೆವ ದೇಹದ ವಾಸನೆಯಹಂಕಾರವಭಿಮಾನ ॥
ನರನಿಗಾಯುರ್ದಾಯ ತೀರಲು ।
ತೊರೆವನೈ ಜೀವಾತ್ಮ ದೇಯವ ।
ಪರಿಯಲಾ ಮೋಹವನು ಹಾಕುವ ದ್ವೈತ ತೊರೆಯುವುದು
॥ ೧೪೧ ॥
ಸ್ಮರಿಶಕ್ಯೆ ದುರ್ಲಭವು ಲೋಹವು ।
ತರಣಿಗೈ ದುರ್ಮಿಳವು ಕತ್ತಲೆ ।
ಯಿರುವುದಾಪರಿ ದ್ವೈತಬುದ್ಧಿಯು ದುರ್ಲಭವು ಪಾರ್ಥ ॥
ನರನೆ ನೋಡಭಿಮಾನ ಧರಿಸಿದ ।
ನರಗೆರಡು ಸುಖ ದುಃಖ ಬಂಧನ ।
ಬರುವೈ ಬಂಧನಗಳೆಲ್ಲಿಂ ತೊರೆದರಭಿಮಾನ ॥ ೧೪೨ ॥

ಬರಲು ಜಾಗೃತಿ ಸ್ವಪ್ನದೊಳಗಿಹ ।
ದೊರೆದ ರಾಜ್ಯವು ಕರಗಿ ಪೋಪುದು ।
ಹರುಷಶೋಕವ ಕೊಡುವುದೇ ಮಾನವಗೆ ಜಾಗೃತಗೆ ॥
ಗರುಡನೆದುರಿಲಿ ಸರ್ಪ ಬರುವುದೆ ।
ಬರುವುವೇನಾ ದುಃಖಸುಖಗಳು ।
ಬರುವುದೆಂತಾ ಪಾಪಪುಣ್ಯವು ದ್ವೈತಹೀನನಿಗೆ ॥ ೧೪೩ ॥

ಧರೆಯೊಳರವಿಹ ರಾಜಹಂಸವು ।
ತೊರೆದಸಜ್ಜಲವನ್ನು ಮುಂದಿಹ ।
ಮೆರೆವ ಸತ್ಕ್ಷೀರವನೆ ಗ್ರಹಿಸುವುದಲ್ಲವೇ ಪಾರ್ಥ ॥

ತರಣಿಯೇ ಮಳೆ ಸುರಿವನಲ್ಲವೆ ।
ಮರಳಿಯದನೇ ತಾನು ಶೋಷಿಸಿ ।
ಕಿರಣದಿಂದಲೆ ಜಲವ ಕೊಡುವನು ತರಣಿ ಕೌಂತೇಯ ॥೧೪೪॥

ನರನೆ ಕೇಳಾತ್ಮಸ್ವರೂಪಕೆ ।
ಬರಲು ಭ್ರಾಂತಿಯು ವಿಸ್ತರಿಸಿದಾ- ।
ಮೆರೆವ ಸ್ವಾತ್ಮಜ್ಞಾನದೃಷ್ಟಿಯ ಭರದೆ ನೋಡದನೆ ॥
ತಿರಿಗಿ ತನ್ನೊಳಗೈಕ್ಯ ಮಾಡುವ ।
ನರನಲಾ ಸುಜ್ಞಾನಮೂರುತಿ- ।
ಶರಧಿ ಸೇರಲು ಭೇದ ಭಾಗೀರಥಿಗೆ ಮೇಣಿಹುದೆ ॥ ೧೪೫ ॥

ನರನೆ ಗಗನವು ವ್ಯಾಪ್ತವೆಲ್ಲವು ।
ಮೆರೆವುದೂರಿಂದೊರಿಗಲ್ಲವೆ ।
ಹೊರಡ ಬೇಕೇ ಗಗನ ಪಯಣವ ಮಾಡುವರೆ ಪಾರ್ಥ ॥
ಬರಲು ಸರ್ವವ್ಯಾಪಿ ಜ್ಞಾನವು ।
ಬರುವುದೆಂತೈ ದ್ವೈತವನಿಗೆ ।
ಬರುವುದೇನೈ ಭೇದ ನಾನೀನವನು ಮನದೊಳಗೆ ॥ ೧೪೬ ॥

ಮನದೊಳಗೆ ಸುಜ್ಞಾನದುದಯವು ।
ಮಿನುಗಿದರೆ ಬರುವುದೆ ವಿಕಾರವು ।
ಜನಿಸುವುದೆ ಯದ್ವೈತಮೂಲಕ ದುರ್ಮಿಕಾರವದು ॥
ಎನಿತು ಬೀಜವ ಬಿತ್ತಲೇನದು ।
ಜನಿಸುವುದೆ ಬೆಂಕಿಯಲಿ ತದ್ಸತ್ ।
ಕ್ಷಣದೊಳಗೆ ಹುಟ್ಟಿದ ವಿಕಾರವು ಸುಟ್ಟು ಹೋಗುವುದು ।೧೪೭॥

ಕ್ಷೀರಸಾಗರಮಂಥನಕ್ರಿಯೆ ।
ತೀರಿದಾಕ್ಷಣ ಮಂದರಾಚಲ ।
ಹಾರಿಹೋಗಲು ಶರಧಿಗಾಕ್ಷಣ ಬಂತು ಶಾಂತಿಯಲಾ ॥
ಧಾರುಣಿಯಲೀ ತೆರದಿ ನರನಿಗೆ ।
ಚಾರುಸ್ವಾತ್ಮಜ್ಞಾನವಾಗಲು ।
ಹಾರಿ ಹೋಗುವುವಷ್ಟು ಸದಸದ್ವಾಸನೆಗಳೆಲ್ಲ ॥ ೧೪೮ ॥

ಶಶಿಯು ಪೂರ್ಣಮೆದಿನದಲಾ ಷೋ- ।
ಡಶಕಲಾಸಂಯುಕ್ತ ನಿರುತಿರೆ ।
ಯೆಸೆವನೈ ಸಂಪೂರ್ಣ ಕುಂದಿಹುದೇನು ರೂಪದಲಿ ॥
ವಸುಮತಿಯಲಿ ಸ್ವಾತ್ಮಜ್ಞಾನವು ।
ಯೆಸೆವುದೈ ಸಂಪೂರ್ಣ ಮನದ- ।
ಲ್ಲುಸುರಲೇನವಸಿಂಗೆ ವಾಸನೆಯುಳಿವುದೇ ಪಾರ್ಥ ॥ ೧೪೯ ॥

ನರನೆ ಕೇಳೀ ತೆರದಿ ನಾ ವಿ- ।
ಸ್ತರಿಸಲೆಂತೀ ಮಾತುಗಳ ನೀ ।
ಪರಿಕಿಸೈ ಪರಮಾಣು ತಾಳ್ವುದೆ ಗಾಳಿಯೆಡೆಯಿರಿನಲಿ ॥
ಪರಿಯಲೀ ವಿಷಯಗಳ ವಾಸನೆ ।
ಸರಿಯೆ ಸ್ವಾತ್ಮಜ್ಞಾನದೆದುರಿನ- ।
ಲುರಿವ ಜ್ಞಾನಾಗ್ನಿಯು ಸುಡುವುದೈ ವಾಸನೆಯನೆಲ್ಲ
॥ ೧೯೦ ॥
ನರನೆ ಕೇಳೀ ತೆರದಿ ವಿಷಯದ ।
ಪರಿಯನೆಲ್ಲನ ಸುಟ್ಟು ಬಿಟ್ಟಹ ।
ಪುರುಷ ಸ್ವಾತ್ಮನೊಳೈಕ್ಯ ಪಡೆಯುವ ಚಿನ್ನ ಚಿನ್ನದೊಲು ॥

ಅರಿಯಲಾ ಪದಕಿಲ್ಲ ನಾಶವು ।
ನಿರುತ ಪರಮಾತ್ಮ ಸ್ವರೂಪವು ।
ಮೆರೆವುದದು ಶಾಶ್ವತವದೃಶ್ಯವು ಮೇಣದಜ್ಞೇಯ ॥ ೧೯೧ ॥

ಇರುವುದದಕ್ಕೆ ರೂಪವೀಪರಿ- ।
ಯಿರದದಕ್ಕೋ ಪರಿಯ ರೂಪವು ।
ಅರಿಯಿರೈ ವ್ಯವಹಾರದಲಿ ಮಾನವರು ಶ್ರುತಿತತಿಯು ॥
ಪರಿಪರಿಯಲೊದರುತಲಿ ಬಹು ವಿ- ।
ಸ್ತರಿಸಿ ಸೋತುದು ನೇತಿ ಯೆಂದು- ।
ತ್ತರವನಿತ್ತುದು ನೋಡು ಪದವದು ಬ್ರಹ್ಮರೂಪವಲಾ ॥ ೧೯೨ ॥

ನ ತದ್ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ ।
ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ ॥ ೬ ॥

ಉರಿವ ಬೆಂಕಿಯ ಬೆಳಕಿನಿಂ ಹಿಮ- ।
ಕರನ ಚಂದ್ರಿಕೆಯಿಂದಲಥವಾ ।
ಧರೆಯನೆಲ್ಲವ ಬೆಳಗಿಸುವ ನೇಸರಿನ ಬೆಳಕಿನಲಿ ॥
ಬರುವುದೈ ನೋಚರಕೆ ದೃಷ್ಟಿಗೆ ।
ಮೆರೆವ ವಿಶ್ವವಿದೆಲ್ಲವೀಪರಿ ।
ಯಿರುವ ವಿಶ್ವವಿದೆಲ್ಲವಜ್ಞಾನದಲಿ ತೋರುವುದು ॥ ೧೯೩ ॥

ಅರಿಯಲಾ ಪರಬ್ರಹ್ಮರೂಪಕೆ ।
ಬರುವುದಜ್ಞಾನದಲಿ ವಿಶ್ವತೆ ।
ಬರಿದೆ ನೋಡಿದು ವಿಶ್ವವೆಂಬುದು ಮಿಥ್ಯವಾಭಾಸ ॥
ಬರಲು ಲಯ ಸಂಭವು ಸ್ವರೂಪಕೆ- ।
ಮೆರೆವುದಲ್ಲವೆ ಬೆಳ್ಳೆಯಾಪರಿ ।
ಹರಿಯೆ ಹಗ್ಗದ ಜ್ಞಾನವಾಕ್ಷಣ ಬಕ್ಕು ಸರ್ಪತ್ವ ॥ ೧೯೪ ॥

ತರಣಿಶಶಿಗಳ ಪ್ರವರತೇಜವು ।
ಬರುವುದೀರೂಪದಲಿ ಬೆಳಕಿಗೆ ।
ಯಿರುವುದತಿ ತೇಜಸ್ವಿ ಸರ್ವವ್ಯಾಪ್ತವೀರೂಪ ॥
ತರಣಿಶಶಿಗಳ ರೂಪಕದರಿಂ ।
ಬರುವುದೈ ಬಹುತೇಜ ಪಾರ್ಥನೆ ।
ಯಿರುವುದಿದುವೇ ಸರ್ವತೇಜಸ್ವಿ ಪ್ರಕಾಶದವು ॥ ೧೯೫ ॥

ಶರಣಿಯುದಯದ ಮೇಲೆ ಗಗನದ- ।
ಲಿರುವ ಹಿಮಕರ ತಾರೆಗಳು ತಾ- ।
ವಿರಹೆ ನಿಸ್ತೇಜಗಳು ರಂಬಿಪುವಲ್ಲಹೇ ಪಾರ್ಥ ॥

ಬರಲು ಸ್ವಾತ್ಮಜ್ಞಾನವೀಪರಿ ।
ಸೆರೆವುದೈ ನಿಸ್ತೇಜವೆಲ್ಲವು ।
ತರಣಿಶತಿತಾರೆಗಳು ನಿಸ್ತೇಜಗಳು ಬ್ರಹ್ಮದಲಿ ॥ ೧೯೬ ॥

ಬರಲು ಜಾಗೃತಿ ಸ್ವಪ್ನದೊಳಗಿನ ।
ಪರಿಯು ಲಯವಾಗುವುದು ನಿಜವೈ ।
ಬರಲು ಸಂಧ್ಯಾಕಾಲ ಮೃಗಜಲ ಲುಪ್ತವಾಗುವುದು ॥
ಬರಲು ಸ್ವಾತ್ಮಜ್ಞಾನವಾಪರಿ ।
ಬರುವುದನ್ಯಜ್ಞಾನಕೈ ಲಯ ।
ಬರಲು ಯೆನ್ನೊಳು ಸ್ವಾತ್ಮಜ್ಞಾನದಿ ನೋಡು ಕೌಂತೇಯ
॥ ೧೯೭ ॥
ತಿರಿಗಿ ಸಂಸಾರದಲಿ ಬಾರರು ।
ಶರಧಿಯಲಿ ಬಂದಿರುವ ನದಿಗಳು ।
ಮರಳಿ ಹರಿವುವೆ ಗಿರಿಯ ಕಡೆಗಾತೆರದಿ ಕೌಂತೇಯ ॥
ಕರಿಯ ಲವಣದಿ ವಿರಚಿಸುತಲದ ।
ಶರಧಿಯಲಿ ಮುಳುಗಿಸಲು ಮೇಣದು ।
ಕರಗದಲೆ ಮೇಲಕ್ಕೆ ಬರುವುದೆ ಮರಳಿ ಕೌಂತೇಯ ॥ ೧೯೮ ॥

ಗಾಳಿಯಲ್ಲಾಕಾಶಕೇರಿದ ।
ಜ್ವಾಲೆ ಹಿಂತಿರುಗುವುದೆ ಭೂಮಿಗೆ ।
ಮೇಲೆ ಸುರಿದರೆ ತಪ್ತಲೋಹದ ನೀರು ಮರಳುವುದೆ ॥
ತಾಳುತೆನ್ನೊಳಗೈಕ್ಯ ಜ್ಞಾನ ವಿ- ।
ಶಾಲರೂಪದಿ ಮುಕ್ತರಪ್ಪರು ।
ತಾಳಲಾರರು ಜನ್ಮಮೃತ್ಯಿರ್ಯಂತ್ರಯಾತನೆಯ ॥ ೧೯೯ ॥

ಅರುಹುತೀಪರಿ ಜ್ಞಾನರಾಯನು ।
ಹರುಷದಿಂದರುಹಿದನು ಮುಂದೆ ।
ಕ್ಕೆರುವ ಶ್ಲೋಕಕೆ ಸರಸ ಪ್ರಸ್ತಾವನೆಯು ತೆರನಾಗಿ ॥
ಹರಿಯ ಭಾಷಣವೆಲ್ಲ ಕೇಳುತ ।
ನರನು ಬುದ್ಧಿಸ್ವರೂಪ ಪೃಥ್ವಿಯ ।
ದೊರೆಯು ವಿನಯದಿ ಬಿನ್ನವಿಸಿದನು ಕೃಷ್ಣರಾಯನಲಿ
॥ ೨೦೦ ॥

ಹರಿಯೆ ನಿನ್ನ ಕೃಪಾಪ್ರಸಾದವು ।
ಭರದೊಳಾಯಿತು ಯೆನ್ನೊಳೆಂದಿಗೆ ।
ಯಿರುವುದೊಂದು ವಿನಂತಿ ಮನಗೊಟ್ಟದನು ಕೇಳುವುದು ॥
ಹರಿಯೆ ನಿನ್ನೊಳು ತಾಳಲೈಕ್ಯವ ।
ತಿರಿಗಿ ಸಂಸಾರದಲಿ ಬಾರರು ।
ಅರುಹಿದೀಪರಿಯಲ್ಲವೇ ನೀನೀಗ ಶ್ರೀಕೃಷ್ಣ ॥ ೨೦೧ ॥

ಸಂದಕಂದಮುಕುಂದ ನಿನ್ನೊಳು ।
ಬಂದು ಸೇರುವ ತನಕ ನಿನ್ನಯ ।
ಚಂದರೂಪದ ತೆರದೊಳಿರುವರೊ ಭಿನ್ನರಿಹರೇನು ॥
ಹಿಂದಿನಿಂದಲನಾದಿ ಸಿದ್ಧತೆ ।
ಯಿಂದ ಭಿನ್ನ ಸ್ವರೂಪರಿದ್ದರೆ ।
ಹಿಂದೆ ಬಾರರು ಯೆಂಬುದೀ ನುಡಿ ಸಟೆ ಯೆನಿಸುವ್ರದಲಾ
॥ ೨೦೨ ॥

ಸರಸಿಜದ ಮಕರಂದ ಸೇವಿಸು ।
ವರೆ ನಡೆದ ಭ್ರಮರಗಳು ತಾವೇ ।
ಸರಸಿಜಗಳಾಗುವುದು ಸಂಭವನೀಯವೇ ಕೃಷ್ಣ ॥
ಶರಗಳಾಪರಿ ಲಕ್ಷ್ಯ ಭೇದಿಸಿ ।
ತಿರಿಗಿ ನೆಲಕುರುಳುವವು ನೋಡಲು ।
ಬರುವುದೇ ಕೇಳೈಕ್ಯ ಶರಲಕ್ಷ್ಯದಲಿ ಶ್ರೀಕೃಷ್ಣ ॥ ೨೦೩ ॥

ಹರಿಯೆ ನಿನ್ನೊಳಗೈಕ್ಯ ಹೊಂದಲು ।
ತಿರಿಗಿ ಬಾರರು ಯೆಂಬ ಮಾತಿದು ।
ಸರಿ ಯೆನುತ ನಂಬಿದರೆ ಶೋಭಸಲಾರದೀ ಮಾತು ॥
ಹರಿಯೆ ನೀನವರೇಕರೂಪರು ।
ಪರಿಯಿದಾದರೆ ಹೇಳು ನನಗಿದ ।
ಹರಿಯೆ ಯಾರೊಳು ಯಾರು ಸೇರುವುದೆಂದು ವಿಸ್ತರಿಸಿ
॥ ೨೦೪ ॥

ಶಸ್ತ್ರ ಶಸ್ತ್ರದೊಳೈಕ್ಯ ಪಡೆವುದೆ ।
ಸತ್ಯವಾದರೆ ತ್ವತ್ಸ್ವರೂಪರು ।
ಮತ್ತೆ ಯವರಿಗೆ ಬಹುದೆ ಹೇಳು ನಿಯೋಗ ಸಂಯೋಗ ॥

ಪೃಥ್ವಿಯಲ್ಲಿ ಶರೀರಕವಯವ ।
ಕೆತ್ತಣಿಂದ ನಿಯೋಗವಪ್ಪುದು ।
ಯೆತ್ತಣಿಂ ಸಂಯೋಗವಪ್ಪುದಭಿನ್ನರೂಪದಲಿ ॥ ೨೦೫ ॥

ಇರಲು ಕೇಳಾ ತೆರದಿ ಭಿನ್ನತೆ ।
ತಿರಿಗಿ ಬಾರರು ಯೆಂಬ ಮಾತಿದು ।
ಯಿರುವುದೇನೈ ಸತ್ಯ ವಂಚಿವುದೇಕೆ ನೀನೆನ್ನ ॥
ಹರಿಯೆ ನಿನಗೀ ತೆರದಿ ಪರಿಪರಿ ।
ಯಿರುವುವಲ್ಲವೆ ಮುಖಗಳದರಿಂ ।
ತಿರಿಗಿ ಬಾರರು ಯಾರು ಹೇಳೆನಗದನು ವಿಸ್ತರಿಸಿ ॥ ೨೦೬ ॥

ನರನ ನುಡಿಗಳ ಕೇಳುತೀ ಪರಿ ।
ಹರುಷವುಳಕಿತನಾಗಿ ಶ್ರೀಹರಿ ।
ಯರಿತನೈ ನಾ ಪೇಳ್ದುದೆಲ್ಲದರರವಿನಿಗಾಯ್ತು ॥
ಹರಿಯು ಸರ್ವಜ್ಞರ ಶಿರೋಮಣಿ ।
ಯರಿತನೈ ಪಾರ್ಥನ ಮನದೊಳಿಹ ।
ಪರಿಯನೈ ಮೇಣುತ್ತರವ ತಾನಿತ್ತ ಪಾರ್ಥನಿಗೆ ॥ ೨೦೭ ॥

ನರನೆ ಕೇಳೈ ಯೆನ್ನ ಸೇರಲು ।
ತಿರಿಗಿ ಸಂಸಾರಕ್ಕೆ ಬಾರರು ।
ಯಿರುವರೆನ್ನಿಂ ಭಿನ್ನರೋ ಮೇಣಲ್ಲವೋ ಯೆಂಬ ॥
ಇರುವುದಲ್ಲವೆ ನಿನ್ನ ಪ್ರಶ್ನೆಯು ।
ವೊರುವೆ ನಿನಗುತ್ತರವನಿದನಾ ।
ನಿರುವರೀರ್ವಿಧರಾಗಿ ಭಿನ್ನರಭಿನ್ನರವರೆಲ್ಲ ॥ ೨೦೮ ॥

ಪರಿಕಿಸಲು ಸುವಿಚಾರ ದೃಷ್ಟಿಯೊ ।
ಳಿರುವುದೈಕ್ಯವು ಯೆನ್ನೊಳವರೊಳು ।
ಬರೆದೆ ಮೇಲಿಂ ಮೇಲೆ ನೋಡಲು ಭಿನ್ನರೆನಿಸುವರು ॥
ಶರಧಿಯಲಿ ಗಾಳಿಯ ಪ್ರವಾಹದಿ ।
ತೆರೆಗಳೇಳ್ವುವು ಭಿನ್ನ ತೋರುವ್ರ ।
ವಿರುವುದೇನೈ ಭೇದ ಶರಧಿಯ ನೀರೆ ತೆರೆಗಳಲಿ ॥ ೨೦೯ ॥

ಚಿನ್ನದಿಂದಾಭರಣ ಮಾಡಲು ।
ಭಿನ್ನವೆಂತೇ ತೋರ್ಪುವವುಗಳು ।
ಚಿನ್ನವಲ್ಲವೆ ಯೆಲ್ಲ ಸುವಿಚಾರದಲಿ ದೃಷ್ಟಿಸಲು ॥
ಪೂರ್ಣಜ್ಞಾನದಿ ನೋಡಲೆನ್ನನು ।
ಭಿನ್ನತೆಯ ಕಾಣರು ಕಣಾ ಅ ।
ಜ್ಞಾನದಿಂ ದೃಷ್ಟಿಸಲು ಭಿನ್ನತೆ ವ್ಯಕ್ತವಾಗುವುದು ॥ ೨೧೦ ॥

ವಾಸ್ತವಿಕ ಸುವಿಚಾರದೃಷ್ಟಿಯ- । ಮೆರೆವ ಗಗನವು ವರ್ತುಲವೊ ಮೇ- ।
ನಿತ್ತು ಯೆನ್ನ ನಿರೀಕ್ಷಿಸಿದರು- । ಣಿರುವುದೋ ಚತುರಸ್ರವೆಂಬೀ- ।
ತ್ಪತ್ತಿಯಾಗುವುದೇನು ಭಿನ್ನಾಭಿನ್ನ ಪ್ರಶ್ನೆಯದು ॥ ಪರಿಯ ಪರಿಕಿಸಬಹುದೆ ಯಿಹುದೇನ್ ಗಗನಕಾಕಾರ ॥
ಎತ್ತಣಿಂದೀ ಪರಿಯ ದೃಷ್ಟಿಶೋ- । ಪರಿಯಿದಾದರು ಘಟಮತದಿ ಬಂ- ।
ತ್ಪತ್ತಿ ಯೆನ್ನೊಳಗಾಗುವುದೊ ಕೇಳ್ । ದಿರುವುನೈ ಯಾಕಾರವೀ ಪರಿ ।
ವಿಸ್ತರಿಸಲಾಕಾಶದಲಿ ಸರ್ವತ್ರ ಸೂರಿಯನು ॥ ೪೧೧ ॥ ಯಿರುವುದೈ ಪರಿಪರಿಯುಪಾಧಿಯು ಸ್ಥಲವಲಾ ಪಾರ್ಥ ॥ ೪೧೫ ॥

ಪಸರಿಸುವನವನೆಂತು ಬೆಂಬವ- । ನರಗೆ ನಿದ್ರೋಪಾಧಿಯಿಂದಲೆ ।
ನೆಸೆವುದೆಂತೈ ಕಿರಣ ಸುತ್ತಲು । ಬರಲು ಸ್ವಪ್ನಾದಿ ರಾಜ್ಯಪದವಿಯು ।
ಪಸರಿಸಲು ಕಲ್ಪಾಂತಕಾಲದ ಜಲವು ಭೂಮಿಯಲಿ ॥ ಮೆರೆವನೊರ್ವನೆ ಯವನು ಪ್ರಜೆ ರಾಜ್ಯಾದಿ ಪರಿವಾರ ॥
ಉಸುರಲೇನದ ಹಳ್ಳ ಹೊಳೆ ಕೆರೆ । ಧರೆಯೊಳುತ್ತಮ ಚಿನ್ನ ಕೀಳಿಹ ।
ವಿಷಮ ಸಮವೆಂದೆನಿಪ ಭೇದವು । ನಿರಸ ಚಿನ್ನದೊಳೈಕ್ಯ ಹೊಂದಲು ।
ವಸುಮತಿಯೊಳೀನಿಹುದು ಹೇಳೈ ಯೆನಗೆ ಕೌಂತೇಯ ಬರುವುದಲ್ಲವೆ ಕೀಳುತನವಾ ಶುದ್ಧರೂಪದಲಿ ॥ ೪೧೬ ॥
॥ ೪೧೨ ॥

ಇರುವೆ ನಾನೇಕಸ್ವರೂಪನು । ನರನೆ ಮಾಯೆಯು ಸುತ್ತಲೆನ್ನನು ।
ನರನೆ ನಾನಿಹೆ ನಿರ್ವಿಕಾರನು । ಒರುವುದೆನ್ನಯ ಶುದ್ಧ ರೂಪಕೆ ।
ಒರುವುದೆಂತೈ ಭೇದಭಿನ್ನಾಂಶಗಳು ಯೆನ್ನೊಳಗೆ ॥ ಕಿರಿತನವು ಮೇಣಾಗ ಹುಟ್ಟುವುದೆನ್ನೊಳಗೆ ಭೇದ ॥
ಒರುವುದೆಂತೀ ಪ್ರಶ್ನೆ ಪಾರ್ಥನೆ । ಬರುವುದಾ ಮಾಯೆಯು ವಶದಲಾ- ।
ಇರುವೆ ಭಿನ್ನನೊ ಅಲ್ಲವೆಂಬುದು । ಪರಿಯ ಭೇದವು ಜೀವನೀಶ್ವರ- ।
ಒರುವರೈ ಜೀವಾತ್ಮರೆನ್ನೊಳಭಿನ್ನತನದಿಂದ ॥ ೪೧೩ ॥ ನೆರಡು ತತ್ತ್ವಗಳೆಂದು ತೋರ್ಪುವು ಮಾಯೆಯಾಟವಿದು ॥೪೧೭॥

ಭಿನ್ನ ತೋರುವ ಕಾರಣವನಾ- । ಸುತ್ತುಮುತ್ತಣ್ಣಾನತಿಮಿರವು ।
ನಿನ್ನು ಪೇಳುವೆ ನೀರು ಸರಳವು । ವಿಸ್ತರಿಸಲೀ ಪರಿಯ ಭೇದೋ- ।
ಮುನ್ನ ಕೇಳೋಘದ ಪ್ರಕಾರದಿ ವಕ್ರತೋರುವುದು ॥ ತ್ಪತ್ತಿಯಾಗುವುದಲ್ಲವೇ ಮಾಯಾವಿಕಲ್ಪನಿದು ॥
ಮುನ್ನ ನೀರಲಿ ಬಿಂಬ ಬೇಳಲು । ಧಾತ್ರಿಯಲ್ಲೀ ದೇಹ ನಾನೇ ।
ಭಿನ್ನತೆಯು ತೋರುವುದು ಸೂರ್ಯಗೆ । ಸತ್ಯವೆಂಬ ವಿಚಾರ ಹುಟ್ಟುತ ।
ಕಣ್ಣುಗೋಚರ ಬಿಂಬಪ್ರತಿಬಿಂಬಗಳು ಬೇರಿಹುವು ॥ ೪೧೪ ॥ ವ್ಯರ್ಥ ಮಾಯೆಯ ಬಲೆಯೊಳಗೆ ಸಿಲುಕುವನು ಮರುಳನಲಾ ॥೪೧೮॥

ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ।
ಮನಃ ಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ॥ ೭ ॥

ನರನೆ ಕೇಳೀತೆರದಿ ದೇಹದೊ- । ಶರಧಿಯಲಿ ಗಾಳಿಯ ಪ್ರವಾಹದಿ ।
ಳಿರುವ ಪಮಾತುಮನ ರಾವಿನ- । ತೆರೆಗಳೇಳ್ವುವು ಗಣನೆಯಿಲ್ಲದೆ ।
ಲಿರುವನಾತ್ಮನು ನೋಡು ದೇಹದಿ ಸಹಿತ ಕೌಂತೇಯ ॥ ಶರಧಿಯಂಶವೆನುತ್ತ ತೋರ್ಪುವು ವಿಹಿತವೈ ಪಾರ್ಥ ॥
ಬರುವುದೀಪರಿ ಮನದಿ ನಿಶ್ಚಯ । ನರನೆ ಕೇಳೀ ತೆರದಿ ದೇಹದಿ ।
ಮೆರೆವ ಜೀವ ಮಮಾಂಶವೆಂಬೀ- । ಬರಲಹಂಕಾರಪ್ರವೃತ್ತಿಯು ।
ಪರಿಯು ಮನದಲಿ ಭಾಸವಾಗುವುದೈ ಧನಂಜಯನೆ ॥೪೧೯॥ ಮೆರೆವ ಜಡದೇಹದಲಿ ಚಾಲಕ ಜೀವರೂಪದಲಿ ॥ ೪೨೦ ॥

ಇರುವೆ ನಾನೀ ಮರ್ತ್ಯಲೋಕದಿ ।
ಮೆರೆಸುವೆನು ವ್ಯವಹಾರವೆಲ್ಲವ ।
ಕರೆವರಿದನೇ ಜೀವಲೋಕದ ಸೃಷ್ಟಿಯಾಖ್ಯೆಯಲಿ ॥
ಮರಣ ಜನ್ಮಗಳೆರಡು ನಿಜವೆಂ- ।
ದರಿವ ಲೋಕಕೆ ಜೀವಲೋಕವು ।
ಯಿರುವುದೈ ಸಂಸಾರವೆಂಬುವ ಹೆಸರಿನಲಿ ತಿಳಿಯೆ ॥ ೨೨೧ ॥

ನೀರಿನಲಿ ಪ್ರತಿಬಿಂಬಿಸುವ ಶಶಿ ।
ಬೇರೆ ಯಿದ್ದರದೇನು ಮೇಣವ ।
ನೀರಿನಲ್ಲಿಹನೆಂದು ನರಗಾಭಾಸವಾಗುವುದು ॥
ಧಾರುಣಿಯಲೀ ಮರ್ತ್ಯಲೋಕದಿ ।
ತೋರುತಿಹುದಾಭಾಸನೀಪರಿ ।
ಬೇರೆ ನಾನಿಹೆನಾದರೀ ದೇಹದಲಿ ತೋರುವೆನು ॥ ೨೨೨ ॥

ನರನೆ ಸ್ಫಟಿಕವ ಕುಂಕುಮದ ಮೇ- ।
ಲಿರಿಸಲದು ಕೆಂಪಾಗಿ ತೋರುವು- ।
ದಿರುವುದೇನಾ ಸ್ಫಟಿಕಮಣಿ ಕೆಂಪಾಗಿ ಕೌಂತೇಯ ॥
ಮುರಿಯದೆನ್ನಾದ್ಯ ಸ್ವರೂಪವು ।
ಯಿರುವೆ ನಿಷ್ಕ್ರಿಯ ನಾನು ನೋಡಲು ।
ಹೊರಿಸುವರು ಕರ್ತೃತ್ವಭೋಕ್ತೃತ್ವಗಳ ಮೇಲೆನ್ನ ॥ ೨೨೩ ॥

ಬರುವುದೀಪರಿ ಭ್ರಾಂತಿಯವರಿಂ- ।
ಗರಿಯಲಾ ನಿಜತತ್ತ್ವ ವಾರ್ತೆನೆ ।
ಮೆರೆವ ಪರಿಶುದ್ಧಾತ್ಮ ಪ್ರಕೃತಿಯೊಳೈಕ್ಯ ತಾಳುವನು ॥
ಬರುವುದಾ ಕಾರಣದಿ ಪ್ರಕೃತಿಯೊ- ।
ಳಿರುವ ಸಕಲೋಪಾಧಿಯಾತ್ಮಗೆ ।
ಮೆರೆವನಾ ಕಾರಣದಿ ಬದ್ಧನು ಪ್ರಕೃತಿಧರ್ಮದಲಿ ॥ ೨೨೪ ॥

ನರನೆ ಕೇಳ್ ತದನಂತರದ ಪರಿ ।
ಯಿರುವ ಪಂಚೇಂದ್ರಿಯವು ಮನವೈ ।
ಮೆರೆವುವೆನ್ನ ವೆನುತ್ತ ವ್ಯವಹಾರವನು ನಡೆಸುವನು ॥

ಬರಲು ಸ್ವಪ್ನಾವಸ್ಥೆಯದರಲಿ ।
ಮೆರೆಸುವನು ಸಂಸಾರನಾಟಕ- ।
ವರಿಯದಲೆ ಸಂನ್ಯಾಸಿ ತಾನಿಹೆನೆಂದು ಸ್ವಪ್ನದಲಿ ॥ ೨೨೫ ॥

ಮರಳಿ ಭ್ರಾಂತಿಯ ಮೋಹದಿಂದಾ ।
ಪರಿಯಲಾ ಸಂನ್ಯಾಸಿ ಸ್ವಪ್ನದಿ ।
ತಿರುಗುವನು ಸ್ವೇಚ್ಛೆಯಲಿ ಕೌಂತಪರಿಯಲಿದು ಪಾರ್ಥ ॥
ಬರಲು ತನ್ನ ಸ್ವರೂಪ ವಿಸ್ಮೃತಿ ।
ಮೆರೆವ ಸ್ವಾತ್ಮನು ಪ್ರಕೃತಿಯೆಂದೇ ।
ಯರಿತು ಪ್ರಕೃತಿಯ ತೆರದಿ ಕಾಲಕ್ರಮಣ ಮಾಡುವನು ॥ ೨೨೬ ॥

ಏರಿ ಮನವೆಂಬೀ ರಥದಲಾ ।
ಚಾರು ಶ್ರವಣೇಂದ್ರಿಯದ ದ್ವಾರದಿ ।
ಸೇರುವನು ಸಂಚಾರ ಮಾಳ್ಪನು ಶಬ್ದ ವನದೊಳಗೆ ॥
ಏರಿಸುತ ಪ್ರಕೃತಿಯ ಲಗಾಮುವ ।
ಚಾರುತ್ವಗ್ದ್ವಾರದಲಿ ಹೊರಡುತ ।
ಘೋರತರ ಸ್ಪರ್ಶಸ್ವರೂಪದ ವನವ ಸೇರುವನು ॥ ೨೨೭ ॥

ಮರಳಿ ನೇತ್ರದ್ವಾರದಿಂದಲಿ ।
ಹೊರವಡುತ ರೂಪಸ್ವರೂಪದ ।
ಗಿರಿಯನೇರುತ ಸ್ವೇಚ್ಛೆಯಲಿ ಸಂಚಾರ ಮಾಡುವನು ॥
ನರನೆ ರಸನಾದ್ವಾರದಿಂದಲಿ- ।
ಹೊರವಡುತ ರಸವೆಂಬ ಗುಹೆಯಲಿ ।
ತಿರುಗುತಿಹನವನೇನ ಹೇಳಲಿ ಸ್ವೈರವರ್ತನವ ॥ ೨೨೮ ॥

ತಿರಿಗಿ ನಾನಾ ದ್ವಾರದಿಂದಲಿ ।
ಹೊರವಡುತಲುರುಗಂಧವನದಲಿ ।
ತಿರುಗುತಿಹನು ಮಮಾಂಶ ಜೀವನು ನೋಡು ಕೌಂತೇಯ ॥
ಇರುವನೈ ನಾಯಕನು ದೇಹವ- ।
ನಿರದೆ ಪಂಚೇದ್ರಿಯಗಳೆಲ್ಲವ ।
ಭರದಿ ಕೈವಶ ಮಾಡಿ ವಿಷಯಂಗಳನು ಭೋಗಿಪನು ॥ ೨೨೯ ॥

ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ ।
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ॥ ೮ ॥

ನರನೆ ಕೇಳೈ ಜೀವ ದೇಹದಿ ।
ಬರುತ ಮಾಡೆ ಪ್ರಭೇಶ ತತ್‌ಕ್ಷಣ ।
ಬರುವುದೈ ಗೋಚರಕೆ ಜೀವನ ಕರ್ತೃಭೋಕ್ತೃತ್ವ ॥

ಅರಮನೆಯೊಳಿರುತಿರುವ ಪೂರುಷ- ।
ನಿರುವನೀಶ್ವರನೆಂಬ ಭಾವನೆ ।
ಬರುವುದೈ ಗೋಚರಕೆ ಸುವಿಲಾಸದಲಿ ಮಾನವ ॥ ೨೩೦ ॥

ಚಾರುಣಿಯಲೀ ಜೀವ ತಾನು ಶ- ।
ರೀರವನು ಧಾರಣವ ಮಾಡಲು ।
ತೋರುವುದು ಗೋಚರದಿ ಪುರುಷನ ವಿಷಯವಾಸನೆಯು ॥
ತೋರುವುದಹಂಕಾರವಾಪರಿ ।
ಚಾರುಜೀವಾತುಮನು ತನ್ನ ಶ- ।
ರೀರವನು ಒದಗಿಟ್ಟು ನಡೆಯಲು ಹೊರಗೆ ಕೌಂತೇಯ
॥ ೨೩೧ ॥

ತನ್ನ ಹತ್ತರಿರುವ ಸಂತತ ।
ಸನ್ನುತೇಂದ್ರಿಯತತಿಸಹಿತ ಸಂ- ।
ಪನ್ನಮನ ಹೊರಗಾಡುತಿಹುದೈ ದೇಹದಿಂ ಹೊರಟು ॥
ತನ್ನ ಮನೆಗಾಗಮಿಸಿದತಿಥಿಗೆ ।
ಯನ್ನ ಕೊಡದಪಮಾನ ಮಾಡಲು ।
ಪುಣ್ಯನೆಲ್ಲವ ಕೊಂಡು ತಿರುಗುವನಲ್ಲವೇನತಿಥಿ ॥ ೨೩೨ ॥

ಆಟವಿಕನಾಡಿಸುವ ಸೂತ್ರವ- ।
ನಾಟಗಾರನು ತೆಗೆಯ ಗೊಂಬೆಗ- ।
ಳಾಟ ತೀರುವುದಲ್ಲವೇ ಕೌಂತೆಯ ನೋಡಿದಿಯಾ ॥
ನೋಟವನು ತೋರಿಸುವ ಸೂರ್ಯನು ।
ದಾಟಿ ಪಶ್ಚಿಮಜಲಧಿಗಿಳಿಯಲು ।
ನೋಟಕರ ದೃಷ್ಟಿಯು ಕಣಾ ಲೋಪವನು ತಾಳುವುದು ॥ ೨೩೩ ॥

ನರನೆ ಜೀವಾತುಮನು ದೇಹವ ।
ತೊರೆದು ಹೊರಡುವ ವೇಳೆಯಲಿ ಹ- ।
ತ್ತರಿರುವ ಜ್ಞಾನೇಂದ್ರಿಯಂಗಳ ಮನದಿ ಸಹಿತಗಳ ॥
ಹೊರಗೆ ತಾನೊಯ್ಯುವನು ನೋಡೈ ।
ಸರಸ ಪುಷ್ಪಪರಾಗ ವಾಯುವು ।
ಹರಿದು ಕೊಂಪೋಗುವ ತೆರದಲೈ ಪಾರ್ಥ ನೋಡಿದಿಯಾ ॥೨೩೪॥

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ॥ ೯ ॥

ಮರಳಿ ಜೀವಾತುಮನು ಹೋಗುವ ।
ಪರಿಪರಿಯ ರಾವಿನಲಿ ಬಿಹದಲಿ ।
ಪರದಲಾಗಲಿ ದೇಹಧರಿಸಿದ ರಾವಿನಲ್ಲಲ್ಲಿ ॥
ತಿರಿಗಿ ಮನ ಜ್ಞಾನೇಂದ್ರಿಯಂಗಳ- ।
ನಿರದೆ ವಿಸ್ತರಿಸುತಲಿ ತನ್ನಯ ।
ಪರಿಪರಿಯ ಮಾಯಾಟ ಮಾಳ್ಪನು ಪಾರ್ಥ ನೋಡಿದಿಯಾ
॥ ೨೩೫ ॥

ಧಾರುಣಿಯಲೀತೆರದಿ ಒಲುವ್ಯವ- ।
ಹಾರ ನಡೆಯುತಲಿಹುದು ಸಂತತ ।
ತೋರುವುದು ಗೋಚರದಿ ಮೂಢರ ಮನದಲೀ ತೆರದಿ ॥
ಸೇರುವನು ದೇಹದೊಳಗಾತ್ಮನು ।
ಧಾರುಣಿಯಲುಪಭೋಗವವನು ವಿ- ।
ಹಾರವನು ಮಾಡುವನು ವಿಷಯೇಂದ್ರಿಯಗಳಲಿ ಪಾರ್ಥ ॥೨೩೬॥

ನೊಂದು ಹೋಗಲು ದೀಪತೇಜವು ।
ಹಿಂದುಳಿವುದೇ ಹೇಳಹುದೆಲ್ಲವು ।
ಚಂದದಿಂದಾ ದೀಪ ಪುನರಪಿ ಹಚ್ಚಿದರೆ ನೋಡು ॥
ಹಿಂದಿರುವ ತೇಜವದು ಸಕಲವು ।
ಬಂದು ಬೆಳಗುವುದಯ್ಯ ಕುಂತೀ- ।
ನಂದನನೆ ಕೇಳೀತೆರದಿ ಜೀವಾತ್ಮ ಜನಿಸುವನು ॥ ೨೩೭ ॥

ಆತುಮನು ದೇಹವನು ತೊರೆವನು ।
ಮಾತು ನಿಶ್ಚಯನಿದುವೆನುತಲೀ- ।
ಭೂತಳದಿ ಮಾನವರು ಮೂಢರು ನಂಬುವರು ನಿಜದಿ ॥
ಈ ತೆರದಿ ತತ್ತ್ವವ ಪರೀಕ್ಷಿಸೆ ।
ನೀ ತಿಳಿಯುಲಾ ಜನ್ಮಮರಣವು ।
ವಾಸ್ತವಿಕ ಧರ್ಮಗಳು ಪೃಕೃತಿಯವಾತುಮನವಲ್ಲೈ ॥ ೨೩೮ ॥

ಉತ್ಕ್ರಾಮಂತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಮ್ ।
ವಿಮೂಢಾ ನಾನುಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ ॥ ೧೦ ॥

ಯತಂತೋ ಯೋಗಿನಶ್ಚೈನಂ ಪಶ್ಯಂತ್ಯಾತ್ಮನ್ಯವಸ್ಥಿತಮ್ ।
ಯತಂತೋಽಪ್ಯಕೃತಾತ್ಮಾನೋ ನೈನಂ ಪಶ್ಯಂತ್ಯಚೇತಸಃ ॥ ೧೧ ॥

ನರನೆ ದೇಹೋತ್ಪತ್ತಿ ಯಾಗಲು ।
ಬರಲು ಚಲನವು ವಲನವದರ- ।
ಲ್ಲರಿವರಾತ್ಮನು ಬಂದನೆಂದೇ ನಂಬುವರು ಜಗದಿ ॥
ಪರಿಪರಿಯ ಜ್ಞಾನೇಂದ್ರಿಯಂಗಳು ।
ಹರುಷದಿಂ ವಿಷಯೋಪಭೋಗವ- ।
ನಿರದೆ ಪಡೆಯುವುವಾತ್ಮನಂಗತಿಯಿಂದ ಕೌಂತೇಯ ॥೨೩೯॥

ಅರಿಯಲಿದು ಜೀವೋಪಭೋಗದ ।
ಪರಿಯೆನುತಲೇ ವೇಳ್ವರೆಲ್ಲರು ।
ಬರಲು ಕ್ಷೀಣತೆ ದೇಹದಲ್ಲುಪಭೋಗ ವಿರಮಿಸಲು ।।
ಮರಣ ಬರುವುದು ದೇಹದಲ್ಲಾ- ।
ಪರಿಯ ನೋಡಲು ಜೀವ ಗಮಿಸಿದ- ।
ನರಿವರೀಪರಿ ಬರಿದೆ ವ್ಯಾಕುಲಚಿತ್ತರಾಗುವರು ।। ೨೪೦ ॥

ನರನೆ ಕೇಳ್ಮೆ ಗಾಳಿ ಬೀಸಲು ।
ಮರದ ಚಲನವು ಕಾಣ ಬಹುದೈ ।
ಮರವು ಚಲಿಸಲು ಗಾಳಿ ಬೀಸುವುದೆಂತ ತೋರುವುದು ॥
ಮರದಭಾವದಿ ಚಲನವೆಲ್ಲಿಂ ।
ಬರುವುದೈ ಚಲನವನು ನೋಡದೆ ।
ಯಿರಲು ಗಾಳಿಯೆ ಯಿಲ್ಲವೆಂಬುದು ಜಾಣತನವೇನು ॥೨೪೧॥

ಮುಂದೆ ದರ್ಪಣವಿಟ್ಟು ನೇತ್ರಗ- ।
ಳಿಂದ ತನ್ನಯ ರೂಪ ನೋಡಿದ- ।
ರಂದೆ ತನ್ನಸ್ತಿತ್ವವಾಯಿತೆ ನೋಡು ಕೌಂತೇಯ ॥
ಮುಂದೆ ದರ್ಪಣ ಬದಿಗೆ ಸರಿಸಲು ।
ಬಂದಪುದು ರೂಪಕ್ಕೆ ಲೋಪವು ।
ಯೆಂದರೀ ಜಗದಿಂದ ಲೋಪವ ತಾಳ್ವನೇ ತಾನು ॥ ೨೪೨ ॥

ಸಾಶ ತಾಳುವುದಿಲ್ಲದಿರೆ ಸುವಿ- ।
ಕಾಸ ತಾಳುವುನೀ ಗುಣಂಗಳು ।
ಭಾಸಿಸುವುವಾ ಬೆಂಬದಲಿ ದೇಹದಲಿ ಮೇಣಲ್ಲ ॥
ವಾಸವಾತ್ಮಜ ನೋಡು ನೀನಾ- ।
ಕಾಶದಿಂ ಗುಡುಗೇಳಿ ಬರುವುದೆ ।
ಭಾಸಿಸುವುದೈ ಮೇಘದಿಂದಲಿ ಮೂಢರರಿಯುವಲಾ ॥ ೨೪೩ ॥

ಭರದೊಳಾಕಾಶದಲಿ ಮೇಘಗ- ।
ಳಿರದೆ ಬಹು ಜವದಿಂದಲೋಡುತ- ।
ಲಿರಲು ಸ್ಥಿರನಿಹ ಚಂದ್ರನೋಡುವನೆಂತ ತೋರ್ಪುದಲಾ ॥

ಅರಿಯದಲೆ ಮೋಹಾಂಧರಾಗಿಹ ।
ಪುರುಷರಾತ್ಮಸ್ಥಿತಿಯ ಪಾರ್ಥನೆ ।
ಮರಣಜನನವನಾತ್ಮನಲಿ ತಾವಿರಿಸುವರು ಪಾರ್ಥ ॥ ೨೪೪ ॥

ಮರಣಜನನವು ದೇಹಕಲ್ಲದೆ ।
ಬರುವುವೇನಾ ಸ್ಥಿತಿಗಳೆರಡಾ- ।
ನರನ ದೇಹದಿ ವಾಸಮಾಡುತ ನೆರೆಯುವಾತ್ಮನಿಗೆ ॥
ಇರುವನಾತುಮನಾತ್ಮತನದಿಂ ।
ಮೆರೆವುದೈ ಗುಣವೆಲ್ಲ ದೇಹದೊ- ।
ಳಿರದಲಾ ಭೋಕ್ತೃತ್ವ ಕರ್ತೃತ್ವವು ನಿಜಾತ್ಮನಲಿ ॥ ೨೪೫ ॥

ನರಶರೀರವು ಜೀವ ವಾಸಿಸು- ।
ತಿರುವ ಚೀಲವಲಾ ಧನಂಜಯ ।
ಅರಿಯುತೀಪರಿ ಜ್ಞಾನದೀಪಜ್ಯೋತಿಯಲಿ ನಿಜವ ॥
ಬರಲು ಗಗನದಿ ಮೋಡಸಂತತಿ ।
ತರಣಿಕಿರಣಕ್ಕಡ್ಡ ಬರುವುದೆ ।
ಹೊರಟು ಮೋಡದಿ ಕಿರಣ ನೇತ್ರಾನಂದ ಮಾಳ್ಪುದಲಾ ॥೨೪೬॥

ಇರುವುದಾರಿಗೆ ಜ್ಞಾನ ಪ್ರಭೆಯೊ- ।
ತೆರದಿ ಸರ್ವಾರ್ತಿಯನಿತ್ತು ರೂಪದ ।
ವರಿಗೆ ಮುಟ್ಟಿ ಸ್ವಾತ್ಮಜ್ಞಾನೋದಯವು ಬಂದಿರಲು ॥
ಇರುವನಾತ್ಮನಕರ್ತನೆಂದೀ- ।
ಪರಿಯಲರಿವನು ಸ್ವಾತ್ಮಜ್ಞಾನಿಯು ।
ನರನೆ ನಿನಗಾನೊಂದು ದೃಷ್ಟಾಂತವನು ಪೇಳುವೆನು ॥ ೨೪೭ ॥

ತಾರೆಗಳು ಸಂಪೂರ್ಣ ತುಂಬಿಹ ।
ಮೇರೆ ಯಿಲ್ಲದ ಗಗನವೆಲ್ಲವು ।
ವಾರಿನಿಧಿಯಲಿ ಬಿಂಬಿಸಲು ಕೌಂತೇಯ ನೋಡಿದಿಯಾ ॥
ನೀರಿನಲ್ಲಾಕಾಶ ಬಿದ್ದಿದೆ ।
ಧಾರುಣಿಯಲೀ ತೆರದಿ ನಂಬುವ- ।
ರಾರು ಪ್ರತಿಬಿಂಬವನೆ ನಿಜವೆನ್ನುವರೆ ಲೋಕದಲಿ ॥ ೨೪೮ ॥

ನರಶರೀರದಲಾತ್ಮನಿದ್ದರು ।
ಯಿರನು ಕರ್ತನು ಭೋಕ್ತನಾತನು ।
ಬರಿದೆ ತೋರ್ಪನು ಕರ್ತ ಭೋಕ್ತನೆನುತ್ತ ನೋಳ್ಪರಿಗೆ ॥
ಕೆರೆಯ ನೀರಲಿ ತೋರುತಿಹ ಹಿಮ- ।
ಕಿರಣಬಿಂಬವು ನೀರಲೊಲೆಯಲು ।
ಮೆರೆವ ಚಂದ್ರಮನಲ್ಲಿ ಚಾಂಚಲ್ಯವನು ನೋಡುವರೇ ॥ ೨೪೯ ॥

ಕೊಳದೊಳಗೆ ನಂಜೆಯಿವುದಲ್ಲವೆ । ನರನ ಮನದಿ ವಿರಕ್ತಿಲೇಶವು ।
ಮಳೆಯ ನೀರದು ವರ್ಷಕಾಲದಿ । ದೊರೆಯದಿರಲುಪಯೋಗವೇನದು- ।
ಕೊಳದೊಳಗೆ ಭಾನುವಿನ ಬಿಂಬವು ಬೆಳೆಗುತಿಹುದಾಗ ॥ ವರಿಯುಲಾರರು ಯೆನ್ನ ಸರ್ವವ್ಯಾಪಕತ್ವವನು ॥
ಕೊಳದ ನೀರದು ಬತ್ತಿ ಹೋಗಲು । ದೊರೆಯದವರಿಂಗೆನ್ನ ದರ್ಶನ- ।
ಜಲಜಮಿತ್ರನು ಲುಪ್ತನಾದನೆ । ವುರುತರದ ಶಾಸ್ತ್ರಜ್ಞರಾದರು ।
ತಿಳಿಯಲವ ಬೆಳಗುವನು ನಿಶ್ಚಲಿತೆಯುಲಿ ಬಾನಿನಲಿ ॥ ೨೫೦॥ ಬರಲು ವಿಷಯಾಸಕ್ತಿವಾಸನೆ ಮನದಿ ಕೌಂತೇಯ ॥ ೨೫೪ ॥

ನಾಶವಾಗಲು ನರಶರೀರವು । ದೊರೆಯಲಾರದು ಯೆನ್ನ ದರ್ಶನ- ।
ನಾಶವಾಗೆನು ನಾನು ದೇಹವಿ- । ವರಿಯಲಾ ನೀ ನಿಜವು ಮಾತಿದು ।
ಲಾಸದಿಂದಲಿ ಜನ್ಮತಾಳಲು ಜನ್ಮನೆನಗಲ್ಲ ॥ ಒರುವುದೆಂತಾ ನರರಿಗೆನ್ನ ಪ್ರಾಪ್ತಿ ಕೌಂತೇಯ ॥
ನಾಶವಿರಹಿತ ನಾನೆನುತಲೇ । ಅರಿತರೇನೈ ಸ್ವಪ್ನದಲಿ ಪರಿ- ।
ಯಿಸುದೃಷ್ಟಿಯನಿತ್ತು ಜೀವನು । ಪರಿಯು ಶಾಸ್ತ್ರಂಗಳನು ನೇಡವ ।
ಭಾಸಿಸುವನೆಂದರಿಯಲಾ ಕೌಂತೇಯ ನಿಜತತ್ತ್ವ ॥ ೨೫೧ ॥ ಬರಲು ಜಾಗೃತಿ ಮೋಕ್ಷದಾಯಕ ಜ್ಞಾನವೆನಿಸುವುದೆ ॥ ೨೫೫ ॥

ಇರುವನಾತ್ಮನಖಂಡಸತ್ತಾ- । ಹಿರಿಯರರಿತಿಹ ಜ್ಞಾನಗ್ರಂಥದ ।
ಧರನೆನುತ ಸುಜ್ಞಾನದಿಂದಲಿ । ಸರಣಿಯನು ರಕ್ಷಣವ ಮಾಡಲು ।
ನಿರುತವಿರದೀ ದೇಹ ಕ್ಷಣಭಂಗುರವಲಾ ಯೆನುತ ॥ ಬರುವುದೇನೈ ಮಗನಿಗಾ ವಾಂಡಿತ್ಯ ವೋದದಲೆ ॥
ಅರಿವರಾರೈ ಸ್ವಪ್ನಶನದ- । ನರನು ಕಣ್ಗಳ ಕಟ್ಟಿ ಕೊಳುತಲೆ ।
ಲ್ಲಿರುವರವರೇ ಜಗದಿ ಜಾಣರು । ಕರದಿ ಮುತ್ತನು ಹಿಡಿದು ಮೂಗಿನೊ- ।
ಯಿರವು ಭರತಿಯಿಳೆತಗಳಾತ್ಮನಿಗೆ ತ್ರಿಕಾಲದಲಿ ॥ ೨೫೨ ॥ ಳೆರಿಸಲದರ ಪರೀಕ್ಷೆ ತಿಳಿವುದೆ ಚಾತಿಮೌಲ್ಯಗಳ ॥ ೨೫೬ ॥

ಒಂದುದಾರಿಗೆ ಸ್ವಾತ್ಮಜ್ಞಾನವು । ಚಿತ್ತದಲ್ಲಭಿಮಾನ ಧರಿಸುತ ।
ಒಂದುದವರಿಗೆ ಸ್ವಾತ್ಮರೂಪವು । ಶಾಸ್ತ್ರವೆಲ್ಲನ ಪಠನಮಾಡಲು ।
ಯೆಂದಿಗಾದರು ಸ್ವಾತ್ಮಚೇಷ್ಟಾಹೀನನಾಗಿಹನು ॥ ಯೆತ್ತಿದರು ಕೋಟ್ಯವಧಿ ಜನ್ಮಗಳನ್ನು ಕೌಂತೇಯ ॥
ಒಂದರೇನಾ ಜ್ಞಾನ ನಿರುಪಮ । ವ್ಯರ್ಥವಲ್ಲವೆ ಗ್ರಂಥವಾಜನ ।
ಬಂದರೇನಾ ಬುದ್ಧಿ ತೀಕ್ಷ್ಣವು । ವಾಪ್ತನಾಗೆನು ನಾನು ನನ್ನಯ ।
ಒಂದರೇನಾ ಶಾಸ್ತ್ರಪೌರಾಣಗಳ ಕುಶಲತೆಯು ॥ ೨೫೩ ॥ ವ್ಯಾಪ್ತಿ ಸರ್ವರೊಳೆಂತಿಹುದು ನಾನರುಹುವೆನು ನಿನಗೆ ॥ ೨೫೭ ॥

ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್ ।
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್ ॥ ೧೨ ॥

ನರನೆ ವಿಶ್ವವ ದೃಷ್ಟಿಗೋಚರ- ।
ತರುವ ಸೂರ್ಯನ ತೇಜವೆಲ್ಲವು ।
ಕಿರಣಗಳು ಮೇಣ್ ಸೂರ್ಯನೆನ್ನವನೆಂದು ತಿಳಿ ಪಾರ್ಥ ॥

ತರಣಿಕಿರಣದಿ ಜಲವ ಶೋಷಿಸೆ । ಉರಿಗೆ ದಾಹಕಪಾಚಕಗಳಾ-।
ಮರಳಿ ಮೇದಿನಿಗಾರ್ದ್ರ ಮಾಡುವ । ದೆರಡು ಶಕ್ತಿಗಳನ್ನು ಕೊಟ್ಟಹೆ- ।
ಮೆರೆವ ಚಂದ್ರನು ಚಂದ್ರನಪ್ರಭೆ ಯೆನ್ನವೇ ಪಾರ್ಥ ॥ ನರಿಯಲಾ ಮೇಣಾರಿಗೆ ತೇಜವು ಬಂದುದೆನ್ನಿಂದ ॥ ೨೫೮ ॥

ಗಾಮಾವಿಶ್ಯ ಚ ಭೂತಾನಿ ಧಾರಯಾಮ್ಯಹಮೋಜಸಾ ।
ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ ॥ ೧೩ ॥

ಧಾರುಣಿಯನೊಳ ಹೊಕ್ಕು ನಾನಾ- ।
ಧಾರನಾಗಿಹೆ ಧಾರುಣಿಗೆ ಯಾ- ।
ಕಾರಣದಿ ಧಾರುಣಿಯು ಧೂಳಿಯ ಗೋಳವಾದರೆಯು ॥
ವಾರಿನಿಧಿಯ ಮಹಾಮಹಾಜಲ- ।
ವಾರದಿಂದಿದು ಕರಗಿ ಹೋಹದು ।
ವಾರವಿಹುದೇ ನೀರಿಗಾಪರಿ ವಾರವೆನಗಿಹುದೆ ॥ ೨೫೯ ॥

ಮರಳಿ ಚಂದ್ರನ ಕಿರಣಬಲದಿಂ ।
ಧರೆಯೊಳಗೆ ರಂಜಿಪ ವನಸ್ಪತಿ- ।
ಗಿರದೆ ನಾ ಪೋಷಣವ ಕೊಡುವೆನು ಬೆಳೆವುದೆನ್ನಿಂದ ॥
ಪರಿಪರಿಯಲಾ ಧಾನ್ಯ ಬೇಳೆಯೊ- ।
ಳಿರಿಸಿ ಪೋಷಣದ್ರವ್ಯಗಳ ನಾ- ।
ತರುವೆ ರಕ್ಷಣವನ್ನು ಲೋಕದ ಪ್ರಾಣಿಗಳೆಗೆಲ್ಲ ॥ ೨೬೧ ॥

ಧರೆಯು ತನ್ನಯ ಪೃಷ್ಠಭಾಗದಿ ।
ಧರಿಸಿಹುದು ಭೂತಗಳನಗಣಿತ ।
ಮೆರೆವ ಸಚರಾಚರ ಜಗತ್ತಿದುವೆನ್ನ ಹೊರತಿಲ್ಲ ॥
ನರನೆ ಗಗನದೊಳಮೃತ ಸೂಸುವ ।
ಚರಿಸುತಿಹ ಕೆರೆಯಲ್ಲನೇ ಶಶಿ- ।
ಯಿರುವನೆನ್ನ ಸ್ವರೂಪವೇ ಕೌಂತೇಯ ನೋಡಿದಿಯಾ ॥೨೬೦॥

ಅನ್ನಮಾತ್ರವು ವಿಶ್ವದೊಳಗು- ।
ತ್ಪನ್ನವಾದರು ನಾಲದಲ್ಲವೆ ।
ಯನ್ನ ಪಚನವ ಮಾಡದಲೆ ಪೋಷಣವು ಬರುತಿಹುದೆ ॥
ಅನ್ನಪಚನದ ಶಕ್ತಿ ಯಿಲ್ಲದೆ ।
ಮುನ್ನವಸಮಾಧಾನ ಬರುವುದು ।
ಸನ್ನುತಾತ್ಮರಿಗೆಂತು ಭೋಗವನೀವೆ ನೋಡಿದನು ॥ ೨೬೨ ॥

ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ ॥ ೧೪ ॥

ನರನೆ ನಾ ಪ್ರಾಣಿಗಳ ದೇಹದೊ- ।
ಳಿರುವ ನಾಭಿಯೊಳೊಲೆಯ ಹಾಕುತ ।
ಉರಿವೆನ್ನೆ ಜಠರದಲಿ ವೈಶ್ವಾನರನ ರೂಪದಲಿ ॥
ಮೆರೆವ ಪ್ರಾಣಾಪಾನವೆಂಬೀ- ।
ಯೆರಡು ನಳಿಯಿಂ ತಿದಿಗಳಂದದಿ- ।
ಯಿರದೆ ಜಠರದಿ ವಾಯುವನು ಪೂರಯಿಸುವೆನು ನಾನು
॥ ೨೬೩ ॥
ಉರಿವನಾ ಕಾರಣದಿ ಜಠರದಿ ।
ನಿರುತ ರಾತ್ರೌ ದಿವಸ ಪಾವಕ- ।
ನರಿಯೆ ನಾ ಬೇಯಿಸುವೆ ವಿವಿಧಾನ್ನಗಳನೆಲ್ಲವನು ॥
ನರನೆ ಪಕ್ವಾನ್ನಾರ್ದ್ರಶುಷ್ಕವ ।
ಸುರಸಕುರಸಚತುರ್ವಿಧಾನ್ನವ ।
ನಿರುತ ಪಚನವ ಮಾಡುತಿಹೆನ್ನೆ ನಾನು ದೇಹದಲಿ ॥ ೨೬೪ ॥

ಪರಿಪರಿಯ ಜನವೆಲ್ಲ ನಾನಿಹೆ- ।
ನಿರುವೆ ಜನನಿರ್ವಾಹಕವು ನಾ- ।
ನಿರುವುದಲ್ಲಾ ಜನಕೆ ನಿರ್ವಾಹಕವು ಧಾನ್ಯಾದಿ ॥

ಧರೆಯೊಳಗೆ ಜೀವನಕೆ ಕಾರಣ- ।
ವಿರುವುದೈ ಜಠರಾಗ್ನಿ ನಾನೇ ।
ಯರುಹಲೆಂತೀ ಯೆನ್ನ ಸರ್ವವ್ಯಾಪಕತೆ ನಿನಗೆ ॥ ೨೬೫ ॥

ಅರಿಯಲಾ ನಿಜ ಸಿದ್ಧ ತತ್ತ್ವವು ।
ನರನೆ ನಿನಗಾಂ ಪೇಳ್ವೆನೀಕ್ಷಣ ।
ಭರಿತನಾನಿಹೆ ನಾನು ವಿಶ್ವದೊಳೆಲ್ಲ ನೋಡಿದರೆ ॥
ಇರುವುದಾದರು ತತ್ತ್ವವೀಪರಿ ।
ನರನೆ ನಿನಗೀ ತರ್ಕ ಬರುವುದೆ ।
ಧರೆಯೊಳೆಲ್ಲ ಸಮಾನಸುಖಿಗಳು ಮೆರೆವರೇ ಪಾರ್ಥ ॥ ೨೬೬ ॥

ಧರೆಯೊಳಗೆ ಪ್ರಾಣಿಗಳು ಕೆಲವರು ।
ಮೆರೆವರೈ ಸೌಖ್ಯದಲಿ ಸಂತತ- ।
ವಿರುವರೈ ದುಃಖದಲಿ ಯನ್ಯರು ಭೇದವೇತಕಿದು ॥
ಪುರದೊಳೊಂದೇ ದೀಪದಿಂದಲಿ ।
ಯಿರಿಯ ಹಚ್ಚಲು ಸರ್ವದೀಪಕೆ ।
ಬರುವುದೇ ಯೊಂದೇ ಪ್ರಕಾರದಿ ನೋಟವೆಲ್ಲರಿಗು ॥ ೨೬೭ ॥

ನರನೆ ತರ್ಕವಿತರ್ಕವೀಪರಿ ।
ಬರಲು ನಿನ್ನಯ ಮನದಿ ನಿನಗಾ- ।
ನರುಹುವೆನು ಸಂಶಯನಿವಾರಕ ಕೇಳು ಮನಗೊಟ್ಟು ॥
ನಿರುತ ನಾ ಸರ್ವಜ್ಞ ತುಂಬಿಹೆ- ।
ನಿರುವುದೀ ಸಿದ್ಧಾಂತತತ್ತ್ವವು ।
ನರನ ಬುದ್ಧಿಪ್ರಕಾರದಲಿ ಕಾಣಿಸುವೆ ನರರಿಂಗೆ ॥ ೨೭೮ ॥

ನರನೆ ನೋಡಾಕಾಶದ್ವನಿಯೊಂ- ।
ದಿರುವುದಲ್ಲವೆ ನೋಡು ಮೇಣದು ।
ಪರಿಪರಿಯ ವಾದ್ಯಗಳ ಭೇದದಿ ಧ್ವನಿಯು ಪರಿಪರಿಯು ॥
ಒರುವುದಲ್ಲವೆ ಕಿವಿಗೆ ಮೇಣಾ- ।
ತೆರದಿ ಗಗನದಿ ಸೂರ್ಯನೊರ್ವನೆ ।
ನರನಿಗುಪಯೋಗಕ್ಕೆ ಒರುವನು ವಿಧವಿಧಂಗಳಲಿ ॥ ೨೭೯ ॥

ನೀರು ವೊಂದಾಗಿಹುದು ಜೀವಪ್ರ- ।
ಕಾರದಲಿ ಪರಿಪರಿಯು ರೂಪದಿ ।
ಬೇರೆಬೇರಾಗುವುವು ಗಡಬಳ್ಳಿಗಳು ವೃಕ್ಷಗಳು ॥

ಧಾರುಣಿಯೊಳಾನೊರ್ವನಿದ್ದರು ।
ಬೇರೆಬೇರಿಹ ವ್ಯಾಣಿಗಳಲಿ ವಿ- ।
ಚಾರಿಸಲು ಬೇರಾಗಿ ತೋರ್ಪೆನು ಬುದ್ಧಿಯಂದದಲಿ ॥ ೨೭೦ ॥

ಪೂಳನೊರ್ವನು ಜಾಣನೊರ್ವನು ।
ಕೇಳು ಹಾದಿಯು ನಡೆಯುತಿರಲಾ ।
ನೀಲಮಣಿಮಾಲೆಯನು ದೂರದಿ ನೋಡಿದಾಕ್ಷಣದಿ ॥
ಪೂಳನದ ನೋಡುತಲಿ ಬೆದರುವ ।
ಮಾಲೆಯಲ್ಲಿದು ಹಾವೆನುತಲೇ ।
ನೀಲಮಣಿಗಳ ಮಾಲೆಯೆಂದೇ ತಿಳಿವನೈ ಜಾಣ ॥ ೨೭೧ ॥

ಭೀತಿಯಾಯಿತು ಪೂಳನಿಗೆ ಹ- ।
ರ್ಷಾತಿಶಯವಾ ಜಾಣನಿಗೆ ಕೇ- ।
ಳೇತರದ ಭ್ರಮೆಯಾಗುವುದು ಬುದ್ಧಿಸ್ವಭಾವದಲಿ ॥
ಸ್ಪಾತಿನಕ್ಷತ್ರದಲಿ ಮಳೆ ಯೊಂ- ।
ದೇತರದಿ ಸುರಿಯುವುದು ನೋಡಲು ।
ಮೌಕ್ತಿಕವ್ಯ ಸಂಪಯಲಿ ಸರ್ಪನೊಳಾಗುವುದು ವಿಷವು ॥೨೭೨॥

ಜ್ಞಾನಿಗಳಿಗಾಗುವುದು ಸುಖವ- ।
ಜ್ಞಾನಿಗಳಿಗಾಗುವುದು ದುಃಖವ ।
ನಾನು ವಿಶ್ವದೊಳೆಲ್ಲ ತುಂಬಿಹೆ ಪೂರ್ಣನಾಗಿಹೆನು ॥

ಸರ್ವಸ್ಯ ಚಾಹಂ ಹೃದಿ ಸಂನಿವಿಷ್ಟೋ ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ ।
ವೇದೈಶ್ಚ ಸರ್ವೈರಹಮೇವ ವೇದ್ಯೋ ವೇದಾಂತಕೃದ್ವೇದವಿದೇವ ಚಾಹಮ್ ॥ ೧೫ ॥

ನಾನಮುಕಸಿಹೆನೆಂಬುದೀ ಪರಿ ।
ಜ್ಞಾನ ರಾತ್ರಿ ದಿವಸ ಹೃದಯುದಿ ।
ಪ್ರಾಣಿಗಳೆಲ್ಲರಲಿ ಸ್ಫುರಣೆಯುನೀವಪನೆ ನಾನು ॥
ಜ್ಞಾನಿಸಾಧುಸಮಾಗಮದಲಾ ।
ಮಾನ್ಯ ಬ್ರಹ್ಮಾತ್ಮೈಕ್ಯಜ್ಞಾನದಿ ।
ಮೇಣು ವೈರಾಗ್ಯದಲಿ ಸದ್ಗುರುಚರಣಸೇವೆಯಲಿ ॥ ೨೭೩ ॥

ನರನೆ ಕೇಳ್ ಸದ್ವರ್ತನದಲೀ- ।
ಪರಿಯಲಜ್ಞಾನದ ವಿನಾಶವು ।
ಬರಲು ಸಾತ್ಮಸ್ವರೂಪದಲಿ ಹರಿಯುವುದಹಂಭಾವ ॥
ತಿರುಗಿಸಲು ದೃಷ್ಟಿಯನು ಸ್ವಾತ್ಮ- ।
ಸ್ವರುಪದಲ್ಲಾ ಯೋಗದಿಂದಲಿ ।
ನಿರುತ ಸುಖದಲಿ ತೇಲುತಿಹನೈ ಪಾರ್ಥ ನೋಡಿದಿಯಾ ॥೨೭೪॥

ತರಲು ಪರಮಾನಂದ ಸ್ಥಿತಿಯನು ।
ಹರಿಯೆ ಜಗದಲಿ ಭರಿತನೆಂಬೀ- ।
ಪರಿಯನರಿಯುವರೆನ್ನ ತೊರತನ್ಯವನು ನೋಡರಲಾ ॥
ತರಣಿಕಿರಣದ ತೇಜದಿಂದಲೆ ।
ತರಣಿಯನು ನೋಡುವುದು ಸಹಜವು ।
ಪರಿಯೊಳೆನ್ನನು ನೋಡುತಿಹರೆನ್ನಿಂದಲೇ ಪಾರ್ಥ ॥ ೨೭೫ ॥

ನರನೆ ವ್ಯವಹಾರದಲಿ ಚತುರರು ।
ಧರೆಯೊಳನ್ಯರ ಸೇವೆ ಮಾಡುತ ।
ನಿರುತವೀ ಸಂಸಾರದಲಿ ಸುಖವಿಹುದೆನುತ ನೆನಸಿ ॥
ಪೆರೆಸುನರು ದೇಹದಲಹಂಕೃತಿ ।
ಪರಿಪರಿಯ ಸಂಸಾರ ಸ್ವರ್ಗದ ।
ನರಸ ಲಾಭಕ್ಕೆಂತ ಕರ್ಮಾಚರಣ ಮಾಡುನರು ॥ ೨೭೬ ॥

ತೊರೆಯದಭಿಮಾನವನು ಕರ್ಮಾ- ।
ಚರಣ ಮಾಡಲು ಸುಖವು ಬರುವುದೆ ।
ಬರಿದೆ ಕರ್ಮದ ಫಲದಿ ಬರುವುದು ದುಃಖಸಂತತಿಯು ॥
ನರನ ಜಾಗೃತಿಯದುವೆ ಸ್ವಪ್ನಕೆ ।
ಮರಳಿ ನಿದ್ರೆಗೆ ಕಾರಣವಲಾ ।
ಬರಲು ಮೋಡವು ಹಗಲಿನಲಿ ಕುಂದಿಸುವುದೈ ಬೆಳಕ
॥ ೨೬೭ ॥

ನರನೆ ನೋಡಾಮೋಡಗಳು ಸಹ ।
ತರಣಿಕಿರಣಗಳಿಂದಲೇ ಮನ- ।
ಕರವ ತರುವುದು ತಿಳಿಯದೆನ್ನನು ಪ್ರಾಣಿಗಳು ಪಾರ್ಥ॥
ಪರಿಪರಿಯಿ ವಿಷಯೋಪಭೋಗವ- ।
ನಿರದೆ ಸೇವಿಸುತಿರುವರೆನ್ನಯ ।
ಸ್ಫುರಣೆಯಿಂದಲೆ ಮಾಡುತಿಹರಿದನಲ್ಲವೇ ಪಾರ್ಥ ॥ ೨೬೮ ॥

ನರನೆ ನಿದ್ರಾಜಾಗರಂಗಳಿ ।
ಗಿರುವುದೈ ಕಾರಣ ಪ್ರಬೋಧವೆ ।
ಯಿರುವೆ ನಾನೇ ಜ್ಞಾನಕಜ್ಞಾನಕ್ಕು ಕಾರಣನು ॥
ಉರಗನಥವಾ ಹಗ್ಗವೆಂಬೀ- ।
ಪರಿಯು ಭಾಸಕೆ ಹಗ್ಗ ಕಾರಣ- ।
ವಿರುವೆನಾಪರಿ ಜ್ಞಾನಕಜ್ಞಾನಕ್ಕು ನಾ ಮೂಲ ॥ ೨೬೯ ॥

ನರನೆ ಯೆನ್ನ ನಿಜಸ್ವರೂಪವ- ।
ನರಿಯದಲೆ ವೇದಂಗಳೆನ್ನನೆ ।
ಪರಿಪರಿಯಲೊದರುತಲಿ ರೂಪವ ತಿಳಿದತೆರನಂತೆ ॥
ಧರೆಯೊಳಾದುವು ಮೂರು ಶಾಖೆಗ- ।
ಳಿರದೆ ಋಗ್ ಯಜು ಸಾಮವೆನುತಲಿ ।
ಪರಿಯಿದಾದರು ಯೆನ್ನ ಹೊರತನ್ಯರನು ಶ್ರುತಿಸವಲಾ ॥೨೭೦॥

ಹರಿಯುತಿರುವುವು ನದಿಗಳಾ ಪರಿ- ।
ಪರಿಯ ದಿಶೆಯಲ್ಲಾದರೇನ್ಸೆ ।
ಶರಧಿಯನೆ ಸೇರುವುವು ದಿಕ್ಕಿದಿಕ್ಕಿಗಳಿದರೇನಾಯ್ತು ॥
ಪರಿಪರಿಯಲಾ ವೇದವಚಗಳು ।
ಬರುತ ಸೇರುವುವೆನ್ನನಲ್ಲನೆ ।
ನರನೆ ಕೇಳೀತತ್ತ್ವವೆಲ್ಲವ ಲಕ್ಷ್ಯಪೂರ್ವಕದಿ ॥ ೨೭೧ ॥

ಬರುಬರುತ ಶ್ರುತಿತತಿಗಳೆಲ್ಲವು ।
ಮೆರೆವ ಬ್ರಹ್ಮಸ್ವರೂಪದಲಿ ಒಂ- ।
ದಿರದೆಲಯವಾಗುವುವು ಶಬ್ದಸಮೇತವಂತದಲಿ ॥
ನರನೆ ವಾಯುತರಂಗವೆಲ್ಲಕೆ ।
ಬರುವುದಾಕಾಶದಲಿಯೈಕ್ಯವು ।
ಪರಿಪರಿಯಗಂಧಗಳ ಸಹಿತಲಿ ಯೈಕ್ಯ ಬಕ್ಕು ಕಣಾ ॥ ೨೭೨ ॥

ಶ್ರುತಿತತಿಗಳಾ ಬ್ರಹ್ಮರೂಪವ ।
ಶ್ರುತಿಸುತಲೆ ತಲೆ ಬಗ್ಗಿಸುತಲೇ ।
ಯತಿವಿನಯಲಜ್ಜೆಯಲಿ ತಬ್ಧಶೆಯಾಂತುವೈ ಪಾರ್ಥ ॥
ಪ್ರತಿಯೊಳೇ ಬ್ರಹ್ಮಸ್ವರೂಪವ ।
ಮತಿಗೆ ಗೋಚರ ಮಾಳ್ಪೆ ನಾನೇ ।
ಶ್ರುತಿಗಳರಿಯದ ಶುದ್ಧ ಸುಜ್ಞಾನವು ಜಗದಿ ನಾನೆ ॥ ೨೭೩ ॥

ನರಗೆ ನಿದ್ರಾವಸ್ಥೆ ಬಂದಿರೆ ।
ಪರಿಪರಿಯ ಸ್ವಪ್ನಗಳು ಬೀಳ್ವುವು ।
ಮರಳಿ ಜಾಗೃತಿ ಬರಲು ಬರುವುದು ಜ್ಞಾನ ವಾಸ್ತವಿಕ ॥
ಪರಿಪರಿಯವಸ್ತುಗಳು ತಾನಾ- ।
ಗಿರುವೆನೊಬ್ಬನೆ ಯಿರುವೆನೆನುತಲಿ ।
ಯರವು ಬರುವುದ ನೋಡಲಿಲ್ಲವೆ ಪಾರ್ಥ ಮನಗೊಟ್ಟು ॥೨೭೪॥

ನರನೆ ಯೆನ್ನ ಸ್ವಾತ್ಮಬೋಧವು ।
ಬರಲಿಕಾನಿಹೆ ಮೂಲಕಾರಣ- ।
ನರಿವವನು ನಾನೊರ್ವನೇ ಸ್ವಾತ್ಮಸ್ವರೂಪವನು ॥
ಉರಿದು ಹೋಗಲು ಕರ್ಪುರವು ಮೇ- ।
ಣಿರುವುದೇನೈ ಬೂದಿ ಹಿಂದಕೆ ।
ತಿರಿಗಿ ಬೆಂಕಿಯು ಹಿಂದುಳಿವುದೇ ಪಾರ್ಥ ನೋಡಿದಿಯಾ ।೨೭೫॥

ಬೇರ ಹಿಡಿದಜ್ಞಾವನು ಸಂ- ।
ಹಾರ ಮಾಡುತಲುಳಿದ ಜ್ಞಾನವು ।
ಹಾರಿ ಹೋಗುವುದೇನ ಹೇಳಲಿ ಸ್ಥಿತಿಯನೀಪರಿಯು ॥
ಯಾರು ಯೇನಿಲ್ಲೆಂತ ಪೇಳ್ವರು ।
ಯಾರು ಪೇಳುವರಿರುವುದೆನುತಲಿ ।
ಹಾರಿ ಹೋಗಲು ವೃಭಯಜ್ಞಾನಾಜ್ಞಾನರೂಪಗಳು ॥ ೨೭೬ ॥

ಇರುವುದೊಂದೇ ಶುದ್ಧರೂಪವು ।
ಯಿರದಲಾಶಬ್ದಕೆ ಪ್ರವೇಶನ- ।
ವರುಹಲಾರದು ಶಬ್ದವಿದೆಯೋ ಯಿಲ್ಲವೆಂಬುದನು ॥
ಇರುವುದೈ ಯಜ್ಞಾನ ವಿಶ್ವದ ।
ಮೆರೆವ ಕಾರಣ ವಿಶ್ವಸಹಿತಲೆ ।
ಹರಿಯಲೀ ಯಜ್ಞಾನದಶೆಯನು ತಿಳಿವ ಬಗೆ ಯೇನು ॥ ೨೭೭ ॥

ಪರಿಪರಿಯ ಸಾಧನಗಳೆಲ್ಲವು ।
ಮೆರೆವುವೈ ವಿಶ್ವದಲಿ ಮೇಣೇ ।
ತೆರದ ವಿಶ್ವವೆ ನಾಶವಾಗಲು ಹಿಂದುಳಿವುದೇನು ॥
ನರನೆ ಕೇಳೀ ತೆರದ ತರ್ಕದ ।
ಹೊರಗಿರುವ ಸ್ಥಿತಿಯು ಸ್ವರೂಪವು ।
ಯಿರುವೆ ನಾನೊರ್ವನೆ ಕಣಾ ಯೆನ್ನಿಂದ ಬೇರಿಲ್ಲ ॥ ೨೮೪ ॥

ಹರಿಯು ಕೈವಲ್ಯಾಧಿಪತಿ ಯಿಾ ।
ತೆರದಿ ಸಚರಾಚರ ಪದಾರ್ಥದೊ-।
ಳೆರುವುದೆನ್ನ ವ್ಯಾಪ್ತಿಯೆಂದರುಹುತ್ತ ಪಾರ್ಥನಿಗೆ ॥
ಮೆರೆವ ನಿಜನಿರುಪಾಧಿಕಾತ್ಮಕ-।
ವಿರುವ ರೂಪದ ಪರಿಯನೇ ವಿ-।
ಸ್ತರಿಸಿದನು ಕಲಿಪಾರ್ಥನೆಂತೋ ಭಾಗ್ಯಶಾಲಿಯಲಾ
॥ ೨೮೯ ॥
ಬರಲು ಗಗನದಿ ಚಂದ್ರನುದಯಕೆ ।
ಶರಧಿ ಹರ್ಷದಿ ತುಂಬಿ ತುಳುಕುತ ।
ಧರಿಸುವುದು ತನ್ನೊಳಗೆ ಚಂದ್ರನ ಬಿಂಬವನೆ ಮುದದಿ ॥
ಹರಿ ಹರುಷದಿಂದಾಡಿದೆಲ್ಲವು ।
ನರನ ಹೃದಯದಿ ನಂಬಿಸಿತಲಾ ।
ಅರುಹುವೆನು ದೃಷ್ಟಾಂತವೊಂದನು ನಿಮಗೆ ತಿಳಿವಂತೆ
॥ ೨೯೦ ॥
ಚಿತ್ರ ತೆಗೆದಿಹ ಗೋಡೆಯೆಡೆದುರಿಗೆ ।
ವಿಸ್ತೃತದ ಗೋಡೆಯಲಿ ಬಹುಪರಿ ।
ಹಸ್ತದಿಂ ತಿಕ್ಕುತ್ತ ರುಗರುಗಿಪಂತೆ ಮಾಡಿರಲು ॥
ಚಿತ್ರಗಳ ಪ್ರತಿಬಿಂಬವದರಲಿ ।
ವಿಸ್ತರಿಪ ತೆರನಂತೆ ಪಾರ್ಥನ ।
ಚಿತ್ತದಲಿ ಪ್ರತಿಬಿಂಬವೆದ್ದಿತು ಕೃಷ್ಣವಚನಗಳ ॥ ೨೯೧ ॥

ಧನ್ಯ ಪರಮಾತ್ಮನ ಸ್ವಭಾವವು ।
ಧನ್ಯ ಪಾರ್ಥನು ಭಾಗ್ಯಶಾಲಿಯು ।
ವರ್ಣಿಸಲಿ ನಾನೆಂತು ಕೃಷ್ಣನ ಪ್ರಾಪ್ತಿಯಾದಂತೆ ॥
ಸನ್ನುತಾನಂದಾಭಿವೃದ್ಧಿಯು ।
ತನ್ನ ತಾನೇ ಬರುವುದಲ್ಲವೆ ।
ಸನ್ನುತಾಂತಃಕರಣ ಪಾರ್ಥನು ನುಡಿದನೀತೆರದಿ ॥ ೨೯೨ ॥

ಹರಿಯೆ ವ್ಯಾಪಕತನವ ನೀ ವಿ-।
ಸ್ತರಿಸುತಲಿ ನಿರುಪಾಧಿಕಾತ್ಮಕ-।
ತೆರದ ರೂಪವ ವಿಸ್ತರಿಸಿದೆಯೊ ಕೃಷ್ಣ ನೀನೆನಗೆ ॥

ಕರುಣದಿಂದೀ ತೆರದ ರೂಪವ ।
ನರುಹ ಬೇಕಿನ್ನೊಂದು ಬಾರಿಗೆ ।
ನರನ ಮಾತನು ಕೇಳಿ ಹರಿಯುತ್ತರವನಿತ್ತನಲಾ ॥ ೨೯೩ ॥

ಹರಿಯು ದ್ವಾರಕೆಯರಸನೀ ತೆರ-।
ವರುಹಿದನು ಪಾರ್ಥನಿಗೆ ಕೇಳ್ದೆ ।
ಹರುಷವಾಯಿತು ಮನದಿ ನಿನ್ನ ವಿನಂತಿ ಕೇಳುತಲೆ ॥
ಇರುವುದೆನಗತಿ ಕೌತುಕವು ಯಿಾ-।
ಪರಿಯ ರೂಪವ ವರ್ಣಿಸಲು ನಾ-।
ಧರೆಯೊಳನ್ಯರ ಕಾಣೆ ಶ್ರವಣೇಚ್ಛುಗಳ ಕಲಿಪಾರ್ಥ ॥ ೨೯೪ ॥

ನರನೆ ನೀನೀತೆರದೊಳಿಂದಿಗೆ ।
ತೆರೆದು ಬಾಯನು ಪ್ರಶ್ನೆ ಕೇಳದಿ ।
ಯರುಹ ಬೇಕೀ ರೂಪ ನಿರುಪಾಧಿಕವ ತನಗೆಂದು ॥
ಧರಿಸಿದೆನು ನಾನಿಚ್ಛೆ ಯಿಂದಿನ ।
ವರಿಗೆ ಪೃಚ್ಛಕರಿಲ್ಲದಲೆ ಬಹು-।
ಪರಿಯೊಳಾಯ್ತು ನಿರಾಶೆ ಫಲಿಸಿತು ಯಿಂದು ಮನದಿಚೆ ॥೨೯೫॥

ಧರೆಯೊಳದ್ವೈತಾನುಭವ ಬಂ-।
ದಿರಲು ಸುಖದುಪಭೋಗ ಫಲಿಸಲು ।
ನರನೆ ನೀನುಪಲಬ್ಧನಾದಿಯೊ ಧನ್ಯ ನಾನಿಂದು ॥
ನರನೆ ನಿನ್ನಯ ಪ್ರಶ್ನದಿಂದಲೆ ।
ದೊರೆಯಿತತ್ಯಾನಂದ ಮನದಲಿ ।
ತಿರಿಗಿ ನಿರುಪಾಧಿಕ ಸ್ವರೂಪವ ಕೇಳಲಿಚ್ಛಿಸಿದಿ ॥ ೨೯೬ ॥

ಹರುಷವಾಯಿತು ಮನದೊಳೆನ್ನಯ ।
ನರನೆ ನಿನ್ನಯ ಪ್ರಶ್ನೆ ಕೇಳುತ ।
ದೊರೆಯಿತ್ಸೈ ಸಂವಾದರೂಪದ ಸೌಖ್ಯವಿಂದಿನಲಿ ॥
ನರನೆ ವಾಕ್ಶರರ ಶಿರೋಮಣಿ ।
ನರನ ಸಂವಾದದಲಿ ನಿನ್ನಯ ।
ತರದವರ ನಾಕಾಣೆನಿತರರ ಜಗದಿ ನರವರನೆ ॥ ೨೯೭ ॥

ನರನೆ ಯೆನ್ನಯ ಮಿತ್ರವರ್ಯನೆ ।
ಯರಿಯದಾತನೆ ನೀನು ಯೆನಗ-।
ಚ್ಛರಿಯು ತೋರ್ಪುದು ಕೇಳ ಬೇಕೇ ಪ್ರಶ್ನೆ ನೀನೆನಗೆ ॥
ಅರುಹ ಬೇಕೇ ನಾನು ನಮಗೀ-।
ಪರಿಯು ಸರಿಯೇ ಮಿತ್ರರಿಂಗೀ-।
ತೆರದೊಳರುಹುತ ಪಾರ್ಥನನು ಬಿಗಿದಪ್ಪಿದನು ಹರಿಯು ॥೨೯೮॥

ಹರುಷಭರದಿಂದಾಗ ಶ್ರೀಹರಿ- ।
ಯರುಹಿದನು ಪಾರ್ಥನಿಗೆ ಪ್ರೇಮದಿ ।
ಯೆರಡು ತುಟಿಗಳು ತೋರ್ವುವಾದರು ವೊಂದೆ ಭಾಷಣವು ॥
ಎರಡು ಕಾಲುಗಳಿದ್ದರೇನೈ ।
ಧರೆಯೊಳಗೆ ನಡೆಯುವುದು ಗತಿಯೊಂ- ।
ದಿರುವುದಲ್ಲವೆ ನಮ್ಮ ಪ್ರಶ್ನೋತ್ತರಗಳೊಂದಿಹುವು ॥೨೯೪ ॥

ಎರಡು ತೋರ್ವುವು ನಮ್ಮರೂಪಗ- ।
ಳಿರುವುದೇ ಭಿನ್ನತ್ವವೆಮ್ಮಲಿ ।
ನರನೆ ನೀ ಕೇಳ್ವವನು ನಾ ಪೇಳ್ವವನು ಬೇರಿಹೆವೆ ॥
ಅರುಹುತೀಪರಿ ಕೃಷ್ಣ ತಾಂ ಮೈ- ।
ಮರೆತನೈ ಪಾರ್ಥನಿಗೆ ಹರ್ಷದ ।
ಭರದಿ ಪ್ರೇಮಾಲಿಂಗನವನೀಯುತ್ತ ಬೆರಗಾದ ॥ ೩೦೦ ॥

ಮರಳಿ ಮನದಲಿ ಬಂದು ಜಾಗ್ರತೆ ।
ಹರಿಯು ಭರದಿಂ ಯೋಚಿಸಿದನೈ ।
ಪರಿಯು ಯೋಗ್ಯವಿದಲ್ಲ ಮಿಗಿದೆ ಪ್ರೇಮಸೀಮೆಯನು ॥
ಸುರಸ ಕಬ್ಬಿನ ಬೆಲ್ಲ ಮಾಳ್ಪುದ- ।
ಕಿರಿಸ ಬೇಕೈ ಕ್ಷಾರಲವಣವ ।
ಸುರುಚಿ ಬರುವುದು ಕ್ಷಾರಲವಣದಿ ಬೆಲ್ಲದಲಿ ನೋಡೆ
॥ ೩೦೧ ॥

ಭರದಲೀ ಸಂವಾದಸುಖದಲಿ ।
ತೊರೆದರದ್ವೈತವನು ಸುಮ್ಮನೆ ।
ದೊರಕುವುದೆ ಯೆನಗಿಂದು ಬಂದಿಹ ಸೌಖ್ಯಸಾಮ್ರಾಜ್ಯ ।।
ಇರುವೆ ನಾರಾಯಣನು ನಾ ನೀ ।
ನರನಲಾ ಕೌಂತೇಯ ನಮ್ಮೊಳ- ।
ಗಿರುವುದೇನೈ ಭೇದ ಸೇರಲಿ ಪ್ರೇಮ ನಮ್ಮೊಳಗೆ ।। ೩೦೨ ॥

ಪರಿಯಲೀ ಸುವಿಚಾರ ಮಾಡುತ ।
ಹರಿಯು ಬುದ್ಧಿಸ್ಥಿರತೆಯಾಂತನು ।
ಮರಳಿ ಪಾರ್ಥನಿಗಿತ್ತನುತ್ತರ ಪ್ರೇಮಭರದಿಂದ ॥
ನರನೆ ಯೇನೈ ಪ್ರಶ್ನೆ ಮಾಡಿದಿ ।
ನರನಿಗೀಪರಿ ಪೃಚ್ಛೆ ಮಾಡಲು ।
ಹರಿಯ ರೂಪದಿ ಲೀನನಾಗಿಹ ಪಾರ್ಥಗಾಕ್ಷಣದಿ ॥೩೦೩॥

ಮರಳಿ ಬಂತೈ ದೇಹಭಾನವು ।
ತಿರಿಗಿ ತಾಂ ಕೇಳ್ದಿರುವ ಪ್ರಶ್ನೆಗೆ ।
ಬರುವ ಹರಿವಚನವನು ಹಾರೈಸಿದನು ಕಲಿಪಾರ್ಥ ॥

ಪುರಳಿ ನರ ಸದ್ಗದಿತಕಂಠದಿ ।
ಹರಿಗೆ ಪ್ರತ್ಯುತ್ತರವನಿತ್ತನು ।
ಕರುಣಿಸೆನಗಾ ನಿನ್ನ ನಿರುಪಾಧಿಕ ಸ್ವರೂಪವನು ॥ ೩೦೪ ॥

ಹರಿಯು ನಿರುಪಾಧಿಕ ಸ್ವರೂಪವ- ।
ನರುಹುವರೆ ಪಾರ್ಥನಿಗೆ ಮೊದಲಿಂ- ।
ಗೆರಡು ವಿಧಗಳುಪಾಧಿಗಳ ವರ್ಣಿಪನು ವಿಸ್ತರದಿ ॥
ಅರುಹುನರೆ ನಿರ್ಗುಣಸ್ವರೂಪವ ।
ಹರಿಯು ಮೊದಲಿಗುಪಾಧಿಗಳ ವಿ- ।
ಸ್ತರಿಸಿದನು ಯೇಕೆಂದು ಶಂಕೆಯು ಬಂದರದ ಪೇಳ್ವೆ ॥ ೩೦೫ ॥

ಬೆಣ್ಣೆಯನು ಬೇಡಿದರೆ ಮಜ್ಜಿಗೆ- ।
ಯನ್ನು ಮಾಡುತ ಮೊಸರಿನಿಂದಾ- ।
ಬೆಣ್ಣೆಯನು ವಿಂಗಡಿಸಿ ಕೊಡಬೇಕಲ್ಲವೇ ಯೇನು ॥
ಚಿನ್ನ ಶುದ್ಧವ ಬೇಡಲೊರ್ವನು ।
ಚಿನ್ನದಿಂದಾ ಕೀಳು ಲೋಹಗ- ।
ಳನ್ನು ವಿಂಗಡಿಸುವರು ಸುಟ್ಟಾ ಚಿನ್ನಗಟ್ಟಿಯನು ॥ ೩೦೬ ॥

ನೀರಿನಿಂ ಶೀವಾಲ ಹೋಗಲು ।
ನೀರಿಗಾಶುದ್ಧತೆಯು ಒರುವುದು ।
ಹಾರಿ ಹೋಗಲು ಮೋಡ ಗಗನವು ಸ್ವಚ್ಛ ಬೆಳಗುವುದು ॥
ಚಾರು ಭತ್ತದ ತೌಡ ತೆಗೆಯಲು ।
ತೋರುವುದು ಮೇಣಕ್ಕಿ ಸ್ವಚ್ಛವು ।
ಹಾರಿಸಲು ರೂಪದವುಪಾಧಿಯು ಹಿಂದುಳಿದ ವಸ್ತು । ೩೦೭ ॥

ಇರುವುದೈ ನಿರುಪಾಧಿ ಯೆಂಬೀ- ।
ಪರಿಯ ತತ್ತ್ವವು ಸತ್ಯವಲ್ಲವೆ ।
ಯರುಹ ಬೇಕೇನಿದನು ತಿಳಿಯಲು ಸುಲಭವಿಹುದಲ್ಲೈ ॥
ತರುಣಿಯೊಳು ಪತಿಹೆಸರು ಕೇಳಲು ।
ಧರಿಸುವಳು ಮೌನವನು ಹೆಸರು- ।
ಚ್ಚರಿಸಲದುವೇ ತಿಳಿಯ ಬೇಕಾಪತಿಯ ಹೆಸರೆನುತ ॥ ೩೦೮ ॥

ಗತಿಯು ಕುಂಠಿತವಾಗೆ ಶಬ್ದಕೆ ।
ಮತಿಗೆ ತಾಗದವರ್ಣನೀಯವು ।
ಕ್ಷಿತಿಯೊಳೀ ನಿರುಪಾಧಿರೂಪವು ತಿಳಿಯಲಿದೆ ನಿಜವು ॥
ಮತಿಗೆ ಶಬ್ದಕೆ ತಾಗಲಾರದ ।
ನುತಸ್ವರೂಪವು ವರ್ಣನೀಯವೆ ।
ನುತಿಸ ಬೇಕದ ಸುತ್ತಮುತ್ತಿಸ ವಸ್ತುಸ್ಥಿತಿಯಿಂದ ॥ ೩೦೯ ॥

ಆದ ಕಾರಣ ಲಕ್ಷ್ಮಿಯೊಡೆಯನು ।
ಬೋಧಿಸಿದನೈ ಶಿಷ್ಯ ಪಾರ್ಥಗು- ।
ಪಾಧಿಯನು ಮೊದಲಿಂಗೆ ಪ್ರೇಮದಿ ದ್ವಾರಕಾನಾಥ ॥

ಈ ಧರಣಿಯಲಿ ಸಿತ ಪಿದಿಗೆ ತಿಥಿ- ।
ಯಾದ ದಿನ ಚಂದಿರನ ರೇಖೆಯ ।
ಬೋಧೆಯಾಗಲುಪಾಧಿಮೂಲಕ ತೋರಿಸಲು ಬೇಕು ॥ ೩೧೦ ॥

ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥ ೧೬ ॥

ಹರಿಯು ಮಗುಳಿಂತೆಂದ ಪಾರ್ಥಗೆ ।
ನರನೆ ಸಂಸಾರಸ್ವರೂಪದ ।
ಪುರದೊಳಗೆ ವಾಸಿಪರು ಪುರುಷರು ಯಿಬ್ಬರೇ ನೋಡು ॥
ಇರುಳು ಹಗಲೆಂಬೀ ಪರಿಯಲಾ ।
ಯೆರಡು ತತ್ತ್ವಗಳಾಗಸದಿ ಮ- ।
ತ್ತಿರುವುದೇ ಮೂರನೆಯ ಪರಿ ನೀ ನೋಡು ಕೌಂತೇಯ
॥ ೩೧೧ ॥

ನರನೆ ಕೇಳಾ ತೆರದೊಳಿಬ್ಬರೆ ।
ಯಿರುವರೀ ಸಂಸಾರನಗರದ- ।
ಲಿರುವನೈ ಮತ್ತೊರ್ವ ಮೂರನೆ ಪುರುಷನೀ ಪುರದಿ ॥
ಪುರುಷನೀತನು ಪುರುಷರೀರ್ವರಿ- ।
ಗಿರುವನೈ ಹಗೆಯಾಗಿ ಕೇಳಲು ।
ಬರಲು ಕೆವಿಗಾ ಹೆಸರು ಸಹಿಸನು ನಿಷ್ಠುರನು ನೋಡೆ
॥ ೩೧೨ ॥

ಪುರದೊಳೀತ ಪ್ರವೇಶ ಮಾಡಲು ।
ಹರಿದು ಬಿಡುವನು ಪುರವ ಕೂಡಲೆ ।
ತಿರಿಗಿ ಪುರದೊಳಗಿರುವರಿಬ್ಬರ ನಾಶ ಮಾಡುವನು ॥
ಇರಲಿ ಮೂರನೆಯವನ ಮಾತದು ।
ಪುರದೊಳಗೆ ವಾಸಿಸಲು ಬಂದಿಹ ।
ಪುರುಷರೀರ್ವರ ಪರಿಯ ನಾ ವಿಸ್ತರಿಪೆನಾದಿಯಲಿ ॥ ೩೧೩ ॥

ಪುರುಷನೊರ್ವನು ಕುರುಡ ಕುಂಟನು ।
ಮರುಳನಿಹನೈ ಹೇಳಲೆಂತದ- ।
ನೆರಡನೇಯವ ಪೂರ್ಣ ಸರ್ವಾವಯವದಿಂ ಪಾರ್ಥ ॥
ಇರುವುದವರಿಗೆ ವಸ್ತಿಯೊಂದೇ- ।
ಪುರದೊಳಾದುದರಿಂ ಕಿರೀಟಿಯೆ- ।
ಭರದೊಳಾಯ್ತು ಪರಸ್ಪರದಿ ಸನ್ಮೈತ್ರಿಯವರೊಳಗೆ ॥೩೧೪॥

ಇರುವುದೊಬ್ಬನ ಹೆಸರು ಪಾರ್ಥನೆ ।
ಕ್ಷರನೆನಿಸುತಲೆರಡನೆಯನಕ್ಷರ ।
ನರನೆ ಕೇಳಿಬರೆ ಕಣಾ ಸಂಸಾರ ತುಂಬಿಹರು ॥

ಕ್ಷರನು ಯಾರಕ್ಷರನು ಯಾರಿಹ- ।
ನಿರುವುದೇನವರಿಂಗೆ ಲಕ್ಷಣ ।
ನರನೆ ನಿನಗಾಂ ಸ್ಪಷ್ಟದಿಂ ವಿಸ್ತರಿಸಿ ಹೇಳುವೆನು ॥ ೩೧೫ ॥

ನರನೆ ಸುಮಹತ್ತತ್ತ್ವ ಹಿಡಿದಾ- ।
ಕರಡಕಡ್ಡಿಯ ಹಿಡಿದು ಸರ್ವವ ।
ಹಿರಿದು ಕಿರಿದು ಚರಸ್ಥಿರ ಮನೋಬುದ್ಧಿಗೋಚರವು ॥
ಮೆರೆವ ರಜ ತಮ ಸತ್ವ ಗುಣವೆಂ- ।
ಬುರುತರದ ಯಂತ್ರದಲಿ ಹೊರಡುವ ।
ಪರಿಪರಿಯಲಾ ನಾಮರೂಪಂಗಳಲಿ ರಂಬಿಸುವ ॥ ೩೧೬ ॥

ಐದು ಭೂತಗಳೆಂದ ಕೂಡಿದ ।
ವೇದ್ಯ ಭೂತಾಕೃತಿಗಳೆಂಬೀ- ।
ಚ್ಛೋದ್ಯತರದಿಂ ನಾನ್ಯರೂಪದಿ ರಂಬಿಸುತ್ತಿರುವ ॥
ಮೋದದಿಂದಾ ಕಾಲನಿಂಗಾ ।
ಮೇದಿನಿಯೆ ಜೂಜಿಂಗೆ ಕ್ಷೇತ್ರವಿ- ।
ದಾದ ಜಗವೆಂಬೀ ಹೆಸರಿನಲಿ ರಂಬಿಸುತ್ತಿರುವ ॥ ೩೧೭ ॥

ನರಶರೀರಗಳೆಂಬ ಪಗಡಿಗ- ।
ಳೆರಿಸಿ ಜೂಬಾಡುವನು ಕಾಲನು ।
ನರನಿಗರವಾಗುವರೆ ಬೇಕೈ ಜ್ಞಾನ ವಿಪರೀತ ॥
ಬರುತ ಜನ್ಮಕೆ ನಿಮಿಷನಿಮಿಷದಿ ।
ಮರಣ ಹೊಂದುತಲಿರುವ ಜಗವಿದು ।
ಬರುತ ಮಾಯಾರಣ್ಯದಲ್ಲೀ ಸೃಷ್ಟಿ ಹುಟ್ಟುವುದು ॥ ೩೧೮ ॥

ಏಳನೇಯಧ್ಯಾಯದಲಿ ನಾ ।
ಹೇಳಿದೆನಲಾ ಯೆಂಟು ರೂಪವ ।
ತಾಳಿಹಳು ನಿಜಪ್ರಕೃತಿ ಯೆನುತಲೆ ನೆನವು ನಿನಗಿಹುದೆ ॥
ಮೇಲೆ ಹದಿಮೂರನೆಯಲಾನು ವಿ- ।
ಶಾಲ ಮೂವತ್ತಾರು ಪರಿಯಲಿ ।
ಹೇಳಿಹೆನು ವರ್ಣನೆಯ ಕ್ಷೇತ್ರದ ನೋಡು ಕೌಂತೇಯ ॥೩೧೯॥

ನರನೆ ಹಿಂದಿನ ಮಾತದೇತಕೆ ।
ಮರದ ರೂಪಕದಿಂದ ನಾ ವಿ- ।
ಸ್ತರಿಸಿದೆನಲಾ ಪಿಡದೆ ಯಿಯಧ್ಯಾಯದಲಿ ಪಾರ್ಥ ॥
ಪರಿಪರಿಯಲೀ ತೆರದಿ ನಾ ವಿ- ।
ಸ್ತರಿಸಿರುವ ಸಾಕಾರವೆಲ್ಲವು ।
ಮೆರೆವ ವಿಶ್ವವಿದೆಲ್ಲ ವಸ್ತಿಯ ಪುರವೆನುತ ಮುದದಿ ।' ೩೨೦ ॥

ಮನದೊಳಗೆ ಯೋಚಿಸುತಲಾ ಚೇ- ।
ತನದ ರೂಪದಿ ಬಂದು ವಾಸಿಪ ।
ಘನತರದ ವಾಸಸ್ಥಳವ ಮಾಡಿಹುದು ವಿಶ್ವದಲಿ ॥
ವನದಿ ಮೃಗರಾಜೇಂದ್ರ ತನ್ನಯ ।
ಮಿನುಗುತಿಹ ಪ್ರತಿಬಿಂಬ ನೋಡುತ ।
ಮನದಿ ನೆನಸುತಲೆರಡನೆಯ ಪ್ರತಿಸಿಂಹ ಬಂದಿಹುದು
॥ ೩೨೧ ॥

ಎನುತ ಭ್ರಾಂತಿಯ ಭರದಿ ಮೃಗರಾ- ।
ಜನು ಕಣಾ ಬಾವಿಯಲಿ ಧುಮುಕಿದ- ।
ನೆನುತ ನೀ ಕೇಳಿದಿಯೊ ಕಿವಿಯಲಿ ಪರಿಯಿದಾಯಿತಲಾ ॥
ಘನತರದಲಾಕಾಶ ರಾಜಿಸಿ ।
ಮಿನುಗುವುದು ಪ್ರತಿಬಿಂಬ ನೀರ- ।
ಲ್ಲಿನಿತು ಚೈತನ್ಯವು ನಿಜದೊಳದ್ವೈತ ತಾನಿರುತ ॥ ೩೨೨ ॥

ನರನೆ ಬರುತಲುಪಾಧಿಯೋಗದಿ ।
ಧರಿಸುವುದು ತಾಂ ದ್ವೈತರೂಪವ ।
ಮರೆತು ತನ್ನಯ ನಿಜಸ್ವರೂಪವ ಪಾರ್ಥ ವಿಶ್ವವನು ॥
ಪುರವೆನುತ ಸಾಕಾರವನು ತಾಂ ।
ಭರದಿ ನಿದ್ರೆಯುಗೈವುದದರಿ- ।
ಲ್ಲಿರುವುದೈ ವಿಸ್ಮೃತಿಯ ನಿದ್ರಾದೇವಿಯಾತ್ಮನಿಗೆ ॥ ೩೨೩ ॥

ನರನೆ ನಿದ್ರಾಪರವಶನು ತಾ- ।
ನಿರುವನಾತ್ಮನು ನಿದ್ರೆಯಲ್ಲಿಯೆ ।
ಯಿರುವೆ ತಾಂ ಸುಪಿ ದುಃಪಿ ಯೆಂಬೀ ಕನಸು ಬೀಳುವುದು ॥
ಧರಿಸುತಲಹಂಕಾರಮಮತೆಯ ।
ಬರಳುವನು ಪರಿಪರಿಯಲಾತ್ಮನು ।
ನರನೆ ಕೇಳೈ ಯಾತ್ಮ ಬರಳುವ ಪರಿಯನರುಹುವೆನು ॥೩೨೪॥

ಈತನೆನ್ನಯ ತಾತನೀಕೆಯು ।
ಮಾತೆ ಯಿತನು ಪುತ್ತ್ರನಿತ್ತ್ರನು ।
ಯಿತನೆನ್ನಯ ಬಂಧುನೀತ ಕಳತ್ರನೆನ್ನಾಕೆ ॥

ಭೂತಳದಿ ಸಂಪತ್ತಿ ಯೆನ್ನದು- ।
ನೀತ ರೂಪಿ ಕುರೂಪಿ ಯಿತನು ।
ಭೂತಳದಿ ನಾನಿಹೆ ಸುರೂಪಿಯು ಮನ್ಯನೀ ಜಗದಿ ॥ ೩೨೫ ॥

ನರನೆ ಸ್ವಪ್ನಾಧಾರದಿಂದೀ- ।
ಪರಿಯ ಸಂಸಾರದಲಿ ಸ್ವರ್ಗದಿ ।
ತಿರುಗುತೀ ಯಡವಿಯೊಳಗೋಡಾದುವುದು ಚೈತನ್ಯ ॥
ಕ್ಷರ ಪುರುಷನೆಂದೆನಿಸುವುದಲಾ ।
ಯಿರುವನೈ ಕ್ಷೇತ್ರಜ್ಞನೀತನೆ ।
ಯೊರುವೆನಾನೀಗೀತನ ಜಗಜ್ಜೀವದಶೆಯನ್ನು ॥ ೩೨೬ ॥

ಮರೆತು ನ್ವಾತ್ಮಸ್ವರೂಪನಿಸ್ಮೃತಿ- ।
ಭರದಿ ಭೂತವ್ರಾತದಲಿ ಸಂ- ।
ಚರಿಸುತಿಹ ಜೀವಾತ್ಮನಿಗೆ ಕ್ಷರಪುರುಷನೆನ್ನುವರು ॥
ಇರುವನೈ ಸ್ಥಿತಿಪೂರ್ಣನೆಂದೀ- ।
ತೆರದಿ ಕರೆವನು ಪುರುಷನೆನುತಲಿ ।
ಪುರವೆನಿಪ ದೇಹದಲಿ ಶಯನವ ಮಾಳ್ಪನೀ ಪುರುಷ ॥ ೩೨೭ ॥

ಬರುತಲೀತನುಪಾಧಿಯೋಗದ ।
ಭರದಿ ಮಿಥ್ಯಾರೋಪನೀತಂ- ।
ಗಿರುವುದೈ ಕ್ಷರವೆಂಬ ಹೆಸರನ್ನೀತ ತಾಳಿಹನು ।
ಕೆರೆಯ ನೀರಲಿ ತೆರೆಗಳೇಳಲು ।
ಮೆರೆವ ಚಂದ್ರನ ಬಿಂಬ ತೆರೆಗಳ ।
ಭರದೊಳಲ್ಲಾಡಿದರೆ ಚಂದ್ರನಿಗಿಹುದೆ ಚಂಚಲತೆ ॥ ೩೨೮ ॥

ಬರಲು ಜೀವಾತ್ಮನಿಗುಪಾಧಿಯು ।
ಧರೆಯೊಳಗೆ ತೋರುವನುಪಾಧಿಯ ।
ತೆರದಿ ಕೆರೆಯದು ಬತ್ತಿ ಹೋದರೆ ಬಿಂಬ ಹೋಗುವುದು ॥
ಬರಲುಪಾಧಿಗೆ ನಾಶ ತದನಂ- ।
ತರದಿ ಜೀತನ ಗೋಚರಿಸದೈ ।
ಮೆರೆವುದಾ ಕಾರಣದಿ ಚೈತನ್ಯಕ್ಕೆ ಕ್ಷಣಿಕತ್ವ ॥ ೩೨೯ ॥

ಕೊರತೆ ಯಿಪರಿ ಯಿರುವುದೊಂದೇ ।
ಕ್ಷರವೆನುತಲಭಿಧಾನವಿರುವುದು ।
ಯಿರುವುದಾ ಕಾರಣದಿ ಕ್ಷರವಿದು ಜೀವಚೈತನ್ಯ ॥
ನರನೆ ನಿನಗಾನರುಹುವೆನು ವಿ- ।
ಸ್ತರದಲಕ್ಷರಲಕ್ಷಣಂಗಳ- ।
ನರಿಯಲಾ ಮನಗೊಟ್ಟು ಪೇಳ್ವುದನೆಲ್ಲ ಕಲಿಪಾರ್ಥ ।। ೩೩೦ ॥

ನರನೆ ಯೆರಡನೆ ಪುರುಷನಕ್ಷರ- ।
ನಿರುವನ್ನೆ ಮಧ್ಯಸ್ಥನಿದರಲಿ ।
ಗಿರಿಗಳೊಳು ಮಧ್ಯಸ್ಥನಿಹುದಾ ಮೇರುವದರಂತೆ ॥
ಇರುವನ್ನೆ ಮಧ್ಯದಲಿ ಮಾಯೆಗೆ ।
ಯೆರಡನೆಯು ಪರಮಾತ್ಮರೂಪಕೆ ।
ಕರೆವರಾ ಕಾರಣದೊಳಕ್ಷರ ಪುರುಷ ಮಧ್ಯಸ್ಥ ॥ ೩೩೧ ॥

ಮೂರು ಲೋಕಂಗಳಲಿ ನೋಡಲು ।
ಮೇರು ಪರ್ವತ ವೊಂದೆ ತೆರನಿ- ।
ನ್ತಾರವಾಗಿಹುದಾಪರಿಯಲೀ ಪುರುಷನಕ್ಷರನು ॥
ತೋರುವನು ವಿಶ್ವದಲಿ ಸರ್ವದಿ ।
ಮೇರುವತ್ತಿ ಜಗದಲಿ ಸ್ಥಿತನ್ನೆ ।
ನೇರನ್ನೆ ಮೇಣೀತ ಜ್ಞಾನಾಜ್ಞಾನಗಳಲಿ ನಿಜ ॥ ೩೩೨ ॥

ದೊರೆವುದ್ಯೈಕ್ಯ ಯಘಾರ್ಥ ಜ್ಞಾನದಿ ।
ಒರೆನ್ನೈ ವಿಪರೀತ ಜ್ಞಾನದ ।
ಭರದೊಳಾ ದ್ವೈತವು ಕಣಾ ಕೌಂತೇಯ ನೋಡಿದಿಯಾ ॥
ಇರುನ್ನದಾಪುದೊ ಸ್ಥಿತಿಯು ನೋಡಾ- ।
ಯೆರಡು ಸ್ಥಿತಿಗಳ ಮಧ್ಯದೊಳಗದು- ।
ವಿರುವುದಜ್ಞಾನವದೆ ಕೇವಲರೂಪವೀತನದು ॥ ೩೩೩ ॥

ಒದ್ದೆ ಮಾಡಿ ಕುಲಾಲ ಮಣ್ಣನು ।
ಮುದ್ದೆ ಮಾಡುತಲಿಡುವನದರಿಂ ।
ಶುದ್ಧ ಮಡಿಕೆಗಳನ್ನು ಮಾಡುವ ಹಿಂದಿನಾಸ್ಥಿತಿಯು ॥
ಮಧ್ಯಗತವಹುದಲ್ಲವೇನ್ನೈ ।
ವರ್ಧಿಸುವುದೀ ರೂಪವಕ್ಷರ ।
ಮುದ್ದೆಯಂದದಿ ಮಧ್ಯರೂಪವು ವೇದ್ಯವಾಗಿಯದು ॥೩೩೪॥

ಶರಧಿ ಬತ್ತಿರೆ ನೀರು ತೆರೆಗಳು ।
ಮೆರೆವುವೇನಾಕಾರಹೀನಗ- ।
ಳಿರುವುವಲ್ಲನೆ ಯಿಪರಿಯಲಕ್ಷರ ಪುರುಷನಿಹನು ॥
ತೊರೆದು ಜಾಗೃತಿ ಸ್ವಪ್ನ ಬಾರದೆ ।
ಮೆರೆವ ನಿದ್ರಾವಸ್ಥೆಯಂದದಿ ।
ಯಿರುವುದೀ ಯಕ್ಷರ ಪುರುಷನ ಸ್ವರೂಪ ಕೌಂತೇಯ
॥ ೩೩೫ ॥
ಹರಿದು ಜಗದಾಭಾಸವನ್ನುರೆ ।
ಬರದಿರಲು ಕೇಳ್ ನ್ವಾತ್ಮಜ್ಞಾನವು ।
ಯಿರುವುದಾವುದೊ ನಡುನಿನ ಸ್ಥಿತಿಯದುವೆ ಯಕ್ಷರವು ॥

ತೊರೆದು ಷೋಡಶ ಕಲೆಗಳನು ಹಿಮ- ।
ಕರನಮಾವಾಸ್ಯೆಯ ದಿನದಿ ತಾ- ।
ನಿರುವನೆಂತೋ ರೂಪವಾಪರಿ ಯಿರುವುದಕ್ಷರವು ॥ ೩೩೬ ॥

ಒಂದು ಪರಿಯೈ ಜ್ಞಾನಶುದ್ಧವು ।
ವೊಂದು ಪರಿ ವಿಪರೀತ ಜ್ಞಾನವು ।
ದ್ವಂದ್ವದಿವುಗಳ ನಡುವೆ ಮೆರೆಯುವ ಜ್ಞಾನ ಕೇವಲವು ॥
ಬಂಧುರದ ಅಜ್ಞಾನರೂಪವೆ ।
ಬಂದಿಹುದಲಾ ರೂಪವಕ್ಷರ ।
ಮುಂದೆ ನಿನಗಾನರುಹುವೆನು ವಿಸ್ತರದಿ ಕೌಂತೇಯ ॥ ೩೩೭ ॥

ನಾಶವಾಗಲುಪಾಧಿ ಯೆಲ್ಲವು ।
ಲೇಸಿನಿಂದಜ್ಞಾನದಲಿ ಸಂ- ।
ತೋಷದಿಂ ಜೀವಾತ್ಮ ಲಯ ಹೊಂದುವನೊ ತಾನೆಲ್ಲಿ ॥
ಭಾಸಿಸುವುದ್ಯೈ ಜೀವದಲಿ ಮರ ।
ವಾಸವಾತ್ಮಜ ನೋಡು ತತ್ವವ- ।
ನೀಸು ಪರಿಯಲುಪಾಧಿಗಳ ಸ್ವೀಕರಿಸುತಿಪನಾರೊ ॥ ೩೩೮ ॥

ಪುರುಷನೀತನುಪಾಧಿಸಹಿತಲೆ ।
ಒರುತ ವಿಶ್ರಾಂತಿಯನು ಹೊಂದುವ ।
ಪರಮಸ್ಥಾನವು ವ್ಯಕ್ತಭಿನ್ನವು ನೋಡು ಕೌಂತೇಯ ॥
ಇರುವುದಿದುವಜ್ಞಾನರೂಪವು ।
ಯಿರುವುದದು ನಿಸ್ರಾಸ್ವರೂಪವು ।
ಕರೆವರಿದನಾ ಜೀಜಭಾವವೆನುತ್ತ ಕೋವಿದರು ॥ ೩೩೯ ॥

ನರನೆ ಜಾಗರ ಸ್ವಪ್ನ ಭಾಗಗ- ।
ಳೆರಡು ಸ್ಥಲಭಾವಗಳು ನೋಯ್ದೆ ।
ಯಿರುವುದಕ್ಷರ ಪುರುಷನೆಂಬುದೆ ಜೀಜಭಾವವಿದು ॥
ಕರೆವರಿದನೀ ಹೆಸರಿನಿಂದಲೆ ।
ಮೆರೆವ ವೇದಾಂತಿಗಳು ಲೋಕದಿ ।
ಹೊರದುತಿಹುದಿಲ್ಲಿಂದ ಜ್ಞಾನವು ನೋಡು ವಿಪರೀತ ॥ ೩೪೦ ॥

ಹೊರದುತೀ ವಿಪರೀತ ಜ್ಞಾನವು ।
ಬರುವುದ್ಯೈ ಜಾಗರವು ಸ್ವಪ್ನವು ।
ಹೊರಡುವುದು ಪರಿಪರಿಯ ಬುದ್ಧಿಯ ವಿವಿಧಜ್ಞಾನವದು ॥
ನರನೆ ಕೇಳಿಲ್ಲಿಂದಲೇ ತಾಂ ।
ಹೊರಡುವುದು ಜೀವತ್ವ ಜಗದಲಿ ।
ಹೊರಡುವುದು ಮೇಣಿಲ್ಲಿ ವಿಶ್ವನನಂತ ಪರಿಯಾಗಿ ॥ ೩೪೧ ॥

ನರನೆ ಕೇಳ್ ಜೀವತ್ವವೆಲ್ಲಾ ।
ಪರಿಯ ವಿಶ್ವವಿದೆಲ್ಲ ಪ್ರಳಯದಿ ।
ಬರುತ ಸಾಮ್ಯಾವಸ್ಥೆ ತಾಳುವುದಿಲ್ಲಿ ಕೌಂತೇಯ ॥
ನಿರುತ ಸರ್ವೋಪಾಧಿ ಯೆಂಬುವ ।
ಮೆರೆಯುವಜ್ಞಾನದಲಿ ವಿಶ್ರಮಿ- ।
ಸಿರುವ ಪುರುಷನು ನೋಡಲಕ್ಷರನಿರುವನೈ ಪಾರ್ಥ
॥ ೩೪೨ ॥

ಎರಡನೆಯ ಕ್ಷರಪುರುಷನೆಂಬುವ- ।
ನಿರುವನೈ ಜಾಗರದಲಧ್ವಾ ।
ಯಿರುವನೈ ಸ್ವಪ್ನದಲಿ ನಿದ್ರೆಯಲವನು ಬೇರಿಲ್ಲ ॥
ಭರಿತವಿಹುದಜ್ಞಾನ ಪೂರ್ಣವು ।
ಮೆರೆವ ನಿದ್ರಾವಸ್ಥೆಯಲ್ಲವೆ ।
ಕೊರೆತೆಯೊಂದೇ ಪೂರ್ಣಸ್ವಾತ್ಮಜ್ಞಾನವೆನ್ನುವರೆ ॥ ೩೪೩ ॥

ನರನೆ ನೋಡೈ ನಿದ್ರೆಯಿಂದಾ- ।
ಯೆರಡು ಸ್ವಪ್ನವು ಜಾಗರಣವೀ- ।
ತೆರದ ಭಾವಗಳೆರದಿರಲು ಬ್ರಹ್ಮವೆ ಸುಷುಪ್ತಿಯಲಾ ॥
ಬರುತಲಾ ನಿದ್ರಾಗಗನದಲಿ ।
ಪುರುಷಪ್ರಕೃತಿಗಳೆಂಬ ಮೋಡಗ- ।
ಳೆರುವೈ ಕ್ಷೇತ್ರಜ್ಞ ಕ್ಷೇತ್ರಗಳೆಂಬ ಸ್ವಪ್ನಗಳು ॥ ೩೪೪ ॥

ಮೇಲೆ ಮೂಲವದಿದ್ದು ಕೆಳಗೆ ವಿ- ।
ಶಾಲ ಸಂಪ್ರಸರಿಸುವ ಸಂಸೃತಿ- ।
ಬಾಲವೆಂಜೀ ಮರಕೆ ನೋಡಜ್ಞಾನ ಮೂಲವಲಾ ॥

ಹೇಳಲೇನದ ನಿಜದೊಳಿದುವೇ ।
ಮೂಲವಕ್ಷರ ಪುರುಷರೂಪವು ।
ಕೇಳು ನರ ನೀ ಪುರುಷಹೆಸರಿದಕೇತಕೆಂಬುದನು ॥ ೩೪೫ ॥

ಕರೆವರೀತನ ಪುರುಷನೆನುತಲಿ ।
ಭರದಿ ನಿದ್ರೆಯ ಮಾಳ್ಪನೆನುತಲಿ ।
ಮರಳಿ ಮಾಯಾಪುರದಿ ಶಯನವ ಮಾಳ್ಪನಿವನೆಂದು ॥
ಇರದು ನಿದ್ರೆಯಲಿಹವಿಕಾರವು ।
ಮರಳಿಯಾ ವಿಪರೀತ ಜ್ಞಾನವು ।
ಯಿರದು ನೋಡೀ ತೆರದಿ ರೂಪದಿ ರಾಜಸುತ್ತಿಹನು ॥ ೩೪೬ ॥

ನಾಶವಾಗದು ಸಹಜ ಗತಿಯಲಿ ।
ನಾಶವಾಗದು ಜ್ಞಾನ ಹೊರತಿದು ।
ನಾಶವಾಗದು ಬೇರೆ ಸಾಧನದಿಂದ ಕೌಂತೇಯ ॥
ಈಸು ಪರಿಯಲಿ ನಾಶವಿಲ್ಲದ- ।
ನಾಶಿರೂಪವಿದೆಂದು ಜಾಣರು ।
ಘೋಷಿಪರು ಕೇಳೆದುವೆ ಯಕ್ಷರರೂಪವಿಹುದೆಂದು ॥ ೩೪೭ ॥

ನರನೆ ನೋಡಕ್ಷರ ಪುರುಷನೀ- ।
ಪರಿಯಿರುವ ಚೈತನ್ಯವಲ್ಲವೆ ।
ಯಿರುವುದೈ ಸಂಬಂಧ ಮಾಯಾರೂಪದಲ್ಲಿದಕೆ ॥
ಒರುವುದೈ ಸಂಬಂಧ ಮಾಯೆಗೆ ।
ಮರಳೆ ಪರಮಾತ್ಮನಲಿ ಯದರಿಂ ।
ಒರುವುದೈ ವ್ಯವಹಾರ ಜೀವನ ಕಾರ್ಯಕೈ ಹೇತು ॥ ೩೪೮ ॥

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥ ೧೭ ॥

ನರನೆ ಕೇಳ್ವಿಪರೀತ ಜ್ಞಾನದ ।
ಭರದಿ ವಿಶ್ವದೊಳೆಲ್ಲ ಹುಟ್ಟುವ ।
ಮೆರೆವ ಬಾಗರ ಸ್ವಪ್ನವೆಂಜೀ ಯೆರಡವಸ್ಥೆಗಳು ॥
ಮರಳಿ ಯಜ್ಞಾನದಲಿ ಲಯಹೊಂ- ।
ದಿರುವ ಕಾರಣ ನೋಡು ಪಾರ್ಥನೆ ।
ತಿರಿಗಿ ಜ್ಞಾನದಿ ಮುಳುಗಿ ಪಾರಾಗುವುದು ನೋಡಿದಿಯಾ
॥ ೩೪೯ ॥

ಕಟ್ಟಗೆಯ ಸುಡುತಗ್ನಿ ಕಟ್ಟಗೆ ।
ನಷ್ಟವಾಗಲು ತನ್ನ ತಾನೇ ।
ನಷ್ಟವಾಗುವುದಲ್ಲವೇ ಮೇಣಗ್ನಿಯುಳಿಯುವದೇ ॥

ಶ್ರೇಷ್ಠವಿಹುದೈ ಜ್ಞಾನ ಮೊದಲಿಗೆ ।
ನಷ್ಟವಜ್ಞಾನವನು ಮಾಳ್ಪುದು ।
ಕೊಟ್ಟು ಬ್ರಹ್ಮ ಸ್ವರೂಪ ದರ್ಶನ ತಾನೆ ಲಯವಹುದು ॥ ೩೫೦ ॥

ನರನೆ ಕೇಳೀ ತೆರದಿ ಜ್ಞಾನತೆ- ।
ಹೊರತು ಜ್ಞಾನವು ಹಿಂದುಳಿವುದೇ ।
ಯಿರುವನುತ್ತಮ ಪುರುಷ ಮೂರನೆ ಯೆನುತ ನಾ ಪೇಳ್ದೆ ॥
ಇರುವನಾತನು ಹಿಂದೆ ಪೇಳಿದ ।
ಪುರುಷರೀರ್ವರ ಹೊರತು ಪಾರ್ಥನೆ ।
ಯಿರುವುದಲ್ಲವೆ ಜಾಗರಾವಸ್ಥೆಯು ಬಹೂತ್ತಮವು ॥ ೩೫೧ ॥

ತರಣಿಕಿರಣವು ಮೃಗಜಲವು ನೋ- ।
ಡೆರಡು ವಸ್ತುಗಳೆವನು ಬಿಟ್ಟರೆ ।
ತರಣಿಮಂಡಲವದಿಹುದಲ್ಲವೆ ಮೂರನೆಯ ವಸ್ತು ॥
ಪುರುಷನುತ್ತಮನಾ ಪರಿಯಲೇ ।
ಯಿರುವನ್ಯೆ ಮೂರನೆಯು ವಸ್ತುವು ।
ಯಿರುವನಾತನು ನಿತ್ಯ ಕೇವಲ ತತ್ತ್ವ ಸ್ವಾಧೀನ ॥ ೩೫೨ ॥

ನರನೆ ಕಟ್ಟಿಗೆಯಲ್ಲಿ ರಂಬಿಸು- ।
ತಿರುವ ಬೆಂಕಿ ಸ್ವತಂತ್ರವಲ್ಲವೆ ।
ಯಿರುವನಾಪರಿ ಯಕ್ಷರಕ್ಷರವೆರಡ ಹೊರತಾಗಿ ॥
ಶರಧಿ ಸೀಮೆಯ ತಪ್ಪಿ ಪ್ರಳಯದಿ ।
ಧರಣಿಯೇ ಜಲಮಯವದಾಗಲು ।
ಯಿರುವದೇನ್ಯೆ ಭೇದ ನದಿನದಕೆರೆಸರೋವರದ ॥ ೩೫೩ ॥

ನರನೆ ಕೇಳೀ ತೆರದಿ ಜಾಗರ ।
ಮೆರೆವ ನಿದ್ರೆಯು ಸ್ವಪ್ನವೆಂಬೀ- ।
ತರದಿ ಭೇದಗಳೆಲ್ಲ ಲಯ ಹೊಂದುವುವು ನೋಡಿದರೆ ॥
ಒರಲಿಕಾ ಕಲ್ಪಾಂತ ತೇಜವು ।
ಯಿರುಳು ಹಗಲೆಂಬಿರುವ ದ್ವೈತವು ।
ಹರಿದು ಹೋಗುವುದೊಂದೆ ರೂಪದ ತೇಜ ಬೆಳಗುವುದು
॥ ೩೫೪ ॥

ದ್ವೈತ ಮೇಣದ್ವೈತವೆಂಬೀ- ।
ಮಾತು ಸಲ್ಲದು ಯಿಲ್ಲಿಯಿಹುದೀ- ।
ರೀತಿಯನುಭವ ಬಾರಲಾಗದು ಭೇದ ಲಯವಹುದು ॥
ಪಾರ್ಥ ಕೇಳಾ ಪುರುಷನುತ್ತಮ ।
ಮಾತ ಕೇಳೈ ಯಾತನೇ ಪರ- ।
ಮಾತುಮನು ಸರ್ವೋತ್ತಮನು ವಿಶ್ವದಲಿ ತುಂಬಿಹನು
॥ ೩೫೫ ॥

ನರನೆ ನೋಡೀ ತೆರದ ಮಾತದು ।
ಬರುವುದೇನುಪಯೋಗವದರಲಿ ।
ನರರ ಮಾತದು ಜೀವಸದೆಯನೆ ಧರಿಸಿಯಾಡುವುದು ॥
ಪುರುಷ ತೀರದಿ ನಿಂತಿರುತಲೇ ।
ಭರದಿ ನದಿಯಲಿ ಮುಳುಗಿರುವನೀ- ।
ತೆರದ ವಾರ್ತೆಯ ಹೇಳುತಿರೆ ಮುಳುಗುವನವನು ಬಹಸೆ
॥ ೩೫೬ ॥

ನರನೆ ನೋಡು ವಿಚಾರತೀರದೊ- ।
ಳಿರುತ ವೇದಗಳೇ ನಿರೀಕ್ಷಿಸು- ।
ತಿರಲು ಪರವಪರಗಳ ಮಾತುಗಳನ್ನು ಪೇಳುವುವು ॥

ಕ್ಷರನು ಮೇಣಕ್ಷರನು ಯೆಂಬೀ- ।
ಯಿರಡು ಪುರುಷರು ಯಿರುವರಪರರು ।
ಕರೆವರಾತ್ಮಸ್ವರೂಪನನು ಪರಪುರುಷನೆನ್ನುತಲಿ ॥ ೩೫೭ ॥

ನರನೆ ಪುರುಷೋತ್ತಮನ ಕೇಳೀ- ।
ತೆರದಿ ತಿಳಿ ಪರಪುರುಷನೆನುತಲಿ ।
ಮೆರೆಯಲಾರದು ಶಬ್ದವರ್ಣನವಲ್ಲಿ ಕೌಂತೇಯ ॥
ಧರಿಸಿ ಮೌನವ ಜ್ಞಾನ ಕೂತಿತು ।
ಹರಣವೈ ವ್ಯವಹಾರವೆಲ್ಲಕೆ ।
ಬರುವುದಸ್ತಾಚಲಕೆ ಸೋಹಂಭಾವವಿದು ವಾರ್ಥ ॥ ೩೫೮ ॥

ವಕ್ತನೇ ತಾಂ ಕಥನವಾಗಲು ।
ಮತ್ತೆ ಲೋಕನವದುವೆ ದ್ರಷ್ಟೃತೆ- ।
ಯೆತ್ತಣಿಂದೀ ವಿಸ್ತರವ ಪೇಳುವುದು ಕೌಂತೇಯ ॥
ಅಸ್ತವಾಗಲು ದ್ವೈತಪೀಪರಿ ।
ಯೆತ್ತಣಿಂದೀ ಪರಿಯ ಶಬ್ದವು ।
ವಿಸ್ತರಿಪರಾರಿನ್ನು ಶಬ್ದಾತೀತವಾ ಸ್ಥಿತಿಯು ॥ ೩೫೯ ॥

ದೃಷ್ಟವಿವನಿದು ದೃಶ್ಯವೆಂಬುದು ।
ನಷ್ಟವಾಗಲು ದ್ವಂದ್ವಭವವು ।
ನಷ್ಟವಾಗುವುದಲ್ಲವೇ ಕೇಳ್ ಸೃಷ್ಟಿ ಸರ್ವವಿದು ॥
ದೃಷ್ಟಿಗೋಚರವೆನಿಸದಿರ್ದರು ।
ನಷ್ಟನೇನು ಸುಗಂಧ ಮೂಗಿಗೆ ।
ತಟ್ಟಲಾರದೆ ಹೂವಿನಿಂದಲಿ ಬಂದು ಬಡಿವುದಲಾ ॥ ೩೬೦ ॥

ಅರಿಯ ಬೇಕಿದನನುಭವದಲೇ ।
ಯಿರುವುದದು ತದ್ರೂಪವನುಭವ ।
ಮೆರೆವ ನಿಯಮನನೀಶನಾತ ನಿಯಾಮ್ಯಹೊರತಾಗಿ ॥
ಇರುವನಾತ ಪ್ರಕಾಶ ಕೇವಲ- ।
ವಿರುವನಾತ ಪ್ರಕಾಶ್ಯಹೊರತೀ ।
ಪರಿಯಲಾತನು ರಂಪಿಸುವನಾತ್ಮಸ್ವರೂಪದಲಿ ॥ ೩೬೧ ॥

ನಾದವನು ಕೇಳುವರೆ ಶಕ್ತಿಯ- ।
ನಾದರಿಸುವಾ ನಾದಬ್ರಹ್ಮವು ।
ಸ್ವಾದವನು ತಿಳುಹಿಸುವ ಶಕ್ತಿಯ ಮೂಲ ಸ್ವಾದವವ ॥
ಮೋದ ಬ್ರಹ್ಮಾನಂದಕೀಯುವ ।
ಮೋದ ಪರಮಾನಂದದನುಭವ ।
ಮೇದಿನಿಯ ಪುರುಷರಲಿ ಯುತ್ತಮ ಪೂರ್ಣತೆಯ ತುದಿಯು ॥೩೬೨॥

ಇರುವನಾತನು ಸುಖಕೆ ಸುಖತಮ ।
ವಿರುವನ್ನೆ ತೇಜಕ್ಕೆ ತೇಜವು ।
ಯಿರುವನ್ನೆ ವಿಶ್ರಾಂತಿಗಾತನು ವಿಶ್ರಮ ಸ್ಥಾನ ॥
ಬರುತ ಶೂನ್ಯವು ಶೂನ್ಯದಲಿ ಲಯ- ।
ವಿರುವ ತೆರದಲ್ಲುದಯ ಬರಲದು- ।
ವಿರುವುದದು ಬಹುದೂರ ಲಯದಿಂ ದೂರವಿಹುದದುವೆ
॥ ೩೬೩ ॥

ಇರುವನವ ವಿಸ್ತಾರದುಪರಿಯು ।
ಯಿರುವನಾತನು ದೂರವೆಲ್ಲಕು ।
ಮರುಳ ಮಾಳ್ಪುದು ಮೂಢ ಜನರನು ಸಿಂಪಿ ಬೆಳ್ಳಿದಾಗಿ ॥
ಇರುವೆ ಬೆಳ್ಳಿಯ ರೂಪವೆನುತಲಿ ।
ವರರ ಭ್ರಮದಿಂ ಕುಣಿಪುದಲ್ಲವೆ ।
ತಿರಿಗಿ ನೋಡಾಭರಣದಲ್ಲಡಗಿಹುದು ಚಿನ್ನವಲಾ ॥ ೩೬೪ ॥

ಇರನಲಾ ತಾಂ ವಿಶ್ವ ವಿಶ್ವದ ।
ಪರಿಯ ರೂಪವ ಧರಿಪನಲ್ಲೆ ।
ತೆರೆಗಳಲಿ ನೀರಿನಲಿ ಭೇದವು ವಾಸಿಪುದೆ ಹೇಳು ॥

ಪರಿಯಲೀ ಪರಮಾತ್ಮ ವಿಶ್ವಗ- ।
ಳೆರುವವೇನ್ಯೆ ಭಿನ್ನ ತಿಳಿಯಲು ।
ಯಿರುವನಾತ ವಿಕಾಸಸಂಕೋಚಕ್ಕೆ ಕಾರಣನು ॥ ೩೬೫ ॥

ನೀರಿನಲಿ ಪ್ರತಿಬಿಂಬ ಬೀಳ್ವರೆ ।
ಕಾರಣನಲಾ ಚಂದ್ರ ಪಾರ್ಥನೆ ।
ತೋರಲೀ ವೃತ್ಪತ್ತಿ ಜಗದಲಿ ಭೇದ ಬಾರದಲಾ ॥
ಹಾರಿದರೆ ಲಯವಾಗಿ ಜಗಸಂ- ।
ಹಾರವಾಗಲದೇನು ಯೆಲ್ಲಿಯು ।
ಹಾರಲಾರದು ಸ್ಥಿರವಿಹುದು ಸರ್ವತ್ರವಾ ತತ್ತ್ವ ॥ ೩೬೬ ॥

ಇರುಳು ಹಗಲೀ ಯೆರಡು ಬಂದರು ।
ತರಣಿಗೇನಿವು ಬಾಧಿಸುವುವೇ ।
ತರಣಿಯೊಂದೇ ತೆರದಿ ರಂಜಿಪನಲ್ಲವೇ ಪಾರ್ಥ ।।
ಬರುವುದೆಂತವನಿಂಗೆ ನಾಶವು ।
ಯಿರನಲಾ ಯಾರೊಳಗು ಮೇಣವ- ।
ನಿರುವನಾತನು ತನ್ನ ತುಲನೆಗೆ ಯೋಗ್ಯ ತಾನಾಗಿ ॥ ೩೬೭ ।।

ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥ ೧೮ ॥

ನರನೆ ನೋಡು ಸ್ವಯಂಪ್ರಕಾಶಕ- ।
ನಿರುವನಾತನು ದ್ವೈತವವನಲಿ ।
ಮೆರೆಸಲಾರದು ತನ್ನ ಪರಿಯಾಟವನು ಕೌಂತೇಯ ।।

ನರನೆ ನಿರುಪಾಧಿಕ ಸ್ವರೂಪವು ।
ಯಿರುವುದದುವೇ ವಾಸ್ತವಿಕದಲಿ ।
ಕ್ಷರಗೆ ಮೇಣಕ್ಷರಗತೀತನು ಮೆರೆಯುತಿಹೆ ನಾನು ॥

ಕರೆವರಾ ಕಾರಣದಲೆನ್ನನು ।
ಪರಿಪರಿಯ ನಿಗಮಾಗಮಂಗಳು ।
ಪುರುಷರೊಳಗುತ್ತಮನೆನಿಸುತ ಘೋಷಿಪುವು ವಿಧವಿಧದಿ ॥ ೩೬೮ ॥

ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ॥ ೧೯ ॥

ನರನು ಪುರುಷೋತ್ತಮನು ಜಗದೊಳ- ।
ಗಿರುವೆ ನಾನೇ ಯೊರ್ವನೆಂಬೀ- ।
ತೆರದ ಭಾವನೆ ಯಾಗೆ ಬೆಳಗುವನಾಗ ಜ್ಞಾನರವಿ ॥
ನರಗೆ ಜಾಗೃತಿ ಬರಲು ಹಿಂದ- ।
ಕ್ಕಿರುವುದೇನ್ಯೆ ಸ್ವಪ್ನಜ್ಞಾನವು ।
ಒರಲು ನರಗೀ ಜಗವು ಮಿಥ್ಯವೆನುತ್ತ ಭಾಸಿಪುದು ॥೩೬೯॥

ಕರದಿ ಹಾರವನೆತ್ತಿ ನೋಡಿದ- ।
ರುರಗನೆಂಬಾಭಾಸ ಮನದಿಂ ।
ಹರಿದು ಹೋಗುವದಲ್ಲವೇ ಕಲಿಪಾರ್ಥ ನೋಡಿದಿಯಾ ॥
ನರನು ಕೇಳಾಭರಣತತಿಯ- ।
ಲ್ಲಿರಿಸಿದರೆ ಭಂಗಾರದೃಷ್ಟಿಯ ।
ಹರಿವುದೈ ಭಿನ್ನತ್ವ ಪರಿಪರಿಯಾಭರಣದಿಂದ ॥ ೩೭೦ ॥

ಒರಲು ಯೆನ್ನ ಯಥಾರ್ಥ ಜ್ಞಾನವು । ಶುದ್ಧ ಚಿನ್ಮದಿ ಶುದ್ಧ ಚಿನ್ನವೆ ।
ಹರಿವುದಲ್ಲವೆ ತ್ರಿಪುಟಿಭೇದವು । ಬಿದ್ದರದುವೇ ಯೋಗ್ಯವೆನಿಪುದು ।
ಹರಿವುದವನಿಗೆ ಜ್ಞೇಯಜ್ಞಾತೃಜ್ಞಾನವೀ ಭೇದ ॥ ಶುದ್ಧ ಮದ್ಭಾಪವನು ತಾಳ್ದರೆ ಮದ್ಭಜನಪಾತ್ರ ॥
ಇರುವೆ ನಾನು ಸ್ವತಹ ಸಿದ್ಧನೆ । ಶುದ್ಧ ಗಂಗೆಯು ಬೇರೆ ಯಿರುವಳೆ ।
ಯಿರವೆನ್ನೆ ಸರ್ವತ್ರ ವಿಶ್ವದಿ । ವಾರ್ಧಿಯಲಿ ಸಂಯೋಗವಾಗಲು ।
ಯಿರುವೆನಲ್ಲವೆ ಸಚ್ಚಿದಾನಂದನು ಕಣಾ ನಾನು ॥ ೩೭೧ ॥ ವಾರ್ಧಿರೂಪವ ತಾಳ್ವಳಲ್ಲವೆ ವಾರ್ಧಿ ಸೇರುವರೆ ॥ ೩೭೪ ॥

ನರನೆ ಕೇಳದ್ವೈತದೃಷ್ಟಿಯೊ- । ಎನ್ನ ರೂಪವ ತಾಳದಬೆ ಮುಂ- ।
ಳಿರದೆ ಯೆನ್ನನು ನೋಡುವಾತನು । ದಿನ್ನು ಮದ್ಭಕ್ತಿಯನು ಮಾಳ್ಪುದು ।
ಮರೆತು ತನ್ನ ನಿಜಸ್ವರೂಪವನೆನ್ನೊಳೈಕ್ಯವನು ॥ ಸನ್ನುತಾತ್ಮನೆ ಶಕ್ಯವಿಲ್ಲೈ ನೋಡು ಕೌಂತೇಯ ॥
ಧರಿಸುತೆನ್ನನೆ ತಿಳಿಯುವಾತನು । ಅರ್ಣವದೊಳೇಳುವ ತರಂಗಗ- ।
ನರನೆ ಯೆನ್ನನೆ ಭಜಿಸುತಿರುವನು । ಳನ್ನು ನೊಡಲು ಬೇರೆ ತೋರ್ಪುವು ।
ಮೆರೆಯದಾತಗೆ ಶಬ್ದವಿಷಯದ ದ್ವೈತ ಕೌಂತೇಯ ॥೩೭೨॥ ಭಿನ್ನತೆ ತರಂಗಗಳಲರ್ಣವದಲ್ಲಿರುವುದೇನು ॥ ೩೭೫ ॥

ನರನೆ ಯೆನ್ನಯ ಭಜನ ಮಾಡಲು । ನರನೆ ಯೆನ್ನಯ ಭಜನ ಮಾಡುವ ।
ಬರುವುದವಗಧಿಕಾರ ಕೇಳ್ಕೈ । ಶರಣನೊಳು ಮತ್ತೆನ್ನೊಳೊಂದೇ ।
ನರನೆ ಗಗನವನಪ್ಪಿಕೊಳ್ಳಲು ಗಗನವೇ ಯೋಗ್ಯ ॥ ಪರಿಯದಲ್ಲವೆ ದ್ವೈತವುಂಟೀ ಹೇಳು ಕೌಂತೇಯ ॥
ಧರೆಯೊಳಾಕ್ಷೀರಾಬ್ಧಿಗೌತಣ । ತರಣಿಯಲಿ ತೇಜದಲಿ ಭೇದವ- ।
ವಿರಚಿಸಲು ಕ್ಷೀರಾಬ್ಧಿ ಬೇಕ್ಕೈ । ದಿರುವುದೇ ನೋಡಿದರೆ ಪಾರ್ಥನೆ ।
ಧರಿಸುತವೃತದ ರೂಪವನಮೃತದಿ ಕೂಡ ಬೇಕಲ್ಲೈ ॥೩೭೩॥ ಬರುವುದೆಂತಂತರವು ಯೆನ್ನೊಳು ಯೆನ್ನ ಭಕ್ತನೊಳು ॥ ೩೭೬ ॥

ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾನಘ ।
ಏತದ್ಬುದ್ಧ್ವಾ ಬುದ್ಧಿವಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥ ೨೦ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ
ಶ್ರೀಕೃಷ್ಣಾರ್ಜುನಸಂವಾದೇ ಪುರುಷೋತ್ತಮಯೋಗೋ ನಾಮ ಪಂಚದಶೋಽಧ್ಯಾಯಃ ॥ ೧೫ ॥

ನರನಿಗೀಪರಿ ತತ್ತ್ವಬೋಧೆಯ- । ವೇದಸಾರಾಮೃತದಿ ತುಂಬಿಹ ।
ನರುಹಿದನು ವಿಸ್ತಾರದಿಂ ಹರಿ- । ವೇಧಿನೆಯೊಳೆರಡನೆಯ ಪಾವನ- ।
ಯಿರುವುದೀ ಹದಿನೈದನೇಯಧ್ಯಾಯ ಸುಂದರವು ॥ ವಾದ ಭಾಗೀರಥಿಯು ಭಗವದ್ಗೀತೆ ನಿಜವಾಗಿ ॥ ೩೭೮ ॥
ಧರೆಯೊಳುಪನಿಷತ್ತುಗಳೆ ಯರಳಿಹ ।
ಸರಸಿಜಗಳೆಹುವವುಗಳೆಂದಲಿ । ಇರುವುದೈ ಯಾನಂದಚಂದ್ರನಿ- ।
ಹೊರಟು ಭಗವದ್ಗೀತೆ ಯೆಂಬ ಸುವಾಸ ಪಸರಿಸಿತು ಗಿರುವ ಹದಿನೇಳನೆಯ ಕಳೆಯೈ ।
॥ ೩೭೭ ॥ ಧರೆಯೊಳಾ ಸುವಿಚಾರಕ್ಷೀರಾಬ್ಧಿಯನು ಮಂಥಿಸುತ ॥
ವೇದಗಳ ಮಂಥನವ ಮಾಡುತ । ದೊರಕಿಸಿರ್ದೆರಡನೆಯ ಲಕ್ಷ್ಮಿಯು ।
ಬಾದರಾಯಣ ಮತಿಯ ಹಸ್ತದಿ । ಯಿರುವುದೆನ್ನಯ ರೂಪ ಗೀತೆಯು ।
ಮೋದದಿಂ ತೆಗೆದಿರುವ ನವನೀತವು ಕಣಾ ಗೀತೆ ॥ ಅರುಹಲೆಂತೀ ಗೀತೆ ಮದ್ರೂಪವನೆ ತಾಳ್ದಿಹಳು ॥ ೩೭೯ ॥

ಸರಸಪವರ್ಣಾರ್ಥದಿಂದಲಿ ।
ಯಿರಿಸುತೆನ್ನಲಿ ಜೀವಪ್ರಾಣವ ।
ಹರಿಹೊರತು ಮತ್ತನ್ಯರನು ನೋರುವಳೆ ಕೌಂತೇಯ ॥
ಬರುತಲಿವಳನ್ನಾಕ್ಷರಾಕ್ಷರ ।
ಪುರುಷರೀರ್ವರು ವರಿಸಲೆತನಿಸೆ ।
ವರಿಸಿದಳು ಪುರುಷೋತ್ತಮನ ಗೀತಾಖ್ಯೆಲಕುಮಿ
॥ ೩೮೦ ॥

ನರನೆ ನಿನಗಾನರುಹಿದೆನಲಾ ।
ಸರಸ ಗೀತೆಯನೀಗ ಕೇಳಿದಿ ।
ವರಿಸಿಹಳು ಯೆನ್ನನೆ ಮನೋವಾಕ್ಕಾಯದಿಂ ನೋಡೈ ॥
ಅರುಹಿ ಬಾಯಿಂ ಶಬ್ದದಿಂ ವಿ ।
ಸ್ತರಿಪ ಶಾಸ್ತ್ರವಿದಲ್ಲ ನೋಡಲು ।
ಯಿರುವದೈ ಸಂಸಾರವನರಿಪು ದಿವ್ಯಶಸ್ತ್ರನಿದು ॥ ೩೮೧ ॥

ಇರುವೈ ಗೀತಾಕ್ಷರಂಗಳು ।
ಧರೆಯಲಾತ್ಮಜ್ಞಾನವೀಯುವ ।
ಪರಮ ದರ್ಶಕ ಮಂತ್ರರೂಪಂಗಳು ಕರ್ಣಾ ಪಾರ್ಥ ॥
ಇರುವುದಿದರಲಿ ದಿವ್ಯಶಕ್ತಿಯು ।
ದೊರಕಿಸುವುದೈ ಸ್ವಾತ್ಮಜ್ಞಾನವ ।
ನರನೆ ನಿನಗಾನಿಂದು ವಿಸ್ತರಿಸಿದೆನು ಗುಹ್ಯವನು ॥ ೩೮೨ ॥

ಬರಿದೆ ಗುಹ್ಯವಿದಲ್ಲ ಪಾರ್ಥನೆ ।
ಯಿರುವುದೆನ್ನಯ ಗುಪ್ತ ವಿದ್ಯೆಯು ।
ಯಿರುವುದಿದುವೇ ಗುಹ್ಯತಮ ಸಿದ್ಧಾಂತ ವರತತ್ತ್ವ ॥
ವರಮುನಿಪ ಗೌತುಮನು ತಪದಿಂ ।
ಹರನ ಜಟೆಯಿಂ ಗಂಗೆಯನು ತಾಂ ।
ಹೊರಡಿಸಿದನೆಂಬೀ ಪರಿಯನೀಕೇಳಿ ಬಲ್ಲಿಯಲಾ ॥ ೩೮೩ ॥

ಇರುನೆ ನಾ ಚೈತನ್ಯಶಂಖವು ।
ಹೊರಡಿಸಿದಿ ಗೀತಾಖ್ಯಗಂಗೆಯ ।
ನರನೆ ನೀ ಶ್ರದ್ಧಾಳು ಗೌತಮನಾದಿ ಜಗಕೆಲ್ಲ ।
ಇರಿಸುತಲಿ ದರ್ಪಣವ ಮುಂದಕೆ ।
ನರನು ನಿಜಮುಖ ನೋಡುತನುಭವ ।
ದೊರಕಿಸುವನೈ ಸುಖವನನುಭವಿಸುವನು ದರ್ಪಣದಿ ॥ ೩೮೪ ॥

ಮೆರೆವ ಗೀತಾರೂಪದರ್ಪಣ ।
ದೊರಕಿತೈ ನಿನಗಿಂದು ನೀನೀ- ।
ಸರಸ ಸ್ವಾತ್ಮಸ್ವರೂಪದನುಭವ ಘಟಿಸು ಯಿದುವಿಂದ ॥
ಶರಧಿಯಲಿ ಪ್ರತಿಬಿಂಬಿಸುವುದೈ ।
ಮೆರೆವ ಗಗನದ ಚಂದ್ರತಾರೆಗ- ।
ಳಿರದೆ ಯಾ ತೆರನಾಗಿ ಮಾಡಿದಿ ಪಾರ್ಥ ನೀನೀಗ ॥ ೩೮೫ ॥

ನರನೆ ನಾ ಗೀತಾಪಮೇತನು ।
ಮೆರೆವೆ ನಿನ್ನಂತಃಕರಣದಲಿ ।
ಹರಿಯಿತೈ ಮಲ ತ್ರಿವಿಧತಾಪಸ್ವರೂಪವಾಗಿರುವ ॥
ನರನೆ ಗೀತೆಗು ನನಗು ಸುಂದರ- ।
ವಿರುವ ವಸತಿನ್ಥಾನ ನೀನಾ- ।
ಗಿರುವಿ ನಿನ್ನಯ ಹೃದಯವೇ ನೈಕುಂಠನಿಹುದೆಮಗೆ ॥ ೩೮೬ ॥

ಅರುಹಲೇನಾ ವಿಸ್ತರವ ನಾ ।
ನರನೆ ಗೀತಾಜ್ಞಾನವಲ್ಲಿಯು ।
ದೊರೆಯೆ ತರಿಸುವನಿದರ ಯೋಗದಿ ನರನು ಸಂಸಾರ ॥
ಹರಿದು ಮೋಹದ ಬಲೆಯ ಮೋಕ್ಷವ ।
ದೊರಕಿಸುವನೈ ಮಾತು ನಿಶ್ಚಯ ।
ಹರಿಸುವುದು ಭವರೋಗವೆಲ್ಲನಿದಮರಪದವಿತ್ತು ॥ ೩೮೭ ॥

ಕುಡಿಯುವರೆ ಪೀಯೂಷ ದೊರೆಯಲು ।
ಪೊಡವಿಯಲಿ ರೋಗಗಳು ಮಡಿಪುವು ।
ಕೊಡುವುದಮರತ್ವವನು ನೋವ್ ಪೀಯೂಷಲಕ್ಷಣವ ॥
ಪಿಡದೆ ಗೀತಾಜ್ಞಾನವಾಗಲು ।
ಸುಡುವುದೀ ಮೋಹವನು ಪೂರ್ಣದಿ ।
ಪಿಡುವನೈ ಸಂಸಾರವನು ನರ ಜನನಮರಣಗಳ ॥ ೩೮೮ ॥

ಪ್ರಾಪ್ತನಾಗಲು ಸ್ವಾತ್ಮಜ್ಞಾನವು ।
ಮುಕ್ತಿಯಪ್ಪುದು ಸ್ವಾತ್ಮರೂಪದಿ ।
ಪ್ರಾಪ್ತವಹುದೈ ಸಹಜದಲಿ ನೈಷ್ಕರ್ಮ್ಯ ಕೌಂತೇಯ ॥
ಮತ್ತೆ ಜ್ಞಾನದ ಋಣವ ತೀರಿಸಿ ।
ಮತ್ತೆ ಬ್ರಹ್ಮದಿ ಲೀನ ನರನಹ ।
ಪ್ರಾಪ್ತವಾಗಲಭ್ಯ ವಸ್ತುವು ಹರ್ಷವೇರುವುದು ॥ ೩೮೯ ॥

ಜ್ಞಾನವೆಂಬುದು ಕಲಶರಂಬಿಪು- ।
ದೇನ ಹೇಳಲಿ ಕರ್ಮದೇವ- ।
ಸ್ಥಾನದಲಿ ಕರ್ಮಗಳು ಸುಡುವುವು ಜ್ಞಾನಯಜ್ಞದಲಿ ॥
ದೀನನಾಥನು ಕೃಷ್ಣನೀಪರಿ ।
ಜ್ಞಾನದೀಪವ ಹಚ್ಚಿ ಪಾರ್ಥಗೆ ।
ತಾನೆ ಕೈಯೊಳಗಿತ್ತನೈ ಬೆಳಕಾಯ್ತು ಜಗಕೆಲ್ಲ ॥ ೩೯೦ ॥

ಹರಿಯಬಾಯಿಂ ಸೂಸುತಿರುಮೀ- ।
ಪರಿಯ ಗೀತಾಮೃತದ ಭಾಷಣ ।
ನರನ ಮನದಲಿ ತುಂಬಿ ತುಳುಕುತ ಹೊರಗೆ ಸೂಸಿತಲಾ ॥
ಕರುಣದಿಂದಾ ವ್ಯಾಸಮುನಿಪನ ।
ದೊರಕಿತ್ತೆ ಸಂಜಯನಿಗಮೃತವು ।
ಧರಣಿಪತಿ ಧೃತರಾಷ್ಟ್ರನಿಗೆ ಕುಡಿಸುವರೆ ಯತ್ನಿಸಿದ ॥೪೯೧॥

ಕುರುಡನಾ ಧೃತರಾಷ್ಟ್ರ ಭೂಮಿಪ- ।
ನರಿವನೆಂತೀ ಸರಸ ಗೀತೆಯ ।
ಮರುಳನಂದದಿ ತಿಳಿಯದಾದನು ಗೀತೆಯರ್ಥವನು ॥
ಪರಿಯಿದಾದರು ಯೋಗ್ಯನಲ್ತಾ- ।
ಧರಣಿಪತಿ ಧೃತರಾಷ್ಟ್ರನಾದರು ।
ದೊರೆಯಿತವನಿಗೆ ಕೊನೆಗೆ ರುಚಿಯೊ ಪಾನದಲಿ ತಿಳಿಯೆ
॥ ೪೯೨ ॥

ಕ್ಷೀರವನು ಕುಡಿಸಿದರೆ ದ್ರಾಕ್ಷೆಯು ।
ಚಾರುಒಲ್ಮೆಗೆ ವ್ಯರ್ಥವೆನುತಲಿ ।
ತೋರುವುದು ಮೊದಲಿಂಗೆ ದ್ರಾಕ್ಷೆಯು ಗೊಂಚಲಿಳಿಸಿದರೆ ॥
ತೋರುವುದು ಸೊಗಸಾಗಿ ತದ್ವತು ।
ಧಾರುಣಿಪ ಧೃತರಾಷ್ಟ್ರ ಕೃಷ್ಣನ ।
ಚಾರುಸಂವಾದವನು ಕೇಳುತ ಹರ್ಷಪಟ್ಟನಲಾ ॥ ೪೯೩ ॥

ಅರಿಯದಲೆ ಶ್ರೀಹರಿಯರುಹಿದೀ- ।
ಸರಸ ಗೀತಾಕ್ಷರಗಳನು ನಾ- ।
ನಿರದೆ ಕನ್ನಡಷಟ್ಪದಿಯ ರೂಪದಲಿ ಹಾಡಿದೆನು ॥

ಅರಿತವನು ನಾನಲ್ಲ ಪಂಡಿತ- ।
ರರಿತವರು ಸ್ವೀಕರಿಸಿ ಬಾಲನ ।
ವಿರಸಭಾಷಣ ಸರಸ ಮಾಳ್ಪದೆನುತ್ತ ಜಿನ್ಜೈಜೆ ॥ ೪೯೪ ॥

ನೋಡಲಂಗವ ಮುಳ್ಳುಸೇಂಬ್ತಿಯ ।
ರೂಢಿಯುಲಿ ತೋರದು ವಿಶೇಷವು ।
ಗೂಢವಿಹ ಪರಿಮಳವ ಬಲ್ಲುದು ಭ್ರಮರವೇ ನೋಡು ॥
ಆಡಿದೆನ್ನಯ ಮಾತಿನಲಿ ನೀನ ।
ನೋಡಿದರೆ ಸಿದ್ಧಾಂತ ಗ್ರಹಿಪುದು ।
ಮಾಡಲಾಗದುಪೇಕ್ಷೆ ಬಾಲಿಶತನದ ಮಾತಿನುತ ॥ ೪೯೫ ॥

ಅರಿಯದಿರಲುರೆ ಬಾಲ ನುಡಿಯುವ ।
ಪರಿಯ ನುಡಿ ತೊದಲಾದರೇನದು ।
ಹರುಷದಿಂ ತಾಯ್ತಂದೆಗಳು ಕೌತುಕವ ಮಾಳ್ಪರಲಾ ॥
ಇರುವರಾಪರಿ ತಾಯಿತಂದೆಗ- ।
ಳರರೆ ನೀವೇ ಶ್ರೋತೃ ಸುಜನರೆ ।
ಮೆರೆಸಿರೆನ್ನಯ ತೊದಲು ನುಡಿಯನು ಬಾಲಭಾಷಿತವ ॥ ೪೯೬ ॥

ಕೃಷ್ಣನಾಡಿದ ಗೀತೆಯಿದು ಸಂ- ।
ಪೂರ್ಣನಿಗಮಾಗಮದ ಸಾರವು ।
ವರ್ಣಿಸಲಿ ನಾನೆಂತು ಪಂಡಿತನಲ್ಲ ನೋಡಿದರೆ ॥
ಎನ್ನ ಸದ್ಗುರು ವಿಷ್ಣುರೂಪನು ।
ಎನ್ನ ಬಾಯಿಂ ವದಿಸಿದಂದದಿ ।
ಕನ್ನಡದಿ ಪೇಳಿದೆನು ನ್ವಾತ್ಮಜ್ಞಾನದರ್ಪಣವ ॥ ೪೯೭ ॥

ಇತಿ ಶ್ರೀಮೂಡಕಟ್ಟಿಸುಬ್ಬರಾವಾತ್ಮಜರಾಘವೇಂದ್ರರಾಯಕೃತವಾದ ಕನ್ನಡಜ್ಞಾನೇಶ್ವರಿಯಲ್ಲಿ
(೧೫) ಹದಿನೈದನೆಯ ಅಧ್ಯಾಯ ಮುಗಿದುದು.

ಸಂಸ್ಕೃತ ಮೂಲಶ್ಲೋಕಗಳು ೨೦, ಕನ್ನಡ ಷಟ್ಪದಿಗಳು ೪೯೭.

ಕನ್ನಡ ಜ್ಞಾನೇಶ್ವರಿ.

೧೬ ಹದಿನಾರನೆಯ ಅಧ್ಯಾಯ.

ತರಣಿಯುದಯ ವಿಚಿತ್ರತರವೈ । ಮರಳಿಸೂರ್ಯೋದಯದಲೀಪರಿ ।
ಮೆರೆವ ಜಗದಾಭಾಸವನು ಸಂ- । ಳಿರುವ ಬುದ್ಧಿಜ್ಞಾನದಂಪತಿ- ।
ಹರಿಸಿ ಮರಳಲ್ವೈತಕಮಲವನರಳಿಸುವ ತರಣಿ ॥ ಯರು ಕಣಾ ಹಾರುವರು ಬ್ರಹ್ಮಾಕಾರದಲಿ ಮುದದಿ ॥
ತರಣಿ ಯಿತನು ಯೆನ್ನ ಸದ್ಗುರು । ಮರಳಿ ಸುಖಸಂತೋಷದಿಂದಲಿ ।
ಚರಣಕೆರಗುವೆನಿವನ ಸಾದರ । ತಿರುಗುವರು ಸಂಯೋಗಸುಖದಿಂ ।
ಹರಿಸುತೆನ್ನಯ ಮತಿಯ ಜಾಡ್ಯವ ಬರೆಸಲೀ ಗ್ರಂಥ॥ ೧ ॥ ದರುಹಲೆಂತೀ ತರಣಿಯುದಯದ ಮಹಿಮೆ ಬಾಯಿಂದ ।। ೫ ।।

ತರಣಿಯುದಯಾಚಲಕೆ ಬಂದಿರೆ । ಗುರುಸ್ವರೂಪದ ತರಣಿಯುದಯಕೆ ।
ಹರಿವುದೈ ಯಜ್ಞಾನಕತ್ತಲೆ । ಬರಲು ಭೇದಸ್ವರೂಪ ಚೋರರು ।
ಮರಳಿಜ್ಞಾನಾಜ್ಞಾನ ಬೆಳದಿಂಗಳವು ಹರಿವುವಲಾ ॥ ಬಿದೆ ಭರದಲಿ ಬೆದರಿ ದಿಕ್ಕಾಪಾಲು ಚದರುವರು ॥
ಮೆರೆವುದೈ ಜ್ಞಾನಿಗಳ ಸುದಿನವು । ಧರೆಹುಲಾ ಪಾಂಥಸ್ಥಯೋಗಿಗ- ।
ಮೆರೆವುದಾತ್ಮಜ್ಞಾನ ತೇಜವು । ಳೆರದೆ ಸ್ವಾತ್ಮಜ್ಞಾನಮಾರ್ಗದಿ ।
ಹೊರಡುವುದು ಜೀವಾತ್ಮಖಗವಭಿಮಾನಗೂಡಿಂದ ॥ ೨ ।। ಚರಿಸುವರೆ ತೊಡಗುವರು ನಿರ್ಭೀತಿಯಲಿ ಹಗಲಿನಲಿ ।। ೬ ॥

ಪಾಸನಾತ್ಮಕ ಸೂಕ್ಷ್ಮದೇಹವಿ- । ಗುರುತರಣಿಯ ವಿವೇಕರೂಪದ ।
ಲಾಸಕಮಲದ ಪರಿಮಳಕೆ ತಾಂ । ಕಿರಣದಿಂದಲಿ ಜ್ಞಾನವೆಂಬುವ ।
ಪಾಶದಲಿ ಬಿದ್ದಿರುವ ಭ್ರಮರವ ಜೀವಚೈತನ್ಯ ॥ ತರಣಿಕಾಂತ ಪ್ರದೀಪ್ತವಪ್ಪುದು ಹೇಳಲೇನದನು ॥
ನೇಸರುದಯಾಚಲಕೆ ಬರಲದು । ಉರಿಯುವುದು ಸಂಸಾರವನವಿದು ।
ತೋಷದಿಂ ಹೊರವಂಟು ಹಾರ್ವುದು । ಮರಳಿ ಸೂರ್ಯನಪ್ರಖರಕಿರಣದಿ ।
ಪಾಶ ಹರಿದು ಸ್ವತಂತ್ರವಪ್ಪುದು ಜೀವಚೈತನ್ಯ ॥ ೩ ।। ಮೆರೆವುದೈ ಸಿದ್ಧಿಗಳ ಮೃಗಜಲ ಪೂರ ಬಂದಂತೆ ॥ ೭ ॥

ಶ್ರುತಿನಿಕರಕಾಶಬ್ದ ತೋಚದ । ಒರಲು ಸ್ವಾತ್ಮಜ್ಞಾನತಿಖರದಿ ।
ಸ್ಥಿತಿಯು ಬರಲಜ್ಞಾನರೂಪದ । ಬರಲು ಸೋಽಹಂರೂಪ ನಡುಹಗ- ।
ಕ್ಷಿತಿಯೊಳಗೆ ಸಂಧ್ಯಾಕುಕಾಲವು ರಂಜಿಪುದು ನೋಡೆ ॥ ಲಿರುವುದೇನ್ಸೈ ಛಾಯೆ ಛ್ರಾಂತಿಯು ಕಾಲಲಡಗುವುದು ।
ಮತಿಗೆ ಜ್ಞಾನವಿಯೋಗವಾಗಲು । ಹರಿದು ಹೋಹುದು ಮಾಯೆ ರಾತ್ರಿಯು ।
ಕ್ಷಿತಿಯಲಾ ಜೀವೇಶ್ವರಾತ್ಮಕ । ಹರಿದು ಹೊಹುದು ವಿಶ್ವಸ್ವಪ್ನವು ।
ದ್ವಿತಟಯಲಿ ಶೋಕಿಸುವೆವೈಯಾ ಚಕ್ರವಾಕಗಳು ॥ ೪ ॥ ಬರುವುದೇ ವಿಪರೀತ ಜ್ಞಾನಸ್ವರೂಪ ನಿದ್ರೆಯದು ॥ ೮ ॥

ಮರಳೆಯದ್ವಯಬೋಧನಗಳದಿ ।
ಬರುವುದು ಮಹಾನಂದ ಪೂರ್ಣವು ।
ಭರದೊಳಾನಂದಾನುಭವವನು ಕೊಂಡುಕೊಳ್ಳುವುದು ॥
ಬರುವುದೀವ್ಯವಹಾರಮಂದಿಯು ।
ನಿರುತವೀಪರಿ ಮೋಕ್ಷಸುದಿನವು ।
ತರಣಿತೇಜದ ಭರದಿ ರಂಜಿಸುತಿಹುದಬಾಧಿತವು ॥ ೯ ॥

ತರಣಿಯಾತ್ಮಜ್ಞಾನಗಗನದೊ- ।
ಳರಸನಿಹನು ನಿರಂತರದಲಾ- ।
ಸರಸ ಬೋಧಾಮೃತದ ಕಿರಣಂಗಳನು ಸುರಿಸುವನು ॥
ಹರಿವನೈ ದಿಗ್ಭೇದವೆಲ್ಲವ- ।
ನಿರುವುದೀನುದಯಾಸ್ತವೀತಗೆ ।
ಹರಿದು ಬಿಡುವನು ಜ್ಞಾನವಜ್ಞಾನವನು ತೇಜದಲಿ ॥ ೧೦ ॥

ಹರಿದು ಜ್ಞಾನಾಜ್ಞಾನವೀಪರಿ ।
ಧರೆಗೆ ಸ್ವಾತ್ಮಜ್ಞಾನ ಕೊಡುವನು ।
ಅರುಹಲೆಂತೀತರಣಿಯುದಯ ವಿಚಿತ್ರವಿಹುದಲ್ಲೈ ॥
ಇರುಳು ಹಗಲೀ ಭೇದವೆರಡನು ।
ಹರಿಸಿ ಕಿಡುವನು ತರಣಿನದ್ದುರು ।
ಮೆರೆವನ್ಹೆ ಸ್ವಯಮೇವ ಜಗದಿ ಪ್ರಕಾಶರೂಪನಲಾ ॥ ೧೧ ॥

ತರಣಿ ಚೈತನ್ಯಸ್ವರೂಪನು ।
ಯಿರುವನೆನ್ನಯ ಗುರುನಿವೃತ್ತಿಯು ।
ಚರಣಕೆರಗುವೆ ನಾನು ಗುರುವಿಂಗೇಕಭಾವದಲಿ ॥
ಅರುಹಲಾರೆನು ಶಬ್ದದಿಂದೀ ।
ಗುರುವ ಸ್ತುತಿಸುವ ಪರಿಯ ಕಾಣೆನು ।
ಹರಿದು ಹೊಯ್ಯೈ ತ್ರಿಪುಟಿ ಸ್ತುತಿಸ್ತುತ್ಯಾದಿ ಯೆನಗೀಗ
॥ ೧೨ ॥

ಧರೆಯೊಳಿಹ ವಸ್ತುಗಳ ಜ್ಞಾನವು ।
ಹರಣವಾಗಲು ಜ್ಞಾನ ನಿಜವದು ।
ಧರಿಸಿ ಮೌನವ ವಿನಯ ತೋರಿಸೆ ಸ್ತುತಿ ಯಿರುವುದೆಲ್ಲಿ ॥
ಮರೆತರಾಹಂಕಾರವೃತ್ತಿಯ ।
ಬರುವುದೀತನ ಪ್ರಾಪ್ತಿ ಯೆಂದರೆ ।
ಗುರುವ ಜಾಯಿಂ ಶಬ್ದದಿಂದಲಿ ಸ್ತುತಿಪ ಪರಿಯೆಂತು ॥೧೩॥

ಪರಿಪರಿಯ ಸ್ತುತಿಗಳನು ಮಾಳ್ಪರೆ ।
ಪರೆಯ ಹಿಂದಿಕ್ಕುತ್ತ ಮುಂದಕೆ ।
ಬರುತ ವೈಖರಿಯಡಗುವುದು ಪಶ್ಯಂತಿಮಧ್ಯದಲಿ ॥

ಗುರುವೆ ನಾ ಸೇವಕನ ಪರಿಯಲಿ ।
ಹರುಷದಿಂ ಸ್ತುತ್ಯಾಭರಣಗಳ- ।
ನಿರಿಸುವೆನು ನಿನ್ನಂಗದಲಿ ನಾ ಪ್ರೇಮಭಾವದಲಿ ॥ ೧೪ ॥

ಗುರುವೆ ನಿನ್ನಯ ಮಾನ ನೋಡಲು ।
ಕಿರಿದಲಾ ಸ್ತುತಿಯಾಭರಣವಿದು- ।
ವಿರುವುದೆನ್ನಯ ದೃಷ್ಟಿಯಿಂದುತ್ಕೃಷ್ಟತರವಾಗಿ ॥
ಗುರುನೆ ನೀನದ ಪ್ರೇಮದಿಂ ಸ್ವೀ- ।
ಕರಿಪುದುಚಿತವಿಹೆಂತ ನಿನ್ನಯ ।
ಚರಣಕಮಲದಿ ಬೇಡುವೆನು ನೀನದ್ವಯಾನಂದ ॥ ೧೫ ॥

ಧರೆಯೊಳೊರ್ವ ದರಿದ್ರ ಕ್ಷೀರದ ।
ಶರಧಿಯನು ನೋಡುತ್ತ ಹರ್ಷದ ।
ಭರದೊಳೌತಣವಿತ್ತನೈಯಾ ಕ್ಷೀರಸಾಗರಕೆ ॥
ಅರಿಯದಾತನ ಶ್ರೇಷ್ಠಯೋಗ್ಯತೆ ।
ಮರುಳನಂದದಿ ಪುಂಡಿಪಲ್ಯವ ।
ಮರಳೆ ರಾಗಿಯ ಗಂಪಿಯನು ತಾಂ ಬಡಿಸಿದಂತಾಯ್ತು ॥ ೧೬ ॥

ನರದರಿದ್ರಗೆ ಪುಂಡಿಪಲ್ಯವೆ ।
ಯಿರುವುದೈ ಪಕ್ವಾನ್ನವಲ್ಲವೆ ।
ಯರಿಯುತೀಪರಿ ಭಕ್ತಿಭಾವವ ತಿಳಿದು ಮತ್ತನನ ॥
ಇರುವುದವಗೆ ಸದಿಚ್ಛೆಯೆಂಬುದ- ।
ನರಿತು ಗೌರವ ಮಾಡ ಬೇಕೈ ।
ಭರದೊಳದ ಧಿಕ್ಕರಿಸ ಬಾರದು ಬಡವನಿಚ್ಛೆಯನು ॥ ೧೭ ॥

ತರಣಿಗೇನುಪಯೋಗ ದೀಪದಿ ।
ಪರಿಯಿದಾದರು ಸೂರ್ಯನಿಗೆ ನಾವ- ।
ಶರಣಿಗಳು ದೀಪಾರತಿಗಳನು ಬೆಳಗದಿಹೆವೇನು ॥
ತರಣಿ ಧಿಕ್ಕರಿಸುವನೆ ಭಕ್ತಿಯ- ।
ನರಿತು ದೀಪಾರತಿಗಳನು ಸ್ವೀ- ।
ಕರಿಸದಿರುವನೆ ಭಕ್ತಿಯೇ ನೋಡಿದರೆ ಗ್ರಾಹ್ಯವಲಾ ॥ ೧೮ ॥

ಬಾಲನರಿತರಯೋಗ್ಯಯೋಗ್ಯವ ।
ಬಾಲತನವೇನಿಹುದನಂತರ ।
ಲೀಲೆಗಳನು ವಿಲೋಕಿಸುತ ತಾಯ್ ಹರ್ಷ ತಳೆಯುವಳು ॥
ನಾಳದೊಳಗಿನ ನೀರು ನೋಡಲು ।
ಕೀಳಿಹುದು ಜಾಹ್ನವಿಯ ಸೇರಿದ ।
ಮೇಲೆ ಕೀಳೆನುತದನು ಧಿಕ್ಕರಿಸುವಳೆ ಜಾಹ್ನವಿಯು ॥ ೧೯ ॥

ಹರಿಯು ವಕ್ಷಃಸ್ಥಳದಿ ಭೃಗುಋಷಿ ।
ಚರಣದಿಂ ತಾಡನವ ಮಾಡಿದ ।
ನರರೆ ನೋಡನ್ಯಾಯವೆಂತೀ ತೆರದೊಳಾಗಿಹುದು ॥
ಹರಿಯು ಪ್ರೇಮದೊಳದನೆ ಶ್ರೀಗುರು ।
ವರನ ಚರಣಪ್ರಸಾದವೆನುತಲಿ ।
ಧರಿಸಿದನು ಶ್ರೀವತ್ಸಲಾಂಛನ ಮಾನ್ಯ ಭೂಷಣವ ॥ ೨೦ ॥

ತರಣಿಯುದಯಾಚಲಕೆ ಬಂದರೆ ।
ಹರಿವುದೈ ಕತ್ತಲೆಯ ರಾಜ್ಯವು ।
ತರಣಿಯುರುಹುವನೇನು ಕತ್ತಲೆ ಹಿಂದೆ ಸರಿಯೆನುತ ।।
ಗುರುವೆ ನಿನ್ನನು ಭೇದಬುದ್ಧಿಯ ।
ಮೆರೆವ ತಕ್ಕಡಿಯಲ್ಲಿ ತೂಗಿದೆ ।
ನರರೆ ತಪ್ಪಾಯ್ತೆನ ಹೇಳಲಿ ಕ್ಷಮಿಸು ತಪ್ಪುಗಳ ॥ ೨೧ ॥

ಯೋಗಿಗಳು ಧ್ಯಾನದಲಿ ನಿನ್ನ ಸ ।
ರಾಗದಿಂ ನೋಡಿದರು ಮೇಣ್ ನಿಗ ।
ಮಾಗಮಂಗಳು ತುತಿಸಿ ವರ್ಣಿಸಲಿಲ್ಲವೇ ಹೇಳು ॥
ಹೇಗೆ ನೀನದ ಸಹಿಸಿದೆಯೊ ನೀ ।
ನೀಗ ಯೆನ್ನಯ ತುಲನೆಯಗಪರಿ ।
ಸಾಗಿದೆನ್ನಪರಾಧ ಕ್ಷಮಿಸೈ ಗುರುತೃಪಾನಿಧಿಯೆ ॥ ೨೨ ॥

ಗುರುವೆ ನಿನ್ನ ಗುಣಾನುವಾದವ ।
ನಿರದೆ ಮಾಳ್ಪರೆ ತತ್ಪರನು ನಾ ।
ನಿರುವೆನೆನ್ನಪರಾಧವೆಂದಿದ ಧಿಕ್ಕರಿಸ ಬೇಡ ॥
ಗುರುವೆ ನೀ ಬೇಕಾದ ಪರಿಯಲಿ ।
ಬರಿಪೆ ಬೈಯುತ ನೂಕಲೆನ್ನನು ।
ತೊರೆದು ನಾನೇಳುವೆನೆ ಭೋಜನ ತೀರಿಸದೆ ಪೂರ್ಣ ॥೨೩॥

ಗುರುವೆ ನಿನ್ನ ಕೃಪಾಕಟಾಕ್ಷದ ।
ಭರದಿ ಗೀತಾಮೃತಪ್ರಸಾದವ ।
ನುರುತರದ ಭಕ್ತಿಯಲಿ ವರ್ಣಿಸಲಾರಭಿಸಿದೆನಲಾ ॥
ಅರುಹುವರೆ ಗೀತಾರ್ಥತತ್ತ್ವವ ।
ಗುರುವೆ ನಿನ್ನಯ ಕರುಣದಿಂದಲೆ ।
ಬರುವುದೈ ಯೆನಗಿಮ್ಮಡಿಯಲಾ ವರ್ಣನಾಶಕ್ತಿ ॥ ೨೪ ॥

ಗುರುವೆ ನಾ ಬಹುಭಾಗ್ಯಶಾಲಿಯು ।
ದೊರಕಿತೀ ಗೀತಾಸುಧೀಪವು ।
ಅರುಹಲೆಂತೀ ಯೆನ್ನ ಜಿಹ್ವೆಯು ಭಾಗ್ಯಶಾಲಿಯಲಾ ।।
ಪರಿಪರಿಯ ಜನ್ಮಾಂತರದಲದು ।
ನಿರುತ ಸತ್ಯವ್ರತದ ತಪವಾ- ।
ಜರಿಸಿತೆಂದೇ ದೊರಕಿತೀ ಸದ್ಭಾಗ್ಯ ನಾಲಿಗೆಗೆ ॥ ೨೫ ॥

ಪರಿಪರಿಯ ಪುಣ್ಯಗಳ ನಾನೀ- ।
ಪರಿಗೆ ವರ್ಣಿಸಿದೆನೆಂದು ಶ್ರೀಗುರು ।
ವರನ ನಿನ್ನ ಗುಣಾನುವಾದದ ವರ್ಣನೆಯ ಮಾಳ್ಪ ॥
ದೊರಕಿತೆನಗಾ ಸಂಧಿ ಯಿಂದಿಗೆ ।
ದೊರೆಯಿತೈ ನಾಫಲ್ಯ ಜನ್ಮದ ।
ಗುರುವರನೆ ಋಣಮೋಚನವ ನಾನೆಂತು ತೀರಿಸಲಿ ॥ ೨೬ ॥

ಗುರುವೆ ಜೀವಾರಣ್ಯದಲಿ ನಾ- ।
ಮರಣಜನ್ಮದ ನಿಬಿಡ ಬೊದರಲಿ ।
ಬರುತ ಸಿಲುಕಿದೆ ದೂರವಾಯ್ತಾ ತಾಪತ್ರಿಂದನಲಿ ॥
ಮೆರೆವ ಗೀತಾ ಹೆಸರೆ ಪೂಜ್ಯವು ।
ಮೆರೆವುದೀ ಪರಿ ಕೀರ್ತಿ ತ್ರಿಜಗದಿ ।
ಹರಿಸುವ್ರದಲಾ ನೋಡವಿದ್ಯಾಜಾಲವೆಲ್ಲವನು ॥ ೨೭ ॥

ಗುರುವೆ ನಿನ್ನಯ ಕೀರ್ತಿಯೊಪರಿ ।
ಯಿರುವುದೆನುತಲಿ ವರ್ಣಿಸಲು ನಾ- ।
ನಿರುವೆ ಶಕ್ತನು ಯೋಗ್ಯನೈ ಸಂದೇಹವೇನಿದಕೆ ॥
ಸಿರಿಯಕನ್ಯಾತ್ತಾಗಿ ತಿಳಿಯದೆ ।
ಬರಲು ಬಡವನ ಮನೆಗೆ ತದನಂ- ।
ತರದೊಳಾನರನಿರುವನೇ ದಾರಿದ್ರ್ಯಮದುವಿನಲಿ ॥ ೨೮ ॥

ಕತ್ತಲೆಯ ಮನೆಗಾಗಿ ಸೂರ್ಯನು ।
ಜತ್ತವಿನೆ ಕೇಳ್ ದೈವಯೋಗದಿ ।
ಕತ್ತಲೆಯೆ ಝಗರುಗಿಪ ಬೆಳಕಾಗುವುದು ನೋಡಿದರೆ ॥
ವಿಸ್ತರಿಸಲೀಶ್ವರನ ಮಹಿಮೆಯ ।
ಗೊತ್ತ ಹಚ್ಚುವುದೇನು ವಿಶ್ವವು ।
ಭಕ್ತಿಯಿಂದಲಿ ಸಾಧ್ಯವೈ ಬೇಕಾದ ರೂಪಗಳು ॥ ೨೯ ॥

ಗುರುವೆ ಮಮ ಗೀತಾರ್ಥಕಥನವು ।
ಮೆರೆವ ಗಗನದ ಹೂವಿನಿಂ ಬರು ।
ತಿರುವ ಗಂಧವು ದುರ್ಲಭವಲಾ ಜಗದಿ ನೋಡಲದು ॥
ಪರಿಯಿದಾದರು ಕರ್ಮಫಲಹಿತ ।
ಗುರುವೆ ನಿನ್ನ ಕೃಪಾಪ್ರಸಾದದ ।
ಭರದೊಳಾಯ್ತು ಮನೋರಥವು ಸಂಪೂರ್ಣವೆನಗೀಗ ॥ ೩೦ ॥

ಗುರುವೆ ನಿನ್ನಾ ಶೀರ್ವಚನದಿಂ ।
ಹರಿಯು ಗೀತಾಗ್ರಂಥದೊಳಗಿನ ।
ಸರಸ ಪದ್ಯಗಳರ್ಥ ಸ್ಪಷ್ಟೀಕರಿಸಿ ಹೇಳುವೆನು ॥
ಹರಿಯು ವಾರ್ಧನಿಗದುಹಿದನು ವಿ- ।
ಸ್ತರಿಸಿ ಶಾಸ್ತ್ರದ ತತ್ತ್ವನೆಲ್ಲವ ।
ನಿರದೆ ಹದಿನೈದನೆಯ ಅಧ್ಯಾಯದಲಿ ಪ್ರೇಮದಲಿ ॥ ೩೧ ॥

ವರ್ಧಿಸಿದ ರೋಗವನು ನೋಡಿ ಸ್ರ- ।
ಸಿದ್ಧ ವೈದ್ಯನು ಚಿಹ್ನ ಪರಿಕಿಸಿ ।
ಮದ್ದ ಯೋಜಿಸುವಂತೆ ಹರಿ ಯೋಜಿಸಿದನೈ ತತ್ತ್ವ ॥
ಶುದ್ಧ ಬ್ರಹ್ಮಸ್ವರೂಪ ಮಾಯೆಯೊ- ।
ಳೆದ್ದು ವಿಶ್ವಭಾಸವಾಗುವ ।
ಬುದ್ಧಿಗೋಚಕ ಬರುವ ಕೆರಹಲಿ ವೃಕ್ಷರೂಪಕದಿ ॥ ೩೨ ॥

ಅರುಹಿದನು ವಿಸ್ತರಿಸಿ ಪಾರ್ಥಗೆ ।
ಮರಳಿ ಜೀವಾತುಮನು ದೇಹದಿ ।
ಪುರುಷರೂಪದಿ ರಂಜಿಸುವನನ್ನಿನಾಶಿ ತಾನಾಗಿ ॥
ಅರುಹಿದನು ಚೈತನ್ಯಕೆಂತೀ- ।
ಪರಿಪರಿಯುಪಾಧಿಗಳು ಬರುವವು ।
ಮರಳಿ ಪುರುಷೋತ್ತಮನ ವಿಸ್ತರಿಸಿದನು ಪ್ರೇಮದಲಿ ॥೩೩॥

ದೊರಕಿಸಲು ಸ್ವಾತ್ಮಾನುಭವವ- ।
ನ್ನಿರುವುದುತ್ತಮ ಜ್ಞಾನ ಸಾಧನ ।
ಮರಳಿ ಸ್ಪಷ್ಟೀಕರಿಸಿ ಪೇಳ್ವನು ಪಾರ್ಥನಿಗೆ ಹರಿಯು ॥
ಮರಳಿ ಯೊಯಿಧ್ಯಾಯದಲಿ ವಿ- ।
ಸ್ತರಿಸಿ ಹೇಳುವ ವಿಷಯವಿಲ್ಲ್ವೆ ।
ತಿರಿಗಿ ನಾ ಪೇಳುವೆನು ಪ್ರೇಮಾಲಾಪ ಗುರುವರನ ॥ ೩೪ ॥

ಹರಿಯು ಹದಿನೈದರಲಿ ಹೇಳಿದ ।
ಪರಿಪರಿಯ ತತ್ತ್ವಗಳು ಜ್ಞಾನಿಗ- ।
ಳರಿತರೈ ಭೇರಿರುಷ ಸರ್ವಮುಮುಕ್ಷುಗಳು ನಿಜದಿ ॥
ಅರಿಯದಾದರು ಕೃಷ್ಣ ಭಾಷಣ- ।
ವಿರುವುದವರಿಗೆ ಶಂಕೆಯೆನುತಲಿ ।
ಮರಳಿಯಾ ಶಂಕಾನಿವಾರಣ ಹೇಳ್ದನೈ ಹರಿಯು ॥ ೩೫ ॥

ಹರಿಯು ತಾಂ ಪುರುಷೋತ್ತಮನೆ ಯೆಂ- ।
ದರಿತು ತನ್ನನೆ ಜ್ಞಾನಯೋಗದ ।
ಭರದಿ ಧಾರೆಸುವನವನಿ ಧನ್ಯನೆನುತ್ತ ಶ್ರೀಹರಿಯು ॥

ಅರುಹಿದನಲಾ ಹಿಂದೆ ಪ್ರೇಮಭ ।
ಭರದಿ ಹದಿನೈದನೆಯಲಾಪರಿ ।
ಯುರುಹಲೆಂತೀ ಯೋಗ್ಯತೆಯನಾ ಕೃಷ್ಣಭಾಷಣದ ॥ ೩೬ ॥

ಕೊರಳ ಮುರಿದು ಪ್ರಪಂಚವನು ಹಿಂ- ।
ಧರಿಸಿ ಬ್ರಹ್ಮಸ್ವರೂಪದರ್ಶನ ।
ಬರಲು ಮಾನವನಿಂಗೆ ಬ್ರಹ್ಮಸ್ವರೂಪ ತಾನಾಗಿ ॥
ಮರಳಿ ಪರಮಾನಂದರಾಜ್ಯದಿ ।
ದೊರೆಯುವುದು ಪಟ್ಟಾಭಿಷೇಕವು ।
ಯಿರುವುದೊಂದೆ ರುಧಾರ್ಧಜ್ಞಾನವು ಹಾದಿ ಬ್ರಹ್ಮಕ್ಕೆ ॥ ೩೭ ॥

ಇರುವುದಿದುವೇ ರಾಜಸಾಧನ ।
ಧರಿಸುತಾತ್ಮಜ್ಞಾನದಿಚ್ಛೆಯ ।
ಹರುಷದಿಂ ನೀವಾಳಿಸುವರೈ ತಮ್ಮ ಪ್ರಾಣಗಳ ॥
ಬರಲು ವಸ್ತುವಿಚ್ಛೆ ಮನದಲಿ ।
ಬರುವವು ವಿಚಾರಗಳು ಬಹುಪರಿ ।
ಯಿರುವುದಿದುವೇ ಪ್ರೇಮಲಕ್ಷಣ ಜಗದಿ ನೋಡಿದರೆ ॥ ೩೮ ॥

ಆದ ಕಾರಣ ಜ್ಞಾನದಿಚ್ಛೆಯ ।
ನಾದರಿಪ ಜಿಜ್ಞಾಸುಗಳಿಗೇ ।
ಬೋಧವಾಗದೆ ಜ್ಞಾನ ದೊರಕಿಸಿ ರಕ್ಷಿಸುವುದೆಂತು ॥
ಮೇದಿನಿಯಲೇನಿಹುದು ನಾರ್ಥಕ ।
ನಾಧನವು ದೊರಕಿಸಲು ನಾಧ್ಯವೆ ।
ಯಾದುವೀಪರಿ ನುನದಿ ಸುವಿಚಾರದ ತರಂಗಗಳು ॥ ೩೯ ॥

ಬರುವುದೆಂತಪರೋಕ್ಷಜ್ಞಾನವು ।
ಮರಳಿ ವರ್ಧಿಪ ಪರಿಯದಾವುದು ।
ಯಿರುವುದಾವುದು ವಿಘ್ನ ಜ್ಞಾನವ್ಯಾಪ್ತಿಮಾರ್ಗದಲಿ ॥
ಇರುವುದೇನೈ ಯಡ್ಡಹಾದಿಯು ।
ಹರಿಸಿ ವಿಘ್ನಂಗಳನು ಸುಖದಲಿ ।
ದೊರಕಿಸಲು ಜ್ಞಾನವನು ಸಾಧನನೇನು ಜಗದೊಳಗೆ ॥ ೪೦ ॥

ಪರಿಪರಿಯಲೀ ತೆರದಿ ಮನೆದಲಿ ।
ಬರುವ ಸುವಿಚಾರಂಗಳಿಂ ನೀ- ।
ವಿರದೆ ಕೇಳಲು ಬೇಕು ಹರಿಯುತ್ತರವನೀಯುವನು ॥
ದೊರಕಿಸುತಲಾ ಜ್ಞಾನಮಾರ್ಗವ ।
ಬರುವುದೈ ಬ್ರಹ್ಮಸ್ವರೂಪವು ।
ಯಿರುವುದಿದುವೇ ದೈವ ಸಂಪತ್ತಲ್ಲವೇ ನೋಡೆ ॥ ೪೧ ॥

ಹರಿಯು ವಿಸ್ತರಿಸುವನು ಕೇಳೀ ।
ಪರಿಯು ದೈವಿಯ ಲಕ್ಷಣಂಗಳ ।
ಮರಳಿ ರಾಗದ್ವೇಷವರ್ಧನದಿಂದ ಜ್ಞಾನವದು ॥
ಹರಣವಹುದಾಸುರಸ್ವಭಾವದಿ ।
ಹರಿಯು ಮತ್ತಿದ ವಿಸ್ತರಿಸುವನು ।
ಬರುವುವಿವ್ವಾನಿಷ್ಟ ಪರಿಣಾಮಗಳು ನೋಡಿದರೆ ॥ ೪೨ ॥

ಜ್ಞಾನವನು ವರ್ಧಿಪುದು ದೈವಿಯು ।
ಹಾನಿ ಮಾಡುವುದಾಸುರಿಯು ಹರಿ ।
ಶ್ರೀನಿವಾಸನು ಪೇಳುವನು ಮೊದಲನೆಯ ದೈವಿಯನು ॥
ಕ್ಷೋಣಿಯಲ್ಲಿ ಮುಮುಕ್ಷುವೃಂದಕೆ ।
ಮಾನ್ಯ ಮೋಕ್ಷದ ಹಾದಿಯಲ್ಲಿದು- ।
ವೇನ ಹೇಳಲಿ ಧರ್ಮದೀಪವು ಮೋಹರಾತ್ರಿಯಲಿ ॥ ೪೪ ॥

ಹರಿಯು ನವಮಾಧ್ಯಾಯದಲಿ ವಿ- ।
ಸ್ತರಿಸ ತೊಡಗಿದುದನ್ನೆ ಮುಂದೀ- ।
ತೆರದಲೀಯಧ್ಯಾಯದಲಿ ವಿಸ್ತರಿಪನ್ಯೆ ಮುದದಿ ॥
ಬರುವುದೀ ವಿಷಯದ ನಿರೂಪಣ ।
ಸರಸತರ ಷೋಡಶದಲಿಂದಿಗೆ ।
ಮೆರೆವುವೈ ಸಂಪತ್ತುಗಳು ದೈವಾಸುರಗಳೆರಡು ॥ ೪೩ ॥

ಬರುತ ಸಂಯೋಗದಿ ಪರಸ್ಪರ ।
ವಿರುವುದೈ ಸಾಹಾಯ್ಯವಿಂತೀ- ।
ಪರಿಯ ಗುಣಗಣವಿದನು ಸಂಪತ್ತೆನುತ ಕರೆವರಲಾ ॥
ಬರುವುದೀ ಗುಣಗಣವು ಸರ್ವವು ।
ಪುರುಷನಿಂಗಾ ದೈವಿಯೋಗದಿ ।
ಬರುವುದೈ ಸುಖವಿದಕೆ ಹೆಸರೇ ದೈವಸಂಪತ್ತು ॥ ೪೫ ॥

ಶ್ರೀಭಗವಾನುವಾಚ:—

ಅಭಯಂ ಸತ್ತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ॥ ೧ ॥

[ಅಭಯಂ] ಇರುವುದಭಯವು ದೈವಗುಣದೊಳ- ।
ಗಿರುವುದೈ ಪ್ರಾಮುಖ್ಯ ನೋಡಿದ- ।
ರಿರದು ಭೀತಿಯೆನುತ್ತಲಿದಕಾಯ್ತಭಯನಾಮವದು ॥
ಹರಿವ ಹೆದ್ದೊರೆಯೊಳಗೆ ಧುಮುಕದೆ ।
ಯಿರುವವಗೆ ಭಯವೇನು ನೀರಲಿ ।
ಮರಣ ಬರುವುದೆ ಮುಳುಗಿ ಸಾಯುವನೇನು ಧುಮುಕದಲೆ ॥ ೪೬ ॥

[ಸತ್ತ್ವಸಂಶುದ್ಧಿ:] ನರನೆ ಕೇಳ್ವೆ ಶುದ್ಧಬುದ್ಧಿಯ ।
ಪರಿಯದಾವುದು ಪೇಳ್ವೆ ನಿನಗಾ- ।
ನರಿಯಲೀಪರಿ ಕುರುಹುಗಳು ಬುದ್ಧಿಯಲಿ ತೋರುವುವು ॥
ಉರಿಯಲಾರದು ಬೂದಿಯುರಿಯಲಿ ।
ಮರಳಿ ತಾನದು ಸಾಯಲಾರದು ।
ಪರಿಯಿದಲ್ಲವೆ ಯಿರವು ಮತಿಯು ವಿಕಲ್ಪ ಸಂಕಲ್ಪ ॥ ೪೯ ॥

ಪಥ್ಯವನ್ನಾಚರಿಸುವಾತಂ- ।
ಗೆತ್ತಣಿಂದಲಿ ರೋಗಭಯವೈ ।
ನಿತ್ಯಕರ್ಮವ ಮಾಡಲಭಿಮಾನವನು ತ್ಯಜಿಸುತಲಿ ॥
ಎತ್ತಣಿಂ ಸಂಸಾರಭಯವೈ ।
ದೈವೃತ ಮುರಿದೀ ತೋರ್ಪ ವಿಶ್ವದ ।
ವಿಸ್ತರವು ಬ್ರಹ್ಮಸ್ವರೂಪವಿದೆಂದು ತಿಳಿದವಗೆ ॥ ೪೭ ॥

ಪ್ರತಿಪದೆಯಮಾವಸಿಯ ಸಂಧಿಯೊ- ।
ಳತಿಕಿರಿದು ಚಂದ್ರಮನ ಬಿಂಬವು ।
ಗತಿಸಿದಾ ವರ್ಷರ್ತು ಗ್ರೀಷ್ಮನು ಬರದ ಸಂಧಿಯಲಿ ॥
ಕ್ಷಿತಿಯಲಾ ಗಂಗೋದಕವು ಬಹು- ।
ವಿತತ ನಿರ್ಮಲವಿರುವ ಪರಿಯಲಿ ।
ಗತಿಸಲಾ ಸಂಕಲ್ಪ ಮೇಣು ವಿಕಲ್ಪವೀ ಯೆರಡು ॥ ೫೦ ॥

ನೀರಿನಲಿ ಸೇರಿದರೆ ಲವಣವು ।
ನೀರಿನಲಿ ಕರಗುತಲಿ ನೀರಾ- ।
ಕಾರವಾಗುವುದಲ್ಲವೇ ಬೇರಾಗಿ ತೋರುವುದೆ ॥
ಹಾರಲೀಯದ್ವೈತಭಾವನೆ ।
ಹಾರಿಹೋಗದೆ ಭೀತಿಯುಳಿವುದೆ ।
ಧಾರುಣಿಯೊಳಿಹುದಭಯ ಸಮ್ಯಗ್ಜ್ಞಾನ ಬೆಂಬಲಕೆ ॥೪೮॥

ನಾಶವಾಗೆ ರಜಸ್ತಮೋಗುಣ- ।
ವಾಶೆಯನು ಧರಿಸಿಹುದು ಧ್ಯಾನದಿ ।
ಭಾಸಿಸುವುದೈ ಬುದ್ಧಿಯಲ್ಲಿ ಸ್ವರೂಪ ತಿಳಿವಿಚೆ ॥
ತೋಷದಿಂದಿಂದ್ರಿಯನಿಕರಕಳಿ- ।
ಲಾಷ ಹುಟ್ಟುವ ವಿಷಯ ತೋರಿಸೆ ।
ಭಾಸಿಸದು ವಿಷಯೇಚೆ ಬುದ್ಧಿಯಲಿಪ್ಪವಾಗಿಹುದು ॥ ೫೧ ॥

ಪತಿಯು ಪರದೇಶಕ್ಕೆ ಪೋಗಲು ।
ಸತಿಯಹಳು ಪತಿವಿರಹದುಃಖದೊ- ।
ಳತಿಶಯದಿ ವಿಹ್ವಲಳು ಮೇಣ್ ಪತಿಧ್ಯಾನತತ್ಪರಳು ॥
ಕ್ಷಿತಿಯಲ್ಲೀಕೆಗೆ ಲಾಭಹಾನಿಯ- ।
ಲತಿಶಯೋಕ್ತಿಯು ಮಾತ ಪೇಳ್ದರು ।
ಮತಿಯು ಮೇಲ್ಪರಿಣಾಮ ತಟ್ಟುವುದಿಲ್ಲ ನಿಜವಾಗಿ ॥ ೫೨ ॥

ಧರಿಸಿ ಸ್ವಾತ್ಮಜ್ಞಾನದಿಚ್ಛೆಯ ।
ನರನು ಬುದ್ಧಿಯಲೇಕನಿಷ್ಠತೆ ।
ಧರಿಸಿದರೆ ಕೇಳ್ ಸತ್ತ್ವಸಂಶುದ್ಧಿಯೆ ನಿಜದಲದುವೆ ॥
ಆರುಹಿದನು ಕೇಳೀತೆರದಿ ವಿ- ।
ಸ್ತರದಲಾ ಪಾರ್ಥನಿಗೆ ಪ್ರೇಮದಿ ।
ಮುರಹರನು ತಾನೆಂದು ವಿಸ್ತರಿಸಿದನು ಜ್ಞಾನೇಶ ॥ ೫೩ ॥

[ಜ್ಞಾನಯೋಗವ್ಯವಸ್ಥಿತಿಃ] ದೊರಕಿಸುವರಾ ಸ್ವಾತ್ಮಜ್ಞಾನವ।
ನರನು ಯೋಗಜ್ಞಾನಗಳಲೊಂ- ।
ದರಲಿ ಬುದ್ಧಿಯನಿರಿಸ ಬೇಕೈ ಸ್ಥಿರದಿ ನಿಜವಾಗಿ ॥
ಪುರುಷನೀಪರಿ ಚಿತ್ತನೃತ್ತಿಯ ।
ಸ್ಥಿರತೆಯನು ಮಾಡುವುದು ನೋಡೈ ।
ಯಿರುವುದೇನಾಹುತಿಯು ಪೂರ್ಣಾಹುತಿಯನಂತರದಿ ॥೫೪॥

ನರ ಕುಲೀನನು ತನ್ನ ಕನ್ಯೆಯ- ।
ನಿರದೆ ಧಾರಾದಾನ ಮಾಡಲು । ।
ವರನ ಕುಲದಲಿ ದಾನ ಮಾಡಿದ ತೆರದಿ ಸ್ಥಿರವಿಹಳು ॥
ಶರಧಿಮಂಥನ ಮಾಡೆ ಲಕ್ಷ್ಮಿಯು ।
ಹೊರಟು ಬಂದಾ ವಿಷ್ಣುಚರಣದಿ ।
ಸ್ಥಿರತೆಯನು ತಾಳಿದಳು ನಿಶ್ಚಲ ಹರಿಚರಣದಾಸಿ ॥ ೫೫ ॥

ತೊರೆದು ನರನು ವಿಕಲ್ಪವೀಪರಿ ।
ನಿರುತ ಯೋಗಜ್ಞಾನಗಳಲೊಂ- ।
ದರಲಿ ಮಾಡಲು ಬೇಕು ಬುದ್ಧಿಯ ತಾಮ್ರಶಾಸನವ ॥
ಇರುವುದಿದುವೇ ಜ್ಞಾನಯೋಗವು ।
ಯಿರವುದಿದುವೇ ಕೇಳ್ ವ್ಯವಸ್ಥಿತಿ ।
ಯಿರುವುದಿದು ಮೂರನೆಯ ಗುಣಮಣಿ ದೈವಿಹಾರದಲಿ
॥ ೫೬ ॥

[ದಾನಂ] ಮರವು ತನ್ನಲಿ ಬೆಳೆದಿರುವ ಪರಿ- ।
ಪರಿಯ ಹೂಹಣ್ಣುಗಳ ಛಾಯೆಯ ।
ಪರರಿಗೀಯದೆ ಬಚ್ಚಿಡುವುದೇ ಸ್ವಾರ್ಥಕೋಸುಗವೆ ॥

ಕರದಿ ಕೊಡಲಿಯ ಹಿಡಿದು ಕಡಿಯುವ ।
ನರನಿಗದು ದ್ವೇಷವನು ತೋರ್ಪುದೆ ।
ಮರಳಿ ಛಾಯೆಯು ಕೊಟ್ಟು ಬಿಸಿಲಿನ ತಾಪ ಹರಿವುದಲಾ ॥೫೭॥

ನರನು ಶಕ್ತ್ಯನುಸಾರವೀಪರಿ ।
ನಿರುತ ದಾನವ ಮಾಡ ಬೇಕೈ ।
ಹರುಷದಿಂ ಕೊಡಬೇಕು ತನುವಾರ್ಚಿತ್ತವೆಂದಾಗಿ ॥
ಅರಿಯ ಬಾರದು ಶತ್ರುವೆನುತಲಿ ।
ಧರಿಸದಲೆ ಶತ್ರುತ್ವ ಮನದಲಿ ।
ನಿರುತವೀಪರಿ ದಾನ ಕೊಡಲದು ದಾನ ಸಾತ್ತ್ವಿಕವು ॥ ೫೮ ॥

ಹಿಡಿದು ಮನ ಸಂಪತ್ತಿತನಕಾ ।
ಕೊಡುತ ದಾನ ಪ್ರಸಂಗವಶದಲಿ ।
ಪೊಡವಿಯಲಿ ದೀನರ ಸಮಾಧಾನವನು ಮಾಡುವುದು ॥
ಜಡಶರೀರಕೆ ಮೋಕ್ಷಪದವಿಯ ।
ಕೊಡುವುದೀ ಸಾತ್ತ್ವಿಕದ ದಾನವು ।
ಪೊಡವಿಯಲ್ಲಿದು ಮೋಕ್ಷನಿಧಿ ನೋಡುವರೆಯಂಜನವು ॥ ೫೯ ॥

[ದಮಃ] ನರನೆ ದಮಲಕ್ಷಣವ ನಾನಿನ- ।
ಗರುಹುವೆನು ವಿಸ್ತಾರದಿಂ ನರ ।
ಧರಿಸಿ ಶಸ್ತ್ರಂಗಳನು ಶತ್ರುವ ನಾಶಿಸುವ ತೆರದಿ ॥
ಮೆರೆವ ವಿಷಯೇಂದ್ರಿಯಗಳೈಕ್ಯವ ।
ಹರಿದು ಬಿಟ್ಟು ವಿಯೋಗಿಸುವನೈ ।
ಮರಳಿ ಯಿಂದ್ರಿಯದಿಂದ ಬೀಸುವ ಗಾಳಿ ಸಹಿಸನಲಾ ॥ ೬೦ ॥

ಮರಳಿ ಪ್ರತ್ಯಾಹಾರವಶದ- ।
ಲ್ಲಿರಿಸುವನು ಸಕಲೇಂದ್ರಿಯಂಗಳ- ।
ನುರಿವ ಬೆಂಕಿ ವಿರಕ್ತಿರೂಪವ ಹಚ್ಚಿ ದ್ವಾರದಲಿ ॥
ಭರದಿ ಚಿತ್ತದಿ ಗೂಢವಾಗಿಪ ।
ವರಪ್ರವೃತ್ತಿಯ ಹೊರೆಗೆ ದಬ್ಬುವ ।
ನಿರುಳು ಹಗಲೆನ್ನದಲೆ ಯೋಗಾಭ್ಯಾಸ ಮಾಡುವನು ॥ ೬೧ ॥

ಧರಿಸಿ ಶ್ವಾಸೋಚ್ಛ್ವಾಸ ನಿಯಮವ ।
ಚರಿಸುವನು ಬಹು ಘೋರವ್ರತಗಳ- ।
ನಿರುವುದೀ ಪರಿ ದಮದ ಲಕ್ಷಣ ಪಾರ್ಥ ನೋಡಿದಿಯಾ ॥
[ಯಜ್ಞಃ] ಇರುವುದೇನದು ಯಜ್ಞವೆಂಬುದು ।
ಅರುಹುವೆನು ಸಂಕ್ಷೇಪದಿಂದಲಿ ।
ನರನೆ ಕೇಳಾರನೆಯ ಮಣಿ ಯಿದು ಹಾರದಲಿ ತಿಳಿಯೆ ॥ ೬೨ ॥

ಧರೆಯಲಾ ಬ್ರಾಹ್ಮಣರು ಮೊದಲಾ-
ಗಿರುವ ವರ್ಣಾಶ್ರಮದಲೆಲ್ಲರು ।
ನಿರುತ ನಿಜಧರ್ಮಗಳನಾಚರಿಸುವುದು ವಿಧಿಯುಕ್ತ ॥
ಇರುವುದೇನಧಿಕಾರ ವೈದಿಕ- ।
ವಿರುವುದೇನಾ ದೇವಪೂಜನ- ।
ನಿರುವುದೇನೈ ವಿಹಿತ ಧರ್ಮವಿದನ್ನೆ ನೂಡುವುದು । ೬೩ ॥

ನಿಖುತ ಷಟ್ಕರ್ಮದಲಿ ತತ್ಪರ- ।
ವಿರಲು ಬೇಕ್ಕೆ ಬ್ರಹ್ಮವೃಂದವು ।
ನಿರುತ ಬ್ರಹ್ಮರ ವಂದಿಸುವುದೇ ಶೂದ್ರಧರ್ಮವಲಾ ॥
ಇರುವುದಿದು ಶಾಸ್ತ್ರೋಕ್ತಧರ್ಮವು ।
ಯಿರುವುದಿದುವೇ ಯಜ್ಞಕರ್ಮವು ।
ಬರುವುದೀ ಯಜ್ಞದಲಿ ಪುಣ್ಯಸಮಾನವೆಲ್ಲರಿಗೂ ॥ ೬೪ ॥

ಇರುವುದೇನಧಿಕಾರವೆಂಬುದ- ।
ನರಿತು ನಿಜವರ್ಣಾನುಸಾರದಿ ।
ನಿರುತ ನಿಜಧರ್ಮವನು ಮಾಳ್ಪುದೆ ಯಜ್ಞವೆನಿಸುವುದು ॥
ತೊರೆದು ಕರ್ಮಫಲಾಶೆಯೆಲ್ಲವ ।
ಚರಿಸುವುದು ಕರ್ಮವನು ಸರ್ವರು ।
ಗರಳವಲ್ಲವೆ ಕರ್ಮಫಲದಾಶೆಯು ಕಣಾ ಜಗದಿ ॥ ೬೫ ॥

ನಾನು ಯಜ್ಞದ ಕರ್ತನೆಂಬಭಿ- ।
ಮಾನ ತೊರೆದೀ ದೇಹದಿಂದಲೆ ।
ಕ್ಷೋಣಿಯಲ್ಲಿ ವೇದೋಕ್ತ ಕರ್ಮವನಾಚರಿಸ ಬೇಕು ॥
ಮಾನನೀಯರು ಶಾಸ್ತ್ರವಿಹಿತ ವಿ- ।
ಧಾನ ಯಜ್ಞವೆನುತ್ತ ಪೇಳ್ವರು ।
ಜಾಣನರಿಯೈ ಮೋಕ್ಷಮಾರ್ಗದಿ ಸಾಹ್ಯಕಾರಕನು ॥ ೬೬ ॥

[ಸ್ವಾಧ್ಯಾಯಃ] ಧರೆಯಲಸ್ಪಳಿಸಿರುವ ಚಂಡದು ।
ಮರಳಿ ಪುಟಿಸುವುದಲ್ಲವೇ ತಿರಿ- ।
ತಿರಿಗ್ಗಿ ಕೇಳ್ದಾತೆರದಿ ಹೊಲದಲಿ ಬೀಜ ಬಿತ್ತಿದರೆ ॥
ಒರುವುದಲ್ಲನೆ ಬೆಳೆಯು ನೂರ್ಮಡಿ ।
ಯಿರುವುದೇನಾ ಬೀಜನಾಶವ ।
ನರನು ತಾನಿಟ್ಟಿರುವ ನಿಧಿನಿಕ್ಷೇಪ ನೋಡುವರೆ ॥ ೬೭ ॥

ಕರದಿ ದೀಪವ ಹಿಡಿದು ನೋಡುವ ।
ಪರಿಯ ನಿನಗರನಿಹುದು ಪಾರ್ಥನೆ ।
ಹಿರಿಯರೆನರಲ್ಲವೆ ನೀರ ಮರ ವರ್ಧಿಸಲು ಬೇಕೆನುತ ॥

ತಿರಿತಿರಿಗಿ ತನ್ನ ಸ್ವರೂಪವ- ।
ನಿರದೆ ದರ್ಪಣದಲ್ಲಿ ನೋಳ್ಪರೆ ।
ತಿರಿತಿರಿಗಿ ದರ್ಪಣವ ಕೈಯಿಂ ಸ್ವಚ್ಛ ಮಾಡುವರು ॥ ೬೮ ॥

ನರನೆ ಕೇಳೀ ತೆರದಿ ವೇದಗ- ।
ಳರುಹಿರುವ ಪರಮಾತ್ಮರೂಪದ ।
ಪರಿಪರಿಯ ವರ್ಣನೆಯು ಪಠಿಸಲು ಬೇಕು ದಿನನಿತ್ಯ ॥
ನಿರುತವೀ ಪಠನವನು ಮಾಡಲು ।
ಬರುವುದೀಶ್ವರಪ್ರಾಪ್ತಿ ಪಠನದಿ ।
ಯಿರುವುದಿದ್ದುನ್ನೇ ಸರ್ವ ವೇದಾಭ್ಯಾಸಫೀಜಗದಿ ॥ ೬೯ ॥

ದೊರಕಿಸಲು ತದ್ಬ್ರಹ್ಮರೂಪವ ।
ನರನೆ ಕೇಳ್ ಬ್ರಾಹ್ಮಣರು ಸರ್ವರು ।
ನಿರುತ ಪಠಿಸಲು ಬೇಕು ನೋಡಾ ಬ್ರಹ್ಮಸೂತ್ರಗಳ ॥
ಪರಿಪರಿಯ ಸ್ತೋತ್ರಗಳನನ್ಯರು ।
ಭರದಿ ಪಠಿಸಲು ಬೇಕು ಸಂತತ ।
ತಿರಿತಿರಿಗಿ ಪರಮಾತುಮನ ನಾಮಗಳ ಭಜಿಸುವುದು ॥ ೭೦ ॥

ಇರುವುದಿದು ಸ್ವಾಧ್ಯಾಯವೆಂಬುದು ।
ಮೆರೆವುದೇಳನೆ ಮಣಿಯು ಹಾರದಿ ।
ಹರಿಯು ಕೇಳೀ ತೆರದಿ ವಿಸ್ತರಿಸಿದನು ಪಾರ್ಥನಿಗೆ ॥
[ತಪಃ] ನರನೆ ಕೇಳಾನೀಗ ತಪವೆಂ- ।
ದಿರುವ ಶಬ್ದಾರ್ಥವನು ಪೇಳ್ವೆನು ।
ಭರದಿ ಮನಗೊಟ್ಟಿದನು ಕೇಳ್ದೆ ಭಕ್ತಿಭಾವದಲಿ ॥ ೭೧ ॥

ತನ್ನ ಸರ್ವಸ್ವವನು ಪ್ರೇಮದೊ- ।
ಳನ್ಯರಿಗೀಯ್ವುದು ದಾನವು ।
ತನ್ನ ಮನ ಬಂದಂತೆ ದ್ರವ್ಯವ ಹಾರಿಸುವುದಲ್ಲ ॥
ಎನ್ನುವರು ಕೇಳೆದನೆ ದುರ್ವ್ಯಯ- ।
ವೆನ್ನುತಲಿ ಲೋಕದಲಿ ಜಾಣರು ।
ವುನ್ಯಾಚಾರದು ವ್ಯರ್ಥ ದ್ರವ್ಯದ ಹಾನಿಯಿಂ ಪಾರ್ಥ ॥ ೭೨ ॥

ಇಂದ್ರವಾರುಣಿಫಲಗಳತಿ ಕಹಿ- ।
ಯೆಂದು ಬಿಡುವರು ಬಳ್ಳಿಯಲ್ಲಿಯೆ ।
ಬೆಂದು ಹೋಗುವುವೇನ ಹೇಳಲಿ ಬಿಸಿಲಿನಲಿ ಪಾರ್ಥ ॥
ಮುಂದೆ ವೈದ್ಯರು ಮದ್ದಿಗೆನುತಲಿ ।
ತಂದು ಮೇಣುಪಯೋಗ ಮಾಳ್ಪರು ।
ಗಂಧವನು ಕೊಡುತಿಹುದು ಧೂಪವು ತಾನೆಯುರಿಯುತಲೆ ॥ ೭೩ ॥

ಹದಿನಾರನೆಯ ಅಧ್ಯಾಯ.

ನರನೆ ಚಿನ್ನಕೆ ಪುಟವನೇರಿಸೆ ।
ಬರುವುದೈ ಪರಿಶುದ್ಧತೆಯಲಾ ।
ವೊರೆಗೆ ಹಚ್ಚಲು ಬಣ್ಣನೇರುವುದಲ್ಲವೇ ಪಾರ್ಥ ॥
ಬರಲು ಪಕ್ಷವು ಕೃಷ್ಣ ಚಂದ್ರಮ- ।
ಗಿರುವುದೈ ಕ್ಷಯ ಕಲೆಯ ನೋಡಲು ।
ಬರುವುದೋಷಧಿಗೆಲ್ಲ ಪೋಷಣ ಚಂದ್ರಶೋಷಣದಿ ।೭೪।

ಒರಲು ಸ್ವಾತ್ಮವಿಚಾರ ಮನದಲಿ ।
ಮುರಿವುದಲ್ಲವೆ ಕಾಲು ಬುದ್ಧಿಯ ।
ಮರಳಿ ವಿಷಯದ ಹಾದಿಯಲಿ ಗುಡ್ಡಗಳೆ ಕೋರುವುವೆ ॥
ನರನೆ ಬಾಗೃತಿ ಒರಲು ಶಪನಂ- ।
ತರದಿ ನಿದ್ರಾಸ್ವಪ್ನವಿರುವುದೆ ।
ಹರಣವಾಗುವವಲ್ಲವೇ ತಮ್ಮಿಂದ ತಾವಾಗಿ ॥ ೭೭ ॥

ನರನೆ ನೀರಪಿರೋಮಣಿಯೆ ಕೇಳ್ ।
ದೊರಕಿಸಲು ತದ್ಬ್ರಹ್ಮರೂಪವ ।
ನಿರುತ ಪ್ರಾಣೇಂದ್ರಿಯಶರೀರವ ಕರಗಿಸುವುದೆ ತಪ ॥
ಇರುವುವೆರಡನೆ ಪರಿಯ ತಪಗಳು ।
ಧರೆಯೊಳವು ಪರಿಶುದ್ಧವಲ್ಲೈ ।
ನರನೆ ನಿನಗಾನೊರೆವೆನೀತಪದ ಪ್ರಭಾವವನು ॥ ೭೫ ॥

ನರನೆ ಕೇಳೈ ಯಾತ್ಮರೂಪವ ।
ನರಿಯ ಬೇಕೆಂದಿಚ್ಛೆಯಾಗಲು ।
ಒರುವ್ದದಂತಃಕರಣದಲ್ಲಿ ವಿವೇಕ ಸುವಿಚಾರ ॥
ಇರುವ್ದದಿದುವೇ ತಪ ಯಥಾರ್ಥವು ।
ಅರಿತಿಯಲ್ಲಾ ಪಾರ್ಥ ನಿನಗೀ- ।
ತೆರದ ತಪವೆಂಟನೆಯ ಮಣಿಯ್ದೆ ಹಾರದಲಿ ವೀರ ॥ ೭೮ ॥

ನೀರಮಿಶ್ರಿತ ಕ್ಷೀರವನು ತಾ-।
ನೇರಿಸುತ ಚಂಚುವಲಿ ನೀರನು ।
ಬೇರೆ ಮಾಡುತ ಕ್ಷೀರವನು ಗ್ರಹಿಸುವುದು ಹಂಸವಲಾ ॥
ಧಾರುಣಿಯಲೀತೆರದಿ ಜೀವಶ- ।
ರೀರದೈಕ್ಯವ ಮುರಿದು ತಾನು ವಿ- ।
ಚಾರಹಸ್ತದಿ ವಿಂಗಡಿಸುವನು ಜೀವದೇಹಗಳ ॥ ೭೬ ॥

[ಅರ್ಜವಂ] ನರನೆ ನೋಡೈ ಹಾಲು ಬಾಲರಿ- ।
ಗಿರುವುದಲ್ಲವೆ ನಿತ್ಯ ಹಿತಕರ- ।
ವಿರುವುದಲ್ಲವೆ ಪ್ರಾಣವೊಂದೇ ಸಮನೆ ಸರ್ವರಲಿ ॥
ಇರುವುದೈ ಸೌಜನ್ಯವಾಪರಿ ।
ಪೆರೆವುದೈ ಕೇಳ್ ಪ್ರಾಣಿಮಾತ್ರದಿ ।
ಕರೆವರಿದನಾರ್ಜವವೆನುತ್ತಲಿ ಪ್ರಣಿಯು ನಮಮವಿದು ॥ ೭೯ ॥

ಅಹಿಂಸಾ ಸತ್ಯಮುಕ್ರೋಧಸ್ತ್ಯಾಗಃ ಶಾಂತಿರಪೈಶುನಮ್ ।
ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್ ॥ ೨ ॥

[ಅಹಿಂಸಾ] ನರನೆ ಜಗದಲಿ ಸರ್ವರಿಗೆ ಸುಖ ।
ಬರುವ ತೆರದಲಿ ವರ್ತಿಸುತಲಾ ।
ತೆರದಿ ತನುವಾಕ್ಚಿತ್ತದಿಂ ಯತ್ನಿಪುದಹಿಂಸೆಯದು ॥
[ಸತ್ಯಂ] ಸರಸಿಜವು ಬಹು ತೀಕ್ಷ್ಣನಿದ್ದರು ।
ಯಿರುವುದೈ ಕೋಮಲವು ಬಹು ಮೃದು ।
ಕೆರೆಯೊಳಿಹ ನೀರನ್ನು ಭೇದಿಸಿ ಮೇಲಕೇಳುವುದು ॥ ೮೦ ॥

ಇರುವುದೈ ಚಂದ್ರಮಗೆ ತೇಜವು ।
ಧರೆಯಲದು ಶೀತಲವು ನೋಡೈ ।
ಯಿರುವುದೇನೌಷಧವು ಕಣ್ಣಿಂ ನೋಡಿದಾಕ್ಷಣಕೆ ॥
ಹರಿಸ ಬೇಕೈ ರೋಗಬಾಧೆಯ ।
ಮರಳಿ ತಿಂದರೆ ಕಹಿ ಯೆನಿಸದಲೆ ।
ಬರಲು ಬೇಕೈ ನಾಲಿಗೆಗೆ ಬಹು ಮಧುರ ರುಚಿ ತಿಳ್ಕೆಯೆ॥೮೧॥

ಧರೆಯುಲೀಪರಿಯೌಷಧವೆ ಮೇ- ।
ಣಿರುವುದೇನೈ ಕಾಣಲಾರೆನು ।
ಮರಳಿ ಯಿದಕುಪಮೆಯನು ಕೊದುವರೆ ಯಿರುವುದೇನುಪಮೆ ॥
ಧರೆಯಲತಿಕೋಮಲವು ನೋಡಲು ।
ನರನ ಕಣ್ಣಿನ ತಾರಕೆಯಲಾ ।
ಕರದ ಸ್ಪರ್ಶವ ತಾಳಲಾರದು ಧೂಳಿ ತಟ್ಟದಲಾ ॥ ೮೨ ॥

ನರನೆ-ಕೇಳೀ ತೆರದ ಕೋಮಲ- ।
ವಿರುವ ನೇತ್ರಕಠೋರತೆಯ ನೀ- ।
ನರಿತಿಯಲ್ಲಾ ಪೇಳ್ವೆ ನಿನಗಾನೊಂದು ದೃಷ್ಟಾಂತ ॥
ಗಿರಿಗಳನು ಕತ್ತರಿಸಿ ಪಿಡುವುದು ।
ಯಿರುವುದೀಪರಿ ಸತ್ಯಭಾಷಣ ।
ಪರಿಯನಿದ ನಾ ವಿಸ್ತರಿಸುವುದು ಹೇಗೆ ಶಬ್ದದಲಿ ॥ ೮೩ ॥

ಕೇಳಿದರೆ ಕಿವಿಯಿಂದಲದನೇ ।
ಕೇಳಲೇ ಬೇಕೆನುತ ಮನದಲಿ ।
ಲಾಲಸೆಯು ಬರುತಿಹುದು ಸಂತತ ನೋಡು ಕೌಂತೇಯ ॥
ಏಳುತಿಹುದದು ಸತ್ಯಲೋಕದ ।
ಮಾಳಿಗೆಯ ಪರ್ಯಂತ ಸಹಜದಿ ।
ಯಾಲಿಸಲು ಮಾಧುರ್ಯನಿರ್ವಂಚನೆಯು ಮಾತುಗಳು
॥ ೮೪ ॥

ಆರ್ಥಗಾಂಭೀರ್ಯವನು ನೋಡಲು ।
ಚಿತ್ತವನು ನೋಯಿಸದೆ ಸರ್ವರ ।
ಸ್ವಸ್ಥಚಿತ್ತತೆಗೀಯದೈ ಭಂಗದ ತರಂಗವನು ॥
ಬೆಸ್ತನದು ಗಾಯನ ಮನೋಹರ ।
ಸತ್ಯವೇನಿಹುದದರೊಳಗೆ ಮೃಗ- ।
ಹಸ್ಯೆ ಮಾಳ್ಪರೆ ಹಾಡುವನಲಾ ವ್ರಾಣಘಾತಿಯಲಾ ॥ ೮೫ ॥

ಸ್ವಷ್ಟತನದಲಿ ಬೆಂಕಿ ಸುಡುವುದು ।
ಸ್ವಷ್ಟತನವನು ಸುಟ್ಟು ಬಿಡಿರೈ ।
ಯಿಷ್ಟವಿದ್ದರದೇನು ನೋಡಿದರರ್ಥ ಸುಡುತಿಹುದು ॥
ಸುಟ್ಟು ಬಿಡುವುದು ಹೃದಯಕಮಲವ ।
ಶಿಷ್ಟ ಭಾಷಣವಲ್ಲ ನೋಡಿದು ।
ಭ್ರಷ್ಟತನ ತುಂಬಿರುವ ವಿಷವಲ್ಲರಿಯೆ ಕೌಂತೇಯ ' ೮೬ ।।

ಸಿಟ್ಟಗೇಳಲು ಮಾನವರು ಬಹು ।
ದುಷ್ಟ ಮಾತುಗಳಾಡಿ ಬಿಡುವರು ।
ದೃಷ್ಟಿಸಲು ತತ್ತ್ವವನು ಮಾತಿವ್ವ ಬೊಳ್ಳು ತೋರುವುವು ॥
ಶಿಷ್ಟಸಂಮತ ತಾಯಿಯಂದದೊ- ।
ಳಿಷ್ಟರೂಪವು ಪುಷ್ಪದಂದದಿ ।
ಸುಷ್ಮಮಧುರ ಸುವಾಸ ಮೃದುವಾಗಿಹುದು ಸತ್ಯವದು
॥ ೮೭ ॥

ಕೇಳಿ ಮನಕಾನಂದ ಕೊಡುತ ವಿ- ।
ಶಾಲ ಪರಿಣಾಮದಲಿ ನಯಿಯದು ।
ಸೀಳಲಾರದು ಕೇಳಿದವರಂತಃಕರಣ ಪಾರ್ಥ ॥
ಅಲಿಸೈ ನೀ ಮರ್ಮಭೇದವ ।
ಯೇಳಲಾರದು ಶ್ರೋತೃವೃಂದದಿ ।
ಕೇಳು ನೀನೀ ತೆರದ ಭಾಷಣ ಸತ್ಯವೆನಿಸುವುದು ॥ ೮೮ ॥

[ಅಕ್ರೋಧಃ] ನೀರ ಕಲ್ಲಿನ ಮೇಲೆ ಸುರಿದರೆ ।
ಬೇರು ಹುಟ್ಟುವುದೇನು ಮಜ್ಜಿಗೆ- ।
ನೀರ ಕಡಿದರೆ ಬೆಣ್ಣೆ ಹುಟ್ಟುವುದೇನು ಕೌಂತೇಯ ।।

ಊರಗದ ಪರೆ ತುಳಿದರದು ಫಣಿ- ।
ಯೇರಿಸುವುದೆ ವಸಂತ ಬಂದರೆ ।
ಚಾರು ಪುಷ್ಪವು ಬರುವುದೇನೈ ಗಗನಮಂಡಲಕೆ ॥ ೮೯ ॥

ಸುಂದರ ಸ್ತ್ರೀ ರಂಭೆಯನು ಕ- ।
ಣ್ಣಿಂದ ನೋಡಿದರೇನು ಶುಕನಿಗೆ ।
ಬಂದುದೇನೈ ವಿಷಯವಾಸನೆ ನೋಡು ಕೌಂತೇಯ ॥
ತಂದು ತುಪ್ಪವ ಬೂದಿಯಲಿ ಸೊಗ- ।
ಸಿಂದ ಸುರಿಸಿದರೇನು ಬೆಂಕಿಯು ।
ಮುಂದೆ ಜ್ವಾಲೆಯ ಕೊಡುತಿಹುದೆ ಕೌಂತೇಯ ನೋಡಿದಿಯಾ
॥ ೯೦ ॥

ತೀರಲಾಯುರ್ದಾಯ ನರನಿಗೆ ।
ಬಾರಲಾರದು ಜೀವ ಬ್ರಹ್ಮನ ।
ನೇರಿ ಕಾಲಿಂಗೆರಗಲೇನದು ಹೆಣವು ಜೀವಿಪುದೆ ।
ಧಾರುಣಿಯೊಳಾ ಕ್ರೋಧಕಾಮಗ- ।
ಳೇರುನಂದದಿ ಜೀಜಮಂತ್ರೋ- ।
ಚ್ಚಾರ ಮಾಡಲು ಬಾರವವನಿಗೆ ಕ್ರೋಧಕಾಮಗಳು ॥ ೯೧ ॥

ಕರೆವರಿದನಕ್ರೋಧನೆಸುತಲಿ ।
ಹರಿಯು ಪೇಳೆದನೀತೆರದಲಾ ।
ಮೆರೆವ್ರದಿದು ಹನ್ನೆರಡನೆಯ ಮಣಿ ಹಾರದಲಿ ನೋಡೆ ॥
[ತ್ಯಾಗಃ] ತೊರೆಯಲಾ ಮೃತ್ತಿಕೆಯ ಘಟವನು ।
ತೊರೆದ ಪರಿಯಾಗುವ್ರದು ನೋಡೈ ।
ಯರಿನಿಯನು ತ್ಯಜಿಸುವರೆ ತಂತುವ ತ್ಯಜಿಸ ಬೇಕಲ್ಲೈ ॥ ೯೨ ॥

ನರನೆ ಬೀಜತ್ಯಾಗ ಮಾಡಲು ।
ಮರವ ತ್ಯಜಿಸಿದ ಪರಿಯಿದಲ್ಲೈ ।
ತೊರೆಯಲಾ ಗೋಡೆಯನು ಗೋಡೆಯ ಮೇಲಿರುವ ಚಿತ್ರ ॥
ತೊರೆದ ಪರಿಯಂತಲ್ಲನೇ ನೀ ।
ತೊರೆಯೆ ನಿದ್ರೆಯ ಸ್ವಪ್ನಸೃಷ್ಟಿಯ ।
ತೊರೆದ ಪರಿಯಾಯ್ತಲ್ಲವೇ ನಿಜ ತತ್ತ್ವ ನೋಡಿದರೆ ॥ ೯೩ ॥

ನರನೆ ಜಲವನು ತೊರೆದರದರಿಂ ।
ಬರುವ ತೆರೆಗಳ ತೊರೆದ ತೆರನಾ- ।
ಗಿರುವುದಲ್ಲವೆ ವರ್ಷಕಾಲವ ತೊರೆಯೆ ಮೇಘಗಳ ॥
ತೊರೆದ ಪರಿಯಾಗುವುದು ಧನವನು ।
ತೊರೆದರಾ ವಿಷಯೋಪಭೋಗವ ।
ತೊರೆದ ಪರಿಯಾಗುವುದು ತ್ಯಾಗವು ತಾನೆ ಬರುತಿಹುದು ।।೯೪ ॥

ತಾನು ದೇಹವೆ ಯೆಂಬಹಂಕೃತಿ ।
ಜ್ಞಾನಿಗಳು ತ್ಯಾಗವನು ಮಾಡುತ ।
ಹಾನಿ ಮೊಳ್ಪರು ಸರ್ವಸಂಸಾರವನು ನಿರ್ಮೂಲ ॥
ಕ್ಷೋಣಿಯಲ್ಲಿದ ತ್ಯಾಗವೆಂಬರು ।
ಮಾನ್ಯವಿಹುದಿದು ಸರ್ವಜಗದ- ।
ಲ್ಲೀನಿಧಾನವ ಯಜ್ಞಭೋಕ್ತನು ಕೃಷ್ಣನರುಹಿದನು ।೪೫।

ನರನು ಕೇಳ್ದೀ ಹರಿಯುವಚನವ ।
ಮರಳಿ ಪ್ರಶ್ನೆಯ ಕೇಳ್ದನಾತಗೆ ।
ಹರಿಯೆ ನೀ ಪೇಳೆನಗೆ ಶಾಂತಿಯ ಲಕ್ಷಣಂಗಳನು ॥
ಹರಿಯು ಬಹು ಸಂತೋಷದಿಂದಲಿ ।
ಮರಳಿ ಪ್ರತ್ಯುತ್ತರವನಿತ್ತನು ।
ಆರುಹುವೆನು ನಿನಗೀಗ ಕೇಳ್ಕೈ ಲಕ್ಷಪೂರ್ವಕದಿ ॥ ೪೬ ॥

[ಶಾಂತಿ] ನರನೆ ನುಂಗುತ ಜ್ಞೇಯವನು ತಾ- ।
ನರಿಯಲಾ ಸಂಪೂರ್ಣತನದಿಂ ।
ಭರದಿ ಲಯ ಹೊಂದುವುದೊ ಜ್ಞಾನವು ಜ್ಞಾತೃಯುತವೆಲ್ಲಿ॥
ಇರುವುದದುವೇ ಬ್ರಹ್ಮರೂಪವು ।
ಕರೆವರಿದನೇ ಶಾಂತಿಯೆನುತಲಿ ।
ಯರುಹುವೆನು ನಿನಗೊಂದುದಾಹರಣೆಯನು ಕೇಳುವುದು
॥ ೪೭ ॥

ಪ್ರಲಯಕಾಲದಲುದಕವೇರಲು ।
ಮುಳುಗಿ ಹೋಗುವುದೆಲ್ಲ ವಿಶ್ವವು
ಜಲಮಯವಲಾ ಜಲವು ಜಗದಲಿ ತಾನೆ ಲಯವಹುದು ॥
ಜಲಮಯವೆ ತಾಂ ವಿಶ್ವವಾಗಲು ।
ಜಲಧಿ ನದ್ಯುದ್ಗಮಪ್ರವಾಹಗ- ।
ಳುಳಿವುದೇನೈ ಭೇದ ಪ್ರಲಯದಿ ಸರ್ವವೇಕವಲಾ ॥ ೪೮ ॥

ಬರುವುದೀಪರಿ ಬೋಧವಾರಿಗೆ ।
ಯಿರುವರಾರೀ ಬೋಧ ಕೊಳುವರೆ ।
ಯಿರುವುದೀಪರಿ ಜ್ಞಾತೃಜ್ಞೇಯದೊಳೈಕ್ಯವೆಂಬುದದು ॥
ಇರುವುದೊಂದೇ ಜ್ಞಾನ ತದನಂ ।
ತರದಿ ಶಾಂತಿಸ್ವರೂಪವದುವೇ ।
ನರನೆ ನಿನಗಾನರುಹುವೆನೈಶುನದ ಲಕ್ಷಣವ ॥ ೪೯ ॥

[ಐಶುನಂ] ನರನೆ ರೋಗಿಗನಾವರದ ಬಹು- ।
ಪರಿಯ ರೋಗದ ಪೀಡೆ ಬಂದರೆ ।
ಯಿರುವುದೊಂದೇ ಯಿಚ್ಛೆ ರೋಗನಿವಾರಣಾರ್ಥಕವು ॥

ತರುವನುತ್ತಮ ವೈದ್ಯನನ್ನೇ ।
ಪರನಪರನೆಂಬೀ ಕುಶಂಕೆಯ ।
ತರುವನೇನೈ ಮನದಲೌಷಧ ಸೇವಿಸನು ಮುದದಿ ॥ ೫೦೦ ॥

ದನವು ಕೆಸರಲಿ ಬಿದ್ದ ಬಹುಯಾ-
ತನೆಯ ತಾಳ್ವುದು ನೋಡಿ ನರನಿಗೆ ।
ಕನಿಕರವು ಹುಟ್ಟುವುದು ಮೇಲಕ್ಕೆತ್ತುವನು ಭರದಿ ॥
ಮನದೊಳಾತಗೆ ಬರುವುದೇ ಯೋ- ।
ಚನೆಯು ಬರಡೋ ಹೀಡುವುದೊ ದು- ।
ರ್ಗುಣಿಯೊ ಸುಗುಣಿಯೊ ಯೆಂಬ ಕುವಿಚಾರಗಳು ಬಾರವಲಾ
॥ ೫೦೧ ॥

ನೀರಿನಲಿ ಮುಳುಗುತ್ತ ನಾಯುವ- ।
ನಾರಿಹನು ಹಾರುವನೊ ಹೊಲೆಯನೊ ।
ಬಾರದೀ ಪರಿ ಶಂಕೆ ನೀರಲಿ ಹಾರಿ ರಕ್ಷಿಪರೆ ॥
ಘೋರ ಕಾಂತಾರದಿ ಪತಿವ್ರತೆ ।
ಚೋರರಿಗೆ ಕೈಸಿಕ್ಕಿಯುವರಾ ।
ನಾರಿಯನು ಸುಲಿಯುತಲಿ ಬತ್ತಲೆ ಮಾಡಿ ಬಿಟ್ಟರಲು ॥ ೫೦೨ ॥

ಪುರುಷ ಸಂಭಾವಿತನು ಮೇಣಾ ।
ತರುಣಿಯನು ನೋಡಿದರೆ ಮೊದಲಿಗೆ ।
ಯರಿವಿಯನು ಕೊಟ್ಟವಳ ಯೋಗಕ್ಷೇಮ ಕೇಳುವನು ॥
ನರನಿಗಜ್ಞಾನಪ್ರಮಾದದಿ ।
ಮರಳಿ ಪೂರ್ವಾರ್ಜಿತದ ವಶದಲಿ ।
ಬರಲು ವ್ಯಾಧಿಯು ನರನು ನಿಂದಾಪಾತ್ರನಿರಲಥವಾ ॥ ೫೦೩ ॥

ನರನ ದುಃಖಿಯು ನಿಂದಿಸದಲಾ ।
ನರನ ಶುಶ್ರೂಷೆಯನು ಮಾಳ್ಪುದು ।
ಯಿರುವುದಲ್ಲೈ ಶಿಷ್ಟಧರ್ಮವು ನೋಡು ಕೌಂತೇಯ ॥
ಪರಿಪರಿಯಲೀ ತೆರದಿ ದುಃಖಿದೊ- ।
ಳಿರುವ ನರನ ಸಹಾಯ ಮಾಡುತ ।
ವರಹು ಬರುವಂದದಲಿ ಮಾಳ್ಪುದು ಯೋಗ್ಯವಲ್ಲೇನು ॥ ೫೦೪॥

ಮುಂದೆ ಬರುತಿಹ ಜನರ ದುರ್ಗುಣ- ।
ವೃಂದವನ್ನುಚ್ಚಾರ ಮಾಡದೆ ।
ಕುಂದನಡಗಿಸಿ ಮುಂದೆ ಭಾಷಣ ಮಾಳ್ಪುದವರೊಡನೆ ॥
ಚಂದ ಶಾಲಗ್ರಾಮಮೂರ್ತಿಗೆ ।
ತಂದು ವಸ್ತ್ರಾದಿಗಳನಿಡುತಲಿ ।
ಮುಂದೆ ತುಳಸೀಪುಷ್ಪಗಳನರ್ಪಿಸುತ ಪೂಜಿಸುತ ॥ ೫೦೫ ॥

ಚಿತ್ತವದರಲಿ ಹಚ್ಚುವುದು ಕೇಳ್ ।
ಬಿತ್ತಿ ಹೊಲದಲಿ ಧಾನ್ಯ ಬಂದರೆ ।
ಸ್ವಸ್ಥಚಿತ್ತದಲಾ ಸಮಾಧಾನವನು ಗಳಿಸುವುದು ॥
ಚಿತ್ತಯಿಸೆ ಮನೆಗತಿಥಿಯವನಿಂ ।
ಗಿತ್ತು ತಾನಾತಿಥ್ಯಭೋಜನ ।
ಮತ್ತೆ ಯಾಶೀರ್ವಚನ ಕೊಳುವುದು ಯೋಗ್ಯಧರ್ಮವಿದು
॥ ೧೦೬ ॥

ಕುಂದನೆಣಿಸದೆ ತನ್ನ ಶಕ್ತಿಗೆ ।
ಬಂದ ಪರಿಯಲಿ ತನ್ನ ದೃಷ್ಟಿಗೆ ।
ಬಂದ ದೋಷವ ದೂರ ಮಾಡುತ ದಯೆಯ ತೋರಿವುದು॥
ಮುಂದೆ ಯಾತಗೆ ಮರ್ಮಭೇದದ ।
ನಿಂದೆ ಮಾಡದಲವನ ಪಾಪದ ।
ವೃಂದವುಚ್ಚಾರಿಸುತ ದುಃಖವ ಕೊಡುವುದನುಚಿತವು
॥ ೧೦೭ ॥

ಬಳಲು ರೋಗಿಯು ದೃಷ್ಟಿಪಥದಲಿ ।
ಬರಿದೆ ರೋಗೋಚ್ಚಾರ ಮಾಡುತ- ।
ಲರುಹ ಬಾರದು ರೋಗಿಯೆಂಬುವ ಮಾತನವನೊದನೆ ॥
ನರನು ದುರ್ಗುಣ ಬಿಟ್ಟು ಸದ್ಗುಣ- ।
ಪರನು ತಾನಾಗುವ ತೆರದಲಾ ।
ಪರಿಪರಿಯುಪಾಯಗಳ ಮಾಳ್ಪುದು ಶಿಷ್ಟಧರ್ಮವಿದು
॥ ೧೦೮ ॥

ನರನು ಸರ್ವೋತ್ಕೃಷ್ಟನಿದ್ದರು ।
ಕೊರತೆಗಳನನ್ಯರಲಿ ಕಾಣನು ।
ಯಿರುವನನ್ಯನು ನೀಚನೆನ್ನುತ ನಿಂದಿಸನು ಮೇಣು ॥
ಕೊರತೆಗಳ ಮನ್ನಿಸದಲನ್ಯರ ।
ಯಿರುವುದಿದುನೇ ಶಿಷ್ಟಧರ್ಮವು ।
ಮೆರೆವುದಿದು ಲಕ್ಷಣವಪೈಶುನ್ಯಕ್ಕೆ ಕೌಂತೇಯ ॥ ೧೦೯ ॥

ನರನೆ ನೋಡಿದು ಮೋಕ್ಷಮಾರ್ಗದ ।
ಪರಮ ಸುಖಕರ ಸಾಧನವಲಾ ।
ಯಿರುವುದಿದುನೇ ಮುಖ್ಯ ಸಾಧನ ಮೋಕ್ಷಪ್ರಾಪ್ತಿಗಲಾ ॥
[ದಯಾಭೂತೇಷು] ನರನೆ ಕೇಳ್ ಪೂರ್ಣಮೆಯದಿನ ಹಿಮ- ।
ಕಿರಣ ತನ್ನಯ ತೇಜ ಕೊಡುವನು ।
ಹಿರಿದು ಕಿರಿದೆಂಬೀ ತೆರದ ಭೇದವನು ನೋಡುವನೆ ॥೧೧೦॥

ನರನು ಕೇಳು ದಯಾರ್ದ್ರನಂತ- ।
ಕರಣಪೂರ್ವಕ ದುಃಖಿತರ ಪರಿ- ।
ಹಿಯಿಯ ತಾಪಗಳನ್ನು ನೆರೆ ಪರಿಹರಿಪ ಪೋದದಲಿ ॥

ಧರೆಯಲಾ ನೀರಿನ ಸಮಾನರು ।
ಯಿರುವರೇ ಯುಪಕಾರಿಯನ್ಯರು ।
ಮರಣ ತನಗಾದರುನು ಹುಲ್ಲನು ನೀರು ರಕ್ಷಿಪುದು ॥ ೧೧೧ ॥

ಬರಲು ಪೀಡಿತ ಮಾನವನು ಗೋ- ।
ಚರಕೆ ತನ್ನಯ ಸರ್ವವನ್ನವ- ।
ಗಿರದೆ ಕೊಟ್ಟರು ತಾಳನಭಿಮಾನವನು ಮನದೊಳಗೆ ॥
ಅರಿಯ ಬಾರದು ಕೊಟ್ಟ ದಾನವ ।
ಪರಿಯಲೀಯುಪಕಾರ ಮಾಳ್ಪನು ।
ನರನೆ ನೋಡೀತೆರದಿ ಭೂತದಯಾರ್ದ್ರನಾಗಿಹನು । ೧೧೨ ॥

ಹರಿವ ನೀರಿನ ಮುಂದೆ ಹೊಂಡವು ।
ಬರಲು ಹಾದಿಯಲದನು ತುಂಬದೆ ।
ಹರಿವುದೇನೈ ನೀರು ಮುಂದೆ ಪ್ರವಾಹರೂಪದಲಿ ॥
ಅರಿಯಲೀ ತೆರದಿಂದಲೇ ಮುಂ- ।
ದಿರುವ ದುಃಖಿತರಿಂಗೆ ಕೊಡದಲೆ ।
ನರನು ಮುಂದರಿಸನು ಕಣಾ ಕರುಣಾಳು ಕೌಂತೇಯ ॥ ೧೧೩ ॥

ಮುಳ್ಳು ಸೇರಲು ಕಾಲೊಳಗೆ ಬಹು ।
ತಲ್ಲಣಿಸುವನು ವೇದನೆಯಲಾ ।
ತಲ್ಲಣಿಸುವನು ಪರರ ದುಃಖವ ನೋಡಿಯಾ ತೆರದಿ ॥
ಸಲ್ಲಲಿತ ಶೀತಲ ಪದಾರ್ಥವ ।
ಮೆಲ್ಲನಾ ಕಾಲಡಿಗೆ ಹಚ್ಚಲು ।
ಸಲ್ಲಲಿತವಾಗುವುದು ತಂಪೇರುವುದು ಕಣ್ಣಿಂಗೆ ॥ ೧೧೪ ॥

ಪರರ ಸುಖವನು ನೋಡುತೀಪರಿ ।
ಭರದಿ ನೇತ್ರಾನಂದ ಬರುವುದು ।
ಧರೆಯೊಳಗೆ ತೃಷಿತರ ತೃಷಾಹರಣಾರ್ಥಕಾ ನೀರು ॥
ಇರುವುದಲ್ಲವೆ ಪಾರ್ಥ ನೋಡೀ- ।
ತೆರದಿ ಪರದುಃಖವ ನಿವಾರಿಸು- ।
ತಿರುವುದೊಂದೇ ಧರ್ಮ ಜನ್ಮಕೆ ಬಂದರದಕಾಗಿ ॥ ೧೧೫ ॥

ನರನೆ ನೋಡೀ ತೆರದ ಗುಣದಿಂ ।
ಭರಿತನು ದಯಾಮೂರ್ತಿಯಲ್ಲವೆ ।
ಯಿರುವೆ ನಾನವರಿಂಗೆ ಬಹು ಋಣಿಯಾಗಿ ಕೌಂತೇಯ ॥
[ಅಲೋಲುಪ್ತ್ವಂ] ತರಣಿಯುದಯಾಚಲಕೆ ಬರಲಾ ।
ಸರಸಿಜಗಳರಳುವುವು ಪಾರ್ಥನೆ ।
ಸರಸಿಜದ ಪರಿಮಳವ ಸ್ವೀಕರಿಪನೆ ದಿವಾಕರನು ॥ ೧೧೬ ॥

ಧರಣಿಯಲಿ ಬರುವನು ವಸಂತನು ।
ತರುಗಳಲಿ ಫಲ ಪುಷ್ಪ ಬರುವುವು ।
ಭರದೊಳವನುಪಭೋಗಿಸುವನೆ ವಸಂತ ಕೌಂತೇಯ ॥
ಸಿರಿಯು ಸಿದ್ಧಿಸಮೂಹದಿಂದೊಡ- ।
ವೆರೆಸಿ ಹರಿವಶವಾದರೇನಾ ।
ಹರಿಗೆ ಸಿರಿಸಿದ್ಧಿಗಳ ಮೇಲಾಗದು ಕಣಾ ಮನವು ॥೧೧೩॥

ಪರಿಪರಿಯಿತಿಹಪರದ ಸುಖಗಳು ।
ಬರಲು ತನ್ನಯ ವಶದಿ ಕೇಳ್ ಜಾ- ।
ಕರರ ಪರಿಯಲಿ ಸೇವಿಸಲು ಸ್ವೀಕರಿಸಲಾರನಲಾ ॥
ಮರಳಿ ಕೌತುಕಕಾಗಿಯಾದರು ।
ತಿರುಗಿಸನು ಕಣ್ಣುಗಳನದರಲಿ ।
ಕರೆವರಿದನೆ ಯಲೋಲುಪತ್ವವೆನುತ್ತ ಕೌಂತೇಯ ॥೧೧೪॥

[ಮಾರ್ದವಂ] ಜೀನುನೊಣಕಾ ಪುಟ್ಟಿಯು ಸಮಾ- ।
ಧಾನ ಕೊಡುವುದು ನೋಡು ಪಾರ್ಥನೆ ।
ಏನುಗಳೆಗಾ ನೀರು ಸುಖಕಾರಕವೆನಿಪುದಲ್ಲೈ ॥
ಬಾನಿಸಲಿ ಪಕ್ಷಿಗಳು ಹಾರುವು- ।
ವೇನ ಹೇಳಲಿ ವಿಹರಿಸುವುದೀ- ।
ಕ್ಷೋಣಿಯಲಿ ತಾಯಕ್ಕರವ ಮಾಡುವಳು ಕೂಸಿನಲಿ
। ೧೧೫ ॥

ಇಳೆಯೊಳಗೆ ಬರಲಾ ವಸಂತನು ।
ಸುಳಿವನೈ ಮಲಯಾಚಲದ ಪರಿ- ।
ಮಳನ ಸೂಸುವ ಮಂದಮಾರುತ ಸರ್ವದಿಶೆಗಳಲಿ ॥
ಇಳೆಯಲಾ ಪ್ರಿಯವಸ್ತು ನೋಡಲು ।
ಸುಳಿವುದು ಸಮಾಧಾನ ನೇತ್ರದಿ ।
ಬೆಳೆಸುವುವು ಹೆಣ್ಣಾಮೆ ಮರಿಗಳ ಪ್ರೇಮದೃಷ್ಟಿಯಲಿ
॥ ೧೧೦ ॥

ಸೃಷ್ಟಿಯಲ್ಲೀ ತೆರದೊಳಾರಿಗೆ ।
ದೃಷ್ಟಿ ಪ್ರೇಮಾರ್ದ್ರತವಿರುವುದೈ ।
ಸೃಷ್ಟಿಯಲ್ಲಿದು ಮಾರ್ದವವು ನೋಡೈ ಧನಂಜಯನೆ ॥
ಮುಟ್ಟಿದರೆ ಹತ್ತುವುದು ಮೈರುವದು ।
ದೃಷ್ಟಿಸಲು ರೂಪದಲಿ ಶುಭ್ರವು ।
ಯಿಟ್ಟರದು ಬಾಯೊಳಗೆ ರುಚಿ ಮೂಸಿದರೆ ಪರಿಮಳವು
॥ ೧೧೧ ॥

ನರನೆ ನೋಡೀ ತೆರದಲಾ ಕ- ।
ರ್ಪೂರವು ಸೊಗಸಾಗಿಹುದು ಮೇಣ್ ತಿಂ- ।
ದರೆ ಯಥೇಚ್ಛವು ಬಾಧಿಸದೆ ನಿಲ್ಲುವುದೆ ಕೌಂತೇಯ ॥

ಇರುವುದಾ ಕಾರಣದಿಯುಪಮೆಗೆ ।
ಸರಿಯು ಕಾಣೆನು ಪಾರ್ಥ ನೋಡೈ ।
ಪರಿಯ ಕೇಳೀಮಾರ್ದವದ ಮನಗೊಟ್ಟು ಕೌಂತೇಯ ॥ ೧೧೨ ॥

ನರನೆ ನೋಡೀ ಪಂಚಭೂತಗ- ।
ಳೆರುವುದೈ ಹೊಟ್ಟೆಯಲಿ ನೋಡಲು ।
ಯಿರುವುದೈ ಪರಮಾಣುವಿಂಗತಿ ಕಿರಿದೆನಿಸಿ ಜಗದಿ ॥
ಮೆರೆವ ವಿಶ್ವಾಕಾರದಂದದೊ- ।
ಳೆರುವುದೈ ಯಾಕಾರ ಗಗನ- ।
ಕ್ಕಿರುವುದೀ ಪರಿ ಮಾರ್ದವವು ಸದ್ಗುಣವು ಸಾತ್ತ್ವಿಕವು ॥ ೧೧೩॥

ಪರರಿಗುಪಕಾರವನು ಮಾಡಲು ।
ಧರಿಸಿಹರೊ ದೇಹವನು ಯೆಂಬೀ- ।
ತೆರದ ಭಾವವ ಕರೆವೈ ಮಾರ್ದವವೆನುತ ಜಗದಿ ॥
[ಹ್ರೀಃ] ಧರಿಣಿಪತಿಯಿಂ ಗಲು ಪರಾಜಿತ ।
ಬರುವುದಲ್ಲವೆ ಲಜ್ಜೆಯವನಿಗೆ ।
ನರಗೆ ಮಾನಿಗೆ ಬಲಲು ಹೀನಸ್ಥಿತಿಯು ಕಲಿಪಾರ್ಥ ॥ ೧೧೪ ॥

ಬರುವುದೈ ನಿಸ್ತೇಜತನವನ- ।
ಗನಿಯದಲೆ ಸಂನ್ಯಾಸಿಯೊರ್ವನು ।
ಬರಲು ಚಾಂಡಾಲನ ಮನೆಗೆ ಮೇಣ್ ಲಜ್ಜೆ ಬರುವಂತೆ ॥
ಧುರಪರಾಙ್ಮುಖನಾಗಿ ಯೋಡು- ।
ತ್ತಿರುವ ಕ್ಷತ್ತ್ರಿಯನಿಂಗೆ ನೋಡಲು ।
ಬರುವುದವನಲಿ ಲಜ್ಜೆ ಮೋರೆಯನಿಳಿಸುವನು ಕೆಳಗೆ ॥ ೧೧೫ ॥

ನರನೆ ಮುತ್ತೈದೆಯರಿಗಿಳೆಯೊಳು ।
ಕರೆಯೆ ವೈದವ್ಯಾರ್ಥಶಬ್ದದಿ ।
ಯುರುತನದ ದುಃಖಕ್ಕೆ ಕಾರಣವಲ್ಲನೇ ಪಾರ್ಥ ॥
ನರಗೆ ಸುಂದರನಿಂಗೆ ಕುಷ್ಠವು ।
ಬರಲು ದೇಹದಿ ನರಗೆ ಮಾನ್ಯಗೆ ।
ಬರಲು ಜನನಿಂದಾಪವಾದವು ಲಜ್ಜೆ ಬರುವುದಲಾ ॥ ೧೧೬ ॥

ಮೂರುವರೆ ಮೊಳವುದ್ದವಿರುವ ಶ- ।
ರೀರಧಾರಣ ಮಾಡುವುದು ಮೇಣ್ ।
ಬೇರೆಬೇರೆ ಪ್ರಕಾರ ಯೋನಿಗೆ ಬಂದು ಜನಿಸುವುದು ॥
ಧಾರುಣಿಯ ಸಂಬಂಧ ತೀರಲು ।
ಸೇರುವುದು ಮರಣವನು ನೋಡೀ ।
ದಾರಿಯನ್ನೆದು ಪುದು ನಡೆವರೆ ಲಜೆ ಹ್ರೀಯದುವೆ ॥ ೧೧೭ ॥

ಪರಿಪರಿಯ ಯೋನಿಗಳ ಗರ್ಭಗ- । [ಅಚಾಪಲಂ] ಸೂತ್ರದೋರವು ಹರಿಯಲಾಕ್ಷಣ ।
ಳಿರುವೈ ಮುಸಿಗಳು ಶರೀರದಿ । ಸೂತ್ರಗೊಂಬೆಯ ಚೇಷ್ಟೆ ಮುರಿವುದು ।
ಮೆರೆವ ಶೋಣಿತಮೂತ್ರರಸದಿಂದಾಕೃತಿಯಧರಿಸಿ ॥ ಕೆತ್ತಿ ವ್ರಾಣವ ಜಯಿಸೆ ಕರ್ಮೇಂದ್ರಿಯನಿಕರವೆಲ್ಲ ॥
ತಿರಿತಿರಿಗಿ ಜನಿಸುವುದು ಸಾಯುವು- । ಸತ್ತು ಬೇಳುವುದಲ್ಲವೇ ಸೂ- ।
ದಿರುವುದಿದು ಲಜ್ಜಾಜನಕವೈ । ಯರ್ಜಸ್ತವಾಗಲು ಕಿರಣತೇಜಸ- ।
ಯರಿಯುತೀವರಿ ದುಃಖಿಸುವುದೈ ಹ್ರೀಯಲಕ್ಷಣವು ॥೧೨೮॥ ಮಸ್ತನಳೆವುದು ನೋಡಿದಿಯೊ ಕಲಿವಾರ್ಥ ಮನಗೊಟ್ಟು ॥೧೩೦॥

ಪರಿಪರಿಯ ದುಶ್ಚಿಹ್ನವೀಪರಿ । ಬಂಧಿಸಲು ನಿಗ್ರಹದಿ ಮನ ಜ್ಞಾ- ।
ಯಿರುವ ದೇಹವ ಧರಿಸಿ ಬರುವುದೆ । ನೇಂದ್ರಿಯಂಗಳು ಸತ್ತು ಬೀಳ್ವುವೆ ।
ಯಿರುವುದೈ ಲಜ್ಜಾಜನಕವಿದು ಸಾಧು ಪುರುಷರಿಗೆ ॥ ಬಂಧಿಸಲು ವ್ರಾಣವನು ಮನವನ್ನಿಂದ್ರಿಯದ ದಶಕ ॥
ಇರುವುದಿದುವೇ ಪ್ರಿಯಕರವಲಾ । ಬಿಂದು ಹೋಗುವುದೇನ ಹೇಳಲಿ ।
ಧರೆಯೊಳಗೆ ಮೂಢರಿಗೆ ವಾರ್ಧನೆ । ಬಂದುದೇ ಮನದೊಳಗೆ ವಾಸವ- ।
ಯರಿಯಿಶೇ ಹ್ರೀಲಕ್ಷಣವು ನಿನಗಿಂದು ಕೌಂತೇಯ ।೧೨೯॥ ನಂದನನೆ ಕೇಳಿದುವಚಾಪಲವಿದುದು ನೋಡಿದಿಯಾ ॥೧೩೧॥

ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತ ।
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥ ೩ ॥

[ತೇಜಃ] ದೊರೆಯ ಬೇಕೀಶ್ವರನೆನುತ್ತಲಿ । ದೊರೆಯಲೇನಾ ಸಿದ್ಧಿಯಪ್ಪಕ ।
ಭರದಿ ಸ್ವಾಂತಃಕರಣಪೂರ್ವಕ । ಧರಿಸನವ ಕೌತುಕವ ಮನದ- ।
ಚರಿಸಲಾ ಸುಜ್ಞಾನಮಾರ್ಗದಿ ಮಾನವನು ಪಾರ್ಥ ॥ ಲ್ಲರಿವನೊಂದೇ ಪರಿಯನೀಶ್ವರನಡಿಗೆ ಯೋಡಾಟ ॥
ಕೊರತೆ ಬರುವುದೆ ಬಾರಲಾರದು । ಇರುವುದಿದು ಶಾರೀರತೇಜವು ।
ನರನೆ ನೀ ನೋಡಿದಿಯೊ ಜಗದಲಿ । ನರನೆ ನೋಡಿದ ವಿಸ್ತರಿಸಿದೆನು ।
ಮರಣ ಬಂದರೆ ಪತಿಗೆ ಸತಿಯರು ಚಿತೆಯನೇರುವರು ಮರಳಿ ನಿನಗಾನರುಹುವೆನು ಕೇಳ್ ಕ್ಷಮೆಯ ಲಕ್ಷಣವ ॥೧೩೫॥
॥ ೧೩೨ ॥
ಸತಿಯು ಪತಿರತಳೆಂದು ಮೇಲಾ । [ಕ್ಷಮಾ] ನರನೆ ಕೇಳ್ಕೆ ರೋಮಕೋಟಿಯ ।
ಚಿತೆಯನೇರಿ ಸ್ವದೇಹವಗ್ನಿಗೆ । ಧರಿಸುತಿರ್ದರು ದೇಹಕೀ ಪರಿ- ।
ಯತಿಹರುಷದಿಂದರ್ಪಿಸುವಳೈ ನೋಡುವಳೆ ಹಿಂದೆ ॥ ಯಿರುವುದೇನಭಿಮಾನ ನೋಡೈ ಪಾರ್ಥ ಮನಗೊಟ್ಟು ॥
ಮತಿಯಿನಿರಿಸುತ ಸ್ವಾತ್ಮಜ್ಞಾನದಿ । ಪರಿಯಲೀ ಧಾರಣವ ಮಾಡುತ- ।
ಕ್ಷಿತಿಯ ವಿಷಯಂಗಳನು ವಿಷವೆಂ- । ಲಿರುವ್ರದೆನಗೀ ಸಹನಶೀಲತೆ- ।
ದತಿಹರುಷದಿಂ ತ್ಯಜಿಸಿ ಹೆಜ್ಜೆಯನಿಡುವುದೈ ಮುಂದೆ ॥೧೩೩॥ ಯಿರದಲಾ ಮನದೊಳಗೆ ಗರ್ವವು ಕ್ಷಮೆಯ ಲಕ್ಷಣವು ॥೧೩೬॥

ದೊರೆಯ ಬೇಕೆಂದಾತ್ಮಜ್ಞಾನವು । [ಧೃತಿಃ] ಇರಲಿಕಾ ವಿಷಯೋಪಭೋಗದ ।
ನರ ಸುಷುಮ್ನಾನಾಡಿಯಿಂದಲಿ । ಪರಿಪರಿಯಲಿಂದ್ರಿಯಪ್ರವೃತ್ತಿಯು ।
ಭರದಲೇರಿಸಲಿತ್ತಿ ಪನಲಾ ವ್ರಾಣವಾಯುವನು ॥ ಒರಲಿ ಪೂರ್ವಾರ್ಜಿತದ ಕರ್ಮಾದಿ ರೋಗ ದೇಹದಲಿ ॥
ಅರಿಯನಾತನು ವಿಧಿನಿಷೇಧವ- । ಒರಲಿ ಯಪ್ರಿಯ ವಸ್ತುರೋಗವು ।
ನರಿಯನಾತನು ಶಾಸ್ತ್ರಮಾರ್ಗವ- । ಒರಲಿ ಪ್ರಿಯ ವಿಷಯದ ವಿಯೋಗವು ।
ನರಿಯನಾತನು ಲಜ್ಜೆ ವಿಘ್ನಾಘಗಳ ಕೌಂತೇಯ ॥ ೧೩೪॥ ಮರಳಿ ಬರಲೀಪರಿ ವಿಪತ್ತುಗಳೆಲ್ಲವೊಂದಾಗಿ ॥ ೧೩೭ ॥

ನರನು ಮನದಲಿ ಗಡಬಡಿಸದಲೆ ।
ಶರನಿಧಿಯ ಕುಂಭಜನು ಕುಡಿದಿಹ ।
ಪರಿಯಲವನದ ಕುಡಿದು ತೇಗುವನೇನ ಹೇಳುವೆನು ॥
ಬರಲು ಹೊಗೆಯಾಕಾಶದಲ್ಲಿಂ ।
ದರೆಗಳಿಗೆಯಲಿ ಗಾಳಿಯದನೇ ।
ಹರಿದು ಬಿಡುವಂದದಲಿ ಹರಿವನು ಮೂರು ತಾಪಗಳ
॥ ೧೩೮ ॥

ಮೂರು ತಾಪಂಗಳನು ವೊಂದೇ ।
ಬಾರಿಗಾತನು ಕುಡಿದು ತೇಗುವ ।
ನೇರಿದರೆ ಚಿತ್ತದಲಿ ರಾಗವು ಧೈರ್ಯ ಕೆಡಿಸನಲಾ ॥
ಧಾರುಣಿಯಲಿದ ಧೃತಿಯೆನುತ್ತಲಿ ।
ಕಾರಣಿಕ ಕೋವಿದರು ಕರೆವರು ।
ಧೀರನೀರ ಧನಂಜಯನೆ ಕೇಳೆಂದನಸುರಾರಿ ॥ ೧೩೯ ॥

[ಶೌಚಂ] ಜನ್ಮಕಲಶವ ಸ್ವಚ್ಛ ತೊಳೆಯುತ ।
ಮಾನ್ಯ ಗಂಗಾಮೃತವನದರೊಳ ।
ಗಿನ್ನು ತಂದಿರಿಸಲು ಕಣಾ ಸರ್ವತ್ರ ಶುದ್ಧವಲಾ ॥
ಸನ್ನುತಾತ್ಮನಿಗಾಚರಣನಂ ।
ಪೂರ್ಣ ನಿಷ್ಕ್ರಮವು ಕಣಾ ಮೆ ।
ಣಿನ್ನು ನೋಡು ವಿವೇಕವಂತರ್ಗತವು ರಂಜಿವುದು
॥ ೧೪೦ ॥

ನರನೆ ನೋಡೀ ತೆರದ ಶುದ್ಧತೆ ।
ಯಿರುವುದಾದರೆ ಸರ್ವಕಡೆಯಲಿ ।
ಕರೆವರದನೇ ಶೌಚವೆನುತಲಿ ಕೋವಿದರು ಜಗದಿ ॥
[ಅದ್ರೋಹಃ] ಹರಿವ ಗಂಗಾಜಲವು ಜಲಧಿಯ ।
ವರೆಗೆ ದಾರಿಯಲಿರುವ ತೀರದ ।
ಮರಗಳನು ಪೋಷಿಸುವುದಲ್ಲವೆ ಸ್ನಾನಮಾಡಿದರೆ ॥ ೧೪೧ ॥

ಹರಿಸುವುದಲಾ ವಾಪತಾಪವ ।
ತರಣಿ ದಿನನಿತ್ಯದ ಪ್ರದಕ್ಷಿಣೆ ।
ವಿರಚಿಸಲಿಕಾರಭಿಸಿದರೆ ಮೂರ್ಲೋಕದಲಿ ವಾರ್ಥ ॥
ಹರಿವುದೈ ಕತ್ತಲೆಯ ರಾತಿಯು ।
ಧರೆಯಲಿಹ ಸಂಪತ್ತಿಯಾಗರ ।
ತೆರೆದು ಸುರುವಾಗುವುದು ಜಗದೊಳಗೆಲ್ಲ ವ್ಯಾಪಾರ ॥ ೧೪೨ ॥

ಧರೆಯಲೀ ತೆರದಲ್ಲಿ ಬದ್ಧರಿ ।
ಗಿರದೆ ಸನ್ಮುಕ್ತಿಯನು ಕೊಡುವುದು ।
ಮರಳಿ ಸಂಸಾರದಲಿ ನಿರಳುವರನ್ನು ತರಿಸುವುದು ॥
ಹರಿಸುವುದು ಪೀಡಿತರ ದುಃಖವ ।
ನಿರುಳು ಹಗಲಲಿ ಸ್ವಾರ್ಥ ಸಾಧಿಸು ।
ತಿರುವುದಾದರು ಪರರ ಸುಖದಭಿವೃದ್ಧಿ ಮಾಡುವುದು ॥ ೧೪೩ ॥

ತನ್ನ ಸುಖ ಸಾಧಿಸಲಿಕೋಸುಗ ।
ವನ್ಯರಿಗೆ ಘಾತವನು ಮಾಡುವ ।
ಕುನ್ನಿ ಮಾರ್ಗದ ಛಾಯೆಯಾದರು ಮನದಿ ಬಾರದಲಾ ॥
ಎನ್ನನೀಪರಿ ನರನ ವರ್ತನ ।
ವನ್ನು ಬುಧರದ್ರೋಹವೆನುವರು ।
ಯಿನ್ನು ನಿನಗಾನರುಹುವೆನು ಕೇಳ್ನಾತಿಮಾನಿತೆಯು ॥ ೧೪೪ ॥

[ನಾತಿಮಾನಿತಾ] ನರಪತಿ ಭಗೀರಥನು ಗಂಗೆಯ ।
ನಿರದೆ ಪ್ರಾರ್ಥಿಸಿ ಮೃತ್ಯುಲೋಕಕೆ ।
ಒರಿಸಿದನು ಶಂಕರನು ಜಟೆಯಲಿ ಧರಿಸಿದನು ಮುದದಿ ॥
ಹರನ ಸನ್ಮಾನವನು ನೋಡುತ ।
ಕರಗಿದಳು ಲಜ್ಜೆಯಲಿ ಗಂಗೆಯು ।
ಪರರು ಮಾನವನೀಯೆ ಮನ ಸಂಕುಚಿತವಾಗುವುದು ॥ ೧೪೫ ॥

ನರನೆ ನೋಡಿದು ನಾತಿಮಾನಿತೆ ।
ಪರಿಪರಿಯಲಿದ ನಿನಗೆ ನಾ ವಿ ।
ಸ್ತರಿಸಿದೆನಲಾ ಹಿಂಪೆ ನಿನಗರವಿಲ್ಲನೇ ವಾರ್ಥ ॥
ತಿರಿತಿರಿಗಿ ನಾನದನೆ ಬಹು ವಿ ।
ಸ್ತರವ ಮಾಡಲು ಬೇಕೆ ವಾರ್ಥನೆ ।
ಹರಿಯು ನೋಡೀ ತೆರದಿ ವಾರ್ಥನಿಗರುಹಿದನು ಮುದದಿ ॥ ೧೪೬ ॥

ನರನಿಗಿಪ್ಪತ್ತಾರು ಸದ್ಗುಣ ।
ವರುಹಿದನು ಕರುಣದಲಿ ಶ್ರೀಹರಿ ।
ಯರಸ ಕಟ್ಟಿಸಿ ಕೊಟ್ಟನಿವಗಳಿಗಗ್ರಹಾರವನು ॥
ಇರುವುದಿದುವೇ ದೈವಸಂಪ ।
ತ್ತಿರುವುವಿಪ್ಪತ್ತಾರು ಗುಣಗಳು ।
ಪರಿಪರಿಯ ತೀರ್ಥಗಳು ಗಂಗಾರೂಪ ಹರಿವುವಲಾ ॥ ೧೪೭ ॥

ಮೆರೆವ ಸಗರನಿರಕ್ತಿಯನ್ನು ।
ದ್ಧರಿಸಲೋಸುಗ ಬಂದಿರುವುದೋ ।
ಧರಣಿಯಲ್ಲೆಂಬಂತೆ ಮೆರೆವುವು ಗುಣಗಣಂಗಳಿವು ॥
ಕರದಲೀ ಗುಣಪುಷ್ಪಮಾಲೆಯ ।
ಧರಿಸಿ ವಧು ಶ್ರೀಮುಕ್ತಿ ತನ್ನಯ ।
ವರನ ವೈರಾಗ್ಯವನು ಶೋಧಿಸುತಿಹಳು ಲೋಕದಲಿ ॥ ೧೪೮ ॥

ಕರದಲೀ ಗುಣಬತ್ತಿ ಹಚ್ಚುತ ।
ತರುಣಿ ಭಗವದ್ಗೀತೆ ಪತಿಯ- ।
ನ್ನರಸುವೆಳೊ ನೀವಾಳಿಸಲಿಕಾರತಿಯನೆಂಬಂತೆ ॥
ಮೆರೆವುವೈ ಗೀತಾನಮುದ್ರದಿ ।
ಪರಿಪರಿಯ ಗುಣಮೌಕ್ತಿಕಂಗಳು ।
ಧರಿಸಿಧಳೊ ಸಂಪತ್ತು ದೈವಿಕ ಸಿಂಪಿರೂಪದಲಿ ॥ ೧೫೪ ॥

ನರನೆ ನೋಡೈ ತೆರವಿದಿದ್ದರು ।
ಅರಿಯಲಾ ನೀನಿದನು ಮನದ- ।
ಲ್ಲರಿಯ ಬೇಕೈ ತ್ಯಾಜ್ಯ ವಸ್ತುವ ಸಾವಧಾನದಲಿ ॥
ನಿರುತ ತ್ಯಾಜ್ಯನಿದೆಂಬ ಕಾರಣ- ।
ವರಿಯ ಬೇಕೈ ಲಕ್ಷಣಂಗಳ ।
ನರನೆ ಕೇಳೆದು ನರಕದೊಳಗದ್ದಿಪುದು ಪ್ರಾಣಿಗಳ ॥ ೧೫೧ ॥

ಅರುಹಿದೆನು ವಿಸ್ತಾರದಿಂದೀ ।
ಪರಿಯ ದೈವಿಕ ಸಂಪತ್ತಿಲ್ಲವ ।
ಪರಿಪರಿಯ ಲಕ್ಷಣವನೆಲ್ಲವನರುಹಲಿನ್ನೇನು ॥
ಅರುಹುವೆನು ನಿನಗೀಗ ನಾನಾ- ।
ಸುರಿಯ ಸಂಪಲ್ಲಕ್ಷಣಂಗಳ- ।
ನಿರುವುದಿದುವೇ ದುಃಖವಲ್ಲಿಯು ಮುಳ್ಳ ತುಂಬಿಹುವು॥೧೫೦॥

ಧರೆಯಲಿಹ ಜೀವಿಗಳನೆಲ್ಲವ ।
ನರಕದಲ್ಲಿಯೆ ದೂಡ ಬೇಕೀ- ।
ತೆರದ ಘೋರವ್ರತವ ಸ್ವೀಕರಿಸಿಹುದು ಸಂಪತಿದು ॥
ಹರಿಪರಿಯ ವಿಷವೆಲ್ಲ ಕೂಡಲು ।
ಯಿರುವುದಿದುವೇ ಕಾಲಕೂಟವು ।
ಪರಿಯಲಾಸುರ ಸಂಪತೆಂಬುದು ದೋಷರಾಶಿಯಲಾ ॥ ೧೫೨ ॥

ದಂಭೋ ದರ್ಪೋಽಭಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ ।
ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್ ॥ ೪ ॥

[ದಂಭಕ] ನರನೆ ವೀರವರೋತ್ತಮನೆಯಾ- ।
ಸುರಸ್ವರೂಪದ ದೋಷತತಿಯ- ।
ಲ್ಲಿರುವುದೈ ಮುಖ್ಯಪ್ರಸಿದ್ಧವು ದಂಭ ನೋಡಿದಿಯಾ ॥
ನರನೆ ತಾಯಿಯು ದೋಷಗಳ ತಾ- ।
ನಿರದೆ ಬಯಲಿಗೆ ತಂದು ನಿಂದಾ- ।
ಪರಶೆಯನು ತೋರಿಸಲು ತಾಯಿಯು ತೀರ್ಥದಂದದಲಿ
॥೧೫೩॥

ನರನು ನಾವೆಯನೇರದಲೆ ಮ- ।
ತ್ತಿರದೆಯದನೇ ತಲೆಯಲೇರಿಸೆ ।
ಯಿರವುದೇನೈ ತರಣ ಪ್ರಾಣದ ಹರಣವಹುದಲ್ಲೈ ॥
ನರನೆ ಪ್ರಾಣವ ಕಾಯ್ವುದನ್ನವು ।
ನಿರುತವಾಗಿಹ ಮಾತು ಕೇಳೆದು ।
ಭರದಲದನತಿ ಮಿಗಿ ತಿನ್ನಲು ಪ್ರಾಣಘಾತಕವು ॥ ೧೫೬ ॥

ಇರುವಳಾದರು ಪರಮಪಾವನೆ ।
ದುರಿತಕಾರಕ ಮಗನಿಗಾಕೆಯೆ ।
ಯಿರುವಳಲ್ಲಾ ಪತನಕಾರಣ ನರಕಸೋಪಾನ ॥
ಗುರುಮುಖದಿ ಕಲಿತಿರುವ ಪಾವನ- ।
ವಿರುವ ಬ್ರಹ್ಮಜ್ಞಾನವನು ತಾ- ।
ನಿರದೆ ಹಾದಿಯ ಮೇಲೆ ಬೇಕಾದವರಿಗರುಹಿದರೆ ॥ ೧೫೪ ॥

ನರನೆ ನೋಡೈ ಧರ್ಮವಿಹಪರ- ।
ಕಿರುವುದೈ ಸುಖ ಮಾತು ನಿಜವಿದು ।
ತರಣಕಾರಣವಹುದು ಗುಪ್ತದಿ ಮಾಡೆ ಧರ್ಮವನು ॥
ಒರೆದೆ ಹಾದಿಯಲದನು ತೋರಿಸೆ ।
ಯಿರುವುದದುವೇ ದುರಿತಕಾರಣ ।
ಪರಮದೋಷಾಸ್ಪದವಲಾ ಧರ್ಮದ ಪ್ರಸಿದ್ಧಿಯದು ॥ ೧೫೭ ॥

ಒರುವುದೇನುಪಯೋಗವದರಿಂ ।
ಒರುವುದಲ್ಲವೆ ಹಾನಿಯಹಿತವು ।
ನರನೆ ನಿನಗಾನೊಂದು ದೃಷ್ಟಾಂತವನು ಪೇಳುವೆನು ॥
ಬರಲು ಮಳೆಗಾಲದಲಿ ಪೂರವು ।
ನರನು ನಾವೆಯನೇರಿ ನದಿಸಂ- ।
ತರಣ ಮಾಳ್ಪನು ಮಾತು ನಿಜವಿದು ನೋಡಿದಿಯೊ ಪಾರ್ಥ
॥ ೧೫೫ ॥

ನರನೆ ನೋಡೈ ತಾನು ಮಾಡಿದ ।
ಪರಿಪರಿಯ ಧರ್ಮಗಳ ನಾಲ್ದೆಸೆ ।
ಗಿರದೆ ಘೋಷಿಸುತಿರುವುದೇ ನಿಜ ದಂಭವೆನಿಸುವುದು ॥
ಧರೆಯಲಿದು ಸದ್ಧರ್ಮವಲ್ಲೈ ।
ಕರವರಿದನೆಯಧರ್ಮವೆನುತಲಿ ।
ಯಿರಲು ಜೇಕೈ ಧರ್ಮ ಗುಪ್ತವು ಪಾರ್ಥ ಜಗದೊಳಗೆ
॥ ೧೫೮ ॥

[ದರ್ಪಃ] ಮರುಳ ನಾಲ್ಕಕ್ಷರವ ಕಲಿತರೆ ।
ಸರಸತಿಯ ತುಚ್ಛಪನು ಮದದಲಿ ।
ಕುರುಡದಾಸರ ಕುದುರೆಯೈರಾವತವ ತುಚ್ಛವುದು ॥
ಅರಿಯಲಾ ಜಾಲಿಗೆಯ ಮರದೊಳ- ।
ಗಿರುವ ಜ್ಯೋತಿಯು ಸ್ವರ್ಗ ತುಚ್ಛಿಸು- ।
ತಿರುವುದಲ್ಲವೆ ಬಾವಿಯೊಳಗಿನ ಕಪ್ಪೆ ಸಾಗರವ ॥ ೧೫೯ ॥

ಹುಲ್ಲುರಾಶಿಯು ಸಿಗಲು ಬೆಂಕಿಯು ।
ತಲ್ಲಣಿಸುತೇಳುವುದು ಗಗನಕೆ ।
ಸಲ್ಲಲಿತ ಭೋಜನವು ಸಿಗಲೊಂದಿನ ದರಿದ್ರನಿಗೆ ॥
ಮೆಲ್ಲನವನುನ್ಮತ್ತನಾಗುವ- ।
ನಲ್ಲವೇ ವಿದ್ಯಾಧನಸ್ತ್ರೀ- ।
ಯಲ್ಲಿ ಬಹುಮಾನದಲಿ ನರನುನ್ಮತ್ತನಾಗುವನು ॥ ೧೬೦ ॥

ದೊರೆಯಲರಮನೆನೆರಳು ವೊಂದಿನ ।
ನರನಿಗಾಸರಕಾಗಿ ತದನಂ- ।
ತರದಿ ಮನೆ ಬೇಕೇಕೆನುತ ಕುವಿಚಾರದಿಂ ನರನು ॥
ಇರುವ ಮನೆಯನು ಸುಟ್ಟು ಬಿಟ್ಟರೆ ।
ಮರುಳನಲ್ಲವೆ ನೋಡು ಜಗದಲಿ ।
ಬರಿದೆ ಮೃಗಜಲ ನೋಡಿ ಬಾವಿಯ ಜಾಣ ಮುಚ್ಚುವನೆ
॥ ೧೬೧ ॥

ಬರಲು ಧನಸಂಪತ್ತು ಭಾಗ್ಯವು ।
ಭರದಿ ನರನುನ್ಮತ್ತನಾಗಲು ।
ಕರೆವರಿದನೇ ದರ್ಪವೆನುತಲಿ ಕೋವಿದರು ಜಗದಿ ॥
[ಅಭಿಮಾನಃ] ಇರುವುದೈ ವೇದದಲಿ ಜನರಿಗೆ ।
ಭರವಸವು ತದ್ರೀತಿಯಲ್ಲೀ- ।
ಶ್ವರನಿಹನು ತ್ರಿಜಗದಲಿ ವ್ಯಾಪ್ಯನು ಸೂರ್ಯನಂದದಲಿ
॥ ೧೬೨ ॥

ಇರುವುದೇನೆರಡನೆಯ ತೇಜದ ।
ಸರಿಯವನು ಜಗದೊಳಗೆ ಸರ್ವದಿ- ।
ಗಿರುವುದಿಚ್ಛೆಯು ಸಾರ್ವಭೌಮತ್ವದಲಿ ಕೌಂತೇಯ ॥
ಮರಣತನಗರ ಬಾರದೆಂದೀ- ।
ತೆರದೊಳಿಚ್ಛೆಯ ಜಗದೊಳಿಲ್ಲರು ।
ಧರಿಸಿರುವರೈ ನಿರ್ವಿವಾದದ ಮಾತು ಕೌಂತೇಯು ॥ ೧೬೩ ॥

ಧರೆಯಲಾ ಕಾರಣದಿ ಸರ್ವರು ।
ನಿರುತ ಪರಮೇಶ್ವರನ ವೇದವ ।
ಪರಿಪರಿಯ ರೀತಿಯುಲಿ ಕೊಂಡಾಡುವರು ಕೌಂತೇಯ ॥

ಬರಲು ಕವಿಯೊಳಗೀಪರಿಯ ತುತಿ ।
ಬರುವುದೈ ಕೋವಾತಿರೇಕವು ।
ಬರಳುವನು ದ್ವೇಶದಲಿ ಮತ್ಸರಪೂರಿತನು ಜಗದಿ ॥ ೧೬೪ ॥

ತಿಂದು ತೇಗುವೆನೀಶ್ವರನ ನಾ- ।
ನಿಂದು ಕೊಡುತಾ ಕಾಲಕೂಟವ ।
ಕೊಂದು ಬಿಡುವೆನು ವೇದಶಾಸ್ತ್ರಂಗಳನು ಗಳಿಗೆಯಲಿ ॥
ಮುಂದೆ ಸರ್ವರ ರಕ್ಷಣವ ಯಾ- ।
ರೆಂದು ಮಾಳ್ಪರು ನಾನವರ ಮುನಿ- ।
ಸಿಂದ ಸತ್ತಾಹರಣ ಮಾಡುಹೆನೊಂದೆ ಗಳಿಗೆಯಲಿ ॥ ೧೬೫ ॥

ಈ ಪರಿಯಲೀಶ್ವರನ ಸತ್ತೆಯು ।
ತಾಪವೆನುತಲಿ ಯೋಚಿಸುವನ್ಯೆ ।
ದೀಪತೇಜವ ಸಹಿಸಲಾರದು ಒಡಪತಂಗವದು ॥
ಈ ಪರಿಯಲಾ ಮಿಂಚುಬುಳುಗಳು ।
ಕೋಪಿಸುವುವಾ ಸೂರ್ಯನೊಳು ಸಂ- ।
ತಾಪಿಸುವುದಾ ಟಿಟ್ಟಭಕ ಸಾಗರವ ನೋಡಿದರೆ ॥ ೧೬೬ ॥

ನರನು ನೋಡಭಿಮಾನಭರದ- ।
ಲ್ಲರಿಯನೀಶ್ವರನಾರೆನುತ ಮ- ।
ತ್ತಿರದೆ ಪರಮೇಶ್ವರನ ನಾಮವನಾಡನ್ಯೆ ಮದದಿ ॥
ತರಣಿ ಸವತಿಯ ಧಿಕ್ಕರಿಪ ಪರಿ- ।
ಯರಿಯುತೀಶ್ವರನನ್ನು ಬಹು ಮ- ।
ತ್ಸರದೊಳಾತನ ಧಿಕ್ಕರಿಸುವನು ವರ್ಣಿಸಲಿ ಯೆಂತು ॥ ೧೬೭ ॥

ಧರೆಯಲಾರಿಗೆ ಪಾರ್ಥ ನೋಡೀ ।
ತೆರದ ಮಾನವ ತುಂಬಿಹುದು ಕೇ- ।
ಳಿರುವುದೈ ಯಭಿಮಾನ ಜಗದೊಳಗಿದುವೆ ಲಕ್ಷಣವು ॥
ಪುರುಷನೀಯುನ್ಮತ್ತ ರೌರವ- ।
ನರಕ ಹಾದಿಯ ಹಿಡಿವನಲ್ಲವೆ ।
ಯಿರುವುದೇನಿದು ಹಾದಿ ಮೋಕ್ಷಕೆ ನೋಡು ಕೌಂತೇಯ ॥ ೧೬೮ ॥

[ಕ್ರೋಧಃ] ಧರೆಯಲನ್ಯರು ಸುಖವನನುಭವಿ- ।
ಪರು ಯೆನುತ್ತಲಿ ನೋಡಿದಾಕ್ಷಣ ।
ಭರದಲೇಳ್ವುದು ಮಸ್ತಕಕೆ ಕ್ರೋಧಾಗ್ನಿ ವಿಷವಾಗಿ ॥
ನರನೆ ಯುರಿವೆಣ್ಣೆಯಲಿ ತಣ್ಣೀ- ।
ರೆರೆಯಲಾಕ್ಷಣ ಜ್ವಾಲೆ ಯೇಳ್ವುದು ।
ನರಿಯು ಚಂದ್ರನ ನೋಡಿ ಥಡಪಡಿಸುವುದು ಮತ್ಸರದಿ ॥ ೧೬೯ ॥

ತರಣಿಯುದಯಕೆ ಬಂದ ಯೋಗದಿ ।
ಧರೆಗೆ ಪರಮಾನಂದವವ್ವುದು ।
ಪರಿಪರಿಯ ವ್ಯವಹಾರವೆಲ್ಲಾರಂಭವಾಗುವುದು ॥
ಮರುಳ ವಾಪಿಯು ಗೂಗೆಯಾನಿ ।
ಸ್ತ್ರೀರವ ನೋಳ್ಪುದೆ ಯದಕೆ ದೃಷ್ಟಿಯು ।
ಹರಿದು ಹೋಗುವುದಲ್ಲನೇ ಮತ್ಸರಿದಲಡಗುವುದು ॥೧೭೦॥

ಧಾರುಣಿಗೆ ಸುಖ ಕೊಡುವ ಸೂರ್ಯನ ।
ಚೋರ ಬೈಯುವನಲ್ಲವೇನೈ ।
ಕ್ಷೀರವೆರೆದರೆ ಫಣಧರಕೆ ವಿಷವೇರುವುದು ನೋಡೆ ॥
ವಾರವಿಲ್ಲನ ವಾರಿನಿಧಿಯಲಿ ।
ನೀರ ಕುಡಿದರದೇನು ದೀಪ್ತಿಯೊ- ।
ಳೇರುವುದು ವಡವಾಗ್ನಿ ಶಾಂತತೆ ಯಿಲ್ಲವೈ ಯದಕೆ ॥೧೭೧॥

ಅನ್ಯರಲಿ ವಿದ್ಯಾವಿನೋದಗ- ।
ಳನ್ನು ವೈಭವಭಾಗ್ಯಸೌಖ್ಯಗ- ।
ಳನ್ನು ನೋಡುತ ಸಹನವಿರದುದ್ವೇಗವೇರುವುದು ॥
ತನ್ನ ದೇಹವ ಸುಟ್ಟ ಪರಿಯಲಿ ।
ಬನ್ನ ಬಡುವನು ಕ್ರೋಧಲಕ್ಷಣ- ।
ವನ್ನು ನೀನೀಪರಿಯಲರಿಯೆಂದನು ಮುರಧ್ವಂಸಿ ॥ ೧೭೨ ॥

[ವಾರುಷ್ಕ್ಯ] ಶಿರಗ ವಾಸಿಪ ಹುತ್ತಿಸಂದದೊ- ।
ಳೆರುವುದಾರಿಗೆ ಮನವು ಬಾಣದ ।
ಪರಿಯೊಳಾರಿಗೆ ದೃಷ್ಟಿ ತೀಕ್ಷ್ಣವದಿರುವುದೈ ಜಗದಿ ॥
ಇರುವುದಗ್ನಿಯ ತೆರದಿ ಭಾಷಣ ।
ಸುರಿಪ ಬೆಂಕಿಯ ಮಳಿಯ ತೆರದ- ।
ಲ್ಲಿರುವುದೈಯತಿ ಪ್ರಖರಭಾಷಣವಾರಿಗೀ ಜಗದಿ ॥ ೧೭೩ ॥

ನ್ನನೆ ಯುಕ್ಕಿನ ಕರಗಸದ ಪರಿ ।
ಯಿರುವುವಾರ ಕ್ರಿಯೆಗಳೆಲ್ಲವು ।
ತರುವೈವೈ ತ್ರಾಸಗಳರಾಶಿಯನಿತರರಲಿ ವಾರ್ಥ ॥
ಎರಡನೇಯರ ಮನಕೆ ಭೇದವ- ।
ನಿರದೆ ಮಾತಾಡುವನು ನೋಡೀ- ।
ನರಸೊಳಧಮಾಧಮನು ಪಾರುಷ್ಯಪ್ರವೀಣನಲಾ ॥ ೧೭೪ ॥

[ಆಜ್ಞಾನಂ] ನರನೆ ನಿನಗಜ್ಞಾನಲಕ್ಷಣ- ।
ವರುಹುವೆನು ನೀನೀಗ ನೋಡ್ಯೆ ।
ಯಿರುವೆನೇ ಶೀತೋಷ ಕಲ್ಲಿಗೆ ಹುಟು ಕುರುಡನಿಗೆ ॥

ಇರುಳುಹಗಲೀ ಭೇದವಿರುವುದೆ ।
ಯುರಿವ ಬೆಂಕಿಗೆ ಮುಂದೆ ಬರುತಿಹ ।
ಸುರಸ ಕುರಸವನೆಲ್ಲ ಸುಡುವರೆ ಭೀತಿ ಯೇನಿಹುದೆ ॥ ೧೭೫ ॥

ಸ್ಪರಿಶಕಿರುವುದೆ ಭೇದ ಲೋಹವ- ।
ನಿರದೆ ಸ್ಪರ್ಶದಿ ಚನ್ನ ಮಾಳ್ಪುದು ।
ಪರಿಪರಿಯ ರಸಗಳಲಿ ತಿರುಗಿಸೆ ಸವೃಟಗರವಿಹುದೆ ॥
ಅರಿವುದೇನದು ಕಹಿಸವಿಯು ಮ- ।
ತ್ತಿರುವುದೇ ಸ್ವಾದೂಪಭೋಗವು ।
ಕಿರಿಹಿರಿದ ನೋಡುವುದೆ ಗಾಳಿಯು ಬೀಸ ಹತ್ತಿದರೆ ॥ ೧೭೬ ॥

ಸೃಷ್ಟಿಯಲ್ಲಜ್ಞಾನಿ ಮನುಜನಿ- ।
ಗಿಷ್ಟ ಕಿಂವಾನಿಷ್ಟವೆಂಬುದು ।
ನಷ್ಟವಹುದೈ ಬುದ್ಧಿ ತಿಳಿಯದು ವಿಧಿನಿಷೇಧಗಳ ॥
ದೃಷ್ಟಿಪಥದಲಿ ಬಂದ ವಸ್ತುವ- ।
ನಿಟ್ಟು ಬಿಡುವುದು ಕೂಸು ಬಾಯಲಿ ।
ಕಷ್ಟಸುಖಗಳನರಿವುದೇನೈ ಕೂಸು ಮನದೊಳಗೆ ॥ ೧೭೭ ॥

ದುರಿತಪುಣ್ಯದ ಖಚಡಿ ಮಾಡುತ- ।
ಲರಿಯನೈ ಯಜ್ಞಾನಿ ಕರ್ಮದ ।
ಪರಿಯ ಕರ್ಮಾಕರ್ಮ ಮಾಳ್ಪನು ಭೇದವಿಲ್ಲದಲೆ ॥
ಇರುವುದಿದುವಜ್ಞಾನಲಕ್ಷಣ- ।
ವಿರುವುವೀ ಪರಿಯಾರುಗುಣಗಳು ।
ಯಿರುವದಾಸುರ ಸಂಪತತಿ ಬಲಿ ಘೋರ ಷಡ್ದೋಷಿ ॥ ೧೭೮ ॥

ತರುಣಿಯಿರಲು ಕೃಶಾಂಗಳಾಕೆಗೆ ।
ಯಿರುವುದೈ ವಿಷಯೇಚ್ಛೆಯಧಿಕದಿ ।
ಯಿರುವುದಾಪರಿ ಬೆಂಕಿ ಮೂರೇ ಸಂಖ್ಯೆ ನೋಡಿದರೆ ॥
ಇರುವುದೈ ಪ್ರಳಯಾಗ್ನಿ ಮೊದಲಿಗೆ ।
ತಿರಿಗಿ ವಡವಾನಳವು ವಿದ್ಯುತು ।
ಪರಿಯಲೀ ಮೂರಗ್ನಿ ಸೇರಲು ವಿಶ ಸುಡುವುದಲಾ ॥ ೧೭೯ ॥

ಮೂರು ದೋಷಗಳೇರಿತೆಂದರೆ ।
ವಾರಿಜಾಸನಗಳವೆ ಮರಣವು ।
ಬಾರದಿರುವುದೆ ಮೂರರಿಮ್ಮಡಿಯಾರು ದೋಷಗಳು ॥
ಧಾರುಣಿಯಲೀಯಾರು ದೋಷವಿ- ।
ಚಾರಿಸಲು ತತ್ಸಂಪತಾಸುರ ।
ಭಾರಿ ಸಂಕಟಕಾಕವಲಾ ಜಗದಿ ನೋಡಿದರೆ ॥ ೧೮೦ ॥

ದುಷ್ಟಗ್ರಹಗಳೊಂದೆ ರಾಶಿಯ- ।
ಲಿಟ್ಟ ತೆರದಲಿ ಬಂದು ಸೇರಲು ।
ಕಷ್ಟಸಂತತಿ ಬಾರದಿಹುದೇ ಜಗದಿ ಮಾನವಗೆ ॥
ದುಷ್ಟವಾಪಗಳೆಲ್ಲ ಕೂಡುತ- ।
ಲಟ್ಟ ಬರುವುವು ನಿಂದೆ ಮಾಳ್ಪಗೆ ।
ತಟ್ಟುವುವು ರೋಗಗಳು ಸರ್ವವು ಮರಣ ಬಂದಿರಲು
॥ ೧೮೧ ॥

ಬಂದು ಸರ್ವಕುಯೋಗಗಳು ತಾ- ।
ವೊಂದೆ ಕುಮುಹೂರ್ತದಲಿ ಸೇರಿರೆ ।
ಬಂದುದಲ್ಲದೆ ಬಿಡುವುದೇನೈ ದುಷ್ಟಪರಿಣಾಮ ॥
ಮಂದಿಯಲಿ ವಿಶ್ವಾಸನಿಟ್ಟವ ।
ಬಂದು ಜೀವ್ಗನು ಚೋರಸಂಗದಿ ।
ಬೆಂದು ಬಳಲುವ ನರ ಮಹಾವೂರದಲಿ ಸಿಲುಕಿದರೆ ॥೧೮೨॥

ದುಷ್ಟ ಪರಿಣಾಮಗಳು ಪರಿಪರಿ ।
ಹುಟ್ಟದಿರುವುವೆ ಕೇಳು ಪಾರ್ಥನೆ ।
ತಟ್ಟಲೀ ದೋಷಗಳು ಬೆನ್ನಟ್ಟುವುದನಿಷ್ಟವದು ॥

ನಷ್ಟವಾಯುರ್ದಾಯವಾಗಿಹ ।
ಬಟ್ಟಿಗೆಟ್ಟಿರುವಾಡುಗಳೆಗಾ ।
ಕೆಟ್ಟ ಕಾರೆಯ ಕಾಯಿ ಮೆಲುವರೆ ಸಿಕ್ಕುವಂದದಲಿ ॥ ೧೮೩ ॥

ಪ್ರಾಪ್ತವಾಗಲು ದೋಷವಾರಿವು ।
ಮುಕ್ತಿಮಾರ್ಗವು ತಿಳಿಯಲಾರದೆ ।
ನಿತ್ಯನೀಸಂಸಾರದಲ್ಲಿಯೆ ಬಿದ್ದು ನರಳುವನು ॥
ಮತ್ತೆಯಧಮಾಧಮ ಕುಯೋನಿಯೊ- ।
ಳೆತ್ತುವನು ಜನ್ಮಂಗಳನು ಸರಿ- ।
ಯುತ್ತ ಜಂಗಮದಿಂದ ಸ್ಥಾವರ ತನಕವಿಳಿಯುವನು ॥ ೧೮೪ ॥

ಆರು ದೋಷಗಳೆಲ್ಲನೀ ಪರಿ ।
ಸೇರುತೊಂದೇ ಕಡೆಗೆಯಾಸುರ ।
ಕ್ರೂರ ಬಹುಗಂಭೀರ ಸಂಪತ್ತಿಸೆವುದೈ ಪಾರ್ಥ ॥
ಧಾರುಣಿಯಲೀ ತೆರದಲುಭಯ ಪ್ರ- ।
ಕಾರಗಳ ಸಂಪತ್ತುಗಳ ವಿ- ।
ಸ್ತಾರದಿಂ ಪೇಳೆದೆನು ಲಕ್ಷಣಪೂರ್ವಕದಲಿವನು ॥ ೧೮೫ ॥

ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ ।
ಮಾ ಶುಚಃ ಸಂಪದಂ ದೈವೀಮಭಿಜಾತೋಽಸಿ ಪಾಂಡವ ॥ ೫ ॥

ಎರಡರೊಳು ದೈವಪ್ರಕೃತಿಯದು ।
ಮೆರೆವ ಮೋಕ್ಷದ ತರಣಿಯುದಯ- ।
ಕ್ಕಿರುವುದೈ ಮುಂಜಾನೆ ಹರಿವುದು ದುಃಖಕತ್ತಲೆಯ ॥
ಎರಡನೆಯದಾಸುರವು ಸಂಸ- ।
ತ್ತಿರುವುದಿದು ಜೀವಕ್ಕೆ ಲೋಕದ ।
ಮೆರೆವ ಶೃಂಖಲೆ ಬಂಧನವಲಾ ನೋಡು ಕೌಂತೇಯ
॥ ೧೮೬ ॥

ನರನೆ ನೀನಿದ ಕೇಳೆದಾಕ್ಷಣ ।
ಧರಿಸ ಬೇಡೈ ಮನದಿ ಭೀತಿಯ ।
ತರಣಿಗೇತಕೆ ಭೀತಿ ಕತ್ತಲೆಯಿಂದ ಕೌಂತೇಯ ॥

ನರರೆ ನೋಡೈಯಾತನೇ ಯಾ- ।
ಸುರಿಕ ಸಂಪತ್ತಿಯಲಿ ಸಿಲುಕುವ- ।
ನರರೆ ಯಾರೀಯಾರು ದೋಷಂಗಳನು ಸಾಕುವನೊ
॥ ೧೮೭ ॥

ನರನೆ ನೀ ದೈವಿಕ ಪ್ರಕೃತಿಯ- ।
ಳ್ಗಿರುವಿ ಸದ್ಗುಣಮೂರ್ತಿ ನಿನಗೀ- ।
ತೆರದ ಭೀತಿಯುದೇಕೆ ನೀ ಮೋಕ್ಷಕ್ಕೆ ಸ್ವಾಮಿಯಲಾ ॥
ನರನೆ ದುರ್ಗುಣಭರಿತವಿರುವಾ- ।
ಸುರಿಕ ಸಂಪತ್ತಿಲ್ಲ ನಿನ್ನಲಿ ।
ಧರಿಸದಿರು ಸಂದೇಹ ಮನದಲಿ ಪಾರ್ಥ ನೋಡಿದಿಯಾ। ೧೮೮ ॥

ದ್ವೌ ಭೂತಸರ್ಗೌ ಲೋಕೇಽಸ್ಮಿನ್ ದೈವ ಆಸುರ ಏವ ಚ ।
ದೈವೋ ವಿಸ್ತರಶಃ ಪ್ರೋಕ್ತ ಆಸುರಂ ಪಾರ್ಥ ಮೇ ಶೃಣು ॥ ೬ ॥

ನರನೆ ದೈವಾಸುರಗಳೆಂಬೀ- ।
ಯೆರಡು ಸಂಪದ್ಯುಕ್ತಜನರಾ- ।
ಚರಿಸುತಿಹ ಮಾರ್ಗಗಳು ಬೀರಾಗಿಹುಹು ನೋಡಿದರೆ ॥

ಪರಿಗಳೆವು ಕೇಳ್ ಸಿದ್ಧತತ್ತ್ವಗ- ।
ಳೆರುವುವಲ್ಲೈ ವೂರ್ವದಿಂದಲೆ ।
ಯಿರುವುದು ನಿಶಾಚರರ ವ್ಯವಹಾರಕ್ಕೆ ರಾತ್ರಿಯದು ॥ ೧೮೯ ॥

ಸುರನರರಿಗುತ್ತಮಪ್ರಕಾರದಿ- । ಪರಿಯಲಾಸುರ ಪ್ರಕೃತಿ ದೇಹವ ।
ಳಿರುವುದೈ ವ್ಯವಹಾರಯೋಗ್ಯವು । ಧರಿಸದಲೆ ಗೋಚರಕೆ ಬರುವುದೆ ।
ನರನೆ ನೋಡೈ ಹಗಲುಬೆಳಕಿಲಿ ನಡೆಯುವರು ನಿರುತ ॥ ಮರಕೆ ಮರ ತಿಕ್ಕದಲೆ ಬೆಂಕಿಯ ಕಿಡಿಯು ಹೊರಡುವುದೆ ॥
ನರನೆ ಕೇಳೀ ತೆರದಿ ಜಗದ- । ನರಶರೀರವನಾಶ್ರಯಿಸಿ ತುಂ- ।
ಳ್ಲಿರುವುದೈ ಮಾರ್ಗಗಳ ದ್ವಂದ್ವವು । ಬಿರುವುದೀ ಯಾಸುರಿಕ ಸಂಪತು ।
ಧರೆಯಲಿದು ನಡೆದಿಹುದು ಪೂರ್ವಾಪರಸುಸಂಮತವು ಬರುವುದಿದು ಗೋಚರಕೆ ನರದೇಹದಲಿ ಪೂರ್ಣದಲಿ ॥ ೧೪೨ ॥
॥ ೧೪೦ ॥

ನರನೆ ನಿನಗಾನರುಹಿದೆನು ನಿ- । ವಸುಮತಿಯಲಾ ಕಬ್ಬು ಬೆಳೆದರೆ ।
ಸ್ತರದಿ ದೈವಪ್ರಕೃತಿಗುಣಗಳ । ರಸ ಬೆಳೆವುದಾ ಮಾನದಿಂದಲೆ ।
ಮರಳಿ ನಿನಗಾನೊರೆವೆನಾಸುರ ಪ್ರಕೃತಿಲಕ್ಷಣವ ॥ ಯಸಮವಿಕ್ರಮ ಕೇಳು ದೇಹವು ಬೆಳೆದ ಮಾನದಲಿ ॥
ನರನೆ ವಾದ್ಯದ ಹೊರತು ನಾದವ- । ವಸುಮತಿಯಲಾಸುರ ಪ್ರಕೃತಿಯಾ- ।
ನರಿಯ ಬಹುದೇ ಪುಷ್ಪವಿಲ್ಲದೆ । ಕುಸುರಿ ಬೆಳೆವುದು ನರಶರೀರದಿ ।
ದೊರೆಯುವುದೆ ಮಕರಂದ ಜಗದಲಿ ನೋಡು ಕೌಂತೇಯ ಯುಸುರುವೆನು ನಾ ನಿನಗೆ ಯಾಸುರಪ್ರಕೃತಿಮಾನವರ
॥ ೧೪೧ ॥ ॥ ೧೪೩ ॥

ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನ ವಿದುರಾಸುರಾಃ ।
ನ ಶೌಚಂ ನಾಪಿ ಚಾಚಾರೋ ನ ಸತ್ಯಂ ತೇಷು ವಿದ್ಯತೇ ॥ ೭ ॥

[ಪ್ರವೃತಿಂ ಚ ನಿವೃತ್ತಿಂ ಚ] ನರನೆ ಪುಣ್ಯಾಚಾರವಿಷಯದೊ- । ನರನೆ ನೋಡೀ ತೆರದಿ ಯಾರಾ- ।
ಳೆರದು ಕೇಳು ಪ್ರವೃತ್ತಿ ಪಾವಾ- । ಸುರಪ್ರಕೃತಿಯನು ಚರಿಸುತಿಹರೋ ।
ಚರಣದಿಂದ ನಿವೃತ್ತಿ ಯಂತಃಕರಣದೊಳಗಿರದು ॥ ಅರವಿರದು ಮಾರ್ಗದ ಪ್ರವೃತ್ತಿನಿವೃತ್ತಿನಾಮಕದ ॥
ಒರುವುದೈ ಕತ್ತಲೆಯ ಮೇಣೀ । [ನ ಶೌಚಂ] ಅರಿಯಲಾರರು ಕನಸಿನಲ್ಲಾ- ।
ತೆರದ ಗುಣಧರ್ಮಗಳು ಬಾರವು । ದರು ಶುಚಿತ್ವವನವರು ಪಾರ್ಥನೆ ।
ನರನೆ ನೋಡಾ ಕೋಶಕೀಟಕದಂತೆ ಮಾಡುವನು ।೧೪೪॥ ತೊರೆಯ ಬಲ್ಲುದೆ ಕಾರ್ಷ್ಣ್ಯವನು ಕಲ್ಲಿದ್ದಲಿಯು ನೋಡೆ ॥೧೪೬॥

ಗೂಡ ಕಟ್ಟುವ ಕೋಶಕೀಟಕ । ಮರಳಿ ವಾಯಸ ಧವಲ ವರ್ಣವ ।
ಮೂಢತನದಲಿ ಹಿಂದೆಮುಂದಕೆ । ಧರಿಸುವುದು ನೋಡಲಿಕೆ ಸಿಗುವುದು ।
ನೋಡಲಾರದು ಗೂಡಿನಲಿ ಬಾಗಿಲನು ಮಾಡದಲೆ ॥ ದುರುಳರಕ್ಕಸರಿಂಗೆ ಮಾಂಸದ್ವೇಷ ಬರಬಹುದು ॥
ಆಡಲಾರದು ಹೊರಗೊಳಗೆ ಮನೆ । ನರನೆ ನೋಡೀ ಪರಿಗಳಾದರು ।
ಮಾತಿಯದರಲಿ ಸಾವುದಲ್ಲವೆ । ಧರೆಯಲಾಸುರ ಪ್ರಕೃತಿ ಮನುಜಗೆ ।
ಮೂಢ ಮಾನವನೀತೆರದಿ ಭವದೊಳಗೆ ಸಿಲುಕುವನು ಯಿರುವುದೇನೈ ಶೌಚ ಮದ್ಯದ ಪಾತ್ರ ಪಾವನವೆ ॥ ೧೪೮ ॥
॥ ೧೪೫ ॥

ಕೊಟ್ಟ ವಿತ್ತದ ಗಂಟ ಹಿಂದಕೆ । [ನಾಪಿ ಚಾಚಾರಃ] ನರನೆ ಕೇಳ್ ಶಾಸ್ತ್ರೋಕ್ತಕರ್ಮಾ- ।
ಕೊಟ್ಟ ಬಿಡುವನೊ ತಿಂದು ಬಿಡುವನೊ । ಚರಣದಲಿ ಮನದಿಚ್ಛೆ ಯಿರದೈ ।
ಎಂಟ್ಟು ಮನದಿ ವಿಚಾರ ಬಾರದೆ ಮೂರ್ಖಮಾನವನು ॥ ಗುರುಹಿರಿಯಾಜ್ಞೆಯನು ಹಾರೈಸರು ಕಣಾ ಪಾರ್ಥ ॥
ಪ್ರಷ್ಟಜೋರಗೆ ಸಾಲ ಕೊಟ್ಟರೆ । ಅರವು ಮೇಣಿಲ್ಲಿಹುದು ಧರ್ಮಾ- ।
ನಷ್ಟವಹುದೈ ಬಂಡವಾಳವ । ಚರಣವನು ದ್ವೇಷಿಪರು ಮೂರ್ಖರು ।
ದೃಷ್ಟಿಪಥದಲಿ ಬಾರಲಾರದು ಬಂಡವಾಲವದು ॥ ೧೪೬ ॥ ನರನೆ ನೋಡೀ ಯಾಸುರಿಕ ಸಂಪತಿನ ಲಕ್ಷಣವು ॥ ೧೪೪ ॥

ಅಡು ಬೇಕಾದಂತೆ ಮೆಲುವುದು ।
ಕಾಡಿನಲಿ ತೊಪ್ಪಲನು ಗಾಳಿಯು ।
ನೋಡುವುದು ಬೇಕಾದ ಕಡೆಯಲಿ ಪಾರ್ಥ ನೋಡಿದಿಯಾ ॥
ರೂಢಿಯಲಿ ನೋಡಣ್ಣ ಪೇಳಲು ।
ನೋಡುವುದೆ ಕೇಳದು ನಿಸಿದ್ಧವ ।
ಗಾಢತನದಲಿ ಸುಟ್ಟು ಬಿಡುವುದು ಸಿಕ್ಕಿದ ದನೆಲ್ಲ ॥ ೨೦೦ ॥

ನರನೆ ನೋಡಾಸುರಿಕ ಪ್ರಕೃತಿಯ ।
ನರರು ಮನ ಬಂದಂತೆ ತಮ್ಮಾ- ।
ಚರಣವನು ಮಾಡುವರು ನೋಡರು ವಿಧಿನಿಷೇಧಗಳ ॥
[ನ ಸತ್ಯಂ] ನಿರುತ ಸತ್ಯದ್ವೇಷಿಗಳಲಾ ।
ತೊರೆದು ಕೊಂಡಿಯು ಚೆಳ್ಳು ಪ್ರೇಮದ ।
ಭರವ ತೋರಿಸ ಹತ್ತಿದರೆ ಸಾಧ್ಯವು ಕಣಾ ಸತ್ಯ ॥ ೨೦೧ ॥

ಬರುವುದೇನೈ ಗಾಳಿ ಗುದದಿಂ ।
ಪರಿಮಳಿ ಸುವಾಸಿಕವು ನೋಡಾ- ।
ಪರಿಯಲಾ ದುರ್ಲಭವು ಕೇಳೈ ಸತ್ಯನಿವರೊಡನೆ ॥

ನರನೆ ನೋಡು ಸ್ವಭಾವದಿಂದಲಿ ।
ಯಿರುವರೀ ಯಾಸುರಪ್ರಕೃತಿಯರು ।
ನಿರುತ ದುಷ್ಟರು ಸತ್ಯಹೀನರು ನೋಡು ಕೌಂತೇಯ ॥ ೨೦೨ ॥

ಅರುಹಲೆಂತಾನವರ ಭಾಷಣ ।
ಪರಿಯನತಿವಿಸ್ತಾರದಿಂದಲಿ ।
ಯಿರುವುದೇನೈ ಸೊಗಸಿನವಯವ ವೊಂಟಿಯಲಿ ಪಾರ್ಥ ॥
ಇರುವುದೀಪರಿಯಾಸುರಿಕ ಗುಣ ।
ನರನೆ ನಾನು ಪ್ರಸಂಗವಶದ- ।
ಲ್ಲರುಹುವೆನು ನಾನಿವರ ಭಾಷಣವರಿಯ ಕೇಳುವುದು ॥ ೨೦೩ ॥

ಗುಡುಗುಡಿಯು ಬಾಯಿಂದ ಹೊಗೆಯನು ।
ಬಿಡುವುದಲ್ಲವೆ ನೋಡು ಪಾರ್ಥನೆ ।
ನುಡಿವ ಮಾತುಗಳೆಲ್ಲ ಹೊಗೆಯಂದದಲಿ ಹೊರಡುನ್ನವು ॥
ಹಿಡಿಯ ಬಹುದೇ ಕೈಯೊಳದ ಗಡ- ।
ಬಿಡಿಸಿ ಹಿಡಿಯಲು ಯತ್ನಿಸಿದರದು ।
ಕೊಡುವುದೇ ಸುಖ ವುಸುರ ಕೆಡಿಪುದು ಮೂಗಿನಲಿ ಸೇರಿ ॥೨೦೪॥

ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್ ।
ಅಪರಸ್ಪರಸಂಭೂತಂ ಕಿಮನ್ಯತ್ಕಾಮಹೈತುಕಮ್ ॥ ೮ ॥

[ಅಸತ್ಯಂ] ಮೆರೆಯುತಿರುವುದನಾದಿ ವಿಶ್ವವು ।
ಯಿರುವನೀಶ್ವರ ಶ್ರೇಷ್ಠನಿದರ- ।
ಲ್ಲಿರುವನಾತನೆ ಜಾಲಕನಲಾ ಸರ್ವವಿಶ್ವದಲಿ ॥
ಪರಿಪರಿಯ ನಿಗಮಾಗಮಂಗಳು ।
ಮೆರೆವುವಾತನ ನ್ಯಾಯಮೂರ್ತಿಗ- ।
ಳಿರುವರೀತನ ರಾಜ್ಯದಲಿ ನ್ಯಾಯವನು ಕೊಡುವವರು ॥ ೨೦೫ ॥

ವೇದಗಳಿಗನ್ಯಾಯ ತೋರಲು ।
ವಾದವಿಲ್ಲದೆ ನರಕಶಿಕ್ಷೆಯು ।
ವೇದಮತದಲಿ ನ್ಯಾಯಿಯೆಂದರೆ ಸ್ವರ್ಗಸುಖವಹುದು ॥
ಅದುದೀಪರಿ ವಿಶ್ವರಚನೆಯು ।
ಬೋಧಿಸುವರಿದಸತ್ಯವೆನುತಲಿ ।
ಮೇದಿನಿಲಿ ಯಾಜ್ಞಿಕರು ಯಜ್ಞಾದಿ ಮೋಸಹೋಗುವರು ॥ ೨೦೬ ॥

ಮರಳಿ ದೇವರ ಪೂಜೆ ಮಾಳ್ಪರು ।
ಮರುಳರೆನುವರು ಮೂರ್ತಿಪೂಜಕ ।
ರಿರುವರೆನುವರು ನಿಂದಿಸುವರೀ ತೆರದಿ ಜಗದೊಳಗೆ ॥

ಅರಿವರಾರು ಸಮಾಧಿಸುಖವನು ।
ಧರಿಸುತಲಿ ಕಾಷ್ಠಾಯವಸ್ಥವ ।
ತೊರೆಯುವರು ಸಂಸಾರಸುಖವನು ಯೋಗಿಯಾಗುವರು ॥೨೦೭॥

ಧರೆಯಲೀ ನಿಜ ವಿಷಯಭೋಗವ ।
ಯಿರುವುದೆನುವರು ಪುಣ್ಯಕಾರಕ ।
ತೊರೆವುದೀ ವಿಷಯೋಪಭೋಗವ ದುರಿತವೆನ್ನುವರು ॥
ಧರೆಯೊಳಿಹ ಧನಿಕರನು ತಾಂ ಸಂ- ।
ಹರಿಸಿ ಧನದಪಹಾರ ಮಾಡಲು ।
ದೊರಕುವುದು ಧನ ಮನ್ನಿಸುವರಿದ ಪುಣ್ಯಫಲವೆಂದು ॥ ೨೦೮ ॥

ಶಕ್ತನಾರೀ ಜಗದೊಳಾತನು ।
ಶಕ್ತಿಬಲದಲಶಕ್ತನನು ಕೊ- ।
ಲ್ಲುತ್ತ ಪೋದರೆ ಪಾಪವೆಂಬುದಸತ್ಯವೆನ್ನುವರು ॥
ಸತ್ಯವಾದರೆ ದೊಡ್ಡ ಮಾನಾ ।
ಶಕ್ತಿಹೀನನ ಕೊಂದು ಬಿಡುವುದು ।
ನಿತ್ಯನಿದ ನೋಡುವೆವು ನಾನಿಗೆ ಪಾಪ ಬಹುದೇನು ॥ ೨೦೯ ॥

[ಅಪ್ರತಿಷ್ಠಂ] ನರರುಭಯಕುಲ ನೋಡಿ ತದನಂ-।
ತರದಿ ವರಸುಮುಹೂರ್ತ ನೋಡುತ।
ವಿರಚಿಸುವರೈ ಲಗ್ನಕಾರ್ಯವ ವೃದ್ಧಿಗೋಸುಗುವೆ ॥
ಧರೆಯಲಾ ಪಶುಪಕ್ಷಿ ಪರಿಪರಿ।
ಮೆರೆವುದವುಗಳಸಂಖ್ಯಸಂತತಿ।
ಯಿರುವುದೇ ಸುಮುಹೂರ್ತ ಭೂಸುರಮಂತ್ರವವುಗಳಿಗೆ
॥ ೨೧೦ ॥

ಚೋರತನದಲಿ ತಂದ ಧನವು ವಿ-।
ಹಾರಯೋಗ್ಯವಿದಲ್ಲವೆಂದರೆ।
ಧಾರುಣಿಯಲದು ನಿಷದ ಪರಿ ಬಾಧಿಸುವುದೇ ನೋಡೆ ॥
ಯಾರಿಗೀ ಜಗದೊಳಗೆ ತಾಂ ವ್ಯಭಿ-।
ಚಾರ ಮಾಡಲು ಕುಷ್ಠ ಬರುವುದು।
ಕಾರಣವ ಕೇಳುವರು ನ್ಯಾಯಾನ್ಯಾಯ ತಿಳಿಯರಲಾ॥೨೧೧॥

[ಅನೀಶ್ವರಂ] ಇರುವನೇ ವಿಶ್ವಕ್ಕೆ ಸ್ವಾಮಿಯು।
ಯಿರುವುದೇ ಧರ್ಮದಲಿ ಸೌಖ್ಯವು।
ಯಿರುವುದೇನೈ ದುಃಖ ಪಾಪಾಚರಣದಲಿ ನೋಡೆ ॥
[ಕಿಮನ್ಯತ್] ಧರೆಯಲೀತೆರದಲಿ ಶುಭಾಶುಭ-।
ವಿರುವ ಕರ್ಮದ ಮಾಡುವವರಿಗೆ।
ದೊರೆಯುವುದು ಪರಲೋಕದಲಿ ಫಲವೆಂದು ಮನ್ನಿಸಲು
॥ ೨೧೨ ॥

ಇರುವನೀಶ್ವರನೆಲ್ಲಿ ದೃಗ್ಗೋ-।
ಚರಕೆ ಬಾರನಲಾ ಜಗತ್ತಿಲಿ।
ದುರಿತಸುಕೃತದ ಫಲವ ಪ್ರಾಣಿಯು ಭೋಗಿಸುವುದೆಂತು ॥
ಮರಣ ಬಂದು ಶರೀರ ಸಾಯಲು।
ಬರುವುದೆಂತೀ ಫಲಗಳವನಿಂ-।
ಗಿರುವುದೆಂತಾ ಪ್ರಾಣಿ ಮರಣದನಂತರದಿ ತಿಳಿಯೆ ॥ ೨೧೩ ॥

[ಕಾಮಹೈತುಕಂ] ಸುರಪನಮರಾವತಿಯೊಳುರ್ವಶಿ-।
ತರುಣಿಯೊಳು ಸುಖ ಮಾನಿಸುವನಾ-।
ತೆರದಿ ನರಕದ ಕೃಮಿಗೆ ನರಕದಿ ಕಾಮಸುಖವಿಹುದು ॥
ನರಕವಥವಾ ಸ್ವರ್ಗವದರಿಂ।
ದುರಿತಸುಕೃತದ ಫಲವಿದೆಂಬುದು।
ಯೆರಡು ಕಡೆಯಲಿ ಸುಖವು ನೋಡೈ ಕಾಮದುಪಭೋಗ
॥ ೨೧೪ ॥

[ಅಪರಸ್ಪರಸಂಭೂತಂ] ಧರಣಿಯಲಿ ಕಾಮೇಚ್ಛೆಯಿಂದಲಿ।
ತರುಣಿಪುರುಷರು ಕೂಡಲೊಪ್ಪಿಗೆ।
ಬರುವುದೈ ಜಗಕೆಲ್ಲ ಸುಖದುತ್ಪತ್ತಿ ಪ್ರಜೆಗಳಿಗೆ ॥
ನರನು ಸ್ವಹಿತಕೆನುತ್ತ ಪ್ರೇಮದಿ।
ದೊರಕಿಸಿದ ಸುಖಸಾಧನಗಳಾ-।
ನರನಿಗಿಚ್ಛಾಪೂರ್ತಿಯಾಗಲು ದ್ವೇಷ ಕಾರಣವು ॥ ೨೧೫ ॥

ಇರುವನಾರೀ ಜಗದಿ ಕಾಮದ।
ಹೊರತು ಜಗದುತ್ಪತ್ತಿಕಾರಣ।
ಧರೆಯಲಿದು ಸಿದ್ಧಾಂತವೆನುತಿಹರಾಸುರರುಜನರು ॥
ನರನೆ ನೋಡೀ ತೆರದ ದುಷ್ಟರ-।
ನಿರದೆ ವಿಸ್ತರಿಸಿದೆನು ಸಾಕಿದು।
ಬರಿದೆ ಕಾಲವ್ಯಯವಲಾ ವಿಸ್ತಾರವೀತೆರದ ॥ ೨೧೬ ॥

ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ।
ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋಽಹಿತಾಃ ॥ ೯ ॥

ನತನೆ ನೋಡಾಸುರ ಪ್ರಕೃತಿಯಲಿ।
ಚರಿಸುವರು ಪರಮೇಶ್ವರನ ಧಿ-।
ಕ್ಕರಿಸುವರು ಬಾಯಿಂದಲುಚ್ಚಾರಿಸರು ನಾಮವನು ॥
ಧರೆಯಲಿವರಿಗೆ ನಿಶ್ಚಯಾತ್ಮಕ-।
ವಿತುವ ಸಂಗತಿಯಿಲ್ಲ ಚಂಚಲ-।
ರಿರುವರೈ ಮತ್ತೇನ ಹೇಳಲಿ ವಿಸ್ತರವನವರ ॥ ೨೧೭ ॥

ನಾಸ್ತಿಕನು ತಾನಿಹೆನೆನುತ ಬ-।
ಹ್ವಾಸ್ಥೆಯಿಂದ ಪ್ರಸಿದ್ಧ ಮಾಳ್ಪನು।
ವಸ್ತಿ ಹೊಲಿಯರದೆಂದು ತಿಳಿಯಲಿಕಸ್ಥಿಸ್ಥಪನೆಯೆ ॥
ನಾಸ್ತಿಕನು ತಾನಿಹೆನೆನುತ್ತಲಿ।
ಗುರ್ತುವೆಂದರೆ ಪಾಪಪುಣ್ಯವ।
ಧಾಸ್ತಿಯಿಂದಲೆ ಮಾಳ್ಪುದೆಂದರೆ ಯಿರುವುದೀಯಸ್ಥಿ ॥ ೨೧೮ ॥

ಇರದಲಾ ಸ್ವರ್ಗದಲಿ ಶ್ರದ್ಧೆಯು।
ಮರಳಿ ನರಕದ ಭೀತಿಯಿಲ್ಲೈ
ಯಿರವಲಾ ಮನದಲ್ಲಿ ಯಾತಗೆ ವಿಧಿನಿಷೇಧಗಳು ॥
ನರನೆ ನೋಡೀ ತೆರದಿ ಯಾಸುರ-।
ನರರು ಸಿಲುಕುತ ದೇಹಪಾಶದಿ।
ನೆರಳುವರು ವಿಷಯಸ್ವರೂಪದ ಕೆಸರೊಳಗೆ ನಿತ್ಯ ॥ ೨೧೯ ॥

ಇರುವರವರಪವಿತ್ರಜಗದಲಿ ।
ಮೆರೆವ ಗುಳ್ಳೆಗಳಂತೆ ಯಸ್ಥಿರ ।
ಕೆರೆಯೊಳಗೆ ಮಿನುಗಳ ಹಿಡಿವರೆ ಬೆಸ್ತ ಬಲೆಯನ್ನು ॥
ಭರದಿ ಹಾಕುವ ತೆರದೊಳವರಿಗೆ ।
ಮರಣ ಬರಲು ಸಮೀಪ ಪರಿಪರಿ ।
ಯಿರುವ ರೋಗಗಳೆಲ್ಲ ಬರುವ್ವವು ಹಿಡಿದು ನುಂಗುವ್ವವು
॥ ೨೨೦ ॥

ಧರೆಯೊಳಗೆ ಪ್ರಜೆಗಳಿಗನಿಷ್ಟವು ।
ಬರುವುದೆಂದರೆ ಧೂಮಕೇತುವು ।
ಬರುವುದಲ್ಲವೆ ಗಗನದಲಿ ಕೇಳಾತೆರದಿ ವಾರ್ಧ ॥
ಧರೆಗೆ ಬರಲು ವಿನಾಶಕಾಲವು ।
ಬರುವರೀಯಾಸುರಸ್ವಭಾವದ ।
ನರರು ಜಗದಲಿ ಧೂಮಕೇತುಗಳಶುಭಸೂಚಿಗಳು ॥೨೨೧॥

ಬಿತ್ತಿದರೆ ಬೀಜಗಳನಶುಭದ ।
ಯೆತ್ತುವುವು ಮೊಳಕೆಗಳಶುಭವೇ ।
ಹತ್ತಿ ಬಿತ್ತಲು ಭತ್ತ ಬರುವುದೆ ಬೇವು ಮಾವಹುದೇ ॥
ಪೃಥ್ವಿಯಲ್ಲೀ ಪಾಪಮೊತ್ತದ ।
ಕೀರ್ತಿಸ್ತಂಭವು ಆಸುರಿಕನರ ।
ವಿಸ್ತರಿಸಲೇನಿವರ ದುರ್ಗುಣವೆಷ್ಟು ಪರಿಯಿಂದ ।' ೨೨೨ ॥

ಮುಂದೆ ತಂದಿಡುವನು ಕಣಾ ದಂಭವನು ಮಾನವನು ॥
ತಂದು ಮದ್ಯವ ಮದಗಜಕೆ ತಾಂ ।
ಚಂದದಿಂ ಕುಡಿಸಿದರೆ ಬಹುಪರಿ ।
ಯಿಂದಲಧಿಕೋನ್ಮತ್ತವಾಗುವುದಲ್ಲವೇ ವಾರ್ಧ ॥ ೨೨೫ ॥

ಮೊದಲೆ ಯಾಸುರ ನರರೊಳಂಗದಿ ।
ಮದವು ತುಂಬಿಹುದಲ್ಲವೇ ಮ- ।
ತ್ತದರೊಳಗೆ ದಂಭದಲಿ ದುಡ್ಡಾಚಾರ್ಯರೆನಿಸುವರು ॥

ಬಂದುದೆಲ್ಲವ ಸುಡುವ್ವದಲ್ಲವೆ ।
ಹಿಂದುಮುಂದನು ಬೆಂಕಿ ನೋಳ್ಪುದೆ ।
ಚಂದದಿಂದೀ ಪರಿಯಲಾಸುರ ಪ್ರಕೃತಿಮಾನವರು ॥
ಹಿಂದುಮುಂದನು ನೋಡದಲೆ ಬೇ- ।
ಕೆಂದು ಸರ್ವವ ನಾಶ ಮಾಳ್ಪರು ।
ಮುಂದೆ ನಾ ಪೇಳುವೆನು ನಾಶವನೆಂತು ವಹಡುವರು ॥ ೨೨೩ ॥

ಕಾಮಮಾಶ್ರಿತ್ಯ ದುಷ್ಪೂರಂ ದಂಭಮಾನಮದಾನ್ವಿತಾಃ ।
ಮೋಹಾದ್ ಗೃಹಿತ್ವಾಸದ್ಗ್ರಾಹಾನ್ ಪ್ರವರ್ತಂತೇಽಶುಚಿವ್ರತಾಃ ॥ ೧೦ ॥

ಹಿಡಿಯ ಬಹುದೇ ಜಲವ ಬಲೆಯಲಿ ।
ಸುಡುವ ಬೆಂಕಿಗೆ ಕಾಷ್ಠಹಾಕಲು ।
ನುಡಿವುದೇನದು ಬೇಡ ಸಾಕಾಯ್ತೆಂದು ಮಾನವಗೆ ॥
ಪೊಡವಿಯಲ್ಲೀ ತೆರದಿ ದುರ್ಧರ ।
ಗೊಡವೆಯಿಂದದಿ ಸರ್ವಕಾಲದಿ ।
ಹಿಡಿವರಾಶೆಯನಾಸುರಿಕ ನರರೈ ಬುಭುಕ್ಷಿತರು ॥ ೨೨೪ ॥

ತಂದು ಕಾಮನ ಮನಮನೆಯೊಳಾ- ।
ನಂದದಿಂದಾಶ್ರಯವ ಕೊಡುವರು ।
ಮುಂದೆ ತಂದಿಡುವನು ಕಣಾ ದಂಭವನು ಮಾನವನು ॥
ತಂದು ಮದ್ಯವ ಮದಗಜಕೆ ತಾಂ ।
ಚಂದದಿಂ ಕುಡಿಸಿದರೆ ಬಹುಪರಿ ।
ಯಿಂದಲಧಿಕೋನ್ಮತ್ತವಾಗುವುದಲ್ಲವೇ ವಾರ್ಧ ॥ ೨೨೫ ॥

ಮೊದಲೆ ಯಾಸುರ ನರರೊಳಂಗದಿ ।
ಮದವು ತುಂಬಿಹುದಲ್ಲವೇ ಮ- ।
ತ್ತದರೊಳಗೆ ದಂಭದಲಿ ದುಡ್ಡಾಚಾರ್ಯರೆನಿಸುವರು ॥

ಮುದದೊಳವರು ದುರಾಗ್ರಹದಿ ಬಹು ।
ಕುದಿವರಲ್ಲವೆ ಮೂರ್ಖತನ ಮ- ।
ತ್ತದರೊಳಗೆ ಕೂಡಿದರೆ ನಿಶ್ಚಯವಳೆದು ಹೋಗುವುದು ॥ ೨೨೬ ॥

ಪರರ ಪೀಡಿವುದೆಂತು ಸಂತತ ।
ಪರರ ಹಾನಿಯನೆಂತು ಮಾಳ್ಪುದು ।
ಯಿರುವುದೀಪರಿ ಕಾಂಕ್ಷೆಯವರಿಗೆ ರಾತ್ರಿಹಗಲಿನಲಿ ॥
ಮೆರೆಸುವರು ತಮ್ಮ ಪ್ರಸಿದ್ಧಿಯ ।
ಧರೆಯೊಳನ್ಯರ ತುಚ್ಛ ಮಾಳ್ಪರು ।
ಹರಿವುದಿಚ್ಛೆಯು ದಶದಿಶೆಗಳತಿ ಕಡಿಮೆ ಯೆನಿಸುವ್ವವು ॥ ೨೨೭ ॥

ನರನೆ ನೋಡಾಕಳನು ಹೊಲದಲಿ ।
ತಿರುಗಲಿಕೆ ಬಿಟ್ಟರಲು ಹರ್ಷದ ।
ಭರದೊಳದು ಮೇಯುವುದು ಬೇಕಾದಲ್ಲಿ ಕೌಂತೇಯ ॥
ಪರಿಯಲೀ ಯಾಸುರ ಸ್ವಭಾವದ ।
ನರನು ನೋಡಭಿಮಾನಭರದಿಂ ।
ಚರಿಸುವನು ಪಾಪಾಚರಣಜಲಿ ಹರ್ಧಪನು ನಿತ್ಯ ॥ ೨೨೮ ॥

ಚಿಂತಾಮಪರಿಮೇಯಾಂ ಚ ಪ್ರಲಯಾಂತಾಮುಪಾಶ್ರಿತಾಃ ।
ಕಾಮೋಪಭೋಗಪರಮಾ ಏತಾವದಿತಿ ನಿಶ್ಚಿತಾಃ ॥ ೧೧ ॥

ನರನೆ ನೋಡೀ ಸಾಧನದಲಾ ।
ನರರು ಕರ್ಮಾಚರಣ ಮಾಳ್ಪರು ।
ಮರಣ ಬಂದರದೇನು ಸುಖದಿಚ್ಛೆಯನು ಮಾಡುವರು ॥
ಇರುವುದೀಪರಿ ಯಿಚ್ಛೆ ಗಗನಕೆ ।
ಹಿರಿದೆನಿಸಿ ವಾತಾಳಕಿಂತಲು ।
ಯಿರುವುದಿದು ಕೇಳಿಚ್ಛೆ ವಿಸ್ತಾರದಲಿ ಹಿರಿದಿಹುದು ॥ ೨೨೯ ॥

ಇರುವುದಾದರವಾರ ವಿಷಯವು ।
ದೊರಕಿಸಲು ವಿಷಯೋಪಭೋಗವ ।
ನಿರುತನಿರುವರು ತತ್ಪರರು ಚಿಂತಾಯುತರು ಸತತ ॥
ನರನೆ ನೋಡೀ ಪರಿಯನೆಲ್ಲವ- ।
ನರುಹಲೆಂತೈ ನಿನಗೆ ನಾ ವಿ- ।
ಸ್ತರಿಪೆ ವಿಷಯಾಸಕ್ತಿಯನು ಸಂಕ್ಷೇಪದಲಿ ಪಾರ್ಥ ॥ ೨೩೦ ॥

ನರನೆ ಪರಿಕಿಸಲಿಚ್ಛೆ ಯಿದು ಗೋ- ।
ಚರಿಸುವುದು ತುಸವಣುವಿನಷ್ಟೇ ।
ಮೆರೆವ ಮೂಜಗ ಸಾಲದಿಚ್ಛೆಗೆ ಯಿಹುದು ದುಷ್ಪೂರ ॥
ಧರೆಯಲಾ ಸಂನ್ಯಾಸಿ ಗುರು ಹಾ- ।
ಕಿರುವ ರೇಖೆಯನಾಕ್ರಮಿಸುವನೆ ।
ಯಿರುವುದೀಪರಿ ಯಿಚ್ಛೆ ಗುರ್ವಾಜ್ಞಾಪ್ರಮಾಣದೊಲು ॥ ೨೩೧ ॥

ತರುಣಿಯರ ಗಾಯನವ ಕೇಳು- ।
ತ್ತಿರುವುದೊಂದಭಿಲಾಷ ಕರ್ಣಿಗೆ ।
ತರುಣಿರೂಪವ ನೋಡುವಿಚ್ಛೆಯು ಸರ್ವಕಾಲದಲಿ ॥
ನಿರುತ ಸರ್ವೇಂದ್ರಿಯಕೆ ತರುಣಿಯ ।
ಸರಸದಾಲಿಂಗನವ ಬೇಕೆಂ- ।
ದಿರುವುದಿಚ್ಛೆಯು ಕೇಳು ಅಸುರಪ್ರಕೃತಿಲಕ್ಷಣವು ॥ ೨೩೨ ॥

ಸತಿಯು ಸುಗುಣಳು ಸಂಕಟದಿ ನಿಜ ।
ಪತಿಯ ತ್ಯಜಿಸದಲೇಕನಿಷ್ಠೆಯು ।
ಗತಿಯಲಂತರಿಸುವಳೆ ಕೇಳಾ ತೆರದಿ ಕಲಿಪಾರ್ಥ ॥
ಕ್ಷಿತಿಯಲಾ ಚಿಂತೆಯನು ಬಿಡರೈ ।
ಯತಿನಿಲಕ್ಷಣ ಚಿಂತೆಯಾದರು ।
ಕ್ಷಿತಿಯೊಳವರನು ಬಿಡದಲಾ ಅನ್ಯೋನ್ಯಪ್ರೇಮವದು॥೨೩೩॥

ತರುಣಿಯರ ಸುಖಭೋಗ ದೊರೆಯಲು ।
ನಿರುತವಮೃತ ನಿವಾಳಿಸುವ ಪರಿ- ।
ಯಿರುವುದೈ ಮನದಿಚ್ಛೆ ತುಚ್ಛಿ ಪರವರು ಪೀಯೂಷ ॥
ಧರೆಯೊಳೊಂದೇ ಸ್ತ್ರೀಯು ಸುಖಕರ ।
ಪರಿಯನೆರಡನೆ ಕಾಣರವರೈ ।
ಧರಿಸುತೀನಿರ್ಧಾರ ವರ್ತನ ಮಾಳ್ಪರೇನೆಂಬೆ ॥

ದೊರಕಿಸಲು ಸ್ತ್ರೀಭೋಗಸುಖವನು ।
ಪರಿಪರಿಯ ದಿಶೆಗಳಲಿ ಸ್ವರ್ಗದಿ ।
ಮರಳಿ ವಾತಾಳದಲಿ ತಿರುಗಲಿಕಂಜಲಾರರಲಾ ॥ ೨೩೪ ॥

ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ ।
ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಂಚಯಾನ್ ॥ ೧೨ ॥

ಗಾಳಕಿಕ್ಕಿದ ಮಾಂಸತುಂಡಿನ ।
ಮೇಲೆ ತಾನಭಿಲಾಷ ಮಾಡುತ ।
ಲೀಲೆಯಿಂ ನುಂಗಲಿಕೆ ಯತ್ನಿಸಿ ಮಿನು ಸಾವುದಲಾ ॥
ಖೂಳರೀವಿಷಯೋಪಭೋಗದ ।
ಲಾಲಸೆಯ ತಾಂ ಹಿಡಿದು ಸಾಯ್ವರು ।
ಹೇಳಲೇನದ ಕೋಶಕೀಟಕದಂತೆ ಸಿಲುಕುವರು ॥ ೨೩೫ ॥

ಬರಿದೆ ಯಾಶೆಪರಂಪರೆಯಲೇ ।
ಮರಣವನು ತಾಂ ಪಡೆವರಲ್ಲವೆ ।
ಮರಳಿ ದ್ವೇಷವ ಕಟ್ಟಿ ಕೊಳುವರು ದೊರೆಯದಿರೆ ವಸ್ತು ॥೨೩೬॥

ದೊರೆಯದಿರಲಿಚ್ಛಿತ ಪದಾರ್ಥವು ।
ಬರಿದೆ ತಿರುತಿರುಗುತ್ತಲಾಶೆಯ ।
ಧರಿಸಿ ತಾಂ ಬಂಧನಗಳಲಿ ವರ್ಧಿಸುವರೀ ತೆರದಿ ॥

ಪ್ರಾಪ್ತಿಯಾಗಲು ವಸ್ತು ನಿಜಯವು ।
ತೃಪ್ತಿಯನು ತಾಳುವರು ವಸ್ತುವು ।
ಪ್ರಾಪ್ತವಾಗದಲಿರಲು ಕ್ರೋಧಾಯುಕ್ತರಾಗುವರು ॥
ನಿತ್ಯವೀಪರಿ ಕಾಮಕ್ರೋಧದ ।
ಹೊರ್ತು ಪುರುಷಾರ್ಥವನು ಕಾಣರು ।
ಸ್ವಸ್ಥಚಿತ್ತದಲಿವರು ಆಶಾಪಾಶಬದ್ಧರಲಾ ॥ ೨೩೭ ॥

ನರನೆ ನೋಡೈ ಠಾಣೆಯೊಳಗಿನ ।
ತುರಗಸ್ವಾರನು ಹಗಲು ಹೊತ್ತಿಲಿ ।
ತಿರುಗ ಬೇಕಲ್ಲವೆ ಸದಾ ಸರ್ವತ್ರ ಕೌಂತೇಯ ॥
ಮರಳಿ ರಾತ್ರಿಯ ವೇಳೆ ಬರಲಾ ।
ಯಿರುಳು ಗಸ್ತಿಯ ಮಾಡಬೇಕಾ ।
ತೆರದೊಳವನಿಂಗಿರದಲಾ ವಿಶ್ರಾಂತಿ ಹಗಲಿರುಳು ॥ ೨೩೮ ॥

ಪ್ರಾಪ್ತವಾಗದೆ ಮನದಲಿಚ್ಛಿತ ।
ವಸ್ತು ಕಾಮವು ಕಾಲಿನೊದ್ದಲು ।
ಮತ್ತೆ ಕ್ರೋಧಾಗ್ನಿಯಲಿ ಬಿಂಳುವರೇನ ಹೇಳುವೆನು ।।
ಪಾರ್ಥ ಕೇಳೀ ಪರಿಯಲಾದರು ।
ಸ್ವಸ್ಥ ಚಿತ್ತದಿ ಕಾಮಕ್ರೋಧದ ।
ಹತ್ತುವರು ಬೆನ್ನನ್ನೆ ಬಿಡರಾ ಕಾಮಕ್ರೋಧಗಳ ॥ ೨೩೯ ॥

ಮನದಿ ಹುಟ್ಟಿದ ವಿಷಯವಾಸನೆ ।
ಧನ ಹೊರತು ಸಾಧಿಸಲು ಶಕ್ಯವೆ ।
ಧನವ ಸಂಪಾದಿಸಲು ಜನರಿಗೆ ತಾಪ ಕೊಡುವರಲಾ ॥

ವನದಿ ಗಿರಿಗಹ್ವರದಿ ಧನಿಕನ ।
ಮುನಿಸಿನಿಂದಪಹಾರ ಮಾಳ್ಪರು ।
ಮನದೊಳನ್ಯರ ನಾಶ ಮಾಡುವ ಯುಕ್ತಿ ಯೋಚಿಪರು ।।೨೪೦ ॥

ಕ್ರೂರ ಬೇಡರು ವನದಿ ಮೃಗದ ಸಿ ।
ಕಾರಿ ಮಾಳ್ಪ ನಿಮಿತ್ತ ಕೈಯಲಿ ।
ಸೇರಿಸುತ ಒಲೆ ಭಾಲೆ ಪಾಶವ ಚೀಲ ಮೊದಲಾಗಿ ॥
ಘೋರವನದಲಿ ಬೇಟೆಯಲಿ ಸಂ ।
ಹಾರ ಮಾಳ್ಪರು ಪ್ರಾಣಿಯಗಣಿತ ।
ಕ್ರೂರರೀಪರಿ ಪಾಪರಾಶಿಯ ಘಳಿಸುವರು ಪಾರ್ಥ ॥ ೨೪೧ ।।

ಪರಿಯಲೀ ಯಾಸುರ ಸ್ವಭಾವದ ।
ನರರು ಪಾಪಾಚರಣ ಮಾಳ್ಪರು ।
ಹರಣ ಮಾಳ್ಪರು ಸ್ವಾರ್ಥಕಾಗಿಯೆ ಪರರ ದ್ರವ್ಯವನು ।।
ಮರಳಿ ಯನ್ಯರ ಪ್ರಾಣಘಾತವ ।
ನಿರದೆ ಮಾಳ್ಪರು ಮಾಡುತೀ ಪರಿ ।
ಹರುಷ ತಾಳುವರೆಂತು ನಿನಗಾನೊರೆವೆ ಕಲಿಪಾರ್ಥ ॥ ೨೪೨ ॥

ಇದಮದ್ಯ ಮಯಾ ಲಬ್ಧಮಿಮಂ ಪ್ರಾಪ್ಸ್ಯೇ ಮನೋರಥಮ್ ।
ಇದಮಸ್ತೀದಮಪಿ ಮೇ ಭವಿಷ್ಯತಿ ಪುನರ್ಧನಮ್ ।। ೧೩ ॥

ಮರುಳರವರೇನೆಂಬೆ ಬರಳುವ ।
ಪರಿಯ ನಾ ವಿಸ್ತರಿಸಲಾರೆನು ।
ದೊರಕಿತಿಂದಿಗೆ ವಿತ್ತರಾಶಿಯವಾರ ಕೈಯೊಳಗೆ ॥
ಇರುವೆ ನಾನೇ ಧನ್ಯ ಜಗದಲಿ ।
ಮೆರೆಸುವರು ತಾವ್ ತಮ್ಮ ಪ್ರೌಢಿಯ ।
ಮರಳಿ ಮನದೊಳಗುದ್ಭವಿಸುವುದು ಕಾಂಕ್ಷೆಯನಿವಾರ।।೨೪೩।।

ಮರಳಿ ವುಷ್ಕಳ ಜನರ ದ್ರವ್ಯವ ।
ಹರಣ ಮಾಡುವೆ ನಾನು ಯಿಂದಿನ ।
ವರೆಗೆ ದೊರಕಿದ ದ್ರವ್ಯವೆಲ್ಲವು ಸಾಲದೈ ಯೆನಗೆ ।।
ಧರೆಯಲಾನು ಸಮಸ್ತರನು ಸಂ ।
ಹರಿಸಿ ಧನರಾಶಿಯನು ಮಾಳ್ಪೆನು ।
ತಿರಿಗಿ ನಾನೆಲ್ಲರನು ನಾಣಿಪೆ ನೋಡಿದೆಲ್ಲರನು ॥ ೨೪೪ ॥

ಅಸೌ ಮಯಾ ಹತಃ ಶತ್ರುರ್ಹನಿಷ್ಯೇ ಚಾಪರಾನಪಿ ।
ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ ॥ ೧೪ ॥

ಪರಿಪರಿಯ ವೈರಿಗಳ ನಾ ಸಂ ।
ಹರಿಸಿದೆನು ಮುಂದಕ್ಕೆ ನೋಡೀ- ।
ತೆರದಿ ಸಂಹರಿಸುವೆನು ಶತ್ರು ಬಲಾಢ್ಯನಿರಲೇನು ॥
ಇರುವೆ ನಾ ಭುವನೈಕವೀರನು ।
ದೊರಕಿಸುವೆನೀ ಪರಿಯ ಕೀರ್ತಿಯ ।
ಶರಣಿಗಳ ನಾ ಕಾಯ್ವೆನನ್ಯರನುರಿದು ಬಿಡುವೆನಲಾ ।।೨೪೫।।

ಇರುವೆ ಜಗದೀಶ್ವರನು ನಾನೇ ।
ಯರಸ ನಾನೀ ಭೋಗ್ಯ ಪೃಥ್ವಿಗೆ ।
ಯಿರುವೆನೈ ಸುಖಕೆಲ್ಲ ವಿಶ್ರಾಂತಿಸ್ಥಳವು ನಾನೆ ॥
ಸುರಪತಿಯು ನೋಡುತ್ತಲಿನ್ನಯ ।
ಸಿರಿಯ ಲಜ್ಜೆಯ ತಾಳಿ ಮೋರೆಯ ।
ತಿರುಗಿಸುವನೈ ಕೆಳಗೆ ಯೆನ್ನೆಂತಾರು ಸಿರಿಯೊಡೆಯ ॥ ೨೪೬ ॥

ನಾಸು ತನುವಾಕ್ಚಿತ್ತದಿಂದಲಿ ।
ಕ್ಷೋಣಿಯಲ್ಲೀ ಮಾಳ್ಪದೆಲ್ಲವು ।
ಸಾನುರಾಗದಿ ಸಿದ್ಧಿಯನು ತಾಳುವುದು ನಿಜವಾಗಿ ॥
ನಾನು ಹೊರತೀ ಜಗದೊಳನ್ಯರ ।
ಕಾಣೆನಾಜ್ಞೆಯ ಕೊಡುವ ದೊರೆಯನು ।
ನಾನೆ ಜಗದಿ ೬೮ಷ್ಯನೆನ್ನಂತಾರು ಮೆರೆಯುವರು ॥ ೨೪೩ ॥

ನಾನೆ ಸುಖರಾತಿಯು ಜಗತ್ತಿಲಿ ।
ಕ್ಷೋಣಿಯಲಿ ಕಾಲನನು ಜಯಿಪ ಮ- ।
ಹಾನುವೀರನು ಯಮನ ದಾಡಿಯ ಮುರಿವ ವೀರನಲಾ ॥
ಈ ನಿಧಾನವ ಮನದಿ ಯೋಚಿಸು- ।
ತೇನ ಹೇಳಲಿ ದಂಭ ಹೊಡೆವನು ।
ಮಾನಿ ತಾನೆನ್ನುವನು ಖೂಳನು ಅಸುರಿಕನರನು ॥ ೨೪೪ ॥

ಅಢ್ಯೋಽಭಿಜನವಾನಸ್ಮಿ ಕೋಽನ್ಯೋಸ್ತಿ ಸದೃಶೋ ಮಯಾ ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ ॥ ೧೫ ॥

ಇರುವೆನತಿ ಸಂಪನ್ನ ವಿತ್ತದಿ ।
ಸರಿಯೆನಿಸೆನು ಕುಬೇರನಿಂಗಾಂ ।
ಹರಿಗೆ ಮಿಗಿಲಾಗಿಹೆನು ಸಂಪತ್ತಿಯಲಿ ನಾ ನೋಡೆ ।
ಇರುವೆ ನಾನು ಕುಲೀನ ಲೌಕಿಕ- ।
ವಿರುವುದೆನಗಾ ಬ್ರಹ್ಮನಂದದಿ ।
ಒರೆದೆ ಪರಮೇಶ್ವರನ ತುತಿಪರು ಖೂಳರೀ ಜಗದಿ ॥೨೪೪॥

ನರರು ಯೆನ್ನೈಶ್ವರ್ಯವರ್ಣನೆ ।
ಭರದಿ ಮಾಡುತ ತುತಿಸಲೆನ್ನನು ।
ಮರಳಿ ಯೆನ್ನಾಟವನು ಮಾಡುತ ಸಂತಸಿಸಲೆನ್ನ ॥
ಪರಿಪರಿಯ ವಸ್ತುಗಳ ಕೊಡುವೆನು ।
ವರದಹಸ್ತದಿ ಹರಸಿ ಬಿಡುವೆನು ।
ಪರಿಪರಿಯ ಮದ್ಯಗಳ ಕುಡಿದು ವಿಹಾರ ಮಾಡುಲಿ ॥ ೨೪೫ ॥

ನರರು ತುತಿಸಲು ಬೇಕು ಯೆನ್ನಯ ।
ಪರಿಪರಿಯ ಲೌಕಿಕವ ನಾನೀ- ।
ಶ್ವರನಿಗಿಂತಲು ಮಿಗಿಲು ರಂಜಿಪೆನೆಲ್ಲನೇ ಜಗದಿ ॥
ತಿರಿಗಿ ಜಾರಣಮರಣವನು- ।
ದ್ಧರಿಸುವೆನು ಜಗದೊಳಗೆ ನಾನೇ ।
ಮರಳಿ ನೋಡಲು ಯಜ್ಞದತ್ರಂಗಳನು ನಾ ಮಾಪ್ಪೆ ।೨೪೬॥

ತರುಣಿಯರಿಗಾಲಿಂಗನವನಾ ।
ನಿರದೆ ಕೊಡಲುದ್ಯುಕ್ತನಾಗುವೆ- ।
ನಿರುವರಾರೀ ಜಗದೊಳೆನ್ನಸದೃಶರು ಮಾನವರು ॥
ಪರಿಪರಿಯಲಾಸುರ ಸ್ವಭಾವದ ।
ನರರು ನೋಡೀ ತೆರದಿ ಬರಳುತ ।
ಪರಿವಳವ ಒಯಸುವರು ಕೇಳಾಕಾಶಪುಷ್ಪದಲಿ ॥ ೨೪೭ ॥

ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥ ೧೬ ॥

ನರನು ವಿಷಮಜ್ವರದಿ ಪೀಡಿತ- ।
ನಿರಲು ಬೇಕಾದಂತೆ ಬಾಯುಲಿ ।
ಬರಳುವನು ಕೇಳಾತೆರದೊಳಾಸುರ ಸ್ವಭಾವದಲಿ ॥
ಮರುಳರಂದದಿ ಬರಳುತಿರುವರು ।
ನರನೆ ನೋಡೀತೆರದಲಾಸುರ ।
ನರರು ಜಗದಲಿ ಮೆರೆಸುವರು ನಿಜಲೌಕಿಕವ ವಾರ್ಥ
॥ ೨೪೮ ॥
ನರನೆ ನೋಡಜ್ಞಾನಧೂಳಿಗೆ ।
ದೊರೆಯಲಾಪೆಯೆನಿಪ್ಪ ಗಾಳಿಯು ।
ಥರದಿ ತಿರುಗುವುದೈ ಮನೋರಥವೆಂಬಿ ಗಗನದಲಿ ॥

ಶರಧಿಯಲಿ ಬರುವಂತೆ ತೆರೆಗಳು ।
ಮರಳಿಯಾಷಾಢದಲಿ ಗಗನದಿ ।
ಬರುವ ತೆರದಲಿ ಮೇಘಪಂಕ್ತಿಯು ಆಶೆ ಯೇರುವುದು ॥ ೨೪೯ ॥

ಮನದಿ ಪಸರಿಸಲಾ ಮನೋರಥ ।
ವೆನುವ ಬಳ್ಳಿಯು ಹೇಳಲೇನದ ।
ವನಜಗಳು ಮುಳ್ಳಿನಲಿ ಸಿಲುಕಿದ ಪರಿಯದಾಗುವುದು ॥
ಮುನಿಸಿನಲಿ ಮಣ್ಣಿನ ಗಡಿಗೆಯನು ।
ಘನತರದ ಕಲ್ಲಿನಲಿ ಬಡಿಯಲು ।
ಕುಣುಕುಣುಕಾದಂತೆ ವುಡಿಯಹುದೈ ಮನೋರಥವು ॥೨೫೦॥

ನರನೆ ರಾತ್ರಿಗಳು ಹೆಚ್ಚಿದಂದದಿ ।
ಧರಣಿಯಲಿ ವರ್ಧಿಪುದು ಕತ್ತಲೆ ।
ಮರಳಿ ನೋಡಜ್ಞಾನವೇರಲು ಮೋಹವೇರುವುದು ॥
ತಿರಿಗಿ ಮೋಹದ ವೃದ್ಧಿಯಾಗಲು ।
ಬರುವುದೈ ವಿಷಯೇಚ್ಛೆ ವೃದ್ಧಿಯು ।
ದುರಿತಕಾರಕವಲ್ಲವೇ ವಿಷಯೇಚ್ಛೆ ನೋಡಿದರೆ ॥೨೫೬ ॥

ಉರಿವತೈಲದ ಶರಧಿಗಳು ತುಂ- ।
ಬಿರುವುವೈ ಯಾತನೆಯು ಪರಿಪರಿ ।
ಯಿರುವುದೈ ರಾತಿಗಳ ರಾತಿಯು ಯಮನು ದಿನನಿತ್ಯ ॥
ಬರುತ ಹೊಸತರವಾಗಿ ಯಾತನೆ ।
ವಿರಚಿಸುವನೈ ಘೋರನರಕವ ।
ಪರಿಯಿದಲ್ಲವೆ ನೋಡು ದುರ್ವಾಸನೆಯು ಪರಿಣಾಮ ॥ ೨೫೯ ॥

ದುರಿತರಾತಿಯ ವೃದ್ಧಿಯಾಗಲು ।
ನರಗೆ ಜೀವಿತನಿಂಗೆ ಧರೆಯಲಿ ।
ನರಕಯಾತನೆ ಭೋಗಿಸುವ ಪರಿ ಬರುವುದೈ ಪಾರ್ಥ ॥
ನರನೆ ನೋಡೈ ಬುದ್ಧಿವಂತನೆ ।
ಯಿರುವುದೆಲ್ಲೀ ದುಷ್ಟವಾಸನೆ ।
ಬರುವರಲ್ಲಿಯೆ ವಸ್ತಿಗೋಸುಗ ದುಷ್ಟರಾಸುರರು ॥ ೨೫೭ ॥

ನರನೆ ಕೆಲವೆಡೆಗಳಲಿ ನೋಡಲಿ- ।
ಕಿರುವರೈ ಯಜ್ಞಾದಿ ಮಾಡಿದ ।
ನರರು ನರಕದಿ ದಂಭಕೋಸುಗ ಯಜ್ಞ ಮಾಡಿದರೆ ॥
ಬರುವುದೀ ಪರಿ ನರಕಯಾತನೆ ।
ಮೆರೆವುದೈ ನಾಟಕಿ ಪ್ರಕಾರವು ।
ಯಿರುವುದೈ ನಿಷ್ಫಲವು ಕೇಳೀತೆರದ ಯಜ್ಞವಿಧಿ ॥ ೨೬೦ ॥

ಬರಲು ಕೇಳೀತೆರದ ಅಸುರ- ।
ರಿರದೆ ನರಕವ ತಂದು ಕೊಡುವರು ।
ನರನೆ ನಿನಗಾಂ ನರಕಯಾತನೆಗಳನು ಪೇಳುವೆನು ॥
ಇರುವುವೈ ಕರವಾಲಧಾರೆಯ ।
ತೆರದ ತೀಕ್ಷ್ಣತೆ ಯಿರುವ ಯೆಲೆಗಳ ।
ಮರಗಳಲ್ಲಿಯೆ ವ್ರಣ ಕೆಂಡದ ರಾತಿ ಮೇಣಲ್ಲಿ ॥ ೨೫೮ ॥

ವಾರವನಿತೆಯು ಹಣೆಗೆ ಕುಂಕುಮ- ।
ವೇರಿಸುತ ಮುತ್ತೈದೆ ಯೆನಿಪಳು ।
ಯಾರರಿವರೈ ಗಂಡನೀಕೆಯ ಸತ್ತನೋ ಯಿಹನೋ ॥
ಧಾರುಣಿಯಲಾ ವಾರವನಿತೆಯು ।
ತೋರುವಳು ಸೌಭಾಗ್ಯವತಿಯೇ ।
ತೋರುವರು ಕೇಳಾತೆರದಿ ಡಾಂಭಿಕರು ಕೌಂತೇಯ ॥ ೨೬೧ ॥

ಆತ್ಮಸಂಭಾವಿತಾಃ ಸ್ತಬ್ಧಾ ಧನಮಾನಮದಾನ್ವಿತಾಃ ।
ಯಜಂತೇ ನಾಮಯಜ್ಞೈಸ್ತೇ ದಂಭೇನಾವಿಧಿಪೂರ್ವಕಮ್ ॥ ೧೭ ॥

ಇರುವೆ ನಾ ಸರ್ವರಲಿ ಶ್ರೇಷ್ಠನು ।
ಸರಿಯು ತನಗಾರೆನುತ ಗರ್ವದ ।
ಭರದೊಳಿರುವನು ಬಗ್ಗನುಕ್ಕಿನ ಖಂಬದಂದದಲಿ ॥
ನರನೆ ನೋಡಾಕಾಶಚುಂಬಿತ ।
ಗಿರಿಯು ತಲೆಯನು ಬಗ್ಗಿಸದಲಾ ।
ಪರಿಯಲಾತನು ತಲೆಯ ಬಗ್ಗಿಸಲಾರನೀ ಜಗದಿ ॥ ೨೬೨ ॥

ನರನು ನೋಡುನ್ಮತ್ತನೀಪರಿ ।
ಯಿರಲು ಯಜ್ಞದ ಮಾತದೇತಕೆ ।
ಮರುಳರೀಜಗದಲ್ಲಿ ಮಾಡದಲಿರುವರೇನೇನ ॥
ದುರುಳರೊಂದಾವರ್ತಿ ಮೂರ್ಖರ ।
ಪರಿಯಲಾ ಯಜ್ಞವನು ಮಾಳ್ಪರೆ ।
ಯಿರುವರೈ ಸಿದ್ಧರು ಕಣಾ ಯಜ್ಞವನು ಮಾಡುವರು ॥ ೨೬೪ ॥

ಹಿರಿದು ತನ್ನೈಶ್ವರ್ಯವೆನುತಲಿ ।
ಬರುವುದವನಿಗೆ ದರ್ಪ ಮನದಲಿ ।
ಧರೆಯಲನ್ಯರು ತೃಣಸಮಾನರೆನುತ್ತ ಯೋಚಿಪನು ॥
ಬರಲು ಕೇಳುನ್ಮತ್ತತೆಯು ಯಿಂ ।
ತೆರದಿ ಯೋಗ್ಯಾಯೋಗ್ಯವೆಂಬುದ- ।
ನರಿಯಲಾರನಲಾ ವಿಚಾರವಿಹೀನನಾಗುವನು ॥ ೨೬೫ ॥

ಕುಂಡ ಮಾಳ್ಪ ಜರೂರಿ ಕಾಣರು ।
ಮಂಡಪವ ವೇದಿಗಳ ಮಾಡರು ।
ಭಂಡತನದಲಿ ವಿಧಿನಿಷೇಧವ ಮಾನಿಸರು ನಿಜದಿ ॥
ಭಂಡರವರೇನೆಂಬೆ ವಿಪ್ರರ ।
ಮಂಡೆಗಳ ನೋಡಿದರೆ ಬೆಂಕಿಯ ।
ಕೆಂಡಗಳ ಸರಿಯಹರು ಬ್ರಾಹ್ಮಣರೇಕೆ ಬಹರಿಲ್ಲಿ ॥ ೨೬೫ ॥

ಸತ್ತ ಕರುವಿನ ಹೊಟ್ಟೆಯಲ್ಲಿಯೆ।
ಕೆತ್ತು ಹುಲ್ಲನು ತುರುಕಿಸುತ ಬಹು।
ಸ್ವಸ್ಥಚಿತ್ತದೊಳಾಕಳನು ಹಿಂಡುವರೆ ತರುವರಲಾ ॥
ಪೃಥ್ವಿಯಲ್ಲೀ ತೆರದಿ ವಿಸ್ತರ।
ಮೊತ್ತವನು ತಂದಿರಿಸಲವರಿಗೆ।
ನಿತ್ತದುಪಹಾರಗಳ ಬದಲಿಗೆ ಲತ್ತೆ ದೊರಕುವುವು ॥೨೩೬॥

ಕರೆವರೆಲ್ಲರ ಯಜ್ಞಕಾಗಿಯೆ।
ಬರಲು ನೋಡಾಮಂತ್ರಣದ ಪರಿ।
ಮರಳಿಯವರನು ಸುಲಿದು ಕಳುಹಿಪರಿವರ ಯಜ್ಞವಿದು ॥
ದುರುಳರೀ ಪರಿ ಯಜ್ಞದಂಭವ।
ಮೆರೆಸಿ ಲೋಕವಿನಾಶ ಮಾಳ್ಪರು।
ಮರುಳತನಕೇನೆಂಬೆ ನೋಡೆಂದನು ಮುರಧ್ವಂಸಿ ॥ ೨೬೭ ॥

ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ।
ಮಾಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ॥ ೧೮ ॥

[ಅಹಂಕಾರಂ] ಇರುವೆನೈ ದೀಕ್ಷಿತರು ನಾವೀ-।
ಪರಿಯ ಕೀರ್ತಿಯ ಮೆರೆಸುವರು ಡಂ-।
ಗುರತ ಹೊಡೆಸುವರವರು ಯಾಜ್ಞಿಕರಿಹೆವೆನುತ ಜಗದಿ ॥
ಮರುಳರವರೇ ನೋಡು ದೀಕ್ಷಿತ-।
ರಿರುವೆವೆಂಬೀ ಗರ್ವವೇರಲು।
ಆರುಹಲೇನದ ಕತ್ತಲೆಗೆ ಕಾಡಿಗೆಯು ಭೂಷಣವು ॥೨೬೮॥

ನರನೆ ನೋಡಭಿಚಾರಕೋಸುಗ।
ಮೆರೆಸುವರು ಹಠಯೋಗವದರಿಂ।
ಬರುವುದವರಿಗೆ ಜಾರಣಾದಿಗಳೆಲ್ಲ ಸಾಧನವು ॥
ದುರುಳರವರೀ ದೇಹ ದಂಡಿಸಿ।
ಮರುಳುತನವನು ಮಾಳ್ಪರಲ್ಲವೆ।
ಬರುವುದಾಪರಿ ತಾಪವೆನಗಾತ್ಮನಿಗೆ ದೇಹದಲಿ ॥ ೨೬೨ ॥

ಮರುಳುತನ ಹೆಚ್ಚುವುದು ಮೂರ್ಖರಿ-।
ಗಿರುವುದುದ್ಧತನವನಂತರ।
ಮೆರೆವರೈ ದರ್ಪದಲಿ ಮೇಣಜ್ಞಾನವೇರುವುದು ॥
[ಬಲಂ] ಸರಿ ಯಿಹರು ದಾರೆನಗೆ ಬಲದಲಿ।
ಬರಲು ಕೇಳೀ ತೆರದ ಕಲ್ಪನೆ।
[ದರ್ಪಂ] ಶರಧಿ ಮೇರೆಯ ತಪ್ಪಿದಂದದಿ ದರ್ಪವೇರುವುದು
॥ ೨೬೯ ॥

ಜಾರಣಾದಿ ಕ್ರಿಯೆಗಳಿಂದಲಿ।
ಯಾರಿಗವರೀತ್ರಾಸ ಕೊಡುವರೊ।
ಧಾರುಣಿಯೊಳಾ ಪೀಡೆ ಯೆನ್ನನೆ ಸೇರುವುದು ನೋಡೆ ॥
ಧೀರ ವಾರ್ಧನೆ ನಾನೆ ಸರ್ವಶ-।
ರೀರಗಳಲಾತ್ಮಸ್ವರೂಪದಿ-।
ಸೇರಿಹೆನು ಕಾರಣದೊಳೆನಗದು ತ್ರಾಸ ಬರುವುದಲಾ ॥ ೨೭೩ ॥

[ಕಾಮಂ ಕ್ರೋಧಂ ಚ] ನರನೆ ಕಾಮದ ಪಿತ್ತವೇರುತ-।
ಉರಿವುದೈ ಕ್ರೋಧಾಗ್ನಿ ಭರದ-।
ಲ್ಲರುಹಲೆಂತೀ ಪರಿಯ ವಿಸ್ತರಿಸಲಿಕಯೋಗ್ಯವಡು ॥
ನರನೆ ಕೇಳ್ ಬೇಸಿಗೆಯ ಬಿಸಿಲ-।
ಲ್ಲುರಿಯು ಹತ್ತಲು ತುಪ್ಪವೆಣ್ಣೆಗ-।
ಳಿರುವ ಕೋರಾರಕ್ಕೆ ಮೇಣಾ ಗಾಳಿ ಬೀಸಿದರೆ ೨೭೦ ॥

ನರನೆ ನೋಡೀ ಬರಲು ಮತ್ಪಶುವು ಮೇಣಾ-।
ಪುರುಷರಿವರನು ಮರ್ಮಭೇದಕವಚನದಿಂ ಭರದಿ ॥
ಬರಿದೆ ತ್ರಾಸಿಪರೇನ ಹೇಳಲಿ।
ನರನೆ ನಾ ನಿನಗೊರೆವೆನೀಗಲೆ।
ಧರಣಿಯಲ್ಲೆಲ್ಲಿಹುದು ಯೆನ್ನ ಪವಿತ್ರ ವಾಸವಿದು ॥ ೨೭೪ ॥

ನರನೆ ನೋಡೀ ತೆರವಲಾ ಗೋ-।
ಚರಕೆ ಬರುವೈದು ನೋಡಹಂಕೃತಿ-।
ಗಿರದೆ ಕಾಮಕ್ರೋಧದರ್ಪಗಳೊಂದು ಕೂಡಿದರೆ ॥
ಧರೆಯಲವರಿಗೆ ಕೈಯ ಹಿಡಿಯುವ-।
ರಿರುವರೇ ಹಿಂಸೆಯಲಿ ಜಗವನು।
ಕರುಳುವೈ ತಾಪ ಕೊಡುವರು ಕಾಲರಂದದಲಿ ॥೨೭೧॥

ಸತಿಸುಶೀಲಳು ಸತ್ಪುರುಷರಾ-।
ಯತಿಯರಾ ತಾಪಸರು ಸರ್ವರು।
ಕ್ಷಿತಿಯೊಳಗೆ ನದ್ಪ್ರತಿಸುಯಾಜ್ಞಿಕ ದಾನತತ್ಪರರು ॥
ಶ್ರುತಿಸ್ಮೃತಿಗಳುಸುರುವ ತೆರದಿ ಪದ-।
ಗತಿಯನಿಡುವ ಮಹಾಪುರುಷರೈ।
ಯತಿಶಯಪ್ರೇಮದಸುಭಕ್ತರು ಮಾಸನಿಯಮಿಗಳು ॥ ೨೭೫ ॥

ಇದುವೆ ನಾನತಿ ಕ್ರೌಮದಿಂದೀ ।
ತೆರದಲಿಹ ಸುಪವಿತ್ರ ಸ್ಥಳದಲಿ ।
ದುರುಳರಾಸುರಸ್ವಭಾವದವರಿಂಗೆ ದ್ವೇಷಿಪರು ॥

ಮರಳಿ ಕೇಳಾ ಕಾಳಕೂಟದ ।
ಪರಿಯಲಿಹ ಶಬ್ದಾರ್ಥದಿಂದಲಿ ।
ದುರುಳರಿವರನು ಹೊಡೆಯುವರು ತ್ರಾಸವನು ಕೊಡುತಿಹರು

॥ ೨೭೭ ॥

ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥ ೧೯ ॥

ನರನೆ ಕೇಳೀ ತೆರದೊಳೆನ್ನಲಿ ।
ಧರಿಸುತಲಿ ವೈರವನು ಪೀಡೆಯು- ।
ನಿರದೆ ಕೊಡುವರು ನಾನವರ ಶಾಪಿಸುವೆ ಕೇಳೆಂತು ॥
ನರಶರೀರವ ಧರಿಸಿ ಧರೆಯೊಳ- ।
ಗಿರುವ ಕರ್ತವ್ಯವನು ಸ್ಮರಿಸದೆ ।
ಮರೆವರೆನ್ನನು ಯಾರು ಚ್ಯುತಿಯನು ಮಾಪ್ಪೆನವರಿಂಗೆ

॥ ೨೭೭ ॥

ನರಶರೀರವ ಹರಣಮಾಡುತ- ।
ಲಿರಿಸುವೆನು ನಾನವರ ಜಗದಲಿ ।
ಪರಮದುಃಖಿದಧೋಗತಿಗೆ ನಾ ನೂಕುವೆನು ಪಾರ್ಥ ॥
ನರನೆ ನೋಡೀ ತೆರದಲಧಮರ- ।
ನಿರಿಸುವೆನು ಕ್ಲೇಶಸ್ವರೂಪದ ।
ಪುರದಿ ಕಸರಾಶಿಯಲಿ ಸಂಸಾರದ ಮಡುವಿನೊಳಗೆ ॥೨೭೮॥

ನರನೆ ನೋಡೀ ತೆರದೊಳಧಮರ- ।
ನಿರಿಸುವೆ ತಮೋಯೋನಿಯಲ್ಲಿಯೆ ।
ಬರುವುದವರಿಗೆ ಜನ್ಮ ಘೋರಾಟವಿಯ ಮಧ್ಯದಲಿ ॥

ಇರುವರೈ ವ್ಯಾಘ್ರಾದಿ ಜನ್ಮದಿ ।
ದೊರೆಯಲಾರದೆ ತಿನಲಿಕವರಿಗೆ ।
ತಿರುತಿರಿಗಿ ನಿಜದೇಹ ಕಡಿಯುತ ತಿಂದು ಬದುಕುವರು ।೨೭೯॥

ಉರಿವ ವಿಷತಾಪದಲಿ ದೇಹಕೆ ।
ಬರುವುದೈ ಬಹು ದಾಹವೆನುತಲಿ ।
ತಿರುಗಲಾರರು ಹೊರಗೆ ಬೇಸಿಗೆಯಲ್ಲಿ ಬೆಸಿಲಿನಲಿ ॥
ಉರಗರೂಪದ ಯೋನಿಯಲಿ ನಾ- ।
ನಿರಿಸುತಿವರನು ಬಿಲದೊಳಡಗುವ ।
ಪರಿಯ ಮಾಡಿಟ್ಟಿಹೆನು ನೋಡೀಯಧಮರನು ಪಾರ್ಥ ॥ ೨೮೦ ॥

ಅರೆಗಳಿಗೆಗೆ ವಿಶ್ರಾಂತಿ ದೊರೆಯದ ।
ಪರತಮೋಯೋನಿಯಲಿ ನಾನೀ- ।
ಪರಿಯಲಧಮಾಧಮರನಿರಿಸುವೆ ಕರ್ಮವಶದಿಂದ ॥
ತಿರುತಿರಿಗಿ ಕಲ್ಪಾಂತಪರ್ಯಂ- ।
ತರದಲಿವರನ್ನಿಡುವೆನಿಲ್ಲಿಯೆ ।
ನಿರುಪಮವಲಾ ಕ್ಲೇಶದಾಯಕನಿರುವುದೀ ಜನ್ಮ ॥

ಇರುವುದಿದು ಮೊದಲಿನ ಶಿಕಾರವು ।
ಯಿರುವುದಿದರಿಂದಧಿಕ ಕಠಿನವು ।
ಬರುವುದವರಿಗೆ ಕಠಿನತರ ಬಹುದುಃಖವಾ ಒಳಿಕ । ೨೮೧ ॥

ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್ ॥ ೨೦ ॥

ನರನೆ ನೋಡಾಸುರ ಪ್ರಕೃತಿನರ- ।
ಗಿರುವುದೈ ಯೋಗದಲಧೋಗತಿ ।
ಯಿರುವುದೀಪರಿ ಮಹಿಮೆಯಾಸುರ ಪ್ರಕೃತಿಲಕ್ಷಣದ ॥

ಬರುವರೈ ಸಿಂಹಾದಿ ಹಿಂಸಕ- ।
ವಿರುವ ಕ್ರೂರಪ್ರಾಣಿಗಳಲಾ- ।
ತೆರದಿ ಕಿಂಚಿತ್ತಿಹುದು ಸುಖವದರಲ್ಲಿ ಕೌಂತೇಯ ॥ ೨೮೨ ॥

ಮರಳಿ ಪಿಂಡಾದಿಗಳ ಜನ್ಮದಿ । ನರನೆ ಕಾಣದೆನೆಂತು ವರ್ಣಿಪೆ- ।
ಇರುವುದಾಮಂತ್ರಕ್ಕೆ ಪ್ರಥಮಾ- । ವರಿವರಿಯ ಚಿನ್ನಾಭರಣಗಳ ।
ಕ್ಷರವು ಕೇಳೋಂ ಶ್ರೇಷ್ಠವಕ್ಷರ- । ತರುತಲೊಂದೇ ಗಂಟ ಕಟ್ಟುತ ।
ವಿರುವುದೆರಡನೆ ತತ್ ಕಣಾ ಮೂರನೆದು ಸತ್ ಕೇಳು ॥ ಕೊರಳೊಳಗೆ ತಾನೇರಿಸಿದರೇನಾಯ್ತೆ ಭೂಷಣವು ॥
ಪರಿಯಲೀ ಯೋಂತತ್ಸತೆಂಬೀ- । ಭರದಲದನು ವ್ಯವಸ್ಥೆಯಿಂದಲೆ ।
ಪರಮ ಬ್ರಹ್ಮಸ್ವರೂಪ ಮಂತ್ರವು । ನರನು ಯೋಗ್ಯಸ್ಥಳದಲಿಟ್ಟರೆ ।
ಮೆರೆವುದಿಹು ಸನ್ಮಂತ್ರ ಮೂರು ಸ್ವರೂಪದಲಿ ಪಾರ್ಥ ಯಿರುವುದಲ್ಲವೆ ಕೋಭೆ ದೇಹಕೆ ಭೂಷಣವು ಪಾರ್ಥ ॥ ೨೧೯ ॥
॥ ೨೧೫ ॥

ನರನೆ ನೋಡುಪನಿಷದವನಿರುಹ- । ನಾಲಿಗೆಯಲಾ ಬ್ರಹ್ಮಮಂತ್ರದ ।
ಕಿರುವುದೀ ಸುಂದರ ಸುಪುಷ್ಪವು । ಲೀಲೆಯಿಂ ಸಂಚಾರವಾಗಲು ।
ಭರದಲಿದರ ಸುವಾಸ ಗ್ರಹಿಸೈ ಪಾರ್ಥ ಹರ್ಷದಲಿ ॥ ಮೇಲೆ ಸಾತ್ತ್ವಿಕ ಕರ್ಮದಾಚರಣೆಯು ಸದಾ ಯಿರಲು ॥
ನರನೆ ಕೇಳಿದರೈಕ್ಯವಾಗಲು । ಹೇಳಲೇನು ವ್ಯವಸ್ಥೆ ಯಿರದಿರೆ ।
ದೊರೆಯುವುದು ಸಾತ್ತ್ವಿಕವು ಕರ್ಮಾ- । ಹಾಳು ಜೀಳುವುದೆಲ್ಲವಲ್ಲವೆ ।
ಚರಣವದರಿಂ ಮುಕ್ತಿ ಬರುವಳು ದಾಸಿಯೋಪಾದಿ ।೨೧೬॥ ಮೇಲು ಕರ್ಮವ ಮಾಡ ಬೇಕು ವ್ಯವಸ್ಥೆಯಲಿ ಪಾರ್ಥ ॥೨೨೦॥

ನರನೆ ನೋಡೈ ದೈವಯೋಗದಿ । ಅನ್ನ ಹತ್ತರವಿಹುದು ಪುಸ್ಕಳ ।
ದೊರೆಯಲಾ ಕರ್ಪುರದ ಭೂಷಣ- । ಮುನ್ನ ಹಸಿವೆಯು ಹತ್ತಿಹುದು ಕೇಳ್ ।
ವರವು ಬೇಕದನೆಂತು ಸಂಸಾರದಲಿ ಯೋಜಿಪುದು ॥ ಸಣ್ಣ ಜಾಲನ ಜಾಂಬೊಳದ ಹಾಕುವರೆ ತಿಳಿಯದಿರೆ ॥
ಇರುವುದೊಂದೇ ವಿಘ್ನ ನೋಡಲು । ಅನ್ನದಿಂದುಪಯೋಗವೇನದು ।
ವರಿಯಲೀ ಸತ್ಕರ್ಮಯೋಗದಿ । ಬನ್ನ ಬಡುವನು ಜಾಲಹೊಟ್ಟೆಯೊ- ।
ಬರಲು ಬ್ರಹ್ಮಸ್ವರೂಪಮಂತ್ರೋಚ್ಚಾರವದು ಬಳಿಕ ।೨೧೭॥ ಳನ್ನ ಹೋಗದೆ ಹಸಿವೆಯುಪಶಮಿಸುವುದು ನೋಡೆಂಬು ॥೨೨೧॥

ಅರಿಯ ಜೀಕು ವ್ಯವಸ್ಥೆಯಿಂದು- । ನರನೆ ಬೆಂಕಿಯು ಬತ್ತಿ ಯೆಣ್ಣೆಯು ।
ಚರಿಪ ಮರ್ಮವ ಪಾರ್ಥ ಕೇಳೈ । ದೊರೆಯಲೇನವು ದೀಪ ಹಚ್ಚುವ- ।
ಯಿರಿಯದಿರಲುಪಮರ್ದವಾಗುವುದಲ್ಲವೇ ನೋಡು ॥ ಪರಿಯನರಿಯದೆ ಬರುವುದೇನುಪಯೋಗ ಬೆಳಕಹುದೆ ॥
ಒರಲು ಸಜ್ಜನವೃಂದ ನಿಜಮಂ- । ಪರುವ ಕಾಲವು ಬಂದು ಕರ್ಮಾ- ।
ದಿರಕೆ ಸಂಮೂನವನು ಮಾಡದೆ । ಚರಣದಲಿ ಬರಲಿಚ್ಛೆ ಮಂತ್ರೋ- ।
ಯಿರಲು ಕೇಳುಪಮರ್ದದಿಂ ಪುಣ್ಯಕ್ಕೆ ಕ್ಷಯವಹುದು ।೨೧೮। ಚ್ಚರಣ ಸಹ ತಿಳಿದದರ ವಿನಿಯೋಗವನು ತಿಳಿಯದಿರೆ ॥

ಬರುವುದೇನುಪಯೋಗವದರಿಂ ।
ಬರಿದೆ ನಿಷ್ಫಲವಹುದು ಸರ್ವವು ।
ನರನೆ ನಿನಗಾನೀಗಪೇಳುವೆ ಮಂತ್ರವಿನಿಯೋಗ ॥ ೨೨೨ ॥

ತಸ್ಮಾದೋಮಿತ್ಯುದಾಹೃತ್ಯ ಯಜ್ಞದಾನತಪಃಕ್ರಿಯಾಃ ।
ಪ್ರವರ್ತಂತೇ ವಿಧಾನೋಕ್ತಾಃ ಸತತಂ ಬ್ರಹ್ಮವಾದಿನಾಮ್ ॥ ೨೪ ॥

ನರನೆ ಓಂ ಪರಬ್ರಹ್ಮ ಮಂತ್ರದೊ- । ಧರಿಸುತೀ ಸಾಧನವ ಕೈಯಲಿ ।
ಕಿರುವ ಹೂರಕ್ಷರಗಳನು ತಾಂ । ನಿರುತ ಬರುವರು ಬ್ರಹ್ಮವೇತ್ತರು ।
ಮರೆಯದಲೆ ಕರ್ಮಾದಿ ಮಧ್ಯಾಂತದಲಿ ಯುಚ್ಚರಿಸಿ ॥ ಪರುಷನಪ ಕಾಂಕ್ಷೆಯಲಿ ಸಂತತ ಮಾಳ್ಪರೀ ಜಪವ ॥ ೨೨೩ ॥

ಕಲಿತು ಶಾಸ್ತ್ರಾದಿಗಳನೆಲ್ಲವ ।
ನೆಲೆಯ ಕಾಣಲು ಬ್ರಹ್ಮಸದದಲಿ ।
ತೊಲಗಲಾರರು ಯಜ್ಞಸತ್ತ್ರಾದಿಗಳ ಕ್ರಿಯೆಯಿಂದ ॥
ತಿಳಿದು ಮೊದಲೋಂಕಾರ ರೂಪವ ।
ಕಲಿವರದರುಚ್ಚಾರ ವಾಚೆಗೆ ।
ಯೆಲೆ ಧನಂಜಯ ಸಿದ್ಧಿಪರಲಾ ಪ್ರಣವದುಚ್ಚಾರ ॥ ೨೨೪ ॥

ಸಾಧಿಸುತಲೀ ವಿಧದಿ ಪ್ರಣವವ- ।
ನಾದಿಯಲನಂತರದಿ ಕರ್ಮದ ।
ಸಾಧನವನಾರಂಭಿಸುವರ್ಕೆ ಕೋವಿದರು ಪಾರ್ಥ ॥
ಮೇದಿನಿಯಲೀ ಮಂತ್ರ ಕತ್ತಲೆ- ।
ಹಾದಿಯಲಿ ಸ್ಥಿರ ದೀಪಸಿಹುದೈ ।
ಹಾದಿಕಾಣದರಣ್ಯದಲಿ ಪಟುಭಟನು ರಕ್ಷಣಕೆ ॥ ೨೨೫ ॥

ನರನೆ ಕರ್ಮಾರಂಭದಲ್ಲು- ।
ಚ್ಚರಿಸಲೀ ಪ್ರಣವವನು ಕರ್ಮದ ।
ಪರಿಸಮಾಪ್ತಿಯವರೆಗೆ ರಕ್ಷಿಪಗಿಹನು ಪಟುಭಟನು ॥
ನರನು ಧರ್ಮದ ಮಾರ್ಗದಲಿ ಬಹು- ।
ಪರಿಯ ವಿತ್ತಾರ್ಜನವ ಮಾಡುತ ।
ಭರದಲದನರ್ಪಿಸುವನ್ಯೆ ವೇದೋಕ್ತ ದೇವತೆಗೆ ॥ ೨೨೬ ॥

ಭೂಸುರರ ದ್ವಾರದಲಿ ಯಥವಾ ।
ಭಾಸುರಾಗ್ನಿಯ ಮುಖದಿ ಯಜ್ಞವ ।
ಲೇಸಿನಿಂದಾಚರಿಸುವರು ಕೋವಿದರು ಕೌಂತೇಯ ॥
ವಾಸವಾತ್ಮಜ ಕೇಳು ದಕ್ಷಿಣ ।
ಭಾಸುರಾಗ್ನಿಯು ಗಾರ್ಹಪತ್ಯವು ।
ಲೇಸಿನಾಹವನೀಯ ಮೂರನೆದಿಹುದು ಕೌಂತೇಯ ॥೨೨೭॥

ಮೂರುತೆರದಗ್ನಿಯಲಿ ಮಂತ್ರೋ- ।
ಚ್ಚಾರದಿಂ ಹವನವನು ಮಾಳ್ಪರು ।
ಚಾರು ಯಜ್ಞನಿಮಿತ್ತ ಕೊರೆವರಹಂಕೃತಿಯ ಪಾರ್ಥ ॥
ಭೂರಿದ್ರವ್ಯವ ನ್ಯಾಯಧರ್ಮದಿ- ।
ನಾರದಿಂದರ್ಜನವ ಮಾಡಿಹ ।
ಧಾರುಣಿಯನಾದೇಶಕಾಲದಿ ದಾನ ಮಾಡುವರು ॥ ೨೨೮ ॥

ಒಂದು ದಿನ ಭೋಜನವ ತೊರೆದಿ- ।
ನ್ನೊಂದು ದಿನ ಭೋಜನವ ಮಾಳ್ಪರು ।
ತಿಂದು ಮೊದಲಿನ ದಿನಕೆ ಕಾಸಿದ ಹಾಲನಾ ಬಳಿಕ ॥
ತಿಂದು ಬಿಸಿ ತುಪ್ಪವನು ಮರುದಿನ ।
ತಿಂದು ಬಿಸಿ ನೀರನ್ನು ಮರುದಿನ ।
ಚಂದದಿಂದುಪವಾಸ ಮಾಳ್ಪರು ನಾಲ್ಕನೆಯ ದಿನದಿ ॥ ೨೨೯ ॥

ಕೋಳಿತತ್ತಿಯ ಮಾನ ತುತ್ತನು ।
ಲೀಲೆಯಿಂ ಶತಿಕಲೆಯು ತೆರದಲಿ ।
ಮೇಲೆ ಕೆಳಗೇರಿಸುತಲಳಿಸುತಗ್ರಾಸ ತಿನ್ನುವದು ॥
ಆಲಿಸೈ ಯಮವಾಸ್ಯೆ ದಿವಸದಿ ।
ಕೂಳ ತಿನದುಪವಾಸ ಹುಣ್ಣಿಮೆ- ।
ವೇಳೆಯಲಿ ಹದಿನೈದು ತುತ್ತುಗಳಳಿಸುತೇರಿಪರು ॥ ೨೩೦ ॥

ತಿರಿಗಿ ತಿಂಗಳ ತನಕ ತಿಂಡಿಯ ।
ತೊರೆದು ಮಾಳ್ಪರು ಪಾಸವಿಧಿಯನು ।
ಪರಿಪರಿಯಲಿ ವ್ರತೋಪವಾಸವ ಮಾಡಿ ನಿಯಮದಲಿ ॥
ನರಶರೀರದ ಸಪ್ತಧಾತುಮ- ।
ನಿರಹೆ ಶೋಷಿಸಿ ಶುದ್ಧಿ ಪಡೆವರು ।
ಪರಿಪರಿಯ ತಪದಾಚರಣೆಯನು ಮಾಳ್ಪರೈ ಜಗದಿ ॥ ೨೩೧ ॥

ಧರೆಯಲಿ ತಪೋಯಜ್ಞದಾನಗ- ।
ಳಿರುವುವೈ ಬಂಧನಕೆ ಕಾರಣ- ।
ವಿರುವುದೀಪರಿ ಕೀರ್ತಿ ಜಗದಲಿ ನೋಡು ಕೌಂತೇಯ ॥
ನರನೆ ಕರ್ಮಾರಂಭದಲ್ಲಿಯೆ ।
ಭರದಲೋಂಕಾರವನು ಜಪಿಸರು- ।
ಚ್ಚರಿಸೆ ಮೋಕ್ಷದ ಹಾದಿ ಸುಲಭದಿ ಗವ್ಯವಾಗುವ್ವದು ॥ ೨೩೨ ॥

ತೀರದಲ್ಲಿಹ ನಾವೆಯನು ನದಿ- ।
ನೀರಿನಲಿ ನೇರಿಸಲು ಕಷ್ಟವೆ ।
ನೀರಿನಲಿ ತೇಲಿಸಿದರದ ತಾವಿಸುವ್ದೈ ನದಿಯ ॥
ತೋರುವ್ದು ಸಂಸಾರನೀವರಿ ।
ಚಾರುಕರ್ಮಾಚರಣ ಕಠಿಣವು ।
ತಾರಿಸುವ್ದೀ ಕರ್ಮ ಪ್ರಣವೋಚ್ಚಾರ ಮಾಡಿದ ॥ ೨೩೩ ॥

ಪರಿಕರಿಯ ವಿಸ್ತಾರ ಸಾಕಿಹು ।
ನರನೆ ಜ್ಞಾನಾದಿಗಳ ಕರ್ಮದಿ ।
ಬರಲು ಯೋಗ್ಯತೆ ಪ್ರಣವಮಂತ್ರೋಚ್ಚಾರದಲಿ ಪಾರ್ಥ ॥
ಅರಿಯಲೀಪರಿ ಕರ್ಮಫಲಗಳು ।
ಬರಲು ದ್ಯುಗ್ಲೋಕರಕೆ ತದನಂ- ।
ತರದಲುಚ್ಚಾರಿಸುವುದೈ ಮಂತ್ರವನು ತತ್ತ್ವಜ್ಞ ॥ ೨೩೪ ॥

ತದಿತ್ಯನಭಿಸಂಧಾಯ ಫಲಂ ಯಜ್ಞತಪಃಕ್ರಿಯಾಃ।
ದಾನಕ್ರಿಯಾಶ್ಚ ವಿವಿಧಾಃ ಕ್ರಿಯಂತೇ ಮೋಕ್ಷಕಾಂಕ್ಷಿಭಿಃ ॥ ೨೫ ॥

ನರನೆ ವಿಶ್ವಾತೀತನಿರುತಿಹ ।
ಪರಮತತ್ತ್ವವದೊಂದು ಸರ್ವಮ ।
ನಿರದೆ ನೋಡಲು ಶಕ್ತನಿಹುದದು ನೋಡು ತತ್ತಿಹುದು ॥
ಇರುವುದದು ಪರಬ್ರಹ್ಮರೂಪವು ।
ಕರೆವರಿದನೇ ತತ್ತೆನುತಲೀ- ।
ಧರೆಯೊಳಗೆ ಕೋವಿದರು ಮೆರೆವುದನಾದಿಸಿದ್ಧವದು ॥೨೩೫॥

ತಿಳಿಯುತೀಪರಿ ಲಕ್ಷಣಂಗಳ- ।
ನಿಳಿಯೊಳದ ಧ್ಯಾನಿಪರು ಮನದಲಿ ।
ತಿಳಿದು ಬರಲದು ಕರೆವರದನೇ ತತ್ತೆನುತ ಪಾರ್ಥ ॥
ಇಳೆಯಲೀ ತದ್ರೂಪ ಬ್ರಹ್ಮಕೆ ।
ಸಲಸಹಿತ ಕರ್ಮಗಳನರ್ಪಿಸು- ।
ತಳೆದು ಹೋಗಲಿ ಸರ್ವಕರ್ಮಗಳೆಂದು ಪ್ರಾರ್ಥಿಪರು
॥ ೨೩೬ ॥

ಪರಿಯಲೀ ತದ್ರೂಪಬ್ರಹ್ಮಕೆ ।
ಹರುಷದಿಂ ಕರ್ಮಗಳನರ್ಪಿಸಿ ।
ಯರುಹುವರು ಕರ್ಮಗಳು ತಮ್ಮವಿವಲ್ಲವೆನ್ನುತಲಿ ॥
ಧರೆಯಲೀತೆರದಿಂದ ಕರ್ಮಾ- ।
ಚರಣದರ್ಪಣ ಮಾಡುತಂಗಮ- ।
ನಿರದೆ ಝಾಡಿಸಿ ಮೋಕ್ಷ ಪಡೆವರು ಕರ್ಮಫಲದಿಂದ
॥ ೨೩೭ ॥

ನರನೆ ಕರ್ಮಾರಂಭದಲಿ ಯು- ।
ಚ್ಚರಿಸಿ ಓಂಕಾರವನು ತದನಂ- ।
ತರದಿ ತತ್ತುಚ್ಚಾರಿಸುತ ತತ್ಫಲವನರ್ಪಿಪುದು ॥
ಬರುವುದೈ ಬ್ರಹ್ಮತ್ವ ಕರ್ಮಕೆ ।
ಪರಿಯಿದಾದರು ಕಾರ್ಯಭಾಗವು ।
ಯಿರುವುದೈ ಮುಂದಕ್ಕೆ ಕೇಳೈ ಪಾರ್ಥ ಮನಗೊಟ್ಟು॥೨೩೮॥

ನರನೆ ಕರ್ಮಾಚರಣ ಮಾಳ್ಪನಿ- ।
ಗಿರುವುದಲ್ಲವೆ ದ್ವೈತಭಾವವು ।
ಹರಿಯದಲೆ ಕೇಳ್ ದ್ವೈತ ಬ್ರಹ್ಮನೊಳೈಕ್ಯಹೊಂದದಲಾ ॥
ಶರಧಿಯಲಿ ಲವಣವನು ಹಾಕಲು ।
ಕರಗಿ ಹೋಗುವುದಿದುವು ನಿಜವಾ ।
ದರು ಕಣಾ ನೀರಿನಲಿ ಖಾರಟಗುಣವು ತೋರುವುದು ॥ ೨೩೯ ॥

ನರನೆ ಕರ್ಮಕೆ ಬ್ರಹ್ಮರೂಪವು ।
ದೊರೆಯುತೆಂಬುದೆ ದ್ವೈತಲಕ್ಷಣ ।
ಬರಲು ದ್ವೈತಕೆ ವೃದ್ಧಿ ಸಂಸೃತಿಭೀತಿ ವರ್ಧಿಪುದು ॥
ಹರಿಯು ಕೇಳೀ ತೆರದಿ ಪಾರ್ಥನಿ- ।
ಗರುಹಿದನು ನಿಜ ಬಾಯಿಯಿಂದಲಿ ।
ಪರಿಪರಿಯಲೀ ತತ್ತ್ವವನೆ ಘೋಷಿಪುವು ವೇದಗಳು ॥ ೨೪೦ ॥

ಮೆರೆವ ಬ್ರಹ್ಮಸ್ವರೂಪ ದ್ವೈತವ ।
ಹರಿಯಲೋಸುಗ ಯೋಚಿಸಿದರೀ- ।
ಪರಿಯ ಸಚ್ಛಬ್ದನನು ಕೇಳೀ ಶಬ್ದಜ್ಞಾನದಲಿ ॥
ಹರಿದು ಹೋಗುವುದೆಲ್ಲ ದ್ವೈತವು ।
ಧರೆಯೊಳೋಂತತ್ತೆನುತ ತಾನು- ।
ಚ್ಚರಿಸಿ ಮಾಡಿದ ಕರ್ಮ ಬ್ರಹ್ಮಸ್ವರೂಪವಾಗುವುದು ॥ ೨೪೧ ॥

ಇರುವುದಿದುವೆ ಪ್ರಶಸ್ತ ಕರ್ಮವು ।
ಕರೆವರಿದನಾ ಹೆಸರಿನಿಂದಲೆ ।
ಯಿರುವುದೀ ಸಚ್ಛಬ್ದ ನೋಡು ಪ್ರಶಸ್ತಕರ್ಮದಲಿ ॥
ಧರೆಯಲೀ ಶಬ್ದೋಪಯೋಗವು ।
ಯಿರುವುದೀಪರಿ ಶ್ರವಣಯೋಗ್ಯವು ।
ಹರಿಯು ಪೇಳಿದನಿದನು ಪೇಳುವೆನೆಂದು ಪಾರ್ಥನಿಗೆ ॥ ೨೪೨ ॥

ಸದ್ಭಾವೇ ಸಾಧುಭಾವೇ ಚ ಸದಿತ್ಯೇತತ್ಪ್ರಯುಜ್ಯತೇ।
ಪ್ರಶಸ್ತೇ ಕರ್ಮಣಿ ತಥಾ ಸಚ್ಛಬ್ದಃ ಪಾರ್ಥ ಯುಜ್ಯತೇ ॥ ೨೬ ॥

ಖೊಟ್ಟ ನಾನ್ಯವಸತ್ಸ್ವರೂಪವು ।
ದೃಷ್ಟಿಗೆಸೆವೀ ವಿಶ್ವವೆಲ್ಲವು ।
ಸೃಷ್ಟಿಯಲ್ಲೀ ಸತ್ಸ್ವರೂಪವ ನಿತ್ಯವವ್ಯಕ್ತ ॥

ದೃಷ್ಟಿಪಥದಲಿ ಬಂದು ಲೋಕದಿ ।
ಖೊಟ್ಟ ನಾನ್ಯವೆ ಸತ್ಯವೆನುತಲಿ ।
ಸೃಷ್ಟಿಯಲ್ಲಾಭಾಸವಾಗುವುದೈ ಧನಂಜಯನೆ ॥ ೨೪೩ ॥

ಸತ್ಸ್ವರೂಪಕೆ ದೇಶಕಾಲದಿ ।
ಪ್ರಾಪ್ತವಾಗದು ಭಿನ್ನತೆಯು ಮೇಣ್ ।
ನಿತ್ಯವೊಂದೇ ರೂಪವಿಹುದವ್ಯಕ್ತ ನೋಡಿದರೆ ॥
ಧಾತ್ರಿಯಲ್ಲೀ ದೃಷ್ಟಿಗೋಚರ ।
ಸತ್ಯ ತತ್ಪದರೂಪನೆಲ್ಲೆಲ್ಲ ।
ನಿತ್ಯವಲ್ಲೀ ದೃಷ್ಟಿಗೋಚರ ರೂಪ ಕೌಂತೇಯ ॥ ೨೪೪ ॥

ಜೀವಲಾ ಸದ್ರೂಪ ದೃಷ್ಟಿಗೆ ।
ಯೇಳುತಿಹುದೈ ಸ್ವಾತ್ಮಜ್ಞಾನವು ।
ಯೇಳಲೀಪರಿ ಜ್ಞಾನ ಸದ್ಯೋಗದಲಿ ಕೌಂತೇಯ ॥
ಮೇಲೆ ಬ್ರಹ್ಮಸ್ವರೂಪವಾಗಿಹ ।
ಕೇಳು ಪಾರ್ಥ ಪ್ರಶಸ್ತಕರ್ಮವ ।
ತಾಳುವುದು ಬ್ರಹ್ಮೈಕ್ಯಸದನಿಯ ಜ್ಞಾನಮಾರ್ಗದಲಿ
॥ ೨೪೫ ॥

ನಂತರದಲೋಂಕಾರ ತತ್ಪದ- ।
ವೆಂಶ ಯೆರಡಾ ಶಬ್ದ ಬಿದುತಲಿ ।
ಸಂತತದಲಾ ಸತ್ಸ್ವರೂಪವನೇಕಭಾವದಲಿ ॥
ಚಿಂತಿಸುತಲಿರ ಬೇಕು ಯೊಪರಿ ।
ಕುಂತಿನಂದನ ನೋಡು ಮಂತ್ರದ ।
ಬಂತೆ ನಿನಗಂತಸ್ಸರೂಪವ ಮನದಿ ಹೇಳೆನಗೆ ॥ ೨೪೬ ॥

ಎಂದನೀಪರಿ ಕೃಷ್ಣ ಪಾರ್ಥನಿ- ।
ಗೆಂದು ಜ್ಞಾನೇಶ್ವರನು ಪೇಳಿದ- ।
ನೆಂದವನು ನಾನಲ್ಲವಿದು ಪರಮಾತುಮನ ಮಾತು ॥
ಎಂದವನು ನಾನಲ್ಲ ಶ್ರೀಗೋ- ।
ವಿಂದನೆಂದೇ ಮುಂದೆ ಯೆಂದರೆ ।
ಬಂದುದಲ್ಲವೆ ದ್ವೈತಭಾವವು ಕುಂದು ಕೃಷ್ಣನಲಿ ॥ ೨೪೭ ॥

ನಾನು ಹೇಳಿದುದೆಲ್ಲನಿಹುದಾ- ।
ಶ್ರೀನಿವಾಸನ ನುಡಿಗಳಲ್ಲವೆ ।
ಜ್ಞಾನರಾಜನು ಪೇಳ್ವನೀಪರಿ ಶ್ರೋತೃವೃಂದಕ್ಕೆ ॥
ಏನ ಹೇಳಲಿ ಶಬ್ದ ಸತ್ತಿದು ।
ಕ್ಷೋಣಿಯಲ್ಲುಪಕೃತಿಯ ಮಾಡುವ- ।
ದೂಣಯವು ನಾತ್ತ್ವಿಕ ಸುಕರ್ಮದಿ ಬರಲು ಕಿಂಚಿತ್ತು
॥ ೨೪೮ ॥

ನರಶರೀರವು ಪೂರ್ಣನಿದ್ದರು ।
ಕೊರತೆಯೊಂದಿರಲವಯವದೊಳಿದು ।
ತರುವುದಲ್ಲವೆ ಕೊರತೆ ವ್ಯವಹಾರದಲಿ ಕಲಿಪಾರ್ಥ ॥

ಕೊರತೆಯಿರಲಾ ತೆರದಿ ರಥದಲಿ ।
ಚರಿಸಲಾರದು ರಥವು ತದ್ವ- ।
ತ್ತಿರಲು ಕೊರತೆಯ ಲೇಶ ಸ್ವಾವಸತ್ಯವಾಗುವುದು ॥ ೨೪೯ ॥

ಕೊರತೆ ಯೊಪರಿಯಾಗಿ ಪೂರ್ಣತ- ।
ನರಸಶಬ್ದಸಹಾಯದಿಂದಲೆ ।
ಒರುವುದೈ ಸದ್ರೂಪಕವ್ಯಕ್ತತೆಯು ಕೌಂತೇಯ ॥
ಮರಳಿ ತೇಜೋಬಲದಿ ತನ್ನಯ ।
ಹರಿವುದೈ ವ್ಯಂಗತೆಯು ಜೀರ್ಣೋ- ।
ದ್ಧರಣ ಮಾಳ್ಪುದು ನೋಡು ಸತ್ಕರ್ಮವನು ಕೌಂತೇಯ
॥ ೨೫೦ ॥

ಒರುವುದೀ ಸದ್ಭಾವ ಕರ್ಮಕೆ ।
ತರುವುದೀ ಯೋಗ್ಯತೆಯು ಪಾರ್ಥನೆ ।
ತರುವುದಾಯೋಗ್ಯವನು ದಿವ್ಯಾಪಧವ್ರ ಸೇವನದಿ ॥
ನರ ಪರಾಜಿತನಾಗೆ ಮೇಣಾ- ।
ನರಗೆ ದೊರೆಯೆ ಸಹಾಯ ಸಾಹಸ- ।
ವೆರಡು ಪಟ್ಟಾಗುವುದು ಶತ್ರುಸರಾಜಯಕೆ ಪಾರ್ಥ ॥ ೨೫೧ ॥

ನರನೆ ನ್ಯೂನತೆ ಹರಿಪುದೈ ತತ್ ।
ಪರಿಯಲೀ ಶಬ್ದಪ್ರಭಾವನ- ।
ನರಿಯಲಾ ಕೌಂತೇಯ ಬಹುತರ ಚಿತ್ರವಾಗಿಹುದು ॥
ಮುರಿದು ಮರ್ಯಾದೆಯ ಪ್ರಮಾದದ ।
ಭರದಲಾ ಕ್ರಮಿಸಲು ನಿಷಿದ್ಧರ ।
ಪರಿಯು ಬರುವುದು ದೋಷಸಂತತಿ ಗಣನೆಯಿಲ್ಲದಲೆ ॥ ೨೫೨ ॥

ಪರಿಪರಿಯಲಿ ನಿಷಿದ್ಧ ಕರ್ಮವ ।
ಚರಿಸಿದರೆ ದುಷ್ಕರ್ಮವೆನ್ನಿಸ- ।
ರಿವನಾವನೊ ದುಷ್ಕರ್ಮವನವನೆ ಜಾಣನಲಾ ॥
ಪರಿಯಲೀ ಜ್ಞಾತನಿಗೆ ಸತ್ತೀ- ।
ನರನ ಶಬ್ದವೆ ಯೋಚಿಸಲನಂ- ।
ತರದಲಾಗುವುದದು ಸುಕರ್ಮವ ದುಷ್ಕರ್ತನ ಮೋಗಿ ॥ ೨೫೩ ॥

ಸ್ವರಿಶಘರ್ಷಣ ಲೋಹಕಾದರೆ ।
ಹರಿವ ನೀರಲಿ ಗಂಗೆ ಬಂದರೆ ।
ಮರಣವಶನಾದವನಿಗಮೃತದ ವೃಷ್ಟಿ ಸುರಿದಂತೆ ॥
ಇರುವುದೀ ಸದ್ಭಬ್ದಯೋಜನೆ- ।
ಯಿರುವುದೀಪರಿ ಸತ್ಪಭಾವವು ।
ನರನೆ ಕೇಳೀ ತೆರದಿ ಭಾವನೆ ಮಾಡಿ ಮನದೊಳಗೆ ॥ ೨೫೪ ॥

ನರನೆ ನೀ ಸಚ್ಚಿದ್ಭವನ್ನ- ।
ಚ್ಛಕ್ತಿಸಲಾಕ್ಷಣ ಬ್ರಹ್ಮರೂಪದ ।
ಬರುವುದ್ಯೆ ಭಾವನೆಯು ಕೇವಲ ಬ್ರಹ್ಮವೀಶಬ್ದ ॥
ಇರುವುದೀ ಯೋಂತತ್ಸತೆಂಬು- ।
ಕ್ಷರಕ ಮಂತ್ರ ಮುಮುಕ್ಷುವರ್ಗಕೆ ।
ವರಪರಬ್ರಹ್ಮವನು ದೊರಕಿಸುತಿರುವ ಸಾಧನವು ॥ ೨೫೫ ॥

ಇರುವುದೀ ಪರಬ್ರಹ್ಮ ಸ್ವಚ್ಛವು ।
ಯಿರುವುದಪರಿಚ್ಛಿನ್ನ ರೂಪವು ।
ಯಿರುವುದೋಂ ತತ್ಸತ್ತು ಬ್ರಹ್ಮದ ಗೂಢನಾಮವಿದು ॥

ಬರುವುದಾ ಬ್ರಹ್ಮಪ್ರಭಾವದಿ ।
ಮೆರೆವ ದೃಶ್ಯಕೆ ಸುಪ್ರಕಾಶವು ।
ಯಿರುವುದೀ ಮಂತ್ರಕ್ಕೆ ಬ್ರಹ್ಮಾಶ್ರಯವು ಕೌಂತೇಯ ॥ ೨೫೬ ॥

ತರಣಿ ಗಗನದಲುದಿತನಾಗಲು ।
ತರಣಿ ತರಣಿಯ ಬೆಳಗಿಸುವನ್ನೆ ।
ಪರಿಯಲೀ ಮಂತ್ರವನು ಬಾಯಿಂದುಚ್ಚರಿಸೆ ಕ್ಷಣದಿ ॥
ಬರುವುದಲ್ಲವೆ ಬ್ರಹ್ಮವ್ಯಾಪ್ತಿಯು ।
ನರನ ಮೂರಕ್ಷರದ ಶಬ್ದವಿ- ।
ದಿರದೆ ಬ್ರಹ್ಮಸ್ವರೂಪ ಕರ್ಮಾಚರಣಕಾರಣವು ॥ ೨೫೭ ॥

ಯಜ್ಞೋ ತಪಸಿ ದಾನೇ ಚ ಸ್ಥಿತಿಃ ಸದಿತಿ ಚೋಚ್ಯತೇ ।
ಕರ್ಮ ಚೈವ ತದರ್ಥೀಯಂ ಸದಿತ್ಯೇವಾಭಿಧೀಯತೇ ॥ ೨೭ ॥

ಸ್ಪರಿಶಸ್ಪರ್ಶದಿ ಚಿನ್ನವಾಗಲು ।
ಬರುವುದೆನ್ನೆ ಭೇದ ನಂತರ- ।
ವಿರುವುದೊಂದೇ ಪರಿಯ ಶುದ್ಧವು ಚಿನ್ನ ಪರಿಕಿಸಲು ॥
ನರನೆ ಕೇಳಾತೆರದಿ ಕರ್ಮವ- ।
ನಿರದೆ ಬ್ರಹ್ಮಾರ್ಪಣವ ಮಾಡಲು ।
ಬರುವುದೆಲ್ಲಕೆ ಬ್ರಹ್ಮರೂಪವು ಶುದ್ಧ ಕೌಂತೇಯ ॥ ೨೫೮ ॥

ಇರಲಿ ಪ್ರಾರಂಭದಲಿ ಕೊರತೆಯು ।
ಬರಲಪೂರ್ಣತೆ ಕರ್ಮಪಂಕ್ತಿಗೆ ।
ಯಿರಲಿ ದಾನಕೆ ಯಜ್ಞತಪಗಳೆಗೂಣಯವು ತಿಳಿಯೆ ॥
ಧರೆಯಿಲಿದನೆಲ್ಲವನು ಬ್ರಹ್ಮ- ।
ಕ್ಕೆರಡೆ ಭಕ್ತಿಯಲರ್ಪಿಸಲನಂ- ।
ತರದಿ ನ್ಯೂನತೆ ತೋರುವುದೆ ಬ್ರಹ್ಮಸ್ವರೂಪದಲಿ ॥ ೨೫೯ ॥

ಶರಧಿಯಲಿ ನದಿ ಬಂದು ಸೇರಲು ।
ಯಿರುವುದೇನ್ನೆ ಭೇದ ನಂತರ ।
ಶರಧಿರೂಪವ ತಾಳ್ವುದಲ್ಲವೆ ನದಿ ಧನಂಜಯನೆ ॥

ನರನೆ ಬ್ರಹ್ಮಾರ್ಪಣದ ಕರ್ಮದೊ- ।
ಳಿರುವುದೇನ್ನೆ ಕೊರತೆ ಪೂರ್ಣತೆ- ।
ಯಿರುವುದೆಲ್ಲವು ಕರ್ಮ ಬ್ರಹ್ಮಸ್ವರೂಪದಲಿ ವಾರ್ಧ ॥ ೨೬೦ ॥

ನರನೆ ಜ್ಞಾನಿಯೆ ನಿನಗೆ ನಾನೀ- ।
ತೆರದಿ ಬ್ರಹ್ಮದ ಶಕ್ತಿಯನು ವಿ- ।
ಸ್ತರಿಸಿ ಪೇಳ್ದೆನು ನಿನಗೆ ನಾ ದೃಷ್ಟಾಂತಪೂರ್ವಕದಿ ॥
ಮರಳೆ ನಾನಾ ಬ್ರಹ್ಮಶಬ್ದಾ- ।
ಕ್ಷರಗಳನು ನಿಂಗಡಿಸಿ ಪೇಳ್ದೆನು ।
ಪರಿಪರಿಯಲೀ ಶಬ್ದವಿಸ್ತಾರವನು ತಿಳಿಸಿದೆನು ॥ ೨೬೧ ॥

ಇರುವುದೀಪರಿ ಬ್ರಹ್ಮಮಹಿಮೆಯು ।
ಅರಿಯಿತೇ ನಿನಗಿದರ ಮರ್ಮವು ।
ನರನೆ ಮುಂದೀ ನಾಮದಲಿ ನೀ ಶ್ರದ್ಧೆ ಯಿಡಬೇಕು ॥
ಮರಣ ಜನ್ಮದ ಪಾಶದಿಂದಲೆ ।
ದೊರಕಿಸುವಿ ನೀ ಮೋಕ್ಷಪದವಿಯ ।
ನರನೆ ನೀ ಕರ್ಮದಲಿ ಮುಂದೀ ಶಬ್ದವಾಚರಿಸು ॥

ನರನೆ ಕೇಳೀ ತೆರದಿ ಕರ್ಮಾ- ।
ಚರಣ ಮಾಡಲು ಕರ್ಮಪೂರ್ಣತೆ ।
ದೊರುಕುವುಹು ಮೇಣ್ ವೇದರೂಪವು ಕರ್ಮವಾಗುವುದು ॥೨೬೨॥

ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್ ।
ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯ ನೋ ಇಹ ॥ ೨೮ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಶ್ರದ್ಧಾತ್ರಯವಿಭಾಗಯೋಗೋ ನಾಮ ಸಪ್ತದಶೋಽಧ್ಯಾಯಃ ॥ ೧೭ ॥

ಬಿಟ್ಟು ಬಿಡುತೀ ಮಾರ್ಗ ವೈದಿಕ । ಶ್ರದ್ಧೆ ಯಿಲ್ಲದೆ ಮಾಳ್ಪ ಕರ್ಮನಿ- ।
ನಷ್ಟ ಮಾಡುತ ಶ್ರದ್ಧೆ ಯಿಲ್ಲವ । ಪಿದ್ಧವೆನುವರು ಪಾರ್ಥ ಕೇಳ್ ।
ದುಷ್ಟ ಸುದುರಾಗ್ರಹದ ಬಲವನು ವರ್ಧಿಸುತ ಪಾರ್ಥ ॥ ಶ್ರದ್ಧೆಯಿಂ ಬ್ರಹ್ಮಾರ್ಪಣವ ಮಾಡುವುದು ಕರ್ಮವನು ॥
ನಿಸ್ಕೆ ನೇಮವ ಮಾಡಿದರೆ ಸಂ- । ಇದ್ದರೀ ಪರಿ ಜಗದಿ ಕರ್ಮಕೆ ।
ಕಷ್ಟವಲ್ಲವೆ ಜಗಕೆ ಸ್ವಾಸ್ಥ್ಯಕೆ । ಸಿದ್ಧಿಯಹುದೈ ಬ್ರಹ್ಮರೂಪದಿ ।
ಒತ್ತಿ ಕೆಟ್ಟಡಿಯಿಲಿ ಭ್ರಮಣದ ಪರಿಯಿದಾಗುವುದು ಶ್ರದ್ಧೆಯಿಲ್ಲದೆ ಕರ್ಮ ವ್ಯರ್ಥ ಶ್ರಮವು ನಿಷ್ಫಲವು ॥ ೨೬ಲ ॥
॥ ೨೬೩ ॥

ತುರಗಮೇಧವ ಕೋಟಿಸಂಖ್ಯೆಯೊ- । ದುರಿತಗಜಸಂಹಾರಕಾರಕ ।
ಕೆರದೆ ಮಾಡಲು ಫಲವಿದೇನೈ । ಹರಿಯು ತಾಪತ್ರಯದ ಕರ್ತಲೆ ।
ಧರಣಿತುಲ್ಯದ ರತ್ನದಾನವ ಮಾಡಲೇನು ಫಲ ॥ ಹರಿವ ತರಣಿಯು ಶ್ರೀವರನು ವೈಕುಂಠನಾಯಕನು ॥
ವರುಷಸಾವಿರ ತನಕ ತಪವಾ- । ಕರುಣದಿಂ ಪರಮಾತ್ಮ ಶ್ರೀಹರಿ- ।
ಚರಿಸಲೇನಂಗುಟದಿ ನಿಂತರೆ । ಯರುಹಿದನು ಪಾರ್ಥನಿಗೆ ಪ್ರೇಮದಿ ।
ಶರಧಿಯಂದದ ಕೆರೆಯು ಕಟ್ಟಿಸಲೇನು ಸಹಜಲದ ॥ ೨೬೪ ॥ ಯರುಹಲೇನದ ಪಾರ್ಥ ಧನ್ಯನು ಧನ್ಯ ಧನ್ಯನಲಾ ॥ ೨೬೯ ॥

ರಥ್ಯೆಯಲಿ ಮಳೆ ಬಿದ್ದರೇನ್ಸೈ । ನರನು ಸ್ನಾತ್ಮಾನಂದಲೀಸನು ।
ವ್ಯರ್ಥವಲ್ಲವೆ ಬೂದಿಗಾಹುತಿ । ಕರಗಿದನು ಸ್ನಾನಂದಭರದಲಿ ।
ವ್ಯರ್ಥವಲ್ಲವೆ ನೆಳಲಿಗಾಲಿಂಗನವ ಕೊಡುತಿಹುದು ॥ ಕರಗಿ ಹೋಗುವ ತೆರದಿ ವೂರ್ಣಿಮೆ ದಿನದಿ ಚಂದ್ರನು ॥
ಲತ್ತೆಯನು ಗಗನಕ್ಕೆ ಹೊಡೆದರೆ । ಧುರಪ್ರಸಂಗವನೇನ ಹೆಳಲಿ ।
ವ್ಯರ್ಥವಲ್ಲವೆ ಶ್ರಮವು ಮಾತ್ರವೆ । ಯಿರುವುದದು ಕಡು ಲೋಭಿಯಂದದಿ ।
ವ್ಯರ್ಥವೀಪರಿ ಶ್ರದ್ಧೆ ಯಿಲ್ಲದ ಕರ್ಮ ಕೌಂತೇಯ ॥ ೨೬೫॥ ಶರದಿ ಜೇವರ ಲೆಕ್ಕ ಮಾಡುತ ಹರಣ ಮಾಳ್ಪುದಲಾ ॥ ೨೭೦ ॥

ನರನೆ ಗಾಣದಿ ಕಲ್ಲ ಪುಡಿಯನು । ಇರುವುದಿದು ದುರ್ಘಟ ಪ್ರಸಂಗವು ।
ತುರುಕಿಸುತ ತಿರುಗಿಸಲು ಗಾಣವ । ನರನು ಸ್ನಾತ್ಮಾನಂದಭರದಲಿ ।
ಬರುವುದೇನ್ಸೈ ಯೆಂಣೆಯಿಂದಿಯು ಸೋಡು ಕೌಂತೇಯ ॥ ಸುರತಸೈ ನಿಜದೇಹಭಾನವ ಸಮರಭೂಮಿಯಲಿ ॥
ನರನಿಗೀ ಕರ್ಮಪ್ರಭಾವದಿ । ಧರೆಯಲೀಪರಿ ಭಾಗ್ಯಶಾಲಿಯು- ।
ಬರುವುದ್ವೆ ದಾರಿದ್ರ್ಯ ಸಂತತ । ನರಿಯೆನನ್ಯರ ನಾನು ಭಾಗ್ಯವ ।
ನರನು ಬುತ್ತಿಗೆ ಹಂಚಿನುಂಡೆಯ ಕಟ್ಟಿ ಕೊಂಡಂತೆ ॥೨೬೬॥ ವರಿಸಿಶಲ್ಲನೆ ಪಾರ್ಥನನು ಭುವನೈಕನೀರನನು ॥ ೨೭೧ ॥

ದೇಶವಾಗಲಿ ಮೇಣು ಜೇರೆ ವಿ- । ಅರುಹಿದನು ಸಂಜಯನು ಭೂಪಗೆ ।
ದೇಶವಾಗಲಿ ಕಟ್ಟ ಕೊಂಡರು- । ಧರಣಿಪತಿ ಧೃತರಾಷ್ಟ್ರ ಕೇಳ್ ।
ವಾಸ ಸಾಯುವ ಸಂಧಿಯಿಲ್ಲದೆ ಬಾರದುಪಯೋಗ ॥ ನರನು ದುರ್ಯೋಧನಗೆ ವೈರಿಯು ಮಾಡಲಿಶ್ಟೇನು ॥
ಈಸುಪರಿಯಲಿ ಶ್ರದ್ಧೆ ಯಿಲ್ಲದ । ಒರುವುದವನಲಿ ಪ್ರೀತಿ ಸದ್ಗುಣ- ।
ತ್ರಾಸದಾಯಕ ಕರ್ಮವಿಹಪರ- । ಭರದಿ ಯೆನ್ನಯ ಸೌಖ್ಯವ್ಯಾಪ್ತಿಗೆ ।
ನಾಶಕವಲಾ ಸೌಖ್ಯನಿಲ್ಲೆ ಯುಭಯಲೋಕದಲಿ ॥೨೬೭॥ ಗುರುವಲಾ ನರ ಕೇಳಲಾಕ್ಷಣ ಹರಿಯು ಪೇಳ್ದನಲಾ ॥ ೨೭೨ ॥

ನರನು ಪ್ರಶ್ನೆಯ ಕೇಳ್ದಕಾರಣ ।
ದೊರೆಯುತೈ ಪರಮಾರ್ಥಸಾಧನ ।
ನರನ ಭಾಗ್ಯದಿ ಲಾಭವಾಯ್ತೆನಗಿಂದು ಧೃತರಾಷ್ಟ್ರ ॥
ತಿರಿಗಿ ನಾನಜ್ಞಾನತಿಮಿರದಿ ।
ಮರಣಜನ್ಮದ ಬಲೆಗೆ ಸಿಲುಕಿದೆ ।
ಮರುಳ ಸಂಜಯನಿಂಗೆ ಸ್ವಾತ್ಮಜ್ಞಾನವುದಯಿಸಿತು ॥೨೭೩॥

ಧರಣಪತಿ ಧೃತರಾಷ್ಟ್ರ ನಿನಗೀ- ।
ಪರಿಯ ಲಾಭವಿದಾಯಿತೆಮಗೀ- ।
ರ್ವರಿಗೆ ಪಾರ್ಥನು ಗುರುವಲಾ ಶ್ರೀವ್ಯಾಸನಂದದಲಿ ॥

ಅರುಹುತೀಪರಿ ಸಂಜಯನು ಭೂ- ।
ವರಗೆ ತತ್ಕ್ಷಣ ಮನದಿ ನೆನೆದನು ।
ಅರರೆ ದುಷ್ಟನ ಮುಂದೆ ಪಾರ್ಥನ ವ್ಯರ್ಥ ತುತಿಸಿದೆನು ॥ ೨೭೪ ॥

ಪರಿಯಲಾ ಸಂಜಯನು ಭೂಪನಿ- ।
ಗರುಹಿದನು ವಿಷಯಾಂತರವಲಾ ।
ಹರಿಯ ಪಾರ್ಥನ ವಾದರೂಪದ ತತ್ತ್ವಬೋಧೆಯನು ॥
ನರನು ಕೇಳಿದ ತೆರದಿ ನಾನದ ।
ವಿರಚಿಸುವೆ ಕನ್ನಡದಿ ಪ್ರಾಕೃತ- ।
ನರರಿಗೋಸುಗ ವಿಷ್ಣುಸದ್ಗುರುವರನು ಪೇಳ್ದಂತೆ ।। ೨೭೫ ॥

ಇತಿ ಶ್ರೀಮೂಡಕಟ್ಟಿಸುಬ್ಬರಾವಾತ್ಮಜರಾಘವೇಂದ್ರರಾಯಕೃತವಾದ ಕನ್ನಡಜ್ಞಾನೇಶ್ವರಿಯಲ್ಲಿ
(೧೭) ಹದಿನೇಳನೆಯ ಅಧ್ಯಾಯ ಮುಗಿದುದು.
ಸಂಸ್ಕೃತ ಮೂಲಶ್ಲೋಕಗಳು ೨೮, ಕನ್ನಡ ಷಟ್ಪದಿಗಳು ೨೭೫.

ಕನ್ನಡ ಜ್ಞಾನೇಶ್ವರಿ.

೧೮ ಹದಿನೆಂಟನೆಯ ಅಧ್ಯಾಯ.

ಜಯ ಜಯಿಸು ಗುರುಮೂರ್ತೀ ನಿರ್ಮಲ ।
ಜಯಿಸು ಭಕ್ತರ ಧಾಮ ಮಂಗಲ ।
ಜಯಿಸು ನೀವಾರ್ದ್ಧಕ್ಯಮೇಘಕೆ ವಾಯುರೂಪನಲಾ ॥
ಜಯಿಸು ನೀನು ಬಲಿಷ್ಠದೇವನೆ ।
ಜಯಿಸು ದುಃಖನಿನಾಶಕಾರಕ ।
ಜಯಿಸು ನಿಗಮಾಗಮದ ವೃಕ್ಷಕ್ಕತುಲಫಲರೂಪ ॥ ೧ ॥

ಜಯಿಸು ನೀ ಸಂಪೂರ್ಣಮೂರುತಿ ।
ಜಯಿಸು ನಿರ್ಗತವಿಷಯವತ್ಸಲ ।
ಜಯಿಸು ಕಾಲಾತೀತ ಲೀಲಾವಿಗ್ರಹನು ಜಗಕೆ ॥
ಜಯ ಜಯಿಸು ನೀ ಕಾಲಕಾರಣ ।
ಜಯಿಸು ಸಕಲಕಲಾವತಂಸನು ।
ಜಯಿಸು ನಿಶ್ಚಲಮೂರ್ತೀ ಶ್ರೀಗುರುವರ್ಯ ಜಯ ಜಯಿಸು
॥ ೨ ॥

ಜಯಿಸು ಚಂಚಲಚಿತ್ತಪ್ರಾಶನ ।
ಜಯಿಸು ಜಗದುತ್ಪತ್ತಿಕಾರಣ ।
ಜಯಿಸು ನಿನ್ನೀಲೀಲೆಯಿಂದಲಿ ಕೀರ್ತಿವಿಸ್ತಾರ ॥
ಜಯಿಸು ನಿಷ್ಕಲರೂಪ ಕೇವಲ ।
ಜಯಿಸು ಪರಮಾನಂದಸ್ಫೂರ್ತಿಯೆ ।
ಜಯಿಸು ಪಾಪನಿನಾಶಕಾರಣ ಮೂಲಭೂತನಲಾ ॥ ೩ ॥

ಜಯಿಸು ನೀನು ಸ್ವಯಂಪ್ರಕಾಶಕ ।
ಜಯಿಸು ಜಗದಂಬುದಕೆ ನೀ ನಭ ।
ಜಯಿಸು ಜಗದುತ್ಪತ್ತಿಮೂಲಸ್ತಂಭ ನೀನಿರುವಿ ॥
ಜಯಿಸು ಸಂಸಾರಾಹಿಗರುಡನೆ ।
ಜಯಿಸು ಸರ್ವೋಪಾಧಿರಹಿತನೆ ।
ಜಯಿಸು ಮಾಯಾವನವ ಕೀಳುವ ಮತ್ತವಾರಣವೆ ॥ ೪ ॥

ಜಯಿಸು ಶಮೆದಮೆಯಂಕುಶದಿ ನೀ ।
ಜಯಿಸಿರುವಿ ಮನ್ಮಥನ ಮದವನು ।
ಜಯಿಸು ನೀನು ದಯಾರ್ಣವನು ಗುರುರಾಯ ವಂದಿಪೆನು ॥
ಜಯ ಜಯಿಸು ನೀನೇಕರೂಪನು ।
ಜಯಿಸು ನೀ ಮತ್ಕಂದರ್ಪಸರ್ಪನ ।
ಜಯಿಸು ಭಕ್ತವ್ರಾತಮಂದಿರದೀಪ ಸೂಜ್ವಲವೆ ॥ ೫ ॥

ಜಯ ಜಯಿಸು ಸಂಸಾರಸಾಗರ ।
ಜಯಿಪ ತಾರಕ ನೀನು ಸದ್ಗುರು ।
ಜಯ ಜಯಿಸು ನೀನದ್ವಿತೀಯನು ಶಾಂತಿಮತ್ಪ್ರಿಯನು ॥
ಜಯಿಸು ದೀನೋದ್ಧಾರಮೂರುತಿ ।
ಜಯಿಸು ಭಕ್ತಾಧೀನದೇವನೆ ।
ಜಯಿಸು ನೀ ಭಜನೀಯ ಮಾಯಾಗಮ್ಯ ಗುರುರಾಯ ॥ ೬ ॥

ಸುರತರುವು ಬೇಡ್ದರೆನೆ ಕೊಡುವುದು ।
ಗುರು ಕೊಡುವ ಬೇಡ್ದಿರಲುನೂ ಸುರ- ।
ತರುವಿಗಿಂತಲು ನಿನ್ನ ಮಹಿಮೆಯಗಾಧ ಗುರುರಾಯ ॥
ಧರೆಯಲೀ ಸುಜ್ಞಾನವೃಕ್ಷಕೆ ।
ಮೆರೆವ ಬೀಜೋತ್ಪತ್ತಿಕಾರಣ- ।
ನಿರಲಿ ಜಯಜಯಕಾರ ನಿನ್ನಯ ಸಂನಿಧಾನಕ್ಕೆ ॥ ೭ ॥

ಪರಿಪರಿಯ ಪ್ರತ್ಯಯವಿಶೇಷಣ- ।
ವಿರಹಿತನು ನೀನಹುದು ನಾನೇ- ।
ನರಿಯೆನೇ ನೀ ವರ್ಣನಾತೀತನು ಜಗದಿ ತಿಳಿಯೆ ॥
ವಿರಚಿಸಲಿ ನಾನೆಂತು ತುತಿಯನು ।
ಪರಮ ನಿರ್ಗುಣನಿರ್ವಿಕಾರನ ।
ಮರುಳನಲ್ಲಾ ನಾನು ಯತ್ನದ ದೋಷ ತಿಳಿದಿಹೆನು ॥ ೮ ॥

ನಾನು ಕೊಡುವ ವಿಶೇಷಣಂಗಳು ।
ಹೀನನಿಹುವೈ ನಿನ್ನರೂಪ- ।
ಕ್ಕೇನ ಹೇಳಲಿ ಯೆಂತು ಬೊಗಳಲಿ ಭಾವರಹಿತನನು ॥
ಜ್ಞಾನವೀಪರಿಯಿರಲು ಲಜ್ಜಾ- ।
ಹೀನನಂದದಿ ತುತಿಯ ಮಾಡುವೆ- ।
ನೇನು ಕಾರಣ ಮಾಪ್ಪಿ ಸಾಹಸವೆಂತ ಕೇಳೆದರೆ ।. ೯ ॥

ಹೇಳುವೆನು ನಾ ವ್ಯಾಂಜಲಿತೆಯಿಂ ।
ತಾಳಲಾರೆನು ವ್ಯಕ್ತಿತಿದೆ ಮನ ।
ಹೇಳಲೇನಾ ಪರಿಯ ನಾಲಿಗೆ ಕುಣಿಯುವುದು ತುತಿಗೆ ॥
ಏಳಲಾ ಹಿಮಕರನು ಗಗನದಿ ।
ತಾಳುವನೆ ಮರ್ಯಾದೆ ಸಾಗರ ।
ಮೇಲೆಮೇಲೇರುವನು ದೋಷವು ಕಡಲಿಗೇನಿಹುದು
॥ ೧೦ ॥

ಚಂದ್ರಕಾಂತವು ತಿಳಿಯೆ ನಿಜಕೈ- ।
ಯಿಂದಲರ್ಘ್ಯವ ಕೊಡುವುದೇನದು ।
ಚಂದ್ರನೇ ಕೊಳ್ಳುವನು ತಾನರ್ಘ್ಯವನು ಶಿಲೆಯಿಂದ ॥
ತಂದು ಲವಣವ ಜಲದಿ ಹಾಕಲು ।
ಬಂದಪುದು ತದ್ರೂಪ ಲವಣಕೆ ।
ಬಂದು ನೋಡೆ ವಸಂತ ಪಲ್ಲವವೇಳುವುದು ಮರಕೆ ॥೧೧॥

ತರಣಿಕಿರಣವ ನೋಡಿದಾಕ್ಷಣ ।
ಸರಸಿಜವು ಲಜ್ಜೆಯನು ತೊರೆಯುತ- ।
ಲರಳುವುದು ಸಂತಸದಿ ಸರಸಿಜದೇನು ದೋಷವದು ॥
ಪರಿಯೊಳೆನ್ನೀಸ್ಥಿತಿಯು ನಿನ್ನಯ ।
ಚರಣದರ್ಶನವಾದ ಕೂಡಲೆ ।
ಗುರುವೆ ನಿನ್ನದು ಚರಣಮಹಿಮೆಯೆ ಯೆನ್ನದೇನಿಹುದು
। ೧೨ ॥

ಗುರುವೆ ನಿನ್ನಯ ಚರಣಧ್ಯಾನದಿ ।
ಮರೆತೆನೈ ನಾ ನಿಜಸ್ವರೂಪವ ।
ಬರಳುತಿಹೆನ್ಯೆ ನಿನ್ನ ಮಹಿಮೆಯುಗಾಧ ನಿರುಪಮವು ॥
ನರನು ಭೋಜನವಾಗಿ ತೃಪ್ತಿಯ ।
ಭರದಿ ತೇಗುವ ತೆರದೊಳೆನ್ನಯ ।
ಪರಿಯ ನೀನೇ ಕ್ಷಮಿಸು ಯೆನ್ನ ಅಧೀನವೇನಿಹುದು
॥ ೧೩ ॥

ಗುರುವೆ ನಿನ್ನಯ ಕೃಪೆಯ ಮಹಿಮೆಯು ।
ಹೊರಗೆ ನೂಕಿದಿ ದೇಹದಿಂದಲೆ ।
ತುರೆತೆನೈ ನಾನೆನ ಹಂಭಾವವನು ಪೂರ್ಣದಲಿ ॥

ಮರಳಿ ತುತಿಯ ನಿಮಿತ್ತದಿಂದಲಿ ।
ಮರುಳ ಮಾಡಿದಿ ಯೆನ್ನನೀಪರಿ ।
ಯರಿಯಲೀ ನಾಲಿಗೆಯು ಬಡಬಡಿಸುತ್ತಲಿದೆ ನೋಡು ॥ ೧೪ ॥

ಸ್ಥಿತಿಯನೀಪರಿ ಮಾಡಿದಿಯೆ ಗುರು ।
ತುತಿಸಲಾರೆನು ನಿನ್ನನೀಪರಿ ।
ಮತಿಯು ಕುಂಠಿತವಾಯ್ತು ನಾಲಿಗೆ ಸಾಗಲಾರದಲಾ ॥
ಕ್ಷಿತಿಯೊಳಗೆ ನಾ ನಿನ್ನ ಸದ್ಗುಣ- ।
ತತಿಯ ನಿನ್ನಿಂ ವಿಂಗಡಿಸಲಿಕೆ ।
ಧೃತಿಯು ಹುಟ್ಟದು ನಿನ್ನ ಗುಣಗಳಭೇದ್ಯ ನಿನ್ನಿಂದ ॥ ೧೫ ॥

ಶಕ್ತಿಯಿಲ್ಲೈ ನಿನ್ನ ಗುಣಗಳ ।
ವ್ಯಕ್ತ ಮಾಡಲು ಯೆನಗೆ ಶಕ್ಯವೆ ।
ಪೃಥ್ವಿಯಲಿ ನೀನೇಕರಸದಿಂ ನಿರ್ಮಿಸಿದ ಲಿಂಗ ॥
ಮುತ್ತನೊಡೆದಾ ಕುಂದಣದಿ ನಾ ।
ಹತ್ತಿಸಿದರೇನಡುವೆ ಚಂದವೆ ।
ಮುತ್ತ ಭೇದಿಸಲೇನು ಸಾಧ್ಯಕ ಕಾಣೆ ಗುರುರಾಯ ; ೧೬ ॥

ತಂದೆತಾಯಿಯು ನೀನೆನುತ ನಾ- ।
ನೆಂದರೇನದು ಕ್ಷೋಭಿಸುವುದೇ ।
ಕಂದನೆನ್ನವುವಾಧಿಯಿಂ ನಿನಗಿಹುದು ಸಂತ್ರಾಸ ॥
ಮುಂದೆ ನೇವಕನಾಗುವೆನು ನಾ- ।
ನೆಂದು ಪೇಳಲು ನೀನು ಧೊರೆಯಿಂ- ।
ತೆಂದು ಪೇಳುವುದೇನು ಯೋಗ್ಯವೆ ಸದಯ ಗುರುರಾಯ
॥ ೧೭ ॥

ಇಂತು ನಾನಾತೆರದಿ ನಿನ್ನ- ।
ನ್ನೆಂಶು ವರ್ಣಿಪುದೆನುತ ಹೇಳ್ವೆ ।
ಬಂತು ಯೆನ್ನ ವುವಾಧಿಯೆಂಜಲಿಸುತ್ತಿಹುದು ನಿನ್ನ ॥
ಎಂತು ನೀ ಜಗದಾತ್ಮನೆನುತಲಿ ।
ಚಿಂತಿಸುತ ತುತಿಸುವುದು ಪೇಳ್ವೆ ।
ಬಂತು ಕೊರತೆಯು ಯೆನ್ನ ಹೊರಗದ ತೆಗೆದ ಪರಿಯಾಯ್ತು
॥ ೧೮ ॥

ಏನ ಹೇಳಲಿ ನಿನಗೆ ಶ್ರೀಗುರು ।
ಜ್ಞಾನನನು ತುತಿಸುವುದಶಕ್ಯವು ।
ಮೌನ ಹೊರತಿನ್ನೊಂದನೇರಿಸಲಾರೆನಾಭರಣ ॥
ಏನನಾಡದ ಮೌನವೇ ತುತಿ- ।
ಯೇನ ಮಾಡದ ಕರಣಿ ಪೂಜೆಯು ।
ನೀನುನಾನೆಂಬೆರಡು ಭಾವವಿಹೀನತೆಯೆ ಯೋಗ ॥ ೧೯ ॥

ನುಡಿದೇನಿಸರಿ ಹೆಚ್ಚಕುಂದನು ।
ಬಡಬಡಿಪ ಪರಿ ಜ್ವರದಿ ಮಾನವ ।
ಹುಡುಗನೆನ್ನನು ಕ್ಷಮಿಸೊ ನೀ ಗುರುರಾಯ ತಾಯಿಯಲಾ ॥
ನುಡಿಯಲೀ ಗೀತಾರ್ಥವನು ಕ-।
ನ್ನಡದಲೆನ್ನಯ ನಾಲಿಗೆಗೆ ನೀ।
ಕೊಡುವುದೈ ಮುದ್ರೆಯನು ಸಜ್ಜನಮಾನ್ಯವೀ ಮುದ್ರೆ
॥ ೨೦ ॥

ನುಡಿಯನಿದ ಕೇಳ್ದನು ನಿವೃತ್ತಿಯು ।
ನುಡಿದನುತ್ತರ ಜ್ಞಾನರಾಯನಿ-।
ಗಡಿಗಡಿಗೆ ನೀ ಬಿನ್ನವಿಸುತಿಹ ಕಾರಣವ ಕಾಣೆ ॥
ಪೊಡವಿಯಲಿ ಕಬ್ಬಿಣವು ಪರುಸಕೆ ।
ನುಡಿವುದೇನಡಿಗಡಿಗೆ ತನ್ನನು ।
ಹಿಡಿದು ಚಿನ್ನವ ಮಾಡೆನುತ ಬೆನ್ನೈಸುವುದೆ ಟೀರೆ ॥ ೨೧ ॥

ಪರಿಯಲೀ ನುಡಿ ಕೇಳಿ ಜ್ಞಾನೇ-।
ಶ್ವರನು ವಿನಯದಿ ಪ್ರಾರ್ಥಿಸಿದನೈ ।
ಗುರುವೆ ನಿನ್ನ ಪ್ರಸಾದವಿಳೆಯಲಿ ಯೆನ್ನ ವಾಚೆಯಲಿ ॥
ಒರೆವೆ ನಾ ಗೀತಾರ್ಥವೆನ್ನಯ ।
ಸರಸವಾಣಿಯ ಕೇಳಲಿಕೆ ಸುರ-।
ವರರು ತತ್ಪರತೆಯನು ತೋರಿಸ ಬೇಕು ನಿಜವಾಗಿ ॥ ೨೨ ॥

ಗೀತೆ ದೇವಾಲಯವು ನೋಡಲು ।
ನೂತನವು ಬಹುರತ್ನಖಚಿತವು ।
ಗೀತೆಯೊ ಯಧ್ಯಾಯ ಚಿಂತಾಮಣಿಯ ಕಲಶವಲಾ ॥
ಈ ತೆರದ ಗೀತಾರ್ಥಕಲಶದ ।
ಪ್ರೀತಿಯಿಂ ದರ್ಶನವ ದೊರಕಲು ।
ಭೂತಳದಿ ಫಲ ಬೇಕು ಭಗವದ್ಗೀತೆದರ್ಶನದ ॥ ೨೩ ॥

ರೂಢಿಯಲ್ಲಿ ಪ್ರಚಾರನಿರುತಿಹ ।
ರೂಢಿಯನು ನಾನಾಡಲೇತಕೆ ।
ಮೂಡಿದರೆ ದೂರದಲಿ ದೃಷ್ಟಿಗೆ ದೇಗುಲದ ಕಲಶ ॥
ಕೂಡುವುದು ಫಲ ದೇವದರ್ಶನ ।
ರೂಢಿಯಲ್ಲಿದು ಸುಪ್ರಸಿದ್ಧವು ।
ನೀಡ ಬೇಕೈ ತತ್ಫಲವ ಗೀತಾರ್ಥದರ್ಶನದಿ ॥ ೨೪ ॥

ಧರೆಯಲೀ ಯಧ್ಯಾಯವೊಂದನು ।
ಪರಮಭಕ್ತಿಯಲಾದರಿಸಿದರೆ ।
ದೊರೆವುದೈ ಫಲ ಪೂರ್ಣಭಗವದ್ಗೀತೆವಾಚನದ ॥
ಇರುವುದೀ ಫಲವೆನುತ ನಂಬೀ-।
ತೆರದಿ ಕಲಶದ ನಾವ್ಯನನು ನಾ-।
ನಿರದೆ ಕೊಟ್ಟೆನು ಗೀತೆಗಿದು ರಂಜಿಪುದು ಕಲಶವಲಾ ॥ ೨೫ ॥

ಮುನಿಪ ವೇದವ್ಯಾಸ ಹದಿನೆಂ-।
ಟನೆಯ ದಿವ್ಯಾಧ್ಯಾಯ ವಿರಚಿಸಿ ।
ಮಿನುಗುವಂದದಲೇರಿಸಿದನೈ ಗೀತೆಯಂತದಲಿ ॥
ಕೊನೆಗೆ ಕಲಶವನೇರಿಸುವರೀ-।
ಜನರ ರೂಢಿಯು ಸಂಪ್ರದಾಯವ ।
ಕೊನೆಯ ಕೇಳಧ್ಯಾಯವಿಲ್ಲಿಗೆ ಗೀತೆ ಮುಗಿಯಿತಲಾ ॥ ೨೬ ॥

ಮುನಿಪ ವೇದವ್ಯಾಸನಿರುವನು ।
ಘನತರದ ಶಿಲ್ಪಿಕನು ಕೋವಿದ ।
ಮಿನುಗುತಿಹ ವೇದತ್ರಯದ ಸದ್ರಶ್ನಸರ್ವತದಿ ॥
ಖನಿಸುತುಪನಿಷದಗಳನೆಲ್ಲವ ।
ಮನಕೆ ಬಂದಂದದಲಿ ತೆಗೆಯಲು ।
ಕೊನೆಗೆ ಹೊರಟುವಪಾರ ಕೇಳರ್ಥಕಾಮಗಳು ॥ ೨೭ ॥

ಗಾಳವನು ತ್ರೈವರ್ಗ್ಯಖನಿಜದ ।
ಮೇಳವಿಸಿದನು ವ್ಯಾಸಮುನಿವರ ।
ಮೇಲೆ ರಚಿಸಿದ ಭಾರತಪ್ರಾಕಾರ ಸುತ್ತಲಿಗೆ ॥
ಮೇಳವಿಸುತಲಿಯಾತ್ಮಜ್ಞಾನದ ।
ಮೇಲುಮೇಲಾಗಿರುವ ಚಿಕ್ಕೆಗಳು ।
ಕೇಳು ಕೃಷ್ಣಾರ್ಜುನರ ಸಂವಾದದಲಿ ಘಟಿಸಿದುವು ॥ ೨೮ ॥

ಸೇರಿತೈ ಪರಮಾರ್ಥವೆಂಬುವ ।
ದೋರಣೀ ಪ್ರಾಸಾದ ಕಟ್ಟಲು ।
ಚಾರುಶಾನ್ತ್ರಾರ್ಥಗಳ ಪುರವಣಿ ಹಾಕಿ ಕಟ್ಟಿದನು ॥
ಸೇರಿತಿದಕೈ ಮೋಕ್ಷದಾಯವೆ ।
ಯೇರಿಸಿದರೈ ಗೋಡೆಗಳನೀ-।
ಚಾರುದೇವಾಲಯಕೆ ಥರವಧ್ಯಾಯ ಹದಿನೈದು ॥ ೨೯ ॥

ಮಿನುಗುತಿಹುದಧ್ಯಾಯ ಹದಿನಾ-।
ರನೆಯದದುನೇ ಕೊರಳಘಂಟೆಯು ।
ಮಿನುಗುವುದು ಹದಿನೇಳನೇಯದು ಕಲಶಕೈ ಪಾಯ ॥
ಜನಮನಕೆ ರಂಜಿಸುವ ಕಲಶವ ।
ಮುನಿಪ ವೇದವ್ಯಾಸ ವಿರಚಿಸಿ ।
ಕೊನೆಗೆ ಹಚ್ಚಿದನದರ ಮೇಲ್ ಹದಿನೆಂಟನಧ್ಯಾಯ ॥ ೩೦ ॥

ಏರಿಸಿಹನೈ ವ್ಯಾಸ ಗೀತಾ- ।
ಕಾರದ್ವಜವನು ತತ್ಕಲಶದ- ।
ಲ್ಲೇರಿಸಿದನಧ್ಯಾಯ ಮೇಲಧ್ಯಾಯ ಥರವಾಗಿ ॥
ತೋರಿಸುವುದಿದು ಕೊನೆಗೆ ಕಟ್ಟಡ ।
ವೂರವಾಯಿತೆನುತ್ತ ಕುಶಲತೆ ।
ತೋರುವುದು ಶಿಲ್ಪಿಕನು ಸಾಮಾನ್ಯನೆ ಕಣಾ ವ್ಯಾಸ
॥ ೩೧ ॥

ಕಟ್ಟಡವು ಸಂಪೂರ್ಣವಾಗಲು ।
ಹುಟ್ಟುವುದು ಪೂರ್ಣತೆಯ ಕಲಶವು ।
ಯೆಷ್ಟು ಬಚ್ಚಿಡ ಬಹುದು ತತ್ಪೂರ್ಣತೆಯ ಕಲಶವನು ॥
ಶ್ರೇಷ ವೇದವ್ಯಾಸನೀಪರಿ ।
ಕಟ್ಟಿದನು ಗೀತಾರ್ಥವೆಲ್ಲವ- ।
ನಿಟ್ಟನೈ ಸಾರಾಂಶವೆಲ್ಲವ ಕೊನೆಯ ಪ್ರಕರಣದಿ ॥ ೩೨ ॥

ಧರಣಿಯಲಿ ಶ್ರೀವ್ಯಾಸದೇವನು ।
ವಿರಚಿಸಿದನೀ ಗೀತೆಯೆಂಬುವ ।
ಪರಮಸುಂದರ ದಿವ್ಯ ದೇವಾಲಯವ ಸಂತಸದಿ ॥
ಧರೆಯಲೀ ತೆರವಾಗಿ ಸಂಸೃತಿ- ।
ಶರಧಿತರಣೋಪಾಯವಾಯಿತು ।
ಪರಿಪರಿಯ ಭಕ್ತರಿಗೆ ಭಗವದ್ಗೀತೆ ತಾರಕವು ॥ ೩೩ ॥

ಕೆಲರು ಮಾಳ್ಪರು ಹೊರಪ್ರದಕ್ಷಿಣೆ ।
ಕೆಲರು ಶ್ರವಣದ ಛಾಯೆಯಾಶ್ರಯ- ।
ದಲಿ ಕಣಾ ಕೂಡುವರು ಗೋಡೆಗೆ ಬೆನ್ನ ಟೇಕರಿಸಿ ॥
ಕೆಲರು ಕೇಳವಧಾನರೂಪದ ।
ಯೆಲೆಯಡಿಕೆರೊಕ್ಕವನು ಕೈಯಲಿ ।
ಕೊಳುತ ಸೇರುವರರ್ಥರೂಪದ ಗರ್ಭಗೃಹದೊಳಗೆ ॥೩೪ ॥

ಹರಿಯ ಸ್ವಾತ್ಮಜ್ಞಾನಯೋಗದಿ ।
ತ್ವರಿತದಲಿ ದರ್ಶನವ ಕೊಳುವರು ।
ಪರಿಪರಿಯ ನೇಮದಲಿ ದರ್ಶನಕಾಗಿ ಬರುತಿಹರು ।
ಆರಿಯಲೀ ತತ್ತ್ವವನು ಪರಿಕಿಸಿ ।
ಸರಸಮೋಕ್ಷಪ್ರಾಪ್ತಿಯಲಿ ಮೀ- ।
ಱಿರುವರೆಲ್ಲರು ವೊಂದೆ ಯೋಗ್ಯತೆಯವರು ನಿಜವಾಗಿ
॥ ೩೫ ॥

ಸಂತರಲಿ ಭೋಜನಕೆ ಹೋಗಲು ।
ಪಂಕ್ತಿಭೇದವು ಸಿಗದು ಯೆಲೆಯಲಿ ।
ಸಂತಸದಿ ಬಡಿಸುವರು ಸರ್ವರಿಗೆಲ್ಲ ಪಕ್ವಾನ್ನ ॥

ಪಂಕ್ತಿಭೇದವ ಮಾಡದೀ ಸದ್- ।
ಗ್ರಂಥವೊಂದೇ ಫಲವ ಕೊಡುವುದು ।
ಇಂತು ಮೋಕ್ಷವು ಶ್ರವಣಕಥನಾಧ್ಯಯನಪಾತ್ರದಲಿ ॥ ೩೬ ॥

ಹರಿಯ ದೇವಾಲಯವು ಗೀತಾ- ।
ಸರಸಗ್ರಂಥವು ಕಲಶವಿದಕೈ ।
ಮೆರೆವುದೈ ಹದಿನೆಂಟನಧ್ಯಾಯವು ಕಣಾ ಪೇಳ್ವೆ ॥
ಆರಿತರಿತು ನಾನಿದನು ಪೇಳಿದೆ ।
ಒರಿದೆ ನಿಷ್ಫಲವಚನವಲ್ಲೆ ।
ಯರುಹುವೆನು ನಾನೆಂತು ಶೋಭಿಸುತಿರುವುದುಪಮೆಯದು
॥ ೩೭ ॥

ಎರಡು ಗಂಗಾಯಮುನೆನದಿಗಳು ।
ಹರಿವವು ಪ್ರಯಾಗದಲಿ ಸಂಗಮ- ।
ವೆರಡು ತೋರಿದರೇನು ತೋರುವುದೋಘದಲಿ ಬೇರೆ ॥
ಆರಿಯಲಾ ನೀರೊಂದೆ ಕೂಡಿಯೆ ।
ಹರಿವುದಿದರಲಿ ಭೇದ ತೋರದು ।
ಆರಿತಹೆನು ತತ್ತ್ವವನು ನಾನಿದ ಸದಯ ಗುರುರಾಯ ' ೩೮ ॥

ತೋರುವುದು ಸ್ತ್ರೀಪುರುಷಭೇದ ಶ- ।
ರೀರವೊಂದಿಯದಲ್ಲವೇ ಕೇಳ್ ।
ಮೂರುತಿಯು ತಾನರ್ಧನಾರಿನಟೇಶ್ವರನು ನೋಡೆ ॥
ತೋರುವುದು ಶಶಿಕಲೆಯು ದಿನದಿನ- ।
ಕೇರುವುದು ಕಲೆಯುಂಶಮಾನದಿ ।
ತೋರುವುದು ಚಂದ್ರನಿಗೆ ಪೂರ್ಣತೆ ಭಿನ್ನವಿಹುದೇನು ।' ೩೯ ॥

ಆರುಚರಣಗಳೆಹುವು ಷಟ್ಪದಿ- ।
ಗಾರುಚರಣದಿ ಶಬ್ದರಚನೆಯು ।
ಬೇರೆಬೇರಧ್ಯಾಯ ಹದಿನೆಂಟೆಹುವು ಗೀತೆಯಲಿ ॥
ತೋರದೈ ಯೊಭೇದವರ್ಥದಿ ।
ತೋರುತಿಹುದೇಕತ್ವ ಗೀತೆಗೆ ।
ಯಾರು ಭೇದವ ಕಾಂಬರೀ ಗೀತಾರ್ಥದದ್ವದಲಿ ॥ ೪೦ ॥

ಮಾಲೆಯಿಹುದೈ ರತ್ನಖಚಿತವು ।
ನೂಲುವೊಂದಿಹುದದಕೆ ಸರ್ವಕೆ ।
ಮಾತೆಯಲಿ ಮುತ್ತಿಹುವು ಹಲವೈ ಕಾಂತಿಯೊಂದದಕೆ ॥
ಮಾಲೆಯಲಿ ಪುಷ್ಪಗಳು ಸೇರಿ ವಿ- ।
ಶಾಲತೆಯ ತರುತಿಹುವು ಪರಿಮಳ- ।
ವೇಳುವುದು ಹೋಹೊಂದು ಭಿನ್ನತೆಯೇ ಸುಗಂದದಲಿ ॥ ೪೧ ॥

ಬೇರೆಬೇರಧ್ಯಾಯ ಶ್ಲೋಕಗ- ।
ಳೇರುವುದು ಗೀತಾರ್ಥವೊಂದದು ।
ಚಾರು ಶ್ಲೋಕಗಳೇಳನೂರಿಹುವಿದಕೆ ನೋಡಿದರೆ ॥
ಸೇರಿಹುವು ಹದಿನೆಂಟುಪ್ರಕರಣ ।
ಸಾರವೊಂದಿದಕೆಲ್ಲ ಗ್ರಂಥಕೆ ।
ಮಾರಸಿತ ವಿಸ್ತರಿಸಿದನು ಕೌಂತೇಯನಿಗೆ ಮುದದಿ ॥ ೪೨ ॥

ಕಡಲುಶಯನನು ಭಕ್ತಪಾರ್ಥಗೆ ।
ನುಡಿದ ಹಾದಿಯ ಬಿಡದೆ ನಾ ಕ- ।
ನ್ನಡದಿ ಭಗವದ್ಗೀತೆಯರ್ಥವ ಪೇಳ್ದೆ ಸಂತಸದಿ ॥
ಸಡಗರದಲೀ ದಿವ್ಯಹಾದಿಯ ।
ಪಿಡಿದು ಹದಿನೆಂಟನೆಯ ಪ್ರಕರಣ ।
ನುಡಿವೆ ಮನಗೊಟ್ಟಿದನು ಕೇಳಿರಿ ಸಂತಸಜ್ಜನರು ॥ ೪೩ ॥

ಕೇಳಿದನು ಪಾರ್ಥನಿಗೆ ಹರಿ ಹದಿ- ।
ನೇಳನೇಯಧ್ಯಾಯದಂತದಿ ।
ಕೇಳು ನಿಷ್ಫಲ ಬ್ರಹ್ಮನಾಮವು ಶ್ರದ್ಧೆಯಿಲ್ಲದಿರೆ ॥
ಕೇಳಿ ಕೃಷ್ಣನ ನುಡಿಯ ಪಾರ್ಥನು ।
ತಾಳಿದನು ಸಂತಸವ ಲಕ್ಷ್ಮೀ- ।
ಲೋಲ ದೋಷವನಿಟ್ಟನೈ ಕರ್ಮಾದಲಿ ತಾನೆನುತ ॥ ೪೪ ॥

ಮರುಳನೈ ಕಲಪಾರ್ಥ ಕೃಷ್ಣನ- ।
ನರಿಯನಲ್ಲಾ ವಾಕ್ಯಸರಣಿಯ ।
ಕುರುಡ ಮಾಯಾಮೋಹವೇಷ್ಟಿತನೇನ ಹೇಳುವೆನು ॥
ಹರಿಯು ಸರ್ವವ್ಯಾಪಿಯೆಂಬುದ ।
ಮರೆತನೈ ಕೌಂತೇಯ ತನ್ನೆದು- ।
ರಿರುವ ಶ್ರೀಗೋಪಾಲಕೃಷ್ಣನ ಕಾಣದಾದನಲಾ ॥ ೪೫ ॥

ಎರಡುಗುಣಗಳ ರಜತಮಂಗಳ- ।
ಹರಿಸದಿರೆ ಯಾಶ್ರದ್ಧೆಯೆಂಬುದು ।
ಖರೆಯೆ ಪಾತ್ರವೆ ಬ್ರಹ್ಮನಾಮಕೆ ಕೃಷ್ಣ ಪೇಳ್ದಂತೆ ॥
ಭರದಲಾಲಿಂಗಿಸಲು ಶಸ್ತ್ರ- ।
ಕರದಿ ಹಿಡಿದಾಡಿಸಲು ನಾಗಿಯ ।
ಮರಣಕಾರಣವಲ್ಲವೇ ಕೇಳ್ ತಂತಿಮೇಲೋಟ ॥ ೪೬ ॥

ಇರುವುದೈ ಬಹುಕರ್ತೃ ಕರ್ಮವು ।
ಮರಣಜನ್ಮಕೆ ಕಾರಣವಲಾ ।
ಪಿರುವುದೀ ಪರಿ ದುಷ್ಟಧರ್ಮವು ಕರ್ಮಗಳಿಗೆಲ್ಲ ॥

ದೊರೆಯದಿರೆ ಸಾಂಗತೆಯು ಕರ್ಮಕೆ ।
ನರಕಹಾದಿಯ ತೋರಿಸುವುದದು ।
ಒರುವುದದಕ್ಕೆ ಜ್ಞಾನಸಂಯೋಗ್ಯತೆ ಸಾಂಗತೆಯುಳಾಗೆ ॥ ೪೭ ॥

ಕಳೆದೆಯೈ ಬಹುಕಾಲ ಕರ್ಮದಿ ।
ತಿಳಿಯಲಾರೆಪ್ಪ ಮೋಕ್ಷಪ್ರಾಪ್ತಿಯ ।
ಒಳಿಕ ಹಾದಿಯದೇನೆನುತ ಕರ್ಮಠರು ಕೇಳುವರು ॥
ಕಳೆದು ದೈನ್ಯಸ್ಥಿತಿಯ ಮುಂದಕೆ ।
ತಳೆಯ ಬೇಕೈ ಪೂರ್ಣತೆಯಲಾ ।
ಕೊಳಲು ಬೇಕೈ ಕರ್ಮಸಂನ್ಯಾಸವನು ನಿಜವಾಗಿ ॥ ೪೮ ॥

ಕರ್ಮಸಂನ್ಯಾಸವನು ತಾಳಲು ।
ಕರ್ಮಬಾಧೆಯು ಭೀತಿ ತಪ್ಪುವು- ।
ದೊಮ್ಮೆ ಪುಟ್ಟುವುದಾತ್ಮಜ್ಞಾನವು ನಿಜವಿ ಗುರುರಾಯ ॥
ಕರ್ಮಸಂನ್ಯಾಸವು ಕಣಾ ಮೇಣ್ ।
ಕರ್ಮತ್ಯಾಗವು ಮಾರ್ಗಯುಗಳವು ।
ಒಮ್ಮೆಗೆಲೆ ಕೊಡುತಿರುವುದಾಮಂತ್ರಣವ ಸ್ಪಷ್ಟದಲಿ । ೪೯ ॥

ಜ್ಞಾನ ಬೆಳೆಯುವ ಕ್ಷೇತ್ರವಿದು ಕೇಳ್ ।
ಜ್ಞಾನದಾಕರ್ಷಣದ ಸೂತ್ರವು ।
ಮಾನವಗೆ ದೊರಕುವುದು ಮೋಕ್ಷವು ಮಾರ್ಗವೆರಡರಲು ॥
ಆ ನರನು ಕೃಷ್ಣನಿಗೆ ಪೇಳ್ವನು ।
ದಾನವಾಂತಕ ಸ್ಪಷ್ಟನಾದಲಿ ।
ಮಾನಿಸೆನಗಾ ತ್ಯಾಗಸಂನ್ಯಾಸಗಳ ತತ್ತ್ವವನು ॥ ೫೦ ॥

ನರನು ಕೇಳಿದ ಪ್ರಶ್ನೆಗುತ್ತರ ।
ಹರಿಯು ಪ್ರೇಮದಲಿತ್ತನೈಯದು- ।
ನಿರುವುದಪ್ಪತ್ತಾದಶವು ಗೀತಾಧ್ಯಾಯ ನೋಡಿದರೆ ॥
ತೆರದೊಳಾದುವು ಕಾರ್ಯಕಾರಣ ।
ಪರಿಪರಿಯು ಪ್ರಕರಣಗಳೀಪರಿ ।
ಬರುತಲಿದ್ದುವು ಒಂದರಿಂದೊಂದೀಪ್ರಕಾರದಲಿ ॥ ೫೧ ॥

ಹರಿಯು ಹದಿನೇಳನೆಯು ಸಂಧಿಯ- ।
ನರುಹಿದನು ಕೊನೆಯಲ್ಲಿ ತತ್ತ್ವವ ।
ನರನು ಕೇಳಿದನದನು ಮನನವ ಮಾಡಿದನು ಬಳಿಕ ॥
ಕರಿತನಾದರು ಪೂರ್ಣತತ್ತ್ವವ ।
ನರನು ಶಂಕಾಸ್ಪದನು ಕೇಳಲು ।
ಹರಿಯು ಮಾರುತ್ತರವನೀಯದೆ ಸ್ತಬ್ಧನಾಗಿಹನು ॥ ೫೨ ॥

ನರನಿಗಚ್ಚರಿಯಾಯ್ತು ಮನದಲಿ ।
ಕರುವು ತಾಯ್ಮೊಲೆ ಕುಡಿದನಂತರ ।
ಭರದಿ ಚಿಂತಿಸುತಿಹುದು ತೊಲಗಲು ಬಾರದೀತಾಯ ॥
ಪರಮಮಿತ್ರನು ಛೇಟಿಯಾಗಲು ।
ಪರಿಪರಿಯ ಭಾಷಣವ ಮಾಡುತ- ।
ಲಿರಲು ಬೇಕೆಂಬುವುದು ಸಹಜವು ಪ್ರೇಮಲಕ್ಷಣವು ॥೫೩॥

ತ್ಯಾಗಸಂನ್ಯಾಸಗಳ ತತ್ತ್ವವ- ।
ನೀಗ ತನಗರುಹೆಂದು ಪಾರ್ಥನು ।
ಯೋಗಿಯರ ರಾಜನಿಗೆ ಪೇಳ್ದನು ಪ್ರೇಮಪೂರ್ವಕದಿ ॥
ಹೀಗೆ ಪ್ರಶ್ನೆಯು ಬರಲು ಗೀತಾ- ।
ಭಾಗವತವಸ್ತುವನು ಪುನರಪಿ ।
ಯೋಗಪೂರ್ವಕವಾಗಿ ಮೇಲಕ್ಕೆತ್ತಿದನು ಕೃಷ್ಣ ॥ ೫೬ ॥

ಪ್ರೀತಿಲಕ್ಷಣವಿರಲು ಯಿಂಪರಿ ।
ಪಾರ್ಥನೆಂಬುವ ಹರಿಯ ಪ್ರೇಮದ ।
ಮೂರ್ತಿಯೆ ಸ್ವಾಭಾವಿಕವು ಹರಿ ತನ್ನೊಡನೆ ನಿಜದಿ ॥
ಮಾತಾಡಲು ಬೇಕೆನುತ ಕಲಿ- ।
ಪಾರ್ಥ ಭಾವಿಸುತಿಹುದು ಸಹಜವು ।
ಯಾತಕೆನ್ನೊಳು ಮಾತನಾಡನೆನುತ್ತ ಚಿಂತಿಸಿದ ॥ ೫೪ ॥

ಇರುವುದಿದುವಧ್ಯಾಯವಂತದ- ।
ಲಿರದು ಹದಿನೆಂಟನೆಯ ಸಂಧಿಯು ।
ಮೆರೆವುದೀ ಸಂಕ್ಷಿಪ್ತಗೀತಾ ಪೂರ್ಣವೇದಾಂತ ॥
ಕರುವು ತಾಯಿಯ ಮೊಲೆಗೆ ಹಾಲನು ।
ತರಿಸಿ ಧಾರೆಯ ಸುರಿಯೆ ವೇಳೆಯ- ।
ನರಿವುದೇ ತಾಯ್ಸುರಿಯಳೇ ಕ್ಷೀರಾಮೃತದ ಧಾರೆ ॥ ೫೭ ॥

ತೋರುವುದು ಕನ್ನಡಿಯ ತೆರದಲಿ ।
ಪಾರಮಾರ್ಥಿಕ ವಸ್ತು ಬ್ರಹ್ಮವು ।
ತೋರುವುದು ಸ್ಪಷ್ಟದಲಿ ಸಂವಾದದಿದು ಮಾಹಾತ್ಮ್ಯ ॥
ಬಾರದಿರೆ ಸಂವಾದ ಕೃಷ್ಣನ ।
ಬಾರದೈ ಪರಮಾತ್ಮಸುಖವದು ।
ಸೇರುವುದೆ ಪಾರ್ಥನಿಗೆ ಬ್ರಹ್ಮಾನಂದಲಾಲಸಗೆ ॥ ೫೫ ॥

ಗೀತೆ ಮುಗಿಯುವ ವೇಳೆ ಬಂದಿದೆ ।
ಪಾರ್ಥ ಪುನರಪಿ ಯಾದ್ಯಪ್ರಶ್ನೆಯ ।
ಮಾತ ತೆಗೆದನು ಕೃಷ್ಣಗಚ್ಚರಿಯಾಯ್ತು ನಿಜವಾಗಿ ॥
ಪ್ರೀತಿಪಾತ್ರನು ಪಾರ್ಥನೀತೆರ ।
ಮಾತ ತೆಗೆಯಲು ಕೃಷ್ಣನುತ್ತರ- ।
ವಾತಗೀಯನೆ ನೋಡಿರೈ ಕೃಷ್ಣಾರ್ಜುನರ ಪ್ರೀತಿ ॥ ೫೮ ॥

ಅರ್ಜುನ ಉವಾಚ—

ಸಂನ್ಯಾಸಸ್ಯ ಮಹಾಬಾಹೋ ತತ್ತ್ವಮಿಚ್ಛಾಮಿ ವೇದಿತುಮ್ ।
ತ್ಯಾಗಸ್ಯ ಚ ಹೃಷೀಕೇಶ ಪೃಥಕ್ಕೇಶಿನಿಷೂದನ ॥ ೧ ॥

ನರನು ಪೇಳ್ದನು ಹರಿಗೆ ಪೇಳ್ಕೆ ।
ಯಿರುವುದೇನ್ಕೆ ಭೇದ ಶಬ್ದಗ- ।
ಳೆರಡಿಹುವು ಸಂನ್ಯಾಸತ್ಯಾಗವೆನುತ್ತ ಪೇಳುವರು ॥
ಎರಡುಶಬ್ದಗಳೊಂದೆಯರ್ಥವೊ ।
ಯಿರುವುದೇ ಮತ್ತೇನು ಭೇದವ್ ।
ಯಿರುವುದೊಂದೇ ಯರ್ಥ ಸಂಘಾತದಲಿ ಸಂಘದಲಿ

॥ ೫೯ ॥

ನುಡಿಯನಿದ ಕೇಳುತಲಿ ಶ್ರೀಹರಿ ।
ನುಡಿದನೀಪರಿ ಪಾರ್ಥ ನಿನ್ನಯ ।
ನುಡಿಯು ಸಟೆಯಲ್ಲಹುದು ನೋಡಲು ಭೇದ ಕಾಣದಲಾ ॥
ಪೊಡವಿಯಲಿ ತತ್ತ್ವವ ಪರೀಕ್ಷಿಸೆ ।
ಕೊಡುತಿಹುವು ಭೇದವನು ಶಬ್ದಗ- ।
ಳೊಡನೆ ನಾ ವಿಸ್ತರಿಸಿ ಪೇಳುವೆ ಕೇಳು ಮನಗೊಟ್ಟು ॥ ೬೧ ॥

ಎನಗೆ ತೋರ್ಪುದು ಶಬ್ದವೆರಡಿವು ।
ಮನದೊಳರ್ಥವನೊಂದೆ ಕೊಡುವುದು ।
ಯೆನಗೆ ಪೇಳ್ಕೈ ತ್ಯಾಗಸಂನ್ಯಾಸಗಳ ಭೇದವನು ॥
ಮನದಿ ಮಾಡಿದ ಕಲ್ಪನೆಯು ತ- ।
ಪ್ಪಿನದೆನುತ ನೀ ಪೇಳ್ವುದಾದರೆ ।
ಯೆನಗೆ ಪೇಳ್ಕೈ ವಿಸ್ತರಿಸಿ ತದ್ಭೇದದರ್ಥವನು ॥ ೬೦ ॥

ಎಲ್ಲ ಕರ್ಮವ ಬಿಟ್ಟುಬಿಟ್ಟರೆ ।
ಒಲ್ಲಿದರು ಸಂನ್ಯಾಸವೆಂಬರು ।
ಸಂಲಲಿತ ಕರ್ಮಗಳ ಫಲವನು ಬಿಟ್ಟರದು ತ್ಯಾಗ ॥
ಎಲ್ಲಿ ತ್ಯಾಜ್ಯವ್ಯೆ ಕರ್ಮಫಲಗಳು ।
ಯೆಲ್ಲಿ ತ್ಯಾಜ್ಯವ್ಯೆ ಮೂಲಕರ್ಮವು ।
ಯೆಲ್ಲವನು ನಾ ಪೇಳ್ವೆ ಕೇಳೈ ಪಾರ್ಥ ಮನಗೊಟ್ಟು ॥ ೬೪ ॥

ಗಿರಿವನದಿ ಸಹಜದಲೆ ಬೆಳೆವುವು ।
ಪರಿಪರಿಯ ತೃಣಗಿಡಮರಂಗಳು ।
ಬರುವುದೇನಾತೆರದಲುತ್ತಮ ಭತ್ತ ಗದ್ದೆಯಲಿ ॥
ಬರುವುದೈ ಸಹಜದಲಿ ಕರಡದು ।
ಬರುವುದೇನೈ ಕಬ್ಬು ತಾಂ ಗೊ- ।
ಬ್ಬರವ ಹಾಕದೆ ನೀರನುಣಿಸದೆ ಕೃಷಿಯ ಮಾಡದಲೆ
॥ ೬೩ ॥

ನೀರು ನದಿಯಲಿ ಸಹಜ ಸಿಗುವುದು ।
ನೀರು ಸಿಗದೈ ಕೂಪದಲ್ಲಿ ಶ- ।
ರೀರಕಷ್ಟವ ಮಾಡಿ ಕೂಪವ ತೋಡ ಬೇಕಲ್ಲೈ ॥

ಚಾರುದೇಹವು ಸಹಜ ಸಿಕ್ಕಿತು ।
ಯೇರಿಸಲು ಚಿನ್ಮಾಭರಣವ ಶ- ।
ರೀರದುದ್ಯಮ ಬೇಕು ನೋಡೈ ಪಾರ್ಥ ತತ್ತ್ವನನು ।। ೬೪ ॥

ನಿತ್ಯನೈಮಿತ್ತಿಕದ ಕರ್ಮೋ- ।
ತ್ಪತ್ತಿ ಸಹಜವು ಸಂಭವಿಸುವುದು ।
ಚಿತ್ತವಿಲ್ಲದೆ ಹುಟ್ಟಲಾಗದು ಕಾಮ್ಯಕರ್ಮವದು ।।
ಪಾರ್ಥ ನೋಡೈ ಸಾರತತ್ತ್ವವ ।
ಸ್ವಸ್ಥಚಿತ್ತದಲೆನುತಲಾ ಪುರು- ।
ಷೋತ್ತಮನು ತದ್ಭೇದವೆಲ್ಲವ ಹೇಳತೊಡಗಿದನು ॥ ೬೫ ॥

ಶ್ರೀಭಗವಾನುವಾಚ—

ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ ।
ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ ॥ ೨ ॥

ನರನೆ ಪರಿಪರಿ ಕಾಮ್ಯಕರ್ಮವ- ।
ನರುಹುವೆನು ನಾ ಕೇಳು ಪಾರ್ಥನೆ ।
ತುರಗಮೇಧಾದಿಗಳು ಬಹು ಯಜ್ಞಗಳು ಸತ್ರಗಳು ॥
ಪರಿಪರಿಯ ವ್ರತ ನಿಯಮ ನಿಷ್ಠೆಯು ।
ಕೆರೆಸರೋವರ ಬಾವಿಯರವಟೆ ।
ಭರದಿ ಕಟ್ಟಿಸಿ ಕೊಡುವುದೈ ಭೂದಾನ ವಿಪ್ರರಿಗೆ ॥ ೬೬ ॥

ಪುರವ ಕಟ್ಟಿಸುತಗ್ರಹಾರವ- ।
ನಿರದೆ ಕೊಡುತುದ್ಯಾನ ಕಟ್ಟಿಸಿ- ।
ದರೆ ಮಹಾಪುಣ್ಯಾಂಶ ಬರುವುದು ಕಟ್ಟಿದವರಿಂಗೆ ॥
ಇರುವುವೀ ಕರ್ಮಂಗಳೆಲ್ಲವು ।
ದೊರಕಿಸಲಿಕಾ ಪುಣ್ಯಫಲವನು ।
ಮೆರೆವುದೀ ಕರ್ಮಕ್ಕೆ ಕಾರಣಬೀಜ ಕಾಮನೆಯು ॥ ೬೭ ॥

ಮಾಡಲೀಪರಿ ಕಾಮ್ಯ ಕರ್ಮವ- ।
ನಾಡಲೇನದ ಫಲದ ಬಂಧನ ।
ಕಾಡುವುದು ನಿಜವಾಗಿ ಪರಿಹಾರವನು ಕಾಣೆನಲಾ ॥
ನೋಡು ಪಾರ್ಥನೆ ದೇಹವೆಂಬುವ ।
ನಾಡಿನಲಿ ಬರೆ ಜನ್ಮಮರಣದ ।
ರೂಢಿಯನು ಕಪ್ಪಿಸಲು ಬಹುದೇ ಮರ್ತ್ಯಲೋಕದಲಿ
॥ ೬೮ ॥

ಒರಸ ಬಹುದೇ ಹಣೆಯ ಬರಹವ ।
ಪರಿಪರಿಯ ಯತ್ನಗಳು ನಿಷ್ಫಲ ।
ವೊರಸ ಬಹುದೇ ಮೈಯ ಬಣ್ಣವ ತಿಕ್ಕಿ ಗುದ್ದಾಡಿ ॥

ಬರುವುದೈ ಫಲ ಕಾಮ್ಯ ಕರ್ಮದಿ ।
ಧರಣಿ ಕೂತದು ಸಾಲ ಹರಿಸುವು- ।
ದರಿಯಲಾರರು ಬೇರೆ ಮಾರ್ಗವ ಕರ್ಮಫಲಗಹನ ।। ೬೯ ॥

ಧರಿಸದಲೆ ಮನದಲ್ಲಿ ಕಾಮ್ಯವ ।
ಹರಿಸಿದರು ಮಜಿಗೆನುತಲರೆ ಕ್ಷಣ ।
ನರನೆ ಬಿಡುವುದೆ ಬೆನ್ನ ಮಾಡಲು ಕಾಮ್ಯಕರ್ಮಗಳ ॥
ಶರವು ನಾಟದು ಯೆನುತ ಬಿಟ್ಟರೆ ।
ಯಿರಿಯದೇ ಜೀವವನು ಮೇಣದು ।
ಮರಣ ತಾರದೆ ಮರ್ಮಸ್ಥಾನದಿ ಹೊಡೆದ ಹೊಡತದಲಿ ॥ ೭೦ ॥

ಬೆಲ್ಲ ತಿಳಿಯದೆ ಬಾಯೊಳಿಕ್ಕಲು ।
ಬೆಲ್ಲದಾರುಚಿ ರಸನೆ ತಿಳಿಯದೆ ।
ಮೆಲ್ಲನಗ್ನಿಯ ಮೇಲೆ ಕಾಲಿಡೆ ಬೂದಿಯೆನ್ನುತಲಿ ॥
ಒಲ್ಲದೇನದು ದಯವ ಕಾಲುಗ- ।
ಳೆಲ್ಲ ಸುಡುವುದು ನಿರ್ದಯತ್ವದಿ ।
ಬಲ್ಲಿದನೆ ಕಲಿಪಾರ್ಥ ಕೇಳೈ ಕಾಮ್ಯ ಫಲನಿದಲಾ ॥ ೭೧ ॥

ಈ ತೆರದ ಬಲವಿಹುದು ಕರ್ಮಕೆ ।
ಭೂತಳದೊಳದನಾಚರಿಸುವುದು ।
ಕೌತುಕದೊಳಾದರು ಕಣಾ ಬಹು ಗೌಣವೆನ್ನುವರು ॥
ಭೂತಳದಿ ಮೋಕ್ಷವನು ಬಯಸುವ- ।
ನಾತ ತ್ಯಜಿಸಲಿ ಕಾಮ್ಯಕರ್ಮವ- ।
ನಾತಗಪ್ಪುದು ಮೋಕ್ಷಪದವಿಯು ನರನೆ ನಿಜನಿಜವು ॥ ೭೨ ॥

ನೇರಿಹರೆ ಹೊಟ್ಟೆಯಲಿ ವಿಷವದು ।
ಚೀರಿ ಯೇಕರಿಸುತಲಿ ಹೊರಗದು ।
ಬಾರದಿರುವುದೆ ಕಾಮ್ಯಕರ್ಮವು ವಿಷಸಮಾನವಲಾ ॥
ತೋರಿಸಲು ತ್ಯಾಗವನೆ ಯೊಪರಿ ।
ನೇರುವುದು ಸಂನ್ಯಾಸ ಹೆಸರೈ ।
ಮಾರಪಿತಗೋಪಾಲಕೃಷ್ಣನು ಪೇಳ್ದನೀತೆರದಿ ॥ ೭೩ ॥

ವಿತ್ತ ಕೈಯೊಳಗಿರುವನಕ ಭಯ- ।
ವಿತ್ತು ವಿತ್ತವು ತಾಪಗೊಳಿಪುದು ।
ವಿತ್ತಗಂಟನೆ ಬಿಟ್ಟುಬಿಟ್ಟರೆ ತಾಪವೇನಿಹುದು ॥
ವಿತ್ತದಿಂದಲಿ ಕಾಮ್ಯಕರ್ಮವ ।
ವಿತ್ತ ಬಿಸುಟರೆ ವಾಸನೆಗಳವು ।
ಸತ್ತು ಹೋಗುವುವೇನು ಚೋದ್ಯವೆ ಕೇಳು ಕೌಂತೇಯ
॥ ೭೪ ॥

ಚಂದ್ರಸೂರ್ಯಗ್ರಹಣಪರ್ವದಿ ।
ತಂದೆತಾಯ್ಗಳು ಸತ್ತ ದಿವಸದಿ ।
ಬಂದರತಿಥಿಯು ಮನೆಗೆ ವಾಯಸಬಲಿಯ ವೇಳೆಯಲಿ ॥
ಚಂದದಿಂದಲಿ ಮಾಳ್ಪ ಕರ್ಮಗ- ।
ಳೆಂದೊರೆವೆ ನೈಮಿತ್ತಿಕಗಳವು ।
ಬಂದು ನರಜನ್ಮದಲಿ ತ್ಯಜಿಸಲು ಬಾರದೀಕರ್ಮ ॥ ೭೫ ॥

ವರುಷಕಾಲದಿ ಬರುವುದೈ ಪರಿ- ।
ಪರಿಯ ಮೇಘವ್ರಾತ ಗರ್ಜಿಸಿ ।
ಬರುವುದೈ ನವಪಲ್ಲವವು ಗಿಡಕಾವಸಂತದಲಿ ॥
ನರನು ಯೌವನದಶೆಯ ಸೇರಲು ।
ಬರುವುದವನಿಗೆ ರಮ್ಯಶೋಭೆಯು ।
ತರಣಿಯುದಯದಿ ಕಮಲಿನಿಯು ಸಂತೋಷ ತಾಳುವುದು
॥ ೭೬ ॥

ಬರೆಲು ಚಂದ್ರೋದಯವು ದ್ರವಿಸದೆ ।
ಬಿರುವುದೇನದು ಚಂದ್ರಕಾಂತವು ।
ನರನೆ ಕೇಳೀಕರ್ಮಗಳು ಸ್ವಾಭಾವಿಕಗಳಲ್ಲೈ ॥
ಇರುವುದೇನದು ಮೂಲದಲ್ಲದು ।
ಭರದೊಳಾಗುವುದೈ ಸುನಿಕಸಿತ- ।
ವೆರಡನೆಯ ಧರ್ಮವನು ಹುಟ್ಟಿಸಲಾರದೀ ಕರ್ಮ ॥ ೭೭ ॥

ನಿತ್ಯದಲಿ ನರನಾಚರಿಪ ಯಾ- ।
ಕರ್ಮಕೆ ನೇಮವಿಹುದು ನಿ- ।
ಮಿತ್ತವಾಯಿತು ನೇಮ ನೈಮಿತ್ತಿಕವು ಹೆಸರಾಯ್ತು ॥

ವಾರ್ಥ ನೈಮಿತ್ತಿಕದ ಕರ್ಮಕೆ ।
ಬಿತ್ತು ನೋಡೀ ಹೆಸರು ದೊಡ್ಡದು ।
ನಿತ್ಯಕರ್ಮಕೆ ಕೇಳು ನೈಮಿತ್ತಿಕವಿದೆನ್ನವರು ॥ ೭೮ ॥

ದರದಿವಸ ಮುಂಬಾನೆ ಸಂಜೆಗೆ ।
ತಿರಿಗಿ ಮಧ್ಯಾಹ್ನದಲಿ ಮಾಡುವ ।
ನಿರುತಕರ್ಮಕೆ ನಿತ್ಯನೈಮಿತ್ತಿಕವು ಹೆಸರಾಯ್ತು ॥
ಪರಿಯ ಕೇಳೈ ವಾರ್ಥದೃಷ್ಟಿಗೆ ।
ಬರುವುದೇ ವಿಸ್ತಾರ ದಿನದಿನ- ।
ವಿರುವುದಲ್ಲಾ ತೇಜ ದೀಪದಿ ಹುಟ್ಟುಗುಣವಲ್ಲೈ ॥ ೭೯ ॥

ಗತಿಯ ಹೊರಗಿಂ ತರಲು ಬೇಕೇ ।
ಸತತವಿರುವುದು ಕಾಲಿನಲ್ಲಿಯೆ ।
ಕೃತಕಪರಿಮಳದಿಂದ ಪುಟ ಬೇಕೇನು ಚಂದನಕೆ ॥
ಸ್ಥಿತಿಯಲಿದುವಧಿಕಾರಲಕ್ಷಣ ।
ನುತಚರಿತ ಕೌಂತೇಯ ಪೇಳಿದೆ- ।
ನತಿನಿನೋದದಿ ನಿತ್ಯನೈಮಿತ್ತಿಕದ ಕರ್ಮಗಳ ॥ ೮೦ ॥

ನಿತ್ಯನೈಮಿತ್ತಿಕದ ಕರ್ಮವ ।
ನಿತ್ಯವಾಚರಿಸುವುದು ಧರ್ಮವು ।
ಮತ್ತೆ ನಿಷ್ಫಲವೆನುತ ಕರೆವರು ಕರ್ಮವಿದ ಜನರು ॥
ತೃಪ್ತಿಯಾಗದೆ ಭೋಜನೋತ್ತರ ।
ಸತ್ತು ಹೋಗದೆ ಕ್ಷುಧೆಯು ತದ್ವ- ।
ನ್ನಿತ್ಯನೈಮಿತ್ತಿಕದ ಕರ್ಮದಿ ವ್ಯಾಪ್ತವಹುದು ಫಲ ॥ ೮೧ ॥

ಚಿನ್ನ ಕಾಸುತ ಪುಟವನಿಡಲಾ ।
ಚಿನ್ನಕೇರುವುದೈ ವಿಶುದ್ಧತೆ ।
ಭಿನ್ನವಾಗುವುದೈ ಯಶುದ್ಧತೆಯಗ್ನಿಸ್ಪರ್ಶದಲಿ ॥
ಮನ್ನಿಸೈ ನರನೇ ಇದೇಪರಿ ।
ಭಗ್ನ ಮಾಡುತ ಮಲವ ನರನಲಿ ।
ಚೆನ್ನಗಧಿಕಾರದಲಿ ಯೇರುವುದಾತ್ಮಶುದ್ಧತೆಯು ॥ ೮೨ ॥

ನಿತ್ಯನೈಮಿತ್ತಿಕದ ಕರ್ಮವು ।
ಚಿತ್ತಶುದ್ಧತೆಯನ್ನು ಕೈಯೊಳ- ।
ಗಿತ್ತು ಸದ್ಗತಿ ಕೊಡುವುದೈ ಕಲಿವಾರ್ಥ ನೋಡಿದಿಯಾ ॥
ಸತ್ಯವಿದು ಸಿಗುತಿರುವ ಫಲವೈ ।
ಯತ್ನ ಮಾಡುತ ತ್ಯಜಿಸುವದು ನ- ।
ಕ್ಷತ್ರಮೂಲದಿ ಹುಟ್ಟಿದರ್ಭಕನನ್ನು ತ್ಯಜಿಪಂತೆ ॥ ೮೩ ॥

ಒಳ್ಳೆಹಳು ಚಿಗಿಯುವುವು ಭರದಲಿ ।
ಪಲ್ಲವವು ಬರುತಿಹುದು ಚೂತಕೆ ।
ಮೆಲ್ಲಮೆಲ್ಲನೆ ಬರೆ ವಸಂತನು ವರ್ಷವರ್ಷದಲಿ ।।
ಎಲ್ಲಿಲೀ ಶೋಭೆಯು ವಸಂತನು ।
ತಳ್ಳಿ ಬಿಡುವನು ಸ್ಪರ್ಶ ಮಾಡನು ।
ಬಲ್ಲಿದನು ಫಲದಾಶೆ ಬಿಡಬೇಕೀತೆರದಿ ಪಾರ್ಥ ॥ ೮೪ ॥

ದರದಿವಸವೀ ನಿತ್ಯಕರ್ಮವ ।
ಚರಿಸ ಬೇಕೈ ನರನು ಫಲವನು ।
ಮರೆತು ಮನದಿಂ ವಾಂತಿಯಂದದಿ ಹೊರಗೆ ಬಿಡ ಬೇಕು ॥
ನರನೆ ಕೇಳೈ ಫಲವ ತ್ಯಜಿಸಲು ।
ಕರೆವರದನೇ ತ್ಯಾಗವೆನಿಸಿತ ।
ಯರುಹಿದೆನು ಸಂನ್ಯಾಸತ್ಯಾಗದ ಭೇದಭಾವಗಳ ॥ ೮೫ ॥

ಪರಿಯಲೀ ಸಂನ್ಯಾಸವಾಗಲು ।
ಬರದು ಬಾಧೆಯು ಕಾಮ್ಯಕರ್ಮದಿ ।
ಮರಣವಹುದು ನಿಷಿಕ್ಕಕರ್ಮಕೆ ಸುಟ್ಟು ಬೂದಿಯಹುದು ॥
ಶಿರವ ಕಡಿದರೆ ಬೆಪ್ಪಿಲ್ಲ ದೇಹಕೆ ।
ಮರಣ ಬರುವುದು ಧರೆಗೆ ಜೀವ್ವದು ।
ಪರಿಯಲಾ ಫಲದಾಶೆ ಪೋದರೆ ಪೋಯಿತಾ ಬಾಧೆ
॥ ೮೬ ॥
ತೆನೆಯು ಬಂದರೆ ಜೋಳಗಡವದು ।
ಕೊನೆಯ ಕಾಂಬುದು ಜೀವಮಾನದ ।
ಮನದಲೀಪರಿ ತ್ಯಾಗವಾಗಲು ಜ್ಞಾನ ವುದಯಿಪುದು ॥

ಮನುಜರೀ ಪರಿ ಕಾಮ್ಯಕರ್ಮಕ ।
ಘನತರದ ಸಂನ್ಯಾಸ ಚರಿಸಲು ।
ಪುನದಿ ನೈಮಿತ್ತಿಕದ ಫಲದಾಶೆಯನೆ ತೊರೆದಿರಲು ॥ ೮೭ ।

ಬರುವುದಾತ್ಮಜ್ಞಾನಯೋಗ್ಯತೆ ।
ಬರುವುದೈ ಹುಡುಕುತ್ತ ಜ್ಞಾನವು ।
ಅರಿಯಲಾ ಕಲಿಪಾರ್ಥ ನಿನಗಿದ ವಿಸ್ತರಿಸಿ ಪೇಳ್ದೆ ॥
ಧರೆಯಲೀಪರಿ ಯುಕ್ತಿ ತಿಳಿಯದೆ ।
ಚರಿಸಿದರೆ ಕರ್ಮಗಳನವರಿಗೆ ।
ಒರುವುದೈ ಘೋಟಾಳೆ ಪರಿಪರಿಯಿಂದ ಕೌಂತೇಯ ॥ ೮೮ ॥

ಅರಿಯದಲೆ ವ್ಯಾಧಿಯನು ವೈದ್ಯನು ।
ಪರಿಕಿಸದೆ ಕೊಡಲೌಷಧವ ಮೇಣ್ ।
ಒರುವುದೇ ಗುಣವೌಷಧವೆ ವಿಷವಾಗಿ ವರ್ತಿಪುದು ॥
ಒರಿದೆ ಕೂತರುವಾಸವವನಿಗೆ ।
ಮರಣ ಬರುವುದು ಹೊಟ್ಟಿಹಸಿವಿಲಿ ।
ಮರೆಯ ಬೇಡೀ ತತ್ತ್ವ ಪಾರ್ಥನೆ ಪೇಳೆದೆನು ನಿನಗೆ ॥ ೮೯ ॥

ಮಾಡ ಬಾರದ ಕರ್ಮತತಿಗಳ ।
ಮಾಡ ಬಾರದು ಮಾಳ್ಪ ಕರ್ಮವ ।
ನೋಡಿದಿಯಲಾ ತ್ಯಾಜ್ಯಮಾಡುವ ಯುಕ್ತಿ ತಪ್ಪಿದರೆ ॥
ಮಾಡಿ ಕರ್ಮತ್ಯಾಗವವನೈ ।
ಕೂಡುವನು ಬಂಧನದೊಳಗದರಿಂ ।
ಮಾಡಲಾರರು ತ್ಯಾಜ್ಯಕರ್ಮವ ನೀತರಾಗರಲಾ ॥ ೯೦ ॥

ತ್ಯಾಜ್ಯಂ ದೋಷವದಿತ್ಯೇಕೇ ಕರ್ಮ ಪ್ರಾಹುರ್ಮನೀಷಿಣಃ ।
ಯಜ್ಞದಾನತಪಃಕರ್ಮ ನ ತ್ಯಾಜ್ಯಮಿತಿ ಚಾಪರೇ ॥ ೩ ॥

ನರನು ಕರ್ಮದ ಫಲವ ತ್ಯಜಿಸಿದೆ ।
ಕರೆಯಲಾ ಕರ್ಮಗಳು ಬಂಧಕ ।
ವಿರುವುದೆನುತಲಿ ಮೂಢತನದಲಿ ನರಲುತಿಹನವನು ॥
ಇರಲು ತಾನೇ ನಗ್ನನನ್ಯರು ।
ಕರೆಯಲಾತನ ನಗ್ನನೆನುತಲಿ ।
ಬರಿದೆ ಪೇಳ್ವನು ಜನರು ತನ್ನಲಿ ತಂಟಿ ಮಾಡುವರು ॥೯೧॥

ನರನೆ ರೋಗಿಯು ನಾಲಿಗೆಯ ವಶ ।
ಕಿರಲು ಬೇಕಾದುದನು ತಿನುವನು ।
ಮರಳಿ ತಿಂದನ್ನವನು ಬೈವನು ಪಚನವಾಗದಿರೆ ॥

ಕೊರತೆಗಳ ನೋಡದಲೆ ದೇಹದ ।
ಮರಳಿ ಬೈವನು ಸೊಣಗನೆನೆ ತಾ ।
ನರಿಯನಲ್ಲಾ ತನ್ನ ದೇಹದ ಹೊಲಸು ರಸಿರಕ್ತ ॥ ೯೨ ॥

ಕರ್ಮಫಲತ್ಯಾಗವನು ಮಾಡುವ ।
ಮರ್ಮ ತಿಳಿಯದೆ ತತ್ತ್ವವರಿಯದೆ ।
ಕರ್ಮವೇ ಬಹುಹೀನವೆನುತಲಿ ಬೈವರರಿಯದಲೆ ॥
ಕರ್ಮವೇ ನಿಜ ತ್ಯಾಜ್ಯವೆನುತಲಿ ।
ಯೊಮ್ಮೆಗೆಲೆ ಸಿದ್ಧಾಂತ ಮಾಳ್ಪರು ।
ಶರ್ಮವಿಲ್ಲದೆ ತಮ್ಮ ದುರ್ಬಲತನವ ಮುಚ್ಚುವರು ॥ ೯೩ ॥

ಕೆಲರು ಪೇಳ್ವರು ಯಜ್ಞಸತ್ರವು ।
ತಿಳಿಯಲಾಗದು ತ್ಯಾಜ್ಯವೆನುತಲಿ ।
ಯಿಳೆಯಲಿವುಗಳ ಮಾಳ್ಪುದುಚಿತವವಶ್ಯವೆನ್ನುವರು ॥
ಇಳೆಯಲಿವುಗಳ ಮಾಡದಲೆ ಮನ ।
ಮಲಿನವಹುದೈ ಚಿತ್ತಶುದ್ಧತೆ ।
ಘಳಿಲನೀ ಕರ್ಮಗಳು ದೊರಕಿಸಿ ಕೊಡುವುವೆಂಬುವರು
॥ ೪೪ ॥
ಚಿತ್ತಶುದ್ಧಿಯು ಬೇಕೆನುವ ಸದ್- ।
ವೃತ್ತಿಯಿದ್ದರೆ ಕರ್ಮ ಬಿಡುವುದು ।
ಯುಕ್ತವಲ್ಲಾ ಕರ್ಮವನ್ನಾಚರಿಸುವುದೆ ಯುಕ್ತ ॥
ಕೆತ್ತಿ ಮಲಿನತೆ ಚಿನ್ನ ಶುದ್ಧಿಯ ।
ನುತ್ತಮೋತ್ತಮ ಮಾಡಲಿಚ್ಛಿಸೆ ।
ಹೊತ್ತುಗಳಿಯದೆ ಬೆಂಕಿಯಲಿ ಪುಟಕೊಡಲು ಬೇಕದಕೆ
॥ ೪೫ ॥
ಕನ್ನಡಿಯ ಮುಂದಿಟ್ಟು ನಿಜಮುಖ ।
ವನ್ನು ನೋಡಲಿಕಿಚ್ಛೆ ಯಿರಲದ ।
ನುಣ್ಣಂದಿಂ ಸ್ವಚ್ಛತೆಯ ಮಾಡಲು ಬೇಕು ಮೊದಲಿಗೆನೆ ॥

ತನ್ನವಸ್ತ್ರವು ಸ್ವಚ್ಛವಿರ ಬೇ- ।
ಕೆನ್ನುವರು ರಜಕನ ಗಲಿಚ್ಛದ ।
ಮಣ್ಣಹಂಡೆಯ ಬಿಟ್ಟುರದು ಸ್ವಚ್ಛತೆಯಲೇರುವುದೆ ॥ ೪೬ ॥
ತಿನ್ನಲಿಕೆ ಸಿಗಬೇಕು ವೃತ್ತಮ- ।
ವನ್ನವೆಂದಿಚ್ಛೆಯನು ಮಾಡಲು ।
ಯತ್ನ ಮಾಡದೆ ಸುಮ್ಮನಿದ್ದರೆ ವಾಕವಃಗುವುದೆ ॥
ಎನ್ನುತೀಪರಿ ಕ್ಲೇಶದಾಯಕ- ।
ವೆನ್ನುತಲಿ ಕರ್ಮಗಳ ಬಿಡುವುದು ।
ಚೆನ್ನಗಲ್ಲಾ ಜಾಣರಿದನರಿಯುವುದು ಮೋದದಲಿ ॥ ೪೭ ॥
ಇರುವುದೈ ಸಿದ್ಧಾಂತವೀಪರಿ ।
ಯೆರಡು ಹಾದಿಯ ಪತಿಕರಿಸುವರು ।
ತೊರೆವರೈ ಕರ್ಮವನು ಕೆಲವರು ಕ್ಲೇಶಕರವೆನುತ ॥
ಹರುಷದಿಂ ಕರ್ಮಂಗಳನು ಪತಿ- ।
ಕರಿಸುವರು ಹಲರೀತೆರದಿ ನಿನ- ।
ಗರುಹುವೆನು ತತ್ತ್ವವನು ನಾನು ವಿಚಾರಪೂರ್ವಕದಿ ॥ ೪೮ ॥

ನಿಶ್ಚಯಂ ಶೃಣು ಮೇ ತತ್ರ ತ್ಯಾಗೇ ಭರತಸತ್ತಮ ।
ತ್ಯಾಗೋ ಹಿ ಪುರುಷವ್ಯಾಘ್ರ ತ್ರಿವಿಧಃ ಸಂಪ್ರಕೀರ್ತಿತಃ ॥ ೪ ॥

ಮೂರು ವಿಧವಾಗಿಹುದು ತ್ಯಾಗವು ।
ತೋರುತಿದೆ ಸ್ವಷ್ಟದಲಿ ಪಾರ್ಥನೆ ।
ಮೂರು ವಿಧಗಳನೆಲ್ಲ ನಿನಗಾನರುಹುವೆನು ಮುದದಿ ॥
ಮೂರು ವಿಧವಾಗಿರಲು ತ್ಯಾಗಪ್ರ- ।
ಕಾರತತ್ತ್ವವಿದೊಂದೆ ಕೇಳ್ಕೈ ।
ಚಾರು ಸಿದ್ಧಾಂತವನು ನಾ ಸರ್ವಜ್ಞ ಮಾಡಿಹೆನು ॥ ೪೯ ॥
ಮನಸಿಗೆನ್ನ ಪ್ರಶಸ್ತವಾದುದ ।
ನಿನಗೆ ನಿಶ್ಚಯವಾಗಿ ಪೇಳುವೆ ।
ನಿನಗೆ ಬರಬಾರದು ಕುಶಂಕೆಯು ನನ್ನ ಮತದಲ್ಲಿ ॥
ತನಗೆ ಮೋಕ್ಷಪ್ರಾಪ್ತಿಯಾಗುವ ।
ನನುಮತದ ದಕ್ಷತೆಯ ಶೋರಿಸೆ ।
ಮನದಿ ತ್ಯಾಗಸ್ವರೂಪ ತಿಳಿದಾಕರ್ಮವಾಚರಿಸು ॥ ೫೦೦ ॥

ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।
ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥ ೫ ॥

ಹಾದಿ ನಡೆಯುವ ಪಥಿಕ ತನ್ನಯ ।
ಪಾದಚಲನವ ತ್ಯಜಿಸ ಬಾರದು ।
ಭೇದಬುದ್ಧಿಯ ತ್ಯಜಿಸಿ ದಾನವ ತಪವ ಯಜ್ಞವನೂ ॥
ಸಾದರದಿ ಮಾಡುವುದು ಬಿಡಲದು ।
ಬಾಧಕವು ತಾನಾಗುವುದು ಮೇಣ್ ।
ಮೇದಿನಿಯಲೀ ಕರ್ಮ ತ್ಯಜಿಸಲು ಬಾರದೈ ನರರು ॥೫೧॥
ಹೊಟ್ಟೆ ತುಂಬುವ ತನಕ ತಾಂ ಮುಂ- ।
ದಿಟ್ಟ ಪಕ್ವಾನ್ನಗಳ ಬಿಡುವರೆ ।
ನಷ್ಟವಸ್ತುವು ಸಿಗುವನಕ ಬಿಡುತಿಹರೆ ಯತ್ನವನು ॥
ಬಿಟ್ಟು ನಾಪೆಯ ನದಿಯ ಮಧ್ಯದಿ ।
ಕಷ್ಟಪಡುವರೆ ಪಾರಗಾಣದೆ ।
ಯಿಷ್ಟವಸ್ತುವು ಸಿಗದೆ ದೀಪವ ನೊಂದಿಸುವರೇನು ॥ ೫೦೨ ॥

ಬಾಳಿಗೊನೆಯನು ಹಾಕದಿಹ ಯೆಳೆ ।
ಬಾಳಿಗಿಡವನು ಕೊಯ್ಯ ಬಹುದೇ ।
ಕೇಳು ಪಾರ್ಥನೆ ಸ್ವಾತ್ಮಜ್ಞಾನದ ದೃಢತೆ ಬಾರದಲೆ ॥
ಕೀಳಬಹುದೇ ಮಖಿತಪೋದಾ- ।
ನಾಳಿಗಳ ಕರ್ಮಗಳ ಕಾರ್ಯವ- ।
ನಾಲಿಸೈ ನೀ ತಾಳದಿರು ಕರ್ಮದಲಿ ಭೇದವನು ॥ ೧೦೩ ॥

ತನ್ನತನ್ನಧಿಕಾರದಂದದಿ ।
ಮಾನ್ಯನಿರುತಿಹ ದಾನತಪಗಳು ।
ಯಜ್ಞಕರ್ಮಾದಿಗಳು ತ್ಯಾಜ್ಯಗಳಲ್ಲ ಮಾನವಗೆ ॥
ಬೆನ್ನ ಬಿಡದವುಗಳನು ಜಡರಿ- ।
ಸೆನ್ನುತಲಿ ನಾ ನಿನಗೆ ಹೇಳ್ವೆನು ।
ಮನ್ನಿಸೈ ನೀ ತತ್ತ್ವನಿದನಾ ಗುಹ್ಯ ಪೇಳಿದೆನು ॥ ೧೦೪ ॥

ನಡೆಯುವರೆ ತ್ವರೆ ಮಾಡುವನನೇ ।
ಪಡೆವನೈ ವಿಶ್ರಾಂತಿಯಂತದಿ ।
ಬಿಡದೆ ಕರ್ಮವ ಮಾಡುವವನಾಚರಣದಿಂ ತನ್ನ ॥
ಪಡೆವನೈ ತ್ಯಾಗದಲಿ ಕುಶಲತೆ ।
ಕುಡಿನನಾರೈ ವೈದ್ಯನೌಷಧ ।
ಪಡೆವನೈ ಯಾಮಾನದಿಂದಲಿ ರೋಗಮುಕ್ತತೆಯು ।೧೦೫॥

ಯಾರು ವಿಧಿಪೂರ್ವಕದಿ ಕರ್ಮಾ- ।
ಚಾರ ಮಾಳ್ಪನೊ ನಿರುತವನನೆ ನಿ- ।
ಚಾರಿಸಲು ತಮರಜಗುಣಂಗಳ ಬೇರೆ ಕೇಳುವನು ।।
ಜೋರಿನಿಂದಲಿ ಮೇಲೆಮೇಲಿಂ- ।
ದೇರಿಸಲು ಪುಟಗಳನು ಚಿನ್ನ- ।
ಕ್ಕೇರುವುದು ಶುದ್ಧತೆಯು ಮಲದ ವಿನಾಶವಾಗುವುದು
॥ ೧೦೬ ॥
ನಿಷ್ಠೆಯನು ತೋರಿಸಲು ಕರ್ಮದಿ ।
ಸುಟ್ಟು ಬಿಡುವುದು ರಜತಮಂಗಳ ।
ದೃಷ್ಟಿಗೋಚರವೆನಿಸುವುದು ಸಾತ್ತ್ವಿಕಗುಣಾವಳಿಯು ।।

ಇಷ್ಟಸಿದ್ಧಿಯು ಸತ್ತ್ವವಾಗಲು ।
ಕೊಟ್ಟು ಪಾವನತೆಯನು ದೇಹಕೆ ।
ಸುಟ್ಟು ಬಿಡುವುದು ಪಾಪಚಟ್ಟವ ತೀರ್ಥದಂದದಲಿ । ೧೦೭ ॥

ಹೊರಮಲವು ತೀರ್ಥದಲಿ ಸ್ನಾನದಿ ।
ಕರಗುವುದು ಕರ್ಮಗಳು ಕೇಳಂ- ।
ತರದೊಳಿರುತಿಪ ಕಲ್ಮಷವ ನಾಶಿಪುವು ನಿಜವಾಗಿ ॥
ಇರುವುದದರಿಂ ತೀರ್ಥಯೋಗ್ಯತೆ ।
ನಿರುತ ಸತ್ಕರ್ಮಕ್ಕೆ ಪಾರ್ಥನೆ ।
ತೊರೆಯು ಬಾರದು ಕರ್ಮ ಸಾಧಕವೈ ಫಲತ್ಯಾಗ ॥ ೧೦೮ ॥

ನೀರಡಿಸಿ ಬೆಂಡಾದ ನರನಿಗೆ ।
ಮಾರವಾಡದೊಳಮೃತ ಝರಿ ಕೈ- ।
ನೀರುವಂದದಿ ಕುರುದಕಣ್ಣಿಗೆ ಬೆಳಕು ಸಿಗುವಂತೆ ।।
ಧಾರುಣಿಯೆ ಜೀವ್ಯವಗೆ ಝೋಲಿಸಿ ।
ತಾರಿಸುವ ಪರಿಯಂತೆ ನದಿಯಲಿ ।
ನೀರಿನಲಿ ಮುಳುಗುವಗೆ ನದಿ ತಾನಪ್ಪಿ ಪೋರೆವಂತೆ ॥ ೧೦೯ ॥

ಮರಣಸಂಸಿತನಿಗೆ ಯಮನೇ ।
ಕರುಣದಿಂ ದೀರ್ಘಾಯುವೀಯುವ ।
ತೆರದಿ ಕರ್ಮವೆ ಕರ್ಮಹೀನೆಯ ಸಂಹರಿಸುವುದಲಾ ॥
ಪರಿಯಲಾ ರಸರೀತಿ ವೈದ್ಯನು ।
ತರುವನೈ ವಿಷದಿಂದಲಮೃತವ ।
ಮರಣಸಂಸಿತನನು ರಕ್ಷಿಸುವನು ಸುಕೌಶಲದಿ ॥ ೧೧೦ ॥

ಯುಕ್ತಿಯಿಂದಲಿ ಕರ್ಮಗಳನಾ- ।
ಸಕ್ತಿಯಿಲ್ಲದೆ ಮಾದಲವುಗಳೆ ।
ಮುಕ್ತಿಮಾರ್ಗವ ತೋರಿಸುವುದೈ ಬಂಧಕವವಲ್ಲ ॥
ಯುಕ್ತಿ ಯಾವುದೆನುತ್ತ ಕೇಳ್ವರೆ ।
ಭಕ್ತನೀಸಿಪಿಯೆಂದು ನಿನಗದ ।
ಪೊಕ್ತ ಪೇಳುವೆನದನು ನೀ ಕೇಳ್ ಭಕ್ತಿಪೂರ್ವಕದಿ ॥ ೧೧೧ ॥

ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।
ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಮ್ ॥ ೬ ॥

ಐದು ಯಜ್ಞಗಳನ್ನು ದಿನದಿನ- ।
ವೀಧರಿತ್ರಿಯಲೆಲ್ಲ ಮಾಡುವ ।
ರಾದರೇನಭಿಮಾನವನು ತಾಳುವರೆ ಮಾನವರು ॥

ಉದರದಿ ಪರದ್ರವ್ಯ ಕೊಳ್ಳುತ ।
ಹಾದಿ ನಡೆಯುತ ಯಾತ್ರೆ ಮಾಡಲು ।
ಜೋಧವಹುದೇಯವಗೆ ಯಾತ್ರೆಯ ಮಾಳ್ಪೆ ತಾನೆನುತ ।೧೧೨॥

ದೊರೆಯ ಮುದ್ರಾಯುಕ್ತಪತ್ರದ ।
ಭರದಿ ಸೇವಕನೊರ್ವ ರಾಜನ ।
ತ್ವರಿತದಿಂದಲಿ ಹಿಡಿದು ತರುವನು ದೊರೆಯ ಬಲದಿಂದ ।।
ಅರಿವನೇನವ ತಾನು ರಾಜನ ।
ಭರದಿ ಗೆದ್ದೆನೆನುತ್ತ ಮನದಲಿ ।
ಗರುವ ಸಲ್ಲದು ಮನದೊಳವನಿಗೆ ದೊರೆಯ ಬಲವಿದಲಾ
॥ ೧೧೩ ॥

ಸೆರಗ ಹಿಡಿದನ್ಯರ ಸಹಾಯದಿ ।
ನರನು ನದಿಯಲಿ ವಾರಗಾಣಲು ।
ಬರುವುದೇನವಗಾಗ ಗರ್ವವು ದಾಟದೆನು ಯೆನುತ ॥
ಅರಸ ತನ್ನಯ ಕೈಯ ದಾನವ ।
ಪರರಿಗೀಯಲ್ಕಾ ಪುರೋಹಿತ ।
ಮರುಳನೇನವ ದಾನದಭಿಮಾನವನು ತಾಳುವನೆ ॥ ೧೧೪ ॥

ತೊರೆದು ಕರ್ತೃತ್ವಾಭಿಮಾನವ ।
ನಿರುತ ಕರ್ಮವ ಕಾಲಕಾಲದೊ- ।
ಳಿರದೆ ಮಾಳ್ಪನೊ ಬಿಟ್ಟಹಂತೆಯ ಮನದ ಕಿಲ್ಬಿಷವ ॥
ಮರಳಿ ಕರ್ಮವು ಕೊಡುವ ಫಲಗಳ- ।
ನಿರದೆ ಮನದಿಂ ಹೊರಗೆ ದಬ್ಬುತ ।
ನಿರುತ ಕರ್ಮವನಾಚರಿಸ ಬೇಕ್ಕೈ ನರೋತ್ತಮನೆ ॥ ೧೧೫ ॥

ಪರರ ಮಕ್ಕಳ ನೋಡಿದಾಕ್ಷಣ ।
ಹರುಷವಪ್ಪುದೆ ಮನದಿ ಪ್ರೀತಿಯು ।
ಬರುವುದೇ ಪರರರ್ಭಕರ ನೋಡಿದರೆ ನಿಜವಾಗಿ ॥

ನರನೆ ಫಲದಾಶೆಯನು ಬಿಡುತಲಿ ।
ನಿರುತ ಕರ್ಮವ ಮೊದಲು ಮಾಡೈ ।
ಧರಣಿಯಲಿ ನಿವ್ಯಾಮಕರ್ಮವೆ ಯುತ್ತಮೋತ್ತಮವು ॥ ೧೧೨ ॥

ಫಲದಲಾಶೆಯನಿಡುತಲಾ ಪಿ- ।
ಪ್ಪಲಕೆ ನೀರೆರೆಯುವರೆ ವಾರ್ಥನೆ ।
ಫಲದೊಳಾಶೆಯ ತೊರೆದು ಕರ್ಮವ ಮಾಡುವುದು ಮುದದಿ ।।
ನಿಲಯನಿಲಯದೊಳೆಲ್ಲ ದನ ಗೋ- ।
ವಳನು ಕೂಡಿಸಿ ಮೇಯಿಸುತ್ತಿಹ ।
ಫಲವನಃಶಿಸುತಿಹನೆ ಹಾಲನು ಬಯಸುತಿಹನೇನು ॥ ೧೧೩ ॥

ತಿಳಿಯಲಾಪರಿ ಕರ್ಮಫಲದಲಿ ।
ಕಳೆಯ ಬೇಕ್ಕೈ ಯಾಶೆ ಯೆಂಬುದ ।
ತಿಳಿಯುತೀ ತತ್ತ್ವವನು ಮಾಡಲು ಕರ್ಮಗಳನೆಲ್ಲ ॥
ಬಳಿಯಲಿರುವಾತ್ಮಸ್ವರೂಪದ ।
ಫಲನಾಗುವುದಯ್ಯ ದರ್ಶನ ।
ಬೆಳೆಯುವುದು ಶುದ್ಧತೆಯು ಕರ್ಮಾಚರಣಮಾನದಲಿ ॥ ೧೧೪ ॥

ನಿನಗೆ ಪೇಳೆದೆ ಕರ್ಮತತ್ತ್ವವ ।
ವಿನಯದಿಂ ಫಲದಾಶೆ ತ್ಯಜಿಪುದು ।
ಮನದಲಿಡದಭಿಮಾನ ಕರ್ಮದ ಕರ್ತ ತಾನೆನುತ ॥
ನೆನಸುತೀಪರಿ ಕರ್ಮ ಮಾಡಲು ।
ಜನನಮರಣದ ಚಕ್ರದಿಂದಲಿ ।
ಕ್ಷಣದಿ ಮುಕ್ತಿಯು ದೊರೆವುದೈ ನೀನಾಚರಿಪುದಿದನು ॥ ೧೧೫ ॥

ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ।
ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥ ೭ ॥

ಕತ್ತಲೆಯೊಳಾ ಕಲ್ಲು ಕಾಲಿಗೆ ।
ಹತ್ತಿ ಹೊಡತದಿ ನೋವು ಬಂದರೆ ।
ಕಿತ್ತು ಕಳೆಯುವುದೇನು ಕ್ರೋಧದಿ ಕಣ್ಣುಗಳನೆರಡ ।।
ಧಾತ್ರಿಯಲಿ ಕರ್ಮಗಳು ಬಂದವೆ- ।
ನುತ್ತ ಕರ್ಮವ ಬಿಟ್ಟುಬಿಡುವುದು ।
ಯುಕ್ತವೇನೈ ತಿಳಿಯೆ ಪಾರ್ಥನೆ ತತ್ತ್ವ ಪರಿಕಿಸಲು ॥೧೧೦॥

ಶಿರದ ಮುಂಭಾಗದಲಿ ನೋವೆ- ।
ದ್ದರೆ ಕಣಾ ಶಿರ ಕಡಿವುದುಚಿತವೆ ।
ಕರೆವರಿದ ಕೋವಿದರು ಕೇಳೈ ತಾಮಸತ್ಯಾಗ ।।

ಒರಲು ಕೆಟ್ಟಿಹ ಹಾಗಿ ಕಾಲಿಲಿ ।
ಚರಿಸಲಾರದುಪಾಯವಿಲ್ಲೈ ।
ಹರಿದು ಕಾಲ್ಗಳ ಕಡಿದು ಬಿಸುಡುವುದೇನು ಕೌಶಲವೆ ॥ ೧೧೧ ॥

ಹೊಟ್ಟೆಹಸಿವಿಲಿ ಬಳಲಿ ತಾಂ ಕಂ- ।
ಗೆಟ್ಟು ಬಂದವನೆದುರು ಬಸಿಬಸಿ ।
ಯಿಟ್ಟರನ್ನವ ಸಿಟ್ಟಿನಲಿ ಕಾಲಿಂದ ಚೆಲ್ಲಿದರೆ ॥
ಇಷ್ಟಕಾರ್ಯವು ಸಾಧ್ಯವಿಹುದೇ ।
ಹೊಟ್ಟೆಹಸಿವೆಯು ಶಾಂತವಹುದೇ ।
ಬಿಟ್ಟು ಬಿಡ ಬಾರದು ಕಣಾ ಭೀತಿಯಲಿ ಕರ್ಮವನು ॥ ೧೧೫ ॥

ಚರಿಸಿದರೆ ಕರ್ಮವನು ಯುಕ್ತಿಯೊ- । ತೊರೆವನವನೈ ಕಾರ್ಯಕರ್ಮವ ।
ಳೆರದೆ ಕರ್ಮದ ದೋಷ ತಟ್ಟದು । ನರನೆ ತನ್ನಯ ಧರ್ಮ ತ್ಯಜಿಪನು ।
ಅರಿಯನಲ್ಲಾ ತಾಮಸನು ಭ್ರಾಂತಿಯಲಿ ಕಂಗೆಟ್ಟು ॥ ತೊರೆಯು ಬೇಡೈ ಪಾರ್ಥ ಕರ್ಮವ ತಾಮಸನ ತೆರದಿ ॥ ೧೨೩ ॥

ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ತ್ಯಜೇತ್ ।
ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್ ॥ ೪ ॥

ಸ್ವಾಧಿಕಾರವ ತಿಳಿದಿಹನು ನಿಜ । ಕೈತಳಕೆ ಸಿಕ್ಕಿರ್ದ ಸುಖವು ಮ- ।
ಬೋಧನಿಹುದೈ ಕಾರ್ಯಕರ್ಮವು । ಹಾತಿಶಯವಾಗಿಹುದು ಸಾಕೆದು- ।
ಆದರದನಾಚರಿಪ ಕಾಲದಿ ಕಠಿಣ ಕಾಣುವುದು ॥ ವೇತಕೈ ಮಾಡುವುದು ಶ್ರಮವನು ಕಾರಣವ ಕಾಣೆ ॥ ೧೨೮ ॥
ಆದಿಯಲಿ ಕಾಣುವುದು ಕ್ಲೇಶವು ।
ಹಾದಿಯಲಿ ಭಯಭಾರಿ ತೋರ್ಪುದು । ಈ ತೆರದಲಿ ವಿಚಾರಮಾಡುತ ।
ಮೇದಿನಿಯಲೀ ತೆರದಿ ಭಯದಲಿ ಕರ್ಮವನು ತ್ಯಜಿಸೆ ಭೀತಿಯಲಿ ಕ್ಲೇಶದಲಿ ಕರ್ಮವ ।
॥ ೧೨೪ ॥ ಸೋತು ಬಿಟ್ಟರೆ ರಾಜಸತ್ಯಾಗವನು ಮಾಡುವನು ॥
ಇರುವುದಾರಂಭದಲಿ ಕಠಿನತೆ । ಈತ ಮಾಳ್ಪನು ತ್ಯಾಗವನು ನಿಜ- ।
ಹರಡೆ ಕಚ್ಚಲು ತುರಟವಿರುವುದು । ಪೀತನಿಗೆ ಫಲ ದೊರೆವುದೆಲ್ಲಿಂ- ।
ಯಿರುವುದೈ ಕಡುಕಹಿಯು ನಿಂಬವು ಕಚ್ಚಿದಾಕ್ಷಣದಿ ॥ ದೀತನರಿಯನು ಕರ್ಮತ್ಯಾಗದ ತತ್ತ್ವಸಾರವನು ॥ ೧೨೯ ॥
ಇರುವುದೈ ಕಂಟಕ ಗುಲಾಬಿಗೆ ।
ಯಿರಿವುದಲ್ಲಾದನವು ಹಾಲನು । ಒಲೆಯ ಮೇಲಿಟ್ಟಿರುವ ಪಾತ್ರದ- ।
ಕರೆದರದು ಸೀ ಯಿರದೆ ತೋರ್ಪುದು ದೋಷವೇ ಮೊದಲು ಒಳಗಿರುವ ಬಿಸಿ ತುಪ್ಪವುಕ್ಕಿದ- ।
॥ ೧೨೫ ॥ ರೊಲೆಯೊಳಗೆ ಬೀಳುವುದು ಹೋಮದ ಫಲವು ದೊರೆಯುವುದೆ ॥
ಆಡಿಗೆ ಮಾಡುವ ವೇಳೆಯಲ್ಲದ- । ಜಲದಿ ಮುಳುಗಲು ಮರಣ ಬಂದರೆ ।
ರೊಡನಿರುವ ಸವಿರುಚಿಯು ತೋರ್ಪುದೆ । ಜಲಸಮಾಧಿಯ ಫಲವು ಬರುವುದೆ ।
ಒಡಿಸಿದಾಗಲೆ ಭೋಜನದ ರುಚಿ ವಿದಿತವಾಗುವುದು ॥ ಯಿಳೆಯಲದಕಪಘಾತವೆನುವರು ಕೋವಿದರು ಪಾರ್ಥ ॥೧೩೦॥
ತೊಡಗುವಾಗಲೆ ಕಠಿಣವಿರುವುದು ।
ಬಿಡುವನದರಿಂ ಕರ್ಮವೆಲ್ಲವ । ಯಾವನೀದೇಹದಲಿ ಪ್ರೀತಿಯು ।
ಜಡಮತಿಯ ಮಾನವನು ಶ್ರಮಕಂಜುವನು ಕರ್ಮದಲಿ ಭಾವವಿಡುತಲಿ ಕರ್ಮ ಬಿಡುವನೊ ।
॥ ೧೩೬ ॥ ಯಾವನಿದ ಕರೆಯುವನು ಕರ್ಮತ್ಯಾಗ ನಿಜವೆಂದು ।।
ಆರಭಿಸುವನು ಕರ್ಮವೆಲ್ಲವ । ತಾವರೆಯ ಸಖ ಮೂಡೆ ನಕ್ಕ- ।
ತೋರಿದಾಕ್ಷಣ ಕಠಿಣ ಬಿಡುವನು । ತ್ತಾವಳಿಯು ಲೋಪಿಸುವ ತೆರದಲಿ ।
ಹಾರೆ ಬಿಸಿಕಾಯ್ದುದನು ಕೈಯಲಿ ಹಿಡಿದು ಬಿಡುವಂತೆ ॥ ಸಾವುವೈ ಕರ್ಮಗಳು ಸ್ವಾತ್ಮಜ್ಞಾನದುದಯದಲಿ ।। ೧೩೧ ॥
ಧಾರುಣಿಯಲೀ ಭಾಗ್ಯವೆಂದು ಶ- ।
ರೀರ ಮಾನುಷ ದೊರೆಯಿತಿದಕೆ ಕ- । ಈ ತೆರದ ರಾಜಸದ ತ್ಯಾಗದಿ ।
ತೋರಕರ್ಮವದೇಕೆ ದೇಹಕ್ಲೇಶ ಪೋಗೋಕೆ ॥ ೧೩೭ ॥ ಪ್ರಾಪ್ತವಾಗದು ಮೋಕ್ಷ ನರನಿಗೆ ।
ನೀ ತಿಳಿಯ ಬೇಕದುವೆ ತ್ಯಾಗವು ನಿಜದಿ ರಾಜಸವು ॥
ಭೂತಲದಲೀ ಕಠಿಣಕರ್ಮವ- । ಏತರಿಂ ನಿಜವಾಗಿ ಮೋಕ್ಷವು ।
ನೇತಕಾಚರಿಸುವುದು ಯೆನಗದು । ಪಾಪ್ತವಪ್ಪುದೆಮತ್ತ ನಿನಗತಿ- ।
ಭೀತಿದಾಯಕ ಕಾರಣವನಾಕಾಕ್ಷೆ ಕರ್ಮದಲಿ । ಪ್ರೀತಿಯಿಂದಲಿ ವಿಸ್ತರಿಪೆನ್ನೈ ಕೇಳು ಕೌಂತೇಯ ॥ ೧೩೨ ॥

ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ ।
ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ ॥ ೯ ॥

ತೊರೆದು ನಿಜಕರ್ಮಾಭಿಮಾನವ ।
ಮರೆತು ತನ್ನ ನಿಜಸ್ವರೂಪವ ।
ನೆರೆವನ್ಯೆ ಫಲದಾಶೆಯಲ್ಲಿ ತಿಲಾಂಜಲಿಯ ಮುದದಿ ।।
ನಿರುತ ತನ್ನ ಸ್ವಭಾವಕರ್ಮವು ।
ಬರಲು ಸಹಜದಿ ವರ್ಣಧರ್ಮದಿ ।
ಜರಿಸುವನು ಯಾರವನು ಗೌರವದಿಂದ ವಿಧಿಯುಕ್ತ
॥ ೧೩೩ ॥
ಮಾಡಲಾಮಾತೆಯಲಪಜ್ಞೆಯ ।
ಮಾಡಲವಳೊಳು ಕಾಮವಾಸನೆ ।
ಕೂಡಿಸುವುವಿವು ನರಕವಾಸವ ಕರ್ಮವಶದಿಂದ ॥
ಓಡಿಸುತಲೀ ಯುಭಯಭಾವವ ।
ಮಾಡ ಬೇಕೈ ಮಾತೃಸೇವೆಯ ।
ರೂಢಿಯಲಿ ಕೇಳಿಹುದು ಕರ್ಮದ ಧರ್ಮವೀ ತೆರದಿ
॥ ೧೩೪ ॥
ಇರುವುದಾಕಳ ಮೋರೆ ಹೊಲಸೆನು- ।
ತಿರದೆ ಯಾಕಳನೆಲ್ಲ ತ್ಯಜಿಪರೆ ।
ಗೊರಟು ಸಿಪ್ಪೆಯು ತ್ಯಾಜ್ಯವಾದರೆ ಮಾವ ತ್ಯಜಿಸುವರೆ ॥
ಧರಣಿಯಲಿ ಕರ್ಮಾಭಿಮಾನವು ।
ತಿರಿಗಿ ಕರ್ಮಫಲೇಚ್ಛೆಯೆಂಜೇ- ।
ಯೆರಡು ವಾಕಗಳೆಂದು ಕರ್ಮವ ತ್ಯಜಿಸ ಬಾರದಲಾ
॥ ೧೩೫ ॥
ತಂದೆ ತನ್ನಯ ಕನ್ಯೆಯನು ನಲ- ।
ವಿಂದ ಪೋಷಿಸಿ ಫಲದ ಬಯಕೆಯ ।
ಮುಂದೆ ಮಾಡನು ಪೋಷಿಪನು ನಿಷ್ಕಾಮತನದಿಂದ ॥

ಚಂದದಿಂದಾ ಪರಿಯಲೆರಡಾ- ।
ಬಂಧನಂಗಳ ಕಡಿದು ಕರ್ಮವ-
ನೊಂದೆ ಮನದಲಿ ಮಾಡುವಾತಗೆ ದುಃಖ ತಟ್ಟದಲಾ ॥ ೧೩೬ ॥

ತ್ಯಾಗವೆಂಬುದು ವೃಕ್ಷವ್ರತ್ತವು ।
ಬೇಗದಿಂದಲಿ ಮೋಕ್ಷಫಲದಿಂ ।
ಬಾಗಿ ರಂಜಿಸುತಿಹುದು ಸಾತ್ತ್ವಿಕವಿಹುದು ಮಾರ್ಗವದು ॥
ಆಗಿಯಲಿ ಬೀಜವನು ಸುಟ್ಟರೆ ।
ಆಗಲಾರದು ಗಿಡವು ಮೊಳಕೆಯು ।
ನೀಗಲಾ ಫಲದಾಶೆ ತ್ಯಾಗವು ತಿಳಿಯೆ ಸಾತ್ತ್ವಿಕವು ॥ ೧೩೭ ॥

ಸ್ಪರಿಶಸ್ಪರ್ಶದ ಮಾತ್ರದಿಂದಲೆ ।
ಹರಿಯುವುದು ಲೋಹದ ಕಲಂಕವು ।
ಬರುವುದೆರದನೆ ವರ್ಣ ಚೋದ್ಯವಿದೇನು ನೋಡಿದರೆ ॥
ತೊರೆದು ಕರ್ಮಫಲೇಚ್ಛೆಯನು ಮೇಣ್ ।
ತೊರೆದು ನಿಜಕರ್ಮಾಭಿಮಾನವ ।
ಹರಿವುವೈ ಗುಣಗಳು ರಜಸ್ತಮ ಕರ್ಮಮಾರ್ಗದಲಿ ॥ ೧೩೮ ॥

ಶುದ್ಧ ಸಾತ್ತ್ವಿಕಭಾವದಿಂದಲಿ ।
ವೃದ್ಧಿಯಹುದೈ ನ್ಯಾತ್ಮತೋಧವು ।
ಶುದ್ಧ ಬೆಳಕದು ತೋರದೈ ಯಾಕಾಶ ನಾಲ್ದಿಸೆಯು ॥
ಸದ್ದ ಮಾಡದೆ ಮೃಗಜಲವು ಒಳ- ।
ಕೆದ್ದು ಪೋಪುದು ಸಂಜೆವೇಳೆಗೆ ।
ಪೆದ್ದು ಪೋಪುದು ಜಗದ ಮಿಥ್ಯಾಭಾನವಾತೆರದಿ ।೧೩೯।

ನ ದ್ವೇಷ್ಟ್ಯಕುಶಲಂ ಕರ್ಮ ಕುಶಲೇ ನಾನುಷಜ್ಜತೇ ।
ತ್ಯಾಗೀ ಸತ್ತ್ವಸಮಾವಿಷ್ಟೋ ಮೇಧಾವೀ ಛಿನ್ನಸಂಶಯಃ ॥ ೧೦ ॥

ಪರಿಪರಿಯ ಮೋಡಗಳು ಗಗನದಿ ।
ಬರುವುವೈ ಮೇಣಡಗಿ ಪೋಪುವು ।
ಬರುವುದಾಪರಿ ಕರ್ಮ ಪೂರ್ವಾರ್ಚಿತದ ಫಲದಿಂದ ॥
ಅರಿಯಲಾಗದು ಹೆಚ್ಚ ಕುಂಡನು ।
ಮರೆಯ ಬೇಕೈ ದುಃಖಿಸುಖಿಗಳ- ।
ನರಿಯ ಬೇಕಿವು ದೋಷನಿರಹಿತನೆಂದು ಮನದೊಳಗೆ।೧೪೦॥

ಹರುಷವಾಗದು ಶುದ್ಧಕರ್ಮದಿ ।
ತೊರೆವನ್ಯೆ ದ್ವೇಷವನಶುದ್ಧದಿ ।
ಒರುವನೇ ಜಾಗ್ರತದಿ ಖಂತಿಯು ಸ್ವಪ್ನಸಂಗತಿಗೆ ॥
ತೊರೆದು ನಿಜಕರ್ಮಾಭಿಮಾನವ ।
ಮರೆತು ಕರ್ಮಫಲೇಚ್ಛೆಯನು ತಾ- ।
ನೆರಡುಭಾವವಿಹೀನತೆಯಲವ ಕರ್ಮ ಮಾಡುವನು ॥ ೧೪೧ ॥

ಇದು ಶುಭಾಶುಭಕರ್ಮವೆಂಬುದು । ಇದುವೆ ಕರ್ಮತ್ಯಾಗ ಸಾತ್ತ್ವಿಕ- ।
ವಿದಿತವಾಗದು ಮನದೊಳವನಿಗೆ । ವಿದರ ಹೊರತಿಹ ಕರ್ಮತ್ಯಾಗವು ।
ವಿದಿತವಾಗವು ಕರ್ಮಕರ್ತನು ಯೆಂಬ ಭಾವಗಳು ॥ ಅಧಿಕ ಬಂಧಕವಾಗಿ ವರ್ತಿಪುದೇನ ಹೇಳುವೆನು ॥ ೧೪೨ ॥

ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ ।
ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ ॥ ೧೧ ॥

ಈ ಶರೀರವು ಪ್ರಾಪ್ತವಾಗಲು । ನರಗೆ ದೇಹನಿಮಿತ್ತ ಮಾತ್ರದಿ ।
ಬೇಸರಿಸುವರೆ ಕರ್ಮ ಮಾಡಲು । ದೊರಕಿಹುದು ಬೆನ್ನಿನಲಿ ಕರ್ಮವು ।
ಲೇಸ ಘಳಿಸರು ಮೂರ್ಖರೆಂದೇ ನಂಬು ನೀನವರ ॥ ಮರಣಪರ್ಯಂತರವು ಸಾಯದು ನಿಲ್ಲದೀ ಕರ್ಮ ॥ ೧೪೩ ॥
ಬೇಸರಿಸುವುದೆ ಘಟವು ಮಣ್ಣನು ।
ಬೇಸರಿಸುವುದೆ ವಸ್ತ್ರ ತಂತುವ । ಇರುವುದೊಂದೇ ಮಾರ್ಗ ತ್ಯಾಗ- ।
ಬೇಸರಿಸುವುದೆ ಬೆಂಕಿಯುಷ್ಣತೆಯನ್ನು ಕೌಂತೇಯ ॥೧೪೪॥ ಕ್ಕರಿಯಲಾ ನಿಜಕರ್ಮಗಳನಾ- ।
ಚರಿಪ ಸಮಯದಿ ಕರ್ಮಫಲದಾಶೆಯನು ತೊರೆಯುವುದು ॥

ದ್ವೇಷಿಸುವುದೇ ಪ್ರಭೆಯ ದೀಪವ । ಹರಿಗೆ ಕರ್ಮಂಗಳ ಸಮರ್ಪಿಸೆ ।
ತ್ರಾಸವಾಗಲು ಹಿಂಗುವಿಗೆ ದು- । ಹರಿಪ್ರಸಾದದಿ ಜ್ಞಾನ ಬರುವುದು ।
ವಾಸವನು ಪಿಡಲಾಪುದೇ ಸೀಕರಿಸಿ ಪರಿಮಳವ ॥ ಹರಿವುದೈ ನಿಜಮಾಯೆ ಸ್ವಾತ್ಮಜ್ಞಾನದುದಯದಲಿ ॥ ೧೪೫ ॥
ವಾಸವಾತ್ಮಜ ಕೇಳು ದ್ರಾವ ವಿ- ।
ಶೇಷವನು ಪಿಡುತಿಹುದೆ ನೀರದು । ಜ್ಞಾನವಾಗಲು ರಜ್ಜು ತೋರ್ಪುದು ।
ಲೇಸಿನಿಂ ಕಲಿಪಾರ್ಥ ಕೇಳೈ ಕರ್ಮಧರ್ಮವನು ॥ ೧೪೪ ॥ ಹಾನಿ ಪಡೆವುದು ಸರ್ಪವೆಂಬುವ ।
ಭಾನುವೀಪರಿಯಾತ್ಮಬೋಧದಿ ಕರ್ಮ ಸಾಯುವ್ದು ॥

ನರನೆ ನೋಡೈ ದೇಹ ಧರಿಸಿಹ । ಕ್ಷೋಣಿಯಲ್ಲೀ ತೆರದಿ ತ್ಯಾಗವ ।
ನರಗೆ ಕರ್ಮತ್ಯಾಗ ಮಾಡುವ । ಮಾನವನು ಮಾಡಲ್ಕೆ ನಿಜವಹ ।
ಮರುಳುತನ ಸಲ್ಲುವುದೆ ನೀನೆ ವಿಚಾರ ಮಾಡಿದನು ॥ ಮಾನನೀಯು ತ್ಯಾಗವೆನುವರು ಜಗದಿ ಕೋವಿದರು ॥ ೧೪೪ ॥
ಧರಿಸಿರುವ ತಲೆಗಂಧ ಡೊಂಕಾ- ।
ಗಿರಲು ತಿದ್ದಲು ಬಹುದು ತಲೆಯೇ । ಧರಣಿಯಲಿ ನಿಜಕರ್ಮತ್ಯಾಗದ ।
ಯಿರಲು ಡೊಂಕದಕೇನುವಾಯವು ಹೇಳು ಕಲಿಪಾರ್ಥ ಪರಿಯಿದಹುದೈ ಯಿಲ್ಲವಾದರೆ ।
॥ ೧೪೫ ॥ ಬರಲು ರೋಗಿಗೆ ಮೂರ್ಛೆಯದು ವಿಶ್ರಾಂತಿ ಯೆನಿಸುವುದೆ ॥

ನರನೆ ಕೇಳೈ ವಿಹಿತಕರ್ಮವ । ನರನು ಬೇಸರದಿಂದ ಕರ್ಮವ ।
ಚರಿಸುವುದು ತನ್ನಿಚ್ಛೆಯಿರುವುದು । ತೊರೆಯಲದು ನಿಜ ತ್ಯಾಗವಲ್ಲೈ ।
ತೊರೆಯು ಬಹುದದ ಕಾಣೆನದರಲಿ ಕಠಿಣಮಾರ್ಗವನು ॥ ಬರಲು ವೊನಿಕೆಯು ಪೆಟ್ಟು ಗುದ್ದಿಸಿ ಯುಪಶಮಿಸುವಂತೆ ॥೧೪೦॥
ಧರಣಿಯಲ್ಲೀ ನರಶರೀರವೆ ।
ಯಿರುವುದಲ್ಲೈ ಕರ್ಮರೂಪವು । ಯಾರು ಕರ್ಮಫಲಾಶೆ ಬಿಟ್ಟರೊ ।
ತೊರೆಯು ಬಹುದೇ ಕರ್ಮ ಶಕ್ಯವೆ ತ್ಯಾಗ ದೇಹದಲಿ ಯಾರು ನಿಷ್ಕರ್ಮತ್ವಕರ್ಮದೊ- ।
॥ ೧೪೬ ॥ ಳೇರಿಸಿರುವರೊ ಅವರೆ ತ್ಯಾಗಿಗಳೆಹರು ಮೂಜಗದಿ ॥

ನರನೆ ಸುಮ್ಮನೆ ಮಲಗುವಾಗಲು । ಮಾರಮಣಶ್ರೀಕೃಷ್ಣನೇ ವಿ- ।
ಹೊರಗೊಳಗೆ ಚಲಿಸುವುದು ವಾಯುವು । ಸ್ತಾರವನು ಸಾರವನು ಪೇಳ್ದನು ।
ಚರಿಸುವುದು ರಕ್ತಾಭಸರಣವು ದೇಹದಲಿ ನೋಡೆ ॥ ಧಾರುಣಿಪಥೃತರಾಷ್ಟ್ರ ನಿಗೆ ಪೇಳಿದನು ಸಂಜಯನು ॥ ೧೪೧ ॥

ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಮ್ ।
ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್ ॥ ೦೨ ॥

ಕರ್ಮಫಲದಾಶೆಯನು ತೊರೆಯದೆ ।
ಕರ್ಮಗಳನಾಚರಿಸುವಾತನು ।
ಕರ್ಮಫಲಭೋಗವನುಣುವನ್ಯೆ ಮೂರುವಿಧವಾಗಿ ॥
ಜನ್ಮ ಕೊಟ್ಟಹ ಕನ್ಯೆ ನೋಡಲು ।
ನಮ್ಮವಳು ತಾನಲ್ಲೆನುತ ಸ- ।
ದ್ಧರ್ಮದಿಂ ಕನ್ಯಾರ್ಥಿಪುರುಷಗೆ ದಾನ ಮಾಡಿದರೆ ॥೧೫೨॥

ದೇವಮಾನವ ಮೇಣು ಮೂರನೆ ।
ಸ್ಥಾವರಗಳೆಂದಿನಿತು ಮೂರಿಹ- ।
ವೀವಸುಂಧರೆಯಲ್ಲಿ ಭೇದವು ಕರ್ಮಫಲದೊಳಗೆ ॥
ಭಾವವಿಹುದೈ ಮೂರು ಮೊದಲನೆ ।
ಭಾವವಿಪ್ಪವನಿಪ್ಪವೆರಡನೆ ।
ಭಾವ ಮೂರನೆ ಮಿಶ್ರವೆಂಜೀ ಮೂರು ವಿಧ ಜಗವು ॥ ೧೫೭ ॥

ಹರಿದು ಮಾಯಾಪಾಶ ತಂದೆಯ ।
ಬರುವಳವಳಾ ಕನ್ಯೆ ಗಂಡನ ।
ಪರಮಮಾಯಾಪಾಶದಲಿ ಕಲಿಪಾರ್ಥ ನೋಡಿದಿಯಾ ।।
ನರನು ವಿಷದಾಗರವ ಮಾರಲು ।
ಬರುವುದೈ ವ್ಯಾಪಾರಲಾಭವು ।
ತರುವುದೈ ಮರಣವನು ತದ್ವಿಷ ಸೇವಿಸುವ ನರಗೆ ॥೧೫೩॥

ವಿಷಯಭೋಗಾಸಕ್ತರಾಗುತ ।
ವಿಷಮವೃತ್ತಿಯನಾಚರಿಸುತೀ- ।
ವಸುಮತಿಯಲಿ ನಿಸಿದ್ಧಕರ್ಮವ ಚರಿಸಿ ಮೋದದಲಿ ॥
ನುಸುಳುವರು ಕ್ರಿಮಿಕೀಟಕಾದಿಗ- ।
ಳಸಮ ಜನ್ಮದಿ ಬಂದು ತ್ರಾಸದಿ ।
ಬಸವಳೆವರೈ ಕರ್ಮಫಲವಿದನಿಷ್ಟ ನೋಡಿದರೆ ॥ ೧೫೮ ॥

ನಾನು ಕರ್ಮವ ಮಾಪ್ಪೆನೆಂದಭಿ- ।
ಮಾನವನು ತಾಳಿರಲಿ ಮೇಣಭಿ- ।
ಮಾನ ತೊರೆದರು ಫಲದಲಾಶೆಯನಿಟ್ಟು ಕರ್ಮವನು ॥
ಕ್ಷೋಣಿಯಲಿ ನರನಾಚರಿಸಿದರೆ ।
ಹಾನಿ ಹೊಂದದು ಕರ್ಮಮಾರ್ಗವು ।
ಹಾನಿ ಹೊಂದಿಸಬೇಕು ನರನೀ ಭಾವಯುಗಳಕ್ಕೆ ॥ ೧೫೪ ॥

ಸ್ವಾಧಿಕಾರವ ಮಾನಿಸುತಲಾ ।
ವೇದಮಾರ್ಗವನಾಚರಿಸುತಲಿ ।
ಸಾಧಿಸುವರೈ ಪುಣ್ಯದಾಯಕ ಕರ್ಮಗಳ ನಿಜದಿ ॥
ಸಾಧಿಪರು ನಿಜಪುಣ್ಯಕರ್ಮದಿ ।
ಮೋದದಿಂ ದೇವೇಂದ್ರಪದವಿಯ ।
ಮೇದಿನಿಯಲಿದಕೆನ್ನುವರು ಬಹು ಪುಣ್ಯಕಾರಕವು ॥ ೧೫೯ ॥

ಹಾದಿಯಲಿ ಹುಟ್ಟಿರುವ ಮರದ- ।
ಲ್ಲಾದ ಹಣ್ಣನು ತಿನಲು ಬಯಸಲು ।
ಬಾಧಕವು ಮೇಣಾಗದಿರದೇ ಫಲವ ಗ್ರಾಹಿಸಲು ॥
ಮೇದಿನಿಯಲೀ ಪರಿಯ ಕರ್ಮದೊ- ।
ಳಾದರಾಶೆಯು ಕರ್ಮವಶದಿಂ ।
ಭಾಧಿಸುವುದೈ ನರನ ಕರ್ಮಫಲೇಚ್ಛೆ ಕೌಂತೇಯ ।।೧೫೫॥

ಹುಳಿಸವಿಯನೇಕತ್ರ ಮಾಡಲು ।
ಬೆಳೆಯುವದು ಮೂರನೆಯ ರುಚಿಯದು ।
ಫಲವಲಾ ಸಂಮಿಶ್ರವೀಪರಿ ಕರ್ಮಫಲವಿಹುದು ॥
ತಿಳಿಯಲಾ ಯೋಗದಲಿ ಕುಂಭಕ ।
ಬೆಳೆಯುವುದು ರೇಚಕದಲಾದರು ।
ಫಲವು ಮಿಶ್ರಿತವಾಗಿ ದ್ವಂದ್ವದೊಳೈಕ್ಯವಾಗುವುದು ॥ ೧೬೦ ॥

ತೊರೆದು ಕರ್ಮಫಲಾಶೆ ಕರ್ಮಾ- ।
ಚರಣವನು ಮಾಡಿದರೆ ನರನಿಗೆ ।
ಹರಣವಪ್ಪುದು ಜನ್ಮಮರಣದ ಭೀತಿ ನೋಡಿದಿಯಾ ॥
ಮೆರೆವುದೀ ಜಗ ಮೂರುವಿಧದ- ।
ಲ್ಲಿರುವುದೀ ಜಗ ಕರ್ಮಫಲದಲಿ ।
ಹರಣವಾಗಲು ಕರ್ಮಫಲ ಜಗವೇನ ಮಾಡುವುದು ॥೧೫೬॥

ಸತ್ಯಮಿಥ್ಯದ ಮಿಶ್ರಣದಲು- ।
ತ್ಪತ್ತಿ ಪಡೆಯುವುದೊಂದು ತತ್ತ್ವವು ।
ಸತ್ಯಮಿಥ್ಯವನೆರಡ ಜಯಿಪುದು ಮಿಶ್ರಫಲವಿದಲಾ ॥
ಧಾತ್ರಿಯಲಿ ಶುಭವಶುಭಕರ್ಮವು ।
ಯುಕ್ತವಾಗಲು ಮಿಶ್ರಫಲವನು ।
ಬಿತ್ತುವುದು ಸಂಪ್ರಾಪ್ತವಹುದೈ ನರಶರೀರವಿದು ॥ ೧೬೧ ॥

ಮೂರುವಿಧದಲಿ ಕರ್ಮಫಲದ ನಿ- ।
ಚಾರವಾಯ್ತಿದು ಪಾರ್ಥ ನೋಡೈ ।
ಯಾರು ಕರ್ಮಫಲೇಚ್ಛೆ ತೊರೆಯದೆ ಕರ್ಮ ಮಾಡುವರೊ ॥
ನೇರುವರು ಮತ್ತವರು ಕೇಳ್ಸಂ- ।
ಸಾರಶರಧಿಯ ಸುಳುವಿನಲಿ ಮೇಣ್ ।
ಬಾರದಿರುವರೆ ಜನ್ಮಮರಣದ ಚಕ್ರದಲಿ ಬಳಲಿ ॥ ೧೬೨ ॥

ತಾಳಲಾರದ ಖಾರವತಿಶಯ ।
ನಾಲಿಗೆಯು ಸೇವಿಸಲು ರುಚಿಯಲಿ ।
ಕಾಲವಶದಿಂ ಮರಣ ಬಾರದೆ ನೋಡು ಫಲವಿದನು ॥
ಕೀಳು ಥಗ್ಗನ ಮೈತ್ರಿ ಚೆಲುವದು ।
ಬೀಳುವನಕವೆ ವನದಲವನೊಳು ।
ಬಾಳೆಯೆಯು ವೇಶ್ಯೆಯಲಿ ಚೆಲುವೈ ಸ್ಪರ್ಶ ಮಾಡದಲೆ
॥ ೧೬೩ ॥

ಪ್ರಾಣ ದೇಹದೊಳಿರುವನಕವಭಿ- ।
ಮಾನದಿಂದಲಿ ಕರ್ಮ ಮಾಡಲು ।
ಹಾನಿ ಹೊಂದಲು ದೇಹ ಕರ್ಮದ ಫಲವ ಭೋಗಿಪರು ॥
ಮಾನವನು ಸಾಲವನು ತಂದೆ ।
ಮೇಣು ಧನಿಕನು ಕೇಳಲಾಧನ- ।
ವೇನ ಹೇಳ್ವನು ಸಾಲ ಕೊಡದೆಯುಪಾಯವಿಹುದೇನು
। ೧೬೪ ॥

ಪರಿಯಲೀ ನಿಜಕರ್ಮಫಲವಿದು ।
ಒರುವುದೈ ಸಂಗಾತ ತಪ್ಪಿಸ- ।
ಲರಿಯಲಾರರು ಕರ್ಮಪಾಶದಿ ಸಿಲುಕುವರು ನೋಡೈ ॥
ಮರದ ಬೀಜವು ಬೀಳೆ ನೆಲದಲಿ ।
ಒರುವುದೈ ಮರ ಮರವದಾಗಲು ।
ಬರುವುದಲ್ಲಾ ಬೀಜವೀಪರಿ ಬೀಜಮರನ್ಯಾಯ ॥ ೧೬೫ ॥

ಫಲದ ವ್ಯಪಭೋಗದ ಶರೀರವು ।
ಫಲವು ತೀರಲು ಜನ್ಮ ಫಳಿವುದು ।
ನೆಲದಿ ಹೆಜ್ಜೆಯನಿಟ್ಟು ಹಾದಿಯ ತೀರಿಸುವ ತೆರದಿ ॥
ಹೊಳೆಯೊಳಗೆ ದೋಣಿಯಲಿ ಬಿಂಧದ ।
ಜಲದಿ ದಾಟುತ ಬೇರೆ ಧಡಕವ- ।
ನಿಳಿಯಲಾ ಧಡದಿಂದನೀಧಡ ಮರಳಿ ಯುಳಿಯುವುದು
॥ ೧೬೬ ॥

ಅಂತವಿಲ್ಲೀತೆರದಿ ಕರ್ಮ- ।
ಕ್ಕಂತವಿಲ್ಲೈ ಕರ್ಮಫಲಕೆ ನಿ- ।
ರಂತರದಲೀ ತೆರದಿ ಸಾಧನಸಾಧ್ಯಮಾಗದಲಿ ॥

ಸಂತತದಲೀ ಕರ್ಮವನ್ನೇ ।
ಸಂತಸದಿ ಫಲದಾಶೆ ತ್ಯಾಗದ ।
ಚಿಂತೆ ತಾಳದೆ ಮಾಡಲದು ಭವದೊಳಗೆ ತುರುಕುವುದು ॥೧೬೭॥

ಮಾಡೆ ಕರ್ಮಾರಂಭ ಕೂಡಲೆ ।
ತೋಡ ಬೇಕೈ ಫಲದ ಬೇರನು ।
ಬಾಡಿ ಹೋಗುವ ತೆರದಿ ಜಾಜಿಯು ಅರಳಿದಾಕ್ಷಣದಿ ॥
ಕೂಡಿಸಿಟ್ಟಿಹ ಬೀಜಧಾನ್ಯದ ।
ಮಾಡಲುಪಭೋಗವನು ದಿನದಿನ ।
ರೂಢಿಯಲಿ ಬಿತ್ತುವ ಪ್ರಕಾರವು ಬತ್ತಿ ಹೋಗುವುದು ॥ ೧೬೮ ॥

ಈ ತೆರದಿ ಫಲತ್ಯಾಗ ಮಾಡಲು ।
ಪಾರ್ಥ ಕೇಳೈ ಜನ್ಮಮರಣದ ।
ಯಾತನೆಯೆ ಸಾಯುವುದು ಕರ್ಮೋದ್ಭವವೆ ಸಂಸಾರ ॥
ಪೂತ ಸಾತ್ತ್ವಿಕ ಗುರುಕೃಪಾಮೃತ- ।
ದಾ ತುಷಾರದಿ ಸಿದ್ಧವಾಗಿಹ ।
ದೈವೃತರೂಪದ ದೈನ್ಯ ಹರಿವುದು ಸ್ವಾತ್ಮಬೋಧವದು ॥ ೧೬೯ ॥

ಮೂರುವಿಧದಿಂದೀ ಜಗವು ಸಾ- ।
ಕಾರತೆಯ ತಾಳುವುದು ಫಲದಿಂ ।
ಬೇರಕಡಿಯಲು ಜಗವೆ ನಾಶವ ಹೊಂದುವುದು ತಿಳಿಯೆ ॥
ಧಾರುಣಿಯಲೀ ಭೋಗ್ಯಭೋಕ್ತೃವಿ- ।
ಚಾರ ಲಯ ಹೊಂದುವುದು ತ್ಯಾಗದಿ ।
ಬೇರೆ ಮೇಣಿಹುದೇನು ಜಗದಸ್ತಿತ್ವ ಕೌಂತೇಯ ॥ ೧೭೦ ॥

ನರನೆ ನೋಡೈ ಜ್ಞಾನಸಂಯುತ- ।
ವಿರುವ ಸಂನ್ಯಾಸವನು ತಾಂ ಸ್ವೀ- ।
ಕರಿಸುವವನಿಗೆ ಕೊಡದು ದುಃಖವು ಫಲದ ಭೋಗವದು ॥
ನರನೆ ಯೀ ಸಂನ್ಯಾಸಯೋಗದಿ ।
ಬರಲು ದೃಷ್ಟಿಯು ಬಾಹ್ಯದಿಂದೊಳ- ।
ಗುರುತರದ ನಿಜಕರ್ಮ ಬೇರಿಹುದೆಂದು ತೋರುವುದೆ ॥ ೧೭೧ ॥

ಬಿದ್ದು ಹೋಗಲು ಗೋಡೆಯದರೊಳ- ।
ಗಿದ್ದ ಚಿತ್ರಗಳುಳಿವುವೇ ಮೇ- ।
ಗೆದ್ದು ರವಿಯ ಪ್ರಕಾಶವಾಗಲು ರಾತ್ರಿಯುಳಿಯುವುದೆ ॥
ಶುದ್ಧದರ್ಪಣವಿಲ್ಲದಿರೆ ತಾ- ।
ನೆದ್ದು ಮುಖವನು ನೋಳ್ಪದೆಂತೈ ।
ನಿದ್ದೆ ಹೋಗಲು ಸ್ವಪ್ನ ಬೀಳುವುದೆಂತು ಕೌಂತೇಯ ॥ ೧೭೨ ॥

ನಾಶವಾಗಲು ಸ್ವಪ್ನ ಮಿಥ್ಯಾ ।
ಭಾಸವಾಗುವುದೇನು ಕರ್ಮಫ- ।
ಲಾಶೆಯನು ಬಿಡುತಿರಲು ನಿಜಸಂನ್ಯಾಸ ಬರುವುದಲಾ ॥
ನಾಶವಹುದೈ ಯಾ ಅವಿದ್ಯೆಯು ।
ತ್ರಾಸ ಮೇಣದರಿಂದ ಬರುವುದೆ ।
ಕೆ ೀಶಕೊಡುವವರಾರು ಕೊಳ್ಳುವರಾರು ಕಲಿವಾರ್ಥ
॥ ೧೭೩ ॥

ನರಶರೀರದಿ ಮೇಣಜಾಣಿಕೆ- ।
ಯಿರಲು ಕರ್ತೃತ್ವಾಭಿಮಾನದಿ ।
ಮೆರೆಯುವುದು ಕರ್ಮವದು ತಿಳಿದು ಶುಭಾಶುಭಂಗಳನು ॥
ಮೆರೆಯುನ್ನದು ನಿಜ ಭೇದರೂಪವು ।
ಅರಸೆ ಕೇಳಾತ್ಮಕ್ಕೆ ಕರ್ಮಕೆ ।
ಬರುವುದಂತರ ಪೂರ್ವಪಶ್ಚಿಮಕಿರುವ ಮಾನದಲಿ ॥೧೭೪॥

ಇರುವುದಂತರ ಗಗನ ಮೋಡದಿ ।
ತರಣಿ ಮೃಗಜಲ ಪೃಥ್ವಿವಾಯುವಿ- ।
ಗಿರುವುದಂತರ ತೋರುವುದು ಸಂಬಂಧ ಮಾಯೆಯುಲಿ ॥
ಧರಿಸಿ ಹೊದಿಕೆಯು ನದಿಯುದಕವನು ।
ಮೆರೆವುದಲ್ಲೈ ಬಂಡೆಗಲ್ಲದು- ।
ವಿರುವುದಲ್ಲಾ ಭೇದವೆರಡರಲಜಗಜಾಂತರದ ॥ ೧೭೫ ॥

ನೀರಿನಲಿ ಸೇವಾಳ ಹುಟ್ಟಲು ।
ಸೇರುವುದೆ ತಜ್ಜಲದ ಯೋಗ್ಯತೆ ।
ಚಾರುಕಾಡಿಗೆ ದೀಪದಿಂದುದ್ಭವಿಸಿದರು ವಾರ್ಥ ।।

ದಾರು ಕೊಡುವರು ದೀಪದುಪಮೆಯು ।
ಧಾರುಣಿಯಲಾ ಕಜ್ಜಳಕೆ ಮೇ- ।
ಗೇರುವುದೆ ಪ್ರಭೆ ದೀಪದಂದದಿ ಯತ್ನ ಮಾಡಿದರು ॥ ೧೭೬ ॥

ಇರುವ್ರದಾ ಶಶಿಯಲಿ ಕಳಂಕವು ।
ಯಿರುದಲ್ಲೈ ಭೇದನವುಗಳ- ।
ಲಿರುವುದಾಪರಿ ಭೇದ ಕೇಳೈ ನೇತ್ರದೃಷ್ಟಿಯಲಿ ॥
ಪರಿಪರಿಯ ಹಾದಿಗಳು ನಡೆಯುವ ।
ಪರಿಪರಿಯ ವಾಂಥಸ್ಥ ಕೂಟದ- ।
ಲಿರುವ್ರನ್ಯೆ ನಾನಾತರದ ಭೇದಗಳು ಮನವರಿಯೆ ॥ ೧೭೭ ॥

ನೀರಿನಲಿ ತದ್ಗತಪದಾರ್ಥದೊ- ।
ಳಾರಸೆಯು ಅರಸೆಯು ನೋಳ್ಪ ಶ- ।
ರೀರವಿನ್ರಗಳೊಳಾವ ಪರಿಯಲಿ ಭೇದತೋರುವುದೊ ॥
ಧಾರುಣಿಯಲೀತೆರದಿ ಭೇದವು ।
ತೋರುವುದು ಕರ್ಮದಲಿಯಾತ್ಮದಿ ।
ತೋರದೈ ತದ್ಭೇದವಜ್ಞಾನದಲಿ ಕಾಂತೇಯ ॥ ೧೭೮ ॥

ಕೆರೆಯಲಿರುತಿಹ ಕಮಲವುಷ್ಪಗ- ।
ಳರಳೆ ಸೂರ್ಯೋದಯವ ಪ್ರಕಟಿಸು- ।
ತಿರುವುನೈ ಮಕರಂದ ಕೊಡುವುವು ಭ್ರಮರವೃಂದಕ್ಕೆ ॥
ಪರಿಯೊಳಾತ್ಮನೊಳಿರುವ ಕರ್ಮವು ।
ಪರಿಪರಿಯು ಕಾರಣದಿ ದೃಗ್ಗೋ- ।
ಚರಿಸುವುದು ಲಕ್ಷಣಗಳ್ಳೆದಿಹುವವನು ಪೇಳುವೆನು ॥ ೧೭೯ ॥

ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧ ಮೇ ।
ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವಕರ್ಮಣಾಮ್ ॥ ೧೩ ॥

ಐದಿಹುವು ಕಾರಣಗಳವು ನಿಜ ।
ವೇದ್ಯವಿರಬಹುದದು ನಿನಗೆ ಕೇಳ್ ।
ಬೋಧಿಪುವು ಶಾಸ್ತ್ರಂಗಳೆಲ್ಲವು ಮೇಲೆ ಕೈಯೆತ್ತಿ ।
ವೇದರಾಜನ ರಾಜಧಾನಿಯೊ- ।
ಳಾದುದೈ ವೇದಾಂತಸಾಂಖ್ಯವು ।
ಮೋದದಾ ಮಂದಿರ ನಿರೂಪಣರೂಪ ಭೇರಿಯಲಾ ॥೧೮೦॥

ಪರಿಪರಿಯ ಕರ್ಮಗಳ ಸಿದ್ಧಿಗೆ ।
ಧರಣಿಯೊಳಗಿವವಶ್ಯ ಮುಖ್ಯವು ।
ನರನೆ ಮಾನಿಸ ಬೇಡವಾತ್ಮವ ಕಾರಣವಿದೆಂದು ॥

ಅರವಿರಲಿ ಕಲಿವಾರ್ಥ ನಿನಗೀ- ।
ಪರಿ ಪ್ರಸಿದ್ಧಿಯು ಸಿದ್ಧತತ್ತ್ವವು ।
ಧರಣಿಯಲಿ ನಾಲ್ಕಿಶೆಗಳೆಲ್ಲವು ಘೋಷಿಸುತ್ತಿಹುವು ॥ ೧೮೧ ॥

ಜ್ಞಾನರೂಪದ ರತ್ನ ಕೈವಶ ।
ನಾನು ನಿನ್ನೊಡನಿರುವೆನದರಿಂ- ।
ದೇನು ನಿನಗಡಚಣಿಯೆ ನಿನಗಾಂ ಪೇಳ್ವೆ ಮೋದದಲಿ ॥
ತಾನೆ ಕನ್ನಡಿ ಮುಂದಿರಲು ಮುಖ- ।
ದೂನಯವ ಪರರಿಂಗೆ ಕೇಳುವ- ।
ದೇನು ಕಾರಣ ತೋರ್ಪುದೈ ಮುಖ ದರ್ಪಣದಿ ನರನೆ ॥೧೮೨॥

ಯಾವ ಸ್ಥಿತಿಯಲಿ ಭಕ್ತರೆನ್ನನು ।
ಭಾವಿಪರೊ ಮತ್ತಾವ ವಸ್ತುವ ।
ಸೇವಿಸಲು ಬಯಸುವರೊ ಪೂರಯಿಸುವೆನವರ ಬಯಕೆ ॥
ಈ ವಿಧದ ನಿಜಭಕ್ತವೃಂದವ ।
ಕಾವ ಬಿರುದಿನ ದೇವದೇವನು ।
ಕೈವಶನು ನಾನಿಹೆನು ನಿನ್ನಯ ಕೈಯ ಬೊಗರಿಯಲಾ
॥ ೧೮೩ ॥

ಹರಿಯು ಪ್ರೇಮಾನಂದಭರದಿಂ ।
ದರುಹಿದನು ಕಲಿಪಾರ್ಥನಿಗೆ ಮೈ- ।
ಮರೆತನಲ್ಲಾ ಭಕ್ತಜನಸುರಧೇನು ಶ್ರೀಕೃಷ್ಣ ॥
ನರನು ಹರ್ಷದಿ ತೇಲುತಿದ್ದನು ।
ಗಿರಿಯ ರೂಪದಲಿದ್ದರಾ ಹಿಮ- ।
ಕರನ ನೋಡಲು ಕರಗಿ ನೀರಾಗುವುದು ಶಶಿಕಾಂತ
॥ ೧೮೪ ॥

ಹರುಷ ಹರ್ಷಸ್ವಾನುಭವಮೀ- ।
ತೆರದ ದ್ವೈತವೆ ಹಾರಿ ಹೋಗಲು ।
ಹರುಷದ ಸುಮೂರ್ತಸ್ವರೂಪನೆ ಪಾರ್ಥನಾದನಲಾ ॥
ಹರಿ ಸಮರ್ಥನು ನೋಡಲಾಕ್ಷಣ ।
ಹರುಷವಾರಿಧಿಯಲ್ಲಿ ಮುಳುಗುವ ।
ನರನ ಕೈ ಹಿಡಿದೆಬ್ಬಿಸುತ ತಾರಿಸಿದನೈ ಮುದದಿ ॥ ೧೮೫ ॥

ನರನ ಪರಿಯಿಪ ಧೀರನಾದರು ।
ಕರಗಿ ಬುದ್ಧಿಯು ಮುಳುಗುತಿದ್ದನು ।
ಭರತಿ ಯಿಪರಿ ಬಂದುದೈ ಪ್ರೇಮಕ್ಕೆ ಪಾರ್ಥನಲಿ ॥
ಹರಿಯು ತತ್ಪ್ರೇಮಪ್ರವಾಹವ ।
ಸರಿಸುತಾಕ್ಷಣ ಬದಿಗೆ ಪೇಳ್ದನು ।
ನರನೆ ಸ್ವಾತ್ಮಜ್ಞಾನದಿಂ ನೀ ಬಾರೊ ಶುದ್ಧಿಯಲಿ ॥ ೧೮೬ ॥

ನಿಟ್ಟುಸುರ ಬಿಡುತಾಗ ಪಾರ್ಥನು ।
ಥಟ್ಟನೆಂದನು ತಲೆಯ ತೂಗುತ ।
ಶ್ರೇಷ್ಠ ಪ್ರಭು ತ್ವತ್ಸನ್ನಿಧಾನಕೆ ತ್ರಾಸಿಸಿದೆ ನಾನು ॥
ಬಿಟ್ಟು ದ್ವೈತವ ನಿನ್ನೊಳೈಕ್ಯವ ।
ಪಟ್ಟೆನೆನಗಿನ್ನೇಕೆ ದ್ವೈತದೊ- ।
ಳಿಟ್ಟು ಕೌತುಕ ಮಾಳ್ಪೆ ನಾಕಿದು ದ್ವಂದ್ವವೆನ್ನೊಡನೆ
॥ ೧೮೭ ॥

ಹರಿಯು ನಸುನಗುತಾಗ ಪೇಳ್ದನು ।
ನರನೆ ನಿನಗರವಿಲ್ಲಲಾ ಹಿಮ- ।
ಕರನು ಬೆಳಕನು ತೊಳಗಿ ಜೀವಿಪ ಪರಿಯದಾಗದಲಾ ॥
ನರನೆ ನಿನಗೀ ಪರಿಯಲಾಡುತ ।
ತರಿಸಿದರೆ ಕೋಪವನು ಯೆನಗದು ।
ಹರುಷವಾಗುವುದೆನಗೆ ಪ್ರೀತಿಯು ದ್ವಿಗುಣವಾಗುವುದು ॥೧೮೮॥

ಪ್ರೀತಿಯಿರ್ಪುದು ಕೇಳ್ವರಸ್ಸರ ।
ಮಾತಿನಿಂದದು ವರ್ಧಿಸುವುದೈ ।
ಮಾತಿನಿಂದಲೆ ಜೀವಿತದ ಸ್ವಾರಸ್ಯ ಬರುತಿಹುದು ॥
ಏತಕಿನ್ನೀ ಪರಿಯ ವಾದವು ।
ಪಾರ್ಥ ನಿನಗಾನೇನ ಪೇಳಿದೆ- ।
ನಾತುಮನು ಬೇರಿಹನು ಕರ್ಮವು ಬೇರೆಯಾಗಿಹುದು ॥ ೧೮೯ ॥

ನರನು ಪೇಳಿದನಾಗ ಪಾರ್ಥಗೆ ।
ಹರಿಯೆ ನೀನಾರಂಭಿಸಿದೆ ಯೆ- ।
ನ್ನುರುತರದ ಮನದಿಂಗಿತವ ಪೇಳುವರೆ ಮೋದದಲಿ ॥
ಅರಿಯಲಾ ಕರ್ಮಕ್ಕೆ ಸರ್ವ- ।
ಕ್ಕಿರುವುವೈ ಕಾರಣಗಳೈದೆಂ- ।
ದರುಹುವೆನು ತಾನೆಂದು ವಿಷಯವ ಮರೆತು ಬಿಟ್ಟಿಯಲಾ
॥ ೧೯೦ ॥

ಮರೆತು ವಿಷಯವ ಮುಂದೆ ನೀನೆನ- ।
ಗರುಹುವರೆ ವ್ಯಾರಂಭ ಮಾಡಿದಿ ।
ಧರೆಯಲಾತ್ಮನಿಗಿಲ್ಲವೆಂದಿಗು ಕರ್ಮಸಂಬಂಧ ।।
ಹರಿಯೆ ವಿಷಯವಿದೆನ್ನ ಪ್ರೇಯವು ।
ತೊರೆಯಲಾರೆನು ಪ್ರೇಮವಿಷಯವ- ।
ನರುಹು ಮುಂದಕೆ ಕೇಳುವರೆ ಮನವೇಳುತಿದೆ ಮುದದಿ ॥೧೯೧॥

ನರನ ವಚನವ ಕೇಳಿ ಶ್ರೀಹರಿ ।
ಹರುಷಪುಳಕಿತನಾಗಿ ಪೇಳ್ದನು ।
ಧರಣಿ ಹಿಡಿದೈ ಕೂತು ವಿಷಯಾತುರದಿ ಮನಗೊಟ್ಟು ॥
ಅರಿಯೆ ನಿನ್ನಂತೀಪರಿಯ ತತ್- ।
ಪರತೆಯಲಿ ಕೇಳುವರು ಭಕ್ತರು ।
ದೊರೆಯುವರೆ ಯೆನಗಿನ್ನು ಪಾರ್ಥನೆ ನಿನ್ನ ತೆರವಿರುವ ॥ ೧೯೨ ॥

ನರನೆ ನಿಜಸಿದ್ಧಾಂತ ಪೇಳುವೆ- ।
ನಿರುವೆ ನಿನಗಾಂ ಋಣಿಕನದರಿಂ ।
ದಿರುವೆ ನಿನ್ನೊಳು ತಲೆಯ ಬಗ್ಗಿಸಿ ದೀನತನದಿಂದ ॥
ನರನು ಪೇಳಿದನೆನ್ನ ವಚನವ ।
ಮರೆತಿಯೋ ನೀ ತಿರಿತಿರಿಗಿಯಾ- ।
ಬರಡುದ್ವೈತವ ತಾಳ್ದುದೇತಕೆ ಹೇಳು ನಿಜವಾಗಿ ॥ ೧೯೩ ॥

ಹರಿಯು ಪ್ರತ್ಯುತ್ತರವನಿತ್ತನು ।
ನರನೆ ನಿನಗಾಂ ಪೇಳ್ವೆನೀಕ್ಷಣ ।
ಮರೆಯಲಿಲ್ಲೈ ವಿಷಯವಾದವಿವಾದಸರಣಿಯನು ॥
ಇರುವುವಾ ಕಾರಣಗಳೈದಾ ।
ಪರಿಪರಿಯ ಕರ್ಮಕ್ಕೆ ಯಿದುವೇ ।
ಯಿರುವುವೀ ಕಾರಣಗಳಾ ಕರ್ಮಕ್ಕೆ ಹೇತುಗಳು ॥೧೯೪॥

ಇರುವನಾತ್ಮನು ತಾನುದಾಸಿಯು ।
ಯಿರನು ಕರ್ಮಕೆ ಹೇತು ಕಾರಣ ।
ಮರಳಿ ಕರ್ಮಕೆ ಸಾಹ್ಯ ಮಾಡನು ಕೇಳು ತಾನಾಗಿ ॥
ಇರವು ಕರ್ಮಕೆ ಶುಭತೆಯಶುಭತೆ ।
ಬರಲು ಹೋಗಲು ದಿವಸರಾತ್ರಿಗ ।
ಳಿರುವುದಲ್ಲಾ ಗಗನವೊಂದೇ ಬೇರೆಬೇರಿಹುವೆ ॥ ೧೯೫ ॥

ನೀರುತೇಜವು ಕೂಡಿಯುಗಿಯಾ- ।
ಗೇರುವುದು ವಾಯುವಿನಿಲಿ ಮೋಡವು ।
ಹಾರುವುದು ಸಂಬಂಧ ಬಂತ್ಕೆ ಗಗನಮಂಡಲದ ॥
ಯಾರು ಪೇಳ್ವರು ಮೋಡ ಗಗನದಿ ।
ಸೇರುವುದು ಮೇಗೈಕ್ಯವೆನುತಲಿ ।
ಚಾರು ಕರ್ಮಾತುಮನದೀ ಸಂಬಂಧ ನೋಡಿದರೆ ॥ ೧೯೬ ॥

ಪರಿಪರಿಯ ಕಾಷ ಗಳ ಕೂಡಿಸಿ ।
ನರನು ನಾವೆಯ ನಿರ್ಮಿಸುತಲಿತಿ- ।
ಭರದಿ ಗಾಳಿಯ ಬಲದಿ ನಡೆಸುವನವನು ನಾವೆಯನು ।

ನರನೆ ನೋಡಾ ನೀರುನಾವೆಯ ।
ಬರುವುದೇ ಸಂಬಂಧವೈಕ್ಯವು ।
ಮೆರೆವುದಲ್ಲಾ ಸಾಕ್ಷಿಮಾತ್ರವೆ ನಾವೆಗಾ ನೀರು ॥ ೧೯೭ ॥

ಮಣ್ಣ ಹೆಂಟೆಯನಾಕುಲಾಲನು ।
ಮುನ್ನಿರಿಸಿ ಚಕ್ರದಲಿ ತಿರುಗಿಸೆ ।
ಭಿನ್ನಭಿನ್ನಾಕೃತಿಯ ಪಾತ್ರಗಳಾಗುವುವು ನಿಜವು ॥
ಇನ್ನು ವಗಾಡು ವಿಚಾರ ಪೃಥ್ವಿಯು ।
ತನ್ನ ಕುಶಲತೆ ಯೇನ ತೋರ್ಪುದು ।
ವರ್ಣಿಸಲು ಮೇಣಾ ಕುಲಾಲನ ಕುಶಲತೆಯೆ ನಿಜವು ॥ ೧೯೮ ॥

ಬರುವುದೆಲ್ಲ ಪ್ರಕಾಶ ಜಗಕಾ- ।
ತರಣಿಮಂಡಲದಿಂದ ನೋಡಲು ।
ಕಿರಣಜ್ಯೋತಿಯೆ ಜಗದ ವ್ಯಾಪಾರಕ್ಕೆ ಕಾರಣವು ।
ಇರುವನಾಗಗನದಲಿ ಸೂರ್ಯನು ।
ಧರೆಯ ಕರ್ಮಕಲಿಪ್ತನಾಪರಿ ।
ಯಿರುವನಾತ್ಮನಲಿಪ್ತ ಕರ್ಮಕೆ ಕೇಳು ಕಲಿಪಾರ್ಥ ॥ ೧೯೯ ॥

ಕಾರಣಗಳೈದಿಹುವು ಕರ್ಮಕೆ ।
ಬೇರಿರುವನಾತುಮನು ಪಂಚಕ- ।
ಕಾರಣಗಳಾಗಿಹುದು ಕರ್ಮಲತಾವನಕೆ ಮೂಲ ॥
ಕಾರಣಗಳೀ ಪಂಚಕದ ಸುವಿ- ।
ಚಾರವೂರ್ವಕ ಪೇಳ್ವೆ ಮುತ್ತಿನ ।
ಭಾರ ತೂಗಿಸಿ ಬೆಲೆಯ ಮಾಡುವುದುಚಿತ ಕೌಂತೇಯ ॥ ೨೦೦ ॥

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।
ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥ ೧೪ ॥

ಕೇಳು ಪಾರ್ಥನೆ ಕರ್ಮಲಕ್ಷಣ ।
ಪೇಳುವೆನು ನಾ ನಿನಗೆ ಸರ್ವವ ।
ಮೂಲಕಾರಣಗಳನು ಯೆನ್ನಯ ಮನದೊಳಿದ್ದುವನು ।
ಮೂಲಕಾರಣವಿಹುದು ದೇಹವು ।
ಕೇಳಿದಕಧಿಷ್ಠಾನವೆನಿಸುವರು ।
ಪೇಳುವೆನು ದೇಹಕ್ಕೆ ಹೆಸರಿದು ಬಂದುದೇಕೆಂದು ॥ ೨೦೧ ॥

ಇರುವನೀದೇಹದಲಿ ಭೋಕ್ತನು ।
ಬರುವುವಿದರಲಿ ಭೋಗ್ಯವಿಷಯಗ- ।
ಳಿರಿಯಲಾ ಕಾರಣಗಳಿವು ಕರ್ಮಕ್ಕೆ ಭೂತಳದಿ ।

ಮೆರೆವ ಹತ್ತಿಂದ್ರಿಯಗಳಿಂದಲೆ ।
ಪರಿಪರಿಯ ಕಷ್ಟಗಳ ಸಹಿಸುತ ।
ನಿರುತ ಸುಖದುಃಖಗಳ ಭೋಗಿಪನಿರುಳುಹಗಲೆಲ್ಲ ॥ ೨೦೨ ॥

ಈ ತೆರದ ಸುಖದುಃಖ ಭೋಗಿಪ ।
ಪಾರ್ಥ ಠಾವಿಲ್ಲನ್ಯವೆನುತಲಿ ।
ಮತು ಬಂತು ಶರೀರಕಿದರಿಂದಲಿ ಯಧಿಷ್ಠಾನ ॥
ಈ ತೆರದ ದೇಹದಲಿ ತತ್ತ್ವ ।
ಖ್ಯಾತನಿಹುವಿಪ್ಪತ್ತು ನಾಲುಕು ।
ಭೂತಳದೊಳಿಹುದಿದಕೆ ಬಂಧನಮೋಕ್ಷಸಾಧನತೆ : ೨೦೩ ॥

ಸ್ಥಾನವಿಹುದೀದೇಹ ಜಾಗರ ।
ಮೇಣು ಸ್ವಪ್ನಸುಷುಪ್ತಿ ಯಿವಕ್ಕೆ ।
ಮಾನಿಸುವರಿದಕಿಹುದು ಹೆಸರದು ಯೋಗ್ಯವೇ ಯೆನುತ ॥
ನಾನು ಹೇಳುವೆ ಕರ್ತನೆರಡನೆ ।
ಮಾನಿಸುವೆ ಕರ್ಮಕ್ಕೆ ಕಾರಣ ।
ಮಾನವರು ಕರೆಯುವರು ಜೀವವೆನುತ್ತ ಕರ್ತನಿಗೆ ॥೨೦೪॥

ಕರ್ತನೈ ಚೈತನ್ಯರೂಪನು ।
ಧಾತ್ರಿಯಲ್ಲೀ ತತ್ತ್ವ ತಿಳಿಯೈ ।
ಪೃಥ್ವಿಯಲಿ ಮಳೆಗರೆಯೆ ಕೂಡುವುದೆಲ್ಲ ಜಲ ನೆಲದಿ ॥
ಮತ್ತೆಗಗನದ ಜಿಂಬ ನೀರಲಿ ।
ಬಿತ್ತು ಯೆನಲಾ ನೀರಿನಾಕೃತಿ ।
ಹತ್ತುವುದು ಗಗನಕ್ಕೆ ಗಗನವಲಿಪ್ತವೇ ಯಿಹುದು ॥೨೦೫।

ಅರಸನಾ ನಿದ್ರೆಯಲಿ ಸ್ವಪ್ನದ-।
ಲರಸುತನವನು ಮರೆತು ಸ್ವಪ್ನದೊ-।
ಳಿರುತ ಭಿಕ್ಷುಕನೆನುತ ತಿಳಿವನು ತತ್ತ್ವ ತಿಳಿಯದಲೆ ॥
ಪರಿಯೊಳೀ ಚೈತನ್ಯರೂಪವ।
ಮರೆತು ತಾನೇ ದೇಹವೆನುತಲಿ ।
ಮೆರೆವುದಲ್ಲಾ ಪಾರ್ಥ ನೋಡೈ ತತ್ತ್ವ ತಿಳಿಸಿದೆನು ॥ ೨೦೬ ॥

ಜಿಡೆನು ನಿನ್ನಭಿಮಾನವೆನುತಲಿ ।
ನುಡಿದನಭಿವಚನವನು ದೇಹಕೆ ।
ನುಡಿದ ವಾಗ್ದಾನಪ್ರಕಾರದಿ ನಡೆವನೀ ಜೀವ ॥
ಎಡೆಬಿಡದಲೆ ಶರೀರ ಮಾಡುವ ।
ಸಡಗರದ ಕರ್ಮಗಳಿಗೆಲ್ಲಕೆ ।
ಪಡೆವನೈ ಕರ್ತೃತ್ವ ಜೀವನು ತೊರೆಯದಭಿವಚನ ॥೨೦೭॥

ದೃಷ್ಟಿಯೊಂದೇ ಯಿರವುದಾದರು ।
ಬಟ್ಟ ಕಣ್ಣಿವೆಕೂದಲಿನಲಾ ।
ದೃಷ್ಟಿ ಗೋಚರಿಸುವುದು ಚವರಿಯ ಕೇಶದಂದದಲಿ ॥
ಅಟ್ಟಹಾಸದಲಾಟವಿಕ ತ-।
ನ್ನಿಷ್ಟರಸದಿಂ ಕುಣಿಯ ಹತ್ತಲು ।
ದೃಷ್ಟಿಗೋಚರವೆನಿಸುವುದು ಪರಿಪರಿಯ ನವರಸವು
॥ ೨೦೮ ॥

ಮನೆಯಲಿರುತಿಹ ದೀಪವೊಂದದು ।
ಮಿನುಗುವುದು ನಾನಾ ಸ್ವರೂಪದಿ ।
ಮನುಜನದನು ಗವಾಕ್ಷದಿಂದಲಿ ನೋಡಿದರೆ ಪಾರ್ಥ ।

ಜನುಮವೆತ್ತಿದ ಜೀವನಿಂಗೀ-।
ವಿನಿಯಮಿತ ಸುಜ್ಞಾನವೊಂದೇ ।
ಯನುಕರಣ ಮಾಡುವುವು ಯಿಂದ್ರಿಯಹತ್ತು ತಮ್ಮಂತೆ ॥೨೦೯॥

ಇರುವುದೊಂದೇ ಜ್ಞಾನ ಬುದ್ಧಿಗೆ ।
ಪರಿಪರಿಯಲಿಂದ್ರಿಯಪ್ರಭಾವದಿ ।
ಧರಿಸುವುದು ಪರಿಪರಿಯ ರೂಪಂಗಳನು ಕೌಂತೇಯ ॥
ಇರುವುವದರಿಂದಿಂದ್ರಿಯಂಗಳು ।
ಮೆರೆವ ಮೂರನೆ ಕರ್ಮಕಾರಣ-।
ವರಿಯಲಾ ಕಲಿಪಾರ್ಥ ಪೇಳುವೆನದರಲಕ್ಷಣವ ॥ ೨೧೦ ॥

ಹರಿಹರಿದು ಪಶ್ಚಿಮದಿ ಪೂರ್ವದಿ ।
ಒರುವುವೈ ಸಾಗರಗೆ ನದಿಗಳು ।
ಬರಲು ಶರಧಿಯೊಳೈಕ್ಯ ಹೊಂದುವವಲ್ಲವೇ ಪಾರ್ಥ ॥
ಇರುವುದೈ ಕರ್ತೃತ್ವಶಕ್ತಿಯು ।
ಭರಿತವಿಹುದೈ ಪ್ರಾಣದಲ್ಲಿಯೆ ।
ಮೆರೆವುದೈ ರಾಜಸಗುಣದಲಿದು ನರಶರೀರದಲಿ ॥ ೨೧೧ ॥

ಪರಿಪರಿಯ ಯಿಂದ್ರಿಯದ ದ್ವಾರದಿ ।
ಹೊರಗೆ ಬರಲದು ಪರಿಪರಿಯ ಗುಣ-।
ವಿರುತ್ರದೈ ಹೆಸರದಕೆ ಬರುವುದು ಬೇರೆಬೇರಾಗಿ ॥
ಹೊರಗೆ ಒರಲದು ಚಿಪ್ಪೆಯಿಂದಲಿ ।
ಕರೆವರದನೈ ವಚನವೆನುತಲಿ ।
ಕರದೊಳದು ಹೊರಬರಲು ಕರೆವರು ಗ್ರಹಣ ಮೇಣ್ ದಾನ
॥ ೨೧೨ ॥

ಹೊರಗೆ ಬರಲದು ಕಾಲಿನಿಂದಲಿ ।
ಕರೆವರೈ ಗತಿಯೆನುತ ಮುಂದದು ।
ಬರಲು ಕೇಳ್ಮಲಮೂತ್ರದ್ವಾರದಿ ಯದು ವಿಸರ್ಜನವು ॥
ಇರುವುದದು ವೋಂಕಾರೂಪದಿ ।
ನರನ ಪ್ರಾಣವಿದೆಂಬ ನಾಮದಿ ।
ಮೆರೆವುದೊಳಗದು ನಾಭಿಹಿಡಿದಾಹೃದಯಪರ್ಯಂತ ॥ ೨೧೩ ॥

ಮೇಲೆ ಶ್ವಾಸೋಚ್ಛ್ವಾಸರೂಪದಿ ।
ಬೀಳಲದುವೆಯುದಾನವಾಯುವು ।
ಬೀಳಲದು ಗುದದ್ವಾರದಿಂದಲಪಾನವೆನಿಸುವುದು ।।
ಆಲಿಸೈ ಕಲಿಪಾರ್ಥ ಅದುವೆ ವಿ-।
ಶಾಲದೇಹದಲೆಲ್ಲ ವ್ಯಾಪಿಸೆ ।
ಪೇಳುವರು ದೇಹಸ್ಥ ವ್ಯಾನವೆನುತ್ತ ಕೋವಿದರು ॥ ೨೧೪ ॥

ನರನು ತಿನುತಿರುವನ್ನವೆಲ್ಲವ । ಅರಳ ಬೇಕಥವಾ ಸುಲಕ್ಷಣ ।
ಕರಗಿಸುತ ರಸಮಾಡಿ ದೇಹದಿ । ಕೆರೆಯ ಮಧ್ಯದಿ ಕಮಲಹೂವದು ।
ನಿರುತ ಪಸರಿಸಿ ಕರೆವರದನು ಸಮಾನನಾಮದಲಿ ॥ ಭರಿತವಿರಬೇಕೈ ಪರಾಗವು ಕಮಲದಲಿ ಬಳಿಕ ॥
ಪರಿಪರಿಯ ಸೀನಾಕಳಿಕೆ ಡೇ- । ಇರಲು ಬೇಕಥವಾ ಕವಿತ್ವವು ।
ಕರಗಳಿಲ್ಲವು ನಾಗಕೂರ್ಮದ । ನರನ ವಾಚೆಯೊಳದರೊಳಗೆ ಬಹು ।
ಪರಿಗಳೆಲ್ಲಾ ಪ್ರಾಣಿಯುಪಪ್ರಾಣಗಳು ಕೌಂತೇಯ ॥೨೧೫॥ ಸರಸತನವಿರ ಬೇಕು ಸ್ವಾತ್ಮಜ್ಞಾನವಿರಬೇಕು ॥ ೨೧೮ ॥

ನರನೆ ಕೇಳೀ ಸರ್ವಪರಿಗಳು । ಯುಕ್ತವಿರಬೇಕೈ ಸುಬುದ್ಧಿಯು ।
ಮೆರೆವುವಲ್ಲಾ ವಾಯುವಿನ ಬಹು । ವೃತ್ತಿವೈಭವದಿಂದ ಬಳಿಕದು ।
ಸರಸದಾಟವು ಬೇರೆಬೇರೀ ಹೆಸರ ಧರಿಸುತಲಿ ॥ ಯುಕ್ತವಿರ ಬೇಕಿಂದ್ರಿಯಂಗಳ ಸಾನುಕೂಲತೆಯು ॥
ಇರುವುದೀಪರಿ ಕ್ಷೇತ್ರಮಾನದಿ । ಮತ್ತೆ ಸಕಲೇಂದ್ರಿಯಕೆ ಭೂಷಣ ।
ಪರಿಪರಿಯ ಲಕ್ಷಣಗಳೆಲ್ಲವು । ವಿತ್ತು ನಡೆಸುನ ದೇವತೆಗಳು ಸ- ।
ಮೆರೆವುವ್ಯೆ ನಾಲ್ಕನೆಯ ಕಾರಣ ಕರ್ಮಕತಿಗಹನ ॥೨೧೬॥ ಮಸ್ತ ಮಾಡಲು ಬೇಕನುಗ್ರಹ ಕೇಳು ಕಲಿವಾರ್ಥ ॥ ೨೧೯ ॥

ನರನೆ ಬರ ಬೇಕಾ ಶರದೃತು । ಇರುವುವೀ ದೇವತೆಗಳೆಲ್ಲವು ।
ತಿರಿಗಿ ಚಂದ್ರೋದಯವು ಬೇಕೈ । ಮೆರೆವುವೈದನೆ ಕರ್ಮಕಾರಣ- ।
ಮರಳೆ ಪೂರ್ಣಿಮೆ ದಿನದ ಚಂದ್ರಮ ಬೇಕು ಸಂಪೂರ್ಣ ॥ ವರಿಯಿಲಾ ಕಲಿವಾರ್ಥ ಹೇಳಿದೆ ವಿಸ್ತರಿಸಿ ನಿನಗೆ ॥
ಬರಲು ಬೇಕಥವಾ ವಸಂತವು । ಅರುಹುವೆನು ನಾ ನಿನಗೆ ವಾರ್ಥನೆ ।
ತರುಣಿಸಹಿತಲೆ ವನವಿಹಾರದ । ಪರಮಕರ್ಮದ ಹೇತುವೆಲ್ಲವ- ।
ಸರಸಹರ್ಷವು ಬೇಕು ಮೇಣುಪಚಾರಗಳು ಬೇಕು ॥೨೧೭॥ ನಿರುವುವವು ಹೇತುಗಳು ಪಂಚಗಳೆಂದನಾ ಹರಿಯು ॥ ೨೨೦ ॥

ಶರೀರವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ ।
ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ಫಲಹೇತವಃ ॥ ೧೫ ॥

ನರನೆ ನೋಡಿದಿಯೋ ಚಮತ್ಕೃತಿ । ವಾಣಿಯೆಂಬುವ ದೀಪಜ್ಯೋತಿಯು ।
ಬರಲು ಮಾಧವಋತುವು ಪಲ್ಲವ । ಹಾನಿಮಾಳ್ಪುದು ತಿಮಿರಕರ್ಮವ ।
ಬರುವುದೈ ಮರಕೆಲ್ಲ ನಂತರ ಹೂವು ಗೊಂಚಲಲಿ ॥ ಬಾಣತನ ಪುಟ್ಟುವುದು ಹಾದಿಯು ಸುಗಮವಾಗುವುದು ॥
ಬರುವುದಾ ಹೂವಿಂದ ಫಲವದು । ತಾನೆ ಪುಟ್ಟುವುದಾಗ ನಿಜವಧಿ- ।
ಬರುವುದೈ ತರುವಾಯ ಗ್ರೀಷ್ಮವು । ಮಾನಕರ್ತನು ಕರ್ಮ ಮಾಳ್ಪೆನು ।
ಬರುವುದೈ ಮುಂದಕ್ಕೆ ಮಳೆವರ್ಷಿಸುವ ವರ್ಷರ್ತು ॥೨೨೧॥ ಮಾನವನು ಕರ್ಮವನು ಮಾಡಲಿಕಾರಭಿಪನಾಗ ॥ ೨೨೩ ॥

ಅರುಣನುದಯಕೆ ಬಂದನಂತರ । ಈ ತೆರದಿ ದೇಹಾದಿನಿಚಯವೆ ।
ತರಣಿಯುದಯಾಚಲಕೆ ಬರುವನು । ಹೇತು ದೇಹಾದಿಕಕೆ ತಿಳಿಯೈ ।
ತರಣಿ ಬರಲು ಪ್ರಕಾಶಿಸುವನೈ ಲೋಕಗಳನೆಲ್ಲ ॥ ಪಾರ್ಥ ಕಬ್ಬಿಣ ಹವಣಿಸಲು ಕಬ್ಬಿಣವೆ ಬೇಕಲ್ಲೈ ॥
ಪರಿಯಲೀ ಸಂಕಲ್ಪ ಮಾಡಲಿ- । ಮಾತ ಹೇಳುವೆನೊಂದ ತಂತು ।
ಕಿರುವುದೈ ಕಾರಣವು ಮನವದು । ವ್ಯಾತ ತಂತುನಿಗಡ್ಡ ಹಾಕಿದ- ।
ಬರಲು ತತ್ಸಂಕಲ್ಪ ಹೊರಬೀಳುವದು ವಾಗ್ರೂಪ ॥ ೨೨೨ ॥ ಣಾತಶುಕ್ಷಣ ಮಗ್ಗದಲಿ ಸಂಭವಿಸುವುದು ವಸ್ತ್ರ ' ೨೨೪ ॥

ರನ್ನದಲಿ ಹಾಕುವರೆ ಪೈಲುವ ।
ರನ್ನವೇ ಬೇಕಾಗುವುದು ಮೇಣ್ ।
ಮನ್ನಿಸೈ ಮನಆದಿಕರ್ಮಕೆ ಹೇತು ಮನಆದಿ ॥
ಮುನ್ನವೀ ದೇಹಾದಿ ಕಾರಣ- ।
ವೆನ್ನುವುದು ಹೇಗೆನುತ ಕೇಳಲು ।
ನಿರ್ಣಯವ ನಾ ಪೇಳ್ವೆ ಕೇಳೈ ಪಾರ್ಥ ಮನಗೊಟ್ಟು
॥ ೨೨೫ ॥

ತರಣಿ ಕೊಡುವ ಪ್ರಕಾಶಕಿಹನಾ ।
ತರಣಿಯೇ ನಿಜಹೇತು ಕಬ್ಬೀ- ।
ತೆರದಿ ಕಬ್ಬಿನ ಬೆಳೆಗೆ ಹೇತುವಲಾ ಧನಂಜಯನೆ ॥
ಸರಸತಿಯ ಸ್ತೋತ್ರವನು ಮಾಡಲು ।
ಸರಸತಿಯ ವರ ಬೇಕು ಹೇತುವು ।
ಪರಮ ನಿಗಮಮಹತ್ವಕಾ ನಿಗಮಗಳೆ ಹೇತುವಲಾ
॥ ೨೨೬ ॥

ಕಾರಣವು ದೇಹಾದಿ ಕರ್ಮಕೆ ।
ಯಾರಿಗರಿವೀ ಸೂತ್ರ ಶ- ।
ರೀರ ಮೊದಲಾದುದಕೆ ಹೇಳುತ್ತ ಬೇಕು ನಿಜವಾಗಿ ॥
ಚಾರುದೇಹಕೆ ದೇಹ ಹೇತುವು ।
ತೋರುವುದು ದೇಹದಲಿ ಕರ್ಮವು ।
ಪ್ರಾರಬ್ಧ ಬೇಕದನು ಶಾಸ್ತ್ರವಿ ಪೇಳದಂದೆಲೆ ॥ ೨೨೭ ॥

ಶಾಸ್ತ್ರನಿಯಮಿತ ಕರ್ಮನ್ಯಾಯ್ಯ ।
ಪಾರ್ಥ ಮತ್ತದು ಪುಣ್ಯಕರ್ಮವು ।
ಧಾತ್ರಿಯಲಿ ತತ್ಕರ್ಮಫಲವೈ ನ್ಯಾಯವೇ ಹೇತು ॥
ಪತ್ತಿದರೆ ಪರ್ಜನ್ಯನನುಚಿತ ।
ಭತ್ತಗದ್ದೆಗೆ ತಿರ್ದಲಾಜಲ ।
ಕೆತ್ತಿಕುಡಿದ್ದು ಗದ್ದೆಯಾದರು ತೀರ ನಿಷ್ಫಲವೆ ॥ ೨೨೮ ॥

ನಿಷ್ಟಿನಲಿ ಮನೆಯಿಟ್ಟು ಕಾಶಿಯ ।
ಒಟ್ಟಿ ಹಿಡಿದರೆ ಕಷ್ಟ ದೇಹಕೆ ।
ಹುಟ್ಟುನ್ನದು ನಿಜ ಕೆಟ್ಟುನೇನವನಿಟ್ಟ ಹೆಜ್ಜೆಗಳು ॥

ಸೃಷ್ಟಿಯಲ್ಲೀ ಹೇತು ಕಾರಣ- ।
ಚೇಷ್ಟೆಯಿಂದಲಿ ಹುಟ್ಟಿ ಒರಲಾ ।
ಯಿಷ್ಟಕರ್ಮವು ಪುಣ್ಯಮಾರ್ಗವು ಶಾಸ್ತ್ರಮಾರ್ಗದಲಿ ॥ ೨೨೯ ॥

ಗಡಿಗೆಯೊಂದರ ಹಾಲು ಬಾರ್ಹ್ಮಣ- ।
ಗಡಣಕಿತ್ತರು ಪ್ರೇಮದಿಂದನು- ।
ರೊಡನೆ ಕುಡಿದರು ತೃಪ್ತಿಯಾಯಿತು ಬ್ರಹ್ಮನೈಂದಕ್ಕೆ ॥
ಗಡಿಗೆಯಿರಡನೆಯಿಂದಲುಕ್ಕುತ ।
ಗಡಿಗೆಯಿಂದಲೆ ನಷ್ಟವಾಯಿತು ।
ನಡುವೆ ಭೇದವಿದಿಷ್ಟ ನೋಡೈ ಕರ್ಮವೆರಡರಲಿ ॥ ೨೩೦ ॥

ಪಾತ್ರ ಮೊದಲನೆಯಿಂದಲದು ಸತ್- ।
ಪಾತ್ರದಾನವದಾಯಿತೆರಡನೆ- ।
ಪಾತ್ರದಿಂದಲಿ ಹೋದ ಹಾಲದು ವ್ಯರ್ಥವಾಯಿತಲಾ ॥
ವಿಚಿತ್ರತರವಿದು ಕರ್ಮಮಾರ್ಗವು ।
ಶಾಸ್ತ್ರವಿರಹಿತ ಕರ್ಮ ನಿಷ್ಫಲ ।
ವರ್ಷ ಚೋರನು ಪೊಯ್ಯಲದು ಸದ್ದಾನವೆನಿಸುವುದೆ ॥ ೨೩೧ ॥

ಇರುವೈ ಚಾಲೊಳಗೆ ಬೈನ- ।
ಕ್ಕೈದು ವರ್ಣಗಳವನು ಸಂತತ ।
ನರನು ತಾ ಸ ಪರಾರದಲ್ಲುರ್ಜಿಸುವನಲ್ಲೈ ॥
ಇರುವೈನಾಮಂಕ್ರಿ ವರ್ಣದ ।
ಹೊರಳು ಕೇಳದರಿಂದ ಮಂಕ್ರೀ- ।
ಭ್ಯರಿಗೆ ಲಭಿಸುವುದೆಂದು ಮನ್ನಿಸೆ ಮರುಳುತನವಲ್ಲೈ ॥ ೨೩೨ ॥

ಲರಿಯಾದಲೆಯಾ ಮಂತ್ರಯುತ್ತಿಯ ।
ನರನು ಮಣ್ಣೋರ್ಚ್ಚಾರ ಮಾಡಲು ।
ಒರಟುಪ್ಪೇನವನಿಂಗೆ ಮಂತ್ರೋರ್ಚ್ಚಾರನತ್ತಲ್ತನ್ನ ॥
ಕರಿಯಲಾಸು ಹೇತು ಕಾರಣ- ।
ವಿರಿಸಿನಲಿ ಮುಖ್ಯನ್ನದು ಕರ್ಮವು ।
ಒರಟು ಪುಣ್ಯನ್ನ ಪಾವನವದು ಪಾಪಕ್ಕೆ ಹೇತುವದು ॥ ೨೩೩ ॥

ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ ।
ಪಶ್ಯತ್ಯಕೃತಬುದ್ಧಿತ್ವಾನ್ನ ಸ ಪಶ್ಯತಿ ದುರ್ಮತಿಃ ॥ ೧೬ ॥

ನರನೆ ಕೇಳ್ಗೆ ಕರ್ಮಕಾರಣ- ।
ವಿರುವುದೈದಕ್ಕ್ಯೆದು ಹೇತುಗ- ।
ಳೆರುವುವೀ ಪರಿ ನೋಡಿದಿಯೊ ಕಲಿವಾರ್ಥ ತಿಳಿವಾಯ್ತೆ ॥

ಪರಿಕಿಸೈ ನೀನಾತ್ಮಕಾರಣ- ।
ನಿರುವನೇ ಕರ್ಮಕ್ಕೆ ನೋಡಿದ- ।
ನರುಹು ಯೆನಗೀ ತತ್ತ್ವವಿಸ್ತರವೆಲ್ಲ ಕೌಂತೇಯ ॥ ೨೩೪ ॥

ತರಣಿ ತಾಂ ನಿಜವಿಷಯವಾಗದೆ ।
ಕಿರಣದಿಂ ನೇತ್ರಾದಿಗಳ ಗೋ- ।
ಚರಕೆ ತರುವನು ವಿಷಯವೆಲ್ಲವ ಪೂರ್ಣತರವಾಗಿ ॥
ಪರಿಯಲಾತ್ಮನು ಕರ್ಮವಾಗದೆ ।
ಪರಿಕಿಸಲು ತತ್ಕರ್ತನಿಗೆ ಗೋ- ।
ಚರಕೆ ತರುವನು ಜಗದೊಳೆಲ್ಲವ ಕರ್ಮಕಾರಣವ ॥೨೩೫॥

ತಾನು ಕನ್ನಡಿ ಬಿಂಬವಾಗದೆ ।
ಕಾಣಿಸುವ್ದೈ ಯೆರಡನೇದನೆ ।
ಜಾಣರರಿವರು ಕರ್ಮಕರ್ತನು ಆತ್ಮ ತಾನಲ್ಲ ॥
ಬಾನಿನಲಿ ರವಿ ರಾತ್ರಿದಿವಸಕೆ ।
ತಾನೆ ಕಾರಣನೆನಿಸಿ ಯದರಿಂ ।
ತಾನಲಿಪ್ತನಲಾ ಧನಂಜಯ ತತ್ತ್ವ ತಿಳಿಯಿತಲಾ ॥೨೩೬॥

ಯಾರಿಗಿರುವ್ದೊ ಭ್ರಮವಹಂಕೃತಿ ।
ಯಾರ ಬುದ್ಧಿಗೆ ನಾನೆ ಯಿರುವೆ ಶ- ।
ರೀರವೆಂಬಭಿಮಾನವವನಿಂಗೇನ ಹೇಳಲದ ॥
ತೋರದಾತ್ಮಜ್ಞಾನರೂಪವು ।
ಘೋರಕತ್ತಲೆ ಮಧ್ಯರಾತ್ರವು ।
ಸೇರಿತೆಂದೇ ವಾರ್ಥ ತಿಳಿಯೈ ತತ್ತ್ವ ಪೇಳೆದೆನು ॥ ೨೩೭ ॥

ಇರುವ್ದೈ ನರದೇಹವೇ ಯೀ- ।
ಶ್ವರನು ಬ್ರಹ್ಮನು ಮೇಣು ಜೀತನ ।
ಧರಿಸುತೀ ನಿರ್ಧಾರ ಕರ್ಮಾಚರಣ ಮಾಡಿದರೆ ॥
ಬರುವ್ದುದವನಿಗೆ ಸಹಜವೃತ್ತಿಯು ।
ಯಿರುವನಾತ್ಮನೆ ಕರ್ತನೆಂಬನು ।
ಕರೆವನಥವಾ ಕರ್ಮಕರ್ತೃವು ದೇಹವೇ ಯೆನುತ ೨೩೮॥

ಕೇಳೆದೈ ಕಲಿವಾರ್ಥ ಆತ್ಮನು ।
ಮೇಲೆ ಕರ್ಮಾತೀತನಿರುವನು ।
ಬಾಳುವನು ಕರ್ಮಕ್ಕೆ ಸಾಕ್ಷೀಭೂತನಾಗುತಲೆ ॥
ಕೇಳನವನಾ ನಿಜಸ್ವರೂಪದ ।
ಲೀಲೆಯನು ಕಿವಿಯಿಂದ ಗೊಪ್ಪಿಯ ।
ಪೇಳುವವನಾರಾತ ಮೂರ್ಖನು ಜ್ಞಾನಶೂನ್ಯನೆ ಸೈ ॥೨೩೯॥

ಹತ್ತಿಹುದು ಭ್ರಮವಾತ್ಮ ದೇಹವೆ- ।
ನುತ್ತ ಮನ್ನಿಸಿ ಹುಚ್ಚನಂದದಿ ।
ವಿತ್ತವನು ನಾವೇನ ಹೇಳಲಿ ಯಿ ಚಮತ್ಕೃತಿಯ ॥

ನೇತ್ರಗಳ ತಾಂ ಮುಚ್ಚೆ ಹಗಲಿಗೆ ।
ರಾತ್ರಿಯೆಂಬುದು ಗೂಗೆ ಯಿಪರಿ ।
ಚಿತ್ರವಲ್ಲಾ ನೋಡಿದಿಯೊ ಕಲಿವಾರ್ಥ ನೀನಿದನು ॥ ೨೪೦ ॥

ನರನೆ ಗಗನದಿ ಹೊಳೆವ ಸೂರ್ಯನ- ।
ನರಿಯದಾತನು ನೆಲದ ಮೇಲಿನ ।
ಕೆರೆಯ ಪ್ರತಿಬಿಂಬವನು ಸೂರ್ಯನೆನುತ್ತ ಕರೆಯುವನು ॥
ಕೆರೆಯೊಳಗೆ ನೀರಾಗೆ ಸೂರ್ಯಗೆ ।
ಬರುವ್ದೈ ನಿಜಜನ್ಮ ಕೆರೆ ಬ- ।
ತ್ತಿರಲು ಸಾವನು ಸೂರ್ಯ ಕೆರೆ ಕಂಪಿಸಲು ಕಂಪಿಸುವ
॥ ೨೪೧ ॥

ನರನು ನಿದ್ರಾವಸ್ಥೆಯಲ್ಲಿರೆ ।
ಖರೆಯವಗೆ ಕೇಳ್ ಸ್ವಪ್ನಸೃಷ್ಟಿಯು ।
ಕರೆವನ್ಯೆ ರಜ್ಜುವನು ಸರ್ಪವೆನುತ್ತ ತಿಳಿಯದಲೆ ॥
ಅರಿಯದಾ ಸರ್ಪಸ್ವರೂಪವ ।
ಬರಿದೆ ಭೀತಿಯನಾಂತರದರ- ।
ಲ್ಲಿರುವ್ದೇನ್ಯೆ ಚಿತ್ರ ನೀ ಕಲಿವಾರ್ಥ ನೋಡಿದಿಯಾ ॥ ೨೪೨ ॥

ಬರಲು ಕಾಮಿಲಿ ಕಣ್ಣಿನಲಿ ಹಿಮ- ।
ಕರನು ತೋರ್ಪನು ಹಳದಿಬಣ್ಣದಿ ।
ಧರಣಿಯಲಿ ಮೃಗಜಲವು ವಂಚಿಸುತಿರದೆ ಮೃಗಗಣವ ॥
ಗುರುಸ್ಮರಣ ಶಾಸ್ತ್ರೋಚ್ಚರಣವೆಂ- ।
ಬೆರಡು ಪಾವನವಾಯುಸ್ಪರ್ಶವು ।
ದೊರೆಯುವಾರದೆ ಮೂರ್ಖತನದಲಿ ಬೆಂದು ಬಳಲುವರು
॥ ೨೪೩ ॥

ಸ್ಥಿರವಿರುವನಾ ಚಂದ್ರ ಗಗನದಿ ।
ಚರಿಸೆ ವೇಗದಿ ಮೋಡವದರಲಿ ।
ನರಿಗಳೆನುವುವು ಚಂದ್ರನೋಡುವನೆಂತು ಭ್ರಾಂತಿಯಲಿ ॥
ಪರಿಯೊಳಾತ್ಮವು ದೇಹವೆಂದೇ ।
ಯರಿಯುತಲಿ ಪರಿಕಿಸಲು ಆತ್ಮವು ।
ಧರಿಸಿರುವ್ದೈ ದೇಹರೂಪದ ಬಲೆಯ ಕಲಿವಾರ್ಥ ॥ ೨೪೪ ॥

ನರನೆ ಕೇಳೇತೆರದ ಕಲ್ಪನೆ- ।
ಯಿರಲು ದೇಹದ ಬಂದಿವಾಸದಿ ।
ಬರುವ್ದೈ ಕರ್ಮಗಳ ಬಲವತ್ತರದ ಗಂಟುಗಳು ॥
ಅರಿಯಲಾ ಗಿಳಿ ಕೂತು ನಳಿಯಲಿ ।
ಭರದಿ ಕಟ್ಟಿಹರೆನ್ನ ನೆನುತಲಿ ।
ಮರಳಿ ಕಾಲ್ಗಳ ಘಟ್ಟಿ ಹಿಡಿವುದು ಬಿಡಲಿತ್ಸಿಸದೆ ॥ ೨೪೫ ॥

ಧಾರುಣಿಯಲೀ ಹೇಹ ಮಾಡಿಹ ।
ಚಾರುಕರ್ಮದ ಕರ್ತನಾತ್ಮ ನಿ- ।
ಚಾರಿಸುವನಾರೀತೆರದಿ ನಿಜತತ್ತ್ವ ತಿಳಿಯದಲೆ ॥
ತೂರಿಕೊಳುವನು ಕರ್ಮದಲಿ ನೂ- ।
ರಾರು ಕಲ್ಪಂಗಳ ತನಕವು ಶ- ।
ರೀರ ಮಾಡುವ ಕರ್ಮವರಿಯನು ಪೇಳ್ವೆ ನಾನೀಗ
॥ ೨೪೬ ॥

ಜಲಧಿಯಲ್ಲಡಗಿಹನು ವಡಬಾ- ।
ನಳನು ಜಲಧಿಯ ಸ್ಪರ್ಶಮಾಡನು ।
ತಿಳಿಯಲೀಪರಿಯಾತ್ಮನಿರುವನು ದೇಹದಲಿ ಪಾರ್ಥ ॥
ಇಳೆಯಲೀಪರಿ ಕರ್ಮ ಮಾಳ್ಪರ ।
ತಿಳಿವುದೆಂತೆನೆ ನಿನಗೆ ಪೇಳುವೆ ।
ಕಲಿಕಿರೀಟಿಯೆ ನೀನು ಮನಗೊಟ್ಟಿದನು ಕೇಳುವುದು
। ೨೪೭ ॥

ಮುಕ್ತಿರೂಪದ ವಿಷಯ ಯೋಚಿಸೆ ।
ಮುಕ್ತತೆಯು ನಿಜವಾಗಿ ಕಣ್ಗಿಗೆ ।
ಹತ್ತುವುದು ಸ್ವಾಭಾವಿಕವು ಗುಣಧರ್ಮವಿದು ನೋಡು ॥
ದೀಪ್ತಿಯನು ಹಿಡಿದವರ ವಶದಿಂ ।
ಕತ್ತಲೆಯಲೇ ಹುಡುಕಿ ನೋಡಲು ।
ವಸ್ತು ಗೋಚರವಾಗದೇ ದೀಪ್ತಿಯ ಪ್ರಭಾವದಲಿ ೨೪೮॥

ಕನ್ನಡಿಯು ಮೇಲಿರುವ ಮಲವನು ।
ತನ್ನ ಹಸ್ತದಿ ದೂರ ಮಾಡಲು ।
ಕನ್ನಡಿಯೊಳಾ ಕಾಣದೇ ನಿಜರೂಪ ಸ್ವಚ್ಛವದು ॥
ಮುನ್ನವಾ ಪ್ರತಿಬಿಂಬ ಪಾರ್ಥನೆ ।
ತನ್ನ ಬಿಂಬವ ನೋಡಲೆತ್ನಿಸೆ ।
ಭಿನ್ನವಾಗುವುದಾಗ ನೋಟವೆ ಬಿಂಬವಾಗುವುದು ॥ ೨೪೯ ॥

ನೀರೊಳಗೆ ಕಲ್ಲುಪ್ಪ ಹಾಕಲು ।
ಸೇರುವುದು ಕಲ್ಲುಪ್ಪು ನೀರನು ।
ಚಾರುಸಂತರ ಸ್ಥಿತಿ ನಿರೀಕ್ಷಣ ಮಾಡಲಾಕ್ಷಣದಿ ॥
ತೋರದಿಹ ಸ್ವಾತ್ಮಸ್ವರೂಪವು ।
ತೋರುವುದು ಸಂತರ ಪ್ರಭಾವದಿ ।
ಧಾರುಣಿಯಲದಕಾಗಿ ಸಂತರ ಚಿಂತಿಸೈ ನಿತ್ಯ ॥ ೨೫೦ ॥

ಕರ್ಮ ಮಾಡುತಲಿದ್ದು ಸಂತತ ।
ಕರ್ಮದಲ್ಲಿಯನಿಷ್ಟದಿಷ್ಟದ ।
ಕರ್ಮಗಳ ಮಾನಿಸದಲಿತ್ತಲೆಯಿಂದ ತಾನಿರುವ ।
ಚರ್ಮಚಕ್ಷುವಿಗಿರುವ ಚರ್ಮದ ।
ಧರ್ಮದಿಂದಲೆ ದೃಷ್ಟಿ ಪೋಪುದೆ ।
ಮರ್ಮ ಪೇಳ್ವೆನು ಯಾರು ಕರ್ಮಾತೀತನಿರುತಿಹನು ॥ ೨೫೧ ॥

ಯಸ್ಯ ನಾಹಂಕೃತೋ ಭಾವೋ ಬ ದ್ಧಿರ್ಯಸ್ಯ ನ ಲಿಪ್ಯತೇ ॥
ಹತ್ವಾಪಿ ಸ ಇಮಾಂಲ್ಲೋಕಾನ್ನ ಹಂತಿ ನ ನಿಬಧ್ಯತೇ ॥ ೧೭ ॥

ಓದ್ಧರೂಪದ ಪಾರ್ಥ ಕೇಳೈ ।
ನಿದ್ದೆಯಲಿ ತಾನಾತ್ಮನಿದ್ದನು ।
ಬೆದ್ದನಜ್ಞಾನದಲಿ ನಿದ್ರಾರೂಪವದೆಯಾಯ್ತು ॥
ಬೆದ್ದಿತವನಿಗೆ ವಿಶ್ವರೂಪವಿ- ।
ಶುದ್ಧಸ್ವಪ್ನವು ಬಹುದಿವಸದಿಂ ।
ದೆದ್ದು ಕೂಡದೆ ಗಾಢನಿದ್ರಾಲಂಬ ಮಾಡಿದನು ॥ ೨೫೨ ॥

ಆಗಲವನಿಗೆ ತತ್ತ್ವಮಸಿ ಬಹು- ।
ಭಾಗ್ಯದಿಂದಲಿ ಬೆತ್ತು ಕಿವಿಯಲಿ ।
ಜಾಗರಣೆಯಾಯ್ತಾಗ ಗುರು ಬಂದೆಬ್ಬಿಸಲು ಭರದಿ ॥
ಹೀಗೆ ತಲೆಯಲಿ ಕೈಯನಿಡದೆ ಸ- ।
ರಾಗದಿಂದಲಿ ಲತ್ತೆ ಹೊಡೆಯುತ ।
ಬೇಗದಿಂದೆಬ್ಬಿಸಿದನೈ ಗುರುಕೃಪೆ ಚಮತ್ಕಾರ ॥ ೨೫೩ ॥

ಜಗದ ರೂಪದ ಸ್ವಪ್ನನಾಕ್ಷಣ- ।
ವಗಲುತಜ್ಞಾನಸ್ವರೂಪದ ।
ಮಿಗಡನಿದ್ರೆಯು ಕೃಜಿಸಿ ಸ್ವಾತ್ಮಜ್ಞಾನದರ್ಶನದಿ ॥
ಉಗಮವಹುದೈ ಜ್ಞಾನಜ್ಯೋತಿಯು ।
ವೃಗಮವಾಗಲು ಚಂದ್ರ ತೋರುವ ।
ಮೃಗಜಲವು ತನ್ನಿಂದ ತಾನೇ ಲಯವ ಹೊಂದುವುದು ॥ ೨೫೪ ॥

ಬಿಟ್ಟು ಹೋಗಲು ಬಾಳ್ಯ ಬಾಗುಲು ।
ಗೆಟ್ಟು ಭೀತಿಯ ತಾಳುವರೆ ನೋಡ್ ।
ಕಟ್ಟಿಗೆಯು ಸುಟ್ಟಾಕ್ಷಣದೊಳಿರುತಿಹುದೆ ಕಟ್ಟಿಗೆಯು ॥
ಬಿಟ್ಟರಾ ನಿದ್ರೆಯನು ಸ್ವಪ್ನವು ।
ದೃಷ್ಟಿಗೋಚರವೆನಿಸುವುದೆ ಮೇಣ್ ।
ಬಿಟ್ಟು ಹೋಗುವುದವಗೆ ಮೇಣಭಿಮಾನವೇ ಯಿರದು ॥೨೫೫॥

ಕತ್ತಲೆಯ ತಾಂ ನೋಳ್ಪೆನೆನುತಲಿ ।
ಹತ್ತಿದರೆ ಕತ್ತಲೆಯ ಬೆನ್ನನು ।
ಸುತ್ತಸುತ್ತಿದರೇನು ಗಿರಿಗಿತ್ತುರದಿ ಹುಡುಕುತಲಿ ॥
ಕತ್ತಲೆಯ ಕಾಣುವನೆ ಸೂರ್ಯನು ।
ಸತ್ಯವಾತ್ಮಜ್ಞಾನವಾಗಲು ।
ಯೆತ್ತ ನೋಡಿದಡತ್ತ ಕಾಂಬನು ಸ್ವಾತ್ಮರೂಪವನು ॥೨೫೬॥

ಮುಟ್ಟಲಗ್ನಿಯು ಸರ್ವವಸ್ತುವ ।
ಸುಟ್ಟು ಬಿಡುವನು ಮುಟ್ಟಿದಾಕ್ಷಣ ।
ತಟ್ಟುವುದು ಕೇಳಗ್ನಿರೂಪವು ಸರ್ವವಸ್ತುಗಳ ॥
ಕೆಟ್ಟು ಹೋಗುವುದೆಲ್ಲ ಭೇದವು ।
ದೃಷ್ಟವಾಗದು ದಾಹ್ಯದಾಹಕ-।
ವಿಷ್ಟು ಭೇದವು ಸರ್ವವಾಗುವುದಗ್ನಿರೂಪವಲಾ ॥ ೨೫೭ ॥

ದ್ವೈತಭಾವವ ಧರಿಸಿ ಕರ್ಮವ- ।
ನಾತುಮನು ತಾಂ ಮಾಳ್ಪನೆನ್ನವ ।
ಮಾತು ಹೋಗಲು ದೇಹಭಾನವು ವಿಲಯವಾಗುವುದು ॥
ಭೂತಳವು ಪ್ರಳಯುದಲಿ ಜಲಮಯ-।
ವೋತಪ್ರೋತವದಾಗೆ ಪಿರಿಕಿರಿ- ।
ದೇತಕೆರುವುದು ಛಾವ ಕೆರೆಬಾವಿಗಳು ಮೇಣ್ಹೆಲ್ಲಿ ॥ ೨೫೮ ॥

ತರಣಿಜಿಂಬವು ಕೈಯ ಸೇರಲು ।
ತರಣಿ ಕೈವಶನೆಂದು ತಿಳಿವುದೆ ।
ಮರುಳನಲ್ಲಾ ತರಣಿ ಕೈವಶನೆಂದು ಪೇಳಿದರೆ ॥
ಅರಿಯಲಾಪರಿ ದೇಹ ತಾನೆಂ- ।
ದರಿತುಕೊಂಡರೆ ಬ್ರಹ್ಮಪೂರ್ಣತೆ ।
ಒರುವುದೇ ಕಲಿಪಾರ್ಥ ನೀನೆ ವಿಚಾರಿಸೀ ತತ್ತ್ವ ॥ ೨೫೯ ॥

ಕಡಿದು ಮೊಸರನು ಬೆಣ್ಣೆ ತೆಗೆಯುತ- ।
ಲೊದನೆ ಬೆಣ್ಣೆಯು ತಿರಿಗಿಯದರೊಳ- ।
ಗಿದಲು ಬೆಣ್ಣೆಯು ತಿರಿಗಿ ಮಜ್ಜಿಗೆಯಲ್ಲಿ ಸೇರುವುದೆ ॥
ಆಡಗಿ ಕಾಷ್ಠದೊಳಿರುವ ಬೆಂಕಿಯ ।
ಹೊಡೆದು ತೂತಳೆಗೆಯಲ್ಕೆ ಮೇಣದ- ।
ನಿಡಲು ಬಹುದೇ ಕಟ್ಟಿಗೆಯ ವೆಚ್ಚಿಗೆಯಲಡಗಿಸುತ ॥೨೬೦॥

ಕತ್ತಲೆಯ ಹೊಟ್ಟೆಯಲಿ ಹುಟ್ಟಿವ ।
ದೀಪ್ತಸೂರ್ಯನು ಪೋಲೆ ಒರಲಾ ।
ಕತ್ತಲೆಯ ಕಾಣುವನೆ ಕವಿಯಿಂ ಕೇಳ್ವನೇ ಹೆಸರ ॥

ವಸ್ತುವೆರಡಾ ಜ್ಞಾತೃಜ್ಞೇಯಗ- ।
ಳೆತ್ತ ಹೋದುವೊ ದ್ವೈತ ಮುರಿಯಲು ।
ಯೆತ್ತಣಿಂದಲಿ ಗರ್ವ ಬರುತಿಹುದಾತ್ಮದೇಹದಲಿ ॥ ೨೬೧ ॥

ಎತ್ತ ಹೋಗಲಿಕತ್ತ ತೋರ್ಪುದು ।
ಸುತ್ತಮುತ್ತಾಕಾಶ ಮತ್ತದು- ।
ವೆತ್ತ ಕೋಗುವುದೇನು ಪೇಳುವೆ ಸರ್ವವ್ಯಾಪಿಯಲಾ ॥
ನಿತ್ಯವಾತ್ಮಸ್ವರೂಪನಾದವ- ।
ನೆತ್ತನೋಡಿದಡತ್ತ ಕಾಂಬನು ।
ಸತ್ಯಸ್ವಾತ್ಮಸ್ವರೂಪನಲ್ಲೇ ಗರ್ವ ಪೆಲ್ಲಿಯದು ॥ ೨೬೨ ॥

ಎಲ್ಲಿ ಹೋಗಲು ಬೇಕು ಗಗನವು ।
ಯಿಲ್ಲವದಕಾಸ್ಥಾನವನ್ಯವು ।
ಯೆಲ್ಲಿ ಹರಿಯಲು ಬೇಕು ಸಾಗರ ನೋಡು ಕಲಿಪಾರ್ಥ ॥
ಎಲ್ಲಿಯಾದರು ಹೋಗಬೇಕೆನ- ।
ಲಲ್ಲ ಧ್ರುವಕಾ ಭ್ರಮಣವಾಪರಿ ।
ಯಲ್ಲಿ ಸ್ಥಿತಿಯಾಗಿಹುದು ಕೇಳಾ ಮಾನನಗೆ ನರನೆ । ೨೬೩ ॥

ಬರಲು ಸಾತ್ಮಜ್ಞಾನ ನರನಿಗೆ ।
ಒರಿದೆ ನೋಡಭಿಮಾನ ಬಾರದು ।
ಮನೆವನಲ್ಲಾ ಕರ್ಮಕರ್ತೃತ್ವವನು ಮನದೊಳಗೆ ॥
ನಿರುತ ಯಾವಚ್ಚೀವಹಾತನು ।
ಚರಿಸುವನು ಕರ್ಮವನು ನೋಡೈ ।
ಮರಗಳೆಲೆಯುಗಲಾಡುವವೆ ಕೇಳ್ ಗಾಳಿನಿಂತಿರಲು ॥ ೨೬೪ ॥

ಗಾಳಿವಶವಾಗಿರಲು ಕರ್ಪುರ- ।
ವೇಳದೇನು ಸುವಾಸವದ ಸಂ- ।
ಭಾಳಿಸಿಟ್ಟಿಹ ಡಜ್ಜಯಿಂ ಕಲಿಪಾರ್ಥ ನೋಡಿದಿಯಾ ॥
ಕೇಳಿರುವ ಸಂಗಿಗಾಯನದ ಸುಖ- ।
ಲೋಲ ಚಿಂಗಿಂಪಾದ ಸ್ವಾದವು ।
ಲೆ ಳುವುದು ಗಾಯನದ ಪರ್ಯವಸಾನದಲಿ ನೋಡೆ ॥ ೨೬೫ ॥

ನೀರನುಣಿಸಲು ನೆಲಕೆ ನೀರದು- ।
ವಾರಿ ಹೋಗಲು ನಿರಿನಾ ಹಸಿ- ।
ಯಾರುವುದೆ ಸೂರ್ಯಾಸ್ತವಾದರು ಬೆಳಕುವೆಳೆವುದಲಾ ॥
ವೀರನಾವೇಶದಲಿ ಬಾಣವ ।
ಹೂಡಿಸಲು ಗುರಿ ಹೊಡೆದನಂತರ ।
ಹಾರುವುದು ಮುಂದಕ್ಕೆ ತನ್ನಲಿ ಶಕ್ತಿಯಿರುವನಕ ॥ ೨೬೬ ॥

ಮಡಿಕೆಯಾದೊಡನಾ ಕುಲಾಲನು ।
ಮಡಿಕೆಯನು ತಕ್ಕೊಂಡನಂತರ ।
ಬಿಡುವುದಿಲ್ಲಾಭ್ರಮಣವನ್ನಾ ಚಕ್ರ ತಿರುಗುವುದು ॥
ಕಡಿದರಾ ದೇಹಾಭಿಮಾನವ ।
ಬಿಡದು ದೇಹವು ಕರ್ಮ ಮಾಳ್ಪುದು ।
ಕಡೆತನಕ ಕರ್ಮವ ಸ್ವಭಾವವೆ ಮಾಡಿಸುತ್ತಿಹುದು ।೨೬೭॥

ಕರ್ಮವಶದಲಿ ದೇಹವಾಗಿಹು- ।
ದೊಮ್ಮೆ ದೇಹೋತ್ಪತ್ತಿಯಾಗಲು ।
ಕರ್ಮವೇ ಚೇಷ್ಟೆಗಳ ಮಾಡಿಸುತಿಹುದು ದೇಹದಲಿ ॥
ಕರ್ಮಚೇಷ್ಟೆಯು ನರನ ದೇಹದ ।
ಧರ್ಮವಲ್ಲಾ ಯಿಚ್ಛೆಯಿಂದದ ।
ನಿರ್ಮಿಸಲು ಲಯ ಮಾಡಲದುವೇ ಶಕ್ಯ ಬೇರಲ್ಲ ॥ ೨೬೮ ॥

ಮನದಿ ಸಂಕಲ್ಪವನು ಮಾಡದೆ ।
ಮಿನುಗುತಿಹುದೈ ಸ್ವಪ್ನರಾಜ್ಯವು ।
ವನದಲುದ್ಭವಿಸುವುದು ತನ್ನಿಂ ತಾನೆ ಗಿಡಮರವು ॥
ಮಿನುಗುತಿರುವುವು ಗಗನದಲ್ಲರ- ।
ಮನೆಗಳತಿಸುಮನೋಹರಂಗಳು ।
ಜನರು ಮಾಡಿದರೇನು ರಚನೆಯು ಗಗನದಲಿ ನೋಡೆ
॥ ೨೬೯ ॥
ಮಾಡದಲೆ ಸಂಕಲ್ಪವಾತ್ಮನು ।
ಮಾಡಿಸುವುವೈ ಕ್ರಿಯೆಗಳೆಲ್ಲವ ।
ನೋಡು ನಾ ಪೇಳಿರ್ದ ದೇಹಾದಿಗಳೆ ಕಾರಣವು ॥
ಚಾರುತರ ಪೂರ್ವಾರ್ಜಿತದ ಸಂ- ।
ಸ್ಕಾರ ಕಾರಣ ಹೇತುಗಳು ನಿಜ ।
ಬೇರೆಬೇರೀ ತೆರದ ಕ್ರಿಯೆಗಳೆ ಮಾಡಿಸುವುವೆಲ್ಲ ॥ ೨೭೦ ॥

ಅಗಲೀ ಕ್ರಿಯೆಯಿಂದ ಜಗದ ವಿ- ।
ಯೋಗವಥವಾ ಯೋಗವಿದರಲಿ ।
ಸಾಗುವುದು ಕ್ರಿಯೆಯಾತ್ಮನಿಚ್ಛೆಯ ಕೇಳದಲೆ ಪಾರ್ಥ ॥
ಅಗುವುದು ಕಮಲಿನಿಗೆ ಹರ್ಷವಿ- ।
ಯೋಗತಿಂ ಬಾಡುವುದು ಕುಮುದಿನಿ- ।
ಯಾಗಗನದಲಿ ನಡೆವ ಸೂರ್ಯುನಿಗೇನು ಸುಖದುಃಖ
॥ ೨೭೧ ॥
ಗಡಬಡಿಸಿದರು ಗುಡುಗುಮಿಂಚದು ।
ಕಡಿದು ನೆಲ ಜೂರಾಗಿ ಮಾಡಲು ।
ಜಡಿಮಳೆಯು ಸುರಿಸುರಿದು ಬೆಳೆಯ ಸಮೃದ್ಧಿ ಕೊಡ್ಪುದೆಯು ॥

ಜಡವಲಾ ಮೇಲಿರುವ ಗಗನವು ।
ಬಡಿಯವದಕೀ ದುಃಖಸುಖಗಳು ।
ಪೊಡವಿಯಲಿ ಕೇಳಾತ್ಮನೀಪರಿ ತೊರೆಯಲಭಿಮಾನ ॥ ೨೭೨ ॥

ನಿದ್ದೆಯಿಂದೆಚ್ಚರಿಸೆ ಸ್ವಪ್ನದೊ- ।
ಳಿದ್ದ ವಸ್ತುವ ಕಾಣಲಾರನು ।
ಯಿದ್ದರೇನದು ಸೃಷ್ಟಿಲಯವಿದನಾತ್ಮ ಕಾಣನಲಾ ॥
ಶುದ್ಧಚರ್ಮಾಕ್ಷಿಯಲಿ ನೋಡಲು ।
ಬುದ್ಧ ದೇಹಿಯೆ ಕರ್ಮಮಾಳ್ಪನ- ।
ಬುದ್ಧತನಲಕ್ಷಣವು ಕೇಳೆದು ಪಾರ್ಥ ಮನಗೊಟ್ಟು ॥ ೨೭೩ ॥

ಹುಲ್ಲುಜೊಂಬೆಯ ಮಾಡಿ ಹೊಲದಲಿ ।
ನಿಲ್ಲಿಸಿದರದು ಹೊಲದರಕ್ಷಕ- ।
ವಲ್ಲನೆನುವವೆ ತೋಳಸರಿ ಮೊದಲಾದ ಪ್ರಾಣಿಗಳು ।
ಇಲ್ಲದಿದ್ದರೆ ವಸ್ತ್ರ ಮೈಯಲಿ ।
ಬಲ್ಲನರು ಹುಚ್ಚನಿಗೆ ಪೇಳುವ- ।
ದಿಲ್ಲವಾದರೆ ನಗ್ನನೆಂಬರಿಹುದೆ ಹುಚ್ಚನಿಗೆ ॥ ೨೭೪ ॥

ಕೆಳಗೆ ರಣರಂಗದಲಿ ಗಾಯದಿ ।
ಬಳಲಿ ಬಿದ್ದಿಹ ವೀರಮಣಿಗಾ ।
ತಿಳಿಯಲಾಗದು ಗಾಯವಪ್ಪುದಾಗುವ ಮೈಯೊಳಗೆ ॥
ತಿಳಿಯಲವನೆರಡನೆಯು ಪುರುಷನು ।
ಕೊಳಲು ಬೇಕೈ ಗಣನೆ ಮಾಡಲು ।
ತಿಳಿಯಪಾಪರಿಯಾತ್ಮನಿಗೆ ತಾಂ ಮಾಳ್ಪ ಕರ್ಮಗಳು ॥ ೨೭೫ ॥

ಪತಿಮೃತಿಯು ನಂತರ ಮಹಾಸತಿ ।
ಗತಿಸುವಳು ಪತಿಸಹಗಮನಕಾ ।
ಕೃತಿಯು ಮಾಳ್ಪಳು ಧರಿಸುವಳು ಸೌಭಾಗ್ಯವಸ್ತುಗಳ ॥
ಪ್ರತಿಯೊಳವಳಿಗೆ ಜನರು ತೋರರು ।
ಚಿತೆಯ ಬೆಂಕಿಯು ತೋರದವಳಿಗೆ ।
ಪತಿಸ್ವರೂಪದಿ ಲೀನಳಾಗಿಹಳೀನ ಹೇಳುವೆನು ॥ ೨೭೬ ॥

ಪಾಸ್ಥವಾಗಲು ಸ್ವಾತ್ಮರೂಪವ ।
ಸತ್ತಿತಲ್ಲವೆ ದೃಶ್ಯದೃಶ್ಯಕೆ ।
ಶಕ್ತನಲ್ಲಾ ತಿಳಿಯಲಿಂದ್ರಿಯಚೇಷ್ಟಿತಂಗಳನು ॥
ಹತ್ತಿಲಿರುವವರಿಂಗೆ ಶರಧಿಯು ।
ವಿಸ್ತರದ ತೆರೆ ಸಣ್ಣ ತೆರೆಯನು ।
ಕಿತ್ತಿ ಬಿಸುಡುವ ತೆರದಿ ತೋರ್ಪುದು ಚಿತ್ರತರನಿದಲಾ ॥ ೨೭೭ ॥

ಶತ್ತ್ವ ನೋಡಲು ಯಾವ ತೆರೆಯದು ।
ಕೆತ್ತಿ ಬಿಸುಡುವುದಾವ ತೆರೆಯನೆ- ।
ನುತ್ತ ಹೇಳಲು ಶಕ್ಯವೇ ಕಲಿಪಾರ್ಥ ನೋಡಿದಿಯಾ ॥
ಪ್ರಾಪ್ತವಾಗಲು ಸ್ವಾತ್ಮಜ್ಞಾನವು ।
ಯೆತ್ತಣಿಂದಾ ದ್ವೈತ ಬರುವುದು ।
ಕೆತ್ತಿ ಬಿಡ ಬೇಕೆಲ್ಲ ಕರ್ಮವೆನುತ್ತ ತೋರದಲಾ ।। ೨೭೮ ॥

ಚಿನ್ನದಿರುವುದು ದೇವಿಮೂರ್ತಿಯು ।
ಚಿನ್ನದೇ ಮೇಣಾ ತ್ರಿಶೂಲವು ।
ಚಿನ್ನದಿಂದಲೆ ಮಾಡಿರುವರಾ ಅಸುರಮಹಿಷನನು ॥
ಭಿನ್ನ ಭಿನ್ನ ಪ್ರಕಾರದಿಂದೀ- ।
ಕಣ್ಣ ಮುಂದಾಡುವುದು ಭಕ್ತರ ।
ಚಿನ್ನ ದೃಷ್ಟಿಯಲೊಂದೆ ಸರ್ವವು ಮೂರ್ತಿಮೊದಲಾಗಿ
॥ ೨೭೯ ॥

ಒಂದು ಕಡೆಗೆ ಸರೋವರವು ಮ- ।
ತ್ತೊಂದು ಬದಿಯಲ್ಲಗ್ನಿಕುಂಡವು ।
ಸುಂದರಸುಚಿತ್ರಗಳು ತೋರುವುವೊಂದೆ ಗೋಡೆಯಲಿ ॥
ಮುಂದೆ ನೋಡಲು ದೃಷ್ಟಿಭೇದವಿ- ।
ದೆಂದು ನೀ ತಿಳಿ ವಸ್ತ್ರ ಹಚ್ಚಿದ- ।
ರೊಂದು ಸುಡದಿನ್ನೊಂದು ವಸ್ತ್ರವನೊದ್ದೆ ಮಾಡದಲಾ
॥ ೨೮೦ ॥

ಜ್ಞಾನವಾಗಲು ತಾನು ತೊರೆದಭಿ- ।
ಮಾನ ಕರ್ಮವ ಮಾಳ್ಪನದು ಕ- ।
ರ್ಮಾನುಸಾರದಿ ಪೂರ್ವಸಂಚಿತದಂತೆ ಹುಟ್ಟುವುದು ॥
ಹೀನಬುದ್ಧಿಕನಿದನು ತಳಿಯದೆ ।
ತಾನೆ ಕರ್ಮದ ಕರ್ತನೆನುವನು ।
ಕ್ಷೋಣಿಯಲಿ ನಿಜತತ್ತ್ವ ತಿಳಿಯೈ ಕಲಿಧನಂಜಯನೆ
॥ ೨೮೧ ॥

ಪಾರ್ಥ ಕೇಳ್ಕೆ ಜ್ಞಾನಿಯಾತನು ।
ಭೂತಳದಿ ಕರ್ಮವನೆ ಮಾಡಲು ।
ಘಾತವಾದೊಡದೇನು ಹೇಳಲು ಬಾರದಾತೆರದಿ ॥
ದ್ವೈತಭಾವವ ಮರೆತು ಜಗವು ಸ- ।
ಮಸ್ತವದ್ವೈತದಲಿ ಮುಳುಗಿರೆ ।
ಮಾತು ಸಲ್ಲುವುದೇನು ಯಾತರ ಘಾತ ಮಾಡುವನು
॥ ೨೮೨ ।।

ತರಣಿಗಾ ಕತ್ತಲೆಯು ದೃಗ್ಗೋ- ।
ಚರಕೆ ಬರುವುದೆ ನೋಡಲೆತ್ನಿಸೆ ।
ಮರಳಿ ಕತ್ತಲೆ ದೂರಮಾಡೆಂಬರುಹುದು ಹೇಗೆ ॥

ದುರಿತವುನ್ಯಾದ ಗಂಧಸ್ಪರ್ಶವ- ।
ನರಿಯದಾತನು ಜ್ಞಾನಿಯೊಪರಿ ।
ಬರುತ ಗಂಗೆಯ ಸೇರಲೆಲ್ಲವು ನೀರು ಪಾವನವು ।। ೨೮೩ ॥

ಸೇರಲಾ ದಹನನನು ದಹನನು ।
ಯಾರು ಯಾರನು ಸುಡುವನೆಂಬರು ।
ಕ್ರೂರಶಸ್ತ್ರವು ಶಸ್ತ್ರವನೆ ಕಡಿಯುವುದೆ ಕೌಂತೇಯ ॥
ಚಾರುಸ್ವಾತ್ಮಸ್ವರೂಪದಿಂದಿರ- ।
ಲಾರದ್ವೈ ಭಿನ್ನತ್ವ ಕರ್ಮ- ।
ಕ್ಕಾರಿಗೀ ಪರಿ ಜ್ಞಾನವಾಗಲು ಬದ್ಧನೆನಿಸುವನೆ ।। ೨೮೪ ॥

ಕರ್ತೃಕಾರ್ಯಕ್ರಿಯೆಗಳೆಂಬ ವಿ- ।
ಚಿತ್ರ ತ್ರಿಪುಟಿಯು ತಾನೆಯಾಗಲು ।
ಮತ್ತೆ ತಾನಾಗುವನೆ ಬದ್ಧನು ದೇಹಕರ್ಮದಲಿ ॥
ಕರ್ತನೆಂಬುವ ಕಲ್ಪನೆಯ ಜೀ- ।
ವಾತ್ಮನಾಧ್ಯತೆಯಿಂದ ಸಾಧಿಸಿ ।
ಮತ್ತೆ ಹತ್ತಿಂದ್ರಿಯದಿ ಧರಿಪನು ಪಂಚಹೇತುಗಳ ॥ ೨೮೫ ॥

ದಾರಿ ನ್ಯಾಯಾನ್ಯಾಯವೆಂಬ ವಿ- ।
ಚಾರದಿಂ ಜೀವಾತ್ಮ ಕ್ಷಣದಿ ತ- ।
ಯಾರಿಸುವನ್ಯೆ ಕರ್ಮಭುವನಂಗಳನು ಕಲಿಪಾರ್ಥ ॥
ಯಾರು ಪೇಳ್ವರು ಸರ್ವಕರ್ಮವ- ।
ನಾರಭಿಸುತಿಹನಾತ್ಮನೆನಿತಲಿ ।
ಯಾರು ಮನ್ನಿಪರಿವನು ಸಾಹ್ಯವ ಮಾಳ್ಪನೆನ್ನಿತಲಿ ॥ ೨೮೬ ॥

ಇರುವನವನ್ಯೆ ಸಾಕ್ಷಿಭೂತನು ।
ಯಿರುವನವನ್ಯೆ ಜ್ಞಾನರೂಪನು ।
ಕರೆವನಾದರು ಕರ್ಮವೃತ್ತಿಯ ನಿತ್ಯಸಂಕಲ್ಪ ॥
ಭರದೊಳಾಜ್ಞೆಯನೆಂತು ಕೊಡುವನು ।
ನರರು ಶ್ರಮದಿಂ ಮಾಳ್ಪ ಕರ್ಮವ ।
ನಿರುತವೀತನು ಮಾಳ್ಪನ್ಯೆ ಶ್ರಮವಿಲ್ಲದಲೆ ಪಾರ್ಥ ॥ ೨೮೭ ॥

ಯಾರಿಗೀಪರಿಶುದ್ಧ ಜ್ಞಾನದ ।
ಚಾರು ಸ್ವಾತ್ಮಸ್ವರೂಪ ಹೊಳೆವುದೊ ।
ಧಾರುಣಿಯೊಳವನಿಂಗೆ ಕರ್ಮವು ಬಂಧನವೆ ಹೇಳು ॥
ಚಾರುತರದಜ್ಞಾನಪಟದಲಿ ।
ತೋರುತಿಹ ವಿಪರೀತಚಿತ್ರವ ।
ದೂರ ಮಾಳ್ಪ ಪ್ರಸಿದ್ಧತ್ರಿಪುಟಿಯ ಕೇಳು ಕೌಂತೇಯ ॥೨೮೮॥

ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ ।
ಕರಣಂ ಕರ್ಮ ಕರ್ತೇತಿ ತ್ರಿವಿಧಃ ಕರ್ಮಸಂಗ್ರಹಃ ॥ ೧೮ ॥

ಅರಿಯಲಾ ಕಲಿಪಾರ್ಥ ಯೊಜಗ- ।
ಕಿರುವುದೈ ತ್ರಿಪುಟಿಯದು ಕಾರಣ ।
ನರನೆ ತ್ರಿವುಟಿಯ ಪೇಳ್ವೆ ಜ್ಞಾನ ಜ್ಞೇಯ ಜ್ಞಾತನಲಾ ॥
ಇರುವುದಿದರಿಂ ಕರ್ಮ ದುರ್ಘಟ- ।
ವಿರುವುದಿದು ನಿಃಸಂಶಯವು ನೀ- ।
ನರಿಯಲಾ ನಿನಗಾನು ಪೇಳುವೆ ತ್ರಿವುಟಿ ವಿಸ್ತರಿಸಿ ॥೨೮೪ ॥

ಜ್ಞೇಯವಸ್ತುವ ಹೋಗಿ ಮುಟ್ಟಲು ।
ನಾಯುಪ್ರದು ಗತಿ ಮುಂದೆ ಕುಂಠಿಸಿ ।
ಯಾಯದಿಂದಲಿ ನಾಮಕರಣವ ಮಾಳ್ಪುದಾಕ್ಷಣದಿ ॥
ಗೇಯವಿದು ನಾಮಾಸ್ಯಜ್ಞಾನವು ।
ಜ್ಞೇಯವೆರಡಿತಿಹ ಲಕ್ಷಣಂಗಳ ।
ಬೀಯವಿಲ್ಲದೆ ನಿನಗೆ ಪೇಳುವೆ ಕೇಳು ಕಲಿಪಾರ್ಥ ॥ ೨೮೪ ॥

ತರಣಿಯನು ಹೋಲುವನು ಜೀವನು ।
ಕಿರಣಗಳು ಜ್ಞಾನೇಂದ್ರಿಯಂಗಳು ।
ಪೆರೆವುದೈ ವಿಷಯಸ್ವರೂಪದ ಕಮಲಗಳ ವ್ರಾತ ॥
ಕಿರಣ ಜೀಳಲು ವಿಷಯಕಮಲದ ।
ಲರಳುವುವು ಮೊಗ್ಗೆಗಳು ಕಮಲದ ।
ಪರಿಯು ನೋಡಿದಿಯಾ ಧನಂಜಯ ವಿಷಯವೃಂದವನು
॥ ೨೮೦ ॥

ಇರುವುದೈ ಜ್ಞೇಯಕ್ಕೆ ಧರ್ಮಗ- ।
ಳುರುತರದ ಪಂಚಸ್ಯಕಾರಪ್ರ ।
ನರನೆ ಶಬ್ದ ಸ್ಪರ್ಶ ರೂಪವ ರಸವ ಪೇಗ್ಗಂಧ ॥
ನರನೆ ಮಾನಿನಮಣ್ಣ ದೈಗ್ಗೀ- ।
ಚರಕೆ ಬರಲದು ಪರಿಪಯಿಲದು ।
ನಿರುತವಿಂದ್ರಿಯಕರವ ಕೊಡುತಿಪುದೈದುತೆರದಿಂದ ॥ ೨೮೫ ॥

ಇರುವನಥನಾ ಜೀವರಾಜನು ।
ತುರಗವಿರುವುದು ದೇಹವದ ಜೋ- ।
ಗಿರವ ಹಾಕದಲೇರಿ ಧೀರತೆಯೆಂದ ಕೈಯೊಳಗೆ ॥
ಧರಿಸುತಿಂದ್ರಿಯಭಾಲೆಯನು ಬಹು- ।
ಸರಸದಿಂ ಪಾಳೆಯನಿಡುವನಾ- ।
ನರನೆ ವಿಷಯಸ್ವರೂಪದೇಶವ ಸೂರೆಗೊಳ್ಳುವನು ॥೨೮೬॥

ಬರುವುದೈ ಕರ್ಣಕ್ಕೆ ಶಬ್ದವು ।
ಅರಿಯುಪ್ರದು ರಸವನ್ನು ರಸನೆಯು ।
ಒರುವುದರವಾ ರೂಪದಿಂದಲಿ ನೇತ್ರಯುಗ್ಮಕ್ಕೆ ॥
ಅರಿಯುಪ್ರದು ಗಂಧವನು ನಾಸಿಕೆ ।
ಒರುವುದೈ ಚರ್ಮಕ್ಕೆ ಸ್ಪರ್ಶದ ।
ಅರವ ಕೇಳೀತೆರದಿ ಪಂಚೇಂದ್ರಿಯಸಹಜವೆಲ್ಲ ॥ ೨೮೭ ॥

ಪರಿಪರಿಯಲಿಂದ್ರಿಯಸಮೂಹದಿ ।
ಪರಿಪರಿಯ ಸುಖದುಃಖ ರಸಿಸುತ ।
ತರಿಸಿ ಜ್ಞಾನವ ಗಾಢನಿದ್ರೆಯ ನಾಶಮಾದುವನು ॥
ಪೆರೆವನದರಿಂ ಜ್ಞಾತನೆಂಬುವ ।
ಸರಸಹೆಸರಲಿ ಜೀವನೀಪರಿ ।
ಯಿರುವುದರವಿದನೆಲ್ಲ ಕರೆವರು ಜ್ಞಾನವೆನ್ನುತಲಿ ॥ ೨೮೮ ॥

ಇರುವುದೊಂದೇ ಜ್ಞೇಯವಾದರು ।
ಪರಿಪರಿಯ ಸ್ವೇಂದ್ರಿಯದ ದ್ವಾರದಿ ।
ಒರುವುದೈ ಪರಿಪರಿಯ ಜ್ಞಾನವು ಪಂಚಸಿದ್ಧವಾಗಿ ॥
ಶರಧಿಯನು ಸೇರಲ್ಕೆ ನದಿಗಳು ।
ಮುರಿವುವೋಘಗಳವುಗಳಾಪರಿ ।
ಬರಲು ಫಲ ಧಾನ್ಯಕ್ಕೆ ಒರುವುದು ಮರಣ ನಿದಗಳಿಗೆ ॥೨೮೭॥

ಉದುಭವಿಸಿಯಜ್ಞಾನದುದರದೊ- ।
ಳಿದುವೆ ಜ್ಞೇಯದ ವಿಷಯಕಲ್ಲನು ।
ಮುದದೊಳಿಡುತಲಿ ಹಿಂದಕಿಡುವುದು ಜ್ಞಾತೃಜೀವನನು ॥
ಇದರನಂತರ ಜ್ಞಾತೃಜ್ಞೇಯ- ।
ಕ್ಕೊದಗುವುದು ವ್ಯವಹಾರವದನೀ- ।
ಹದನದಿಂದಲಿ ನಡುವೆ ನಿಂತದ ನೋಡುತಿರುವನಲಾ
॥ ೨೮೩ ॥

ಸೇರಲಾ ಪಾಂತಸ್ಥನೂರನು ।
ತೀರುವುದು ಸಂಚಾರಭ್ರಮಣವು ।
ಧಾರುಣಿಯಲಾಪರಿಯಲಿಂದ್ರಿಯಮಾರ್ಗದಲ್ಲಿರುವ ॥
ಸೇರಲಾತ ಜ್ಞಾತ ಜ್ಞೇಯವ ।
ತೀರುವುದು ಹೋರಾಟ ಜ್ಞಾನದ ।
ಧೀರರಿದ ಕರೆಯುವರು ಜ್ಞೇಯವಿದೆಂಬ ಹೆಸರಿನಲಿ
॥ ೨೮೪ ॥

ಜ್ಞಾನ ಜ್ಞಾತೃ ಜ್ಞೇಯ ತ್ರಿವುಟಿಯ ।
ನಾನು ಹೇಳಿದೆ ನಿನಗೆ ವಿವರಿಸಿ ।
ನೀನಿದನು ಕೇಳಿದಿಯಲಾ ಬಹುಸಾವಧಾನ್ಯದಲಿ ॥
ಮೇಣು ನಿನಗಾಂ ಪೇಳ್ವೆ ತ್ರಿವುಟಿಯು ।
ತಾನೆ ಸರ್ವಪ್ರಕಾರ ಕರ್ಮಕೆ ।
ಕ್ಷೋಣಿಯಲಿ ನಿಜವಾಗಿ ಕಾರಣಭೂತವಾಗುವುದು
॥ ೫೯೪ ॥

ಇರುವುದೈ ಶಬ್ದಾದಿಪಂಚಕ- ।
ವಿರುವುದಿದುವೇ ಜ್ಞೇಯವಿದರೊಳು ।
ಯಿರುವುದಿದರಲಿ ಪ್ರೀಯವಪ್ರಿಯವೆರಡರಲ್ಲೊಂದು ॥
ಭರದಿ ಜ್ಞಾತಗೆ ಜ್ಞೇಯವಸ್ತುವ- ।
ನಿರದೆ ಕಿಂಚಿತ್ತೋರಿಸಲು ಮ- ।
ತ್ತಿರದೆ ತ್ಯಜಿಸಲು ಗ್ರಹಿಸಲುದ್ಯುಕ್ತತೆಯ ತೋರ್ಪನಲಾ
॥ ೫೯೫ ॥

ನೀರಿನಲಿ ಮಿನುಗಳ ನೋಡಲು ।
ಹಾರುವುದು ಬಕ ಮಿನ ಹಿಡಿಯಲು ।
ತೋರಲಾನಿಧಿ ಕೊಳ್ಳುವರೆ ತಾಂ ಬಡವನೋಡುವನು ॥
ನಾರಿತರುಣಿಯ ನೋಡಲಾಕ್ಷಣ ।
ಹಾರುಪನು ಕಾಮುಕನು ಹಿಡಿಯಲು ।
ನೀರು ಕೆಳಗೋಡುವುದು ನೆಲದಲಿ ನೋಡು ಕೌಂತೇಯ
॥ ೫೯೬ ॥

ಸುಮನದ ಸುವಾಸವನು ಕೊಳುವರೆ ।
ಭ್ರಮರತತಿಯೋಡುವುದಲಾಪರಿ ।
ವಿಮಲ ತಾಯಿಯ ಹಾಲ ಕುಡಿಯಲಿಕೋಡುವುದು ಕರುವು॥
ಸುಮನಸರ ಸ್ವರ್ಗದಲಿ ವಾಸಿಪ ।
ಕಮಲಮುಖದಪ್ಸರೆಯರೆಲ್ಲರು ।
ತಮಗೆ ಸಿಗಬೇಕೆಂದು ಲೋಕದಿ ಯಜ್ಞ ಮಾಡುವರು
॥ ೫೯೭ ॥

ಪಾರಿಪಾಳವು ಗಗನದಲ್ಲಿ ವಿ- ।
ಹಾರ ಮಾಡುವ ವೇಳೆಯಲಿ ನಿಜ- ।
ಪಾರಿವಾಳತಿಯನ್ನು ನೋಡಿಯೆ ಹಾರಿ ಬರುವುದಲಾ ॥
ಚಾರುಮೇಘದ ಗರ್ಜನೆಯ ಮದ- ।
ವೇರಿ ಬರಲದ ಕೇಳುತಲ್ಲಿ ಮ- ।
ಯೂರನಾಟ್ಯವನಾಡುವುದು ಬಹು ಚೋದ್ಯತನದಿಂದ
॥ ೫೯೮ ॥

ಕೇಳು ಜ್ಞಾತೃಜ್ಞಾನಜ್ಞೇಯದ ।
ಮೇಳದಿಂದಲಿ ಸರ್ವಕರ್ಮಗ- ।
ಳೇಳುವುವು ತ್ರಿವುಟಿಯೆ ಕಣಾ ಕರ್ಮಕ್ಕೆ ಕಾರಣವು ॥

ಬೀಳಲದರಲಿ ಪ್ರೀತಿ ಜ್ಞಾತಗೆ ।
ಹೇಳಲೇನದ ಭೋಗಿಸಲು ಕ್ಷಣ ।
ಕಾಲಮಾನವು ಖಪಿಸದಲೆ ಹಾರುವುದು ಮನವವನ ॥ ೫೯೪ ॥

ಪ್ರೀತಿಪಾತ್ರದ ವಿಷಯವಾದರೆ ।
ಜ್ಞಾತನಿಂಗದ ತ್ಯಾಗಮಾಡುವ ।
ಮಾತು ಸಲ್ಲದು ಕ್ಷಣವು ಯುಗದೋಪಾದಿ ತೋರುವುದು ॥
ಭೂತಳದಿ ಮಲಗಿರುವ ಸರ್ಪವ ।
ಭೀತಿಯಿಲ್ಲದೆ ನೀಲಹಾರವು ।
ಶೀತಲವು ಮೃದುವೆಂದು ಭಾವನೆಯಿಂದ ಸಂತಸದಿ ॥ ೫೯೫ ॥

ಕರದೊಳೆತ್ತಲು ಹಾರವಲ್ಲಾ ।
ಮೆರೆವುದಿದು ವಿಷಧಾರಿಸರ್ಪವು ।
ಬರುವುದಾ ಭಾವನೆಯು ಬಹುಭೀತಿಯಲಿ ನಡುಗುವನು ॥
ಪರಿಯಿದಲ್ಲಾ ಪ್ರೀಯವಪ್ರಿಯ ।
ಬರಲು ಜ್ಞಾತನ ದೃಷ್ಟಿಪಥದಲಿ ।
ನರನೆ ಕೇಳೀಸ್ಥಿತಿಯು ಬರುವುದು ಜ್ಞೇಯಲಕ್ಷಣವು ॥ ೫೯೬ ॥

ನರನೆ ಕೇಳಿದರಿಂದ ಕರ್ಮವ ।
ನರನು ಮಾಳ್ಪನು ಪ್ರೀಯವಸ್ತುವ ।
ಕರದಿ ಕೊಳುವನು ತ್ಯಜಿಸುವನು ಕೇಳಪ್ರಿಯದ ವಿಷಯ ॥
ಇರುವುದೀಪರಿ ಕರ್ಮಸಂಭವ ।
ನರನೆ ಕೇಳ್ನಿನಗೊಂದು ವಿಷಯವ- ।
ನೊರೆವೆ ಜ್ಞಾತನ ಜ್ಞೇಯಲಕ್ಷಣ ವಿವರಿಸಲು ಮುದದಿ ॥ ೫೯೭ ॥

ಕುಸ್ತಿಯಭಿರುಚಿಯಿರುವ ನರನು ಸ- ।
ಮಸ್ತದಳಪತಿಯಾಗಿ ತಾನಾ- ।
ಹಸ್ತಿರಥವಾಜಿಗಳನೇರಿರಲೇನ ಹೇಳುವೆನು ॥
ಕುಸ್ತಿಮಾಡುವ ಮಲ್ಲನನು ನೋ- ।
ಡುತ್ತಿಲೊಮ್ಮೆಗೆ ಭೂಮಿಗಿಳಿದಾ- ।
ಸಕ್ತಿಯಿಂದಲೆ ಕುಸ್ತಿಮಾಡಲಿಕವನು ಕರೆಯುವನು ॥ ೫೯೮ ॥

ಜ್ಞಾನನಿಷ್ಠಪರಿಯಿರುವನವನಿಂ- ।
ಗೇತಕೀ ಕರ್ತೃತ್ವದಾಶೆಯು ।
ಪ್ರೀತಿಯಿಂದಲೆ ಬಡಿಸಲೆಲೆಯಲ್ಲುಣ್ಣದಾ ಊಟ ॥
ಏತಕ್ಕೆ ಹವ್ಯಾಸದಡಿಗೆಯ- ।
ನಾತನಾಯೆಲೆ ಬಿಟ್ಟು ಹೋಗಿಯೆ ।
ಯೇತಕಡಿಗೆಯ ಮಾಳ್ಪನೈ ಶತಮೂರ್ಖನಂದದಲಿ ॥ ೫೯೯ ॥

ತನಗೆ ಪುಷ್ಪಸರಾಗ ಬೇಕೆಂ ।
ದೆಸುತ ತಿನುವರೆ ಭ್ರಮರವೈ ತಾಂ ।
ವನವ ಮೇಣುಪವನವ ಮಾಡುವುದೇನು ಗಿಡಹಚ್ಚಿ ॥
ತನಗೆ ದೇಗುಲ ಬೇಕೆನುತ ದೇ-।
ವನೆ ಕಣಾ ದೇಗುಲವ ಕಟ್ಟುವ-।
ನೆನುವನೇ ಕಟ್ಟಿದರೆ ಮೂರ್ಖರ ಲಕ್ಷಣವದಲ್ಲೈ ॥ ೫೧೦ ॥

ಒರೆಯ ಹಚ್ಚುವ ಕಲ್ಲು ತನ್ನಾ ।
ಪರಿಯ ಬಿಡುತಲಿ ಚಿನ್ನವಾಗಲು ।
ನರನೆ ಕೇಳೆದು ನ್ಯಾಯವೇ ವ್ಯವಹಾರಚತುರತೆಯೆ ।'
ನರನೆ ಕೇಳ್ ವಿಷಯೇಚ್ಛೆಯಿಂದಲಿ ।
ಭರದಿ ಕೇಳಜ್ಞಾತ ತನ್ನಯ ।
ಅರಿವಿನಿಂದ್ರಿಯಗಳಿಗೆ ಪೂರಯಿಸುತ್ತಲಿ ತದಿಚ್ಛೆ ' ೫೧೧ ॥

ಕರ್ತನೆಂಬುವ ಹೆಸರ ಪಡೆವನು ।
ಜ್ಞಾತ ತಾನಿಹೆನೆಂದು ಮರೆತಾ- ।
ಕರ್ತನಾಗಿಯೆ ಜ್ಞಾನನಾಧನವಾಗಿ ಕೂಡುವನು ॥
ಚಿತ್ರನಿದು ಕೇಳಾಯಿತಾಕ್ಷಣ ।
ಧಾತ್ರಿಯಲ್ಲೀ ಜ್ಞೇಯಕಾರ್ಯವು ।
ಒತ್ತು ಜ್ಞಾನತ್ರಿಪುಟಿಗೀಪರಿ ಸಾಲಟವು ಪಾರ್ಥ । ೫೧೨ ॥

ನೇತ್ರಕಿರುತಿಹ ದಿವ್ಯತೇಜವು ।
ರಾತ್ರಿಯಲ್ಲುಪಯೋಗವೇನದು ।
ಚಿತ್ರವಲ್ಲಾ ದೈವ ತಾಂ ಪ್ರತಿಕೂಲವಾಗಿರಲು ॥
ಧಾತ್ರಿಯಲಿ ಬದಲುವುದು ಧನಿಕರ ।
ಚಿತ್ರತರದ ವಿಲಾಸವೆಲ್ಲವು ।
ಒತ್ತು ಜೆಂದ್ರಸಿಗಸಿತಪಕ್ಷದಿ ಕ್ಷೀಣತೆಯು ಮಾನ ॥ ೫೧೩ ॥

ಜ್ಞಾತನೀಪರಿಯಿಂದ್ರಿಯಂಗಳ ।
ಮಾತ ಕೇಳುತಲವುಗಳಿಚ್ಛೆಯ ।
ಪ್ರೀತಿಯಿಂದಲಿ ಪೂರಯಿಸುವ ನಿಜಸ್ಥಿತಿಯು ಮರೆತು ॥
ಜ್ಞಾತನಿಗೆ ಕರ್ತೃತ್ವವೆಂಬುವ ।
ಘಾತಕದ ಅಭಿಮಾನ ಪುಟ್ಟಿತು ।
ಮಾತ ಕೇಳೈ ಪಾರ್ಥ ಪೇಳುವೆನವನ ಲಕ್ಷಣವ ॥ ೫೧೪ ॥

ನರನೆ ನೋಡಂತಃಕರಣಕಿರು-।
ತಿರುವುವೈ ವೃತ್ತಿಗಳು ನಾಲ್ಕವು ।
ಅರುಹುವೆನು ಮನ ಬುದ್ಧಿ ಚಿತ್ತವು ಮೇಣಹಂಕಾರ ॥

ಇರುವುವೈ ಪಂಚೇಂದ್ರಿಯಂಗಳು ।
ಮೆರೆವ ತ್ವಜ್ಜೇತ್ರಗಳು ನಾಲಿಗೆ ।
ಯಿರುವುವಾಪರಿ ಮೂಗುಕಿವಿಗಳು ನೋಡು ಪಂಚಕವು । ೫೧೫॥

ಇರುವುದಂತಃಕರಣನೈತ್ರಿಯ ।
ತೆರದಿ ಜೀವಕೆ ಕರ್ಮಕಾರ್ಯವು ।
ಸ್ಫುರಣೆಯನು ತಾನಿತ್ತು ಕರ್ಮವ ನಾಗಿಸುವ್ರದುದೆ ॥
ಚರಿಸಲಾಕರ್ಮವನು ಸೌಖ್ಯವು ।
ಭರದಿ ಒರುತಿಹುದೆಂದು ಯೋಚಿಸಿ ।
ಚರಿಸಲಿಕೆ ಕರ್ಮವನು ತತ್ಫಲನಿಹನು ಜೀವನಲಾ ॥ ೫೧೬ ॥

ಹತ್ತುಯಿಂದ್ರಿಯಗಳ ಸಮೂಹವ ।
ಕಿತ್ತಿ ಮೇಲೆಬ್ಬಿಸುತ ಕರ್ಮಸ್ರ-।
ವೃತ್ತಿಯನು ತೋರಿಸುವನೈ ಜೀವನು ಧನಂಜಯನೆ ॥
ಪ್ರಾಪ್ತವಾಗುವ ತನಕ ಸುಖವಶ- ।
ಸಕ್ತಿಯಿರುವುದು ಕರ್ಮತತಿಯಲಿ ।
ಪತ್ತೆ ಜಾರ್ಯೇಂದ್ರಿಯಗಳನು ಹಚ್ಚುವನು ತರ್ಮನೈ ' ೫೧೭ ॥

ಜಾರದಾಪರಿ ಸುಖವು ದುಃಖವು ।
ನೇರುವುದು ತನಗೆಂದು ಮನದಲಿ ।
ತೋರಲದ ಸಂಹಾರ ಮಾಡುವ ಯತ್ನಮಾಡುವನು ॥
ಉರಚರನರಾ ತೆರಿಗೆ ಕೊಡದಿರೆ ।
ಧಾರುಣಿಪನದನೆಲ್ಲ ಕೊಳ್ಳುವ ।
ಪ್ರಾರಭಿಸುನಾಸಕ್ತಿಯಿಂದಲಿ ನೋಡಲಾ ಪರಿಯು '। ೫೧೮ ॥

ಈ ತೆರದಿ ಸುಖ ದೊರೆಯುಲೋಸುಗ ।
ಪಾರ್ಥ ದುಃಖವ ನಿವಾರಿಸುವ ಸ- ।
ದ್ಭೋತು ಪಿಡಿದೆತ್ನಿಪನು ಜೀವನು ರಾತ್ರಿದಿನವೆನದೆ ॥
ಜ್ಞಾತನೀಪರಿಯಿಂದ್ರಿಯಂಗಳ ।
ವ್ಯಾತಕಾದರೆ ನೀತನದರಿಂ ।
ಭೂತಳದೊಳವಗಾಯಿತಭಿಧೆಯು ಕರ್ತನೆಂಬುದು ॥ ೫೧೯ ॥

ಕರ್ತನೀಪರಿಯಿಂದ್ರಿಯಂಗಳ ।
ನಿತ್ಯನೇಗಿಲಿನಂದದಿಂದಲಿ ।
ವರ್ತಿಸುವನದರಿಂದ ಕರಣಗಳೆಂದು ಹೆಸರಾಯ್ತು ॥
ಕರ್ತನೀಪರಿ ಕರಣಮೂಲಕ ।
ವಿಸ್ತರಿಸುತಿಹ ಕ್ರಿಯೆಗಳೆಲ್ಲಿಕೆ ।
ಒತ್ತು ಕೇಳೈ ಕರ್ಮವೆಂಬಭಿಧಾನ ಕಲಿಪಾರ್ಥ ॥ ೫೨೦ ॥

ನೇಸರಿನ ಪ್ರಭೆಯಿಂದ ಸೂರ್ಯಪ್ರ-।
ಕಾಶ ವ್ಯಾಪಿಸಿ ಜಗದೊಳಿಹುದಾ-।
ಕಾಶದಲ್ಲವಕಾಶದಲಿ ಚಂದಿರನ ಚಂದ್ರಿಕೆಯು ॥
ಅಸವಿತನದಿ ಕಬ್ಬುರಸವದು।
ಭಾಸುರದ ವಿಸ್ತಾರದಲಿ ಲತೆ।
ವಾಸವಾತ್ಮಜ ಆಭರಣದಲಿ ಬುದ್ಧಿಕೌಶಲ್ಯ ॥ ೩೨೧ ॥

ನರನೆ ಕಾರ್ಯಾದಿ ವ್ಯಾಪಿಸಿಯೆ ತಾ-।
ನಿರುವುದೈ ಕ್ರಿಯೆಯದಕೆ ಹೆಸರೈ।
ಬರುವುದಲ್ಲಾ ಕರ್ಮವೆನುತಲಿ ತಿಳಿಯೆ ಕಲಿವಾರ್ಥ ॥
ಅರುಹಿದೆನು ನಾ ನಿನಗೆ ಪಾರ್ಥನೆ।
ಕರಣಕರ್ತೃಕ್ರಿಯೆಯ ಲಕ್ಷಣ-।
ವರಿಯಲಾಪರಿ ಜ್ಞಾನ ಜ್ಞೇಯ ಜ್ಞಾತೃ ತ್ರಿಪುಟಿಯದು ॥ ೩೨೨ ॥

ಇರುವುದೈ ಕಲಿವಾರ್ಥ ಮೊದಲನೆ।
ಕರಣಕರ್ತೃಕ್ರಿಯೆಯ ತ್ರಿಪುಟಿಯು।
ಮೆರೆವ ಕರ್ಮದ ಸಂಚಯವಲಾ ನೋಡು ಮನಗೊಟ್ಟು ॥

ಇರುವುದೆರಡನೆ ಜ್ಞಾನತ್ರಿಪುಟಿಯು।
ಮೆರೆವ ಕರ್ಮಪ್ರವೃತ್ತಿಕಾರಕ।
ವರಿಯಲಾ ನೀ ಭೇದ ವಿಸ್ತರಿಸಿದೆನು ನಾ ನಿನಗೆ ॥ ೩೨೩ ॥

ಅಡಗಿಹುದು ಬೆಂಕಿಯಲಿ ಧೂಮವು।
ಅಡಗಿಹುದು ಬೀಜದಲಿ ವೃಕ್ಷವು।
ಅಡಗಿರುವುದಾ ಪರಿಯಲೀ ಮನದಲ್ಲಿ ಯಿಚ್ಛೆಯಲಾ ॥
ಪೊಡವಿಯಲಿ ಖನಿಯಲ್ಲಿ ಚಿನ್ನವು।
ಪಡೆವರಾಪರಿ ಕರ್ಮತ್ರಿಪುಟಿಯ-।
ಲಡಗಿಹುವು ಕ್ರಿಯೆಕರ್ತಕರ್ಮವು ನೋಡು ಕೌಂತೇಯ ॥ ೩೨೪ ॥

ನರನೆ ತಾನೀಕರ್ಮವನು ಮಾ-।
ಡಿರುವೆನೆಂದಭಿಮಾನ ಹಿಡಿಯಲು।
ಒರುವುವೆಲ್ಲಾ ಕರ್ಮ ಹತ್ತರ ನೆನಸುವಂದದಲಿ ॥
ಇರುವನಾತ್ಮನು ಪಾರ್ಥ ಕರ್ಮದ।
ಹೊರಗೆ ದೂರಕೆ ಮೇಲೆಮೇಲಿಂ-।
ದೊರೆವ ಕಾರಣ ಕಾಣೆ ನೀನರಿತಿರುವಿ ಯಿದನೆಲ್ಲ ॥ ೩೨೫ ॥

ಜ್ಞಾನಂ ಕರ್ಮ ಚ ಕರ್ತಾ ಚ ತ್ರಿಧೈವ ಗುಣಭೇದತಃ।
ಪ್ರೋಚ್ಯತೇ ಗುಣಸಂಖ್ಯಾನೇ ಯಥಾವಚ್ಛೃಣು ತಾನ್ಯಪಿ ॥ ೧೯ ॥

ವಿಸ್ತರಿಸಿದೆನು ನಿನಗೆ ನಾನತಿ-।
ಚಿತ್ರತರದಿಂ ಪಾರ್ಥ ಪರಿಕಿಸೆ।
ಕರ್ತ ಕರ್ಮ ಜ್ಞಾನ ಮೂರಿವ್ವ ಮೂರುಗುಣದವಲಾ ॥
ಮತ್ತೆ ನಿನಗಾಂ ಪೇಳ್ವೆ ಗುಹ್ಯವ।
ಚಿತ್ತವಿಸು ಕಲಿವಾರ್ಥ ಯಿದರಲಿ।
ವ್ಯರ್ಥ ವಿಶ್ವಾಸವನು ಮಾಡದಿರಯ್ಯ ಮೂರರಲಿ ॥ ೩೨೬ ॥

ಧರಣಿಯಲ್ಲಿ ತಮೋರಜಂಗಳು।
ನರನೆ ಬಂಧನಕಾರಕಂಗಳು।
ಯಿರುವುದೊಂದೇ ಸತ್ತ್ವಗುಣವದು ಮೋಕ್ಷಕಾರಕವು ॥
ಅರುಹುವೆನು ಸಾಂಖ್ಯದಲಿ ಬಹುವಿ-।
ಸ್ತರದಿ ಪೇಳಿದ ಸತ್ತ್ವಭೇದವ-।
ನರವು ನಿನಗಾಗುವ ಪರಿಯಲಾ ಕೇಳು ಕಲಿವಾರ್ಥ ॥ ೩೨೭ ॥

ಅರಿಯಲಾ ನಿಜ ಸಾಂಖ್ಯಶಾಸ್ತ್ರವು।
ಪರಿಪರಿಯ ಸುವಿಚಾರರೂಪದ।
ಪರಮ ಪಾಲ್ಗಡಲಲ್ಲವೇನೈ ಮೆರೆವುದತಿಗಹನ ॥

ಅರಿಯಲದು ನಿಜವಾತ್ಮಬೋಧದ।
ಸುರುಚಿರದ ಕುಮುದಿನಿಯ ಪೊಗ್ಗೆಯ-।
ನರಳಿಸುತ್ತಿಹ ಹಿಮಕರನಲಾ ಜ್ಞಾನಮುಕುಟವಲಾ ॥ ೩೨೮ ॥

ಪುರುಷಪ್ರಕೃತಿಗಳೆಂಬ ದ್ವೈತಗ-।
ಳಿರುವುವೈ ದಿನರಾತ್ರಿಯಂದದೊ-।
ಳರಿಯಲಿವು ಸಂಮಿಶ್ರವಿಹುವೈ ಜಗದಿ ನೋಡಿದರೆ ॥
ಧರೆಯಲೀ ನಿಜ ಸಾಂಖ್ಯಶಾಸ್ತ್ರವು।
ತರಣಿಯಂದದಿ ಬೇರೆಬೇರೀ-।
ಯೆರಡು ತತ್ತ್ವಂಗಳನು ವಿಂಗಡಿಸುವುದು ಕಲಿವಾರ್ಥ ॥ ೩೨೯ ॥

ಧರೆಯೊಳಿರುವುದಪಾರ ಮೋಹದ।
ಗಿರಿಯು ಯಿಪ್ಪತುನಾಲ್ಕು ತತ್ತ್ವದ।
ಪರಿಮಿತಿಯಲದ ವಿಸ್ತರಿಸಿ ಪರತತ್ತ್ವಪ್ರಾಪ್ತಿಯಲಿ ॥
ನರನೆ ಸುಖಭೋಗವನು ಕೊಡುವುದು।
ಮೆರೆವುದೀಪರಿ ಮೂರುಗುಣವಿ-।
ಸ್ತರವು ಸಾಂಖ್ಯದಿ ಪೇಳಿರುವರದ ಸ್ತವನರೂಪದಲಿ ॥ ೩೩೦ ॥

ಧಾರುಣಿಯೊಳೀ ದೃಶ್ಯವೆಂಬ ಪ್ರ- ।
ಕಾರವೆಲ್ಲಕೆ ಸತ್ತ್ವರಜತಮ ।
ಬೇರೆಬೇರೀ ಮುದ್ರೆ ಬಿದ್ದಿಹುದೇನ ಹೇಳುವೆನು ॥
ಬೇರೆಬೇರೀ ತೆರದ ಜಗವೀ- ।
ಮೂರುಗುಣಗಳಧೀನವಿಹುದೈ ।
ವಾರಿಜಾಸನ ಪಿಡಿದು ಕೀಟಕತನಕ ನೋಡಿದಿಯಾ
॥ ೩೩೧ ॥
ತೋರುತಿಹ ನಿಜ ವಿಶ್ವವೆಲ್ಲವು ।
ಮೂರುಗುಣಗಳಧೀನವಾಗಿಹ- ।
ಚಾರುತರ ಸುಜ್ಞಾನವನು ನಾ ನಿನಗೆ ಬೇಳುವೆನು ।

ಧಾರುಣಿಯಲೀ ದೃಷ್ಟಿಶುದ್ಧತೆ ।
ಸೇರಿದರೆ ತೋರುವ ಪದಾರ್ಥದ ।
ಚಾರುತರ ನಿಜಸ್ವರೂಪವು ತೋರುವುದು ನಿನಗೆ । ೩೩೨ ॥

ವಿಸ್ತರಿಸಿ ಪೇಳುವೆನು ನಿನಗಂ ।
ಪಾರ್ಥ ಸಾತ್ತ್ವಿಕಜ್ಞಾನಲಕ್ಷಣ- ।
ವೃತ್ತವೋತ್ಕೃಮವಿಹುದು ಮೋಕ್ಷಕೆ ಹಾದಿಯಾಗಿಹುದು ॥
ಭಕ್ತವತ್ಸಲ ನಿತ್ಯನಿರ್ಮಲ ।
ಮುಕ್ತಿದಾಯಕ ಕೃಷ್ಣನೂರುತಿ ।
ವಿಸ್ತರಿಸಿ ಪೇಳಿದನು ಪಾರ್ಥನಿಗೆಂದ ಸಂಜಯನು ॥ ೩೩೩ ॥

ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।
ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಮ್ ॥ ೨೦ ॥

ನರನೆ ಕೇಳೀ ಶುದ್ಧಸಾತ್ತ್ವಿಕ ।
ಪರಮ ಜ್ಞಾನೋದಯವು ಬರಲಾ ।
ಕರಗಿ ಹೋಗುವುದರೊಳಗೆ ನಿಜ ಜ್ಞೇಯ ಜ್ಞಾತೃಗಳು ॥
ತರಣಿ ಕಾಂಬನೆ ಯಂಧಕಾರವ ।
ಶರಧಿಯಲಿ ನದಿಯರಿಯಿ ಬಹುದೇ ।
ನೆರಳ ಪಿಡಿದೆಳತಂದು ಪಿಂಬಕೆ ಕಟ್ಟ ಬಹುದೇನು ॥ ೩೩೪ ॥

ಒರಲು ಸಾತ್ತ್ವಿಕಜ್ಞಾನದುದಯವು ।
ಕರಗಿ ಹೋಗುವುದೆಲ್ಲ ಭೇದವು ।
ಹರ ಪಿಡಿದು ನರ ಕೀಟಕಂಗಳು ಸರಿಯಲಾ ಅವಗೆ ॥
ಒರಸಿದರೆ ಚಿತ್ರಗಳ ಗೋಡೆಯೊ- ।
ಳಿರುವುದೇನೈ ಭೇದ ವಿಪ್ಪನು ।
ಭರದಿ ತೊಳೆಯಲು ಸ್ವಪ್ನ ತೀರಲು ಭೇದನೇನಿಹುದು ॥೩೩೫॥

ಜ್ಞಾನಜ್ಞೇಯಜ್ಞಾತೃಭೇದವು ।
ತಾನೆ ಸುಟ್ಟು ವಿಭೂತಿಯಾಗುವು- ।
ದೇನ ಹೇಳಲಿ ಬರಲು ಸಾತ್ತ್ವಿಕಜ್ಞಾನ ಮಾನವಗೆ ।

ಕ್ಷೋಣಿಯಲಿ ಚಿನ್ನದ ಪರೀಕ್ಷೆಗೆ ।
ಯೇನು ಕಾರಣ ಕರಗಿಸುವುದದ ।
ಮಾನವನು ಬುದ್ಧಿಪ್ರಭಾವದಿ ನೋಡಿ ಪರಿಕಿಸುವ ॥ ೩೩೬ ॥

ನರನು ನೀರನು ಗ್ರಹಿಸಲದರೊಳ- ।
ಗಿರುವ ತೆರೆಗಳ ಬಟ್ಟು ಬಿಡುವರೆ ।
ಯಿರುವುದೇನೈ ಸಾಧ್ಯಸೀಕರಿ ಸಾತ್ತ್ವಿಕ ಜ್ಞಾನ ॥

ಧರೆಯೊಳಗೆ ರೈಗ್ಗೋಚರಿಸುತಿಹ ।
ನೆರೆವ ಸಕಲ ಜರಾಚರಂಗಳ- ।
ಒರವು ಭೇದವು ಜ್ಞಾನವೀಪರಿಯಿಹುದು ಸಾತ್ತ್ವಿಕವು ॥ ೩೩೭ ॥

ಕಸ್ಮಟಿಯು ಸಮುಖದಿ ನಿಂತರೆ ।
ತನ್ಮರೂಪನ ಕಾಂಬನಲ್ಲನೆ ।
ಚನ್ನ ಪ್ರತಿಬಿಂಬನನು ಕಾಣುವನೇನು ಮಾನವನು ॥
ಸನ್ಮತಾತ್ಮನೆ ಕೆಳು ಪಾರ್ಥನೆ ।
ತನ್ನ ರೂಪವ ಜ್ಞಾತ ನೋಳ್ಪನು ।
ಭಿನ್ನತೆಯು ಲಯವಹುದು ಜ್ಞೇಯದಲೆಲ್ಲ ಕೌಂತೇಯ ॥ ೩೩೮ ॥

ಇರುವುದೀ ಸುಜ್ಞಾನಸಾತ್ತ್ವಿಕ ।
ಪರಮ ಮೋಕ್ಷಶ್ರೀಯ ಮಂದಿರ- ।
ವೊರೆವೆ ನಿನಗಾನೀಗ ರಾಜಸಜ್ಞಾನಲಕ್ಷಣವ ॥

ಪೃಥಕ್ತ್ವೇನ ತು ಯಜ್ಜ್ಞಾನಂ ನಾನಾಭಾವಾನ್ ಪೃಥಗ್ವಿಧಾನ್ ।
ವೇತ್ತಿ ಸರ್ವೇಷು ಭೂತೇಷು ತಜ್ಜ್ಞಾನಂ ವಿದ್ಧಿ ರಾಜಸಮ್ ॥ ೨೧ ॥

ನರನೆ ಕೇಳೈ ಜ್ಞಾನರಾಜಸ- ।
ಕಿರುವುದೈ ಬಹುಭೇದಭಾವವು ।
ಅರಿಯಲಾ ನೀನಿದನು ಭೂತಗ್ರಾಮದಲಿ ನಿಜದಿ ।। ೫೩೯ ।।

ಭೂತಮಾತ್ರದಿ ಭೇದ ಯೋಚಿಸಿ ।
ಜ್ಞಾತ ಪಾರ್ಥನೆ ತನ್ನ ರೂಪದ ।
ಘಾತಕತ್ವ ಪೃಥಕ್ಕರಣವನು ಮಾಡಿಕೊಂಡಿಹನು ॥
ಈ ತೆರದಿ ಕೇಳಾತ್ಮನನು ನಿಜ- ।
ಮಾತಿನಿಂದಲೆ ವಂಚಿಸಿರುವನು ।
ಭೂತಳದಿ ನೀ ತಿಳಿದಿಯಾ ರಾಜಸವು ಜ್ಞಾನವಿದು ।। ೫೪೦ ।।

ವಸ್ತ್ರವನು ತೋರಿಸಲು ಮೂಢಗೆ ।
ವಿಸ್ತರಿಸಿದಾ ತಂತುವೆನುತಲಿ ।
ಚಿತ್ತದಲಿ ಬೀಳುವುದೆ ಬೆಳಕದು ಕೇಳು ಕೌಂತೇಯ ॥
ಅಸ್ತವಾಗುವುದೈಕ್ಯಭಾವವು ।
ಧಾತ್ರಿಯಲ್ಲಿಯದೃಶ್ಯಭೂತಸ- ।
ಮಸ್ತ ಭಿನ್ನತ್ವದಲಿ ರಂಜಿಪುದವಗೆ ರಾಜಸಗೆ ।। ೫೪೪ ।।

ತರುತ ಕೇಳಜ್ಞಾನಪಡದೆಯು ।
ನಿರುತ ನಿದ್ರೆಯು ನಿಜಸ್ವರೂಪದ ।
ಅರವನಡಗಿಸಿ ವಂಚಿಸುವುದೈ ಸ್ವಪ್ನಸೃಷ್ಟಿಯಲಿ ॥
ಪರಿಯೊಳಾತ್ಮಜ್ಞಾನಭುವನದ ।
ಹೊರಗೊಳಗೆ ಮಾಯೆಯನು ಪಸರಿಸಿ ।
ನಿರುತ ವಂಚಿಸುತಿಹುದು ಜೀವವ ಮೂರವಸ್ಥೆಯಲಿ ।।೫೪೨।।

ಕಟ್ಟಿಗೆಯ ತುಂಡುಗಳ ಮಾಡುತ- ।
ಲಿಟ್ಟರದಕಗ್ನಿಯನು ಬೆಂಕಿಯು ।
ಸುಟ್ಟು ಬಿಡುವುದು ಬೆಂಕಿಯಾಕೃತಿ ಬೇರೆಬೇರಿಹುದು ॥
ನಷ್ಟವಾಯ್ತೋ ಯೇಕರೂಪತೆ ।
ಗುಟ್ಟನರಿಯೈ ಪಾರ್ಥ ಹೂವುಗ- ।
ಳೆಷ್ಟು ಪರಿಯರಳಿರಲು ಪರಿಮಳವೊಂದೆ ರೂಪವಲಾ ।। ೫೪೩ ।।

ತೋರಿಸಿದರಾಭರಣ ಮೂಢಗೆ ।
ಬಾರದೈ ಕಲ್ಪನೆಯು ಚಿನ್ನದ ।
ಬೇರೆಬೇರಿಹುದೆಂದು ಯೋಚಿಪನಾಭರಣವೆಲ್ಲ ॥
ಧಾರುಣಿಯಲೀತೆರದಿ ಜ್ಞೇಯವು ।
ಬೇರೆಬೇರಾಗಿಹುದೆನುತ್ತ ಶ- ।
ರೀರಿ ಯೋಚಿಸುತಿಹನು ಪರಿಪರಿ ನಾಮರೂಪದಲಿ ।।೫೪೪।।

ಜಲದಿ ಚಂದ್ರನ ಬಿಂಬ ನೋಡಲು ।
ಜಲದಿ ವಾಯುತರಂಗ ನೋಡಲು ।
ಹಲವು ಬಿಂಬಗಳೇಳ್ವವಾದರು ಚಂದ್ರನೊಬ್ಬನಲಾ ॥
ತಿಳಿಯದೀಪರಿ ತತ್ತ್ವ ಚಂದ್ರನ ।
ಹಲವು ಶಕಲಗಳಾದುವೆಂಬರು ।
ತಿಳಿಯುವರು ತಾವ್ ಕೇಳಮೇಲನು ಬಾಹ್ಯನೇಷದಲಿ ।। ೫೪೫ ।।

ಜಡಮನುಷ್ಯಗೆ ಬೇರೆಬೇರಿಹ ।
ಗಡಿಗೆಮಡಿಕೆಯ ತೋರಿಸಿದರವ- ।
ನೊಡಬಡನು ಕೇಳೊಂದೆ ಮಣ್ಣಿನ ರೂಪಭೇದಗಳ ॥
ಸುಡುವ ದೀಪವ ನೋಡಿ ಬೆಂಕಿಯ ।
ಕಿಡಿಯ ಜ್ಞಾನವು ಬರುವುದೇನದು ।
ಪಡದೆಯೆಂಬುದು ತಿಳಿವುದೇನೈ ಚಿತ್ರವನು ನೋಡೆ ।। ೫೪೬ ।।

ಇರುವುದೀಪರಿ ಜ್ಞಾನರಾಜಸ ।
ಭರಿತವಿಹುದಿದು ಭೇದಭಾವದಿ ।
ನರನೆ ನಿನಗಾನುಸುರಿದೆನು ಬಹುಪ್ರೇಮಪೂರ್ವಕದಿ ॥
ಅರುಹುವೆನು ನಾ ನಿನಗೆ ಕೇಳೈ ।
ತಿರಿಗಿ ತಾಮಸ ಜ್ಞಾನಲಕ್ಷಣ ।
ತೊರೆಯ ಬೇಕಿದ ನೀನು ಹೊಲೆಯನ ತೊರೆಯುವಂದದಲಿ ।।೫೪೭।।

ಯತ್ತು ಕೃತ್ಸ್ನವದೇಕಸ್ಮಿನ್ ಕಾರ್ಯೇ ಸಕ್ತಮಹೈತುಕಮ್ ।
ಅತತ್ತ್ವಾರ್ಥವದಲ್ಪಂ ಚ ತತ್ತಾಮಸಮುದಾಹೃತಮ್ ॥ ೨೨ ।।

ನರನೆ ಕೇಳೀ ಜ್ಞಾನತಾಮಸ ।
ತೊರೆವುದೈ ನಿಧಿರೂಪವಸ್ತುವ ।
ತಿರಿತಿರಿಗಿ ಸಂಚಾರ ಮಾಳ್ಪುದು ನಗ್ನತನದಿಂದ ।।
ಪರಮ ಶಾಸ್ತ್ರದ ತಾಯಿ ಯಿಶ್ರುತಿ ।
ನಿರುತವಿದ ಧಿಕ್ಕರಿಸಿ ನೋಡ್ವೈ ।
ಪರಿಪರಿಯ ಶಾಸ್ತ್ರಗಳನೆಲ್ಲವ ನಿಂದಿಪುದು ಮುದದಿ ।। ೫೪೮ ।।

ನರನೆ ನೋಡೀ ಶಾಸ್ತ್ರಸರ್ವವ ।
ಹೊರಗೆ ಹಾಕುತಲಿದು ವಿನೋದದಿ ।
ತೆರಳಿ ಹೋಯಿತು ಮ್ಲೇಚ್ಛಧರ್ಮದ ಗಿರಿಗೆ ಸತ್ವರದಿ ॥
ಮರುಳನಂದದಿ ಭೂಮಿಯಲಿ ಸಂ-।
ಚರಿಸುತಿಹುದದು ಬ್ರಹ್ಮರಾಕ್ಷಸ ।
ನಿರದೆ ಬಾಧಿಪನಿದನು ತಾಮಸರೂಪದಲಿ ನಿಜದಿ ॥ ೩೪೪ ॥

ಬಾರದಡಜಣಿ ಕೇಳು ನರನೆ ಶ-।
ರೀರಸಂಬಂಧದಲಿ ತಿನಲಿಕೆ ।
ಬಾರದವನಿಗೆ ವಿಧಿನಿಷೇಧವು ಭಕ್ಷ್ಯಕೇಯದಲಿ ।।
ಧಾರುಣಿಯಲೀಪರಿಯ ಸ್ವೇಚ್ಛಾ-।
ಹಾರ ಮತ್ತೆ ವಿಹಾರವೈ ಹಾ-।
ಳೂರ ನಾಯಿಯ ತೆರದಿ ಸಂಚಾರವನು ಮಾಡುವನು
॥ ೩೪೦ ॥

ಹತ್ತಲಾಗದು ಬಾಯಿಗೆನುತಲಿ ।
ತುತ್ತ ಬಿಡ ಜೀಕವನಿಗಧವಾ ।
ಹತ್ತಿಹರೆ ಬಾಯ್ ಸುಡುವುದೆನುತಲಿ ಬಿಟ್ಟು ಬಿಡಬೇಕು ॥
ಮತ್ತಿರುವ ಸರ್ವಸ್ವವನಿಗೆ ।
ಬಿತ್ತು ಬಾಯೊಳಗೆಂದು ತಿಳಿ ನೀ ।
ಪಾರ್ಥ ತಾಮಸ ಜ್ಞಾನವೀಪರಿ ಹೊಲಸು ನಾಯಿಯಲಾ
॥ ೩೪೧ ॥

ಇಲಿಯು ಕೊರೆಯುವ ವಸ್ತುಗಳ ಜೆಲೆ ।
ತಿಳಿವುದೇ ಕೊರೆದೊಗೆದು ಬಿಡುವುದು ।
ಬಿಳಿದು ಕರಿದೆಂಬುವನೆ ಮಾಂಸವ ತಿನುವ ವೇಳ್ಕದಲಿ ॥
ಜ್ವಲನನರಿವನೆ ಹೆಚ್ಚಕುಂದನು ।
ಕಳೆವನಲ್ಲಾ ವನವನೆಲ್ಲವ ।
ತಿಳಿಯನಲ್ಲಾ ಜೀವಿನಿರ್ಜೀವಿಗಳ ಸುಡುವನಲಾ ॥ ೩೪೨ ॥

ಹೆಣವೊ ಜೀವಿಯೊ ಯೆಂದು ತಿಳಿಯದೆ ।
ನೊಣವು ಕುಳಿತು ವಿಹಾರ ಮಾಳ್ಪುದು ।
ವಿನುತಚರಿತನೆ ನೋಡು ತಾಮಸ ಜ್ಞಾನವೀ ತೆರದಿ ॥
ಎಣಿಸಲಾರದು ವಿಧಿನಿಷೇಧವ-।
ನುಣುವುದೆಲ್ಲವ ಕಂಡವಸ್ತುವ ।
ಕನಸುಮನಸಿಲಿ ಬಾರದದಕೀಶಾಸ್ತ್ರದಾಜ್ಞೆಯದು ॥ ೩೪೩ ॥

ನಾರಿಯನು ನೋಡಿದರೆ ಯೊಂದೆ ವಿ-।
ಹಾರಭೋಗದೊಳಾಶೆ ಹಣ ಕೈ-।
ಸೇರೆ ತಿಂದದ ತೇಗಿ ಬಿಡುವುದು ಬೇರೆ ಮಾತಿಲ್ಲ ॥

ನೀರ ನೋಡಿದರಾಯ್ತು ಕುಡಿವನು ।
ಬಾರದವಗೆ ವಿಚಾರ ಪಾವನ ।
ನೀರೊ ಹೊಲಸೋ ಕುಡಿದರಾಯಿತು ನೀರಡಿಕೆಗಾಗಿ ॥ ೩೪೪ ॥

ಮನದಿ ಭಕ್ಷ್ಯವಭಕ್ಷ್ಯವೇಷಿಸನು ।
ಮನದಿ ನಿಂದ್ಯವನಿಂದ್ಯವೇಷಿಸನು ।
ತನಗೆ ಸ್ಪಾಪ್ಯವನೀವ ವಸ್ತು ಪವಿತ್ರವೆನ್ನುವನು ॥
ಮನದ ದೃಢನಿಶ್ಚಯವಿದವನಿಗೆ ।
ವನಿತೆಯರು ನಿಜಭೋಗ್ಯವಿಷಯವು ।
ಯೆನುತ ಯೋಚಿಸಿ ಜಾರತನಕುದ್ಯುಕ್ತನಾಗುವನು ॥ ೩೪೫ ॥

ಗಂಟುಬಿದ್ದರದಾಯ್ತು ಸ್ತ್ರೀಯರು ।
ನೆಂಟರೆಂದೇ ಬಯಸಿ ನುಡಿವನು ।
ಗಂಟು ಬಿದ್ದಿಹ ಪತ್ನಿಯೊಬ್ಬಳೆ ನೆಂಟಳೆನ್ನದಲೆ ।।
ತುಂಟತನವನು ಮಾಳ್ಪ ವಿಷಯದ ।
ಬಂಟನಲ್ಲವೆ ಜ್ಞಾನ ತಾಮಸ ।
ತಂಟಿಯಾಡುವನೆಲ್ಲರಲಿ ಕೇಳೀ ವಿಧಾನದಲಿ ॥ ೩೪೬ ॥

ಮೃತ್ಯುವಿಗೆ ತೋರ್ವುದು ಜಗತ್ತಿದು ।
ತುತ್ತಿಹುದು ತನಗೆಂದು ನಿತ್ಯದಿ ।
ಚಿತ್ತವಿಸು ಕಲಿಪಾರ್ಥ ಬೆಂಕಿಗೆ ಸರ್ವವಿಂಧನವು ॥
ಸತ್ಯವೀ ಜಗವೆಲ್ಲ ತನಗುಸ- ।
ಭುಕ್ತಿಗೋಸುಗ ಬೊಮ್ಮನಿಚ್ಛೆಯೆ- ।
ನುತ್ತ ಯೋಚಿಪುದೇನ ಹೇಳಲಿ ಜ್ಞಾನ ತಾಮಸವು ॥ ೩೪೭ ॥

ಪರಧನವು ಪರವನಿತೆಯೆಂಬೀ- ।
ಯೆರಡು ತನ್ನಯ ಭೋಗ್ಯವೆನುತಲಿ ।
ಭರದಿ ಕಾದಾಡುವುದು ಕೈವಶವಾಗ ಬೇಕೆನುತ ॥
ಧರೆಯೊಳಗೆ ಪುರುಷಾರ್ಥ ದೇಹದ ।
ಭರಣವಲ್ಲದೆ ಬೇರೆಯರಿಯದು ।
ನರನೆ ಕೇಳೀಪರಿಯ ತಾಮಸಜ್ಞಾನಲಕ್ಷಣವು ॥ ೩೪೮ ॥

ನರನೆ ನೋಡಾಕಾಶದಿಂದಲಿ ।
ಧರೆಗೆ ಬೀಳುವ ನೀರಿಗೊಂದೇ ।
ಶರಧಿಯಾಶ್ರಯವಾಗಿ ಹರಿವುದು ಶರಧಿಗಾ ನೀರು ॥
ಪರಿಯಿದಲ್ಲಾ ಜ್ಞಾನ ತಾಮಸ ।
ಪರಿಪರಿಯ ಕರ್ಮಗಳನುದಿನದ ।
ಭರಣಕೋಸುಗ ಮಾಳ್ಪುದಲ್ಲದೆ ಬೇರೆಯರವಿಲ್ಲ ॥ ೩೪೯ ॥

ವುಣ್ಯವಾವಾಚರಣ ಮಾಡಲು ।
ತನ್ನ ಕರ್ಮದ ಫಲದ ಮಾನದಿ ।
ಮುನ್ನ ಸಿಗುವುವು ಸ್ವರ್ಗನರಕಗಳೆಂದು ತಿಳಿಯರಲಾ ॥
ಕಣ್ಣೆದುರಿನಲಿ ತೋರ್ಪ ಮೂರ್ತಿಯೆ ।
ಯೆನ್ನುವರು ಪರಮಾತ್ಮನೆನುತಲಿ ।
ತನ್ನ ದೇಹದ ತುಂಡೆ ಪೇಳುವರಾತ್ಮನೆನ್ನುತಲಿ ॥ ೩೬೦ ॥

ಮರಣವಾಗಲು ಮರ್ತ್ಯದೇಹಕೆ ।
ಬರುವುದಾತ್ಮಗೆ ಮೃತ್ಯುವೆನುವರು ।
ಮರಣ ಬರುವುದು ಕರ್ಮಕೆಲ್ಲಕೆ ದೇಹದೊಡಗೂಡಿ ॥
ತಿರಿಗಿ ಕರ್ಮದ ಫಲವನುಣುವರೆ ।
ಯಿರುವರಾರೀ ಜಗದಲೆನುತಲಿ ।
ಹರುಷನಿರ್ಭರರಾಗಿ ಸ್ವೇಚ್ಛಾವರ್ತನಾತ್ಮಕರು ॥ ೩೬೧ ॥

ಧರೆಯಲೀಶ್ವರನಿಲ್ಲನೆನುವರು ।
ಯಿರುವನಾದರು ಕರ್ಮಫಲಗಳ- ।
ನಿರದೆ ನರನಿಂ ತಪ್ಪಿಸಲಿಕೀಶ್ವರನು ಬಾರನಲಾ ॥
ಅರಿಯಲಾ ಭಂಗಾರಬೆಳ್ಳಿಯ ।
ಮೆರೆವ ಮೂರ್ತಿಯ ಮಾರಿಯದನೇ ।
ಕರಗಿಸುವನೈ ನರನು ಯೆಂಬುದು ಜ್ಞಾನ ತಾಮಸವು
॥ ೩೬೨ ॥

ಊರೊಳಿರುತಿಹ ಮುಖ್ಯದೇವರು ।
ತೋರಿಸುವ್ರದಾದರೆ ಸುಶಾಸನ- ।
ವಾರು ನಂಬುವರಿದನು ದೇವರ ಮೂರ್ತಿ ಮಾಡಿರುವ ॥
ಚಾರುಕಲ್ಲಿನ ಗುಡ್ಡವಿದ್ದರು ।
ಯಾರಿಗೇನವು ಕಷ್ಟ ಕೊಡುವುವು ।
ಯಾರು ಕರ್ಮವಿಚಾರ ಮಾಳ್ಪರೆನುತ್ತ ನಿಂದಿಪರು ॥ ೩೬೩ ॥

ದೇವರಿದ್ದರು ಕಲ್ಲಮೂರ್ತಿಯ ।
ದೇವರೆನ್ನುವರೀ ದುರಾತ್ಮರು ।
ಭಾವಿಸುವರಾತ್ಮನನು ದೇಹವೆನುತ್ತ ಮನದೊಳಗೆ ॥
ಯಾವುದಿರುವುದು ಪುಣ್ಯಪಾಪವು ।
ದೇಹವಿಲ್ಲದೆ ನಿಂದಿಸುವರದ ।
ಭಾವವೊಂದೇ ವಿಷಯಸುಖಲಾಲಸೆಯು ಸಂತತದಿ ॥೩೬೪॥

ಅನಲ ಪ್ರಜ್ವಲಿಸಿರಲು ನೋಳ್ಪನೆ ।
ತಿನುವನಲ್ಲಾ ಸರ್ವಭಕ್ಷಕ- ।
ನಿನುಪರಿಯಲಿ ಮುಂದೆ ಸಿಕ್ಕಿದ ವಸ್ತುಗಳನೆಲ್ಲ ॥

ನೆನೆಯಲಾಪರಿ ಜ್ಞಾನತಾಮಸ ।
ತಿನುವುದಕೆ ಮನ ಹಿಂದೆ ನೋಡದು ।
ಯಿನಿತು ತಾಮಸಜ್ಞಾನಮಹಿಮೆಯ ನೋಡು ಕೌಂತೇಯ
॥ ೩೬೫ ॥

ಕಣ್ಣಿಗೆದುರಿಲಿ ಬಂದ ವಸ್ತುಗ- ।
ಳನ್ನು ತಾನುಪಭೋಗಿಸುವನೈ ।
ಮುನ್ನ ತನ್ನಿಂದ್ರಿಯಗಳಿಗೆ ಸವಿಯಾದುದನೆ ಮಾಳ್ಪ ॥
ಅನ್ಯವ್ರತಪಾಚಾರವಿಲ್ಲೆಲ್ಲ ।
ಯಿನ್ನು ನಾ ನಿನಗೇನ ಹೇಳಲಿ ।
ಛಿನ್ನಬುದ್ಧಿಗಳೈ ದುರಾಶೆಯು ಬೆಳೆಯುವುದು ನಿರುತ ॥ ೩೬೬ ॥

ಗಗನದಲಿ ತಾನೇರಿ ಬೆಳೆವುದು ।
ಹೊಗೆಯು ಪರಿಮಿತಿಯಾರು ಮಾಳ್ಪರು ।
ಬಗೆಯಿದಲ್ಲಾ ಹೇಚು ವುದು ಕೇಳಾಶೆ ತಾಮಸವು ॥
ಜಗದೊಳಗೆ ಕೇಳ್ ಬೆಂಡಗಿಡವದು ।
ವುಗಮವಾದರದೇನು ಬೆಳೆಯಲು ।
ಬಗೆಗೆ ಬರುವುದೆ ವ್ಯರ್ಥವಾ ಪರಿ ತಾಮಸಜ್ಞಾನ ॥ ೩೬೭ ॥

ತೆನೆಯು ಕಬ್ಬಿಗೆ ಬಂದರೇನದು ।
ಮನುಜನಿರಲು ನಪುಂಸಕನು ಮೇಣ್ ।
ವನ ನಿಬಿಡವಿರಲೇನು ನಿವಡುಂಗದ ಕಣಾ ಪಾರ್ಥ ॥
ವಿನುತಚರಿತನೆ ಬಾಲಕನ ಮನ ।
ಕನಸಿನಲಿ ಕಂಡಿರ್ದ ಧನವೈ ।
ಕುಣಿವಚಾಗಲಸ್ತನವು ಕೇಳಿವು ವ್ಯರ್ಥವಾಗಿಹುವು ॥ ೩೬೮ ॥

ವ್ಯರ್ಥವೀ ಪರಿಯಾಗಲಿದಕಾ- ।
ರಿತ್ತರೈ ನಾಮವನು ಜ್ಞಾನವೆ ।
ನುತ್ತ ನೀ ಕೇಳಿದರೆ ಪೇಳುವೆನದರ ಗುಹ್ಯವನು ॥
ಪಾರ್ಥ ನಿನಗರವಿರುವುದಲ್ಲಾ ।
ಸಾರ್ಥಕದ ಮಾತೆಂದು ತಿಳಿದಿಯೊ ।
ಜಾತಿಕುರುಡನ ದೃಷ್ಟಿ ದಿವ್ಯವೆನುತ್ತ ಕರೆವರಲಾ ॥ ೩೬೯ ॥

ಧರೆಯೊಳಗೆ ಕಿವ್ರುಡನಿಗೆ ಕಿವಿಯೇ- ।
ನಿರುವುರೈ ಸುಂದರವೆನುತ್ತಲಿ ।
ಪರಿಪರಿಯ ಸ್ತುತಿಗಳನು ಮಾಳ್ಪರು ಚೇಷ್ಟೆ ವರ್ತನಲಿ ॥
ಸುರೆಮದಿರೆಯಸವಿತ್ರವಿದ್ದರು ।
ಕರೆವರಲ್ಲಾ ಪೇಯವೆನುತಲಿ ।
ಯಿರುವುದೇನದು ಪೇಯ ವಿಪರೀತಾರ್ಥವದು ತಿಳಿಯೆ ॥ ೩೭೦ ॥

ಜ್ಞಾನವಲ್ಲಾ ನಿಜದಿ ತಾಮಸ- ।
ಜ್ಞಾನಕೀಯಭಿಧಾನ ಸಲ್ಲದು ।
ಕ್ಷೋಣಿಯಲಿ ನಿಜವಾಗಿ ತಮವಜ್ಞಾನವಾಗಿಹುದು ॥
ನಾನು ನಿನಗಿದ ಪೇಳ್ದೆ ವಿವರಿಸಿ ।
ನೀನು ಶ್ರೋತೃಶ್ರೇಷ್ಠನೆನುತಲಿ ।
ಜ್ಞಾನವೀಪರಿ ಮೂರುಗುಣದಲಿ ರಾಜಿಸುತ್ತಿಹುದು ; ೩೭॥

ಮೂರುಗುಣದಲಿ ತೋರ್ಪ ಮೂರುಸ್ರ- ।
ಕಾರವಾಗಿಹ ಜ್ಞಾನದೀಪದಿ ।
ತೋರುತಿರುವುದು ಸೃಷ್ಟ ಕರ್ತನ ಕರ್ಮಪಂಕ್ತಿಯದು ॥

ನೀರು ತಿದ್ದಿದ ತೆರದಿ ಹರಿವುದು ।
ನೀರಿನಂದದಿ ಕರ್ಮ ಮೂರುಸ್ರ- ।
ಕಾರ ಸಂಭವಿಸುವುದು ಜ್ಞಾನವು ತೋರಿಸಿದ ತೆರವ ॥ ೩೭॥

ನರನೆ ಕೇಳದರಿಂದ ಕರ್ಮವು ।
ಯಿರುವುದೈ ತ್ರಿಗುಣಾತ್ಮಕವಲಾ ।
ಮೆರೆವುದದು ತ್ರಿಗುಣದಲಿ ಸತ್ತ್ವರಜಸ್ತಮೋಗುಣದಿ ॥
ಅರುಹುವೆನು ನಾ ನಿನಗೆ ಬಹು ವಿ- ।
ಸ್ತರಿಸಿ ಸಾತ್ತ್ವಿಕಕರ್ಮಲಕ್ಷಣ- ।
ವರಿಯಲಾ ಕಲಿವಾರ್ಥ ಭಕ್ತಶಿರೋಮಣಿಯೆ ನೀನು ॥ ೩೭॥

ನಿಯತಂ ಸಂಗರಹಿತಮರಾಗದ್ವೇಷತಃ ಕೃತಮ್ ।
ಅಫಲಪ್ರೇಪ್ಸುನಾ ಕರ್ಮ ಯತ್ತತ್ಸಾತ್ತ್ವಿಕಮುಚ್ಯತೇ ॥ ೨೩ ॥

ಸತಿಪತಿವ್ರತೆ ತರುಣಿ ಸ್ವಪ್ರಿಯ- ।
ಪತಿಯನಾಲಿಂಗಿಸುವ ತೆರದಲಿ ।
ಸತತ ಮಾನ್ಯ ಸ್ವಾಧಿಕಾರದ ಕರ್ಮ ಹರ್ಷದಲಿ ॥
ಪತಿಕರಿಪುದುತ್ತಮವು ಮಾರ್ಗವು ।
ದ್ವಿತಿಯಲಿದು ಬಹು ಪುಣ್ಯಕಾರಕ- ।
ಗತಿಯ ಕೊಡುವ್ದದು ಶಾಸ್ತ್ರಸಂಮತವಿಹುದು ಕೌಂತೇಯ
॥ ೩೭॥

ಚಂದನವು ಬಹು ಶೋಭಿಸುವುದೈ ।
ಸುಂದರಾಂಗಶ್ಯಾಮವರ್ಣಗೆ ।
ಸುಂದರಾಗಿಯ ನೇತ್ರದಲಿ ಶೋಭಿಸುವುದಂಜನವು ॥
ಚಂದದಿಂವಾ ತೆರದಿ ವಿಹಿತವಿ- ।
ದೆಂದು ಬಂದಿಹ ಕರ್ಮವೃಂದವು ।
ಸಂದು ಭೂಷಣವಾಗಿ ರಾಜಿಪುದೇನ ಹೇಳುವೆನು
॥ ೩೭॥ ॥

ನಿತ್ಯ ಕರ್ಮಂಗಳನು ಮಾಡುವ ।
ಹೊತ್ತಿನಲಿ ನೈಮಿತ್ಯಕವು ಕೈ- ।
ಹತ್ತಿದರೆ ಚಿನ್ನಕೆ ಸುವಾಸವು ಬಂದ ಪರಿಯಾಯ್ತು ॥
ಪಾರ್ಥ ನೋಡೈ ತಾಯಿ ನಿಜಸಂ- ।
ಪತ್ತಿಯಿಂದಲಿ ಜೀವದೇಹದಿ ।
ನಿತ್ಯ ತನ್ನರ್ಭಕನ ಕಾಯ್ವಳು ಜೀಸರಿಹುದೇನು ॥ ೩೭॥

ನಿರುತವೀಪರಿ ಕರ್ಮ ಮಾಡುತ ।
ಧರಿಸದಲೆ ಫಲದಾಶೆ ಕರ್ಮದಿ ।
ಹರಿಗೆ ತಾನರ್ಪಣವ ಮಾಳ್ಪನು ಕರ್ಮಗಳನೆಲ್ಲ ॥

ತರುಣಿ ಸುಪತಿವ್ರತೆಯು ಪ್ರಿಯುಪತಿ ।
ಬರಲು ಬಹುಪ್ರೇಮದಲಿ ಭೋಜನ- ।
ನಿರದೆ ಬಡಿಸುವಳೇನ ಹೇಳಲಿ ಯೇಕಭಾವದಲಿ ॥ ೩೭॥

ಉಣ್ಣಲಾ ಪತಿ ಸರ್ವವಡಿಗೆಯ ।
ಮುನ್ನ ತನಗದು ದೊರೆಯದೆಂಬುವ ।
ಭಿನ್ನ ಭಾವವು ಬರುವುದೇನೈ ಮನದಿ ಕಲಿವಾರ್ಥ ॥
ತನ್ನ ಮನೆಗಾ ಸಾಧುಸಂತರು ।
ಮನ್ನಣೆಯಲೈದಿರಲು ಕರ್ಮಗ- ।
ಳನ್ನು ಬಿಟ್ಟಾದರೆಯು ಮಾಡುವನಾದರಾತಿಥ್ಯ ॥ ೩೭॥

ಉಳಿಯಿತಿಂದಿನ ಕರ್ಮವೆನುತಲಿ ।
ಕಲುಷಿತವು ಮನವಾಗದವನಿಗೆ ।
ತಿಳಿಯನವನು ದ್ವೇಷನನು ತಾಂ ಕರ್ಮ ಬಿಟ್ಟೊಡೆಯು ॥
ಉಳಿಯದೆಲ್ಲವ ಮಾಡಿ ಮುಗಿಸಲು ।
ತಿಳಿಯನವ ಸಂತೋಷಗರ್ವವ- ।
ನಿಳೆಯಲೀ ಪರಿ ಕರ್ಮ ಮಾಡಲು ಕರ್ಮ ಸಾತ್ತ್ವಿಕವು ॥೩೭॥

ಧರೆಯಲೀಪರಿ ಕರ್ಮಗಳ ಗುಣ- ।
ವರಿತು ಸಾತ್ತ್ವಿಕ ಹೆಸರು ಬಂತೈ ।
ನರನೆ ಕೇಳೀ ತೆರದಿ ಸಾತ್ತ್ವಿಕಕರ್ಮಲಕ್ಷಣವು ॥
ಅರುಹುವೆನು ನಾ ನಿನಗೆ ಮುಂದಕೆ ।
ಸರಸರಾಜಸ ಕರ್ಮಲಕ್ಷಣ ।
ನರನೆ ನೀ ಮನಗೊಟ್ಟು ಕೇಳೈ ಹರ್ಷದಿಂದಿದನು ॥ ೩೭॥

ಯತ್ತು ಕಾಮೇಪ್ಸುನಾ ಕರ್ಮ ಸಾಹಂಕಾರೇಣ ವಾ ಪುನಃ ।
ಕ್ರಿಯತೇ ಬಹುಲಾಯಾಸಂ ತದ್ರಾಜಸಮುದಾಹೃತಮ್ ॥ ೨೪ ॥

ಮನೆಯಲಿರುತಿಹ ತಂದೆತಾಯ್ಗಳ ।
ಮುನಿಸಿನಿಂದಲಿ ಮಾತನಾಡಿನ ।
ಮನೆಯೊಳಗೆ ಮಾತಾಡನೈ ಸವಿಮಾತ ಕ್ಷಣಮಾತ್ರ ॥
ಅನವರತ ಪರಜನಕೆ ಬಹುಪರಿ ।
ವಿನಯದಿಂ ಸಾದರತೆ ತೋರ್ಪನು ।
ಮನುಜನೀಪರಿ ಮೂರ್ಖನಂದದಿ ವರ್ತಿಪನು ಪಾರ್ಥ
॥ ೩೮೧ ॥

ಫಲವು ಪುಷ್ಪವು ದೊರೆಯದೆನುತಾ ।
ತುಳಸಿಗಿಡಕವ ಹನಿಯ ತೋರಿಸ- ।
ನಿಳೆಯೊಳಗೆ ಹಾಲಿನಲಿ ಮುಳುಗಿಪ ದ್ರಾಕ್ಷೆಬಳ್ಳಿಯನು ॥
ಕೊಳನು ನೈಮಿತ್ತಿಕವನಾತನು ।
ತುಳಿದು ಬಿಡುವನು ನಿತ್ಯಕರ್ಮವ ।
ಫಳಿಲನವ ಮಾಡುವನು ಕೇವಲ ಕಾಮ್ಯಕರ್ಮವನು
॥ ೩೮೨ ॥

ಎಷ್ಟ ಮಾಡಿದಡೇನು ಕಾಮ್ಯವು ।
ಕಷ್ಟಮಯವಾಗಿರಲು ಜಡನದ- ।
ನಿಷ್ಟ ಕಾರ್ಯವೆನುತ್ತ ಮನ್ನಿಸಿ ದೇಹ ಕಷ್ಟಿಪನು ॥
ಬಿಟ್ಟು ಜಿಡನಾ ಕಾಮ್ಯಕರ್ಮವ- ।
ನೆಷ್ಟ ಮಾಡಿದಡೇನು ತಾಂ ಸಂ- ।
ತುಷ್ಟನಾಗನು ಮೇಲೆಮೇಲಾಶೆಯನು ಬೆಳೆಸುವನು
॥ ೩೮೩ ॥

ಹಣವ ಬಡ್ಡಿಗೆ ಕೊಟ್ಟು ಬಡ್ಡಿಯ ।
ಹಣವೆ ಯಿಮ್ಮಡಿಯಾಗೆ ಕೃಪ್ತಿಯು ।
ಮನದೊಳಾಗದು ಹೊಲದೊಳಗೆ ಬೀಜವನು ಬಿತ್ತಿದರೆ ॥
ಮನದಣಿಯದವನಿಂಗೆ ಮತ್ತಾ ।
ಯೆಣಿಸುವನು ಲಾಭವನು ಬೀಜವ ।
ಗಣನವಿಲ್ಲದೆ ಬಿತ್ತಲಾಗುವುದಪರಿಮಿತ ಧಾನ್ಯ ॥ ೩೮೪ ॥

ಪರುಸ ಕೈವಶವಾಗಲದರಿಂ ।
ವಿರಚಿಸುತ ಭಂಗಾರ ತೃಪ್ತಿಯು ।
ದೊರೆಯದವನಿಗೆ ಪರುಸದಿಂ ಮಾಡಿರ್ದ ಚಿನ್ನವನು ॥
ತಿರಿತಿರಿಗಿ ಮಾರುತ್ತಲದರಿಂ ।
ಭರದಿ ಕಬ್ಬಿಣ ಕ್ರಯಕೆ ಕೊಳ್ಳುವ ।
ನರನೆ ನೋಡಿದು ಚಿತ್ರವಲ್ಲೈ ಬೆಳೆಯುತಿಹುದಾಶೆ ॥೩೮೫॥

ಇಟ್ಟು ಫಲದಾಶೆಯನು ದೇಹಕೆ ।
ಕಷ್ಟ ಕೊಡುವನು ಕಾಮ್ಯಕರ್ಮವ ।
ಬಿಟ್ಟು ಬಿಡನೈ ಹೊಡೆವನೈ ಬಡಿವಾರ ದರ್ಪದಲಿ ॥
ಸೃಷ್ಟಿಯಲಿ ತಾಂ ದೊಡ್ಡಕರ್ಮಠ- ।
ನೆಸ್ಟೆನುತ ಬಣ್ಣಿಸಲೆನುತ ಬಹು- ।
ಶ್ರೇಷ್ಠತನದ ಪ್ರಸಿದ್ಧಿ ಮಾಳ್ಪನು ಬೇಕುಬೇಕೆನುತ ॥ ೩೮೬ ॥

ಬರಲು ಕಾಳಜ್ವರವು ವೈದ್ಯರ- ।
ನಿರದೆ ಧಿಕ್ಕರಿಸುವುದು ಮಣಿಯದು ।
ಪರಿಯಲೀ ಕರ್ಮಾಭಿಮಾನಜ್ವರವು ತಲೆಗೇರೆ ॥
ಗುರುಹಿರಿಯರನು ತಂದೆತಾಯ್ಗಳ- ।
ನರಿಯನಲ್ಲಾ ತುಚ್ಛಿಸುವನೈ ।
ಧರಿಸಿದರೆ ಕರ್ಮಾಭಿಮಾನವ ಕರ್ಮ ರಾಜಸವು ॥ ೩೮೭ ॥

ಧರಿಸಿ ನಿಜಕರ್ಮಾಭಿಮಾನವ ।
ಧರಿಸಿ ಮೇಣು ಫಲಾಭಿಲಾಷವ ।
ಪರಿಪರಿಯ ಕರ್ಮಗಳನಾಯಾಸದಲಿ ಮಾಡಿದರು ॥
ಬರುವುದದರಿಂ ಕಷ್ಟ ಕೇವಲ ।
ಬರುವುದೇನದರಿಂದ ಲಾಭವು ।
ನಿರುತ ಹೊಟ್ಟೆಯ ವಿಷಯದಲಿ ಬ್ರಹ್ಮಾಂಡಕಷ್ಟವಲಾ
।। ೩೮೮ ॥

ಕೊರೆಯುವುದು ಪರ್ವತವನಿಲಿಯೊಂ- ।
ದಿರದೆ ದೊರೆವುದು ಕಾಳು ತನಗೆಂ- ।
ದರಿತು ಕಪ್ಪೆಯು ಸೇವಳದ ಬಯಕೆಯಲಿ ಸಾಹಸದಿ ॥
ಶರಧಿಯನೆ ಕಲಕುವುದು ಗಾರುಡಿ- ।
ಯುರಗಭಾರವ ಹೊತ್ತುಕೊಳ್ಳುವ ।
ದೊರೆಯದವನಿಗೆ ಬಿಕ್ಕೆ ಗಾರುಡಿಯಾಟದಲಿ ನೋಡೆ ॥ ೩೮೯ ॥

ಕೊರೆಯುವ್ರದು ಕಣದಾಶೆಯಿಂದಲಿ ।
ಧರಣಿಯಲಿ ಪಾತಾಳಪರ್ಯಂ- ।
ತರಕೆ ಗೊರ್ಲಿಯ ಸಾಹಸವು ಕೇಳ್ ಚಿತ್ರತರವದಲಾ ॥
ದೊರೆಯ ಬೇಕಾ ಸ್ವರ್ಗಸುಖವೆಂ- ।
ದುರುತರಶ್ರಮ ಮಾಳ್ಪರೆಲ್ಲರು ।
ನರನೆ ಕೇಳೀತೆರದಿ ರಾಜಸಕರ್ಮಲಕ್ಷಣವು ॥ ೩೯೦ ॥

ಇರುವುದವರಿಗೆ ಶ್ರಮವು ಪ್ರಿಯವೆಂ- ।
ದರಿತುಕೋ ಕೌಂತೇಯ ನಿನಗಾ- ।
ನರುಹಿದೆನು ವಿಸ್ತರಿಸಿ ರಾಜಸಕರ್ಮಲಕ್ಷಣವ ॥

ಇರುವುದದು ಬಹು ಕ್ಲೇಶಯುಕ್ತವು ।
ನರನೆ ನಿನಗಾನಿನ್ನು ಪೇಳುವೆ ।
ಹರುಷದಿಂದಲಿ ಕೇಳು ತಾಮಸಕರ್ಮಲಕ್ಷಣವ ॥ ೫೯೧ ॥

ಅನುಬಂಧಂ ಕ್ಷಯಂ ಹಿಂಸಾಮನಪೇಕ್ಷ್ಯ ಚ ಪೌರುಷಮ್ ।
ಮೋಹಾದಾರಭ್ಯತೇ ಕರ್ಮ ಯತ್ತತ್ತಾಮಸಮುಚ್ಯತೇ ॥ ೨೫ ॥

ನರನೆ ನೋಡೈ ಕರ್ಮತಾಮಸ- ।
ವಿರುವುದೈ ನಿಂದಾಪವಾದದ ।
ಪರಮಮಂದಿರ ಬಹಳಸುಂದರವಿಲ್ಲಿ ಕಲಿಪಾರ್ಥ ॥
ಬರುವುದಾಯ್ತು ನಿಷೇಧ ಜನ್ಮಕೆ ।
ಪರಮನಾರ್ಥಕವೆಂದು ಧನ್ಯತೆ ।
ದೊರೆಯಿತದರಿಂ ಚಿತ್ರತರವಿದು ಪಾರ್ಥ ನೋಡಿದಿಯಾ
॥ ೫೯೨ ॥

ನೀರ ಮೇಲಣ ರೇಖೆ ತತ್ಕ್ಷಣ ।
ಹಾರಿ ಹೋಗುವದೇನ ಹೇಳಲಿ ।
ತೋರಿದಾಕ್ಷಣವಸ್ತನಾಗುವ ಚಿತ್ರವೀರೂಪ ॥
ಯಾರು ನವನೀತವನು ಪಡೆವರು ।
ನೀರ ಮಂಥಿಸಿ ಯತ್ನ ನಿಷ್ಫಲ ।
ಯಾರು ಲಭಿಸರು ಚಿನ್ನ ಬೂದಿಯನೂದಿ ಯತ್ನಿಸಲು
॥ ೫೯೩ ॥

ಉಸುಕಹಾಕುತ ಗಾಣ ತಿರುಗಿಸೆ ।
ನುಸುಳುವುದೆ ಮೇಣ್ಣೆನ್ನೆ ಹಿಂಡಿಯು ।
ಕಸದಿ ತೌಡಿಲಿ ಧಾನ್ಯಕಣ ಸಿಗುತಿಹುದೆ ಹುಡುಕಿದರೆ ॥
ವಸುಮತಿಯೊಳೀ ಪಾಶದಿಂದಲಿ ।
ಯಸಮಗಾಳಿಯು ಹಿಡಿಯ ಬಹುದೇ ।
ವಿಷಮತನವಿದು ಪಾರ್ಥ ತಾಮಸಕರ್ಮ ನಿಷ್ಫಲವು
॥ ೫೯೪ ॥

ನರಶರೀರವಮೂಲ್ಯವಿರುವುದು ।
ಬರಿದೆಯಾಯಾಸದಲಿ ದುಃಖವು ।
ದೊರೆಯಲಾರದು ಸೌಖ್ಯವೀಪರಿ ಕರ್ಮತಾಮಸವು ॥
ಕೆರೆಯೊಳಿರುತಿಹ ಕಮಲವುಷ್ಣವ ।
ದೊರಕಿಸುವ ಹೇತುವಿಲಿ ಮುಳ್ಳಿನ ।
ಸರಸ ಪಾಶವ ಹಾಕೆ ನಿಷ್ಫಲವಹುದು ಶ್ರಮವೆಲ್ಲ ॥೫೯೫॥

ಬರಿದೆ ನಿಷ್ಫಲ ಶ್ರಮವದಲ್ಲದೆ ।
ತಿರಿಗಿ ಕಮಲವೆ ನಾಶವಪ್ಪುದು ।
ಮರುಳುತನದಿ ಪತಂಗ ದೀಪದ ಮೇಲೆ ಹಾಯುತಲಿ ॥

ಮರಣಮುಖದಲಿ ಬಿದ್ದು ಮನೆಯಲಿ ।
ತಿರಿಗಿ ಕತ್ತಲೆಯುನ್ನೆ ತರುತಿಹು- ।
ದರರೆ ತಾಮಸಕರ್ಮವೀಪರಿ ನೋದು ಕೌಂತೇಯ ॥ ೫೯೬ ॥

ಒರಿದೆ ತನ್ನ ಶ್ರಮವು ನಿಷ್ಫಲ ।
ಸರರಿಗಪಘಾತವನು ತರುವುದು ।
ನರನೆ ಮಶಕವು ಮಾನವನ ಚಾಯೊಳಗೆ ಸೇರುತಲೆ ॥
ಮರಣವನು ತಾಂ ಪಡೆವುದಲ್ಲದೆ ।
ಮರಳಿ ಬಾಯಲಿ ಸಾಂತಿ ಹುಟ್ಟಿಸಿ ।
ತರುವುದೈ ಕಷ್ಟವನು ತಾಮಸಕರ್ಮಗುಣವದಲಾ ॥ ೫೯೭ ॥

ಇರುವುದದು ಬಹುದೋಷದಾಗರ ।
ನರನೆ ನೀನಿದ ಮರೆಯಬಾರದು ।
ಬರುವುದೇನು ವಿಚಾರ ಮುಂದಿನ ಕರ್ಮಪರಿಣತಿಯ ॥
ಚರಿಸಲಿಕೆ ಯತ್ನವನು ಮಾಡಲು ।
ಬರುವುದೇ ಯಶವಿಲ್ಲದಿದ್ದರೆ ।
ಬರುವುದೈ ಯಪಯಶವದೆಂಬ ವಿಚಾರ ಬಾರದಲಾ ॥ ೫೯೮ ॥

ಮಾಡಿಹೆನು ನಾ ಭಾರಿ ಯತ್ನವ ।
ಗಾಢವಿಹುದೆನ್ನಯ ಪಸಾರವು ।
ಮೂಡುವುದು ಭಾಗ್ಯೋದಯವು ನಿಜವಾಗಿ ಯೆನಗೀಗ ॥
ರೂಢಿಯಲ್ಲಪಕೀರ್ತಿ ಬರುವುದೆ ।
ಗೂಢತನದಲಿ ಮಾಡಿ ಯೋಚನೆ ।
ಮಾಡುವನು ನಿರ್ಧಾರವೀ ತೆರವಾಗಿ ತಾಮಸನು ॥ ೫೯೯ ॥

ಇನಿತು ಸಾರಾಸಾರಯೋಚನೆ ।
ಕ್ಷಣದೊಳವನಿಗದೃಶ್ಯವಪ್ಪುದು ।
ಮುನಿಸಿನಲ್ಲವಿವೇಕ ಕಾಲಿಂದೊದ್ದು ಕೆಡಿಸುವುದು ॥
ಇನಿತು ಕರ್ಮಗಳನ್ನು ಸರ್ವವ ।
ಕ್ಷಣದೊಳಾನೇ ಮಾಳ್ಪೆನೆಂಬುವ ।
ಘನತರದ ಸ್ವಾಢ್ಯತೆಯು ಮನದಲಿ ತುಂಬಿತುಳುಕುವುದು ॥೬೦೦॥

ಅಡವಿಯುಲಿ ಬಿದುರಿನಲಿ ಹುಟ್ಟಿದ ।
ಕಿಡಿಯು ಮೇಣಡವಿಯನು ಸುಡುವುದು ।
ಕಡಲು ಮೇರೆಯು ಬಿಟ್ಟು ನಡೆದರೆ ಕೇಳು ಕಲಿವಾರ್ಥ ॥
ತಡಿಸುವವರನು ಕಾಣೆ ಬಂದುದ ।
ಕೆಡಿಸಿ ತಾಂ ನಿರ್ಧ್ವಂಸ ಮಾಳ್ಪುದು ।
ಬಿಡದು ಸಚರಾಚರವನೆಲ್ಲವ ಹೆಚ್ಚುಕುಂದುಗಳ ॥ ೪೦೧ ॥

ಇರದು ಯೋಗ್ಯಾಯೋಗ್ಯ ಜ್ಞಾನವು ।
ಯಿರುವುದೆಲ್ಲ ಸ್ವಾರ್ಥಪರತೆಯು ।
ಧರಣಿಯಲಿ ಲಕ್ಷಣಗಳೀಪರಿ ಕರ್ಮತಾಮಸಕೆ ॥

ನರನೆ ತ್ರಿಗುಣಾತ್ಮಕದ ಕರ್ಮವ ।
ನರುಹಿದೆನು ನಿನಗಾನು ಬಹುವಿ ।
ಸ್ತರದೊಳಾಯೋಗದಲಿ ಜೀವನುತ್ರಿಗುಣಸಂಯುತನು ॥ ೪೦೨ ॥

ಪುರುಷನೊರ್ವನೆ ತೋರುತಿದ್ದರು ।
ಬರುವುವವಗಾಶ್ರಮದ ಬಲದಲಿ ।
ಪರಿಪರಿಯವಸ್ಥೆಗಳು ನಾಲ್ಕವು ಪರಕಿಸಲು ತತ್ತ್ವ ॥
ನರನೆ ಕೇಳಾ ಪರಿಯಲೀನರ ।
ಗಿರುವುವೈ ಗುಣ ಮೂರು ನಿನಗಾ ।
ನರುಹುವೆನು ವಿಸ್ತರದಿ ತ್ರಿಗುಣಾತ್ಮಕರ ಮಾನವರ ॥ ೪೦೩ ॥

ಮುಕ್ತಸಂಗೋಽನಹಂವಾದೀ ಧೃತ್ಯುತ್ಸಾಹಸಮನ್ವಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾ ಸಾತ್ತ್ವಿಕ ಉಚ್ಯತೇ ॥ ೨೬ ॥

ಮಲಯಪರ್ವತದಲ್ಲಿ ಚಂದನ ।
ಫಲವ ಬಯಸದೆ ಬೆಳೆಯುತಿರುವುದು ।
ನೆಲೆಯು ಹತ್ತುವುದೆಂತು ಚುಂಬಿಸುತಿಹುದು ಗಗನವನು ॥
ತಿಳಿಯಲಿದಕೆರುವುದು ಕಣಾ ಪರಿ ।
ಮಳವು ಸರ್ವಾಂಗದಲಿ ನೋಡಲು ।
ತಿಳಿಯಲಾ ಕಲಿವಾರ್ಥ ಸಾತ್ತ್ವಿಕರೀತೆರದಲಿಹರು ॥೪೦೪॥

ನಾಗವಲ್ಲಿಯು ಫಲದಲೇನುಷ ।
ಯೋಗ ಕೊಡುವುದೆ ಜಗಕೆ ನೇಡಲು ।
ನಾಗುವುವು ಪರ್ಣಗಳು ಜನರುಪಯೋಗ ಮಾಡುವರು ॥
ನೀಗಿ ಫಲದಿಚ್ಛೆಯೆನು ಕರ್ಮವ ।
ನಾಗಿಸುವರೈ ನಿತ್ಯನಿಯಮಿತ ।
ರಾಗದ್ವೇಷವನೆಣಿಸದಲೆ ಮಾಡುವರು ಕರ್ಮಗಳ ॥೪೦೫॥

ತಿಳಿಯಲಾಗದು ಶೂನ್ಯಫಲವದು ।
ತಿಳಿಯಲಾಗದು ಕರ್ಮವಿಫಲತೆ ।
ಫಲಕೆ ಫಲ ಬರುತಿಹುದೆ ಜಗದಲಿ ನೋಡು ಕಲಿವಾರ್ಥ ॥
ಇಳೆಯೊಳವನಾ ಸರ್ವಕರ್ಮವ ।
ಕಳಕಳಿಯಲೀ ಮಾಡುತಿರುವನು ।
ಕೊಳಸು ತಾನಭಿಮಾನ ಫಲದಿಚ್ಛೆಯನು ಶಾಂತನವ ॥೪೦೬॥

ವರುಷಕಾಲದಿ ಮೇಘಪಂಕ್ತಿಯು ।
ಸುರಿಯುವುದಲಾ ಮಳೆಯ ರಾಶಿಯ ।
ಗರಜನೆಯು ಮಾಡುವುದೆ ಗುಡುಗಿನ ರೂಪದಲಿ ವಾರ್ಥ ॥

ನರನೆ ಕೇಳಾ ಪರಿಯಲೀ ನರ ।
ಚರಿಸುವನು ಸತ್ಕರ್ಮವೆಲ್ಲವ ।
ಹರಿಸಮರ್ಪಣೆಗೆಲ್ಲ ಯೋಗ್ಯವೆನುತ್ತ ನಂಬಿರುವ ॥ ೪೦೭ ॥

ಕಾಲಮರ್ಯಾದೆಯನು ತೊರೆಯದೆ ।
ತಾಳಿ ತಾನು ಶರೀರಶುದ್ಧಿಯ ।
ಮೇಲೆ ಶಾಸ್ತ್ರದ ದೀಪದಿಂ ನಿರ್ಣಯಿಸಿ ಕರ್ಮವನು ॥
ತಾಳಿ ಶಿರದಲಿ ನಿಗಮದಾಜ್ಞೆಯ ।
ಮೇಲೆ ಧರಿಸುತ ನಿಯಮಬಂಧನ ।
ಮೇಳವಿಸಿ ತಾನೈಕ್ಯವನು ವೃತ್ತಿಯನು ಯಿಂದ್ರಿಯದಿ ॥ ೪೦೮ ॥

ತೊರೆದು ಫಲದಿಚ್ಛೆಯನು ಕರ್ಮದಿ ।
ತೊರೆವನಾತನು ಸಾಖ್ಯ ಸಂತಸ ।
ತೊರೆವನೈ ನಿದ್ರೆಯನು ಮೇಣಾಲಸ್ಯ ಮೊದಲಾಗಿ ॥
ಮರೆತು ಬಿಡುವನು ಹಸಿವೆ ತೃಷೆಗಳ ।
ಸರಸಸುಖಸಾಧನಗಳೆಲ್ಲವ ।
ನರನೆ ಕೇಳು ಪಲಾಯನವ ಮಾಡುವುವು ದಿಶೆದಿಶೆಗೆ ॥ ೪೦೯ ॥

ಕೊಡಲು ಭಂಗಾರಕ್ಕೆ ಪುಟವನು ।
ಕಡಿಮೆಯಾಗುವುದದರ ಭಾರವು ।
ಪೊಡನೆ ಗುಣವೇರುವುದು ಪರಿಶುದ್ಧತೆಯು ಹೊಂದುವುದು ॥
ಪೊಡವಿಯೊಳಗಾತೆರದಿ ದಿನದಿನ ।
ಬಿಡದೆ ಕರ್ಮವ ಮಾಡಲದರಿಂ ।
ಪಡೆವನಧಿಕಾಧಿಕದೊಳುತ್ಸಾಹವನು ಕೌಂತೇಯ ॥ ೪೧೦ ॥

ಪ್ರೀತಿ ವರ್ಧಿಸಲೇನ ಹೇಳುವೆ ।
ಭೂತಳದಿ ಜೀವಿತವೆ ತುಚ್ಛವು ।
ಪ್ರೀತಿಪಾತ್ರದ ಪತಿಯೊಡನೆ ಸತಿ ಚಿತೆಯನೇರುವರೆ ॥
ಭೀತಿ ತಾಳುವಳೇ ಪತಿವ್ರತೆ ।
ಸೋತು ಮನ ರೋಮಾಂಚವೇಳುವ ।
ರೀತಿಯನು ನೀ ನೋಡಲಿಲ್ಲವೆ ಪಾರ್ಥ ಚಿತ್ರವಲಾ ।೪೧೧॥

ಮೇದಿನಿಯಲಿ ನಿಜಾತ್ಮಬೋಧಾ- ।
ಹ್ಲಾದಕಾರಕ ವಸ್ತು ಸಿಗುವರೆ ।
ಸಾದರದಿ ಯತ್ನವನು ಮಾಳ್ಪನು ದೇಹ ದಂಡಿಸುತ ॥
ಖೇದವಾಗದು ಮನದಿ ಮೋಣು ವಿ- ।
ಷಾದ ಬರುವುದೆ ತುಚ್ಛ ಸರ್ವವು ।
ಹಾದಿಗೆಡುವುದು ನಿಷಯಸುಖವಭಿಮಾನ ಸಾಯುವುದು
॥ ೪೧೨ ॥
ಪರಿಪರಿಯ ಕರ್ಮಾಚರಣದಲಿ ।
ಧರಿಸುವನು ಸಂತೋಷವೃತ್ತಿಯು ।
ಬರಲು ವಿಘ್ನವು ಮಾನಿಸನು ಖೇದವನು ಚಿತ್ತದಲಿ ॥

ಗಿರಿಯ ಮೇಲಿಂದೊಮ್ಮೆ ಬಂಡಿಯು ।
ಬರಲು ಚಾರುತ ಕೆಳಗೆ ಚೂರಾ- ।
ಗಿರಲು ಮೇಣವ ದುಃಖ ಪಡೆಯದೆ ಸ್ವಸ್ಥನಿರುವನಲಾ ॥ ೪೧೩ ॥

ತಾನು ಪ್ರಾರಂಭಿಸಿದ ಕರ್ಮದ ।
ಪೂರ್ಣತನದಲಿ ಸಿದ್ಧಿಯಾಗಲು ।
ಕಾಣನದರಲಿ ಸ್ವಪ್ರತಿಷ್ಠೆಯ ಸೌಖ್ಯಕಾರಣವ ॥
ಏನ ಹೇಳಲಿ ಪಾರ್ಥ ಯಿಪರಿ ।
ಪೂರ್ಣಲಕ್ಷಣಯುಕ್ತಸದ್ಗುಣಿ ।
ಮಾನವನು ನೀನೆಂದು ತಿಳಿಯೈ ಶಂಕೆಯಿಲ್ಲದಲೆ ॥ ೪೧೪ ॥

ನರನೆ ನಿನಗಾನೀಗ ಸಾತ್ತ್ವಿಕ- ।
ನರನ ಲಕ್ಷಣ ವಿಸ್ತರಿಸಿದೆನು ।
ಮರಳಿ ನಿನಗಾಂ ಪೇಳ್ವೆ ರಾಜಸಕರ್ತೃಲಕ್ಷಣವ ॥
ಅರುಹಿದೀ ಲಕ್ಷಣಗಳೆಲ್ಲವ ।
ಮರೆಯ ಬಾರದು ತಿಳಿವುದೆಲ್ಲವ ।
ಮೆರೆವನೈ ರಾಜಸನು ನೋಡಭಿಮಾನತೌರೂರು ॥ ೪೧೫ ॥

ರಾಗೀ ಕರ್ಮಫಲಪ್ರೇಪ್ಸುರ್ಲುಬ್ಧೋ ಹಿಂಸಾತ್ಮಕೋಽಶುಚಿಃ ।
ಹರ್ಷಶೋಕಾನ್ವಿತಃ ಕರ್ತಾ ರಾಜಸಃ ಪರಿಕೀರ್ತಿತಃ ॥ ೨೭ ॥

ಬರಲು ಲಾಭವೆ ತನಗೆ ಕರ್ಮಾ- ।
ಚರಣದಲಿ ಮೋಣದನೆ ಮಾಳ್ಪನು ।
ತೆರೆಯಲಾರನು ಸ್ವಾರ್ಜಿತಾರ್ಥದ ಪೇಟಿಕೆಯನವನು ॥
ದರದಿವಸ ದರನಿಮಿಷವಾ ಹಣ- ।
ಕಿರದೆ ಪೂಜೆಯ ಮಾಡಿ ಸಂತಸ ।
ಧರಿಸುವನು ಕವಡಿಯನು ಮುಟ್ಟನು ಸ್ವಾರ್ಜಿತದ ಹಣದಿ
॥ ೪೧೬
ಮನುಜ ಕೃಪಣನು ಹುಗಿದು ತನ್ನಯ ।
ಧನವ ಸಂರಕ್ಷಿಸುವನಾತೆರ ।
ದಿನದಿನದಿ ಪರದ್ರವ್ಯದಭಿಲಾಷವನು ಧರಿಸುವನು ॥
ತಿನಲು ಮಿನನು ಬಕನು ನೀರಲಿ ।
ವಿನಯದಿಂ ಮುಚ್ಚುತಲಿ ಕಣ್ಣನು ।
ಮಿನುಗುವನು ತಾಪಸನ ವೇಷದಿ ಮಿನು ಸಿಗುವನಕ
॥ ೪೧೭ ॥
ನರನು ಚೋರೆಯ ವನವ ಸೇರಲು ।
ಧರಿಸಿರುವ ವಸ್ತ್ರಗಳ ಹಿಡಿವುದು ।
ಭರದೊಳದ ಬಿಡಿಸಲ್ಕೆ ಪೋಗಲು ಮೈಯ ಚುಚ್ಚುವುದು ॥

ಮರಳೆ ಚೋರೆಯ ಸ್ಥಲವ ಕೊಳ್ಳಲು ।
ಯಿರುವುದೇನದರೊಳಗೆ ಕಲ್ಲಿನ ।
ತೆರದಿ ಬೀಜವೆ ನೋಡಿದಿಯೊ ಕಲಿಪಾರ್ಥ ತತ್ತ್ವವನು ॥೪೧೮॥

ತನುಮನದಿ ಧನದಿಂದಲೆರಡನೆ- ।
ಮನುಜನಿಗೆ ದುಃಖವನು ಕೊಡುವುದು ।
ತನಗೆ ಹಿತವಾಗುವರೆ ಮಾಡುವನಹಿತವನ್ಯರಿಗೆ ॥
ತನಗಿರದು ಸಾಮರ್ಥ್ಯ ಕರ್ಮವ- ।
ನನವರತವಾಚರಿಸಲಾತೆರ ।
ಮನದಿ ಬೇಸರವಾಗದವನಿಗೆ ಕರ್ಮ ತ್ಯಜಿಸಿದರೆ ॥ ೪೧೯ ॥

ಧತ್ತೂರದ ಫಲ ನೋಡಿದಿಯೊ ಕಲಿ- ।
ಪಾರ್ಥ ಹೊರಬದಿ ಮುಳ್ಳುಗಳು ಬಹು ।
ಕೆತ್ತಿಹುವು ಮೇಣೊಳಗೆ ಮಾದಕದ್ರವ್ಯ ತುಂಬಿಹುದು ॥
ಪೃಥ್ವಿಯಲ್ಲೀತೆರದಿ ರಾಜಸ ।
ಕರ್ತನಿರುವನು ಹೊರಗೊಳಗೆ ಬಹು ।
ಚಿತ್ರತರದಿಂದಶುಚಿ ನೋಡಿದರೇನ ಹೇಳುವೆನು ॥ ೪೨೦ ॥

ಪ್ರಾಪ್ತವಾಗಲು ಕರ್ಮಫಲ ನಿಜ- ।
ಚಿತ್ಸದಾನಂದದಲಿ ತಾನು ಜ- ।
ಗತ್ತಿನಲಿ ಕುಣಿಯುವನು ಹುಚ್ಚನೊ ಯೆಂಬ ತೆರನಾಗಿ ॥
ಪ್ರಾಪ್ತವಾಗದೆ ಹೋದರಾ ಫಲ ।
ನಿತ್ಯವದ ಧಿಕ್ಕಾರದಿಂ ಬೈ- ।
ಯುತ್ತ ಕರ್ಮಾಚರಣ ತ್ಯಜಿಪನು ಕರ್ತರಾಜಸನು ॥೪೮॥

ನರನೆ ಕೇಳೀತೆರದಿ ಕರ್ಮಾ- ।
ಚರಣವಾರೀ ಜಗದಿ ಮಾಡುವ- ।
ನರಿಯಲವ ರಾಜಸನು ಕರ್ತನು ತತ್ತ್ವ ತಿಳಿದಿಯಲಾ ॥
ಅರುಹುವೆನು ನಾ ನಿನಗೆ ಬಹು ವಿ- ।
ಸ್ತರದಿ ತಾಮಸಕರ್ತೃಲಕ್ಷಣ- ।
ವಿರುವನವ ದುಷ್ಕರ್ಮದಾಗರ ನಿಂದ್ಯಸಂಸ್ಕಾರ ॥ ೪೯ ॥

ಅಯುಕ್ತಃ ಪ್ರಾಕೃತಃ ಸ್ತಬ್ಧಃ ಶಠೋ ನೈಷ್ಕೃತಿಕೋಽಲಸಃ ।
ವಿಷಾದೀ ದೀರ್ಘಸೂತ್ರೀ ಚ ಕರ್ತಾ ತಾಮಸ ಉಚ್ಯತೇ ॥ ೨೮ ॥

ಸುತ್ತಮುತ್ತಲು ಸ್ಪರ್ಶ ಮಾಡುವ ।
ವಸ್ತುವೆಲ್ಲವ ಸುಟ್ಟು ಜಿದುವೆನೆ- ।
ನುತ್ತ ವೈಶ್ವಾನರಗಿರುವುದೇನರವು ಕೌಂತೇಯ ॥
ಕತ್ತರಿಸಿ ದೇಹವನು ದೂಡುವೆ ।
ಮೃತ್ಯುನಿಗೆ ತುತ್ತಾಗಿ ಮಾಲ್ಪೆನೆ- ।
ನುತ್ತ ಶಸ್ತ್ರಕೆ ಗೊತ್ತಿರುವುದೇ ಪಾರ್ಥ ನಿಜತತ್ತ್ವ ॥ ೪೨ ॥

ಎಳೆಮಗುವ ಕೇಳರೆಗಳಿಗೆಯ- ।
ಲ್ಲಳುವುದಲ್ಲಾ ಕ್ಷಣದಿ ನಗುವುದು ।
ಗಳಿಗೆಗಳಿಗೆಗೆ ಚಿತ್ತಚಂಚಲವಿಹುದು ನೋಡಿದರೆ ॥
ತಿಳಿಯಲಾಪರಿ ಕರ್ತ ತಾಮಸ ।
ತಿಳಿಯಲಾರನು ವಿಧಿನಿಷೇಧವ ।
ಬೆಳೆವನೈ ದುಷ್ಕರ್ಮದರ್ಪದಿ ಜ್ಞಾನವಿಲ್ಲದಲೆ ॥ ೪೨ ॥

ಸೇರುತಾ ಜನರಲಿ ತಾನು ಶ- ।
ರೀರವನು ನಾಶಿಪೆನೆನುತ್ತಲಿ ।
ತೋರುನ್ಮದೆ ಮನದೊಳಗೆ ವಿಷಕಾ ಕಾಲಕೂಟಕ್ಕೆ ॥
ಧಾರುಣಿಯಲೀ ತೆರದಿ ತಾಮಸ- ।
ಕಾರನರಿಯನು ತನ್ನ ಹಾನಿಯ ।
ಬೇರೆಯವರನ್ನೀನು ಮನ್ನಿಸುತಿಹನೆ ಕರ್ಮದಲ ॥ ೪೩ ॥

ಹೊಲಸುಕಸದಿಂ ಹೊಲಸುರಾಶಿಯು ।
ಬೆಳೆವ ಪರಿಯಲಿ ಬೆಳೆವನಲ್ಲಾ ।
ತಿಳಿಯದಜ್ಞಾನದಲಿ ಪರಮೇಶ್ವರನ ತಕ್ಕಿಪನು ॥
ಜಲಧಿಸಂಜಯ ಕೇಳು ನಮ್ರತೆ ।
ಕೊಳನು ಗರ್ವದಲುಬ್ಬಿ ಪರ್ವತ- ।
ಗಳನು ತುಚ್ಛಿಸಿ ಕೊಬ್ಬಿ ಮನದಲಿ ತುಂಬಿ ತುಳುಕುವನು ॥೪೪॥

ಮೇಳವಿಲ್ಲೈ ಕೃತಿಗೆ ಯಿಚ್ಛೆಗೆ ।
ತಾಳೆ ವಿಷಯಾಸಕ್ತಿ ಭರದಲಿ ।
ಬಾಳುತಿರುವನು ವಿಷಯಸುಖದಲಿ ವಾಸವಾತ್ಮಜನೆ ॥
ಬಾಲದಲಿ ವಾಸಿಪುದು ಗೋಚಿಯ- ।
ವೇಳಲೊಲ್ಲದು ವೃಷಭದಂಗದಿ ।
ಕೇಳು ತಾಮಸಕರ್ತನೀಪರಿ ಸುಖಕೆ ಹಪ್ಪುವನು ॥ ೪೫ ॥

ಮನದೊಳೀಳ್ವನ್ನೆ ವಿಷಯತೆರೆಗಳು ।
ಮಿನುಗುವುದು ಬಾಹ್ಯಾಚರಣವೈ ।
ಮನದಿ ಪರರಿಗೆ ಘಾತ ಮಾಡುವ ಮಾತು ಮಾತ್ರವಲಾ ॥
ನೆನಸನಸ್ಯನ ದೃಷ್ಟಿ ವಾರಾಂ- ।
ಗನೆಯ ತೆರದಲಿ ಮಧುರವನ್ಯರ ।
ಧನವ ಹರಣವ ಮಾಳ್ಪ ಪಾಶವಿದೇನ ಹೇಳುವೆನು ॥ ೪೬ ॥

ಏನ ಹೇಳಲಿ ಪಾರ್ಥ ಗಾಳಿ ತು- ।
ಛಾನಿಸಲಿ ತಾನೇಳಲಾಕ್ಷಣ ।
ಮಾನಿಸುವುದೇ ಕೆತ್ತಿ ಧೂಳಾಡಿಸುವ ತೆರವಿಂದ ॥
ಮಾನವನು ತಾಮಸಿಕ ತಿಳಿಯನು ।
ಹಾನಿಲಾಭವ ಹೆಚ್ಚ ಕುಂದ- ।
ನ್ನೇನನೇಳಲಿ ತೋರ್ಪನವನುನ್ಮತ್ತನಂದದಲಿ ॥ ೪೭ ॥

ಇರುವುದವನ ಶರೀರ ಕಪಟದಿ ।
ಭರಿತವಾಯುರ್ದಾಯವೆಲ್ಲವು ।
ದುರಿತ ದ್ಯೂತಾದಿಗಳ ಮೂಲಾಧಾರಖಂಬವಲಾ ॥
ಅರಿಯಲವನ ಪ್ರಸನ್ನತೆಯು ಕೇ- ।
ರಿರುವುದೈ ಯಭಿಲಾಷ ಜೇರಡ- ।
ರಿರುವ ವೊಂದೆನ್ನ ಬಹುದಲ್ಲೈ ಧನಂಜಯನೆ ॥ ೪೮ ॥

ಬೇರಡರದೂರೆಂದು ಪೇಳದೆ ।
ನಾರು ಹೋಗುವರವರ ವಸ್ತಿಗೆ ।
ದಾರಿಯಲ್ಲಿ ದರೋಡೆ ಬೀಳ್ವುದು ಕೇಳು ಕೌಂತೇಯ ॥
ಬೇರೆಯುವರುತ್ಕರ್ಷ ಸಹಿಸದೆ ।
ವೈರ ಮಾತ್ರವೆ ತಾಳ್ವನವರೊಳು ।
ಕ್ಷೀರದಲಿ ಲವಣವನು ಹಾಕಿದ ಪರಿಯಲಾಗುವುದು ॥೪೩॥

ಪಾರ್ಥ ಕೇಳೈ ಬೆಂಕಿಯಲಿ ಬಹು ।
ಶೀತಲ ಪದಾರ್ಥಗಳ ಹಾಕಿದ-।
ರಾತತುಕ್ಷಣ ಬೆಂಕಿ ಕಿಡಿಯಾಗುವುದು ನೋಡಿದರೆ ॥
ಪಾರ್ಥ ನೋಡೈ ವಿಧವಿಧದಲಿ ಪ-।
ದಾರ್ಥ ತಿಂದರದೇನು ಹೊಟ್ಟೆಯು ।
ಆತತುಕ್ಷಣ ಮಲವ ಮಾಳ್ಪುದು ಹೊರಗೆ ಹಾಕುವುದು
॥ ೪೩॥
ಪರರ ಗುಣಗಣ ನೋಡಿ ಸಹಿಸದೆ ।
ನಿರುತ ಪರನಿಂದಾಪರನಲಾ ।
ವ್ರರಗನಿಗೆ ಹಾಲೆರದರದು ವಿಷವಾಗುವುದು ನಿಜದಿ ॥
ತರುವ್ರದಿಹಲೋಕದಲಕೀರ್ತಿಯು ।
ಬರುವ್ರದೈ ಪರಲೋಕವೆಂದರೆ ।
ಚರಿಸನೈ ತತ್ಕರ್ಮ ನಿದ್ರಾಲಸ್ಯಯುತನಹನು ॥ ೪೩॥

ಕೆಟ್ಟಕರ್ಮವ ಮಾಡಲೆತ್ನಿಸೆ ।
ಮುಟ್ಟಲಾರದು ನಿದ್ರೆಯವನಿಗೆ ।
ಒಟ್ಟು ದೂರಕ್ಕೊಡುವುದು ಮುಟ್ಟಾದ ಸ್ತ್ರೀಯಂತೆ ॥
ಕಷ್ಟವೈ ಸೂರ್ಯೋದಯದಲಾ ।
ದೃಷ್ಟಿ ಕುರುಡಾಗುವುದು ಗೂಗೆಗೆ ।
ಸೃಷ್ಟಿಯಲ್ಲೀ ಚಿತ್ರವೀಪರಿ ಕರ್ತೃ ತಾಮಸನ ॥ ೪೩೪ ॥

ಹುಣ್ಣು ಬರುತಿಪ ವೇಳೆಯಲಿ ಬಾಯ್-।
ಹುಣ್ಣು ಬಂತೈ ಕಾಗೆಗೆನುತಲಿ ।
ನಾಣ್ಣುಡಿಯು ತಾಮಸಗೆ ಬರುವುದು ಸತ್ಯಮಾತಾಗಿ ॥

ಪುಣ್ಯಕಾರಕ ಶ್ರವಣಕೀರ್ತನ-।
ವೆನ್ನಲಾತಗೆ ನಿದ್ರೆ ಬರುವುದು ।
ಕಣ್ಣಕಿವಿಗಳ ಮುಚ್ಚುತಲಸನ ತೆರದಿ ಮಲಗುವನು ॥ ೪೩೫ ॥

ದುರಿತಕಾರಕ ಕರ್ಮಗಳನಾ-।
ಚರಿಸು ಯೆನಲುತ್ಸಾಹದಿಂದಲಿ ।
ಹರುಷದಿಂದೋಡಿಸುವ ನಿದ್ರಾಲಸ್ಯಗಳನೆಲ್ಲ ॥
ಶರಧಿಜರರದಿ ಸುಡುತಿರುವನಾ ।
ಪರಮ ವಡಬಾಳನನು ತದ್ವ-।
ತ್ತುರಿಯುತಿಹುದೈ ಹೊಟ್ಟೆಕಿಚ್ಚು ದರದಲಿ ತಾಮಸನ ॥ ೪೩೬ ॥

ಇರುವುದಾಡಿನ ಹಿಕ್ಕೆಯಲಿ ಹೊಗೆ-।
ಯಿರುವುದ್ದೈ ದುರ್ಗಂಧ ವಾಯುವು ।
ಒರಲಪಾನದ್ವಾರದಲಿ ಮಾನವನ ಕೌಂತೇಯ ॥
ಇರುವ್ರದಾಪರಿ ಕರ್ತೃತಾಮಸ-।
ನರನ ಜರರದಿ ಹೊಟ್ಟೆಕಿಚ್ಚದು ।
ಹೊರಡುವುದು ದುರ್ನಿಷವು ಪರರುತ್ಕರ್ಷ ಸಹಿಸನಲಾ ॥ ೪೩೭ ॥

ನರನೆ ಕೇಳ್ಕಲ್ಪಾಂತಪರ್ಯಂ ।
ತರಕೆ ಲಾಭವು ತನಗೆ ಶಾಶ್ವತ ।
ದೊರೆಯಬೇಕೆಂದೇ ಮಹೋದ್ಯೋಗವನೆ ಮಾಡುವನು ॥
ಪರಿಯಲೀ ವ್ಯಾಪಾರ ಮಾಡುವ-।
ನರರೆ ದುಷ್ಕೃತಿಫಲವು ಗಹನವು ।
ದೊರೆಯಲಾರದು ಕವಡಿಯಾದರು ಲಾಭವಾತನಿಗೆ ॥ ೪೩೮ ॥

ಧಾರುಣಿಯಿಲೀ ವಾಪರಾಶಿಯ ।
ಮೇರುವೋ ದುರಿತಾಳಿ ನಿಜದಿ ಶ-।
ರೀರಿಯಾಗಿಯೆ ರಂಜಿಸುವನೀ ತಾಮಸನ ಮೂರ್ತಿ ॥
ಚಾರು ಸಂತೋಷದಲಿ ನಾ ವಿ-।
ಸ್ತಾರದಿಂ ಪೇಳಿದೆನು ಲಕ್ಷಣ ।
ಮೂರುವಿಧವಿದು ಕರ್ಮಕರ್ತೃಜ್ಞಾನಲಕ್ಷಣವು ॥ ೪೩೯ ॥

ಬುದ್ಧೇರ್ಭೇದಂ ಧೃತೇಶ್ಚೈವ ಗುಣತಸ್ತ್ರಿವಿಧಂ ಶೃಣು ।
ಪ್ರೋಚ್ಯಮಾನಮಶೇಷೇಣ ಪೃಥಕ್ತ್ವೇನ ಧನಂಜಯ ॥ ೨೯ ॥

ಇರುವುದೈ ಯಜ್ಞಾನ ಪಟ್ಟಣ ।
ಧರಿಸುತದರಲಿ ಮೋಹವಸ್ತ್ರವ ।
ತಿರಿಗಿ ಸಂಶಯರೂಪ ಚಿನ್ನಾಭರಣವೇರಿಸುತ ॥

ಮರಳಿ ನೋಡಲಿಕಾತ್ಮನಿಶ್ಚಯ-।
ವಿರುವುದೆಂತೆನೆ ನೋಳ್ಪ ಕನ್ನಡಿ ।
ಯಿರುವುದಾ ಕನ್ನಡಿಯು ಬುದ್ಧಿಯು ಮೂರುಗುಣವಾಗಿ ॥೪೪೦॥

ನರನೆ ಸತ್ತ್ವರಜಸ್ತಮೋಗುಣ- ।
ವಿರದ ವಸ್ತುವು ಜಗದೊಳಾವುದು ।
ಧರೆಯೊಳಿಹುದೇ ಕಾಷ ಜಠರದಿ ಬೆಂಕಿಯಿಲ್ಲದುದು ।।
ಧರೆಯಲೀ ವಿಶ್ವದಲಿ ದೃಶ್ಯದಿ ।
ಮೆರೆವ ತ್ರಿಗುಣಗಳಿಲ್ಲವೆನ್ನವು- ।
ದಿರುವುದೇ ಕಲಿಪಾರ್ಥ ತ್ರಿಗುಣದಿ ಭರಿತವೀಜಗವು ।೪೪೧॥

ಮೂರು ಗುಣವಾಗಿಹುದು ಬುದ್ಧಿಯು ।
ಮೂರು ಗುಣವೀ ತೆರದಿ ಧೃತಿಯೈ ।
ಬೇರೆ ಬೇರೀತೆರದ ಭೇದಂಗಳನು ವರ್ಣಿಸುವೆ ॥

ಬೇರೆಬೇರಾಲಕ್ಷಣದ ವಿ- ।
ಸ್ತಾರ ನಿನಗಾಂ ಪೇಳ್ವೆ ಮೋದದಿ ।
ಚಾರು ಬುದ್ಧಿಯ ಲಕ್ಷಣಂಗಳ ಪೇಳ್ವೆ ನಾ ಮೊದಲು ॥ ೪೪೨ ॥

ಧೀರಸುಭಟನೆ ಕೇಳು ನರ ಸಂ- ।
ಸಾರದಲಿ ಬರುವಾಗ ತ್ರಿವಿಧವು ।
ದಾರಿಗಳು ರಂಜಿಸುವು ವೃತ್ತಮಮಧ್ಯಮಾಧಮವು ।।
ದಾರಿ ಯೆಂದರೆ ಮೂರು ಕರ್ಮದ ।
ದ್ವಾರವೆಂದೇ ತಿಳಿಯ ಬೇಕು ವಿ- ।
ಚಾರಿಸಲು ಕರಣೀಯ ಕಾಮ್ಯ ನಿಷಿದ್ಧವಿವು ನೋಡೆ ॥ ೪೪೩ ॥

ಪ್ರವೃತ್ತಿಂ ಚ ನಿವೃತ್ತಿಂ ಚ ಕಾರ್ಯಾಕಾರ್ಯೇ ಭಯಾಭಯೇ ।
ಬಂಧಂ ಮೋಕ್ಷಂ ಚ ಯಾ ವೇತ್ತಿ ಬುದ್ಧಿಃ ಸಾ ಪಾರ್ಥ ಸಾತ್ತ್ವಿಕೀ ॥ ೩೦ ॥

ನರನೆ ನೋಡಧಿಕಾರಸಂಮತ ।
ಬರಲು ವಿಧಿಯೋಗದಲಿ ಕರ್ಮವು ।
ಧರೆಯಲದು ಸರ್ವೋತ್ತಮವು ಕೇಳ್ ನಿತ್ಯಕರ್ಮವದು ॥
ಬರುವುದಾತ್ಮಜ್ಞಾನವೆಂದೇ ।
ಭರವಸದ ಮೇಲಿಟ್ಟು ದೃಷ್ಟಿಯ- ।
ನಿರದೆ ಮಾಡಲು ಬೇಕು ತೃಷಿತನು ನೀರ ಕುಡಿವಂತೆ ॥೪೪೪॥

ನಿತ್ಯಕರ್ಮವ ನರನು ನೋಡೀ- ।
ಯುಕ್ತಿಯಿಂದಾಚರಿಸಲದ ಬಹು- ।
ದುಸ್ತರದ ಜನ್ಮವನು ದಾಟುವ ಭಯವನೀಗುವನು ॥
ಮುಕ್ತಿಯೆಂಬುದು ಬಹಳ ಸುಲಭದಿ ।
ಪ್ರಾಪ್ತವಪ್ಪುದು ಬೇಡ ಸಂಶಯ ।
ಮುಕ್ತನಹ ಸಂಸಾರಭಯದಿಂ ಬೇರೆ ಮಾತೇನು ।। ೪೪೫ ॥

ನರನು ಕೇಳು ಮುಮುಕ್ಷುಪದವಿಗೆ ।
ಬರುವನೀಪರಿಯಿಂದ ಕರ್ಮಾ- ।
ಚರಣವನು ಮಾಡಲ್ಕೆ ನಿರ್ಧಾರದಲಿ ನಾ ಪೇಳ್ವೆ ।।
ನರನೆ ನೋದು ಪ್ರವೃತ್ತಿಮಾರ್ಗವಿ- ।
ದಿರುವುದಿದಕೆ ನಿವೃತ್ತಿ ತಳಹದಿ ।
ಶರಧಿಸಂಗಮತೀರ್ಥವಿದರಲಿ ಮುಳುಗು ನೋಡಿದಿಯಾ
॥ ೪೪೬ ॥

ನೀರಡಿಕೆಯಿಂ ಒಳಲಿ ಬಹು ಜಾ- ।
ಯಾರಿದವನಿಗೆ ನೀರು ಸಿಗಲದು ।
ನೀರಿನಲಿ ನಿರೆಯೊಳಗೆ ಬಿದ್ದವಗೀಸಲಿಕೆ ಬರಲು ॥

ಸೂರಿಯನ ಬೆಳಕಿರಲು ಕತ್ತಲೆ- ।
ಯೂರಿನಲಿ ಸಂಚಾರ ಸುಲಭವು ।
ಚಾರು ಪಥ್ಯದೊಳೌಷಧವ ಗ್ರಹಿಸಿದರೆ ಲಾಭವಲಾ ॥ ೪೪೭ ॥

ಮೀನಿಗಾಶ್ರಯವಿರಲು ನೀರದು ।
ಹಾನಿಭಯವೆಲ್ಲಿಯದು ತದ್ವತು ।
ಮಾನವನು ನೋಡಾಚರಿಸಿದರೆ ನಿತ್ಯಕರ್ಮವನು ॥
ಏನು ದುರ್ಲಭ ಮೋಕ್ಷವಾಪ್ತಿಯು ।
ಮಾನವನಿಗೈ ವಾರ್ಥ ಪರಿಕಿಸೆ ।
ಜ್ಞಾನಕಿಹುದಾ ನಿತ್ಯಕರ್ಮಾಚರಣದಲಿ ವೃತ್ತಿ ॥ ೪೪೮ ॥

ಧಾರುಣಿಯಲೀ ಕಾಮ್ಯಕರ್ಮವು ।
ತೋರಿಪ್ಪದು ಸಂಸಾರಭಯವ- ।
ನ್ನೇರಿಹುದು ನೋಡಿದಕೆ ಮುದ್ರೆ ನಿಷೇಧರೂಪಿನದು ॥
ಘೋರತರಸಂಸಾರದಲಿ ಭಯ- ।
ಕಾರಿ ಚರಿಸಲಿಕರ್ಹವಲ್ಲದ ।
ಕ್ರೂರಕರ್ಮವ ನೋಡಿ ತಾನು ಪಲಾಯನವ ಮಾಳ್ಪ ॥ ೪೪೯ ॥

ಊರಿನ ಬೆಂಕಿಯ ಸೇರಲಾರರು ।
ಶರಧಿಯಲಿ ಮಡುವಿನಲಿ ಧುಮುಕುವ- ।
ರಿರುವರೇ ಕೈಯೊಳಗೆ ಕೊಳುವರೆ ತಪ್ತಲೋಹವನು ॥
ಕರದಿ ಹಿಡಿವರೆ ಸಿಟ್ಟಿಗೆದ್ದಿರು- ।
ವುರಗರಾಜನ ಕಾಳಸರ್ಪನ ।
ಧರಣಿಯಲಿ ಹುಲಿಗವಿಯ ಹೊಕ್ಕುವರಿರುವರೇ ಪಾರ್ಥ ॥೪೫೦॥

ನರನೆ ನೋಡು ನಿಷಿದ್ಧಕರ್ಮವ ।
ನಿರದೆ ನೋಡಲು ಭೀತಿಯಾತೆರ ।
ನಿರುವದಲ್ಲಾ ನರಗೆ ಸಾತ್ವಿಕಭಾವದಾತನಿಗೆ ।
ಮರಣ ಬಾರದಲಿರುವುದೇ ವಿಷ ।
ವಿರುವ ಭೋಜನ ತಿನಲು ನಿಶ್ಚಯ ।
ಮರಣಜನನದ ಭಯವು ಕರ್ಮ ನಿಷಿದ್ಧವಾಚರಿಸೆ ॥೪೫೧॥

ಮರಣಜನ್ಮದ ಭೀತಿ ಬೆನ್ನಿನ ।
ಲಿರುವುದೈ ಕರ್ಮದಿ ನಿಷಿದ್ಧದೊ ।
ಳರಿತಿದನು ತ್ಯಜಿಸುವುದು ಬುದ್ಧಿಯು ಕೇಳು ಕಲಿಪಾರ್ಥ ॥

ಏಲೆಯೊ ರತ್ನವು ಮೇಣು ಸುಳ್ಳೋ ।
ಯಿರುವುದೇನಿದುವೆನುತ ತತ್ತ್ವವ ।
ಪರಿಕಿಸುವನ್ಯೆ ರತ್ನಪಾರಖಿ ಬುದ್ಧಿಯಾ ತೆರದಿ ॥ ೪೫೨ ॥

ಪರಿಕಿಸುವುದ್ಯೆ ಕರ್ಮವಾವುದು ।
ನರನೆ ಕಾರ್ಯಾಕಾರ್ಯವೆಂಬುದ ।
ರರವ ಕೊಡುವುವು ಮಾನದಷ್ಟು ಪ್ರವೃತ್ತಿಯು ನಿವೃತ್ತಿ ॥
ಪರಿಕಿಸುತ ಕರ್ಮಗಳನೆಲ್ಲವ ।
ನರಿತು ಸಾರಾಸಾರ ಭೇದವ ।
ಚರಿಸುತಿಹುದ್ಯೆ ಕಾರ್ಯಕರ್ಮವ ಬುದ್ಧಿ ಸಾತ್ವಿಕವು ॥ ೪೫೩ ॥

ಯಯಾ ಧರ್ಮಮಧರ್ಮಂ ಚ ಕಾರ್ಯಂ ಚಾಕಾರ್ಯಮೇವ ಚ ।
ಅಯಥಾವತ್ಪ್ರಜಾನಾತಿ ಬುದ್ಧಿಃ ಸಾ ಪಾರ್ಥ ರಾಜಸೀ ॥ ೩೧ ॥

ಕ್ಷೀರನೀರದ ಭೇದ ಬಕನ ಬ ।
ಚಾರದಲಿ ತಿಳಿಯುವುದೆ ಕುರುಡ ಬ ।
ಚಾರದಲಿ ದಿನರಾತ್ರಿಭೇದವ ತಿಳಿವರಾರಿಹರು ॥
ಚಾರು ಕೋಮಲ ಕುಸುಮ ಭೋಗಿಪ ।
ಧೀರ ಭ್ರಮರನು ಕಠಿನ ಮರವನು ।
ಕೋರುವನು ಭ್ರಮರತ್ವ ನಷ್ಟವೆ ನೋಡು ಕಲಿಪಾರ್ಥ
॥ ೪೫೪ ॥

ನರನು ಧರ್ಮಾಧರ್ಮರೂಪವ ।
ನರಿಯದಲೆ ಮಾಡುವನು ಕರ್ಮವ ।
ನರಿಯನಾವುದು ಜಗದಿ ಕಾರ್ಯಾವಕಾರ್ಯವೆಂಬುದನು ॥
ಪರಿಕಿಸದೆ ಮುತ್ತುಗಳ ಕೊಂಡರೆ ।
ದೊರೆಯ ಬಹುದ್ಯೆ ಚೆಲೊ ಕೆಲವ ಮೇಣ್ ।
ದೊರೆಯಲಾರವು ಸರ್ವ ಚೆಲೊ ಮುತ್ತುಗಳು ನಿಶ್ಚಯವು
॥ ೪೫೫ ॥

ಬಾರದಿರಲು ನಿಷಿದ್ಧಕರ್ಮಾ ।
ಚಾರ ನಿಲ್ಲುವುದಲ್ಲವಾದರೆ ।
ಬಾರದ್ಯೆ ಮನದೊಳಗೆ ಕರ್ಮದ ವಿಧಿನಿಷೇಧಪರಿ ॥
ಸಾರವಥವಾಸಾರವೆಂಬ ವಿ ।
ಚಾರವೇ ಒರಲಾರದೀಪರಿ ।
ಚಾರು ಕರ್ಮಾಚಾರ ಸಂಭವಿಸುವುದು ನಿಜವಾಗಿ ॥ ೪೫೬ ॥

ಮನೆಯೊಳೂಟಕ್ಕೂರಿಗಾಮಂ ।
ತ್ರಣವ ಕೊಟ್ಟಂತಾಯಿತದರೊಳು ।
ಜನರು ಯೋಗ್ಯರು ಯಾರಯೋಗ್ಯರು ಯೆಂಬಸುವಿಚಾರ ॥
ಮನದಿ ಬಾರದೆ ಕರ್ಮವಾಯ್ತಿದು ।
ಮನುಜರೀ ಪರಿಯಂಧಬುದ್ಧಿಯೊ ।
ಳೆನಿತುಕಾರ್ಯವ ಮಾಡಲಾಯಿತು ಬುದ್ಧಿರಾಜಸವು ॥ ೪೫೭ ॥

ಅಧರ್ಮಂ ಧರ್ಮಮಿತಿ ಯಾ ಮನ್ಯತೇ ತಮಸಾವೃತಾ ॥
ಸರ್ವಾರ್ಥಾನ್ ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀ ॥ ೩೨ ॥

ನರನೆ ನೋಡೈ ರಾಜಮಾರ್ಗವ ।
ಬರುವುದೇನುಪಯೋಗ ಚೋರಗೆ ।
ತೆರೆವನೈ ರಾಕ್ಷಸನು ಕಣ್ಗಳ ರಾತ್ರಿಸಮಯದಲಿ ॥
ಇರುವುದಾದರು ಧನದ ನಿಧಿ ಹ ।
ತ್ತರದೊಳದು ಕಾಣುವುದು ಯಿದ್ದಲಿ ।
ಪರಿಯಲಾ ದುರ್ಭಾಗ್ಯನಿಗೆ ಧನವಧನವಾಗುವುದು ॥೪೫೮॥

ಶಾಸ್ತ್ರದಲಿ ವಿಧಿಸಿರುವ ಕರ್ಮ ಸ ।
ಮಸ್ತ ಮಿಥ್ಯಾಭ್ಯಾಸವೆಂಬನು ।
ಶಾಸ್ತ್ರದರ್ಥವ ಬಿಟ್ಟು ಮಾಳ್ಪನನರ್ಥ ಮೂರ್ಖನಲಾ ॥
ಧಾತ್ರಿಯಲಿ ಸದ್ಗುಣಗಳೆಲ್ಲಕೆ ।
ಸ್ವಾರ್ಥತನದಲಿ ದೋಷ ಕೊಡುವನು ।
ವಾರ್ಥ ಶ್ರುತಿಸಂಮತಿಯ ಕರ್ಮವ ನಿಂದಿಸುನವನು ॥ ೪೫೯ ॥

ಧಾರುಣಿಯಲೀ ಬುದ್ಧಿ ತಾಮಸ ।
ವಾರಿಗಿದನು ವಿಚಾರಿಸುವುದೇ ।
ಕಾರಣವ ನಾ ಕಾಣೆ ಪೇಳ್ವೆನು ನಿಶ್ಚಯಾತ್ಮಕದಿ ॥
ಆರು ಪೇಳ್ವರು ದಾನಧರ್ಮಾ- ।
ಚಾರಕಿರುವುದು ರಾತ್ರಿಯುತ್ತಮ ।
ವೀರಸುಭಟನೆ ಕೇಳ್ವಿಚಾರದಿ ನೋಡು ಚಿತ್ತದಲಿ ॥೪೬೦॥

ನರನೆ ಯಾತ್ಮಜ್ಞಾನಕಮಲವ- ।
ನರಳಿಸುವ ನೀ ದಿನಮಣಿಯಲಾ ।
ಅರುಹಿದೆನು ವಿಸ್ತರದಿ ಬುದ್ಧಿಯ ಮೂರುಭೇದಗಳ ॥
ನರನೆ ಬುದ್ಧಿಗೆ ಕರ್ಮ ಮಾಳ್ಪರೆ ।
ಬರುವುದೈ ನಿಶ್ಚಯವು ಕೇಳದ ।
ಕರೆವರೈ ಧೃತಿಯೆಂದು ಕೋವಿದರದನು ವಿಸ್ತರಿಪೆ ॥ ೪೬೧ ॥

ಇರುವುದೀ ಧೃತಿ ಮೂರುಲಕ್ಷಣ ।
ನರನೆ ನಿನಗಾನರುಹುವೆನು ವಿ- ।
ಸ್ತರದಿ ಕೇಳೀಧೃತಿಯ ಲಕ್ಷಣಗಳನು ಮನಗೊಟ್ಟು ॥೪೬೨॥

ಧೃತ್ಯಾ ಯಯಾ ಧಾರಯತೇ ಮನಃಪ್ರಾಣೇಂದ್ರಿಯಕ್ರಿಯಾಃ ।
ಯೋಗೇನಾವ್ಯಭಿಚಾರಿಣ್ಯಾ ಧೃತಿಃ ಸಾ ಪಾರ್ಥ ಸಾತ್ತ್ವಿಕೀ ॥ ೩೩ ॥

ತರಣಿಯುದಯಾಚಲಕೆ ಬರಲೆಂ- ।
ತಿರುವುದೈ ಕತ್ತಲೆಯ ರಾಜ್ಯವು ।
ಹರಿವುದಲ್ಲಾ ಚೋರರಾಟಸಮೇತ ಕತ್ತಲೆಯು ॥
ಹೊರಡಲಾಪರಿಯಾಜ್ಞೆ ಧರಣೀ- ।
ಶ್ವರನ ಕುವ್ಯವಹಾರದಾಟವು ।
ಒರುವುದೇ ಗೋಚರಕೆ ನಡೆವುದು ದಿಕ್ಪಾಲಕಾಗಿ ॥೪೬೩॥

ಗಾಳಿಯೊಂದೇ ಸಮನೆ ಬೀಸಲು ।
ಬಾಳುವುದೆ ಮೇಘಗಳು ದಿಕ್ಕಾ- ।
ಪಾಲು ಪೋಡುವುದೇನ ಹೇಳಲಿ ಯಡಗುವುದು ಗುಡುಗು ॥
ಪೇಳಲಕೇಳಲಗಸ್ತಿತಾರೆಯು ।
ತಾಳುವನು ಸಾಗರನು ಶಾಂತಿಯು ।
ಬೀಳಗೊಡುವನು ತನ್ನ ಘೋಷವ ಕೇಳು ಕಲಿಪಾರ್ಥ
॥ ೪೬೪ ॥

ಬರಲು ಹಿಮಕರನುದಯಗಿರಿಯಿ- ।
ಲ್ಲರಳಿರುವ ಕಮಲಗಳು ಸರ್ವವ ।
ಕರೆಯೊಳಗೆ ಕುಂದುವವು ಸೂರ್ಯನ ವಿರಹತಾಪದಲಿ ॥
ನರನೆ ನಿನಗಿನ್ನೇನ ಹೇಳಲಿ ।
ಹರಿಯ ಗರ್ಜನೆ ಕೇಳಿ ಮದಯುತ ।
ಕರಿಯು ಮೇಲಕ್ಕೆತ್ತಿರುವ ಕಾಲ್ಕೆಳಗೆಯೊತ್ತುವುದೆ ॥೪೬೫॥

ನರನೆ ಕೇಳೀ ತೆರದಿ ಸಾತ್ತ್ವಿಕ- ।
ತರದ ಧೃತಿಯುತ್ಪನ್ನವಾಗಲು ।
ಮರಣ ಹೊಂದುವ ಇಂದ್ರಿಯವ್ಯವಹಾರ ಸರ್ವಸ್ವ ॥

ಕರಗುವುವು ತಮ್ಮಿಂದ ತಾವೇ ।
ಯರೆಗಳಿಗೆಯಲಿ ಮನದ ಪ್ರಾಣದ ।
ಪರಿಸರಿ ವ್ಯವಹಾರವೆಲ್ಲವು ನಷ್ಟವಾಗುವುವ ॥ ೪೬೬ ॥

ನರನೆ ನೋಡೀಂದ್ರಿಯಕೆ ವಿಷಯದೊ- ।
ಳೆರುವ ಸ್ನೇಹವು ಸುಟ್ಟು ಹೋಗಲು ।
ತಿರಿಗಿ ಯಿಂದ್ರಿಯವೃಂದವೆಲ್ಲವ ಭೀತಿಯನು ತಾಳೆ ॥
ತಿರುಗುವುದು ನಿಜ ತಾಯಿಯಂದದೊ- ।
ಳೆರುವ ಮನದಾ ಜಠರದೊಳಗದು ।
ನರನೆ ನೋಡೀತೆರದೊಳೀಂದ್ರಿಯದಾಟ ಮುಗಿಯುವುದು ॥೪೬೭॥

ಪ್ರಾಣಕೆರುತಿಪ ಭೇದ ನವವಿಧ ।
ಪೇನ ಹೇಳಲಿ ಗಂಟ ಕಟ್ಟುತ ।
ಕೋಣೆಯೊಳಗಿಕ್ಕುವುದು ನಾಡಿ ಸುಷುಮ್ನೆಯೇ ಕೋಣೆ ॥
ಮೇಣು ಮನದ ವಿಕಲ್ಪಸಂಕ- ।
ಲ್ಪಾನುರೋಧದ ವಸ್ತ್ರ ಬಿಡುತಲೆ ।
ತಾನೆ ಬುದ್ಧಿಯ ಹಿಂದಕಡಗುವುದೈ ಕಣಾ ಮನವು ॥ ೪೬೮ ॥

ನರನೆ ನೋಡೈ ಧೈರ್ಯರಾಜನು ।
ಮೆರೆವ ಮನಕೆ ಪ್ರಾಣಕಿಂದ್ರಿಯ- ।
ಕೆರುವ ನಿಜಭಾಷಣದ ಚೇಷ್ಟೆಯ ಮುಗಿಸಿ ಬಿಡುವನಲಾ ॥
ಸರುವದರ ಮೇಣ್ ಘಾಪೆ ಕೊಳ್ಳುತ ।
ಭರದಿ ಧ್ಯಾನಾಂತರ್ಗೃಹದಲವ- ।
ನುರುಳಿಸುವನೈ ಯುಕ್ತಿಯಿಂದಲಿ ಕೇಳು ವೀರೇಂದ್ರ ॥ ೪೬೯ ॥

ನರನೆ ನೋಡೈ ಚತುರ್ಥನರ್ತಿಯ ।
ತೆರದಲಿಹ ಪರಮಾತ್ಮನವಗಳೆ- ।
ಗಿರದೆ ಕೈವಶಮಾಡುವನಕವೆ ಬಿಟ್ಟು ಬಿಡನವನು ॥
ಮೆರೆವನೀಪರಿ ಧೈರ್ಯರಾಜನು ।
ತೊರೆವನೈ ಧಿಕ್ಕರಿಸಿ ಲಂಜವ ।
ದೊರೆವನಕ ಪರಮಾತ್ಮನಿಂದ್ರಿಯಗಳನು ಸೆರೆಯಿಡುವ॥೪೭॥

ನರನೆ ನೋಡೈ ಧೈರ್ಯಸಾತ್ವಿಕ- ।
ನಿರುವುದೀ ಪರಿ ಕರ್ಮಮಾರ್ಗದಿ ।
ಭರದಿ ಪರಮೇಶ್ವರನ ಪ್ರಾಪ್ತಿಯ ದಾರಿ ತೋರಿಸುವ ॥
ಪರಮಮಂಗಲಸದನಧೈರ್ಯವು ।
ಪರಿಯಲಿದ ವಿಸ್ತರಿಸಿ ಪೇಳ್ವೆನು ।
ನರನೆ ನಿನಗರವಾಯ್ತೆ ಯೆಂದನು ಕೃಷ್ಣ ಪರಮಾತ್ಮ ॥೪೭॥

ಯಯಾ ತು ಧರ್ಮಕಾಮಾರ್ಥಾನ್ ಧೃತ್ಯಾ ಧಾರಯತೇ ೞರ್ಜುನ ।
ಪ್ರಸಂಗೇನ ಫಲಾಕಾಂಕ್ಷೀ ಧೃತಿಃ ಸಾ ಪಾರ್ಥ ರಾಜಸೀ ॥ ೩೪ ॥

ನರನೆ ನೋಡೈ ಒರೆ ಶರೀರದೊ- ।
ಳಿರುವನೈ ಸಂಸಾರಸ್ವರ್ಗಗ- ।
ಳೆರಡರಲಿ ಧರ್ಮಾರ್ಥಕಾಮದಿ ಹರ್ಷಯುಕ್ತನಾಗಿ ॥
ನರನು ಸುಮನೋರಥದ ಶರಧಿಯೊ- ।
ಳಿರದೆ ಧರ್ಮಾರ್ಥದಿನ್ ಕೆಯ್ಯು ।
ವಸಿ ಧೈರ್ಯದಲಿದ ವ್ಯಾಪಾರವನು ಮಾಡುವನು ।೪೭॥

ನರನೆ ಕರ್ಮದ ಒಂಡವಾಲವ- ।
ನಿರದೆಯುದರಲಿ ಹಾಕಿದಾಕ್ಷಣ ।
ಬರುವುದೈ ಒಹುಲಾಭ ನಾಳ್ಗಡಿಯೆಂದು ಪಿಗ್ಗುತಲಿ ॥
ಭರದಿ ಕರ್ಮಾಚರಣ ಮಾಡುವ ।
ನರನ ಧೈರ್ಯವ್ರ ರಾಜಸವಲಾ ।
ನರನೆ ನಾನರುಹುವೆನು ತಾಮಸಧೈರ್ಯಲಕ್ಷಣವ ॥ ೪೭೩ ॥

ಯಯಾ ಸ್ವಪ್ನಂ ಭಯಂ ಶೋಕಂ ವಿಷಾದಂ ಮದಮೇವ ಚ ।
ನ ವಿಮುಂಚತಿ ದುರ್ಮೇಧಾ ಧೃತಿಃ ಸಾ ಪಾರ್ಥ ತಾಮಸೀ ॥ ೩೫ ॥

ನರನೆ ಕಲ್ಲೆದ್ದಲಿಯ ಮೈ ತುಂ- ।
ಬಿರುವುದಲ್ಲಾ ಕಪ್ಪುವರ್ಣದೊ- ।
ಳಿರುವುದಲ್ಲಾ ಸರ್ವದರುಪರಿಯುಧಮಗುಣದಿಂದ ॥
ಧರೆಯುಲದಕಿನ್ನೇಕೆ ಗುಣವೆಂ- ।
ದರುಹುವರು ಪ್ರಾಕೃತಕೆ ನೀಚಕೆ ।
ಕರೆವರಲ್ಲಾ ವೃಣ್ಯಜನರೆನುತಧಮರಕ್ಕಸರ ॥ ೪೭೪ ॥

ಕರೆವೈ ವಂಗಳನೆನುತ್ತಲಿ ।
ಪರಮ ಸುಕ್ರೂರನನು ಕುಜನ- ।
ನ್ನಿರುವುದೀಪರಿ ತಮಕೆ ಗುಣವೆಂದರುಹುವರು ನರರು ॥
ಧರೆಯೊಳಿರುತಿಹ ಸರ್ವ ದೋಷದಿ ।
ಭರಿತವಾಗಿಹುದಾವ ಮೂರ್ತಿಯೊ ।
ದುರಿತಪೋಷಕ ದುಃಖಕಾರಕನಿಹುದು ತಾಮಸವು ॥ ೪೭೫ ॥

ಆಳಸವ ಬಗಲೊಳಗೆ ಧರಿಸಿಹ- ।
ನೇಳಲಾರನು ನಿದ್ರೆ ಬಿಟ್ಟವ ।
ತಾಳುವನು ಕಠಿನತೆಯ ಶೀಲವ ಕಲ್ಲಿನಿಂ ನಿಗಿಲ ॥

ಕೇಳು ನರನೆ ಶರೀರನೆಂಬುದೆ ।
ಮೇಲು ಧನವೃತ್ತನುನೆನುತ ನಂ- ।
ಬಾಳಿಸುವನದುವಿಂದ ಭೀತಿಯು ತೊಲಗಲಾರದಲಾ ॥ ೪೭೬ ॥

ನರನು ಪರಮಕೃತಘ್ನನಾಗಿರೆ ।
ದುರಿತ ಶುದ್ಧಿಯ ಮಾಡಲೆತ್ನಿಸೆ ।
ದುರಿತರಾಶಿಯು ನಾಶವಾಗದು ಹೆಚ್ಚುವುದು ಮೇಣು ॥
ಇರುವುದವಗೆ ಪದಾರ್ಥಮಾತ್ರದಿ ।
ಪರಮಪ್ರೀತಿಯು ಕಾರಣದಲವ- ।
ನಿರುವನವನಾ ಶೋಕನಾಗರನಾಗಿ ಜಗದೊಳಗೆ ॥ ೪೭೭ ॥

ಆನವರತ ಸಂತಸವ ತೊರೆಯುತ ।
ಹಿಸಹಿಸದಿ ಜೀವನೊಳು ವೈತ್ತಿಯ- ।
ನನುಕರಿಸುವದರಿಂದ ವೈತ್ತಿ ವಿವಾದಮೊದನಾಯ್ತು ॥
ನೆನೆಯಲಾ ಬಳ್ಳಿಳ್ಳಿ ವಾಸವ- ।
ನೆನಿತು ಯತ್ನದಿ ತೊರೆಯ ಬಲ್ಲುದೆ ।
ಮಾನುಜಯೋಗಿಯರೋಗಿಯಪ್ಪನೆ ಪಥ್ಯಮಾಡದಲೆ ॥ ೪೭೮ ॥

ಮೆರೆವುದೈ ತಾರುಣ್ಯ ದೇಹದಿ ।
ಮರಳಿ ಧನಸಂಪದ್ಭರಿತನಿಹೆ ।
ನಿರುವನೈ ಕಿಂಕರನು ಕಾಮನು ಯೆಂಬ ಗರ್ವದಲಿ ॥
ಮೆರೆವನದರಿಂದಾಯ್ತು ಮದವೀ- ।
ಪರಿಯ ಮಾನವಗೇನ ಹೇಳಲಿ ।
ಯುರಿವ ಬೆಂಕಿಯು ಬಿಡುವುದೇ ದಾಹಕತೆ ಕೌಂತೇಯ
॥ ೪೭೯ ॥

ಜಾತಿಮಂತನು ಸರ್ಪನಿರಲವ ।
ಘಾತಮಾಡುವ ಗುಣವ ಬಿಡುವನೆ ।
ಭೀತಿಯೆಂಬುದು ಜಗದ ವೈರಿಯು ಬಿಡದು ಮೇಣವನ ॥
ಭೂತಳದಿ ದೇಹವನು ಕಾಲನು ।
ಯೇತಕ್ಕೈ ಬಿಡುತಿಹನು ಬಿಡನ್ಯೈ ।
ಯಾತರಿದಿ ಮದ ಬಿಡದು ತಾಮಸನನ್ನು ನಿಜವಾಗಿ ॥೪೮೦॥

ಪರಿಯಲೀ ತಾಮಸಗುಣಂಗಳ ।
ಧರಿಸಿಹುದು ಧೃತಿ ತಾಮಸವು ಕೇಳ್ ।
ಪರಿಕಿಸಲು ಭಯಶೋಕಮದನಿದ್ರಾವಿಷಾದಗಳು ॥
ಅರಿಯಲೀಪರಿ ದೋಷ ಪಂಚಕ- ।
ವಿರುವುದೈ ಧೃತಿ ತಾಮಸವಲಾ ।
ಹರಿಯು ಪೇಳಿದನೀತೆರದಿ ಕೌಂತೇಯನಿಗೆ ಮುದದಿ ॥೪೮೧॥

ನರನೆ ನೋಡೈ ತ್ರಿಗುಣಸಂಯುತ- ।
ವಿರುವ ಬುದ್ಧಿಯು ಕರ್ಮನಿಶ್ಚಯ- ।
ವಿರದೆ ಮಾಡಲು ಧೈರ್ಯವೇ ಕಡೆಗಾಣಿಸುವುದಿದನು ॥
ತರಣಿಯುದಯಾಚಲಕೆ ಬಂದರೆ ।
ನರನು ಕಾಲಿಂ ಹಾದಿ ಕ್ರಮಿಪನು ।
ಧರಿಸಲಾರದೆ ಧೈರ್ಯ ಹಾದಿಯ ಚಲಿಸ ಬಹುದೇನು ॥೪೮೨॥

ಅರಿಯಲೀಪರಿ ಬುದ್ಧಿ ಕರ್ಮದ ।
ಪರಿಯ ತೋರಿಸುತಿಹುದು ಕರ್ಮವ- ।
ನಿರದೆ ಸಕಲೇಂದ್ರಿಯಗಳೇ ಯುತ್ಪನ್ನಮಾಡುವುವು ॥
ಧರೆಯಲೀ ಕರ್ಮಗಳ ಹುಟ್ಟಿಸು- ।
ತಿರುವ ಧೈರ್ಯವು ಮೂರು ವಿಧವಾ- ।
ಗಿರುವುದನು ನಾ ನಿನಗೆ ವಿಸ್ತರಿಸಿದೆನು ಕೌಂತೇಯ ॥ ೪೮೩ ॥

ಮೂರು ವಿಧವಾಗಿರುವ ಧೈರ್ಯದಿ ।
ಮೂರು ವಿಧ ಕರ್ಮಗಳು ಹುಟ್ಟಿದು- ।
ವೇರುವುದು ಫಲ ಮೂರು ವಿಧದಲಿ ಸರ್ವಕರ್ಮಕ್ಕೆ ॥
ಧಾರುಣಿಯಲೀ ಕರ್ಮದಂದದಿ ।
ಮೂರು ವಿಧವೈ ಫಲವು ಸುಖವು ವಿ- ।
ಚಾರಪೂರ್ವಕ ನಿನಗೆ ವಿಸ್ತಾರದಲಿ ಪೇಳುವೆನು ॥ ೪೮೪ ॥

ಮೂರುವಿಧವಾಗಿರುವ ಸುಖದ ವಿ- ।
ಚಾರ ನಿನಗಾಂ ಪೇಳ್ವೆನೆಂತೆನೆ ।
ಬಾರಲಾಗದು ಶಬ್ದಮಾರ್ಗದೊಳಗದರ ವಿಸ್ತಾರ ॥
ವಿೂರಿ ಶಬ್ದಂಗಳಲಿ ನಾ ವಿ- ।
ಸ್ತಾರ ಮಾಡಲು ಶಬ್ದಗಳ ಮಲ- ।
ವೇರುವುದು ಸುಖದೊಳಗೆ ನಿರ್ಮಲತನವು ಹೋಗುವುದು
॥ ೪೮೫ ॥

ಮೇಲೆ ಶ್ರವಣದ್ವಯದ ಹಾದಿಲಿ ।
ಕೇಳಿದರೆ ಮಲ ಕವಿಯೊಳಿರುವುದು ।
ತಾಳುವುದು ಶ್ರವಣೇಂದ್ರಿಯಂಗಳ ಮಲವನಾ ಸುಖವು ॥
ಕೇಳಲೊಂದೇ ಮಾರ್ಗವಿರುವುದು ।
ಕೇಳು ಸ್ವಾಂತಃಕರಣಹಾದಿಯು ।
ಮೇತೆ ನಿನಗದು ಸುಖವು ಬರುವುದು ಯೆಂದನಾ ಹರಿಯು ॥೪೮೬॥

ಸುಖಂ ತ್ವಿದಾನೀಂ ತ್ರಿವಿಧಂ ಶೃಣು ಮೇ ಭರತರ್ಷಭ ।
ಅಭ್ಯಾಸಾದ್ರಮತೇ ಯತ್ರ ದುಃಖಾಂತಂ ಚ ನಿಗಚ್ಛತಿ ॥ ೩೬ ॥

ಸರನೆ ಪ್ರಾಜ್ಞಶಿರೋಮಣಿಯೆ ನಿನ- ।
ಗರುಹಿದೆನು ತ್ರಿಗುಣಾತ್ಮಕವು ಸುಖ- ।
ವರಿಯಲಾ ಸಾತ್ತ್ವಿಕವು ರಾಜಸತಾಮಸಗಳೆಹುವು ॥
ಕರೆವರದನಾನಂದವೆನುತಲಿ ।
ಬರಲು ಜೀವಾತ್ಮಕ್ಕೆ ದರ್ಶನ- ।
ವರಿಯುವಂದದಿ ನಿನಗೆ ನಾ ಪೇಳುವೆನು ಮೋದದಲಿ ॥೪೮೭॥

ಉತ್ತಮೌಷಧ ಸೇವಿಪುದು ನಿಜ ।
ಮಾತ್ರೆಯಲ್ಲಿ ಪ್ರಮಾಣವಿರುವುದು ।
ಯಿತ್ತುರಸಪುಟವನ್ನು ಸೀಸವ ಬೆಳ್ಳಿಮಾಡುವರೆ ॥
ವ್ಯರ್ಥ ಬರುವುದೆ ಮಾನವಿಲ್ಲದೆ ।
ಮತ್ತೆ ಲವಣವ ನೀರ ಮಾಳ್ಪರೆ ।
ಕಿತ್ತಿ ಕೊಡುವರು ನೀರನದಕೀರೆರಡು ಬಾರಿಯಲಿ ॥೪೮೮॥

ನರನೆ ಕೇಳೀತೆರದಿ ಸುಖಲವ ।
ದೊರೆಯಿತಾದರೆ ಲಾಭವದಲಾ ।
ಪರಿಪರಿಯೊಳಭ್ಯಾಸ ಮಾಡುತ ವರ್ಧಿಸಲು ಬೇಕು ॥

ಮರಳಿ ನೋಡಾ ಜೀವದಶೆಯೊಳ- ।
ಗಿರುವ ದುಃಖವ ನಾಶ ಮಾಡುವ ।
ಪರಿಯ ಹುಡುಕಲು ಬೇಕು ಪರಿಯಿದು ತ್ರಿಗುಣಮೂರ್ತಿಯಲಾ॥೪೯೯॥

ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋಪಮಮ್ ।
ತತ್ಸುಖಂ ಸಾತ್ತ್ವಿಕಂ ಪ್ರೋಕ್ತಮಾತ್ಮಬುದ್ಧಿಪ್ರಸಾದಜಮ್ ॥ ೨೭ ॥

ಚಂದನದ ಮರದಡಿಗೆ ಸರ್ಪವು ।
ಬಂದು ಸುತ್ತಿರುತಿಹುದು ಪೇಣದ- ।
ರಿಂದಲದುವೆ ಭಯಾನಕಸ್ಥಿತಿ ನೋಡು ಕೌಂತೇಯ ॥
ಬಂದು ದ್ರವ್ಯದ ನಿಧಿಯ ಬ್ರಹ್ಮಸ- ।
ಮಂಧ ಬಂದಾಕ್ರಮಿಸಿ ತಾಂ ಪ್ರತಿ- ।
ಬಂಧ ಮಾಳ್ಪುದು ಭೀತಿಕಾರಕವೇನ ಹೇಳುವೆನು ॥೪೯೦॥

ಸುರರಲೋಕದ ಭೋಗದಿಚ್ಛೆಯ ।
ಧರಿಸುವವರಿಗೆ ಯಜ್ಞಸತ್ರದ ।
ಪರಿಪರಿಯ ತ್ರಾಸವನು ಭೋಗಿಸ ಬೇಕು ಮೊದಲಾಗಿ ॥
ನರನು ಮಕ್ಕಳ ಸೌಖ್ಯಪಡೆವರೆ ।
ಪರಿಪರಿಯ ಬಾಲಕರ ತ್ರಾಸವ- ।
ನಿರದೆ ಸಹಿಸಲು ಬೇಕು ಮಲಮೂತ್ರಗಳ ಬಳಿ ಬೇಕು
॥ ೪೯೧ ॥

ನರನೆ ಕೇಳ್ದೀಪಪ್ರಕಾಶವ- ।
ನುರಿಸ ಬೇಕಾದರೆ ಪ್ರಥಮದ- ।
ಲ್ಲುರಿಸ ಬೇಕೈ ಬೆಂಕಿ ಹೊಗೆಯಲಿ ತ್ರಾಸ ಪಡ ಬೇಕು ॥
ದೊರೆಯಬೇಕಾದರೆ ಯರೋಗಿತೆ ।
ಪರಿಪರಿಯ ಕಹಿಯೌಷಧಂಗಳ- ।
ನಿರಿಸ ಬೇಕೈ ಬಿಹ್ವೆಯಲಿ ಕಟುತನವನುಣಬೇಕು ॥೪೯೨॥

ನರನೆ ನೋಡು ನಿಜಾತ್ಮವಿಜ್ಞೆಯ ।
ಪರಮಸುಖವನು ಭೋಗಿಸಲಿಕಾ- ।
ಪರಿಯ ಯಮದಮವೆಂಬ ನಿಯಮದ ಕಷ್ಟ ಪಡಬೇಕು ॥
ಉರುತರದ ದೇಹಾದಿ ಪ್ರೇಮವ- ।
ನುರಿವ ಜ್ವಾಲೆಯೊ ಯೆಂಬ ಪರಿಯ- ।
ಲ್ಲಿರುವ ತೀಕ್ಷ್ಣ ವಿರಕ್ತಿಯಾಗಲು ಪ್ರಾಪ್ತಿ ಮಾನವಗೆ॥೪೯೩॥

ಸುರಪುರದ ಪ್ರಾಕಾರ ಛೇದಿಸು- ।
ತುರುತರದ ಸಂಸಾರ ಛೇದಿಪ ।
ಪರಮ ಸುಖಸಾಧನವಲಾ ವೈರಾಗ್ಯ ಕೌಂತೇಯ ॥

ಪರಮ ತೀವ್ರಜ್ಞಾನಶ್ರವಣದಿ ।
ವರಕಠೋರವ್ರತಾಚರಣದಲಿ ।
ಬರುವುದು ನಿಜಗ್ಲಾನಿ ಬುದ್ಧಿಗೆ ಪೇಳ್ವುದೇನದನು ॥ ೪೯೪ ॥

ಎರಡು ಪ್ರಾಣಾಪಾನವಾಯುಗ- ।
ಳೆರುವ್ಯವೈ ಯನರೋಧ ಮಾಡಲು ।
ಪರಮ ಕಠಿನ ಸುಷುಮ್ನೆಯಿಂದಲಿ ಮಾಡ ಬೇಕಲ್ಲೈ ।
ಇರುವುದೈ ಬಹುಕಠಿನ ಮೊದಲಿಗೆ ।
ನರನೆ ನಿನಗಾನೆಂತು ಪೇಳುವೆ ।
ಪರಿಕಿಸಲು ಬಹು ದುಃಖವಾಗುವ ಪರಿಯ ಪೇಳುವೆನು ॥೪೯೫॥

ಹರುಷದಿಂದಿಹ ಚಕ್ರವಾಕಕೆ ।
ವಿರಹವನು ತಂದಾಕೆ ಗೋಸಿಗೆ ।
ಬರಲು ಕೆಚ್ಚಲಹಾಲು ಕರುವನು ಜಗ್ಗಿ ಜೆಗೆದಾಗ ॥
ಪರಮ ಕ್ರುದ್ಧತನಿಗನ್ನ ಬಡಿಸಲು ।
ಭರದೊಳುಣ ಬಡದವನಿಗೆಲೆಯಿಂ ।
ಕೊರಳ ಪಿಡಿದೆಬ್ಬಿಸುತ ಹೊರಹಾಕಿದರೆ ಕೌಂತೇಯ ॥ ೪೯೬ ॥

ಇರುವುದೊಂದೇ ಕೂಸು ತಾಯಿಗೆ ।
ಮರಣ ಬರಲಾ ಬಾಲಕನಿಗಾ- ।
ಪರಿಯಲಾ ನೀರಿಂದ ಹೊನನು ಮೇಲಕೆತ್ತಿದರೆ ॥
ಪರಿಯಲಾ ವಿಷಯುಗಳನಿಂದ್ರಿಯ ।
ತೊರೆವ ಕಾಲದಿ ದುಃಖವಾಗುವ- ।
ದರರೆ ವೈರಾಗ್ಯದಲಿ ದುಃಖವ ಸಹಿಸಿಕೊಳ್ಳುವನು ॥ ೪೯೭ ॥

ಇರುವುದಾರಂಭದಲಿ ದುಃಖವು ।
ಬರುವುದೈ ಸುಖ ಪಾರ್ಥ ಕೊನೆಯಲಿ ।
ಶರಧಿಮಂಥನವಾಗೆ ದುಃಖವನಾರು ಸಹಿಸಿದರೊ ॥
ಮರಣಹರಪೀಯೂಷಪೇಯದ ।
ಪರಮಲಾಭವದಾಯ್ತು ಕೇಳೈ ।
ಪರಿಯನರಿಯೈ ಭುಃಖದಂತದಿ ಸುಖವು ಬರುವುದಲಾ ॥ ೪೯೮ ॥

ಬರಲು ಕೇಳ್ ವೈರಾಗ್ಯರೂಪದ ।
ಗರಳ ಪ್ರಾಶನ ಮಾಡುವರೆ ಮುಂ- ।
ದರಿಸ ಬೇಕೈ ಧೈರ್ಯ ಸಾತ್ತ್ವಿಕ ಶಂಭುವಿನ ತೆರದಿ ॥
ದೊರೆವುದೈ ಜ್ಞಾನಾಮೃತದ ಬಹು- ।
ಸರಸ ಪಾನವು ದೇಹಿಗಾಕ್ಷಣ ।
ನರನೆ ನೋಡೈ ತತ್ತ್ವವಿದ ನಾಂ ಪೇಳ್ವೆ ಮೋದದಲಿ ॥೪೪॥

ದ್ರಾಕ್ಷೆಗಳು ಹಣ್ಣಾಗುವನಕವೆ ।
ತಕ್ಷಕನ ಪರಿ ತ್ಯಾಜ್ಯ ಹುಳಿಯಿಹು- ।
ವಕ್ಷಿಗೋಚರವಾಗುವುವು ಕೇಳೀ ತೆರದಿ ಪಾರ್ಥ ॥
ದ್ರಾಕ್ಷೆಗಳು ಪರಿಪಕ್ವವಾಗಲು ।
ಸಾಕ್ಷಿ ಕೊಡುವುವು ಮಧುರವೆನುತಲಿ ।
ನಿಶ್ಚಯದಿ ನಾ ಪೇಳ್ವೆನೀತೆರವಿಹುದು ವೈರಾಗ್ಯ ॥ ೫೦ ॥

ನರನೆ ನೋಡಾತ್ಮಪ್ರಕಾಶದಿ ।
ಬರಲು ವೈರಾಗ್ಯಕ್ಕೆ ಪೂರ್ಣತೆ ।
ಹರಣ ಮಾಳ್ಪುದು ದುಃಖವೈರಾಗ್ಯಾದಿ ಬುಡಸಹಿತ ॥
ಶರಧಿಯನು ಸೇರಲ್ಕೆ ಗಂಗೆಯು ।
ಹುರುಷನಿರ್ಭರಳಾಗುವಳು ಕೇ- ।
ಳಿರುವುದಾಪರಿ ಬುದ್ಧಿಗಂಗೆಯು ಶರಧಿಯಾತ್ಮನಲಾ ॥ ೫೧ ॥

ಸೇರಲಾತ್ಮನ ಬುದ್ಧಿಗಂಗೆಯು ।
ತೋರುವುದು ಸುಖವದ್ವಯವು ನಿಜ ।
ಚಾರು ಸ್ವಾನಂದಸ್ವರೂಪವು ಸೌಖ್ಯದಾಗರವು ॥
ಧಾರುಣಿಯಲಿ ವಿರಕ್ತಿಮೂಲದ ।
ಚಾರು ಸ್ವಾತ್ಮಾನಂದ ಪ್ರಾಪ್ತಿಯು ।
ಚಾರು ಸಾತ್ತ್ವಿಕ ಸುಖವೆನುತ ಕರೆಯುವರು ಮೇಣಿದನು ॥೫೨॥

ವಿಷಯೇಂದ್ರಿಯಸಂಯೋಗಾದ್ಯತ್ತದಗ್ರೇಽಮೃತೋಪಮಮ್ ।
ಪರಿಣಾಮೇ ವಿಷಮಿವ ತತ್ಸುಖಂ ರಾಜಸಂ ಸ್ಮೃತಮ್ ॥ ೩೮ ॥

ನರನೆ ಕೇಳ್ವಿಷಯೇಂದ್ರಿಯಂಗಳ ।
ಬರಲು ಸಂಬಂಧವು ಸಹಜದಲಿ ।
ಭರಿತವೆನಿಪುದು ಸುಖನದಿಯು ದಂಡಿಗಳು ತುಂಬುವೆವೆ ॥
ನರನೆ ನೋಡಧಿಕಾರಿಗೂರಲಿ ।
ಮರಣಬರಲವನುತ್ಸವವನಾ- ।
ದರದಿಜರಗಿಪರಲ್ಲವಾದರೆ ಕೇಳುವವರಾರು । ೫೩ ॥

ಶಿಲೆಯು ಮೇಲೆಯೆ ಕೂಡಿರುವ ಮಳೆ ।
ಯೊಳಗೆ ಶುಕ್ತಾದಿಗಳ ಬಿಂಬವ ।
ಬೆಳೆಗುವುದ ತಾಂ ನೋಡಿ ಮುತ್ತುಗಳೆಂಬ ಭ್ರಾಂತಿಯಲಿ ॥
ಫಳಿಲನವುಗಳ ಕಿತ್ತುವುದಕಾ- ।
ಜಲದಿ ಹಂಸನು ಧೂಪ್ಪ ಬೀಳಲು ।
ಕೊಳನು ಮುತ್ತನು ಪ್ರಾಣಮಾತ್ರವ ತ್ಯಜಿಸುವನು ಪಾರ್ಥ ॥ ೫೪ ॥

ಸಾಲ ಮಾಡುತ ಮದಿವೆಯಲಿ ಬಹು ।
ಡೌಲನಂಗೀಕರಿಸುವಂದದಿ ।
ಬಾಳೆ ಸಕ್ಕರೆ ಯಿರಲಪಥ್ಯವು ರೋಗಿಗದು ಸವಿಯು ॥
ಮೇಲೆ ಋಚನಾಗವನು ತಿನ್ನವ ।
ವೇಳೆಯಲಿ ತೋರುವುದು ಮಧುರವು ।
ಸೂಳೆಯರ ಸಂಸರ್ಗ ಚೋರರ ಮೈತ್ರಿ ಯಾ ತೆರವು ॥೫೫॥

ದೊರಕಿಸಿರುವಾ ಸುಕೃತವಶದಲಿ ।
ಪರಮ ಸುಖಸಾಮ್ರಾಜ್ಯವೆಲ್ಲವ ।
ತೊರೆದು ಜೀವದ ನಾಶವಾಗುವುದೇನ ಹೇಳುವೆನು ॥
ದೊರೆಯ ಬೇಕಾ ವಿಷಯಸುಖವೆಂ- ।
ದರಿತು ಸಂಪಾದಿಸಿದ ಪುಣ್ಯದ ।
ಪರಮ ಧನವೇ ನಷ್ಟವಾಗುವುದೇನ ಹೇಳುವೆನು । ೫೬ ॥

ಹರುಷಕಾರಕ ನಟಿನ ವರ್ತನ- ।
ವಿರುವುದೈ ಪ್ರಥಮದಲನಂತರ ।
ಬರುವುದೈ ಬಹುಕಠಿನ ಪರಿಣಾಮಗಳು ನಿಜವಾಗಿ ॥
ಇರುವುದೈ ವಿಷಯೇಂದ್ರಿಯಂಗಳ ।
ಬರುವ ಸಂಪರ್ಕವು ಮೊದಲಿಗೆನೆ ।
ಹರುಷದಾಯಕವೆನಿಸಿ ಪರಿಣಾಮದಲಿ ವಿಷಮತೆಯು ॥೫೭॥

ಹರುಷದಿಂ ಭೋಗಿಸಿದ ವಿಷಯವು ।
ತೊರೆದು ಪೋಪುದು ಸ್ವಪ್ನದಂದದಿ ।
ದೊರೆಯುವುದು ಮೇಣವಗೆ ದುಃಖದ ರಾಶಿಯೇಪಾಲು ॥
ಇರುವುದೀ ಪರಿಣಾಮವಿಹದಲಿ ।
ಪರದಿ ನಿಜ ವಿಷರೂಪದಿಂದಲೆ ।
ಬರುವುದಾಫಲವೆಂದು ತಿಳಿಯೈ ಪಾರ್ಥ ಮನಗೊಟ್ಟು ॥ ೫೮॥

ಇಂದ್ರಿಯಗಳ ವಿಹಾರಕೋಸುಗ ।
ಬಂಧುರದ ಧರ್ಮಸ್ವರೂಪದ ।
ಯಿಂದ್ರನುದ್ಯಾನವನು ಜಿಷ್ಟಿಪರೇನ ಹೇಳುವೆನು ॥
ಸುಂದರಾಂಗನೆ ನೋಡು ಧರ್ಮವ ।
ಬೆಂದು ಸುಡುತಲಿ ಮತ್ತೆತಾವಳಿ- ।
ಲೆಂದ್ರಿಯಗಳಿಂ ವಿಷಯಸುಖಗಳನನುಭವಿಸುತಿಹರು
। ೫೦೯ ॥
ಪಾತಕಗಳೇ ವರ್ಧಿಸುತ ಸಂ- ।
ಪ್ರಾಪ್ತವಪ್ಪುದು ನರಕಭೋಗವ ।
ಭೂತಳದ ಸುಖಕೆಳಸಿ ಪರಲೋಕವನೆ ಬಿಡುನರಲಾ ॥

ಈ ತೆರದಲೀ ವಿಷವಿನೆಂಬುದು ।
ಮಾತ್ರೆಯೆರಡರ ಶಬ್ದ ಮಧುರವು ।
ಘಾತ ಮಾಳ್ಪುದು ಸೇವಿಸಿದರಾ ಮಧುರ ವಿಷ ನೋಡು ॥೫೧೦॥

ಇರುವುದಾಪರಿ ಸೌಖ್ಯನೈಮಿಕ ।
ಪರಮ ಮಧುರವು ನೋಪೆ ಮೊದಲಿಗೆ ।
ಬರುವುದೈ ಕಟುಫಲವು ಪರಿಣಾಮದಲಿ ನೋಡಿದರೆ ॥
ನರನೆ ನೋಡೀ ತೆರದಿ ಸುಖವದು ।
ಮೆರೆವುದೈ ರಾಜಸವು ಸ್ಪರ್ಶಿಸ- ।
ದಿರುವುದುತ್ತಮ ಮಾರ್ಗವೆಂದನು ಹರಿಯು ಪಾರ್ಥನಿಗೆ ॥೫೧೧॥

ಯದಗ್ರೇ ಚಾನುಬಂಧೇ ಚ ಸುಖಂ ಮೋಹನಮಾತ್ಮನಃ ।
ನಿದ್ರಾಲಸ್ಯಪ್ರಮಾದೋತ್ಥಂ ತತ್ತಾಮಸಮುದಾಹೃತಮ್ ॥ ೩೯ ॥

ಕುಡಿದವೇಯವ ತಿಂದಭಕ್ಷ್ಯವ- ।
ನೊಡನೆ ಸ್ವೈರಸ್ತ್ರೀಯ ಭೋಗಿಸಿ ।
ಪಡೆವ ಸುಖ ಪರಘಾತಪಾತದಿ ಸಿಗುವ ಸೌಖ್ಯವದು ।
ಬಡಿದು ತಾನನ್ಯರನು ಪೋದದೊ- ।
ಳೊಡಿವೆ ವಸ್ತುವನಪಹರಿಸಿದೊಡೆ ।
ಜಿಡದೆ ಭಾವರ ಸ್ತುತಿಯೊಳಾಗುವ ಸೌಖ್ಯ ತಾಮಸವು
॥ ೫೧೨ ॥
ಧರಣಿಯೊಳಗಾಲಸ್ಯನಿದ್ರೆಯ ।
ಭರದೊಳದಕೇರುವುದು ಪೂರವು ।
ದೊರೆಯದೈ ಕಲ್ಯಾಣದವಿದಕೆಲ್ಲಿ ನೋಡಿದರು ॥

ಇರುವುದೀ ಪರಿ ಸೌಖ್ಯತಾಮಸ- ।
ವರುಹಲಾರೆನು ವಿಸ್ತರದೊಳದ- ।
ನರಿಯುಲೀಪರಿ ಮೂರು ಕರ್ಮದ ಫಲವು ಮೂರಾಯ್ತು
॥ ೫೧೩ ॥
ಇರುವುದೀ ಜಗದಲ್ಲಿ ಸಚರಾ- ।
ಚರದಿ ಹಿರಿಕಿರಿದೆಲ್ಲ ವಸ್ತುವು ।
ಮೆರೆವುದಿದಕೆಲ್ಲಕ್ಕೆ ತ್ರಿಪುಟಿಯು ಕರ್ತೃ ಕರ್ಮ ಫಲ ॥
ಇರುವುದೈ ತಂತುಗಳು ಪಟದಲಿ ।
ಭರಿತದೀ ತ್ರಿಗುಣದಲಿ ತ್ರಿಪುಟಿಯು ।
ಸರನೆ ನಿನಗಾಂ ವಿಸ್ತರದಿ ಪೇಳೆದೆನು ನೋದದಲಿ ॥ ೫೧೪ ॥

ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ ।
ಸತ್ತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಃ ಸ್ಯಾತ್ತ್ರಿಭಿರ್ಗುಣೈಃ ॥ ೪೦ ॥

ಉಣ್ಣೆ ಯಿಲ್ಲದೆ ಯೆಂತು ಕಂಬಳಿ ।
ಮಣ್ಣ ಹೊರತಾ ಹೆಟ್ಟಿ ಶಕ್ಯವೆ ।
ಕಣ್ಣಿಗೆಂತೈ ಒರುವದಾ ತೆರೆ ನೀರಹೊರತಾಗಿ ॥
ಮನ್ನಿಸೈ ಕೌಂತೇಯ ತ್ರಿಗುಣಾ- ।
ಪನ್ನವಾಗಿಹುದೀ ಜಗತ್ತ್ರಯ- ।
ವನ್ಯವಿಹ ಪರಿ ಕಾಣೆ ತ್ರಿಗುಣಪ್ರೇರಿತವು ಜಗವು ॥೫೧೫॥

ನರನೆ ನೋಡೀ ಜಗದಿ ತ್ರಿಗುಣದ ।
ಹೊರತು ಮಾನವ ಮಾತ್ರವಿರುವನೆ ।
ಪರಿಪರಿಯ ವಸ್ತುಗಳು ತ್ರಿಗುಣದಿ ಭರಿತವಾಗಿಹುವೈ ।

ಮೆರೆವುದೀ ತ್ರಿಗುಣಪ್ರಭಾವವು- ।
ಸರಿಯಲತಿ ದುರ್ಧರವು ಯಿದನಿಂ- ।
ದುರುತರದ ಮೂರ್ಮೂರ್ತಿಯಾದುವು ವೊಂದೆ ಮೂರ್ತಿಯಲಿ
॥ ೫೧೬ ॥
ಮೂರು ಗುಣಕಾಧಾರಕಿಂದಲೆ ।
ಮೂರುಲೋಕಗಳಾದುವೈ ನಿಜ ।
ಮೂರುಗುಣದಿಂದುದ್ಭವಿಸಿದುವು ನಾಲ್ಕು ವರ್ಣಗಳು ॥
ಮೂರುಗುಣದಾಧಾರದಿಂದಲೆ ।
ಹೇರೆ ಜೇರಾಯ್ತುವಕೆ ಕರ್ಮವು ।
ತೋರುನೀಜಗವೆಲ್ಲ ತ್ರಿಗುಣದಿ ರಾಜಿಸುತ್ತಿಹುದು ॥ ೫೧೭ ॥

ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ ॥ ೪೧ ॥

ವರ್ಣಗಳು ನಾಲ್ಕಾವುದೆನುತಲಿ ।
ವರ್ಣಿಸುವೆ ನಾ ನಿನಗೆ ವಾರ್ಥನೆ ।
ಮನ್ನಿಸುವರಾ ಬ್ರಾಹ್ಮಣರ ಮೊದಲಗ್ರಭಾಗದಲಿ ॥
ಮುನ್ನ ಕ್ಷತ್ರಿಯವೈಶ್ಯರೆಂಬುವ ।
ವರ್ಣವೆರಡಕೆ ಧರ್ಮವೈದಿಕ- ।
ವನ್ನು ಮಾಳ್ಪಧಿಕಾರವದರಿಂ ಬಾಹ್ಮಣರ ಸಮರು ॥೪೫॥

ನರನೆ ನೋಡೈ ಶೂದ್ರವರ್ಣವು ।
ಮೆರೆವುದೈ ನಾಲ್ಕನೆಯ ಜಾತಿಯು ।
ಯಿರದು ಕೇಳ್ವೇದಾಧಿಕಾರವು ಶೂದ್ರವರ್ಗಕ್ಕೆ ॥
ಅರಿಯಲಾ ಪರಸೇವೆಯೇ ವಿಧಿ- ।
ಸಿರುವುದಲ್ಲೈ ಶೂದ್ರವರ್ಣಕೆ ।
ನರನೆ ಮೇಲಿನ ಮೂರುಜಾತಿಗಳನ್ನೆ ಸೇವಿಪುದು ॥ ೪೪೪ ॥

ಮೂರು ವರ್ಣಗಳಿಹರು ದ್ವಿಜರೈ ।
ಧಾರುಣಿಯೊಳಿವರನ್ನೆ ಶೂದ್ರರು ।
ಸೇರಿ ಸೇವಾವೃತ್ತಿ ಮಾಳ್ಪರು ಮುದದಿ ಕೌಂತೇಯ ॥
ಕಾರಣದೊಳೀ ಶೂದ್ರರಿಂಗೆ ವಿ- ।
ಚಾರ ಮಾಡಿಯೆ ವರ್ಣನಾಲ್ಕನೆ ।
ಸೇರಿತೈ ಕಲಿವಾರ್ಥ ವರ್ಣಾಶ್ರಮದ ಧರ್ಮದಲಿ
॥ ೪೪೦ ॥

ಹೂವಿನಲಿ ಸೇರಿರ್ದ ನೂಲದು ।
ದೇವರಿಗೆ ಶಿರದಲ್ಲಿ ಮಾನ್ಯವು ।
ಯೀವಿಧದಿ ಶೂದ್ರರನು ಸ್ವೀಕರಿಸುವುದು ದ್ವಿಜರೊಡನೆ ॥
ಈ ವ್ಯವಸ್ಥೆಯ ವರ್ಣನಾಲ್ಕರ- ।
ಲಾವಪರಿಯಲಿ ಕರ್ಮಧರ್ಮವ- ।
ನೀವಸುಂಧರೆಯೊಳಗೆ ಪಾಲಿಪುದಿದನು ಪೇಳುವೆನು ॥೪೪೧॥

ಗುಣಗಳಿಹುದೈ ನಾಲ್ಕುವರ್ಣಕೆ ।
ಜನನಮರಣದ ಸಂಕಟವನಿವು ।
ಹನನ ಮಾಡುತಲೀಶ್ವರನ ಚರಣವನು ತೋರಿಪುವು ॥

ವಿನುತ ಸ್ವಾತ್ಮಪ್ರಕೃತಿ ತ್ರಿವಿಧದ ।
ಗುಣಗಳನ್ನು ವಿಭಾಗಿಸಿರುವುದು ।
ನೆನೆಯಲಾ ರಜಸತ್ತ್ವತಮಗಳು ತೋರ್ಪುವೀ ತೆರದಿ ॥ ೪೪೨ ॥

ತಂದೆ ಸ್ವಾರ್ಜಿತ ಹಣವ ಮಕ್ಕಳಿ- ।
ಗಂದದಿಂದಲಿ ಹಂಚುವಂದದೊ- ।
ಳಿಂದುಸೂರ್ಯರು ಪಥಿಕರಿಗೆ ಹಾದಿಯನು ತೋರ್ಪಂತೆ ॥
ಚಂದದಿಂ ಯಜಮಾನ ಸೇವಕ- ।
ವೃಂದದಲಿ ಕೆಲಸವನು ಹಂಚುವ- ।
ನಂದು ತದ್ರೀತಿಯಲಿ ಪ್ರಕೃತಿಯ ಗುಣವ ವಿಸ್ತರಿಸಿ ॥ ೪೪೩ ॥

ಪರಿಪರಿಯ ಕರ್ಮಗಳನತಿ ವಿ- ।
ಸ್ತರಿಸಿ ಭೇದಚತುಷ್ಟಯವನನು- ।
ಕರಿಸಿ ಚಾತುರ್ವರ್ಣ್ಯದಲಿ ಹಂಚಿಹುವು ಕೆರ್ಮಗಳ ॥
ಮೆರೆವ ಬ್ರಾಹ್ಮಣಕ್ಷತ್ರಿಯರಲಾ ।
ತೆರದಿ ಸಾತ್ತ್ವಿಕ ಭಾವದಿರುವುದು ।
ಹಿರಿಕಿರಿದು ಮಾನದಲಿ ವರ್ಣಗಳಾದುದಿವು ಯೆರಡು ॥ ೪೪೪ ॥

ಸತ್ತ್ವರಜಗಳ ಮಿಶ್ರಣದಲು- ।
ತ್ಪತ್ತಿಯಾಯ್ತು ವೈಶ್ಯವರ್ಣವು ।
ಮತ್ತೆ ಶೂದ್ರೋತ್ಪತ್ತಿ ರಜದಲ್ಲಾಯ್ತು ಸತಮದಲಿ ॥
ಧಾತ್ರಿಯೊಳಗೀ ಯೇಕರೂಪದ ।
ಮರ್ತ್ಯಜಾತಿಯ ಗುಣವಿಭಾಗದಿ ।
ಬಿತ್ತು ಚಾತುರ್ವರ್ಣ್ಯಧರ್ಮದ ಭೇದ ನಾಲ್ವಿಧವು ॥ ೪೪೫ ॥

ಇಳೆಯೊಳಗೆ ಕತ್ತಲೆಯು ಪಸರಿಸೆ ।
ತಿಳಿವುದೇನದು ವಸ್ತುಭೇದವು ।
ಬೆಳಕು ಬಿಳಲು ಭೇದಗಳು ತೋರುವುವು ಸೃಷ್ಟಿಯಲಿ ॥
ತಿಳಿಯಲಾಪರಿ ಗುಣವಿಭಾಗದಿ ।
ತಿಳಿವುದೈ ವರ್ಣಾಶ್ರಮದ ಪರಿ ।
ತಿಳಿಸುವೆನು ನಾ ವರ್ಣಗಳ ಪರಿ ಧರ್ಮಕರ್ಮಗಳ ॥ ೪೪೬ ॥

ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮಸ್ವಭಾವಜಮ್ ॥ ೪೨ ॥

ಸತಿಪತಿಗಳೇಕಾಂತಲಾಭದ ।
ಕೃತಿಯನಾಚರಿಸುವುದು ಬುದ್ಧಿಯು ।
ಸತತ ಸರ್ವೇಂದ್ರಿಯದ ವೃತ್ತಿಯ ಹಿಡಿದು ಕೈಗಳನು ॥
ಆತಿವಿಲೀನತೆಯಿಂದಲಾತ್ಮನ ।
ಪತಿಕರಿಸುವುದು ದೈನ್ಯ ಭಾವದಿ ।
ಮತಿಯುತನೆ ಹೆಸರಿದಕೆ ಶಮವೈ ಕರ್ಮದಾರಂಭ ॥೫೨೬॥

ಕರದಿ ಧರಿಸುತ ವಿಧಿಯ ದಂಡವ ।
ನರನೆ ಬಾಹ್ಯೇಂದ್ರಿಯಗಳೆಲ್ಲವು ।
ತಿರುಗ ಬಾರದಧರ್ಮಮಾರ್ಗದಲೆನುತ ನಿರ್ಧರಿಸಿ ॥
ಬರುಬರುತ ಶಮಗುಣಕೆ ಸಾಹ್ಯನ- ।
ನಿರದೆ ಮಾಡುತಲಿಂದ್ರಿಯಂಗಳು ।
ನಿರುತ ಚರಿಪವು ಧರ್ಮಮಾರ್ಗದಿ ಹೆಸರು ದಮವಿದಕೆ
॥ ೫೨೭ ॥

ಷಷ್ಠಿಪೂಜಾರಾತ್ರಿಯಲ್ಲಿ ರ- ।
ವಸ್ಪು ದೀಪ ವಿಸಂಬಿಸುವುದೇ- ।
ನಷ್ಟೆ ಪರಮೇಶ್ವರನ ರೂಪಧ್ಯಾನತತ್ಪರತೆ ॥
ಇಷ್ಟತೆಯ ತೋರಿಸುತ ಚಿತ್ತದಿ ।
ಧಿಟ್ಟತನದಲಿ ಧ್ಯಾನ ಗೂಡಲು ।
ಸೃಷ್ಟಿಯಲಿ ತಪವೆಂಬ ಬ್ರಾಹ್ಮಣಧರ್ಮ ಮೂರನೆದು
॥ ೫೨೮ ॥

ಇರುವುದು ಪವಿತ್ರತೆಯು ನಾಲ್ಕನೆ ।
ಪರಮಗುಣ ಬ್ರಾಹ್ಮಣಗೆ ಕೇಳೈ ।
ಕರೆವರದ ಕೋವಿದರು ಶೌಚವೆನುತ್ತ ಪರಿಕಿಸಲು ॥
ಎರಡು ವಿಧವದುವಿಹುದು ನಿರ್ಮಲ ।
ತರದ ಕರ್ಮವೆ ಬಾಹ್ಯ ಶೌಚವು ।
ಮೆರೆವುದೆರಡನೆ ಶೌಚ ಮಾನಸ ನೋಡು ಕೌಂತೇಯ
॥ ೫೨೯ ॥

ಏಳು ಸ್ವರಗಳ ಜಯದಿ ಪಂಚಮ- ।
ವೇಳುವುದು ಕೇಳ್ ಸ್ವರವು ಮಧುರವು ।
ಕೇಳು ವಾರ್ಧನೆ ಕ್ಷಾಂತಿ ಪಂಚಮ ಧರ್ಮವಾಪರಿಯು ॥
ತಾಳುವುದು ದುಃಖವ ಸಮಸ್ತವ ।
ಕೇಳು ಪೃಥ್ವಿಯ ತೆರದಿ ಸಂತಶ ।
ತಾಳುವುದು ಕ್ಷಮೆ ಬ್ರಾಹ್ಮಣರ ಕುಲಧರ್ಮವಿದು ನೋಡೆ
। ೫೩೧ ॥

ಆರನೆಯ ಗುಣ ಗಂಗೆಯೊಳಗಿನ ।
ನೀರಿನೋಘದ ಪರಿಯಲಿರುವುದು ।
ವೋರಗೋಡುವುದಲ್ಲವೇ ಡೊಂಕಾಗಿರಲು ತಟಿಯು ॥

ಭಾರಿ ಡೊಂಕಾಗಿರಲು ಕಬ್ಬದು ।
ಚಾರುಸವಿರುಚಿ ಡೊಂಕಿರುವುದೇ ।
ಧಾರುಣಿಯಲೀ ಪರಿಯೊಳಾರ್ಜವ ಗುಣವ ನೋಡಿದರೆ ॥೫೩೨॥

ತ್ರಾಸವನು ಕೊಡುತಿರುವ ನರರಿಗೆ ।
ಲೇಸನೇ ಬಯಸುವುದು ಗುಣವಿದು ।
ಭೂಸುರರ ಕುಲಧರ್ಮವಾರ್ಜವವೆಂದು ಹೆಸರಿದಕೆ ॥
ಸೋಸುತಲಿ ಕಷ್ಟವನು ಮಾಲಿಯು ।
ಪೋಷಿಸುವನೈ ಗಿಡವ ನೀರಿಂ- ।
ದೀಸು ಪರಿಯತ್ನಗಳು ಸಾರ್ಥಕ ಗಿಡವು ಫಲಿಸಿದರೆ ॥ ೫೩೩ ॥

ಪರಿಯೊಳಾ ಶಾಸ್ತ್ರೋಕ್ತಕರ್ಮಾ- ।
ಚರಣ ಮಾಡುತ ಹೋಗೆ ತಾನೀ- ।
ಶ್ವರನ ಪ್ರಾಪ್ತಿಯೆ ಲಭಿಪುದೆಂಬುದು ನಿಶ್ಚಯಾತ್ಮಕವು ॥
ಅರೆವು ಯಾರಿಂಗಿರುವುದವರಿಗೆ ।
ದೊರೆಯಿತ್ತೈ ನಿಜ ಜ್ಞಾನ ನಿಶ್ಚಯ- ।
ವಿರುವುದೇಳನೆ ಗುಣವು ಬ್ರಾಹ್ಮಣಕುಲದಿ ಧರ್ಮವಿದು ॥೫೩೪॥

ನಾನು ಹೇಳುವೆ ನಿನಗೆ ವರವಿ- ।
ಜ್ಞಾನಲಕ್ಷಣವನು ವಿಚಾರದಿ ।
ಧ್ಯಾನದಭ್ಯಾಸದಲಿ ಶಾಸ್ತ್ರವಿಚಾರಪೂರ್ವಕದಿ ॥
ತಾನೆ ಈಶ್ವರರೂಪನಾಗಿಹ ।
ಮಾನಸದಿ ಶುದ್ಧಿಯಲಿ ಸಾತ್ವಿಕ ।
ಜ್ಞಾನಬುದ್ಧಿಯ ಕರೆವರೈ ವಿಜ್ಞಾನವೆನ್ನುತಲಿ ॥ ೫೩೫ ॥

ನರಪತಿಯ ಮುದ್ರಾಂಕಿತನು ನರ- ।
ನಿರಲು ಲೋಕವು ಸೇವೆ ಮಾಳ್ಪುದು ।
ತೊರೆದು ಭೇದಾಭೇದ ಜಾತಿವಿಜಾತಿಯೆನ್ನುತಲೆ ।
ಪರಿಯಲಾ ಶಾಸ್ತ್ರೋಕ್ತಕರ್ಮಾ- ।
ಚರಣ ಮಾಡುತ ಹಾದಿ ನಡೆಯುಲು ।
ಕರೆವರದನಾಸ್ತಿಕ್ಯ ಗುಣಒಂಬತ್ತನೆಯದದುವೆ ॥ ೫೩೬ ॥

ಧರೆಯಲೀ ಒಂಬತ್ತನೆಯ ಗುಣ ।
ನಿರುವುದೈ ಕರ್ಮದ ತಿಳಾಮಣಿ ।
ಮೆರೆವುದೈ ಭೂಸುರರ ನಿಜವರ್ಜಸ್ವವದರಿಂದ ।।
ಇರುವುವೀ ಒಂಬತ್ತು ಗುಣ ಭೂ- ।
ಸುರರ ಸ್ವಾಭಾವಿಕದ ಕರ್ಮವು ।
ನರನೆ ಮನಗೊಟ್ಟದನು ಕೇಳೈ ಬ್ರಾಹ್ಮಣರ ಗುಣವ ।। ೫೩೭ ।।

ತರಣಿ ಸ್ವಯಮೇವಪ್ರಕಾಶಕ- । ಈಸು ಪು ನವಗುಣದ ಹಾರವು ।
ನಿರುವನಾಪರಿ ಬ್ರಾಹ್ಮಣನು ಗುಣ- । ಭೂಸುರರಿಗಿರುತಿರುವ ಶೋಭಪ ।
ಭರಿತನೀ ನವರತ್ನಸಮಗುಣಹಾರ ಶೋಭಿತನು ॥ ಭೂಷಣವಲಾ ಬ್ರಾಹ್ಮಣರ ಜಿಟ್ಟ್ರದು ಹಾರವದ ॥
ಅರಳಲಾ ಸಂಪಿಗೆಯ ಹೂವಿಂ- । ತೋಷದಿಂದಲಿ ಪೇಳ್ವೆ ನಿನಗಾಂ ।
ಮರವು ಶೋಭಿಸುವಂತೆ ಜಗದಲಿ । ವಾಸವಾತ್ಮಜ ಕೇಳು ಕ್ಷತ್ರಿಯ ।
ಪರಿಮಳದಿ ಚಂದನವು ಪ್ರಭೆಯಿಂ ಚಂದ್ರನಾ ತೆರದಿ ॥೫೫೮॥ ಭೂಷಣದ ಗುಣಗಣವನೆಲ್ಲವ ನೀನು ಮನಗೊಟ್ಟು ॥ ೫೫೯ ॥

ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್ ।
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್ ॥ ೪೩ ॥

ತರಣಿ ಸ್ವಯಮೇಯ ಪ್ರಕಾಶಕ । ಸೋಲಿಸುವುದೈಯುಚ್ಚತನದಲಿ ।
ತರುವನೇ ಸಾಲವನು ಕಿರಣದ । ಮೇಲೆ ಬರಲು ಪ್ರಸಂಗ ಕಠಿನವು ।
ಹರಿಯು ಸ್ವಪರಾಕ್ರಮದಿ ಕೊಲುವನು ಮದಗಜಾಳಿಗಳ ।। ತಾಳಲಾರದೆ ಭಯವನೊಂದೇ ಭಾವದಿಂದದನು ॥
ಪರರ ನಾಹ್ವದ ಹೊರತು ತಾನೇ । ಸೋಲಿಸುವುದೈ ಬುದ್ಧಿ ಸೂಕ್ಷ್ಮವು ।
ಯಿರುವನವನು ಬಲಾಢ್ಯ ಶೂರನು । ಕೇಳು ನರನೇ ನಾವಧಾನ್ಯನ ।
ನರನೆ ಶೌರ್ಯವು ಕ್ಷಾತ್ರಪೃಕೃತಿಯ ಮೊದಲನೆಯ ಗುಣವ್ತ ತಾಳುವುದು ದಕ್ಷತೆಯ ಹೆಸರಿನ ನಾಲ್ಕನೆಯ ಗುಣವು ।। ೫೫೪ ॥
॥ ೫೫೦ ॥

ತರಣಿ ನಿಜಪ್ರಭೆಯಿಂದ ಗಗನದೊ- । ಸೆಣಸಿ ನೋಡಲು ಬಹು ಪರಾಕ್ರಮ ।
ಳಿರುವ ತಾರಾಗಣಗಳನು ಧಿ- । ಗುಣವು ಕಂಚಮು ಕ್ಷಾತ್ರಧರ್ಮ- ।
ಕ್ಕರಿಸಿ ಲೋಪವ ಮಾಳ್ಪನಲ್ಲೆ । ಚೋದ್ಯ ನೋಡಿದಿಯಾ ॥ ಕೈನನ ಸಂಮುಖ ಸತತವಿರುವುವು ಕಮಲಗಳು ತಿಳಿಯೆ ॥
ಮರಳಿ ಚಂದ್ರನು ತಾರೆಗಳು ಸಹ । ರಣದಲಾಪರಿ ಸತತ ವೈರಿಯ ।
ಯಿರುವುವೇನು ಸಮರ್ಥ ತರಣಿಯ । ಗಣಕೆ ಸಂಮುಖವಾಗಿ ಕಾದುವು- ।
ಕಿರಣಗಳ ಲೋಪಿಸಲು ತಾವೇ ಲುಪ್ತವಾಗುವುವು ॥೫೫೧॥ ದನುನಯವು ಕಲಿವಾರ್ಥ ಕೇಳೈ ಕ್ಷಾತ್ರಕುಲಧರ್ಮ ॥ ೫೫೫ ॥

ನರನೆ ನೋಡೀ ತೆರದಿ ತನ್ನಯ । ಪತಿಸಮಾಗಮ ಯತ್ನದಿಂದಲಿ ।
ಪರಮಗುಣಗಣದಿಂದ ಜಗವನು । ಸತಿಯು ಗರ್ಭಿಣಿ ತಪ್ಪಿಸುವ ತೆರ- ।
ಮರುಳಿಸುವನೈ ಚೋದ್ಯದಿಂ ತಲೆದೂಗುವಂದದಲಿ ॥ ಸತಿಕುಶಲದಲಿ ತಪ್ಪಿಸುವನೈ ರಣಪಲಾಯನವ ।
ಬರಲಿ ಬೇಕಾದ ಪ್ರಸಂಗದೊ- । ಕ್ಷಿತಿಯಲೀ ಗುಣ ಶ್ರೇಷ್ಠ ಕ್ಷಾತ್ರವು ।
ಳರಿಯನಲ್ಲಾ ಹೇಡಿತನವ । ಮತಿಯುತನೆ ಪುರುಷಾರ್ಥ ತೆರದಿ ಭ- ।
ನ್ನೆರಡನೆಯ ಗುಣ ತೇಜ ಹೆಸರೈ ಕ್ಷಾತ್ರಗುಣಗಣದಿ ॥೫೫೨॥ ಕುತಿಯ ತೆರದಲಿ ಗುಣಗಣಕೆ ಚೂಡಾಮಣಿಯು ನೋಡಿ ॥೫೫೬॥

ಧೀರತನವೇ ಕ್ಷಾತ್ರಭೂಷಣ । ಮರವು ತನ್ನೆಲೆ ಹೂವುಹಣ್ಣನು ।
ಚತುರನೆಯ ಗುಣ ತಿಳಿಯೆ ಪಾರ್ಥನೆ । ಭರದಿ ಯಾಚಕವರ್ಗಕರ್ಪಿಸು- ।
ಹಾರಿ ಬೀಳಲಿ ಗಗನ ಮುಚ್ಚಲು ಕಣ್ಣ ಭೀತಿಯಲಿ ॥ ತಿರುವ್ತದಲ್ಲಾ ಕಮಲಗಳು ಪರಿಮಳವ ಕೊಡುವುವಲಾ ॥
ನೀರು ಯೆಪ್ಪಾಗಿರಲು ಭರಿತವು । ನರನು ಮನದಿಚ್ಛೆಯಲಿ ಹಿಮಕರ- ।
ನೀರಜವು ಕೆಳಗಿಕ್ಕಿ ನೀರು । ಕಿರಣದುಸಭೋಗವನು ಕೊಂಡರೆ ।
ಸ್ಫೀರುವುದು ಮೇಲಕ್ಕೆ ಗಗನವು ಸರ್ವವಸ್ತುಗಳ ।೫೫೫ ॥ ಮರುಗುವನೆ ಮೇಣೇನು ಹಿಮಕರ ಹರ್ಷ ಪಡುವನಲಾ॥೫೫೭॥

ನರನೆ ನೋಡೀ ತೆರದಿ ಯಾಚಕ- ।
ಗಿರದೆ ವಾಂಛಿತ ದಾನ ಕೊಡುವುದು ।
ಯಿರುವುದಾರನೆ ಗುಣವು ಕ್ಷತ್ರಿಯಕುಲದಿ ನಿಜನಾಗಿ ॥
ಇರುವನಾಜ್ಞೆಯ ವಾಸದರಮನೆ ।
ಧರಣಿಯಲಿ ಕ್ಷತ್ರಿಯನು ನೋಡೈ ।
ಯಿರುವುದಾಜ್ಞಾಧಾರಕತ್ವವು ಕ್ಷತ್ರಿಯರ ಗುಣವು ೫೪೮॥

ಹಸ್ತಪಾದಾದಿಗಳನೆಲ್ಲವ ।
ಶಿಸ್ತಿಯಿಂದಲೆ ಪೋಷಿಸಲು ಬಹು ।
ಶಕ್ತಿಯುಕ್ತಿಯು ಕಾಮಗಾರಿಯು ಮಾಡಿಸಲು ಬಹುದು ॥
ಶಿಸ್ತಿಯಿಂದಾ ತೆರದಿ ಪ್ರಜೆಗಳ- ।
ನೆತ್ತಿ ಪಾಲಿಸೆ ಪ್ರಜೆಗಳೆಲ್ಲವು ।
ವಾಸ್ತವಿಕ ರೀತಿಯಲಿ ಪ್ರತ್ಯುಪಕಾರ ಮಾಡುವುವು
॥ ೫೪೯ ॥

ಇರುವುದೀಪರಿ ಕ್ಷಾತ್ರಸಂಭವ ।
ಪರಮ ಸಾಮರ್ಥ್ಯಕ್ಕೆ ಸ್ತಂಭವು ।
ಕರೆವರೀಶ್ವರಭಾವವೆನ್ನುತಲಿದನೆ ಕೋವಿದರು ॥
ಇರುವುದೀ ಗುಣ ಕ್ಷತ್ರಕುಲದಲಿ ।
ಪರಮ ಚೂಡಾಮಣಿಯು ರಾಜನು ।
ಮೆರೆವುದೇಳನೆ ಗುಣವಿದಲ್ಲೈ ಕ್ಷಾತ್ತಕರ್ಮದಲಿ ॥ ೫೫೦ ॥

ಮೆರೆವನಾರೀ ಶೌರ್ಯಮೊದಲಾ- ।
ಗಿರುವ ಗುಣಸಪ್ತಕದ ಹಾರದೊ- ।
ಳರಿಯಲಾ ಸಪ್ತರ್ಷಿತೆರದಲಿ ಗುಣಗಳಿರುತಿಹುವು ॥

ಇರುವುವೀ ಶಾರೆಗಳು ಭೂಷಣ ।
ಮೆರೆವ ಬಾನಿಂಗತೆರದೊಳೀ ।
ನರಗೆ ಕ್ಷಾತ್ರೋತ್ಸನ್ನನಿಗೆ ಗುಣವೇಳು ಶೋಭಿಪುವು ॥ ೫೫೧ ॥

ಸಪ್ತಗುಣಗಣದಿಂದ ಜಗದಿ ಪ- ।
ವಿತ್ರತೆಯ ತಾನಾಂತು ಕರ್ಮವು ।
ಕ್ಷತ್ರಕುಲಸಂಭೂತವದುವೆ ಪವಿತ್ರವಾಗಿಹುದು ॥
ಧಾತ್ರಿಯಲ್ಲೀ ತೆರದ ಪುರುಷನು ।
ಕ್ಷತ್ರನಲ್ಲಾ ಚಿನ್ನದೋಪಮ ।
ಸತ್ತ್ವಗುಣಗಳ ಮೇರುವಲ್ಲಾ ಸ್ವರ್ಗಧಾರಕನು ॥ ೫೫೨ ॥

ಸಪ್ತಗುಣವಾರಿನಿಧಿವೇಷ್ಟಿತ ।
ಧಾತ್ರಿಯಲ್ಲಾ ಕ್ಷಾತ್ರರೂಪಳು ।
ಸಪ್ತಸದ್ಗುಣರೂಪವಾಹಿನಿ ಕ್ಷಾತ್ರಗಂಗೆಯಲಾ ॥
ಕ್ಷಾತ್ರಪ್ರಕೃತಿಯ ಧರಿಸಿ ಶೋಭಿಪ ।
ಕ್ಷಾತ್ರರೂಪ ಮಹೋದಧಿಗೆ ಬಹು ।
ಸತ್ವರದಿ ಬಂದೈಕ್ಯವಾಗಲು ಶೋಭೆ ನಿರುಪಮವು ॥ ೫೫೩ ॥

ನರನೆ ಬಹುವಿಸ್ತಾರವಾಯಿತು ।
ಭರದಿ ಮುಂದಿನ ಗುಣವ ಪೇಳುವೆ ।
ನಿರುವುವೀ ಗುಣ ಕ್ಷತ್ರನಿಗೆ ಸ್ವಾಭಾವಿಕವು ತಿಳಿಯೆ ॥
ನರನೆ ಸುಮಹಾಮತಿಯ ನಿನಗಾ- ।
ನೊರೆವೆ ವೈಶ್ಯನ ಯೋಗ್ಯ ಕರ್ಮವ ।
ನಿರದೆ ಕೇಳೈ ನೀನು ಮನಗೊಟ್ಟೆದನು ಕೌಂತೇಯ ॥ ೫೫೪ ॥

ಕೃಷಿಗೋರಕ್ಷವಾಣಿಜ್ಯಂ ವೈಶ್ಯಕರ್ಮ ಸ್ವಭಾವಜಮ್ ।
ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಮ್ ॥ ೪೪ ॥

ಹೊಲಮನೆಯ ಮಾಡುವುದು ಹೊಲದಿಂ ।
ಗಳೆಸುವುದು ಬಹುಧನವ ಬೀಜಂ- ।
ಗಳನು ನೇಗಿಲು ಮುಖ್ಯಸಾಧನಗಳನು ಲಭಿಸುವುದು ॥
ತಿಳಿಯಲದು ಕೃಷಿಕರ್ಮ ಮೇಣಾ ।
ಕಳೆನ ಪಾಲನವನ್ನು ಮಾಳ್ಪುದು ।
ತಿಳಿಯಲಾ ವೈಶ್ಯನ ಸ್ವಭಾವಜ ಕರ್ಮ ಕೌಂತೇಯ
॥ ೫೫೫ ॥

ಇರುವುದೈ ವಾಣಿಜ್ಯ ಮೂರನೆ ।
ತರದ ಗುಣ ವೈಶ್ಯನಿಗೆ ಸುಲಭದ- ।
ಲಿರದೆ ಕೊಳ್ಳುತ ಲಾಭದಿಂದದ ಮಾರಿಕೊಳ್ಳುವುದು ॥

ನರನೆ ನೋಡೀ ತೆರದಿ ವೈಶ್ಯನಿ- ।
ಗಿರುವ ಧರ್ಮವು ಸಹಜವದು ಶೂ- ।
ದ್ರರು ಕಣಾ ಯಿಮ್ಮೂರುವರ್ಣದ ಸೇವೆಯಾಡುವುದು ॥ ೫೫೬ ॥

ಇರುವುದೈ ದ್ವಿಜವೆಂಬ ಹೆಸರೀ ।
ಪರಿಯ ಮೇಲಿನ ಮೂರುವರ್ಣ- ।
ಕ್ಕಿರುವುದಂತಿಮ ಜಾತಿ ಶೂದ್ರರು ಪಾರ್ಥ ನೋಡಿದಿಯಾ ॥
ನರನೆ ಸೇವಾಧರ್ಮವವರಿಗೆ ।
ನಿರುತ ಶಾಸ್ತ್ರದಿ ವಿಧಿಸಿರುವುದೈ ।
ಹೊರತು ಸೇವಾಧರ್ಮವವರಿಗೆ ಬೇರೆ ಗತಿಯಿಲ್ಲ ॥ ೫೫೭ ॥

ಸ್ವೇಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।
ಸ್ವಕರ್ಮನಿರತಃ ಸಿದ್ಧಿಂ ಯಥಾ ವಿಂದತಿ ತಚ್ಛೃಣು ॥ ೪೫ ॥

ಆಡುವುದು ನಾಲಿಗೆಯು ಕಾಲುಗ- ।
ಳೋದುವುವು ಕಿವಿ ಕೇಳ್ವುವೆಲ್ಲವ ।
ನೋದುವುವು ಕಣ್ಣುಗಳು ಕೇಳೀಪರಿಯ ಕರ್ಮಗಳು ॥
ರೂಢನಿಹುದೈ ವಿಹಿತಕರ್ಮವು ।
ಮಾಡುತಿಹುವಿಂದ್ರಿಯಗಳಾಪರಿ ।
ಕೂಡಲೀಪರಿಯೈಕ್ಯ ದೇಹದಿ ಬರುವುದಾನಂದ ॥ ೫೫೮ ॥

ನೀರು ಸುರಿಯಲು ಮೇಘದಿಂದಲಿ ।
ಸೇರುವುದು ನದಿಯೊಳಗೆ ವಿಹಿತವು ।
ವಾರಿಧಿಯ ಸೇರುವುವು ನದಿಗಳು ವಿಹಿತವೀ ಕರ್ಮ ॥
ಚಾರು ವರ್ಣಾಶ್ರಮದ ಧರ್ಮಪ್ರ- ।
ಕಾರ ಬಂದಿಹ ವಿಹಿತಕರ್ಮಾ- ।
ಚಾರದಿಂ ವರ್ತನವ ಮಾಡಲು ಯೋಗ್ಯ ಮಾತಾಯ್ತು
॥ ೫೫೯ ॥

ಗೌರವರ್ಣದ ಕಾಂತಿ ಗೌರಶ- ।
ರೀರಕದು ಪೋಪೆಯನು ಕೊಡುವುದು ।
ಚಾರು ವರ್ಣದ ಧರ್ಮ ತತ್ತದ್ ವರ್ಣಕದು ಪೋಪೆ ॥
ವೀರ ಚೂಡಾಮಣಿ ಸ್ವಭಾವಜ ।
ಚಾರು ಕರ್ಮವ ಮೊದಲು ಶಾಸ್ತ್ರಾ- ।
ಧಾರದಿಂ ನಿರ್ಧಾರನಾಗಿಯೆ ಮಾಡ ಬೇಕಲ್ಲೈ । ೫೬೦ ॥

ತನ್ನ ಹತ್ತರನಿರುವ ದಿನ್ಯಸು- ।
ರತ್ನವನು ಸಾರಬಿಯು ಕೈಯಿಂ- ।
ಚೆನ್ನದಾಗಿಯೆ ಪರಿಕಿಸುವ್ರದುತ್ತಮವು ಕೌಂತೇಯ ॥
ಎನ್ನತೀಪರಿ ತತ್ತ್ವ ತಿಳಿಯುತ ।
ತನ್ನ ಶಾಸ್ತ್ರಾಧಾರಕರ್ಮವ ।
ಚೆನ್ನದಾಗಿಯೆ ತಿಳಿದು ಕೊಳ್ಳುವ್ರದುತ್ತಮವು ಪಾರ್ಥ
॥ ೫೬೧ ॥

ಇರಲು ತನ್ನಯ ದೃಷ್ಟಿ ದೀಪದ ।
ಹೊರಕು ಕತ್ತಲೆಯಲ್ಲಿ ಫಲನೇ- ।
ನರಿಯದಿರೆ ಹಾದಿಯನು ಕಾಲಿದ್ದೇನು ಫಲ ವಾರ್ಥ ॥
ಪರಿಯೊಳಾ ಜಾತಿಯ ಪ್ರಮಾಣದಿ ।
ದೊರಕಿವ ಶಾಸ್ತ್ರೋಕ್ತ ಕರ್ಮವ- ।
ನರಿತು ಕೊಳ್ಳಲು ಬೇಕು ಶಾಸ್ತ್ರಗಳೆಹುವು ಕೈದೀಪ ॥ ೫೬೨ ॥

ಮನೆಯಲಿರುತಿಹ ವಸ್ತು ಹುಡುಕಲು ।
ಮನುಜ ಕೈಯಿಂದೆತ್ತಿ ದೀಪವ ।
ತನಗೆ ಬೇಕಾದಂತೆ ನೋಳ್ಪನು ಮನ ದಣಿಯುವನಕ ॥
ಎನುವರಾರೀನಿದಕೆ ತಪ್ಪಿದ- ।
ನೆನುವರಿರುವರೆ ಕಾಣೆನವರನು ।
ನಿನುತಚರಿತ ಧನಂಜಯನೆ ನೀ ನೋಡು ತತ್ತ್ವವನು ॥ ೫೬೩ ॥

ನರನೆ ತನಗೆ ಸ್ವಭಾವದಿಂ ಬಂ- ।
ದಿರುವ ಕರ್ಮವ ಶಾಸ್ತ್ರದಲಿ ವಿಧಿ- ।
ಸಿರುವ ಪರಿಯಲ್ಲಾಚರಿಸುವನೊ ತೊರೆಯುತಾಲಸ್ಯ ॥
ತೊರೆದು ಕರ್ಮಫಲೇಚ್ಛೆಯನು ಬಹು ।
ಪರಿಯಲದರಲಿ ಕಾಲ ಕಳೆವನೊ ।
ಹರುಷದಿಂದಾ ಕರ್ಮಕರ್ಪಿಸಿ ಕಾಯಮನಸುಗಳ ॥ ೫೬೪ ॥

ಚರಿಸಲಾತನು ಕರ್ಮಮಾರ್ಗವ- ।
ನರಿಯನಾತ ಕುಕರ್ಮವೆಂದಿಗು ।
ಬರಲು ನೀರು ಪ್ರವಾಹದಲಿ ಹೋಗುವುದೆ ಸ್ವೇಚ್ಛೆಯಲಿ ॥
ನರನೆ ನೋಡೀ ವಿಹಿತಕರ್ಮವ ।
ಚರಿಸಲಾಕ್ಷಣ ಮೋಕ್ಷಮಾರ್ಗದೊ- ।
ಳಿರುವ ದ್ವಾರವಿರಕ್ತಿಯನು ಸೇರುವನು ನಿಜವಾಗಿ ॥ ೫೬೫ ॥

ನರನೆ ಶಾಸ್ತ್ರನಿಸಿದ್ಧ ಕರ್ಮಗ- ।
ಳಿರುವುದೇನೈ ಕಾರ್ಯ ಜಗದಲಿ ।
ಹರಿದು ನೋಡಾ ಪಾಶ ಛೇದಿಪನದರ ಸಂಬಂಧ ॥
ಇರುವುದೇ ಸಂಸಾರವದರಿಂ ।
ಪರಮಸ್ವಾತ್ಮಜ್ಞಾನಕಡ್ಡವು ।
ಮುರಿವನೈ ಸಂಸಾರಭೀತಿಯ ಮುಕ್ತನಾಗುವನು ॥ ೫೬೬ ॥

ಚಂದನದಿ ನಿರ್ಮಿಸಿದ ಬೇಡಿಯಿ- ।
ದೆಂದು ಕಾಲೊಳಗೇರಿಸುವರೇ ।
ಬಂಧನವಲಾ ಕಾಮ್ಯಕರ್ಮಾಚರಣ ನೋಡಿದರೆ ॥
ಎಂದು ತಿಳಿದು ರಹಸ್ಯ ಕೌತುಕ- ।
ದಿಂದಲಾದರು ಕಣ್ಣನೆತ್ತನು ।
ಮುಂದೆ ನೈತ್ಯಕ ಕರ್ಮಫಲದಾಶೆಯನು ತೊರೆದಿಹನು ॥ ೫೬೭ ॥

ನರನೆ ನೋದದರಿಂದ ಕರ್ಮಾ- ।
ಚರಣದಲಿ ಕೃತಕೃತ್ಯನಾಗುತ ।
ಬರುವನವನೈ ಮೋಕ್ಷರಾಜ್ಯದ ಮೇರೆ ಪರ್ಯಂತ ॥
ಪರಿಯಲೀ ಯುಕ್ತಿಯಲಿ ಕರ್ಮದ ।
ನಿರಸನವ ಮಾಡುತ ಶುಭಾಶುಭ ।
ತೊರೆದು ಸಂಸಾರದಲಿ ಜೀವನ್ಮುಕ್ತನಾಗುವನು ॥ ೫೬೮ ॥

ಬರುವನೈ ವೈರಾಗ್ಯದ್ವಾರಕೆ- ।
ನರನೆ ನೋಡಿದು ಸಕಲ ಭಾಗ್ಯದ ।
ಪರಮ ಸೀಮೆಯು ಮೋಕ್ಷಲಾಭದ ಮೂರ್ತಿ ನಿಶ್ಚಯವು ॥
ಇರುವುದಿದುನೇ ಕರ್ಮಮಾರ್ಗದೊ- ।
ಳಿರುವ ವರನಿಶ್ರಾಂತಿಮಂಡಪ ।
ಧರಣಿಯೊಳು ಸತ್ಕರ್ಮವೃಕ್ಷದ ಹೂವು ವೈರಾಗ್ಯ ॥೫೬೯॥

ಇರುವುದ್ಕೆ ಹೊಸ ಮೋಕ್ಷಸಲ್ಲೈ ।
ಪುರುಷ ಸಾಧಕ ಭ್ರಮರನಂದದಿ ।
ತಿರುಗುತಿಹನೈ ವಿಶ್ರಮಿಸಿ ವೈರಾಗ್ಯಹೂವಿನಲಿ ।
ತರಣಿಯುದಯಕೆ ಬರುವನೆಂಬುದ- ।
ನರುಣ ಸೂಚಿಸುವಂತೆ ಪಾರ್ಥನೆ ।
ಬರುವ ಸ್ವಾತ್ಮಜ್ಞಾನಕೆದು ವೈರಾಗ್ಯ ಸೂಚಕವು । ೫೭೦ ॥

ಇರುವುದಖನಾ ಸ್ವಾತ್ಮಜ್ಞಾನದ ।
ಮೆರೆವ ದಿವ್ಯ ನಿಧಾನ ಕಣ್ಣಿಲಿ ।
ಸುರಿಸಿದರೆ ವೈರಾಗ್ಯವೆಂಬಂಜನವ ನಿಜದಿ ॥
ಬರುವುದದು ದೃಗ್ಗೋಚರಕೆ ತಾ- ।
ನಿರದೆ ತನುವಾಚ್ಛನಸಿನಿಂದಲೆ ।
ಸುರಿಸುವನು ಮೇಣದನು ಬುದ್ಧಿಯ ಕಣ್ಣಿನಲಿ ಪಾರ್ಥ ॥ ೫೭೧ ॥

ನರನೆ ನೋಡೀತೆರದಿ ಕರ್ಮಾ- ।
ಚರಣವನು ನಿಗಮೋಕ್ತಮಾರ್ಗದಿ ।
ನರನು ಮಾಡಲು ಮೋಕ್ಷಕಾಗುವನಹನೀ ತೆರದಿ ॥
ಹರುಷದಿಂದೀ ವಿಹಿತ ಕರ್ಮಾ- ।
ಚರಣವನು ಮಾಡಿದರೆ ಮಂಗಲ- ।
ಕರವೆ ಯೆನಗರ್ಜುನಯು ಸೇವೆಯು ಸರ್ವವೀಜಗದಿ ॥೫೭೨॥

ಪೂರ್ಣಭೋಗವನಿತ್ತು ಪತಿಗಾ- ।
ಮಾನಿನಿಪತಿವ್ರತೆಯು ತೋಷಿಪ- ।
ಳೇನ ಹೇಳಲಿ ಕರೆವರೀಯಾಚರಣ ತಪನೆನುತ ॥
ಕ್ಷೋಣಿಯಲಿ ತಾಯ್ ಹೊರತು ಮತ್ತಿ- ।
ನ್ನೇನಿಹುದು ರ್ಜನವು ತಾಯಿಯ ।
ಮಾನಿಸಲು ತಪ್ಪೇಬಹುಕಲ್ಯಾಣಕರವಲ್ಲೈ ॥ ೫೭೩ ॥

ನರನೆ ತತ್ತ್ವವನ ಕೇಳ್ ಸ್ವಧರ್ಮಾ- ।
ಚರಣವೇ ಮಾನವಗೆ ಮುಖ್ಯ- ।
ಚರಣನಿದ ನೀ ನಂಬು ಪುರೆಯದಲೀ ಸುತತ್ತ್ವನು ॥
ನರನೆ ಗಂಗಾನದಿಯೊಳಗೆ ನಿ- ।
ನಿರಲು ತೀರ್ಥದ ಮಹಿಮೆ ತಿಳಿಯದೆ ।
ಬರವುದಲ್ಲೈ ನಿನಿಗಾ ತೀರ್ಥದ ಸುಲಾಭವದು ॥ ೫೭೪ ॥

ನರಗೆ ಒಂದಿಹ ವಿಹಿತಕರ್ಮಾ- ।
ಚರಣ ಕಾರ್ಯವು ತ್ಯಾಜ್ಯನಲ್ಲದು ।
ಹೊರತು ಮತ್ತೆರಡನೆಯುಪಾಯವೆ ಯಿಲ್ಲವೆಂದೆನುತ ॥
ಪರಮ ನಿಶ್ಚಯದಿಂದ ಕರ್ಮಾ- ।
ಚರಣವನು ಮಾಡಲ್ಕೆ ಶ್ರೀಹರಿ ।
ಪರಿಸುವನು ಭಾರವನು ಭಾರವು ಚಿತ್ತ ಹರಿಮೇಲೆ ॥ ೫೭೫ ॥

ಧರಣಿಯಲ್ಲೀ ವಿಹಿತ ಕರ್ಮಾ- ।
ಚರಣವೇ ಪರಮಾತ್ಮನಿಚ್ಛೆಯು ।
ಅರಿಯುತೀ ಪರಿ ಕರ್ಮಮಾಚರಿಸಿದರೆ ಪರಮಾತ್ಮ ॥
ದೊರಕುವನು ಸಂದೇಹವೇತ ।
ಕ್ಕಿರುವಳಾದರು ದಾಸಿ ರಾಜನ ।
ಪರಮ ಪ್ರೀತಿಯು ದೊರಕಿದರೆ ಸ್ವಾಮಿನಿಯೆ ಮೇಣವಳು ॥ ೫೭೬ ॥

ಸ್ವಾಮಿಕಾರ್ಯಕೆ ತಲೆಯುನೊಡ್ಡುವ ।
ಸ್ವಾಮಿಭಕ್ತಗೆ ಕೊಟ್ಟು ರಾಜನಿ- ।
ನಾಮ ದಪ್ತರದಲ್ಲಿ ದಾಖಲೆ ಯಿಟ್ಟುಕೊಳ್ಳುವನು ॥
ನೇಮನೀಪರಿಯಿರಲು ಸಕಲವು ।
ಭೂಮಿಯಲಿ ಪರಮಾತ್ಮನಿಚ್ಛೆಯು ।
ಕಾಮಿತವು ಮೇಣೆಂದು ಕರ್ಮಾಚರಣ ಮಾಡುವುದು ॥ ೫೭೭ ॥

ನರನೆ ನೋಡೀ ತೆರದಿ ಕರ್ಮಾ- ।
ಚರಣನೇ ಬಹು ಶ್ರೇಷ್ಠವಿಹುದೈ ।
ಹೊರತು ಅನ್ಯಾಚರಣ ವಾಣಿಜ್ಯದೊಲು ತ್ಯಾಜ್ಯವದು ॥

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥ ೪೬ ॥

ನರನೆ ನೋಡೈ ನಿಹಿತಕರ್ಮಾ- ।
ಚರಣ ಮಾಡಲು ಕರ್ಮವಲ್ಲದು ।
ವರಿಯಲಾ ಪರಮಾತ್ಮನಿರ್ಮಿತ ಭೂತಗಣವೆಲ್ಲ ॥
ಮೆರೆವ ಪರಮಾತ್ಮನ ಮನೋಗತ- ।
ವರಿತು ಪಾಲಿಸಿದಂತೆ ಕರ್ಮಾ- ।
ಚರಣವಾಗುವುದೀನ ಹೇಳಲಿ ಕರ್ಮ ತಪ್ಪದದು ॥೪೬॥

ನರನೆ ನೋಡಾ ಪೂಜೆಯಿಂದಲೆ ।
ಹರುಷದಿಂದಾ ಸ್ವಾತ್ಮರಾಜನು ।
ಮೆರೆಸುವನು ವೈರಾಗ್ಯಸಿಂಹಾಸನದ ಮೇಲವನ ॥
ವರದ ರೂಪದ ಸುಪ್ರಸಾದವು ।
ಬರುವುದ್ದೆ ಭಕ್ತನಿಗೆ ಮೇಣಿದು ।
ಬರಲು ವೈರಾಗ್ಯವು ಕಣಾ ಸಂಸಾರದಲಿ ನರಗೆ ॥ ೪೬೧ ॥

ಮೆರೆಸುವನು ಪರಮಾತ್ಮ ಜಗದಲಿ ।
ಹರಕುಮುರಕಜ್ಞಾನ ಚಿಂಧಿಯ ।
ಹೊರಗೆ ಸುತ್ತುತ ಜೀವರೂಪದ ಗೊಂಬೆಗಳನೆಲ್ಲ ॥
ಮೆರೆವುದ್ದೆ ರಜಸತ್ತ್ವತಮಸೀ- ।
ತೆರದ ಮೂರೆಳೆಸೂತ್ರ ಗೊಂಬೆಗೆ ।
ಪರಿಪರಿಯಲಾಡಿಸುವನೈ ಹಂಕಾರತಾಳದಲಿ ॥ ೪೬೨ ॥

ಹರಿಯ ಛಂದವು ಹತ್ತಿ ಲೋಕದಿ ।
ಮರುಳನಂದದಿ ತಿರುಗುತಿಹನೈ ।
ತೊರೆವೆನೈ ಸಂಸಾರವೆಲ್ಲವ ವಮನದಂದದಲಿ ॥
ನರನೆ ನೋಡೈ ಪತಿವಿಯೋಗದ ।
ವಿರಹಿಣಿಯು ಮರಣನನು ಬಯಸುವ ।
ತೆರದೊಳೀ ಸಂಸಾರಸುಖವನು ತುಚ್ಛವೆನ್ನುವನು ॥ ೪೬೩ ॥

ಹೊರಗೊಳಗೆ ಸರ್ವತ್ರ ದೀಪವು ।
ಭರಿತನಿಹುದೈ ತೇಜದಿಂದಲಿ ।
ಭರಿತನಿಹ ಪರಮಾತ್ಮ ಸಚರಾಚರ ಜಗತ್ತಿನಲಿ ॥
ನರನೆ ಸರ್ವಾತ್ಮಕನು ಪರಮೇ- ।
ಶ್ವರ ಸ್ವಕರ್ಮದ ಪುಷ್ಪದಿಂದಲೆ ।
ನಿರಚಿಸಲು ಪೂಜೆಯನು ಸಂತೋಷಿಪನು ಮನಮರೆತು ॥೪೬೪॥

ಈಶನಪರೋಕ್ಷದಲಿ ಜ್ಞಾನದ ।
ಧ್ಯಾಸದಿಂದಲಿ ತನ್ಮಯತೆಯೇ ।
ಭಾಸುರದೊಳುಂಟಾಗಿ ಬೋಧಕೆ ಯೋಗ್ಯನೆನಿಸುವನು ॥
ವಾಸತ್ಮವಾತ್ಮಜ ಕೇಳು ನಿಜದಲಿ ।
ಮೋಕ್ಷಪ್ರಾಪ್ತಿಯು ದೊರೆಯ ಬೇಕೆಂ- ।
ದಾಶೆ ಮಾಳ್ಪನು ಮಾಡ ಬೇಕು ಸ್ವಧರ್ಮದಾಚರಣ ॥ ೪೬೫ ॥

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ॥
ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥ ೪೭ ॥

ಧರೆಯೊಳಿರೆ ಕಠಿನವು ಸ್ವಧರ್ಮಾ- ।
ಚರಣ ಪರಿಣಾಮದಲಿ ಲಕ್ಷ್ಯವ- ।
ನಿರಿಸಿ ಮಾಡಲು ಬೇಕು ಸುಲಭಾಹ್ಲಾದಕಾರವು ॥
ನರನೆ ಸೇವಿಸೆ ಜೀವಿನೆಲೆಯನು ।
ಬರುವುದಾದರೆ ಸೌಖ್ಯ ಕೊನೆಯಲಿ ।
ಮರುಳನಲ್ಲಾ ಜೀವಿನೆಲ್ಲಕಿಯೆಂದು ಬಿಡುತಿಹನೆ ॥ ೪೬೬ ॥

ಬಾಳೆಗೊನೆ ಹಣ್ಣಾಗೆ ಸುಲಗಳು ।
ಬೀಳುವುವು ಬಾಯೊಳಗೆ ಸವಿಸವಿ ।
ಕೂಳನಲ್ಲಾ ನೋಡದಿರೆ ಪರಿಣಾಮವೇನಿಹುದು ॥ ೪೬೭ ॥

ಬಾಳೆ ಗೊನೆ ಹಾಕುವ ಮೊದಲಿಗೆನೆ ।
ಯೇಳುವುದು ಮನದಲಿ ನಿರಾಶೆಯು ।
ಜಾಳೆಯನು ಕೀಳುವ್ದದು ಯೋಗ್ಯವೆ ದಿವಸಗತಿಯಿಂದ ॥

ತೊರೆದು ಬಿಡಲು ಸ್ವಧರ್ಮವೆಲ್ಲವ- ।
ನಿರುವುದಾಚರಣವೆ ಕಠಿಸವೆಂ- ।
ದರಿಯಲಾ ಮೂರ್ಖನಿಗೆ ಮೋಕ್ಷಪ್ರಾಪ್ತಿಯೆಂತಿಹುದು ॥
ಇರಲು ತಾಯಿ ಕುರೂಪಿಯಾಕೆಯೆ ।
ಪರಮ ಪ್ರೇಮದಿ ವರ್ಧಿಸಿದಳೇ- ।
ತೆರದಿ ಭಾವಿಸ ಬೇಕು ಪ್ರೇಮ ಕುರೂಪಿಯಾಗಿಹುದೆ ॥ ೪೬೮ ॥

ರಂಭೆಯಿಂತೆ ಸ್ವರೂಪವುಳ್ಳ ನಿ- । ತನ್ನ ಸುವಿಹಿತ ಧರ್ಮ ಬಿಡುತಲೆ ।
ತಂಬಿನಿಯರಿದ್ದೇನ ಮಾಡುವ- । ಯನ್ಯ ಧರ್ಮಾಚರಣ ಮಾಡಲು ।
ರಂಬೆಯಿಂದದೊಳವರು ಪೋಷಿಸುತಿಹರೆ ಬಾಲನನು ॥ ಬನ್ನ ಬಡುವನು ದುಃಖ ನಾಗರದೊಳಗೆ ಬೀಳುವನು ॥
ಅಂಭಕೆಂತಲು ತುಪ್ಪದಲಿ ಗುಣ- । ಇನ್ನು ನೋಡ್ಪೆ ತತ್ತ್ವ ವಾರ್ಥನೆ ।
ಬಿಂಬಿಸುವುದೈ ಬಹಳ ಪರಿಯ- । ತನ್ನ ಜಾತಿಸ್ವಭಾವದನುಗುಣ- ।
ಲ್ಲಿಂಬ ಕೊಡುವುದೆ ತುಪ್ಪ ವಿನಕಕ್ಕುಂಭದಂದದಲಿ ॥ ೫೬೫ ॥ ವನ್ನು ಮಾಡಲು ಬೇಕು ಕರ್ಮವು ಸಲ್ಲದನ್ಯನದು ॥ ೫೯೦ ॥

ವಿಷವಿಹುದು ಬಚನಾಗ ಜಗಕೈ । ನಡೆಯುವ್ರದು ಕಾಲಿಂದ ಶ್ರೇಯವು ।
ವಿಷವದಲ್ಲಾ ಕೀಟಕಕೆ ಪೀ- । ಬಿಡುತಲದ ತಲೆಯಿಂದ ನಡೆಯುಲು ।
ಯುಷದ ಪರಿಯಾಗಿರುವುದದರಲಿ ಹುಟ್ಟಿ ಬೆಳೆಯುವ್ರದು ॥ ಪಡೆವನಲ್ಲಾ ಜಗದೊಳುಸಹಾಸವನು ದುಃಖವನು ॥
ವಸುಮತಿಯಲಾ ಬೆಲ್ಲ ಸವಿ ಯಿರೆ । ನಡೆಸಲೀ ಧರ್ಮಾಚರಣವಡಿ- ।
ವಿಷವದಾ ಕೀಟಕಕೆ ನೋಡಲು । ಗಡಿಗೆ ನೋಡು ಸ್ವಧರ್ಮಕರ್ಮದಿ ।
ವಿಷಮವಲ್ಲ ಸ್ವಧರ್ಮ ನೋಡ್ಪೈ ವಾರ್ಥ ಪುನಗೊಟ್ಟು ಪಡೆವನೇ ಬಂಧವವ ಕರ್ಮವೆ ಮೋಕ್ಷಸಾಧನವು ॥ ೫೯೧ ॥
॥ ೫೬೬ ॥

ಎಷ್ಟು ಹೇಳಲಿ ಪಾರ್ಥ ಕರ್ಮವು । ತೊರೆದು ಪರಧರ್ಮವ ಸ್ವಧರ್ಮಾ- ।
ಕ್ಲಿಷ್ಟವಿದ್ದರು ವಿಹಿತವಿರಲದ । ಚರಣ ಮಾಡಲು ನಿಯಮ ಬಂಧನ ।
ಕಷ್ಟ ಸಹಿಸುತ ಮಾಡ ಬೇಕೈ ತ್ರಾಸಕರವೆನದೆ ॥ ವಿರುವ್ರದುಚಿತವು ವಾಲಿಸುವುದಿದು ಯುಕ್ತ ಕೌಂತೇಯ ॥
ದುಷ್ಟತರ ಸಂಸಾರಬಂಧನ । ನರನೆ ನ್ಯಾತ್ಮಜ್ಞಾನದರ್ಜನೆ ।
ಸುಟ್ಟು ಹೋಗುವುದಿದರ ಯೋಗದ- । ಗಿರುತ್ರದೈ ನಿಜಕರ್ಮ ನಾಧನ ।
ಲಿಷ್ಟನಿಹುದೀ ಜಗದಿ ನೋಡು ಸ್ವಧರ್ಮದಾಚರಣ ॥೫೬೭॥ ಒರುವುದಾ ಕರ್ಮಾಚರಣದಲಿ ಪ್ರಥಮ ಸಂಕಟವು ॥ ೫೯೨ ॥

ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್ ।
ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ ॥ ೪೮ ॥

ನರನೆ ಕೇಳ್ ಕರ್ಮಾಚರಣದಲಿ । ಉದರಿಸಿ ನೋಡಿದರೆ ಕೊನೆಯಲಿ ।
ಬರುವ್ರದೈ ಯಾಯಾಸ ಪ್ರಥಮದೊ- । ಹಾದಿಯಲಿ ಸುಖಕರವದಾವ್ರದು ।
ಳಿರುವುದೀ ಸಿದ್ಧಾಂತವದರಿಂ ಸತ್ಯವಾದರಿದು ॥ ಬೋದವಾಗುವ್ರದಲ್ಲವೇ ಬುತ್ತಿಯನೆ ಹೊತ್ತಿರಲು ॥
ಒರಿದೆ ನಿಜಧರ್ಮಾಚರಣವನು । ಆದ ಕಾರಣ ಕಲ್ಲು ಭಾರ ವಿ- ।
ತೊರೆವುದೇನೈ ಕುಶಲತನವೇ । ಪಾದ ತರುಣ್ರದೆನುತ್ತ ಬಿಡುವ್ರದು ।
ಯರಿಯಲಾ ಕಲಿವಾರ್ಥ ದೋಷನಿದಲ್ಲ ನಿಜಧರ್ಮ ॥೫೯೩॥ ಭೇದವೀಪರಿ ನೋಡು ತತ್ತ್ವ ನೋಡಿದಿಯೊ ವಾರ್ಥ ॥೫೯೪॥

ಸರಳ ಹಾದಿಯ ನಡೆವ್ರದಾದರು । ಕುಟ್ಟುವರೆ ಧಾನ್ಯವನು ತೌಡನು ।
ಒರುವುದಲ್ಲೈ ಶ್ರಮವು ಕಾಲಿಗೆ । ಕಷ್ಟವೊ-ದೇತೆರದಲಿರುವುದು ।
ಬರಿದೆ ಜರಿಸುವ್ರದೇಕೆ ಕಾಲ್ನಡೆಯಡ್ಡಹಾದಿಯಲಿ ॥ ಯಿಷ್ಟಿಗಾಗಲಿ ತುಷ್ಟಿಗಾಗಲಿ ಮಾಂಸ ಬೇಯಿಸಲು ॥
ಬರಿದೆ ಕಲ್ಲಿನ ಭಾರವನು ಹೊ- । ಕಷ್ಟ ವೊಂಟೇ ತೆರದಿ ನೋಡ್ಪೈ ।
ತ್ತರು ಕಣಾ ಬುತ್ತಿಯನು ಹೊತ್ತರು । ಗಟ್ಟಿ ಮೊಸರನು ಕಡಿಸ್ರದನ್ಯೈ ।
ಒರುವುದೊಂದೇ ತೆರದಿ ಶ್ರಮವೈ ಕೇಳು ಕಲಿವಾರ್ಥ ॥೫೯೫॥ ಕಷ್ಟವೀರೀತಿ ಕಡಿವುದಲ್ಲಾ ಶ್ರಮದ ಮಾನಡಲಿ ॥ ೫೯೬ ॥

ಎಳ್ಳುಗಾಣದಿ ಹಾಕಿಯಥವಾ ।
ಮುಳ್ಳುಮಣ್ಣನು ಹಾಕಿ ತಿರುಗಿಸ- ।
ಲೊಳ್ಳಿದಾವುದು ಕಷ್ಟವೊಂದೇ ಮಾನವಿರುವುದಲಾ ।।
ಕೊಳ್ಳಿ ಸುಡುತಿರುವಾಗ ಹೋಮಗ- ।
ಳಲ್ಲಿ ಹೊಗೆಯುದು ಹುಟ್ಟುತಿರುವುದು ।
ವೊಳ್ಳಿದಾವ್ದು ಹೋಮಧೂಮವ ಸಹಿಸ ಬೇಕಲ್ಲೈ
।। ೫೯೭ ।।

ತರುಣಿಯನು ಪೋಷಿಸುವುದೊಂದೇ ।
ಪರಿಯು ವೆಚ್ಚದಲೇನು ಭೇದವೆ ।
ಪರಿಣಯಸ್ತ್ರೀಯಾಗಲಧವಾ ಯಿಟ್ಟು ಕೊಂಡಿರಲಿ ।।
ಪರಿಯಿದಿರಲಾ ದೋಷಕಾರಕ ।
ತರುಣಿಯನು ತಾನಿಟ್ಟು ನಿಂದೆಯ ।
ವರಿಸ ಬೇಕೇ ಲಗ್ನ ವಿಧಿಯನು ಮಾಳ್ಪುದುತ್ತಮವು ।।೫೯೮।।

ಶತ್ರುಪಕ್ಷಕೆ ಬೆನ್ನ ತೋರಿಸಿ ।
ಮೃತ್ಯು ತಪ್ಪಿಸಲಾರದಿದ್ದರೆ ।
ಶತ್ರುಗಳ ಹೋರಾಡಿ ಸಾಯಲು ಸ್ವರ್ಗಪ್ರಾಪ್ತಿಯಲಾ ।।
ಮುತ್ತಯಿದೆ ಗಂಡನನು ಬಿಟ್ಟ- ।
ನ್ಯತ್ರ ಹೋದರು ಬಡತ ಬಿಡದಿರೆ ।
ವ್ಯರ್ಥವಲ್ಲಾ ಗಂಡನನು ಬಿಟ್ಟೋಡಿದುದೆ ಪಾಪ । ೫೯೯ ।।

ಮಾಡಿದರೆ ಬೇಕಾದ ಕರ್ಮವ ।
ಕೂಡುತಿಹುದಾಯಾಸ ಕಷ್ಟವು ।
ಆಡ ಬೇಕೈ ಯಾವ ಬಾಯಿಂ ಕಷ್ಟ ನಿಜಧರ್ಮ ।।
ರೂಢಿಯಲಿ ಪೀಯೂಷಪಾನದಿ ।
ಕೂಡುತಿಹುದಮರತ್ವವೆಂದರೆ ।
ಮಾಡ ಬೇಕೈ ಯತ್ನವದನಲ್ಪವನು ಪಡೆಯಲಿಕೆ ।। ೬೦೦ ।।

ವಿಷವನುಪಭೋಗಿಸಲು ತನ್ನಯ ।
ಅಸುವ ನಾಶಿಸಿ ಸ್ವಾತ್ಮಹತ್ಯದ ।
ವಿಷಮ ವಾಪಾರೋಪ ಬರುವುದು ಸೌಖ್ಯ ನಾಶಿಪುದು ।।
ವಸುಮತಿಯಲೀ ತೆರದಲಿರುತಿಹ ।
ವಿಷವ ಕೊಳ್ಳುವರಾರು ಕ್ರಯಕದ- ।
ನುಸುರ ಗೆಡಿಪುದು ಕುಡಿಯಲವ ನಿಜ ಮೂರ್ಖರಾಜನಲಾ
।। ೬೦೧ ।।

ತಾಪ ಕೊಡುತಲಿ ಯಿಂದ್ರಿಯಂಗಳ ।
ರೂಪಗೆಡಿಸುತ ಕ್ಷೀಣ ಮಾಡಲು ।
ವಾಪವಲ್ಲದೆ ವ್ಯರ್ಥವಾಯುರ್ದಾಯದಪವ್ಯಯವು ।।
ಈ ಪರಿಯ ಪಾಪಾಚರಣವನು ।
ಲೋಪ ಮಾಡಿ ಸ್ವಧರ್ಮ ಚರಿಸಲು ।
ಭಾಪು ಭಾಪೆಂಬರು ಕಣಾ ಲೋಕದಲಿ ಕೌತೇಯ ।। ೬೦೨ ।।

ನರನೆ ಕೇಳು ಸ್ವಧರ್ಮನಿಷ್ಠೆಯು ।
ಪರಿಹರಿಪುದೈ ಕರ್ಮಶ್ರಮವನು ।
ಪರಮಪುರುಷಾರ್ಥವನು ಮೋಕ್ಷವ ಕೊಡುವುದೈ ನಿಜದಿ ।।
ಒರಲು ಸಂಕಟಸಮಯವದರಲಿ ।
ಮರೆಯ ಬಾರದು ಸಿದ್ಧ ಮಂತ್ರವ ।
ತೊರೆಯ ಬಾರದು ಯೆಂದಿಗಾದರು ಕೇಳ್ ಸ್ವಧರ್ಮವನು
।। ೬೦೩ ।।

ಕಡಲೊಳಗೆ ಬಿದ್ದವನು ನೌಕೆಯ ।
ಬಿಡಲು ಬಾರದು ಕುಷ್ಠರೋಗದ ।
ಯೆಡರು ಬಂದರೆ ಬಿಡುವರೇ ದಿವ್ಯೌಷಧಿಯ ನಿಜದಿ ।।
ಪೊಡವಿಯಲಿ ಮಾನವ ಸ್ವಧರ್ಮವ ।
ಬಿಡಲು ಬಾರದು ಪಾರ್ಥ ನಿನಗಾಂ ।
ನುಡಿದೆನೀಪರಿ ವಿಸ್ತರದಿ ನಿಜ ಕರ್ಮಧರ್ಮಗಳ ।। ೬೦೪ ।।

ನರನೆ ನಿಜಕರ್ಮಸ್ವರೂಪದ ।
ಪರಮ ಪೂಜೆಯ ಕೊಂಡು ಪರಮೇ- ।
ಶ್ವರನು ಸಂತೋಷವನು ಪಡೆವನು ಪ್ರೇಮಭಾವದಲಿ ।।
ಹರಿಸಿ ರಜತಮಗುಣಗಳೆಲ್ಲವ- ।
ನಿರಿಸುವನು ಸಾತ್ತ್ವಿಕದ ಮಾರ್ಗದಿ ।
ಬರುವುದನುಭವ ವಿಷಪದೆನುತಲಿ ಸ್ವರ್ಗಸಂಸಾರ ।। ೬೦೫ ।।

ನರನೆ ನಾ ವೈರಾಗ್ಯಶಬ್ದದೊ- ।
ಳರುಹಿದೆನು ಸಂಸಿದ್ಧಿ ವೂರ್ವದಿ ।
ನರನು ವೈರಾಗ್ಯಕ್ಕೆ ಬರುವನು ಚರಿಸಿ ನಿಜಕರ್ಮ ।।
ಪರಿಭವಿಸಿ ವೈರಾಗ್ಯಮೂರ್ತಿಯ ।
ಬರಲು ಪೂರ್ಣತ್ವಕ್ಕೆ ತನ್ನರ ।
ದೊರಕಿಸುವನೇನೆಂದು ನಿನಗಾನರುಹುವೆನು ಮುದದಿ ।। ೬೦೬ ।।

ಅಸಕ್ತಬುದ್ಧಿಃ ಸರ್ವತ್ರ ಜಿತಾತ್ಮಾ ವಿಗತಸ್ಪೃಹಃ ।
ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ ।। ೪೯ ।।

ಗಾಳಿ ಬೀಡನ ಬಲೆಯೊಳಗೆ ತಾಂ ।
ಬೀಳುವುದೆ ಕಲಿವಾರ್ಥ ಸಂಸೃತಿ- ।
ಜಾಲದಲಿ ತಾನಿದ್ದು ಸಿಗನ್ಯೆ ದೇಹಿಯಾತೆರದಿ ॥
ತಾಳನ್ಯೆ ಸಂಸಾರಪ್ರೇಮವ ।
ತಾಳುವುದೆ ದೇಂಟನಲಿ ಹಣ್ಣದು ।
ಬೀಳುವುದು ಕೆಳಗೇನ ಹೇಳಲಿ ನೋಡು ಕೌಂತೇಯ
॥ ೬೦೩ ॥
ವಿಷದ ಪಾತ್ರವು ತನ್ನದೇ ಯೆಂ- ।
ದುಸುರುವರು ಯಾರಿಹರು ನೋಡೈ ।
ಕುಶಲತನದಲಿ ಪುತ್ರಮಿತ್ರಕಳತ್ರರೆಲ್ಲವರು ॥
ಮಿಸುಪ ತನ್ನಾಜ್ಞೆಯಲಿ ಸಂವ- ।
ರ್ತಿಸುವರಾದರು ಸ್ವೀಯರೆನುಶಲಿ ।
ಯುಸುರಲಾರನು ದೇಹಿ ನಿಜತತ್ತ್ವವನು ತಿಳಿಯುವನು
॥ ೬೦೪ ॥
ಉರಿವ ಕುದಿವ ಪದಾರ್ಥಸ್ಪರ್ಶದಿ ।
ಕರಕೆ ವ್ಯಥೆಯನ್ನಿತ್ತರಾಕ್ಷಣ ।
ನರನು ಕರವನು ಹಿಂದೆಗೆಯುವನು ಭೀತಿಪೂರ್ವಕದಿ ॥
ಪರಿಯಲೀ ಮಾನವನ ಬುದ್ಧಿಯು ।
ತೊರೆದು ಬಿಡುವುದು ವಿಷಯಸುಖವನು ।
ಮರಳಿ ಸ್ವಾತ್ಮವಿಚಾರದೆಡೆಗೆನೆ ಬಂದು ಕೂಡವುದು
॥ ೬೦೫ ॥
ದಾಸಿ ಸ್ವಾಮಿಯ ಭೀತಿಯಿಂದಲೆ ।
ತೋಷದಿಂದಾಜ್ಞೆಯನು ಪಾಲಿಸ- ।
ಳೀಸುಪರಿಯಲಿ ಬುದ್ಧಿ ಮುರಿಯದು ಸ್ವಾತ್ಮನಾಜ್ಞೆಯನು ।
ಮಿಸಲಾರದು ಬುದ್ಧಿ ವಿಷಯಪ್ರ- ।
ವೇಶ ಮಾಡದು ಸುಖವ ಕೇಳೈ ।
ವಾಸವಾತ್ಮಜ ಐಕ್ಯಪಿಡಿಯಲಿ ಚಿತ್ತ ಸಿಲುಕುವೆದು
॥ ೬೦ ॥
ಬರುವುದಾತ್ಮನ ಛಂದವವನಿಗೆ ।
ಬೆರೆಸಿದರೆ ಬೆಂಕಿಯನು ಬೂದಿಯೊ- ।
ಳಿರುವುದೇ ಹೊಗೆ ಯಿಹಪರೇಚ್ಛೆಯು ಸಹಜ ಸಾಯುವುದು ॥
ಧರಿಸೆ ಮನದಾ ನಿಗ್ರಹವ ಕೇಳ್ ।
ಮರಣ ಬರುತಿಹುದಾಶೆಗಾಕ್ಷಣ ।
ಬರುವುದೀಪರಿ ಭೂಮಿಕೆಯು ಸಾಧಕನಿಗತಿ ಜವದಿ
॥ ೬೧೧ ॥
ಸತ್ಯಬೋಧವು ಸಂಜನಿಸುವುದು ।
ಮಿಥ್ಯ ಬೋಧವು ಸತ್ತು ಹೋಗುವು- ।
ದುತ್ತಮೋತ್ತಮ ಪರಿಯಲಾಗುವುದವಗೆ ಸನ್ಮುಕ್ತಿ ॥

ನಿತ್ಯದುಪಯೋಗದಲಿ ಬಾನಿಯು ।
ಬತ್ತಿ ನೀರಾರುವುದು ನೋಡೈ ।
ಪಾರ್ಥ ಸ್ವಾರ್ಚಿತಕರ್ಮ ತೀರ್ವುದೆಲ್ಲ ಭೋಗದಲಿ ॥ ೬೧೨ ॥

ನಾನು ಮಾಡುವೆನೆಂಬ ಭಾವನಿ- ।
ಹೀನನಾಗಲು ಕರ್ಮಗತಿಯು ಸ- ।
ವೀನವಾಗದು ಚೋದ್ಯ ನೋಡೈ ಪಾರ್ಥ ತೀಸಿದನು ॥
ಕ್ಷೀಣವಾಗಲು ಕರ್ಮವೀಪರಿ ।
ತಾನೆ ಶ್ರೀಗುರು ಬಂದು ದರ್ಶನ ।
ಸಾನುರಾಗದೊಳೀವನೈ ಭಕ್ತನಿಗೆ ಕಲಿಪಾರ್ಥ ॥ ೬೧೩ ॥

ರಾತ್ರಿಯಾಮಚತುಷ್ಟಯವು ಸಂ- ।
ಪೂರ್ತಿಯಾಗಲು ಸೂರ್ಯನುದಯದಿ ।
ಕತ್ತಲೆಯು ಸಾಮ್ರಾಜ್ಯ ತೀರುವುದಲ್ಲವೇ ಪಾರ್ಥ ॥
ಪ್ರಾಪ್ತವಾಗಲು ಪೂರ್ಣಿಮೆಯ ದಿನ ।
ಕಿತ್ತು ಕ್ಷಯವನು ಪೂರ್ಣನಾಗುವ- ।
ನೆತ್ತ ಹೋಗುವುದೇನೊ ಆದಿನ ಶಶಿಯ ಕ್ಷೀಣತೆಯು ॥ ೬೧೪ ॥

ಗಡವ ಹಾಕಲು ಪಾರ್ಥ ಬಾಳೆಯ ।
ಗಡವು ಬೆಳೆವುದೆ ಕುಂಠಿಸುವುದೈ ।
ಪೊಡವಿಯಲಿ ಗುರುದರ್ಶನದಿ ಪರಿಕಿಸಲಿಕಾತೆರದಿ ॥
ಕಡಿದು ಬಿಡುವನು ಕರ್ಮಕರ್ತರ ।
ಸಡಗರದ ಮಿಥ್ಯಾಭಿಮಾನವ ।
ಪಡವನ್ಯೆ ಮೋಕ್ಷೇಚ್ಛು ಮೋಕ್ಷವ ಸುಲಭತರವಾಗಿ ॥ ೬೧೫ ॥

ಗುರುಕೃಪಾಂಜನ ಸುರಿಯೆ ಕಣ್ಣಲಿ ।
ಬರುವುದೈ ಸಕಲಾರ್ಥಲಾಭವು ।
ಮರಳಿ ಕೇಳಜ್ಞಾನವೆಂಬುದು ನಾಶವಾಗುವುದು ॥
ಗುರುಕೃಪಾದಿನಕರನುದಯದಲಿ ।
ಹರಿವುದೈಯಜ್ಞಾನತಿಮಿರವು ।
ಹರಣವಹುದೈ ಕರ್ಮಕರ್ತನು ಕಾರ್ಯ ತ್ರಿಪುಟಿಯಿದು ॥೬೧೬॥

ಮರಣ ಬಂದರೆ ಗರ್ಭಿಣಿಗೆ ಶಿಶು ।
ಮರಣ ತಾನೇ ತಾಳ್ವುದೈ ನಿಜ ।
ಮರಣ ಬರಲಜ್ಞಾನಕಾಕ್ಷಣ ಕರ್ಮ ಸಾಯುವುದು ॥
ಸರನೆ ನೋಡೈ ಸರ್ವಕರ್ಮದ ।
ಹರಣವಾಗಲು ಮೂಲಸಹಿತವೆ ।
ಕರೆವರಿದ ಸಂನ್ಯಾಸನೆನುತಲಿ ಕೋವಿದರು ಜಗದಿ ॥ ೬೧೭ ॥

ಬರಲು ನೋಡಜ್ಞಾನತತ್ತ್ವಕೆ ।
ಮರಣ ದೃಶ್ಯಪದಾರ್ಥವೆಲ್ಲಕೆ ।
ಹರಣ ಬರುವುದು ತಾನೆ ದೃಶ್ಯಪದಾರ್ಥಕೆನ್ನುವರು ॥
ನರನು ನಿದ್ದೆಯಿನೆದ್ದ ಕೂಡಲೆ ।
ಯರಿವನೇ ನಿಜವೆಂದು ಸ್ವಪ್ನವ ।
ಬರಲು ಮೇಲಕೆ ಯಷ್ಟಿಪನೆ ಮುಳುಗಿರಲು ಸ್ವಪ್ನದಲಿ
॥ ೬೫೪ ॥

ತಿಳಿಯದೆನಗಿದು ಮಾಡಿಕೊಳ್ಳುವೆ ।
ತಿಳುವಳಿಕೆಯಸ್ಪೆಂಬ ಸ್ವಪ್ನದ ।
ತಿಳುವಳಿಕೆ ಹೋಗುವುದು ಜ್ಞಾತೃಜ್ಞೇಯವೀಭೇದ ॥
ಅಳಿದು ಜ್ಞಾನವೆಯುಳಿವ್ರದಲ್ಲವೆ ।
ತಿಳಿಯಲದು ಚಿದ್ಗಗನ ವಾರ್ಥನೆ ।
ಯಿಳೆಯೊಳಿದಕೆ ಯುದಾಹರಣೆ ನಾ ನಿನಗೆ ಪೇಳುವೆನು
॥ ೬೫೯ ॥

ನೋಡುವವನೇ ಬಿಂಬ ಜ್ಞಾತನು ।
ನೋಡುತಿಹ ಪ್ರತಿಬಿಂಬ ಕನ್ನಡಿ ।
ದೂಡಲದ ದೂರಕ್ಕೆ ಹೋಪುವು ಬಿಂಬ ಪ್ರತಿಬಿಂಬ ॥
ರೂಢಿಯಲ್ಲಜ್ಞಾನದೊಡನೆಯೆ ।
ಕೂಡಿ ಹೋಪುದು ಜ್ಞಾನ ನಂತರ ।
ನೋಡಲೊಂದೇ ಜ್ಞಾನ ನಿಷ್ಕ್ರಿಯವಾಗಿ ರಂಜಿಪುದು ॥೬೬೦॥

ನರನೆ ಭೂಮಿಕೆ ಯಿದುವೆ ನಿಷ್ಕ್ರಿಯೆ ।
ಯಿರದಿದರಲಾ ಕರ್ಮವೆಂದಿಗು ।
ಕರೆವರಿದ ನೈಷ್ಕರ್ಮ್ಯ ಸಿದ್ಧಿ ಯೆನುತ್ತ ಮಾನವರು ॥
ಇರಲು ವಾಯುವೆ ಶಾಂತ ನಂತರ ।
ತೆರೆಗಳೇಳ್ವುವೆ ವಾರಿನಿಧಿಯಲಿ ।
ಪರಿಕಿಸಲು ನೈಷ್ಕರ್ಮ್ಯಸಿದ್ಧಿಯೆ ಜಗದಿ ಶ್ರೇಷ್ಠವಲಾ ॥ ೬೬೧ ॥

ಕಲಶವೇರಿಸಿತೆಂದರಾಯಿತು ।
ಕೆಲಸ ದೇವಾಲಯದ ಕಟ್ಟಡ ।
ವುಳಿವುದೇ ಮುಂದೇನು ಕಲಶವೆ ಕೊನೆಯ ಕೆಲಸವಲಾ ॥
ಜಲಧಿಯನು ಸೇರಲ್ಕೆ ಗಂಗೆಯು ।
ವುಳಿವುದೇ ಹೆಸರಾದರಾಕೆಯ ।
ತೊಳೆವದೇ ಭಂಗಾರ ಶುದ್ಧವನಾರು ಕಲಿಪಾರ್ಥ ॥ ೬೬೨ ॥

ನರನೆ ನೋಡಜ್ಞಾನವೀಪರಿ ।
ಹರಣವಾಗಲು ಮುಂದೆ ಜ್ಞಾನವು ।
ಹರಣವಾಗುವುದೇನಿದಚ್ಚರಿ ದ್ವೈತಲೋಪವದು ॥
ಬರಲು ನರನಿಂಗೀಸ್ಥಿತಿಯು ಮುಂ ।
ದಿರುವುದೇನವನಿಂಗೆ ಪ್ರಾಪ್ಯವು ।
ಪರಮಸಿದ್ಧಿಯಿದೆಂದು ಪೇಳ್ವರು ತತ್ತ್ವಕೋವಿದರು ॥ ೬೬೩ ॥

ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ ತಥಾಪ್ನೋತಿ ನಿಬೋಧ ಮೇ ।
ಸಮಾಸೇನೈವ ಕೌಂತೇಯ ನಿಷ್ಠಾ ಜ್ಞಾನಸ್ಯ ಯಾ ಪರಾ ॥ ೫೦ ॥

ನರನೆ ನೋಡೈ ಭಾಗ್ಯವಂತಗೆ ।
ಗುರುಕೃಪೆಯು ಸಂಪ್ರಾಪ್ತವಾಗಲು ।
ಒರುವುದಾತ್ಮಜ್ಞಾನಸಿದ್ಧಿಯು ವೇಳೆಗಳೆಯದಲೆ ॥
ತರಣಿಯುದಯಾಚಲಕೆ ಬಂದರೆ ।
ಯಿರುವ ಕತ್ತಲೆಯೇ ಪ್ರಕಾಶವು ।
ಪೆರೆವುದಲ್ಲೈ ಕರ್ಪುರವೆ ತಾಂ ಜ್ಯೋತಿಯಾಗುವುದು ೬೬೪

ಜಲದೊಳುಪ್ಪಿನ ಹರಳ ಹಾಕಲು ।
ಜಲದೊಳದು ಕರಗುವ್ರದು ಲವಣವೆ ।
ಬಲದ ರೂಪಾಗುವುದು ನೀ ನೋಡಿದಿಯೊ ಕೌಂತೇಯ ॥
ಮಲಗಿರುವ ಮಾನವನು ನಿದ್ರಾ ।
ಲೀಲೆಯಿನು ಸಂತ್ಯಜಿಸಿ ಜಾಗೃತಿ ।
ಯಲಿ ಬರಲು ಮುಗಿಯುವ್ರದು ಸ್ವಪ್ನಾವಸ್ಥೆ ನಿಮಿಷದಲಿ॥೬೬೫॥

ಗುರುವಚನಪೀಯೂಷ ಕರ್ಣದಿ ।
ಸುರಿಯೆ ಭಾಗ್ಯವದೇನ ಹೇಳಲಿ ।
ತೊರೆದು ಭೇದಾಭೇದಭಾವವ ಮತಿಯು ಸ್ಥಿರವೆನಿಸಿ ॥
ಬರುವುದಾತ್ಮಜ್ಞಾನವಾಕ್ಷಣ ।
ವಿರುವುದೇನವನಿಂಗೆ ಕಾರ್ಯವು ।
ಸರಿಯಿತವನಿಗೆ ಕರ್ಮಧರ್ಮಾಚರಣವೀ ಜಗದಿ ॥ ೬೬೬ ॥

ಎಲ್ಲಿ ನೋಡಿದಡಲ್ಲಿ ಭರಿತವಿ ।
ದಲ್ಲವೇ ಯಾಕಾಶವದಕೆ ।
ನೆಲ್ಲಿ ಹೋಗಲು ಬೇಕೆ ಯಾತ್ರೆಗೆ ಕಾಲುನಡೆಯಿಂದ ॥
ಎಲ್ಲಿಹುದು ನೋಡಾತ್ಮಸಿದ್ಧಿಯು ।
ಯಿಲ್ಲವೈ ಕರ್ತವ್ಯವವನಿಗೆ ।
ಸಂಲಲಿತ ಗುರುವಾಕ್ಯಯೋಗದಿ ಸರ್ವಸಿದ್ಧಿಯದು ॥ ೬೬೭ ॥

ಬರಲು ನೋಡದಧಿಕಾರಿಪರಿ ।
ಪುರುಷ ಪಡೆವನು ಸ್ವಾತ್ಮಸಿದ್ಧಿಯ ।
ನಿರುವನೀಪರಿ ಪಿರಿಳ ಕೇಳಧಿಕಾರಿ ಪುರುಷನಿವ ।
ಪೊರೆದು ನೋಡೀ ತೆರದ ಸಿದ್ಧರ ।
ನರನೆ ನೋಡ್ಪೆ ಯನ್ಯಪರಿಯಿಹ ।
ನರರು ಕೇಳ್ಮಂದಾಧಿಕಾರಿಗಳೇನ ಹೇಳುವೆನು । ೬೨೮ ॥

ತನಗೆ ಬಂದೊದಗಿರುವ ಕರ್ಮವೆ ।
ಪಿನುಗ ತಿಹ ವೈಶ್ವಾನರನು ರಿಂ ।
ಧನವೆ ಕಾಮ ನಿಪಿದ್ಧಕರ್ಮಗಳೆನುತ ನೆನಸುತಲಿ ॥
ವಿನಯದಿಂ ರಜತಮಗಳೆಂಬುವ ।
ಗುಣಗಳೇದನು ಸುಟ್ಟನಂತರ ।
ತನಯವಿತ್ತಸ್ವರ್ಗವೆಂದೇ ಕಾಮ್ಯ ಫಲನಿದರೂ ॥ ೬೨೯ ॥

ಛಿನ್ನಭಿನ್ನ ನಿಪಿದ್ಧ ನಿಷಂಗ ।
ಳನ್ನು ಸೇರಿಸುತೆಂದ್ರಿಯಂಗಳು ।
ಒನ್ನಒಟ್ಟರು ಪಾಪರಾಶಿಯ ಮೇಲೆ ಮಲಗಿರಲು ॥
ಮುನ್ನ ನೋಡಪ್ಪಾಂಗ ರೋಗದ ।
ಪುಣ್ಯಪಾವನ ತೀರ್ಥ ಪಿಯುತ ।
ತನ್ನ ಧರ್ಮಾಚರಣಫಲವನು ಕೃಷ್ಣಗರ್ಪಿಸುತ ೬೩೦ ॥

ಹರಿಯ ದಿವ್ಯಪ್ರಸಾದದಿಂದಲೆ ।
ದೊರಕಿಸಲು ವೈರಾಗ್ಯ ಶಾಶ್ವತ ।
ಬರುವುದಾತ್ಮಜ್ಞಾನಸಾಧನ ಯೋಗಬಲದಿಂದ ॥
ದೊರೆಯಲಾ ಸದ್ಗುರುಪ್ರಸಾದವು ।
ಒರಲಿ ಸಮ್ಯಗ್ಜ್ಞಾನಬೋಧವು ।
ನರನೆ ನೋಡೀ ಭಾಗ್ಯವಂತನ ಯೋಗವೇನೆಂಬೆ ॥ ೬೩೧ ॥

ಸುರಿಯಲೌಷಧ ಜಾಂಳಿಗೆ ಮೇ- ।
ಣರೆಗಳಿಗೆಯಲಿ ರೋಗ ಕೋವುದೆ ।
ಬರುವುದೇ ಕ್ಷಣದಲರೋಗಿತೆ ಪೂರ್ವಪ್ರಕೃತಿಯುಳಿ ॥
ತರಣಿಯುದಯಾಚಲದಲೇರಲು ।
ಒರುವುದೇ ಮಧ್ಯಾಹ್ನವಾಕ್ಷಣ- ।
ವರಿಯಲಾ ಕಲಿಪಾರ್ಥ ಕಾಲಕ್ರಮಣ ಬೇಕದಕೆ ॥೬೩೨ ।

ನೆಲವು ಫಲವತ್ತರವು ಪಾರ್ಥನೆ ।
ಮಳೆಯು ಸಹ ಬೇಳೆಯುಳಿ ಬೀಳಲು ।
ಒಳಿಕ ಬೀಜವ ಬಿತ್ತಿ ಸರ್ವೋತ್ಕೃಷ್ಟ ಕೃಷಿ ಮಾಡೆ ॥

ಗಳಿಗೆಯೊಂದರೆಗಳಿಗೆಯೊಳಗಾ ।
ಬೆಳೆಯು ಬರುವುದೆ ಪಾರ್ಥ ನೋಡ್ದೆ ।
ತಿಳಿಯೆ ಕಾಲಕ್ರಮಣ ಬೇಕದಕಲ್ಲನೇ ಪಾರ್ಥ ॥ ೬೩೩ ॥

ದಾರಿಯುತ್ತಮವಿರ್ದಾದರು ।
ಚಾರು ಸತ್ಸಂಗತಿಯು ಲಾಭವು ।
ಸೇರಿದರು ಕಾಲ್ಪಲಿಯ ಮಾಡದೆ ಯೂರ ಸೇರುವೆ ॥
ಚಾರುತರವೈರಾಗ್ಯವಾದರು ।
ಸೇರಿದರು ಸದ್ಗುರುಪ್ರಸಾದವು ।
ಚಾರುವಾತ್ಮಜ್ಞಾನಸಿದ್ಧಿಯು ಸಿಕ್ಕಿದರು ಬಾಕಿ ॥ ೬೩೪ ॥

ಮರಳಿ ಸದ್ಗುರುಬೋಧದಿಂದಲೆ ।
ಪೊರವೊದೊಂದೇ ಬ್ರಹ್ಮ ಸತ್ಯವು ।
ಹೊರತು ನನಗೆ ನ್ಯಸಂಗತೆ ಪಿಥ್ಯಾಭ್ರಮನ ಭ್ರಾಂತಿಮಯ ॥
ಸಿರುತಕೋಪರಿ ಕೇಳ್ ಕೇಳೆಂಪಿ ।
ಒರೆ ಮನೋನಿರ್ಧಾರಪರಿ ।
ಕರಗಿ ಹೋಗುವುದಲ್ಲಿ ಮೋಕ್ಷನಿದೆಂಬ ಶಬ್ದ ನಿಜ ॥ ೬೩೫ ॥

ಇರುವುದಾ ಪರಬ್ರಹ್ಮರೂಪವು ।
ಧರೆಯೊಳಗೆ ಸರ್ವೋತ್ತಮವು ಕೇಳ್ ।
ಕರಗುವುಪ್ಪ ಮೋಣಲ್ಲಿ ಸಾಧಕಸಾಧ್ಯಸಾಧನವು ॥
ಮರೆವುತೈಕ್ಯನೆ ಯೋಕತನವನು ।
ಬರುವುದೆಂತಾನಂದಸುಖಲವ ।
ನರನೆ ಕೇಳುಳಿಸದಲೆ ಯುಳಿಯುಮುನ್ನವೆಲ್ಲನೀಸ್ಥಳದಿ ॥ ೬೩೬ ॥

ಇರುವ್ವರೀ ಬ್ರಹ್ಮಸ್ವರೂಪವು ।
ಅರಿಯಲಿರದು ದುರಿತಾಧ್ಯ ನಿರಿಣದಿ ।
ಒರಲು ಬೇಕೈ ಜ್ಞಾನ ಕಾಲಕ್ರಮಣಮಾಶ್ರಯಲೆ ।
ಇರಲು ಕ್ಷೇಧಿಕನು ಮುಂದೆ ಷಡ್ರಸ- ।
ಭರಿತಭೋಜನ ಒಡಿಸಲೆಯುಳಿ ।
ಒರುತ್ತದೇ ಸಂತೃಪ್ತ ಕಿಣ್ವಂ ನೋಡಿದಾಕ್ಷಣವಿ ॥ ೬೩೭ ॥

ಅತ್ತ ನೋಡ್ಪೆ ಪಾರ್ಥ ಭೋಜ್ಯದ ।
ತುತ್ತುತುತ್ತನು ನುಂಗಿದರೆ ಸಂ- ।
ತೃಪ್ತಿಯಾಗುವುದಲ್ಲವೇ ಮೇಣ್ ತುತ್ತುತುತ್ತಿನಲಿ ॥
ತೃಪ್ತಿಯಾಯಮದೈ ಪೂರ್ಣವಂತದ ।
ತುತ್ತ ನುಂಗಲು ಕೇಗಿ ಪರಸುವ ।
ತತ್ತ್ವ ತಿಳಿಯೈ ಪಾರ್ಥ ನಿನಗಾಂ ವಿಸ್ತರಿಸಿ ಪೇಳ್ದೆ ॥ ೬೩೮ ॥

ನರನಿಗಹುದು ವಿವೇಕದೀಪದ ।
ಪರಮ ಜ್ಯೋತಿಪ್ರಕಾಶವದರಿಂ ।
ಭರದಿ ಕೇಳ್ ವೈರಾಗ್ಯದಾಶ್ರಯದಿಂದ ಸಾಧಕನು ॥

ದೊರಕಿಸುವನೈ ಸ್ವಾತ್ಮಸಿದ್ಧಿಯ ।
ಬರಲು ಯೋಗ್ಯತೆ ಸಿದ್ಧಪದವಿಯು ।
ನರನೆ ನಾನರುಹುವೆನು ಬ್ರಹ್ಮಪ್ರಾಪ್ತಿಯೆಂತಹುದು ॥ ೬೫೯ ॥

ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ ।
ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ॥ ೫೧ ॥

ತೋರಿಸುವನೈ ಸದ್ಗುರುವು ನಿಜ- ।
ದಾರಿಯನ್ನು ವಿವೇಕತೀರ್ಥಕೆ ।
ಸೇರುತದನಾ ಬುದ್ಧಿಮಲಿನತೆಯನ್ನು ತೊಳೆಯುವನು ॥
ಚಾರುಚಂದ್ರನ ಪಿಡಲು ರಾಹುವ ।
ಸೇರುವುದು ಪರಿಶುದ್ಧ ಪ್ರಭೆಯದು- ।
ವಾರಜನಿನಾಥಂಗೆ ಯೊಪ್ಪುವುದದುವೆ ದ್ವಿಗುಣದಲಿ ॥೬೪೦॥

ತರಣಿಕಿರಣವು ಹರಣವಾಗಲು ।
ಮೆರೆವುದೇ ಮೇಣಲ್ಲಿ ವೃಗಜಲ ।
ಭವದಲಿಂದ್ರಿಯನೃತ್ತಿಗಳ ನಿಗ್ರಹಿಸೆ ಮನದೊಳಗೆ ॥
ಒರುವುದೆಲ್ಲಿಂ ವಿಷಯದಾಟವ ।
ಅರಿಯದಲೆ ಭೃಷ್ಟಾನ್ನ ತಿನ್ನಲು ।
ಧರಣಿಯಲಿ ಪರಿಹಾರ ವಾಂತಿಯ ಮಾಡುವುದೆ ನಿಜದಿ ॥ ೬೪೪ ॥

ಪರಿಪರಿಯ ದುರ್ವಾಸನಾತ್ಮಕ- ।
ನಿರುವ ರಾಹುವು ಬುದ್ಧಿಚಂದ್ರನು ।
ತೊರೆಯಲಾವಾಸನೆಗಳನು ಬೆಳಗುವುದು ಬುದ್ಧಿಯದು ॥
ಮೆರೆವುದದು ಒಹು ಶುದ್ಧವಾಗಿಯೆ ।
ಒರುವುದದಕಾ ಮೂಲರೂಪವ ।
ನರನೆ ಸದ್ಗುರುರೂಪದಿಂದಲೆ ಬರುವುದುದ್ಧಾರ ॥ ೬೪೫ ॥

ವಾಸನೆಯ ಸಹ ವಿಷಯಗಳನಾ- ।
ಯಾಸವಿಲ್ಲದೆ ಯಿಂದ್ರಿಯಂಗಳು ।
ಹೇಸಿ ಹೊರ ಹಾಕುವುವ ವಮನವದೆಂಬ ಭಾವದಲಿ ॥
ಲೇಸಿನಿಂದವುಗಳನು ಸ್ವಾತ್ಮಾ- ।
ಭ್ಯಾಸದಲಿ ಬಂಧನೆಯು ಮಾಳ್ಪನು ।
ಲೇಸು ಪ್ರಾಯಶ್ಚಿತ್ತ ಕೂತು ಸ್ವಾತ್ಮಗಂಗೆಯುಲಿ ॥ ೬೪೫ ॥

ತರುಣಿ ನೋಡು ಪತಿವ್ರತೆಯು ತಾ- ।
ನೆರಡು ಕುಲದಭಿಮಾನವನು ಬಿದಿ- ।
ಗಿರಿಸುತಲಿ ಪ್ರಿಯಪತಿಯ ಮಾತ್ರವೆ ಯೊಲಿಸುವಳು ಭರದಿ ॥
ಪರಿಯೊಳೀ ಮಾನವನ ಬುದ್ಧಿಯು ।
ಮರೆತು ದ್ವೈತವನಾತ್ಮಪತಿಯೊಳು ।
ಸರಸದಿಂ ತತ್ಪರತೆ ಪಡೆವಳು ಸತಿಯು ತೆರನಾಗಿ । ೬೪೨ ॥

ನರನೆ ನಾತ್ತ್ವಿಕ ಧೈರ್ಯದಿಂದಲೆ ।
ನರನು ಶುದ್ಧೀಕರಿಸುತಿಂದ್ರಿಯ ।
ತರಿಗಿ ಯೋಗಾಭ್ಯಾಸ ಮಾಡಿಸಲಿಕ್ಕೆ ಮನ ಹಚ್ಚಿ ॥
ಬರಲು ಭೋಗ ಶುಭಾಶುಭಂಗಳ- ।
ನರಿಯದಲೆ ಸುಖದುಃಖವೆರಡನು ।
ತರಿತರಿಗಿ ತಾನೇಕಭಾವದಲಿಹನು ಸಾಧಕನು ॥ ೬೪೬ ॥

ಜ್ಞಾನದಂತಿಹ ಪ್ರೇಯ ವಸ್ತುವ- ।
ನೇನ ಹೇಳಲಿ ಹೊರಗೆ ವಿಷಯ- ।
ಶ್ರೇಣಿಯೊಡಗೂಡಿಸುತ ಶಬ್ದಾದಿಗಳ ಗೌರವವ ॥
ತಾನೆ ವರ್ಧಿಸುತಿಂದ್ರಿಯಂಗಳು ।
ಕೇಣವಿಲ್ಲದೆ ಮಾಳ್ಪವಾಟವ ।
ನೀನೆ ನೋಡ್ದೈ ತತ್ತ್ವ ಹೇಳ್ವೆನು ಪಾರ್ಥ ಮೋದದಲಿ ॥೬೪೩॥

ದುಷ್ಟ ಭೋಗವು ಒರಲು ಪಾಲಿಗೆ ।
ಕಷ್ಟ ಪದುತಲೆ ಕುಗ್ಗುಚಾರದು ।
ಯಿಷ್ಟ ಭೋಗವು ಒರಲು ಮನದಲಿ ಹಿಗ್ಗುಚಾರದಲಾ ॥
ಇಷ್ಟವಥವಾನಿಷ್ಟವಾಗಲಿ ।
ತೊಟ್ಟು ಸಮತೆಯನೇಕಭಾವದಿ ।
ತುಷ್ಟತನದಿಂ ವಾಸಿಸುವನೈ ಗಿರಿವನಾಂತರದಿ ॥ ೬೪೭ ॥

ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥ ೫೨ ॥

ಮಾನವರ ಸಂತ್ಯಾಸಹೀನ- । ತೊರೆದು ನಿದ್ರಾಲಸ್ಯನೆರಡನು ।
ಸ್ಥಾನವಿಹುದವನಿಂಗೆ ವಾಸ- । ತೊರೆಯುನೈ ತನ್ನಾಸನವನವ ।
ಸ್ಥಾನ ತನ್ನವಯವಗಳೆಲ್ಲ ಕುಟುಂಬಿಕರು ತಿಳಿಯೆ ॥ ನಿರುತ ಸಜ್ಜನರಿಂಗೆ ದಂಡಾಕಾರ ವಂದಿಸುತ ॥
ಕ್ಷೋಣಿಯಲ್ಲಿಂದ್ರಿಯಮನಂಗಳ । ಒರಲು ಕಾರಣ ಭೂಮಿಯಲಿ ಜೀ- ।
ಶ್ರೇಣಿ ನಿಗ್ರಹಿಸುವುದೆ ಕ್ರೀಡೆಯು । ಳ್ವರೆ ಕಣಾ ಹಿಂಜರೆಯನಾತನು ।
ಮೌನವೇ ಪಾಂಡಿತ್ಯ ಗುರುಸದ್ಭಕ್ತಿಯುದ್ಯೋಗ ॥ ೬೪೮ ॥ ಬರಿದೆ ನಿದ್ರಾಲಸ್ಯದಲಿ ಭೂಮಿಯಲಿ ಮಲಗಿರನು ॥ ೬೫೨ ॥

ಗುರುತ್ವ ಬೋಧಿಸಿ ಕೊಟ್ಟ ತತ್ತ್ವ- । ತನಗೆ ನಿರ್ವಾಹಕ್ಕೆ ಜೀಕಾ- ।
ಚರಣವಲ್ಲದೆ ಬೇರೆ ಚಿಂತನ- । ದನಿತು ಮಾತ್ರವೆ ಕಾಲುಕೈಗಳ- ।
ವರಿಯನವನು ವಿರಿಕ್ತಸೇವಿಯು ಯೆಂಬರೀತನನು ॥ ನನುವರಿಸುವನು ಚೈನಿಗೋಸುಗ ಜೀವಿಸನು ಜಗದಿ ॥
ಒರಲು ಜೀಕಂಗದಲಿ ಶಕ್ತಿಗಳು । ಅನವರತ ಸರ್ವೇಂದ್ರಿಯಂಗಳು ।
ಹರಿಯು ಜೀಕ್ಕೈ ಕ್ಷುಧೆಯು ತನ್ನದು । ತನಗೆನೇ ವಶದಲ್ಲಿ ಯಿಹುನೆಂ- ।
ಸುರುಚಿರದ ನಾಲಿಗೆಯು ತಿನ ಜೀಕೆಲ್ಲರಸಗಳನು ॥೬೪೯॥ ದೆನುತ ಹಿಗ್ಗುನನವನು ನೋಡ್ಯೆ ಪಾರ್ಥ- ನೀನಿದನು ॥ ೬೫೩ ॥

ಮೂರುವಿಧವೀಪರಿಯಲಾಟೆಯು । ಬಿಡನು ವೃತ್ತಿಯು ಹೊರಗೆ ಮನದಿಂ- ।
ತೋರನಿದರಲ್ಲಾಶೆಮಾತ್ರವ । ದಿದುವನು ಮನೋದ್ಗಾರವಂಟದಿ ।
ತೋರುವುದು ಭೋಜನಕೆ ಮಾನವು ಹರುಷ ಜೀರಿಲ್ಲ ॥ ನುಡಿನಡೆಯು ಸ್ವಚ್ಛಂದವೆಲ್ಲಿಂ ಬಹುದು ಮನಸೊಳಗೆ ॥
ಚಾರುಜಠರಾಗ್ನಿಪ್ರದೀಪ್ತಿ ಶ- । ನುಡಿನೀಗಲೆ ಧ್ಯಾನಪರಿಯನು ।
ರೀರದಲಿ ಜೀಕೆಂದು ತಾನಾ- । ಹಿಡಿದು ಧೀವಾಕ್ಯಾಯ ತ್ರಿಪುರಮ- ।
ಹಾರವನು ಗ್ರಹಿಸುವನು ಜೀವದ ರಕ್ಷಣಕ್ಕಾಗಿ ॥ ೬೫೦ ॥ ನೊಡನೆ ಧ್ಯಾನಾಕಾಶವನು ಸ್ವಾಧೀನ ಮಾಡಿಹನು ॥ ೬೫೪ ॥

ಇರುವನೈ ಲಘ್ವಾಶಿಯಾತನು । ಕನ್ನಡಿಯು ಕೈಯೊಳಗೆ ಕೊಂಡರೆ ।
ನರನೆ ಯತ್ತವಾಕ್ಯಾಯಮಾನಸ- । ತನ್ನ ನೋಲೆಯೆ ಸ್ವಸ್ಥ ಕಾಣಿಪು- ।
ನಿರುವನವನೆಂತೆಂದು ಜೀಳುವೆ ವಿಸ್ತರಿಸಿ ನಿನಗೆ ॥ ದಿನ್ನ ನೋಡೀ ಪರಿಯ ಸದ್ಗುರುಬೋಧ ಕನ್ನಡಿಯು ॥
ಪರಪುರುಷರಿಚ್ಛಿಸುವರಾದರು । ತನ್ನ ಮುಂದಿರಿಸುತ್ತ ಕನ್ನಡಿ- ।
ತರುಣಿ ನೋಡುವ ಪತಿವ್ರತೆಯು ತ- । ಯನ್ನು ನೋಡಿದ ತೆರದಿ ನೋಡುವ- ।
ತ್ಪರಳು ನಿಜಪತಿಯಲ್ಲಿ ಕಣ್ಣಿಂ ನೋಡಳನ್ಯರನು ॥ ೬೫೧ ॥ ನನ್ಯವೃತ್ತಿಯನರಿಯನೈ ಕೌಂತೇಯ ನೋಡಿದಿಯಾ ॥ ೬೫೫ ॥

ಧ್ಯಾನಧ್ಯಾತೃಧ್ಯೇಯ ತ್ರಿಪುಟಿಯು ।
ಹಾನಿಯಾಗುವುದೂಂದೆ ರೂಪವು ।
ತಾನೆ ಒರುವನಕವೆ ಸದಾ ಮಾಡುವನು ಧ್ಯಾನವನು ॥

ನಾನು ಜೀಳುವೆ ಯೋಗ ಪರವನು । ಕೇಳು ಪಾರ್ಥನೆ ವಾಯುಬಂಧಗ- ।
ಮಾನಿಸುವನು ಮುಮುಕ್ಷುವಾತ್ಮ- । ಜೀಳುವುವು ದೇಹದಲಿ ಮೂರಿವು ।
ಜ್ಞಾನನಿಷ್ಠಯದಿ ದಕ್ಷತೆಯು ತೋರಿಪನು ಕೌಂತೇಯ ॥ ಮೂಲಬಂಧವು ಬಂಧಜಾಲಂಧರವು ವೊಡಿಯಾಣ ॥
ತಾನೆ ಯೋಗಾಭ್ಯಾಸ ಮಾಡುತ । ಕೀಳುತಲಿ ತದ್ವಾಯು ಭೇದವ ।
ಕ್ಷೋಣಿಯಲಿ ಗುದಶಿಶ್ನನೆರಡೀ- । ಮಾಳ್ಪನೊಂದೇ ಭೇಡವದರಲಿ ।
ಸ್ಥಾನಮಧ್ಯದಿ ಕಾಲನೊತ್ತಲು ಮೂಲಬಂಧನದು ।'೬೫೨॥ ತಾಳುವುವು ಪ್ರಾಣಗಳು ರೋಧವ ಕೇಳು ಕೌಂತೇಯ ।೬೫೬॥

ಬರಲು ಜಾಗೃತಿ ಕುಂಡಲಿನಿಗೀ- ।
ತೆರದಿ ಮಧ್ಯಸುಷುವ್ನೆಯಧ್ವವು ।
ತೆರೆಯುವುದು ಮೇಣೀಳುತಿಹುದೂರ್ಧ್ವಪ್ರಕಾರದಲಿ ॥
ಹರಿಯುತಿಹುದಾಧಾರಚಕ್ರವ ।
ತೊರೆಯುತಾಜ್ಞಾಚಕ್ರಪರ್ಯಂ- ।
ತರವನಂತರ ಮುಟ್ಟುವುದು ಕೇಳ್ಬ್ರಹ್ಮರಂಧ್ರವನು ॥೬೫೮॥

ಇರುವುದೆ ಕೇಳ್ ಬ್ರಹ್ಮರಂಧ್ರದಿ ।
ಮೆರೆವ ನಾಲಿರದಳದ ಕಮಲವು ।
ಸುರಿಸುವುದು ಪೀಯೂಷವೃಷ್ಟಿಯ ಮೇಘದಂದದಲಿ ॥
ಒರುವುದದರ ಪ್ರವಾಹ ವೇಗದಿ ।
ನರನೆ ನೋಡೈ ಮೂಲಬಂಧದ ।
ಪರಿಘತನಕ ಸುಷುಮ್ನೆ ನಾಡಿಯ ಹಾದಿಯಿಂ ಪಾರ್ಥ
॥ ೬೫೯ ॥

ಇರುವುದೈ ಚೈತನ್ಯರೂಪದ ।
ಮೆರೆವ ಭಿಕ್ಷಾಪಾತ್ರಭೈರವ ।
ಒರುವುದದರಲಿ ಪೆಚಡಿ ಪವನದ ಮನದ ಮಿಶ್ರಣದಿ ॥
ಇರುವುದೀ ಪರಿ ಯೋಗಸಾಧನ- ।
ವಿರಿಸುತಿದನೇ ಮುಂದೆ ಹಿಂದಕೆ ।
ವಿರಚಿಸುವನೈ ಧ್ಯಾನ ಕೊತ್ತಳಸಹಿತ ಕೋಟೆಯನು ॥೬೬೦॥

ನರನೆ ಕೇಳ್ ವೈರಾಗ್ಯರೂಪವ- ।
ನರುಹುವೆನು ವಿಸ್ತರದೊಳೆಲ್ಲವ ।
ಪರಮಯೋಗಧ್ಯಾನವೆರಡೀ ತೆರದಿ ಮೇಳದಲಿ ॥
ಒರುಬರುತಲಾ ಸ್ವಾತ್ಮಜ್ಞಾನವ- ।
ನಿರದೆ ಮುಟ್ಟುವ ಪೊದಲೆ ಹಾದಿಲಿ ।
ಬರುವದೈ ವೈರಾಗ್ಯಮಿತ್ರನು ಬೆನ್ನ ಹಿಡಿಯುತಲಿ ೬೬೧ ॥

ಸಾಧಕನ ಪರಿಯಂತೆ ತೋರ್ಪನು ।
ಸಾಧನವು ತನ್ಮಿತ್ರ ಕೇಳೈ ।
ಸಾಧನವು ಕೈದೀಪವಿರೆ ಕತ್ತಲೆಯ ಭಯವೇನು ॥
ಮೇದಿನಿಯಲೀ ಮೋಕ್ಷಪ್ರಾಪ್ತಿಯ ।
ನಾದಹತ್ತಿದ ಸಾಧಕನಿಗಾ ।
ಹಾದಿಯಲಿ ವೈರಾಗ್ಯಮಿತ್ರನು ದೊರಕಿದರೆ ನಿಜದಿ ॥ ೬೬೦ ॥

ವೃತ್ತಿಬ್ರಹ್ಮಸ್ವರೂಪದಲ್ಲಿಯೆ ।
ಪ್ರಾಪ್ತಿಸುವೈ ಲಯವು ಪಾರ್ಥನೆ ।
ನಿಶ್ಯಯೀ ವೈರಾಗ್ಯಯುಕ್ತಜ್ಞಾನದಭ್ಯಾಸಿ ॥
ಯುಕ್ತನಹನೈ ನ್ವಾತ್ಮಲಾಭಕೆ ।
ಹತ್ತಿ ಕುದುರೆಯ ರಾಜಯೋಗನ ।
ಮತ್ತೆ ಧರಿಸನು ವಜ್ರಕವಚ ವಿರಕ್ತಿ ಯೆಂಬುದನು ॥ ೬೬೩ ॥

ಸುತ್ತಮುತ್ತಲು ಕಾಣುತಿರುವ ಸ- ।
ಮಸ್ತ ದೃಗ್ಗೋಚರಕೆ ಬರುತಿಹ ।
ವಸ್ತುಗಳನು ನಿವಾರಿಸುವ ಹೇತುವನು ತಾಂ ಹಿಡಿದು ॥
ಎತ್ತಿ ತಾನು ನಿಜೈಕಕಸ್ತದಿ ।
ಸ್ವಸ್ಥ ಧ್ಯಾನದ ಖಡ್ಗ ಹಿಡಿಯುತ ।
ಮುಕ್ತಿವಿಜಯಯತ್ರೀಯನೊಲಿವನು ರಣಪ್ರಸಂಚರದಲಿ ॥ ೬೬೪ ॥

ಧರಿಸದಲೆ ಸಂಶಯವ ಮನದಲಿ ।
ತರಣಿ ತಿಮಿರದ ರಾಜ್ಯ ಸೇರುತ ।
ಪರಿಭವಿಸುವನು ತಿಮಿರವನು ದಿವ್ಯ ಪ್ರಕಾಶದಲಿ ॥
ಪರಿಯಲಾ ನಿಃಶಂಕತನದಲಿ ।
ಪರಮ ಸಂಸಾರದ ರಣಾಂಗಣ- ।
ಕಿರದೆ ಬರುವನು ನೋಡು ಪಡೆವನು ಮುಕ್ತಿವಿಜಯವನು ॥೬೬೫॥

ಅಹಂಕಾರ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ ।
ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮಭೂಯಾಯ ಕಲ್ಪತೇ ॥ ೫೩ ॥

ಸೇರಲೀ ಪರಿ ರಣದಿ ಕಾದುವ ।
ವೈರಿ ಮೋಡಲಿ ದೋಷ ನೋಡಲು ।
ಹಾರುವನು ಮೈಮೇಲೆ ದೇಹಾಹಂಕೃತಿಯೆ ತಿಳಿಯೆ ॥
ಧಾರುಣಿಯಲಿವ ಕೊಂದು ಬಿದಸು ವಿ- ।
ಚಾರ ಮಾಡದಲು ಒದುಕಲೀಯನು ।
ಸೇರಿ ಮಾನವದೇಹಪಂಜರದೊಳಗೆ ಕೊಳೆಸುವನು ।೬೬೬॥

ಇರುವುದಿದಕೆ ನಿವಾಸಯೋಗ್ಯವು ।
ಪೆರೆವುದೈ ನರದೇಹ ಕೋಟೆಯು ।
ಮುರಿದು ಕೋಟೆಯ ಹಲ್ಲೆ ಮಾಡುತ ಹಸ್ತಗತ ಮಾಡಿ ॥
ನರನೆ ನೋಡೀತೆರದಿ ಬಲವೈ ।
ಎರಡನೆಯ ವೈರಿಯು ಕಣಾ ಮೀ- ।
ಣಿರದೆ ನಾಶನ ಮಾಳ್ಪನವನನು ಮುಕ್ತಿಲೋಲುಪನು ॥ ೬೬೭ ॥

ಇರುವನಾ ಬಲರೂಪ ಶತ್ರುವು ।
ಬರಲು ವಿಷಯದ ಹೆಸರು ಕಿವಿಯಲಿ ।
ಬರುವುದವಗೆನೆ ನಾಲ್ಕು ಮಡಿ ಶಕ್ತಿಯು ಕಣಾ ತಿಳಿಯೆ ॥
ಇರದು ಜಗದಲಿ ವಿಷಯಪಂಗಡ ।
ಹೊರತು ಯೆಂಬೀ ಭಾವದಿಂದಲಿ ।
ಮೆರೆಯುವನು ಜಗವೆಲ್ಲ ಮೃತನಂದದಲಿ ತೋರುವುದು
॥ ೬೬೮ ॥

ಬಲ ಭಯಂಕರ ಶತ್ರು ಹಾಲಾ- ।
ಹಲದ ಮಡು ವಿಷವಿಷಯಶಬ್ದದಿ ।
ತಿಳಿಯಲಾರೆನು ಭೇದ ವಿಷಯವೆ ವಿಷವದಾಗುವುದು ॥
ಬಲವರಸ ದೋಷಗಳ ರಾಜ್ಯದಿ ।
ಕಲಿಯು ಧ್ಯಾನದ ನಿಶಿತಖಡ್ಗವ ।
ಗೆಲುವನೆಂತೈ ಹೇಳು ಧ್ಯಾನದ ಖಡ್ಗ ಬಹು ಬಿರುಸು ॥೬೬೯॥

ಪ್ರಾಪ್ತವಾಗಲು ಪ್ರಿಯವಿಷಯ ಸಂ- ।
ತೃಪ್ತಿಯಪ್ಪುದು ಸಂತಸದೊಳಮ- ।
ನಿತ್ತು ಜೀವಕೆ ಸಂತಪಿಪನಾಚ್ಛಾದನವ ಮಾಡಿ ॥
ಸ್ವಸ್ಥದಲಿ ಸನ್ಮಾರ್ಗವಿಷಯವ ।
ಕಿತ್ತು ಮೇಣು ನಿಧರ್ಮವೆಂಬುವ ।
ಕತ್ತಲೆಯ ಘೋರಡವಿಯಲಿ ದೂಡುವುದು ದರ್ಪವಿದು
॥ ೬೭೦ ॥

ಅಲ್ಲಿ ಘೋರಾರಣ್ಯದಲಿ ಹುಲಿ ।
ಮೆಲ್ಲನವನನು ತಿನುವುದಲ್ಲವೆ ।
ಕೊಲ್ಲುವುದು ಕೇಳ್ನರಕರೂಪದ ಹುಲಿಯು ಕಲಿಪಾರ್ಥ ॥
ಅಲ್ಲವೇನೀ ದರ್ಪ ಘಾತುಕ- ।
ನಲ್ಲವೇ ನೀನೀಕ್ಷಿಸವನನು ।
ಕೊಲ್ಲುವನು ಬಹುಕ್ರೂರ ಶತ್ರುವ ಧ್ಯಾನಖಡ್ಗದಲಿ ॥೬೭೧॥

ಹೆಸರ ಕೇಳಿದ ಮಾತ್ರದಲಿ ತಾ- ।
ಪಸರು ಒಲು ನಡುಗುವರು ಭಯದಲಿ ।
ವಿಷಮ ಕ್ರೋಧದ ಮಿತ್ತನವನಾ ಕಾಮನೆಂಬವನು ॥
ಕುಸುಮಶರನವನಿಹನು ತಾನತಿ- ।
ಕುಶಲತನದಲಿ ಕುಣಿದು ಕುಣಿಸುತ ।
ವಸುಮತಿಯೊಳವನೇರುವನು ತಲೆಯೊಳಗೆ ಪ್ರೀತಿಯಲಿ
॥ ೬೭೨ ॥

ಸೆರೆಯ ಹಾಕಲು ವೈರಿ ಕಾಮನ ।
ಹರಣವಪ್ಪುದು ಕ್ರೋಧಕದರೋಲ್ ।
ಮರದ ಬೀರನೆ ಕಡಿಯೆ ಸಾಯ್ವುವು ಟೊಂಗೆಗಳು ಸಹಜ ॥
ಮರಣವಾಗಲು ಕಾಮವೈರಿಗೆ ।
ಬರುವುದಾಪರಿ ಮರಣ ಕ್ರೋಧ- ।
ಕ್ಕರಿಯಲಾ ಕಲಿಪಾರ್ಥ ಪೇಳ್ವೆ ಪರಿಗ್ರಹವ ನಿನಗೆ ॥ ೬೭೩ ॥

ಧಾರುಣೀಶ್ವರ ತಾಂ ಪ್ರತಿಜ್ಞೆಯ- ।
ಲೇರಿಸುವನೈ ಶಿರದಿ ಬೇಡಿಯ- ।
ನಾರಿಗವ ಕೈಕಾಲಲೇರಿಸುತಿಹನೊ ಕೋಪದಲಿ ॥
ವೈರಿ ನೋಡು ಪರಿಗ್ರಹನು ತಾಂ ।
ಚಾರು ಸ್ಮರಣೆಯನೀವ ನರನಿಗೆ ।
ವೈರಿಯವ ವೈರಾಗ್ಯಶೀಲನ ಹೆಸರ ಕೇಳುತಲೆ ॥ ೬೭೪ ॥

ತಲೆಯು ತೂಗಿಸ ಹತ್ತಿಸುತ ಹಂ- ।
ಬಲಿನ ಬಲೆಯಲಿ ಸಿಲುಕಿಸುವನವ ।
ಘಳಿಲನವನನು ತುರುಕಿಸುವನು ಮಮತ್ವಪಾಶದಲಿ ॥
ತಿಳಿವನವನೀ ಮತವು ಯೆನ್ನದು ।
ತಿಳಿವನವನೀ ಶಿಷ್ಯನೆನ್ನವ ।
ತಿಳಿವನವನೀ ಗ್ರಂಥವೆನ್ನದೆನುತ್ತ ಮನದೊಳಗೆ ॥ ೬೭೫ ॥

ತೊರೆದು ಗೃಹದಾರಾದಿ ಸಂಸೃತಿ ।
ತಿರಳಿದರು ವನಕಾಗಿ ಹಿಂದಕೆ ।
ಬರುವುದನಗೆ ಮಮತ್ವ ಹಿಂಜಾಲಿಸುತ ವನದೊಳಗೆ ॥
ತೊರೆದು ವನ್ಯಾದಿಗಳನವನತಿ ।
ಹರುಷದಿಂದ ದಿಗಂಬರತ್ವದಿ ।
ಮೆರೆವನಾದರು ಬರುವನವನು ಮಮತ್ವಪಾಶದಲಿ ॥ ೬೭೬ ॥

ಇರುವನೀಪರಿ ಕೇಳ್ ಪರಿಗ್ರಹ- ।
ನಿರಿಯಜಯ್ಯನು ಗೆದ್ದರವನನು ।
ಪೊರುಷನೀ ಸಂಸಾರವನೆ ಗೆಲ್ಲುವನು ನಿಜವಾಗಿ ॥
ಅರುಹುವೆನು ನಾ ನಿನಗೆ ನಿರ್ಮಮ ।
ಪರಿಯ ಕೇಳೈ ಪಾರ್ಥ ನಿನಗದ ।
ಪರಮ ಸ್ನೇಹಿತನೆಂದು ಪ್ರೇಮದೊಳರುಹುವೆನು ನಾನು ॥೬೭೭॥

ನರನೆ ನೋಡು ಯಥಾರ್ಥಜ್ಞಾನವು ।
ಮೆರೆವನೀತನೆ ನಾರ್ವಭೌಮನು ।
ಬರುವರೈ ಮಾಂಡಲಿಕ ರಾಜರಮಾನಿತಾದಿಗಳು ॥
ಇರುವುದವನಿಗೆ ಮೋಕ್ಷರೂಪದ ।
ಪರಮದೇಶವು ರಾಜ್ಯವೀತಗೆ ।
ಮೆರೆವುದಲ್ಲಿ ಪ್ರವೃತ್ತಿರೂಪದ ರಾಜಮಾರ್ಗವದು ॥ ೬೭೮ ॥

ಸ್ವಾರಿ ನಡೆಯುತ್ತಿರುವ ವೇಳೆಗೆ ।
ಮೂರವಸ್ಥೆಗಳೆಂಬ ಸ್ತ್ರೀಯರು ।
ಹಾರಿಸುವರೈ ಲಿಂಬಲೋಣವ ದೃಷ್ಟಿ ತೆಗೆಯುವರು ॥
ಧಾರುಣಿಪನಿವ ತನ್ನ ನಿಜದರ- ।
ಬಾರಿನಲ್ಲೊಡ್ಡೋಲಕೆ ಬರೆ ।
ಚಾರುತರದ ವಿವೇಕ ನಿಲುವನು ಚೋಪದಾರನಲಾ
॥ ೬೭೪ ॥

ಬೋಧರೂಪದ ಚಿನ್ನ ಬೆತ್ತವ ।
ಸಾಧಿಸುತ ಕೈಯಲ್ಲಿ ಹಿಡಿಯುತ ।
ಹಾದಿಗಟ್ಟುವ ದೃಶ್ಯಗಳ ಬಲುಗರ್ದಿಯನು ಮುರಿದು ॥
ಆದನಂತರ ಯೋಗಭೂಮಿಕೆ ।
ಯಾದರದಲಾರತಿಯ ಬೆಳಗುವ ।
ಳೀಧರಿತ್ರಿಯ ರಾಜನೀಪರಿ ಸೌಖ್ಯ ಪಡೆಯುವನು ॥ ೬೭೫ ॥

ಸುರಿಸುವರು ಬಹು ಪುಷ್ಪವೃಷ್ಟಿಯ ।
ನೆರೆದು ಸಿದ್ಧಿಗಳೆಲ್ಲ ರಾಜಗೆ ।
ಪರಿಪರಿಯ ಪುಷ್ಪಂಗಳಲಿ ಸ್ನಾನವನು ಹಾಕುವರು ॥
ಪರಿಯಲೀ ಬ್ರಹ್ಮೈಕ್ಯರೂಪದ ।
ಸರಸಸುಖದಸ್ವರಾಜ್ಯ ಕಾಣಿಸೆ ।
ಹರುಷಮಯ ತ್ರೈಲೋಕ್ಯ ರಂಜಿಸುವುದು ಸುಗಾಢದಲಿ
॥ ೬೭೬ ॥

ಇರುವನೀತನು ತನ್ನ ಶತ್ರುವು ।
ಹಿರುವನೀತನು ತನ್ನ ಮಿತ್ರನು ।
ಹರಿದು ಹೋಗುವುದಿಲ್ಲಿ ನೋಡೈ ದ್ವೈತಭಾವವದು ॥
ಮುರಿಯಲಾತನ ದ್ವೈತಭಾವವು ।
ಹರಿವ್ರದಲ್ಲವೆ ಯಲ್ಲಿ ಮಮ ಯೆಂ- ।
ಬೆರಡು ದುಷ್ಟಾಕ್ಷರದ ರಾಜ್ಯವು ಹಾಳು ಜೀಳುವುದು
॥ ೬೭೭ ॥

ಒರುವುದೇಕಚ್ಛತ್ರದಾಕ್ಷಣ ।
ಪರಮರಾಜ್ಯವು ಸರ್ವಭೂಮಿಯ ।
ಹಿರುವುದದು ವಿಶ್ವವ ಸಮಸ್ತನ ವ್ಯಾಪಿಸುತಭರದಿ ॥
ಇರದು ಮೇಣವಕಾಶ ಮಮ ಯೆಂ- ।
ದರುಹಲಿಕ್ಕದರಿಂದ ಮಮತೆಯು ।
ಹರಿದು ಹೋಗುವುದೇನ ಹೇಳಲಿ ಸಾಧಕನ ಪರಿಯ
॥ ೬೭೮ ॥

ಸರನಹಂಕಾರಾದಿಗಳನುರೆ ।
ಮುರಿಯೆ ಜಗವು ಸಮಸ್ತ ತಾನೇ ।
ಹಿರುವೆನೆಂಬುದು ಬರಲರವು ಮನನೊಳಗೆ ನಿಜವಾಗಿ ॥
ಮೆರೆವ ಯೋಗಸ್ವರೂಪ ಕುದುರೆಯು ।
ಬರುವ್ರದಲ್ಲಿವೆ ನಿಶ್ಚಲತ್ವದಿ ।
ಧರಿಸಿರುವವೈರಾಗ್ಯ ಕವಚವು ಸಡಿಲಿಪ್ಪುದು ಕ್ಷಣದಿ ॥ ೬೭೯ ॥

ಏನ ಹೇಳಲಿ ಧ್ಯಾನಖಡ್ಗದಿ ।
ಹಾನಿಯಾಗದ ವಸ್ತು ಜಗದಲಿ ।
ಮಾನವರಿಗರವಿಹುದೆ ವೈರಿಗಳನ್ನು ಗೆಲ್ಲುತಲಿ ॥
ಧ್ಯಾನ ವಿಜಯಿಸ್ವರೂಪವಾಗಿಯೆ ।
ತಾನೆ ಕೈಗಳ ಕೆಳಗೆ ಬಿಡುವನು ।
ಯೇನಿಹುದು ಮತ್ತಿನ್ನು ಜಯಿಸುವ ವೀರರಿಲ್ಲದಿರೆ ॥ ೬೮೫ ॥

ಅರಸಾಯನ ದಿವ್ಯವಿರಲದು ।
ಸೇರಿದರೆ ರೋಗಿಯು ಶರೀರವ ।
ಹಾರಿಸುವುದ್ಯೆ ರೋಗವನು ಮೇಣ್ ತಾನೆ ಹಾರುವುದು ॥
ಊರಸೇರಿದ ಮೇಲೆ ಯೋಟ ಜ- ।
ರೂರಿ ಯಿಹುದೇ ಹೇಳು ಆ ಪರಿ ।
ಸೇರಿದರೆ ಬ್ರಹ್ಮಸ್ವರೂಪವ ಬೇಕೆಯಭ್ಯಾಸ ॥ ೬೮೬ ॥

ಶರಧಿಯನು ಸೇರಿದರೆ ಗಂಗೆಯು ।
ಭರದವೇಗವ ಬಿಟ್ಟು ಬಿಡುವಳು ।
ತರಣಿ ನಿಜಪತಿದರ್ಶನದಿ ತಾಂ ಶಾಂತಳಾಗುವಳು ॥
ಬರಲು ಜಾಳಿಗೆ ಗೊನೆಯು ಗಿಡವದು ।
ತಿರಿಗಿ ಬೆಳೆವುದೆ ನೋಡು ವಾರ್ತೆನೆ ।
ಬರಲು ನಿಲುಮನೆ ನೋಡು ಮಾರ್ಗಕ್ರಮಣ ಮುಗಿಯುವುದು
॥ ೬೮೭ ॥

ಬರಲು ನಾತ್ಮಜ್ಞಾನವೀಪರಿ ।
ಕರದ ಸಾಧನ ಖಿಡ್ಗ ಮೊದಲಾ- ।
ಗಿರುವ ಸರ್ವಾಯುಧಗಳಾಕ್ಷಣ ನೆಲಕೆ ಜೀಳವುವು ॥
ನರನೆ ಕೇಳ್ ಬ್ರಹ್ಮೈಕ್ಯ ಸಾಧಿಸೆ ।
ತಿರುಗುವುವು ಸಾಧನಗಳೆಲ್ಲವು ।
ಅರಿಯಲಾ ಸಾಧನಗಳಾವಶ್ಯಕತೆ ಬೇರಿಲ್ಲ ॥ ೬೮೮ ॥

ಯೋಗಫಲಪರಿಪಕ್ವತೆಯೆ ನೈ ।
ರಾಗ್ಯಲಗ ಸುಮೂರ್ತವಿದುವೆ ಸ- ।
ರಾಗಜ್ಞಾನಾಭ್ಯಾಸವೃದ್ಧತ್ವವು ಮಹಾಶಾಂತಿ ॥
ಸಾಗಿ ಬರಲೀ ಶಾಂತಿಯಾತನು ।
ಯೋಗ್ಯನಹನ್ಯೆ ಬ್ರಹ್ಮಪದವಿಗೆ ।
ಯೋಗಬಲದಿಂ ಪೂರ್ಣತೆಯು ಸೇರುವನು ಸಾಧಕನು ॥ ೬೮೯ ॥

ಹುಣ್ಣಿವೆಯ ದಿನ ಚಂದ್ರನಿಹನಂ ।
ಪೂರ್ಣಕಲೆಯಿಂ ಹಿಂದಿನಾ ದಿನ ।
ಪೂರ್ಣನಿಹನೇ ನೋಡು ಅಂಶಾತ್ಮಕನು ಕಲೆಗಳಲಿ ॥
ಚಿನ್ನವೀಪರಿ ಶುದ್ಧವಿರೆ ನಃ- ।
ಪೂರ್ಣವಪ್ಪುದು ಋಗರ್ಥುಗಿಸುವುದು ।
ನ್ಯೂನವಿರುವುದು ಕೀಳುಲೋಹದ ಮಿಶ್ರಣದಲದುವೆ
॥ ೬೦ ॥
ಶರಧಿಯನು ಸೇರುವರೆ ಜಾಹ್ನವಿ ।
ಭರದಲೋಡೋಡುವಳನಂತರ ।
ಶರಧಿಸಂಗಮವಾಗೆ ಮರೆಪಳು ಸ್ವಾತ್ಮರೂಪವನು ॥

ಪರಿಯೊಳಾ ಬ್ರಹ್ಮಸ್ವರೂಪವ ।
ನರಿತು ಶಾಂತಿಯು ಬರಲು ಮನದಲಿ ।
ಪರಿಪರಿಯ ಸಾಧನಗಳನು ಮರೆಯುವನು ಸಾಧಕನು ॥ ೬೧ ॥

ತಾಳದಲೆ ಬ್ರಹ್ಮಸ್ವರೂಪವ ।
ಮೂಲದಿಂದಲೆ ಬ್ರಹ್ಮನಾನಿಹೆ- ।
ನೇಳಲೀಪರಿ ಭಾವನೆಯು ಸಾಧಕಗೆ ನಿಜವಾಗಿ ॥
ಹೇಳಲೇನದ ಬ್ರಹ್ಮರೂಪಕೆ ।
ಶೀಲದಿಂ ಯೋಗ್ಯತೆಯ ತಾಳ್ವನು ।
ಕೇಳಿದಿಯೊ ಕೌಂತೇಯ ನಾ ಪೇಳಿದುದನೆಲ್ಲವನು ೬೨ ॥

ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ।
ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್ ॥ ೫೪ ॥

ನರನೆ ನೋಡೈ ಬ್ರಹ್ಮಭಾವದ ।
ಬರಲು ಯೋಗ್ಯತೆ ಸಾಧಕನಿಗಾ- ।
ನರಗೆ ಬರುವುದು ಸ್ವಾತ್ಮಬೋಧಪ್ರಸನ್ನತೆಯ ಪದವಿ ॥
ಅರಿಯಲಗ್ನಿಯ ಮೇಲೆಯಡಿಗೆಯ- ।
ನಿರದೆ ಮಾಡಲು ಬೆಂಕಿಯಾರದೆ ।
ಬರುವುದೇನದು ತಿನಲು ಕೂಡಲೆ ಬಾಯಿ ಸುಡುವುದಲಾ
। ೬೩ ॥
ವರುಷಕಾಲದೊಳಿಹುದು ಗಂಗೆಗೆ ।
ಭರತಿ ಪೂರದಿ ಬರಲು ಶರದೃತು ।
ಸ್ಫುರತೆಯಪ್ಪುದು ಭರತಿಯಿಳಿತವ ಮರೆಯುವಳು ನಿಜದಿ ॥
ನರಸ ಗಾಯನಜಲಸೆ ಮುಗಿಯಲು ।
ಬರುವ್ರದಂತವುಪಾಂಗಕೆಲ್ಲಕೆ ।
ಬರುವುದೊಂದೇ ಮನದಿ ಗಾಯನದಿಂಪು ಸೊಂಪಾಗಿ ।೬೪।

ನರನೆ ನೋಡೀ ಪರಿಯಲನುಭವ ।
ಬರಲು ಸ್ವಾತ್ಮಜ್ಞಾನಪ್ರಾಪ್ತಿಯು ।
ಪರಿಹರಿಸುವುದು ಶ್ರಮ ಪ್ರಸನ್ನತೆಯಲ್ಲಿ ನಿಜವಾಗಿ ॥
ಅರಿವ ಮರೆಯಲು ಶ್ರಮದ ಪಾರ್ಥನೆ ।
ಕರೆವರಿದ ಸ್ವಾತ್ಮಸ್ವರೂಪದ ।
ವರಪ್ರಸನ್ನತೆ ಯೆನುತ ನೋಡಿದಿಯೋ ಧನಂಜಯನೆ ।೬೫।

ನರನೆ ನೋಡೀತೆರದ ಸಾಧಕ- ।
ನಿರುವನೈ ಯೋಗ್ಯನು ಕಣಾ ಯೀ- ।
ವರಪ್ರಸನ್ನತೆಯನ್ನು ಭೋಗಿಸಲವನೆ ಯೋಗ್ಯನಲಾ ॥

ಬರಲವಗೆ ಮೋಕ್ಷೈಕ್ಯಭಾವದ ।
ಭರತಿ ಮತ್ತೋನಿಹುದು ಜಗದಲಿ ।
ನರನೆ ಸ್ವಾತ್ಮಾನಂದಸುಖದಲಿ ಮರೆವನೆಲ್ಲವನು ॥ ೬೬ ॥

ತನ್ನದಿಹುದೀ ವಸ್ತು ಜಗದಲಿ ।
ಖಿನ್ನತನವನು ತಾಳಿ ಶೋಕವ- ।
ನಿನ್ನು ಮಾಡಲು ಬೇಕು ಯೆಂಬ ವಿಚಾರ ಮರೆಯುವನು ॥
ಇನ್ನು ತನಗೀ ವಸ್ತು ಸಿಗ ಬೇ- ।
ಕೆನ್ನುವೀಯಭಿಲಾಷ ಮಾಡನು ।
ಛಿನ್ನವಪ್ಪುದು ಭಾವನೆರಡೀ ತೆರದಿ ನೋಡಿದರೆ ॥ ೬೭ ॥

ತರಣಿಯುದಯಾಚಲವನೇರಲು ।
ವರಿಪರಿಯ ತಾರೆಗಳ ತೇಜವು ।
ಹರಿವ್ರದಲ್ಲಾ ಗಗನದಲಿ ತನ್ನಿಂದ ತಾನಾಗಿ ॥
ನರನೆ ನೋಡೀಪರಿಯಲಿರುವ್ರದು ।
ಬರಲು ನರಗಾತ್ಮಾನುಭವ ನಂ- ।
ತರದಿ ಮುಗಿವುದು ಭೇದವೆಲ್ಲವೆ ನಿಜದಿ ತಾನಾಗಿ ॥ ೬೮ ॥

ನರನೆ ಹಲಗೆಯ ಮೇಲೆ ಕೈಯಿಂ- ।
ಒರೆದ ಲಿಪಿಯನು ಮಾಸ ಬಹುದೈ ।
ಹರಿದು ಹೋಗುವುದೀ ತೆರದಿ ತೋರುತ್ತಿರುವ ಭೇದ ॥
ಇರುವ್ರದಲ್ಲಾ ಸ್ವಪ್ನಜಾಗೃತಿ- ।
ಯೆರಡವಸ್ಥೆಯು ಜ್ಞಾನಭಿನ್ನತೆ ।
ಯೆರಡು ತರದೀ ಜ್ಞಾನವಜ್ಞಾನದಲಿ ಲೀನವಲಾ ॥ ೬೯ ॥

ಅನ್ಯಥಾಜ್ಞಾನಕ್ಕೆ ಕಾರಣ- ।
ವಿನ್ನಿರುವದಜ್ಞಾನವೈ ನಿಜ ।
ತನ್ನ ತಾನೇ ಕರಗಿ ಹೋಗುವುದಾತ್ಮಜ್ಞಾನದಲಿ ॥
ಅನ್ನ ತುತ್ತಿನ ಮೇಲೆ ತುತ್ತನು ।
ತಿನ್ನಲಿಕ್ಕಾರಂಭ ಮಾಡಲು ।
ಭಗ್ನವಪ್ಪುದು ಹಸಿವೆ ತಿಂದೊಂದೊಂದು ಗ್ರಾಸವನು ॥೭೦೦॥

ಕಡೆಯ ತುತ್ತಿಗೆ ತೃಪ್ತಿ ಹಸಿವೆಯೆ ।
ಯಡಗಿ ಹೋಗುವುದಾಗ ನೋಡೈ ।
ನಡೆಯೆ ಹಾದಿಯ ಹೆಜ್ಜಿಹೆಜ್ಜಿಗೆ ಹಾದಿ ಸರಿಯುವುದು ॥
ಕಡೆಗೆ ಮುಕ್ಕಾಮಿಂಗೆ ಬರಲಾ ।
ನಡೆವ ಹಾದಿಯು ಮುಗಿವುದಲ್ಲೈ ।
ಯುಡುಪತಿಯು ಪೂರ್ಣತೆಯ ಪಡೆವನು ಪೂರ್ಣಿಮೆಯು
ದಿವಸ ॥ ೭೦೧ ॥
ಮುಲಗಿರುವ ಮಾನವನು ನಿದ್ದೆಯ ।
ತೊಲಗುವನು ಕೇಳ್ವಾವಕಾಶದಿ ।
ಬಳಿಕ ನಿದ್ರಾವಸ್ಥೆ ಹೋಗಲು ಪೂರ್ಣವೆಚ್ಚರಿಕೆ ॥
ತಿಳಿಯಲಾಪರಿ ಭೋಧ್ಯವಸ್ತುವು ।
ಅಳಿಯಲಾ ಮನದಲ್ಲಿ ಸಮತೆಯು ।
ತುಳುಕುವುದು ಸಾಯುವುದು ಮೇಣಜ್ಞಾನವೆಲ್ಲನದು ॥೭೦೨॥

ಪ್ರಳಯ ಬರೆ ಕಲ್ಪಾಂತಸಮಯದಿ ।
ಜಲಮಯವೆ ತಾನಿಹುದು ವಿಶ್ವವು ।
ಜಲಧಿನದಿನದಕೊಳಗಳೆಂಬೀ ಭೇದವುಳಿಯುವುದೆ ॥
ತಿಳಿಯಲಾಪರಿ ಘಟಮಠಾದಿಗ ।
ಳಳಿಯಲೊಂದಾಕಾಶವುಳಿವುದು ।
ಅಳಿಯಲಾಪರಿ ಕಾಷ್ಠಭಾಪವು ಬೆಂಕಿಯುಳಿಯುವುದೆ ॥೭೦೩॥

ಪರಿವರಿಯ ಚಿನ್ನಾಭರಣಗಳ ।
ಕರಗಿಸಲು ಮುಸಿಯೊಳಗೆ ಹಾಕುತ ।
ಹರಿವುದಲ್ಲೈ ನಾಮರೂಪವು ಚಿನ್ನವುಳಿಯುವುದು ॥
ಹರಿಯಲಾ ಪರಿ ಸ್ವಪ್ನಸಿದ್ರೆಯು ।
ಮೆರೆವನೊರ್ವನೆ ಸ್ವಾತ್ಮರೂಪನು ।
ಬರುವುದೆಂತೈ ಭೇದವಾತನಿಗೆನ್ನ ಹೊರತಾಗಿ ॥ ೭೦೪ ॥

ಕರೆವರಿದನಾ ಭಕ್ತಿ ನಾಲ್ಕನೆ ।
ತರದೆನುತ್ತಲಿ ಕೋವಿದರು ಕೇಳ್ ।
ಪರಿವುದವಗೆ ಸ್ಥಿತಿಯು ಸಾಧನದಿಂಹಲೀ ತೆರದಿ ॥

ಕರೆದೆನಿದನಾ ನಾಲ್ಕನೆಯದೆಂ- ।
ದರುಹುವೆನು ಕಾರಣವ ಪಾರ್ಥನೆ ।
ಯಿರುವರೈ ಜಿಜ್ಞಾಸುವಾರ್ತನು ಮೂರನರ್ಥಾರ್ಥಿ ॥ ೭೦೫ ॥

ಪರಿಕಿಸಲು ಸ್ಥಿತಿ ನೋಡಿದಿಯೊ ನೀ ।
ನರನೆ ಯೊಂದೆರಡೆಂಬ ಸಂಖ್ಯೆಯ ।
ಹೊರಗೆ ಸಹಜಸ್ಥಿತಿಯು ಯೆನ್ನದು ಭಕ್ತಿಯೆಂಬುದದು ॥
ಮೆರೆವುದೀ ಪರಿ ಯೆನ್ನ ಭಕ್ತಿಯು ।
ಹರಣವಜ್ಞಾನಕ್ಕೆ ಮುಂದೆನ- ।
ಗರಿಯುತಲಿ ಲೋಕಕ್ಕೆ ಕಲಿಸುವದೆನ್ನ ಭಕ್ತಿಯನೆ ॥ ೭೦೬ ॥

ಎಲ್ಲಿ ನೋಡಿದಡಲ್ಲಿ ಯೆನ್ನಯ ।
ಸಂಲಲಿತ ಮೂರ್ತಿಯನೆ ಕಾಂಬರು ।
ಯೆಲ್ಲ ರೂಪದೊಳೆಲ್ಲ ಸ್ಥಾನದೊಳೆಲ್ಲ ಸ್ಥಿತಿಯೊಳಗೆ ॥
ಎಲ್ಲವಿಹುದು ಪ್ರಕಾಶವೆನ್ನದು ।
ವಿಲ್ಲವಲ್ಲಿಯೆ ಯಸ್ತಿನಾಸ್ತಿಯು ।
ಯಿಲ್ಲನ್ನೈ ಯುದಯಾಸ್ತ ಜಾಗೃತಿಸ್ವಪ್ನ ಬೇರಿಲ್ಲ ॥ ೭೦೭ ॥

ಇರಲು ನೋಡಾ ಭಕ್ತನಾತನು ।
ಬರುವೆನವಗಾನಾರ್ತಿರೂಪದಿ ।
ಧರೆಯಲಿಚ್ಛಿತವಸ್ತು ಮೆರೆವುದು ಭಕ್ತಿ ತಾನಾಗಿ ॥
ನರನೆ ಜಿಜ್ಞಾಸುವಿಗೆ ನಾನಾ- ।
ಪರಿಯೊಳಿಚ್ಛೆಯು ಜ್ಞಾನನಾಗುನೆ ।
ನೇರಡು ರೂಪದೊಳಾನು ಮೆರೆವೆನು ಭಕ್ತವಶ ನಾನು ॥ ೭೦೮ ॥

ಆರ್ತದಿಚ್ಛೆಯ ಭಕ್ತನಿರಲವ ।
ನರ್ಥವರ್ಥಪ್ರಾಪ್ತಿಸಾಧನ ।
ವರ್ಥಪ್ರಾಪ್ತಿಯಲಿಚ್ಛೆ ಯೊಪರಿ ತ್ರಿಸ್ಫುಟ ನಾನಾಗಿ ॥
ಭಕ್ತರಿಚ್ಛೆಯ ಪೂರಯಿಸುವೆನು ।
ವ್ಯರ್ಥವಿರುವುದೆ ನನ್ನ ಭಕ್ತಿಯು ।
ಭಕ್ತರಿಚ್ಛಾರೂಪ ನಾನಾಗುವೆನು ಯುಗಯುಗದಿ ॥ ೭೦೯ ॥

ಧರಿಸಿ ಮೇಣಜ್ಞಾನರೂಪವೆ ।
ನರನೆ ಯೆನ್ನಯ ಭಕ್ತಿ ಮಾಡಲು ।
ಮೆರೆವುದವನೆದುರಿನಲಿ ನೋಡಜ್ಞಾನಪರವಾಗಿ ॥
ಪರಿಕಿಸೈ ಕನ್ನಡಿಯು ಮುಂದಕೆ ।
ಬರುವ ವಸ್ತುವ ಬಿಂಬಿಸುವುದೈ ।
ಯಿರುವುದೇನಚ್ಚರಿಯು ಯಿದರಲಿ ನೋಡಿದಿಯೊ ಪಾರ್ಥ ॥೭೧೦॥

ಒಂದು ಮುಖವೆರಡೆಂದು ಕಾಂಬುದು ।
ಕುಂದು ಕನ್ನಡಿಗಿರಲು ಸಹಜವು ।
ಬಂದು ಕಾಡುವುದೈ ನಿರರ್ಥಕ ದ್ವೈತವೊಂದಿರಲು ॥
ಚಂದ್ರನೊರ್ವನೆ ಬೆಂಬಿಸುವನೈ ।
ಕುಂದು ಕಣ್ಣಿಗೆ ಬರಲು ತಿಮಿರದಿ ।
ಚಂದ್ರಬಿಂಬಗಳೆರಡು ತೋರುವುವೇನಹೇಳುವೆನು ।' ೭೧೧॥

ಭಕ್ತಿಮಾರ್ಗದಲೆನ್ನ ಭಜಿಸಲು ।
ವ್ಯಕ್ತನಾಗುವೆ ನಾನು ನಿಜವಿದು ।
ನಿತ್ಯ ನಾ ಸರ್ವತ್ರ ಭಕ್ತರ ಹತ್ತರದಲಿಹೆನು ॥
ಪಾರ್ಥ ದೃಶ್ಯತ್ವವ ಕಣಾ ಬಹು ।
ಮಿಥ್ಯವಿಹುದಜ್ಞಾನವಶದಲಿ ।
ಕೆತ್ತು ಕಳೆಯೈ ತಿಮಿರವಜ್ಞಾನವನು ಭಕ್ತಿಯುಲಿ ॥ ೭೧೨ ॥

ಭಕ್ತಿಯೋಗದಲೀ ತೆರದಿ ನೀ- ।
ಕೆತ್ತಿ ಕಳೆಯಲು ತಿಮಿರವೆಲ್ಲವ ।
ಚಿತ್ರತರದಲ್ಲೆನ್ನನೇ ಕಾಂಬುವರು ದರ್ಪಣದಿ ॥

ಧಾತ್ರಿಯಲಿ ಚಿನ್ಮದಲಿ ಮಿತ್ರಣ ।
ಚಿತ್ತಿನಲು ಹಿತ್ತಾಳೆ ಚಿನ್ನವೆ ।
ಕಿತ್ತಿ ಹಿತ್ತಾಳೆಯನು ತೆಗೆಯಲು ಶುಭ್ರ ಬೆಳಗುವುದು ॥ ೭೧೩ ॥

ಪೂರ್ಣಿಮೆಯ ದಿನ ಹೊರತು ಚಂದ್ರನು ।
ಪೂರ್ಣನಿಲ್ಲೈ ನೋಡು ಪಾರ್ಥನೆ ।
ಪೂರ್ಣಿಮೆಯ ದಿನವವನು ಕಾಂಬನು ತನ್ನ ಪೂರ್ಣತೆಯ ॥
ಎನ್ನ ವೃತ್ತಿ ಜ್ಞಾನದ್ವಾರದಿ ।
ಕಣ್ಣಿನಿಂದಲೆ ನೋಳ್ಪರೆಲ್ಲರು ।
ಭಿನ್ನತೆಯು ದೃಷ್ಟ್ಯಸ್ವರೂಪದೊಳಿಹುದು ನೋಡಿದರೆ ॥ ೭೧೪ ॥

ಹಾನಿಯೇ ದೃಷ್ಟ್ಯತ್ವಕಾಗಲು ।
ನಾನೆ ನನ್ನನೆ ನೋಡುತಿಹೆನೈ ।
ಏನ ಹೇಳಲಿ ಭಕ್ತಿಯೋಗವ ನಿನಗೆ ನೇಳಿದೆನು ॥
ಜ್ಞಾನಯೋಗವಿದಹುದು ನಿಜ ನಿನ- ।
ಗಾನು ನಾಲ್ತನೆ ಭಕ್ತಿ ಯೆನುತಲಿ ।
ನಾನುರಾಗದಿ ಪೇಳ್ದೆ ದೃಶ್ಯಾತೀತವೀ ಮಾರ್ಗ ॥ ೭೧೫ ॥

ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್ ॥ ೫೫ ॥

ಯಾರು ನೋಡೀ ಜ್ಞಾನಭಕ್ತಿಯ ।
ಸೇರುವರು ಮತ್ತನವರು ನನ್ನೊಳು ।
ಸೇರುತಿಹರೈಕ್ಯವನು ನಿಜದಲಿ ಪಾರ್ಥ ತಿಳಿದಿಯಲಾ ॥
ಧಾರುಣಿಯಲೀ ಜ್ಞಾನಿ ಯೆನ್ನಯ ।
ಚಾರು ನ್ಯಾತ್ಮನು ಯೆನುತ ಕೈ ಮೇ- ।
ಲೇರಿಸುತ ಹೇಳಿದೆನು ನಾನಧ್ಯಾಯನೇಳರಲಿ ।' ೭೧೬ ।

ಇರುವುದುತ್ತಮ ಭಕ್ತಿಯೆನುತಲಿ ।
ಯರುಹಿದೆನು ಭಾಗವತರೂಪದಿ ।
ಸರಸಿಜಾಸನನಿಂಗೆ ಕಲ್ಪಾದಿಯಲಿ ಕಲಿಪಾರ್ಥ ॥
ಕರೆವರಿದನೇ ಭಕ್ತಿ ಯೆನುತಲಿ ।
ಪರಮ ಶೈವರು ಜ್ಞಾನಯುತರಿದ ।
ಕರೆವರೈ ಕೇಳ್ ಸಾತ್ವಜ್ಞಾನವೆನುತ್ತ ಲೋಕದಲಿ ॥ ೭೧೭ ॥

ಪರಮ ಭಕ್ತಿ ಯೆನುತ್ತ ನಾನಿದ ।
ಕರೆವೆನೈ ಕೇಳ್ ಕರ್ಮಯೋಗಕೆ ।
ಬರುವುದೈ ಫಲವೆನ್ನೊಳೈಕ್ಯವ ಲಭಿಪ ಪೇಳಿಯಲಿ ॥

ಇರುವುದೀ ಜಗವೆನ್ನಯೋಗದಿ ।
ಭರಿತವೋತಪ್ರೋತವೆನುತಲಿ ।
ಯರಿವ ಮಾಡುವುದಲ್ಲವೇ ಕಲಿಪಾರ್ಥ ಜ್ಞಾನವಿದು ॥ ೭೧೮ ॥

ಹಾರುವುದು ವೈರಾಗ್ಯವೆಲ್ಲ ವಿ- ।
ಚಾರಸಹಿತವೆ ಬಂಧನೋಕ್ಷಗ- ।
ಳಾರಿ ಬೆಂಡಾಗುವುವು ಬ್ರಹ್ಮಾಕಾರ ಸಾಯುವುದು ॥
ಪಾರದಿದುವೆಯಪಾರವೆಂಜೀ- ।
ಚಾರುಭೇದವು ನಾಶವಪ್ಪುದು ।
ಚಾರುತರದೀ ಭಕ್ತಿಮಹಿಮೆಯಪಾರವಾಗಿಹುದು ॥ ೭೧೯ ॥

ನೆಲಜಲಾನಲವಾಯುಭೂತಂ- ।
ಗಳನು ಕೇಳಾಕಾಶ ವ್ಯಾಪಿಸಿ ।
ಯುಳಿವುದಲ್ಲಿ ಶೇಷಗೀಪರಿ ಭಕ್ತಿಯುಳಿಯುವುದು ॥
ಕಳೆವ ಸಾಧನ ಸಾಧ್ಯಸಾಧಕ- ।
ರುಳಿಯಲಾರದು ಛೇದ್ರತ್ರಿಪುಟಿಯು ।
ತಿಳಿಯಲಾರದು ಆದಿಮಧ್ಯಾಂತಗಳನಾ ಭಕ್ತಿ ॥ ೭೨೦ ॥

ಹೊರೆಯಲಿನ್ನಯ ಶುದ್ಧರೂಪವ- ।
ನರಿತುಯೆನ್ನೊಳಗೈಕ್ಯಭಾವವ ।
ನಿರುತವೆನ್ನಯ ಭಜನ ಮಾಳ್ಪನು ಜ್ಞಾನಯೋಗದಲಿ ॥
ಶರಧಿಸಂಗಮವಾದನಂತರ ।
ಮರೆವಳೈ ನಿಜರೂಪ ಗಂಗೆಯು ।
ದೊರೆಯಲೈಕ್ಯವು ಯೆನ್ನೊಳೀಪರಿ ಭಕ್ತರಾಗುವರು ॥೭೨೧॥

ಎರಡು ಕನ್ನಡಿಗಳನು ಶುದ್ಧೀ- ।
ಕರಿಸುತೊಂದಕ್ಕೊಂದು ಸಂಮುಖ ।
ನಿರಿಸಲವು ತಂತಮ್ಮ ದರ್ಶನಕೊಳ್ಳವುವು ತಿಳಿಯೆ ॥
ದೊರೆಯಲೆನ್ನೊಳಗೈಕ್ಯನೀಪರಿ ।
ನರನೆ ಭಕ್ತನು ಯೆನ್ನ ನೋಡುತ ।
ಪರಮ ಹರ್ಷದಿ ತೇಲುತಿಹನೈ ಕನ್ನಡಿಯ ತೆರದಿ ॥ ೭೨೨ ॥

ಕನ್ನಡಿಯ ಬದಿಗಾಗಿ ಸಾರಿಸೆ ।
ತನ್ನ ಬಿಂಬವು ಲೋಪವಾಗಲು ।
ಮುನ್ನ ತನ್ನೊಳು ತಾನೆ ಬಿಂಬಾಕೃತಿಯ ನೋಡುತಲಿ ॥
ಸನ್ನುತಾಂತಃಕರಣನಾಗಿ ಪ್ರ- ।
ಸನ್ನತೆಯಲಾ ಬಿಂಬ ರಂಜಿಪು- ।
ದೆನ್ನುತಲಿ ಯೋಚಿಸುವನಲ್ಲದೆ ಭಕ್ತನೀ ತೆರದಿ ॥ ೭೨೩ ॥

ನಿದ್ದೆಯಿಂದೆಚ್ಚರಿಕೆಯಾಗಲು ।
ಬಿದ್ದು ಹೋಗಲು ಸ್ವಪ್ನಭಾವವು ।
ಶುದ್ಧನ್ವಾತ್ಮಸ್ವರೂಪ ಮನದೊಳು ಬರುವದಿಲ್ಲೀನು ॥
ಸದ್ದ ಮಾಡದೆ ದ್ವೈತಭಾವವು ।
ಬಿಟ್ಟು ಹೋಗುವದಾತ್ಮಜ್ಞಾನಿಗೆ ।
ನಿದ್ದೆಯೆಂಬಜ್ಞಾನ ಹರಿವುದು ಕೇಳು ಕಲಿಪಾರ್ಥ ॥ ೭೨೪ ॥

ನರನೆ ನೋಡೀತೆರದಿ ಪೇಳಲು ।
ಬರುವುದೇ ದುಃಶಂಕೆ ಮನದ- ।
ಲ್ಲಿರುವುದೇ ಧರಣಿಯಲಿ ಶಕ್ಯವು ಪೇಳ್ದ ಸಂಗತಿಯು ॥
ದೊರೆಯಬೈಕ್ಯವು ತನಗೆ ಭೋಗಿಪ ।
ವರಿಯದಾವುದು ಕಾಣೆಯೆಂಬರು ।
ನರರು ಶಂಕಾವಾದದಿಂದಲಿ ತುಚ್ಛಿಸುವರಿದನು ॥ ೭೨೫ ॥

ನರನೆ ನೋಡೈ ಶಬ್ದ ಶಬ್ದೋ- ।
ಚ್ಚರಣೆ ಮಾಳ್ಪುದ ನೋಡಿ ಬಲ್ಲೆಯೊ ।
ಅರಿಯಲಾರೆನು ಶಂಕೆಯೆಂಬೂರಿನ ಪರಿಸ್ಥಿತಿಯ ॥

ತರಣಿಗವರಾ ದೀಪದಿಂದಲಿ ।
ಪರಿಚಯವ ಮಾಡಿಸುವರೇ ಜಗ- ।
ಕೆರದೆ ಯೆಂಬೀ ತೆರದ ಸ್ಥಿತಿಯಿರೆ ತಿಳಿಯದೆನಗದುವೆ ॥ ೭೨೬ ॥

ಇರುವುದೇ ವಹಿವಾಟವಲ್ಲಿಯ ।
ಮೆರೆವ ಗಗನಕೆ ಹಾಕುವರೆ ಚ- ।
ಪ್ಪರವ ತಿಳಿಯೆನು ಪಾರ್ಥ ನಿನಗರವಿದೆಯೊ ಪದ್ಧತಿಯ ॥
ಅರಸನಲ್ಲದ ಬಣಗುಮನುಜನಿ- ।
ಗರಸುತನದ ಸುಭೋಗ ತಿಳಿವುದೆ ।
ತರಣಿಯಾಲಿಂಗನವ ಕೊಡುವನೆ ಯಂಧಕಾರಕ್ಕೆ ॥ ೭೨೭ ॥

ಕೊಳದೆ ಕೇಳಾಕಾಶರೂಪವ ।
ತಿಳಿವುದೇನಾಕಾಶಮಹತಿಯು ।
ತುಲನೆಯೇ ಗುಂಜಾಭರಣ ರತ್ನಾಭರಣದೊಡನೆ ॥
ಕೊಳದೆ ಮದ್ಭಾಪವ ಧನಂಜಯ ।
ತಿಳಿಯಲಾರರು ಯೆನ್ನ ವ್ಯಾಪ್ತಿಯ ।
ಬಳಿಕ ನನ್ನನು ಭಜಿಪರೆಂಬುದನೆಂತು ಹೇಳುವುದು ।। ೭೨೮ ॥

ಬರುವುದೇ ತಾರುಣ್ಯದನುಭವ।
ತರುಣನಾಗದ ಹೊರತು ಜಗದಲಿ ।
ಬರುವುದೈ ಮದ್ಭಾಪ ನರನಿಗೆ ಕರ್ಮಯೋಗದಲಿ ।'
ಬರುವುದನುಭವವಾಗಲಾತನೆ ।
ತೆರೆಗಳೆಲ್ಲವು ನೋಡು ಸುತ್ತಲು ।
ತಿರಿತಿರಿಗಿ ಸೇವಿಸುವುವಲ್ಲವೆ ನೀರನೇ ಪಾರ್ಥ ॥ ೭೨೯ ॥

ತೋರುತಿಹ ದಿವ್ಯಪ್ರಕಾಶವು ।
ಸೂರಿಯನ ಬಿಂಬದಲಿ ಸಂತತ ।
ಸೇರಿಹುದು ಪೋಕಳೆಯು ರಂಜಿಸುತಿಹುದು ಗಗನದಲಿ ॥
ಧಾರುಣಿಯಲಿ ಸ್ವರೂಪವೆನ್ನಯ ।
ಸೇರಿ ನಿಷ್ಕ್ರಿಯನಾಗಿ ಭಕ್ತನು ।
ಚಾರುತರದಲಿ ಭಜಿಪನೆನ್ನನೆ ನೋಡು ಕೌಂತೇಯ ॥ ೭೩೦ ॥

ಚಂದನದ ಸೌಗಂಧವೆಲ್ಲವೆ ।
ಚಂದನವೆ ಸೇವಿಸುವುದಲ್ಲವೆ ।
ಚಂದಿರನ ಪ್ರಭೆ ಚಂದ್ರನೊಡನೆಯೆ ರಂಜಿಸುವದಲ್ಲೈ ॥
ಸಂದು ಹೋಗಲು ದ್ವೈತಭಾವವು ।
ಯೆಂದು ಭಕ್ತಿಯು ಸಾಧ್ಯವಿಹುದೈ ।
ಯೆಂದು ಕೇಳಲು ಸಾಧ್ಯವೆನುತಲಿ ನಾನು ಪೇಳುವೆನು ।' ೭೩೧ ॥

ದ್ವೈತ ಹೋಗಲು ಭಕ್ತ ಕರ್ಮಾ- ।
ತೀತನಪ್ಪನು ಸಹಜ ವೋತ- ।
ಪ್ರೋತ ತುಂಬಿಹುದಲ್ಲಿ ಭಕ್ತಿಯು ಕೇಳು ಕಲಿವಾರ್ಥ ॥
ಮಾತಿನಲಿ ವಿವರಿಸಲಶಕ್ಯವು ।
ಭೂತಳದೊಳನುಭವಕೆ ಸಾಧ್ಯವು ।
ಈ ತೆರದ ದಿವ್ಯಾನುಭವವೈ ಸಾಧ್ಯಸಾಧಕಗೆ ॥ ೭೩೨ ॥

ನರಗೆ ನೋಡೀ ತೆರದ ಯೋಗ್ಯತೆ ।
ಬರಲು ಬೇಕೈ ಪೂರ್ವಸಂಚಿತ ।
ಕರೆಯಿಲಿವ ನಾನೋಡಿ ಬರುವೆನು ಓ ಯೆನುತ ಮುದದಿ ॥
ಕರೆವವನು ನಾನಿಹೆನು ನಿಜವಿದು ।
ಕರೆಸಿಕೊಳ್ಳುವನಾರು ಯೆನ್ನಯ ।
ಹೊರತು ನಾದರ್ಶನವನೀವೆನು ಮಾತುಮಾತಿನಲಿ ॥ ೭೩೩ ॥

ಹಿಂದಿನಂದದೊಳವನು ಯೆನಗಾ- ।
ನಂದದಿಂದಲಿ ಕರೆಯಲಾರನು ।
ಹಿಂದಿನಂದದಿ ಮಾತನಾಡಲು ಬಾರದಾತನಿಗೆ ॥
ಬಂದರೀಪರಿಯೋಗ್ಯತೆಯು ನರ- ।
ಗಂದು ಮೌನನೆ ದಿವ್ಯಸ್ತುತಿಯದು ।
ಬಂದು ಮುಟ್ಟುವುದೆನಗೆ ಮೌನದಿ ಮಾಡಿದಾ ಸ್ತುತಿಯು
॥ ೭೩೪ ॥

ನರನೆ ಬುದ್ಧಿಯು ತಿಳಿವ ವಸ್ತುವು ।
ತಿರಿಗಿ ಸೃಷ್ಟಿಯು ನೋಳ್ಪ ವಸ್ತುವು ।
ಅರಿಯಲಾ ತಿಳಿಯುವುದು ನೋಳ್ಪುದು ಕ್ರಿಯೆಯು ಮುಗಿ
ಪರಿಕಿಸಲು ತಾವೆಲ್ಲಿ ವಸ್ತುಗ- । [ಯುವುದು ॥
ಳಿರದೆ ಸರಿಯುತ ಬದಿಗೆ ಪಾರ್ಥನೆ ।
ಬರುವನೈ ಮುಂದಕ್ಕೆ ತಿಳಿವವ ನೋಳ್ಪ ಸಾಧಕನು ॥೭೩೫॥

ಬೆಳಗುತಿಹ ಕನ್ನಡಿಯ ನೋಡಿದ- ।
ಬಳಿಕ ಮುಖವದು ನೋಳ್ಪುದಲ್ಲವೆ ।
ತಿಳಿಯಲಾ ಮುಖನೋಳ್ಪುದದ ಕನ್ನಡಿಯು ನೋಡದಲಾ ॥
ಕಲಿಧನಂಜಯ ಯಿಂತೆರದೋಳೀ ।
ಯಿಳೆಯೊಳಗೆ ಸುಜ್ಞಾನವಾಗಲು ।
ತಿಳಿಯಲಾ ತೋರುವನು ಮುಂದಕೆ ನೋಳ್ಪ ಸಾಧಕನೆ
॥ ೭೩೬ ॥

ನೋಡುತಿರುವ ಪದಾರ್ಥಲೋಪದಿ ।
ನೋಡುವವನೇ ನೋಳ್ಪರೂಪದೊ- ।
ಳೋಡಿ ತಾನೈಕ್ಯವನು ಪಡೆವನು ಬರುವುದೈಕ್ಯನಲಾ ॥

ಗಾಢನಿಹುದೀ ಯೈಕ್ಯವದರಿಂ ।
ನೋಡುತಿಹ ಕ್ರಿಯೆ ಲೋಪವಾಗುವು-
ದಾಡಲೇನದ ನೋಳ್ಪ ಧರ್ಮವೆ ತಾನೆ ಸಾಯುವುದು ॥ ೭೩೭ ॥

ತರುಣಿಯನು ಸ್ವಪ್ನದಲಿ ನೋಡಲು ।
ಮರೆತು ಸ್ವಪ್ನವ ಜಾಗರಣೆಯಲಿ ।
ಹರುಷದಿಂದಾ ತರುಣಿಗಾಲಿಂಗನವ ಕೊಡಲವನು ॥
ಪುರುಷನಾಲಿಂಗನವ ಕೊಡುವವ ।
ತರುಣಿಯಾಲಿಂಗನವ ಕೊಳುವವ- ।
ಳಿರುವರೇ ತಾವೆರಡು ವ್ಯಕ್ತಿಗಳರುಹು ಕೌಂತೇಯ ॥ ೭೩೮ ॥

ಎರಡು ಕಾಷ್ಠಂಗಳಿಗೆ ಘರ್ಷಣ ।
ಬರಲು ಸಂಜನಿಸುವುದು ಬೆಂಕಿಯು ।
ಯೆರಡು ಕಾಷ್ಠಂಗಳನು ಭಕ್ಷಿಸುತೊಂದೆಯಾಗುವುದು ॥
ತರಣಿಬಿಂಬವ ನೋಡಿ ಜಲದೊಳ- ।
ಗಿರುವುದನು ತಾನೆತ್ತತೆತ್ತಿ ಸೆ ।
ಕರವ ಪಸರಿಸೆ ಲೋಪವನು ತಾಳುವುದು ಬಿಂಬವದು ॥ ೭೩೯ ॥

ನರನು ಯೆನ್ನಯ ರೂಪನಾಗುತ ।
ಮರಳಿ ದೃಶ್ಯವ ನೋಡಲೆತ್ತಿ ಸೆ ।
ಹರಣವಪ್ಪುದು ದೃಶ್ಯರೂಪವು ನಾನೆ ಕಾಣುವೆನು ॥
ನರನೆ ಮೇಲಿನ್ನೇನ ಹೇಳಲಿ ।
ಧರೆಯಲಾ ದೃಷ್ಟತ್ವವೆಲ್ಲವು ।
ಹರಣವಪ್ಪುದು ಭೇದಭಾವವು ಲೋಪವಾಗುವುದು ॥ ೭೪೦ ॥

ತರಣಿಯಾ ತಿಮಿರವ ಪ್ರಕಾಶಿಸೆ ।
ಬರಲು ನೋಡು ಪ್ರಕಾಶ್ಯ ತಿಮಿರವು ।
ಹರಿಯಿತಾದರೆ ರವಿಯು ಧರ್ಮ ಪ್ರಕಾಶವುಳಿಯುವುದೆ ॥
ನರನೆ ನೋಡೈ ದೃಶ್ಯ ನಾನಾ- ।
ಗಿರಲು ದೃಶ್ಯವು ಭಿನ್ನರೂಪವೆ ।
ಯಿರುವನೆಂತಾ ನೋಳ್ಪ ದೃಷ್ಟನು ಲುಪ್ತನಾಗುವನು ॥ ೭೪೧ ॥

ನೋಡ್ವ ನೋಡದ ಸ್ಥಿತಿಗಳೆರಡೀ ।
ರೂಢಿಯಲ್ಲೊಂದಾಗಲಾಕ್ಷಣ ।
ಮೂಡವುದು ಮದ್ರೂಪ ದ್ವಂದ್ವಾತೀತ ಕಲಿವಾರ್ಥ ॥
ನೋಡಲವ ಬೇಕಾದ ವಸ್ತುವ ।
ಮೂಡುವುದು ಮದ್ದರ್ಶನವಲಾ ।
ನೋಡಿ ಹೋಗುವ್ತದೆಲ್ಲ ದೃಷ್ಟಾದೃಷ್ಟ ಭೇದವದು ॥ ೭೪೨ ॥

ಏನ ಹೇಳಲಿ ವಾರ್ಥ ದ್ವಂದ್ವವಿ ।
ಹೀನ ದ್ವಂದ್ವಾತೀತ ದೃಷ್ಟಿಯು ।
ತಾನೆ ಸಂಭೋಗಿಸುವುದೈ ನಿಜವೆನ್ನ ದರ್ಶನವ ॥
ಬಾನಿಹುದು ಸರ್ವತ್ರ ವ್ಯಾಪಕ ।
ತಾನು ಚಲಿಸದು ನಿಶ್ಚಲವಲಾ ।
ನಾನು ನೋಡಾತೆರದೊಳಿಹೆನಾತ್ಮಸ್ವರೂಪದಲಿ ॥ ೭೪೩ ॥

ನರನೆ ಕಲ್ಪಾಂತದಲಿ ಜಲಮಯ ।
ವಿರುವುದೆಲ್ಲಾ ವಿಶ್ವಪೂರ್ಣವು ।
ಹರಿಯುತಿಹುದೇ ನೀರು ನಿಶ್ಚಲವಾಗಿ ನಿಲ್ಲುವುದು ॥
ಪರಿಯೊಳಾತ್ಮಸ್ವರೂಪದಿಂದಲೆ ।
ಭರಿತನಾಗಿಹೆ ವಿಶ್ವದಲಿ ನಾ ।
ನಿರುವುದೆಂತೈ ದ್ವೈತವಾಗಲು ನೋಡು ಕೌಂತೇಯ ॥೭೪೪॥

ಕಾಲು ಕಾಲೇರುವುದೆ ವಾರ್ಥನೆ ।
ಜ್ವಾಲೆ ಜ್ವಾಲೆಯ ಸುಡುವುದೇ ವಿ ।
ತ್ಥೇಳು ನೀರೊಳು ನೀರು ಮಾಳ್ಪುದೆ ಸ್ನಾನ ನೋಡಿದಿಯಾ ॥
ಮೇಲೆ ಕೆಳಗೈ ಸುತ್ತುಮುತ್ತುವಿ ।
ಶಾಲತನದಿಂ ವ್ಯಾಪಿಸಿಹೆ ನಾ ।
ಹೇಳು ಹೋಗುವುದೆಲ್ಲಿ ಬರುವ್ವದು ಯೆಲ್ಲಿ ಹೇಳೆನಗೆ ॥೭೪೫॥

ಇರುವೆನದ್ವಯ ನಾನು ವಾರ್ಥನೆ ।
ಯರಿಯಲಾ ಪರಮಾತ್ಮ ನಾನೇ ।
ಬರುವುದಾತನ ಕೃತಿಯವಶದಿಂ ಯಾಕ್ರೆಯಾ ಫಲವು ॥
ಶರಧಿಯೊಳಗಿನ ನೀರು ಭರದಲಿ ।
ತೆರೆಯ ರೂಪದಿ ಸಂಚರಿಸಿದರು ।
ಧರೆಯನೆಲ್ಲವನಾಕ್ರಮಿಸುವುದೆ ನೋಡು ಕೌಂತೇಯ
॥ ೭೪೬ ॥

ತ್ಯಾಗ ಮಾಳ್ಪ ಸ್ಥಳವು ನೀರದು ।
ಹೋಗುತಿಹ ಸ್ಥಳವಿಹುದು ನೀರೇ ।
ಹೋಗುತಿಹ ಕಾಲ್ ಹೋಗುತಿರುವುದು ನೀರೆ ನೋಡಿದಿಯಾ ॥
ಸಾಗಲಾರದು ನೀರಿನಾಟವು ।
ನೀಗಲಾರದು ಐಕ್ಯರೂಪವ ।
ಹೀಗೆ ಹೇಳಿದ ತತ್ತ್ವ ತಿಳಿಯೈ ಕಲಿಧನಂಜಯನೆ ॥ ೭೪೭ ॥

ಎನ್ನ ರೂಪದೊಳೈಕ್ಯವಾಗಲು ।
ಭಿನ್ನನಿಹೆ ನಾನೆಂಬ ಭಾವೋ ।
ತ್ಪನ್ನವಾಗಲು ಯೆನ್ನ ಬಿಟ್ಟಸ್ಥರನು ಸೇರುವನೆ ॥

ಪೂರ್ಣನಿರೆ ಮದ್ರೂಪ ಸಾಧಕ ।
ನೆನ್ನ ಯಾತ್ರೆಯ ಮಾಳ್ಪನಲ್ಲವೆ ।
ಚೆನ್ನಗೀತತ್ತ್ವವನು ತಿಳಿಯೈ ಯೆನ್ನ ಯಾತ್ರಿಕನು ॥ ೭೪೮ ॥

ತಾನು ದೇಹಸ್ವಭಾವದಿಂದಲೆ ।
ಯೇನ ಮಾಡಿದರೇನು ಕರ್ಮವ ।
ನಾನೆ ದರ್ಶನವೀವೆ ಕರ್ಮಾಧೀನ ನಾನಾಗಿ ॥
ಕ್ಷೋಣಿಯಲ್ಲೀ ಕರ್ತೃಕರ್ಮದ ।
ಹಾನಿಯಾಗಲು ಭೇದವಾಕ್ಷಣ ।
ಜ್ಞಾನಿಗಳು ಮದ್ರೂಪರಪ್ಪರು ದ್ವೈತ ಮುರಿಯುವರು ॥೭೪೯॥

ಕನ್ನಡಿಯೆ ಕನ್ನಡಿಯು ನೋಡಿದ ।
ರೆನ್ನಲಾಗದು ನೋಡುವಿಕೆ ಯಿದು ।
ಚಿನ್ನದಿಂ ಚಿನ್ನವನು ಮಡಗಿಸಲಾಂತ್ಕೆ ಭೂಷಣವು ॥
ಮುನ್ನ ದೀಪಜ್ಯೋತಿ ದೀಪಗ ।
ಳನ್ನು ಹಚ್ಚಿದರೇನು ತೇಜವ ।
ಭಿನ್ನವಿಹುದೇ ತೇಜವೊಂದೇಯಾಗಿ ರಂಜಿಪುದು ॥ ೭೫೦ ॥

ಎನ್ನ ರೂಪದಲೈಕ್ಯವಾಗಿಹ ।
ಸನ್ನುತಾತ್ಮನು ಕರ್ಮ ಮಾಡಲು ।
ಯೆನ್ನುವರೆ ಮೇಣದಕೆ ಕರ್ಮವಿದೆಂದು ಕೋವಿದರು ॥
ಛಿನ್ನ ಕರ್ತೃತ್ವಾಭಿಮಾನದಿ ।
ಭಿನ್ನ ಭಾವವು ಪೋಯ್ತು ಜಗದಲಿ ।
ಮುನ್ನ ಕರ್ಮವ ಮಾಡಿ ಮಾಡದಲಿರಲು ಸ್ಥಿತಿಯೊಂದೆ ॥೭೫೧॥

ಇರುವುವಗಾತ್ಮಸ್ವರೂಪದ ।
ತೆರದಿ ಸರ್ವಕ್ರಿಯೆಗಳೊಂದೇ ।
ಬರುವುದದಕೀ ಹೆಸರು ಅಕ್ರಿಯವೆಂದು ಲೋಕದಲಿ ॥
ಇರುವುದದುವೇ ಯೆನ್ನ ಪೂಜೆಯು ।
ಗುರುತು ಕೇಳು ಕಪಿಧ್ವಜನೆ ನಿನ ।
ಗೊರೆವೆನೆಂತೀ ಕರ್ಮ ಬರುವುದು ಯೆನ್ನ ಭಾಗಕ್ಕೆ ॥ ೭೫೨ ॥

ಚರಿಪನ್ಯೆ ಕ್ರಿಯೆಗಳ ಯಥಾವಿಧಿ ।
ಯರಿಯನ್ಯೆ ಕರ್ಮಾಭಿಮಾನವ ।
ಬರುವುದು ಮಹಾಪೂಜೆಯೆನಗದು ಸ್ವೀಕರಿಪೆನದನು ॥
ಇರುವುದಾತನ ಸುಡಿಗಳೇ ಸ್ತುತಿ ।
ಯಿರುವುದಾತನ ನೋಟವೆಲ್ಲವು ।
ದರುಶನವು ಕೇಳೆನ್ನದೆಂದೇ ಭಾವಿಸೈ ಜಗದಿ ॥ ೭೫೩ ॥

ನಾನು ನೀನೆಂಬೆರಡು ಭಾವದಿ ।
ಹೀನನಾಗುವನವನು ಚಲಿಸಲು ।
ಪೂರ್ಣಯಾತ್ರಾಸ್ಥಲವು ಬರುವುದು ಹೆಜ್ಜೆಹೆಜ್ಜೆಯಲಿ ॥
ಏನ ಹೇಳಲಿ ಪಾರ್ಥ ಅವನಿ- ।
ನ್ನೇನ ಮಾಡಿದರಾಯ್ತು ಪೂಜೆಯು ।
ಮಾನಸದ ಕಲ್ಪನೆಯೆ ಜಪವಾಗುವುದು ಮತ್ತೇನು ॥೭೫೪॥

ಇರುವನಾವಸ್ಥಿತಿಯಲಾತನು ।
ಕರೆವರದನೆ ಸಮಾಧಿ ಯೆನುತಲಿ ।
ಮೆರೆವುದಾತನ ಭಕ್ತಿಯೋಗವು ತಾಳ್ದನೈಕ್ಯವನು ॥
ಇರದು ಭೇದವು ಚಿನ್ನಕಂಕಣ ।
ವೆರಡರಲಿ ಕೌಂತೇಯ ಕೇಳೈ ।
ತೆರೆಗಳಲಿ ನೀರಿನಲಿ ಭೇದವದೇನು ಕಲಿಪಾರ್ಥ ॥ ೭೫೫ ॥

ಪರಿಮಳವು ಕರ್ಪೂರದೊಳಿರುವುದು ।
ಮೆರೆವ ತೇಜವು ರತ್ನದೊಳಗ್ಹೆ ।
ಯಿರುವುದಾ ಪಟದಲ್ಲಿ ತಂತುವು ಘಟದಿ ವ್ಯಕ್ತಿಕೆಯು ॥
ನರನೆ ನೋಡಿವುಗಳನು ಭೇದಿಪ- ।
ರಿರುವರೇ ಪಂಡಿತರು ಜಗದಲಿ ।
ಪರಿಕಿಸಲು ಭಕ್ತನಲಿ ನಾನೀತೆರದಲಿಹೆನಲ್ಲೈ ॥ ೭೫೬ ॥

ನರನೆ ಭಕ್ತಿಯಿದೇಕನಿಷ್ಠವು ।
ಬರುವುದೈ ಭಕ್ತಿಸ್ವಭಾವದ- ।
ಲಿರವು ಯೆನ್ನದು ದೃಶ್ಯರೂಪದಲಾತ್ಮದ್ರಷ್ಟನಿಗೆ ॥
ಮೆರೆವ ಸ್ವಪ್ನಸುಷುಪ್ತಿಜಾಗೃತಿ ।
ತೆರೆಗಳೀ ಮೂರಿಹುವು ಕಾರಣ ।
ಬರುವುದೈ ಸಂಪರ್ಕನಿವಕಾ ದೇಹದೇಹಿಯೊಳು ॥ ೭೫೭ ॥

ನರನೆ ವ್ಯಕ್ತಾವ್ಯಕ್ತವೆಂಬುವ- ।
ವೆರಡವಸ್ಥೆಗಳುದ್ಭವಿಸುವುವು ।
ಬರುವುವೈ ಸರ್ವತ್ರವಿಶ್ವಕೆ ದೃಶ್ಯ ಜಗಕೆಲ್ಲ ॥
ಸ್ಫುರಣವೀಪರಿ ಬರಲು ಪಾರ್ಥನೆ ।
ಮೆರೆವ ದೃಶ್ಯಸಮಸ್ತವಿಶ್ವದೊ- ।
ಳಿರುವೆ ನಾನೇ ಯೆನುತ ಜ್ಞೋಧಾಮೃತವು ದೊರೆಯುವುದು
॥೭೫೮॥

ಜ್ಞೋರಿನಿಂದೀ ಜ್ಞೋಧರಥದಲಿ ।
ಹಾರುವುದು ನೋಡನುಭವಧ್ವಜ ।
ತೋರಲಾ ದೋರಕದರೂಪದಿ ಸರ್ವದಾಭಾಸ ॥

ದೋರಕದೊಳಾಭಾಸ ಹಾರಲು ।
ದೋರಕವೆ ಗೋಚರಿಪುದಲ್ಲವೆ ।
ಬಾರಲಾರದು ಮನದಿ ಕಲ್ಪನೆ ಸರ್ವವೆಂಬುದದು ॥ ೭೫೯ ॥

ಇರುವುದೇನಾಭರಣ ಚಿನ್ನದ ।
ಹೊರತು ನೋಡು ರವಷ್ಟು ಆದರು ।
ಧರಿಸಲೀ ನಿರ್ಧಾರವಾಭರಣಗಳು ಕರಗುವುವು ॥
ಇರಲು ಸ್ವಪ್ನಾವಸ್ಥೆ ಜಗದಲಿ ।
ಬರುವುದೆಲ್ಲ ವಿಕಾರ ಜಾಗೃತಿ ।
ಬರಲು ತಾಂ ಹೊರತಿಲ್ಲ ಸ್ವಪ್ನದೊಳರ್ಥವೆನ್ನುವನು ॥ ೭೬೦ ॥

ನೀರಿನಲಿ ಸಂಚರಿಪ ತೆರೆಗಳು ।
ನೀರಿನಿಂ ವ್ಯತಿರಿಕ್ತವಿಲ್ಲ ವಿ- ।
ಚಾರ ಬರಲಿದು ಮನದಿ ತೆರೆಯಾಕೃತಿಗೆ ಮರುಳಹನೆ ॥
ಧಾರುಣಿಯಲೀ ದೃಶ್ಯರೂಪವು ।
ತೋರಲಥವಾ ತೋರದಿರಲಿ ವಿ- ।
ಚಾರವೊಂದೇ ನಾನು ವಿಶ್ವದೊಳೆಲ್ಲ ತುಂಬಿಹೆನು ॥ ೭೬೧ ॥

ಇರುವೆ ನಾನಜನಜರನಕ್ಷಯ- ।
ನಿರುವೆನಕ್ಷರ ನಾನಪೂರ್ವನು ।
ಮೆರೆವ ನಿತ್ಯಾನಂದಮೂರುತಿ ನಾನಪಾರನಲಾ ॥
ಇರುವೆನ್ನೆ ನಾನಚಲನಚ್ಯುತ- ।
ನಿರುವೆನ್ನೆ ನಾನಂತರಹಿತನು ।
ನರನೆ ನೋಡ್ದೆ ದ್ವೈತವಿರಹಿತನಾದ್ಯನಾಗಿಹೆನು ॥ ೭೬೨ ॥

ಇರುವೆ ವ್ಯಕ್ತಾವ್ಯಕ್ತನೀಶ್ಯನು ।
ಯಿರುವೆನೀಶ್ವರನಮರನಭಯನು ।
ಯಿರುವೆ ನಾನಾಧಾರ ನಾ ಧೇಯನು ಸತತ ಸಹಜ ॥
ಇರುವೆ ನಾನು ಅನಾದಿಮೂರುತಿ ।
ಯಿರುವೆ ಸ್ವಾಮಿ ಸದೋದಿತನು ನಾ- ।
ನಿರುವೆ ಸರ್ವಾತೀತ ಸರ್ವನು ಸರ್ವಗತ ನಾನು ॥ ೭೬೩ ॥

ನಾ ನವೀನ ಪುರಾಣನಿರುವೆನು ।
ಶೂನ್ಯನಿಹೆ ಸಂಪೂರ್ಣನಿಹೆ ನಾ ।
ನಾನು ಸೂಕ್ಷ್ಮಸ್ಥೂಲನಿಹೆ ನಾ ರೇಣುರೂಪನಲಾ ॥
ನಾನಿರುವೆ ಮೇಣೇಕನಕ್ರಿಯ ।
ನಾನು ವ್ಯಾಪ್ಯನು ವ್ಯಾಪಕನು ಮೇಣ್ ।
ನಾನಸಂಗನಶೋಕ ಪುರುಷೋತ್ತಮನು ನಾನಿಹೆನು ॥ ೭೬೪ ॥

ನಾನಶಬ್ದನು ಶ್ರೋತ್ರರಹಿತನು ।
ನಾನರೂಪನಗೋತ್ರ ಸಮನಾ ।
ನಾನು ರಂಜಿಸುತಿಹೆ ಸ್ವತಂತ್ರನು ನಾ ಪರಬ್ರಹ್ಮ ॥
ನಾನು ಸ್ವಾತ್ಮಸ್ವರೂಪದೈಕ್ಯವ ।
ನಾನುರಾಗದೊಳನುಭವಿಸುತೀ- ।
ಜ್ಞಾನಭಕ್ತಿಯೊಳೆನ್ನನೇ ಭಜಿಸುವನು ಸಾಧಕನು । ೭೭೫ ॥

ಬರಲು ಜಾಗೃತಿ ತನ್ನ ರೂಪದ ।
ಅರವು ತನಗಾಗುವುದು ನೋಡೈ ।
ತರಣಿ ನಿಜದಿ ಪ್ರಕಾಶರೂಪನು ಮೇಣ್ ಪ್ರಕಾಶಕನು ॥
ಲಿರವರಾರೀ ಭೇದವಿದರ ।
ಲ್ಲಿರುವುದಿಲ್ಲ ಪ್ರಕಾಶ್ಯ ಮೇಣಾ ।
ವರಪ್ರಕಾಶಕನಲ್ಲಿ ಯೆಂಬುದ ಕೇಳು ಕೌಂತೇಯ ॥ ೭೭೬ ॥

ತಿಳಿಯಲರ್ಹವೆನಿಪ್ಪ ವಸ್ತುವೆ ।
ಯಳೆದನಂತರ ತಿಳಿವನೊರ್ವನೆ ।
ಯುಳಿವನಲ್ಲೆ ಲ್ಯಯವನು ನಾನೇ ಯೆನುತ ತಿಳಿಯುವುದು ॥
ಉಳಿದ ಭೇದವ ತಿಳಿಸಿ ಕೊಡುತಿಹ ।
ಕಲೆಯು ನೋಡೈ ಜ್ಞಾನಕಲೆಯದು ।
ತಿಳಿಯೆ ಪರಮೇಶ್ವರನ ರೂಪವೆನುತ್ತ ತಿಳಿಯುವುದು ॥೭೭೭॥

ದ್ವೈತ ಮೇಣದ್ವೈತವೆರಡಕ- ।
ತೀತನಾಗಿಹನಾತ್ಮ ನಾನೇ ।
ಯಿತೆರದಿ ತಾಂ ತಿಳಿಯೆ ಜ್ಞಾನವೆ ಯಂಧವಾಗುವುದು ॥
ಭೂತಳದೊಳೀತೆರದಿ ನಿದ್ರಾ- ।
ತೀತವಾಗಿಯೆ ಬರಲು ಜಾಗೃತಿ ।
ಯಾತತುಕ್ಷಣ ಸ್ವಪ್ನಸ್ಥಿತಿಯದು ಮಾಯವಾಗುವುದು
॥ ೭೭೮ ॥

ಚಿನ್ನದೊಳಗಿಹ ಚಿನ್ನತನ ಕೇಳ್ ।
ಕನ್ನಡಿದುರು ಬರಲಾಕ್ಷಣವೆ ಮ- ।
ತ್ತಿನ್ನು ಚಿನ್ಮಾಭರಣ ಕರಗಿಸ ಬೇಕೆ ನೋಡುಪರೆ ॥
ಚಿನ್ನ ವೊಂದೇ ಯಿರುವುದೆನುತಲಿ ।
ಕಣ್ಣು ನೋಡುತ ಪರಿಕಿಸುವುದೈ ।
ಮುನ್ನ ನಾನೊಂದುಸುರುವೆನು ಕಲಿಪಾರ್ಥ ನೋಡಿದನು
॥ ೭೭೯ ॥

ನೀರೊಳುಪ್ಪನು ಹಾಕಿದರೆ ಯದು ।
ನೀರಿನಲಿ ತದ್ರೂಪವಪ್ಪುದು ।
ಖಾರತನವನು ತ್ಯಜಿಸಲಾರದು ನೀರುವುಪ್ಪಹುದು ॥

ಖಾರತನವದು ಹಾರಿ ಹೋಗಲು ।
ಹಾರಿ ಹೋಯ್ತುಪ್ಪೆಂಬುದದು ನಿಜ ।
ತೋರಿಸಿದೆನೀ ಸಾಮ್ಯವನು ಕೇಳ್ ಪಾರ್ಥ ಮನಗೊಟ್ಟು
॥ ೭೮೦ ॥

ನಾನು ಮೇಣವನೆಂಬ ಭೇದವು ।
ಹಾನಿಯಪ್ಪುದು ಕೇಳು ಪಾರ್ಥನೆ ।
ಪೂರ್ಣಸ್ವಾನಂದದ ಭರದಿ ಮದ್ರೂಪನಾಗುವನು ॥
ಭಾಸವಿರದವನಿಂಗೆ ಭೇದವಿ- ।
ಹೀನ ನಾನೀನೆಂಬಭಾವವಿ- ।
ಹೀನನಾಗಲು ನಾನೆ ತಾಳುವೈಕ್ಯವವನೊಳಗೆ ॥ ೭೮೧ ॥

ಸುಟ್ಟು ಹೋಗಲು ಕರ್ಪುರದ ವಡಿ ।
ನಷ್ಟವಾಗುವುದಗ್ನಿಯಾಕ್ಷಣ ।
ದೃಷ್ಟಿಗೋಚರವಿಲ್ಲ ಕರ್ಪೂರವಗ್ನಿ ಯೆರಡಾಗ ॥
ದಿಟ್ಟಿಸಲಕಾಕಾಶ ಮಾತ್ರವೆ ।
ಸುಟ್ಟ ಜಾಗೆಗೆ ಬಂದಿರುವುದೈ ।
ದೃಷ್ಟಿಸಿದೆಯೋ ಪಾರ್ಥ ನೀನೀ ತತ್ತ್ವ ಮನಗೊಟ್ಟು ॥ ೭೮೨ ॥

ಒಂದರಿಂದೊಂದನ್ನೆ ಕಳೆಯುಲು ।
ಬಂದಿರುವುದೈ ಶೂನ್ಯವಲ್ಲಿಯೆ ।
ಯೆಂದರೀಪರಿ ಯಿರುವೆನಿಲ್ಲೆಂಜಿದನು ನೀ ಕಳೆಯೆ ॥
ಸಂದುವೆರಡೀತತ್ತ್ವಗಳು ಮೇ- ।
ಲಂದ ಮೇಲೆಯೆ ನಾನಿಹೆನು ತಿಳಿ ।
ಯಿಂದು ನಾನಿನಗೊರೆವೆ ಪಾರ್ಥನೆ ತತ್ತ್ವಸಾರವನು ॥ ೭೮೩ ॥

ಈಶನಾತ್ಮನು ಬ್ರಹ್ಮನಿವರಿಂ- ।
ಗಾಶ್ರಯವೆ ಮೇಣಿಲ್ಲವಿದರಲಿ ।
ಭಾಷೆಯೇ ಸಾಕಾಗದೈ ವರ್ಣಿಸಲಿಕೀ ಸ್ಥಾನ ॥
ಭಾಷೆಯಿದು ಮಾತಾಡದಿದ್ದರು ।
ಭಾಷೆಯೇ ಮೌನದಲಿ ಬಹಳುಪ- ।
ದೇಶ ಮಾಡುವ ಪರಿಯಲಾ ಕಲಿಪಾರ್ಥ ನೋಡಿದನು ॥೭೮೪॥

ತೊರೆದು ಜ್ಞಾನಾಜ್ಞಾನವೆರಡನು ।
ಪರಿಯಿದಲ್ಲಾ ನೋಡು ಪಾರ್ಥನೆ ।
ಪರಿಕಿಸೈ ಯಾನಂದವಾನಂದವನೆ ಭೋಗಿಪುದು ॥
ಅರಿವ್ದೈ ಬೋಧದಲಿ ಬೋಧವ- ।
ನಿರದೆ ಸುಖವೇ ಸುಖವ ಭೋಗಿಸು- ।
ತಿರುವ ಸಂಗತಿ ವರ್ಣನಾತೀತವು ಕಣಾ ಪಾರ್ಥ ॥ ೭೮೫ ॥

ದೊರೆಯುವುದು ಲಾಭಕ್ಕೆ ಲಾಭವು ।
ಬರೆವುದೈ ಪ್ರಭೆ ಪ್ರಭೆಯ ತೆಕ್ಕೆಯೊ- ।
ಳರಿಯಲಾ ಆಶ್ಚರ್ಯವಾಶ್ಚರ್ಯದಲಿ ಮುಳುಗುವುದು ॥
ಬರುವುದೈ ವಿಶ್ರಾಂತಿ ಶಮಕದು ।
ಬರುವುದೈ ವಿಶ್ರಾಂತಿಯಲ್ಲಿಯೆ ।
ಧರಿಸುವುದು ಸಂಕೋಚವನುಭವನುಭವವ ನೋಡಿ । ೭೭೬॥

ನರನೆ ನಿನಗಿನ್ನೇನ ಹೇಳಲಿ ।
ಕರುಮ ಮಾರ್ಗವು ಬಳ್ಳಿ ಸುಮನೋ- ।
ಹರವು ಪಾಲಿಸಲದನು ಫಲ ಮದ್ರೂಪ ಬರುವುದಲಾ ॥
ಕರುಮಯೋಗನೃಪೇಂದ್ರಮಕುಟದ ।
ಪರಮರತ್ನವು ಜ್ಞಾನ ನಾನೇ ।
ಮೆರೆವುದೆನ್ನಯ ಮಕುಟದಲಿಯಾರತ್ನ ಪ್ರಭೆಯಿಂದ ।।೭೭೭॥

ಕರುಮಯೋಗದ ದೇಗುಲಕೆ ನೆರೆ ।
ಮೆರೆವ ಕಲಶವು ಮೋಕ್ಷರೂಪವು ।
ಇರುವನವಕಾಶಪ್ರಸಾರವು ನೋಡಿದನು ಪಾರ್ಥ ॥
ಬರುವನವ ಸಂಸಾರವನದಿಂ ।
ಪರಮ ಕರ್ಮದ ರಾಜಮಾರ್ಗದಿ ।
ದೊರೆವೆದವನೆನ್ನೈಕ್ಯರೂಪದ ನಗರ ಕಲಪಾರ್ಥ ॥ ೭೭೮ ॥

ನರನೆ ನಿನಗಿನ್ನೇನಹೇಳಲಿ ।
ಸುರನದಿಯಲಾ ಜ್ಞಾನಭಕ್ತಿಯು ।
ಹರಿವುದಲ್ಲೈ ಕರ್ಮಯೋಗೌಘದಲಿ ಕೌಂತೇಯ ॥
ಪರಮಸ್ವಾನಂದದ ಸಮುದ್ರವು ।
ಬೆರುವೆನೆಲ್ಲಾ ನಾನು ನನ್ನೊಳು ।
ಭರದಿ ಹರಿಯುತ ಬಂದು ಹೊಂದುವುದೆನ್ನೊಳೈಕ್ಯವನು
॥೭೭೯॥

ನರನೆ ನೀ ಚುರ್ಮಜ್ಜ ಕಾರಣ- ।
ವರುಹಿದೆನು ನಾ ಕರ್ಮಯೋಗದ ।
ಪರಮಮಹಿಮೆಯ ನಿನಗೆ ವಾರಂವಾರ ವಿಸ್ತರಿಸಿ ॥
ಇರುವೆ ನಾ ಸರ್ವಾತ್ಮರೂಪನು ।
ಬೆರುವೆನದರಿಂ ಪ್ರಾಪ್ತನೆಲ್ಲರಿ- ।
ಗರಿಯೆ ಕಾಲಪದಾರ್ಥದೇಶಕೆ ಸಾಧ್ಯ ನಾನಲ್ಲ ॥ ೭೮೦ ॥

ಎನ್ನ ಪ್ರಾಪ್ತಿಯನಿಚ್ಛಿಸುವ ಸತ್- ।
ಪುಣ್ಯ ಮಾನವರೆಸಗದಲೆ ಶ್ರಮ- ।
ವನ್ನು ಕರ್ಮೋಪಾಸನೆಯ ಮಾರ್ಗದಲಿ ನಡೆದಿರಲು ॥

ಭಿನ್ನ ಸಂಶಯರಾಗಿ ಸಹಜದಿ ।
ಬೆನ್ನ ಪ್ರಾಪ್ತಿಯು ದೊರೆಯುವುದಲಾ ।
ಭಿನ್ನಭಿನ್ನೋಪಾಯನೇತಕೆ ಶ್ರಮವು ಮೇಣ್ತೇಕೆ । ೭೮೧ ॥

ಇರುವುದಾ ಗುರುಶಿಷ್ಯಪದ್ಧತಿ ।
ಬರಿಯುಲೆನ್ನನು ಸುಲಭಮಾರ್ಗವು ।
ಮೆರೆವುದೀ ಸನ್ಮಾರ್ಗ ನೋಡಲನಾದಿ ಸಿದ್ಧವಲಾ ॥
ಇರುವುದೀಪರಿ ಸಿದ್ಧತತ್ತ್ವವು ।
ಧರಣಿಯೊಳಗಿನ ದ್ರವ್ಯ ಕಾಷ್ಠದೊ- ।
ಳಿರುವ ಬೆಂಕಿಯು ಕೆಚ್ಚಲೊಳಗಿನ ಹಾಲು ಕೌಂತೇಯ ॥ ೭೮೨ ॥

ತತ್ತ್ವವಿದ್ದರು ಸಿದ್ಧವದು ಸಂ- ।
ಪ್ರಾಪ್ತವಾಗಲುಪಾಯ ಬೇಕೈ ।
ಪಾರ್ಥ ನಾನಿಹೆ ಸ್ವತಹ ಸಿದ್ಧನು ಬೆಲ್ಲ ವಿಶ್ವದಲಿ ॥
ಪ್ರಾಪ್ತನಾಗಲಿಕಡ್ಡ ಬರುವ ಪ- ।
ದಾರ್ಥವೆಲ್ಲವ ದೂರ ಮಾಡೈ ।
ಸ್ವಸ್ಥಚಿತ್ತದಿ ಮಾಡುಪಾಯವ ಸಿದ್ಧಿಯಾಗುವುದು ॥ ೭೮೩ ॥

ಫಲದ ಪ್ರಾಪ್ತಿಯು ಬಂದನಂತರ- ।
ವುಳಿವುದೇ ಕಾರಣವುಪಾಯಕೆ ।
ನಳಿನನಾಭನು ಹೇಳ್ದನೇತಕುಪಾಯ ಪಾಪ್ತನಿಗೆ ॥
ಇಳೆಯೊಳೀತೆರ ಶಂಕೆಯನು ತೆಗೆ- ।
ಯಲು ಕಣಾ ನಾ ಪೇಳ್ವೆನುತ್ತರ ।
ತಿಳಿಯಲೀಪರಿ ಕೃಷ್ಣನುಡಿದನ ಗುಹ್ಯ ಪೇಳುವೆನು ॥ ೭೮೪ ।

ಇರುವುದೈ ಗೀತಾರ್ಥಮಹಿಮೆಯು ।
ಪರಮ ಮೋಕ್ಷದ ಸಾಧನವ ತಾಂ ।
ದೊರಕಿಸುವುದೈ ಮಹಿಮೆ ಚೆನ್ನಾಗಿಹುದು ನೋಡಿದರೆ ॥
ಎರಡನೆಯ ಶಾಸ್ತ್ರಗಳು ಮೋಕ್ಷದ ।
ಪರಮಸಾಧನವಲ್ಲ ಮೇಣವು ।
ಬಿರುವುವೈ ಶಾಸ್ತ್ರಗಳು ಕೇಳು ಪ್ರಮಾಣಸಿದ್ಧಗಳು ॥ ೭೮೫ ॥

ಗಾಳಿ ಸೂರ್ಯನಿಗಡ್ಡನಿಹ ಮೇ- ।
ಘಾಳಿಯನು ಹಾರಿಸುವುದಲ್ಲದೆ ।
ಗಾಳಿ ನಿರ್ಮಿಸಲಾರದೈ ಗಗನದಲಿ ಸೂರ್ಯನನು ॥
ಮೇಲಿರುವ ಕೇವಾಳತತಿಯನು ।
ಕೀಳುವುದು ಕೈ ನೀರ ಮಾಡದು ।
ಕೇಳೆದೆನು ನಾ ನಿನಗೆ ಪಾರ್ಥನೆ ತತ್ತ್ವ ವಿಸ್ತರಿಸಿ । ೭೮೬ ॥

ಇರುವುದೀಪರಿಯಾತ್ಮದರ್ಶನ- ।
ಕಿರುವುದೈಯಜ್ಞಾನಮಲವಿದ- ।
ಪರಿಪರಿಯ ಶಾಸ್ತ್ರಗಳು ನಿಜದಲಿ ದೂರ ಮಾಡುವುವು ॥
ಇರುವುದೇ ಶಾಸ್ತ್ರಗಳ ಶಕ್ತಿಯು ।
ವಿರಚಿಸಲಿಕೆನ್ನಾತ್ಮರೂಪವ- ।
ನಿರುವುದದು ನೋಡಾತ್ಮರೂಪವು ಸ್ವತಹ ಸಿದ್ಧವದು ॥೬೮೫॥

ಸತ್ಯವಿಹುದೇ ಶಾಸ್ತ್ರತತ್ವವೆ- ।
ನುತ್ತ ಪ್ರಶ್ನೆಯನನ್ಯ ಶಾಸ್ತ್ರಕೆ ।
ಸಕ್ತಿಯಿಂದಲಿ ಕೇಳಿದರೆ ಬೆದರುವುವು ಭೀತಿಯಲಿ ॥
ಮತ್ತೆ ಸತ್ಯಾಸತ್ಯತೆಯ ಗೀ- ।
ತಾರ್ಥದಿಂ ಪ್ರತಿಪಾದಿಸುವರೈ ।
ಪಾರ್ಥ ಗೀತೆಯು ಸ್ವತಹಸಿದ್ಧವು ಸರ್ವಕಾಧಾರ ॥೬೮೬॥

ತರಣಿ ಪೂರ್ವಾಚಲದೊಳೇರಲು ।
ಬರಿದೆ ಭೂಷಣವಲ್ಲ ಪೂರ್ವಕೆ ।
ತರುವನ್ನೆ ದಿವ್ಯಪ್ರಕಾಶವ ಸರ್ವದಿಶೆಗಳಿಗೆ ॥
ಇರುವುದೈ ಗೀತಾರ್ಥವೀಪರಿ ।
ಮೆರೆಯುವುದು ತಾನಾಗಿ ಜಗದಲಿ ।
ಮೆರೆಸುವುದು ಮೇಣನ್ಯಶಾಸ್ತ್ರಂಗಳನು ನಿಜಬಲದಿ ।।೬೮೭॥

ಗೀತೆಯಿಂದಧ್ಯಾತ್ಮಶಾಸ್ತ್ರ ।
ವ್ರಾತವೆಲ್ಲ ಸನಾಥವಾದುವು ।
ಗೀತೆಯೇ ಆಧಾರವಲ್ಲವೆ ಶಾಸ್ತ್ರಗಳಿಗೆಲ್ಲ ॥
ಪಾರ್ಥನಿಗೆ ಗೀತಾರ್ಥರೂಪದಿ ।
ಮಾತಿನಲಿ ಶ್ರೀನಾಥ ಕೃಷ್ಣನು ।
ಪ್ರೀತಿಯಿಂ ಪೇಳಿದನುಪಾಯವ ಸ್ವಾತ್ಮಬೋಧಕವ ॥ ೬೯೦॥

ಪರಿಪರಿಯಿಲೀಪೇಳ್ದುಪಾಯದಿ ।
ಬರುವುದಾತ್ಮಜ್ಞಾನ ಕೈವಶ ।
ನರನು ಕೇಳಿದನೊಂದು ಬಾರಿಗೆ ತಿಳಿಯದಾದನಲಾ ॥

ಹರಿಗೆ ಪಾರ್ಥನ ಸ್ಥಿತಿಯು ದೃಗ್ಗೋ- ।
ಚರಕೆ ಬರಲಾಕ್ಷಣದಿ ಕರುಣದಿ ।
ಪರಿಪರಿಯ ತತ್ತ್ವಂಗಳೇಕೀಕರಣ ಮಾಡಿದನು ॥ ೬೯೧॥

ಬಂತು ಗೀತಾಬೋಧೆ ಕೊನೆಗದು- ।
ವೆಂತು ಮನದಿ ವಿಚಾರ ಮಾಡುತ- ।
ನಂತ ಗೀತಾರ್ಥದಲಿ ತುಂಬಿಹುದೊಂದೆ ನಿಜತತ್ತ್ವ ॥
ಎಂತ ಶ್ರೀಗೋಪಾಲಕೃಷ್ಣನು ।
ಕುಂತಿತನಯಗೆ ಪೇಳಲೆತ್ತಿಸಿ ।
ಸಂತಸದಿ ಗೀತಾರ್ಥಬೋಧವ ಮುಗಿಸಲೆತ್ತಿಸಿದ ।। ೬೯೨ ।।

ಗ್ರಂಥಮಧ್ಯಾಂತರದಿ ನಾನಾ ।
ಪಂಥಗಳನಧಿಕಾರಗಳ ಸಿ- ।
ದ್ಧಾಂತರೂಪದಿ ಪೇಳ್ದೆ ನಿಜನಿದು ತತ್ತ್ವ ನೋಡಿದರೆ ॥
ಅಂತಮಧ್ಯಾರಂಭವೆಂಬುವ- ।
ದಂತನಿಲ್ಲದ ತತ್ತ್ವಸಾಗರ ।
ಕುಂತಿತನಯನೆ ಹೇಳಿದೆನು ನಾ ತತ್ತ್ವ ನಿನಗೊಂದೆ ॥ ೬೯೩ ॥

ಇರುವುದೀಗೀತೆಯಲವಿದ್ಯಾ ।
ಹರಣವೆಂಬುವ ಮುಖ್ಯ ಭೂಮಿಯು ।
ಮೆರೆವುದಿದರಲಿ ಮೋಕ್ಷಲಾಭವಿದೆಂಬ ದಿವ್ಯಫಲ ।।
ಬರುವುದೈ ಜ್ಞಾನದಲಿ ಫಲವಿದು ।
ಪರಿಪರಿಯ ಜ್ಞಾನವನು ನಾ ವಿ- ।
ಸ್ತರಿಸಿ ಹೇಳಿದೆ ಪಾರ್ಥ ಉದರಿಂ ಗ್ರಂಥವಿಸ್ತಾರ ॥ ೬೯೪ ॥

ವರಮಹಾಸಿದ್ಧಾಂತವೀಪರಿ ।
ಯಿರುವುದೊಂದೇ ತತ್ತ್ವ ಗೀತೆಯ- ।
ಲಿರದೆ ಪರಿಪರಿ ಕಕ್ಷೆಗಳ ನಿರ್ಮಿಸುತ ಗೀತೆಯನು ॥
ನರನಿಗಿದ ತಿಳಿವಂತೆ ಪುನರಪಿ- ।
ಯೊರೆಯ ಬೇಕೆನುತಾಗ ಶ್ರೀಹರಿ ।
ಹರುಷದಿಂದಲಿ ಪಾರ್ಥನಿಗೆ ಪೇಳಲಿಕೆ ತೊಡಗಿದನು ॥ ೬೯೫ ॥

ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ ।
ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್ ॥ ೫೬ ॥

ನಿರುತ ಕರ್ಮಾಚರಣನಿಷ್ಠಗೆ ।
ಒರುವುದೈ ಮದ್ರೂಪ ನಿಶ್ಚಿತ ।
ಒರುವುದಾತನಿಗೆನ್ನೊಳೈಕ್ಯವು ಯೋಗನಿಷ್ಠೆಯಲಿ ॥

ನರನೆ ನಿಜಕರ್ಮಾನುರೂಪದ ।
ಪರಿಮಳದ ರೂಪದಲಿ ಯೆನ್ನಯ ।
ವಿರಚಿಸಲು ಪೂಜೆಯನು ಯೆನ್ನ ಪ್ರಸನ್ನತೆಯ ತಾಳ್ವ ॥ ೬೯೬ ॥

ದೊರಕಿಸುವನೈ ಜ್ಞಾನನಿಷ್ಠೆಯ ।
ಪರಮನನುನೋಹರ ಪ್ರಸಾದನ ।
ಬರಲು ಕೈವಶ ಜ್ಞಾನವೆನ್ನಲಿ ಭಕ್ತಿ ಪುಟ್ಟುವುದು ॥
ಬರಲು ಭಕ್ತಿಯು ಭಕ್ತಿಮಾರ್ಗದಿ ।
ಬರುವುದೆನ್ನೊಳಗೈಕ್ಯವೀಪರಿ ।
ನರನು ನೋದನುಭನಿಪನೀಪರಿ ಯೆನ್ನೊಳೈಕ್ಯಸುಖ
॥ ೫೯ ॥

ಇರುವೆ ನಾ ವಿಶ್ವಪ್ರಕಾಶಕ- ।
ನಿರುವೆನ್ನೆ ಪರಮಾತ್ಮ ವಿಶ್ವದಿ ।
ಬರುತಲಿನ್ನೊಳು ಸರ್ವಭಾವದೊಳೈಕ್ಯ ಹೊಂದುವನು ॥
ತೊರೆದು ಲೋಭನನುಪ್ಪು ಚಲದೊಳ- ।
ಗುರುತರದಲೈಕ್ಯವನು ಹೊಂದಲು ।
ಒರುವುದೇ ಲಗಣಕ್ಕೆ ಜಲದೊಳಗಾ ಸ್ವತಂತ್ರತೆಯು
॥ ೫೯ ॥

ಗಾಳಿಯಾಕಾರದಲಿ ತಿರಿತಿರಿ- ।
ಗೇಳುವುದು ತಿರಿತಿರಿಗುಮಿಲ್ಲಂ ।
ತಾಳುವುದು ಮೇಗೈಕ್ಯವಲ್ಲಾ ಪಾರ್ಥ ನೋಡಿಯಾ ॥
ಕೇಳು ಕಾಯದ ಮನದ ಪಕಸದ ।
ಮೇಳದಿಂದನನೆನ್ನ ಭಜಿಸಲು ।
ಬಾಳುವನು ಯೆನ್ನಾಶ್ರಯದೊಳವನೇಕತನದಿಂದ ॥ ೬೦ ॥

ಒಂದು ಮೇಳೆ ನಿಷಿದ್ಧಕರ್ಮವ- ।
ನೊಂದ ಮಾಡಿದರವನು ಜಗದಲಿ ।
ವಂದ್ಯನಲ್ಲವೆ ನಿಂದ್ಯನಲ್ಲಾ ಜಗವಿ ಪರಿಸಲು ॥
ಬಂದು ಭಾಗೀರಥಿಯು ಸೇರಲು ।
ನಿಂದಿರುವುದೇ ಭೇದ ನೀರಿಗೆ ।
ಒಂದು ಸೇರುವುದಿಲ್ಲವೇ ಹೊಲದಾದ ನೀರನ್ನ । ೬೧ ॥

ಮಾದಲೆನ್ನಾಶ್ರಯವ ನರನಿಗೆ ।
ಕಾಡಲಾರದು ಶುಭಾಶುಭವದು ।
ಕೂಡಲಗ್ನಿಯ ಭೇದವಿಲ್ಲೈ ಕಾಷ್ಠಕಾಷ್ಠದಲಿ ॥

ಕಾಡುವುದ ಕೇಳೆನುತ ಬೆಂಕಿಯು ।
ಮಾಡುವುದೆ ಭೇದವನು ಚಂದನ- ।
ಕೇಡುವುದೆ ಕರುಣೆಯನು ವೊಂದೇ ಸಮನೆ ಸುಡುವುದಲಾ
॥ ೬೧ ॥

ಶುದ್ಧವಿಹುದೀ ಚಿನ್ನವೊಂದದಿ- ।
ನುಮ್ಮು ರೂಪಾಯ್ ಬೆಲೆಯುದಿರುವುದು ।
ಶುದ್ಧ ಭಾವದಿ ಕಡಿಮೆಯಿಹುದುವೆಂಬ ಭಾವವಿದು ॥
ಶುದ್ಧ ಪರುಸದ ಯೋಗ ಬಂದರೆ ।
ಯೆದ್ದು ಹೋಗುವುದೆಲ್ಲ ಭಾವವು ।
ಶುದ್ಧನಾಗುವುದೆಲ್ಲ ಚಿನ್ನವದೇಕಭಾವದಲಿ ॥ ೬೨ ॥

ನರನೆ ನೋಡೈ ಶುಭವಶುಭವೆಂ- ।
ಬೆರಡು ಭೇದವ ತೋರುವುವು ಯೆನ- ।
ಗರಿವನಕಮೆನ್ನ ಪ್ರಕಾಶವು ಜೀವಾವನಕವಲಾ ॥
ಪರಿವುವೆರಡೀ ಭಾವವೊಂದೇ ।
ಪರಿಯಲೇ ಕಾಣುವುದು ವಿಶ್ವವ ।
ನರನು ಮದ್ಭಾವವನು ತಾಳಲು ಶುಭವಶುಭವಿಲ್ಲ ॥ ೬೩ ॥

ನೇರುವನಕವೆ ಸೂರ್ಯನೂರೊಳು ।
ತೋರುವುದು ದಿನರಾತ್ರಿಭೇದವು ।
ಸೂರಿಯನ ಪಟ್ಟಣದೊಳಿರುವುದೆ ಭೇದವೀತೆರದ ॥
ನೀರವೆನ್ನನು ನರನನಂತರ ।
ಹಾರಿ ಹೋಗುವುವೆಲ್ಲ ಕರ್ಮಗ- ।
ಳೀರುನನು ಕಾಯುಜ್ಯಸದನಿಯು ಭೇದವೇನಿದಕೆ ॥ ೬೪ ॥

ಲೇಶಕಾಲಸ್ವಭಾವದಿಂದ ಪಿ- ।
ನಾಶವಾಗದ ಪದವ ಪಡೆಯುವ- ।
ನೇಸು ಹೇಳಲಿ ನಿನಗೆ ಮದ್ಭಾಸದ ಚಮತ್ಕೃತಿಯ ॥
ಪಾಸವಾತ್ಮಜ ಕೇಳು ಹೇತ್ವೆನು ।
ಲೇಸಿನಿಂದಲಿ ಮತ್ವನನ್ನತೆ ।
ಬೀಸುಪರಿಯಲಿ ನಿಗಲು ಮತ್ತೇನಿಹುದೆ ಲಭ್ಯಾಂಶ ॥ ೬೫ ॥

ಚೇತಸಾ ಸರ್ವಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಃ ।
ಬುದ್ಧಿಯೋಗಮುಪಾಶ್ರಿತ್ಯ ಮಚ್ಚಿತ್ತಃ ಸತತಂ ಭವ ॥ ೫೭ ॥

ವರಧನಂಜಯ ಕೇಳು ನಿನ್ನಯ ।
ನಿರುತ ಕರ್ಮಗಳೆಲ್ಲವನ್ನೆನ ।
ಗುರುತರದೊಳರ್ಪಿಸುತ ಸಂನ್ಯಾಸವನು ಸ್ವೀಕರಿಸು ॥

ನರನೆ ಸಂನ್ಯಾಸವಿದು ಮೇಲಿನ- ।
ದಿರದೆ ಸುವಿಚಾರದಲಿ ಮಾಳ್ಪುದು ।
ಧರಿಸುತೇಕಾಗ್ರದಲಿ ಚಿತ್ತವ ಮನದ ಧೈರ್ಯದಲಿ ॥ ೬೬ ॥

ತೆರದಲೀ ಸಂನ್ಯಾಸ ಮಾಡಲು ।
ಬರುವುದೈ ನಿನಗರವು ನೋಡೈ ।
ಯಿರುವುದೆನ್ನಯ ರೂಪ ನಿರ್ಮಲ ಕರ್ಮವ್ಯತಿರಿಕ್ತ ॥
ಧರೆಯಲೀ ಸರ್ವಸ್ವ ಕರ್ಮದ ।
ಸರಸ ಜನ್ಮಸ್ಥಾನ ಮಾಯೆಯು ।
ಯಿರುವಳಿತಿ ದೂರದಲಿ ನಿನ್ನಿಂದೆನುತ ತಿಳಿಯುವುದು
॥ ೬೦೩ ॥
ನರನೆ ರೂಪದ ಹೊರತು ಛಾಯೆಯು ।
ಬರುವುದೇ ಗೋಚರಕೆ ನಿನ್ನಯ ।
ಹೊರತು ಕೇಳಜ್ಞಾನಕಿಲ್ಲೈ ಬೇರೆಯಾಸ್ಥಾನ ॥
ಬರಲು ನಿನಗೀ ಜ್ಞಾನವದರಿಂ ।
ಮರಣವಹುದಜ್ಞಾನತಿಮಿರಕೆ ।
ದೊರೆಯಿತಲ್ಲಾ ನಿನಗೆ ನೋಡಲು ಕರ್ಮಸಂನ್ಯಾಸ ॥೬೦೪॥

ಈಂತಿತನಯನೆ ಯಾತ್ಮನಲಿ ನಿಜ ।
ಭ್ರಾಂತಿಯಿಂದಲೆ ಕರ್ಮಭಾಸವು ।
ಸಂತತದಿ ಬಂದೊದಗುತಿಹುದೈ ಚಿಂತಿಸದೆ ಮನದಿ ॥
ಇಂತು ಬಂದಿಹ ಭಾಸವನು ನಿ- ।
ಶ್ಚಿಂತನಾಗಿ ವಿಚಾರ ಮಾಡಲಿ ।
ಕೆಂತು ತಲೆಯೆತ್ತುವುದು ನಾಶವ ಪಡೆವುದೈ ನಿಜದಿ ॥ ೬೦೯ ॥

ಬುದ್ಧಿಯಿಬರುವಳು ಸ್ವತಿವ್ರತೆ ।
ಶುದ್ಧ ಸ್ವಾತ್ಮನಲಿಟ್ಟು ಜಿಡು ನೀ ।
ಬದ್ಧಳಹಳೈಯಲ್ಲಿ ನಿಜವಿದನನ್ಯಭಾವದಲಿ ॥
ಬುದ್ಧಿಯೊಪರಿ ಬೇರೆಭಾವವ- ।
ನೊದ್ದು ಯೆನ್ನನನನ್ಯಭಾವದಿ ।
ಬದ್ಧಕಂಕಣಳಾಗಿ ಭಜಿಪಳು ಭಕ್ತಿಪರಳಾಗಿ ॥ ೬೧೦ ॥

ಅನ್ಯಚಿಂತನ ಮೂಳ್ವ ಚಿತ್ತವಿ- ।
ದೆನ್ನನೇ ಭಜಿಸುವುದು ನೋಡೈ ।
ಯೆನ್ನನೀ ಪರಿ ಭಜಿಸಿದರೆ ಮದ್ರೂಪಲಾಭವಲಾ ॥
ನಿನ್ನ ಚಿತ್ತವನನ್ಯಭಾವದೊ ।
ಳೆನ್ನನೇ ಭಜಿಸುವರೆ ಹಚ್ಚಿಸು ।
ಯೆನ್ನ ಮಾತಿದು ವೇದವಾಕ್ಯವು ಬೇಗನಿದ ಮಾಡು ॥ ೬೧೧ ॥

ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ ।
ಅಥ ಚೇತ್ತ್ವಮಹಂಕಾರಾನ್ನ ಶ್ರೋಷ್ಯಸಿ ವಿನಂಕ್ಷ್ಯಸಿ ॥ ೫೮ ॥

ಈ ತೆರದಿ ನೀ ಭೇದವಿಲ್ಲದೆ ।
ಪ್ರೀತಿಯಿಂ ಸೇವಿಸಿದರೆನ್ನ- ।
ನ್ಯಾತತುಕ್ಷಣ ಚಿತ್ತವಪ್ಪುದು ನಿನಗೆ ಮದ್ರೂಪ ॥
ಈ ತೆರದಿ ಮದ್ರೂಪವಾಗಲು ।
ಯೇತಕ್ಕೈ ನಿನಗಿಹುದು ಯೋಚನೆ ।
ಯಾತತುಕ್ಷಣ ಮತ್ಪ್ರಸಾದವು ಬಂತೆನುತ ನಂಬು ॥ ೬೧೨ ॥

ಜನನಮರಣಾದಿಗಳ ದುಃಖದ ।
ಮನೆಗಳನು ಭೋಗಿಪನು ಜೀವನು ।
ಅನುಭವದಿ ನೋಡಿದರೆ ದುರ್ಘಟವೆಲ್ಲ ದುಃಖವಿದು ॥
ನಿನಗೆ ಸುಖಕಾರಕಗಳೆವು ಯೆ- ।
ನ್ನನು ಕಣಾ ಸಾಧಿಸಿದರೀಪರಿ- ।
ಯಿನಸಹಾಯವು ಸಿಗಲು ಭಯವೇನಿಹುದು ಕತ್ತಲೆಯ ॥೬೧೩॥

ಗಳಿಸಿ ಯೆನ್ನ ಪ್ರಸಾದ ಮಾತ್ರವ- ।
ನಳಿಯಲಾ ಜೀವತ್ವಭಾವವು ।
ಒಳಿಕವಗೆ ಸಂಸಾರಬಾಗುಲಬೊವನ ಭಯವೇಕೆ ॥
ತಿಳಿಯಲಾ ಯೆನ್ನ ಪ್ರಸಾದದೊ- ।
ಳಳಿದು ಸಂಸೃತಿ ದುರ್ಗತಿಯು ನಿನ- ।
ಗುಳಿಯುವುದು ಸಂಸಾರಸೌಖ್ಯವ ಪಡೆಯೆ ಮದ್ರೂಪ ॥ ೬೧೪ ॥

ತಾಳೆ ನೀನಭಮಾನಮದವನು ।
ಕೇಳಲಾರದೆ ಪೋದರೆನ್ನಯ ।
ಹೇಳಿಕೆಯ ಬೋಧವನು ಧಿಕ್ಕರಿಸಿದರೆ ಮನದೊಳಗೆ ॥
ಹೇಳಲೇನದ ನಿತ್ಯಮುಕ್ತನು ।
ಮೇಲೆ ನೀನವ್ಯಯನು ನಿಜವಿದು ।
ತಾಳ ಬೇಕಾಗುವುದು ದೇಹದ ಘಾತವಾತಗಳ ॥ ೬೧೫ ॥

ಆಡಿಗಡಿಗೆ ಯೆಡೆಬಿಡದೆ ದೇಹದಿ ।
ಬಡಿಯುತಿರುವುವು ಹೊಡತಬಡತಗ- ।
ಳೆಡೆಬಿಡದೆ ಯೆಡರುಗಳು ನಿನ್ನನು ಹಿಡಿದು ತ್ರಾಸಿಪುವು ॥
ನುಡಿದ ಯೆನ್ನೀ ನುಡಿಗಳನು ನೀ- ।
ಸಡಗರದಿ ಧಿಕ್ಕರಿಸಿ ನಡೆಯಲು ।
ಪೊಡವಿಯಲಿ ಮಡಿಯದಲೆ ಜೀವನ್ಮರಣ ಪಡೆವಿಯಲಾ ॥ ೬೧೬॥

ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ ।
ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ ॥ ೫೯ ॥

ದ್ವೇಷಿಸಲು ಪಥ್ಯವನು ಜ್ವರವು ವಿ- ।
ಶೇಷವಾಗದೆ ನಿಲುವುದೇ ಮೇಣ್ ।
ದ್ವೇಷಿಸಲು ದೀಪವನು ಕತ್ತಲೆಗಾಯ್ತು ಸಾಮ್ರಾಜ್ಯ ॥
ವಾಸವಾತ್ಮಜ ನೀ ವಿವೇಕವ ।
ದ್ವೇಷಿಸಲು ವರ್ಧಿಪುದಹಂತೆಯು ।
ಲೇಸನೀಯದೆ ನಾಶಕಿದು ಹಾದಿಯನು ತೋರಿಪುದು ॥೫೯॥

ನೋಡು ನೀನರ್ಜುನನು ಯುದ್ಧಕೆ ।
ಕೂಡಿರುವ ಜನರೆಲ್ಲರಾಪ್ತರು ।
ಮಾಡಲೆಂತೀ ಜನರ ವಧೆ ಪಾತಕವೆ ತಟ್ಟುವುದು ॥ ೫೯ ॥
ಇರುವುದೀಪರಿ ನಿನ್ನ ಕಲ್ಪನೆ ।
ಯಿರುವುದೇನದರಲ್ಲಿ ಸತ್ಯತೆ ।
ಬರಿದೆ ಮಾಯಾಜಾಲ ಮೃಗಜಲವಲ್ಲವೇ ತಿಳಿಯೆ ॥

ನಾನಿರುವೆನರ್ಜುನನು ಮುಂದಕೆ ।
ಕಾಣುನೀಜನರಾಪ್ತನೆಂಟರು ।
ನಾನು ಸಂಗ್ರಾಮವನು ಮಾಳ್ಪುದು ಪಾಪಕಾರಕವು ॥
ನೀನವಿದ್ಯಾಬುದ್ಧಿಮೂಲಕ ।
ಪೂರ್ಣನಿರ್ಧಾರವನು ಮಾಡಿದಿ ।
ಯೇನು ನಾನಿವರೊಡನೆ ಮಾಡೆನು ಕದನಕಲಹಗಳ ॥೫೯॥

ಕರದಿ ಶಸ್ತ್ರಾಸ್ತ್ರಗಳ ಹಿಡಿದೀ ।
ಪರಿ ಕುರುಕ್ಷೇತ್ರಕ್ಕೆ ಯುದ್ಧಕೆ ।
ಬರುತಲೀಪರಿ ಯುದ್ಧವಿನ್ಮಖನಹುದು ಸರಿಯಲ್ಲ ॥ ೫೯ ॥
ಪಾರ್ಥ ನೀನಾ ಯುದ್ಧ ಮಾಡೆನೆ ।
ನುತ್ತ ನಿರ್ಧಾರವನು ಮಾಡಲು ।
ವ್ಯರ್ಥವಹುದೈ ಲೋಕಮಾನ್ಯನೆ ನಿನ್ನ ನಿರ್ಧಾರ ॥
ಮಾಡಲೇನೀ ನಿಶ್ಚಯವ ಕೈ- ।
ಗೂಡುವುದೆ ನಿನಗಿದರ ಯಶವೈ ।
ದೂಡುವುದು ಯುದ್ಧದಲಿ ನೈಸರ್ಗಿಕ ಸ್ವಭಾವವದು ॥

ವ್ಯರ್ಥಮಾಡುತ ನಿನ್ನ ನಿಶ್ಚಯ ।
ಕ್ಷಾತ್ರವೃತ್ತಿಯು ನಿನ್ನ ಬಿಡದಲೆ ।
ಸಕ್ತಿಯಿಂದಲೆ ಯುದ್ಧವನು ಮಾಡಿಸದೆ ಬಿಡುತಿಹುದೆ ॥ ೫೯ ॥

ಸ್ವಭಾವಜೇನ ಕೌಂತೇಯ ನಿಬದ್ಧಃ ಸ್ವೇನ ಕರ್ಮಣಾ ।
ಕರ್ತುಂ ನೇಚ್ಛಸಿ ಯನ್ಮೋಹಾತ್ ಕರಿಷ್ಯಸ್ಯವಶೋಽಪಿ ತತ್ ॥ ೬೦ ॥

ಹರಿವುದೈ ನದಿಯ ಪ್ರವಾಹವು ।
ಭರದಿ ಮೂಡಣ ಕಡೆಗೆ ಯದರಲಿ ।
ನರನು ಜೀಳುತಲೀಸಿ ಪಶ್ಚಿಮ ಕಡೆಗೆ ಬರ ಬಹುದೆ ॥
ಧರೆಯೊಳಗೆ ಬಿತ್ತಿರ್ದ ಭತ್ತವು ।
ಬರುವುದೈ ಭತ್ತದ ಸ್ವರೂಪದಿ ।
ಬರುವುದೇ ಮೇಣದಕೆ ಜೋಳದ ರೂಪವಿಚ್ಛಿಸಲು ॥೫೯॥

ನರನೆ ನಿನ್ನಲಿ ಕ್ಷಾತ್ರಧರ್ಮದ ।
ಪರಿಪರಿಯ ಗುಣಗಣವು ಕೇಳ್ ಹು- ।
ಟ್ಟಿರುವುದಲ್ಲಾ ಶೌರ್ಯದಕ್ಷತೆತೇಜವೊದಲಾಗಿ ॥
ಧರಿಸಿ ನೀನೀ ಕ್ಷಾತ್ರ ಗುಣಗಳ ।
ಬರಿದೆ ಪಕೃತಿವಿರುದ್ಧ ನೀನೀ- ।
ಪರಿಯ ನಿರ್ಧಾರವನು ಮಾಡುವುದುಚಿತವೇ ಪಾರ್ಥ ॥ ೫೯ ॥

ವ್ಯರ್ಥವಹುದೀ ಮಾತು ಸಹಜದ ।
ವೃತ್ತಿಯಂದದಿ ಗುಣವು ಬರುವುದು ।
ಕ್ಷಾತ್ರವಂಶದಿ ಹುಟ್ಟಿ ನೀ ನಿರ್ಧಾರ ಮಾಡಿದರೆ ॥
ವ್ಯರ್ಥವಹುದೀ ಯುದ್ಧ ವಿಮುಖತೆ ।
ಕ್ಷಾತ್ರಧರ್ಮವು ನಿನ್ನನೆಬ್ಬಿಸ ।
ಕಿತ್ತಿ ಯುದ್ಧಕ್ಕೆಳೆದು ಯುದ್ಧವ ಮಾಡಿಸದೆ ಬಿಡದು ॥೫೯॥

ನರನೆ ನೀನೀ ಕ್ಷಾತ್ರಗುಣದಿಂ- ।
ದಿರುವಿಯಲ್ಲೈ ಬದ್ಧನದರಿಂ ।
ಒರುವುದೇ ನಿನಗೇನು ಗುಣದ ವಿರುದ್ಧ ವರ್ತಿಸಲು ॥
ಬರಿದೆ ನೀ ನಿರ್ಧಾರವೀಪರಿ ।
ಧರಿಸಿ ಮನದಲಿ ಯುದ್ಧ ಮಾಡದೆ ।
ಯಿರುವಿಯಾದರೆ ಪೇಳ್ವೆನಿನಗಾನೊಂದು ದೃಷ್ಟಾಂತ ॥ ೫೯ ॥

ನರನ ಕೈಕಾಲ್ಗಳನು ಕಟ್ಟುತ- ।
ಲಿರಿಸಿದರೆ ರಥದೊಳಗೆ ತದ್ರಥ ।
ಚರಿಸ ತೊಡಗಲು ರಥದಿ ಕೂತವ ಚರಿಸೆನೆಂದರೆಯು ।।
ಧರಿಸಿದರೆ ನಿರ್ಧಾರವಾರಥ ।
ಚರಿಸಲಾರದೆ ಯಿರುವುದೇ ಯಾ ।
ತೆರದಿ ನಿನ್ನೀವ್ಯರ್ಥ ನಿರ್ಧಾರವು ಧನಂಜಯನೆ ॥ ಲಶಿ ॥

ನಾನು ಯುದ್ಧವ ಮಾಡಲಾರೆನು ।
ಮಾನಿಸುತಲೇ ಪರಿಯ ನಿಶ್ಚಯ ।
ನೀನು ರಣರಂಗದಲಿ ಬಂದಿಯೊ ಹೇಳುವರೆ ಯದನೆ ॥
ನೀನು ಯುದ್ಧದಿ ಬಿದ್ದು ಶರಸಂ- ।
ಧಾನವನು ಮಾಡುವಿ ನಿಶ್ಚಯ ।
ಕಾಣೆನಿದರಲಿ ಸಂಶಯವನೆಳ್ಳಿನಿತ ನಾ ವಾರ್ಥ ॥ ಲಶಿ ॥

ಮರೆತಿಯಾ ಕೌಂತೇಯ ನೀನಾ ।
ಪರಿಯ ಗೋಗ್ರಹಣದಲಿಯುತ್ತರ ।
ತಿರಿಗಿ ರಣದಿಂದಲಿ ಪಲಾಯನ ಮಾಡ ಹತ್ತಿರಲು ।।
ಧರಿಸಿದರು ನೀ ಷಂಢವೇಷವ ।
ಹರುಷದಿಂ ರಣ ಮಾಡಲಿಲ್ಲವೆ ।
ನರನೆ ನೀ ಪೇಳೆನಗೆ ಮಾಡಿದಿ ಯೇತಕಾರಣವ ॥ ಲಶಿ ॥

ಬಿಡದು ನಿನ್ನನು ಕ್ಷಾತ್ರವೃತ್ತಿಯು ।
ಪಿಡಿದು ನಿನ್ನನು ಯುದ್ಧರಂಗದಿ ।
ಒಡಿಯಲಿಕೆ ಹುಚ್ಚುವ್ರದು ನೈರಿವ್ರಾತವನು ಪಾರ್ಥ ।।
ಪಿಡಿದು ನೀ ಸಂಮೋಹನಾಸ್ತ್ರವ- ।
ನೊದನೆ ಯಕ್ಷೌಹಿಣಿ ದಕ್ಕೆಗದ ।
ಗದಣವನು ನೆರೆ ಗೆಲಿದು ತಂದಿಯೊ ವಸ್ತ್ರಗೋವ್ರಜವ ॥ ಲಶಿ ॥

ಒದವಸಿಗೆ ಒಡತನದೊಳಿರುವುದೆ ।
ಕಡುಮಮತೆ ರೋಗದಲಿ ರೋಗಿಗೆ ।
ಪಿಡಲು ಬೇಕೆಂದೆನುತಲೀಕ್ಷಿಸೆ ಪಿದದು ಪ್ರಾರಬ್ಧ ।।
ಪೊಡವಿಯಲಿ ಪಾರಬ್ಧ ದೊಡ್ಡದು ।
ನಿಡುವ್ರದೇ ನೀಶ್ವರನ ನಿಯಮಗ ।
ದೃಢವದೊಳೀಶ್ವರ ನಿನ್ನ ಹೃದಯುದಿ ವಾಸ ಮಾಡಿಹನು ॥ ಲಶಿ ॥

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥ ೬೧ ॥

ಇರುವುದೈ ಭೂತಗಳಲಂತಃ- ।
ಕರಣ ಹೃದಯಾಕಾಶರೂಪದಿ ।
ಒರುವ್ರದದರಲಿ ಜ್ಞಾನಸೂರ್ಯ ಸಹಸ್ರಕಿರಣನಲಾ ।।
ಒರಲು ಸಾವಿರಕಿರಣದಿಂದೀ- ।
ಪರಿಯಲೀಶ್ವರ ಸೂರ್ಯನುದಯಕೆ ।
ತರುವನವನು ಪ್ರಕಾಶ ಮೂರ್ಯೋಕಕ್ಕೆ ಕೌಂತೇಯ ॥ ಲಶಿ ॥

ಮೆರೆವ ಸ್ವಪ್ನ ಸುಷುಪ್ತಿಜಾಗೃತಿ ।
ಯಿರುವ್ರವೀ ಮೂರ್ಯೋಕ ನೊ ದಲ- ।
ತಣಿ ಬೆಳಗಲು ಜೀವಪಾಂಥಸ್ಥನಿಗೆ ಬೆಳಕಾಯ್ತು ॥
ಇರುವೈ ವೇದ್ಯೋದಕದ ಕೆರೆ ।
ಯರಳಿಸುವನೈ ವಿಷಯಕಮಲವ ।
ಮೆರೆವ ಜೀವನೆ ಭ್ರಮರಷಟ್ಪದ ನೇವಿಸುವನವನು ॥ಲಶಿ॥

ಐದು ಜ್ಞಾನೇಂದ್ರಿಯಗಳಾರನೆ ।
ಪಾದ ಮನವೀ ತೆರದಲಾರೈ ।
ಪಾದಗಳು ಜೀವನಿಗೆ ಷಟ್ಪದನಾದನದರಿಂದ ।।
ಮೇರಿಸಿಯಲೀ ಸರ್ವಜೀವತ- ।
ನಾದಿರೂಪ ಮಹೇಶ್ವರನು ಬಹು ।
ನೋದದಿಂ ವಾಸಿಪನು ಹೃದಯುದಿ ಸರ್ವಜೀವರಲಿ ॥ ಲಶಿ ॥

ಇರುವನೀಶ್ವರ ಸರ್ವಭೂತನಿ- ।
ಕರದ ಹೃದಯದೊಳೊಳಗೆ ಧರಿಸುತ ।
ಕರಿಯೊದಿಕೆಯನು ನೋಡಹಂಕೃತಿಯೆಂಬ ಕಂಬಳಿಯ ॥
ಅರಿಸಿ ಮಾಯಾಪದದೆ ತನ್ಮಯ ।
ಹೊರಗೆ ಬೊಂಬೆಯನಾಡಿಸುವನೈ ।
ಮೆರೆವನೀಜೀವರಿಗೆ ತಾನೇ ಸೂತ್ರಧಾರನಲಾ ॥ ಲಶಿ ॥

ಇರುವನೊರ್ವನೆ ಸೂತ್ರಧಾರನು ।
ಪರಿಪರಿಯ ಚೌರ್ಯಂಪಲಕ್ಷದ ।
ಪರಿಪರಿಯ ಛಾಯಾಸ್ವರೂಪದ ಚಿತ್ರವಾಡಿಸನು ।
ಸರಸಿಬಾಸನ ಹಿಡಿದು ಕೇಟಕ ।
ವರೆಗೆ ಭೂತಗಳೆಲ್ಲವನು ತಾಂ ।
ಪರಿಕಿಸುತ ಯೋಗ್ಯತೆಯ ಮಾನದಿ ಕೊಡುವನಾಕೃತಿಯ ।ಲಶಿ॥

ಭೂತಜಾತದ ಮುಂದೆ ಪಾತ್ರ- ।
ಪಾತ್ರನೂನ ಶರೀರನಿಟ್ಟರೆ ।
ಭೂತಜಾತವು ಸ್ವೀಕರಿಸುವುದು ಮನದಿ ಹಿಗ್ಗುತಲಿ ॥
ಅತಶುಕ್ಷಣ ದೇಹಯುಂತ್ರನ ।
ಪ್ರೀತಿಯಿಂದೇರುತಲಿ ದೇಹ- ।
ವ್ಯಾತನೇ ತಾನೆಂದು ಭಾವಿಪುದೇನ ಹೇಳುವೆನು ॥ ೬೫ ॥

ನೂಲ ಕಟ್ಟಲು ನೂಲು ಬೇಕೈ ।
ಹುಲ್ಲ ಕಟ್ಟಲು ಹುಲ್ಲು ಬೇಕೈ ।
ಬಾಲಕನು ನಿಜಬಿಂಬ ನೀರಲಿ ನೋಡಿ ಭ್ರಮಿಸುವನು ॥
ಹೇಳಲೇನದ ಜೀವಿ ತನ್ನವಿ- ।
ಶಾಲಮನಿಂದೇ ತಾನೆನುತ ಒಹು ।
ಲಾಲಿಸುಯುಲದ ಜಾಳಗಿಸುವನು ಪಾರ್ಥ ನೋಡಿದಿಯಾ
॥ ೬೬ ॥

ಏರಿಸುತ ಭೂತಗಳನೆಲ್ಲ ಶ- ।
ರೀರಯಂತ್ರದ ಮೇಲನಂತರ ।
ಪ್ರಾರಬುಧ ಕರ್ಮಾನುರೂಪದ ಸೂತ್ರವೆಳೆಯುವನು ॥
ಪ್ರಾರಬುಧ ಸೂತ್ರವು ಸ್ವತಂತ್ರ ಪ್ರ- ।
ಕಾರ ಸಿರುವುದು ಭೂತಜಾತವ- ।
ನೇರಿಸುವುದೈ ಹೇರೆಬೇರಾಗತಿಗೆ ಕೃತಿಯಂತೆ ॥ ೬೭ ॥

ಕರಡವನು ಗಗನದಲಿ ಗಾಳಿಯು ।
ಗರಗರನೆ ತಿರುಗಿಸುವ ಪರಿಯಲಿ ।
ನರನೆ ಸಂಸೃತಿಸ್ವರ್ಗದಲಿ ಪ್ರಾರಬ್ಧ ಭ್ರಮಿಸುವುದು ॥
ಧರೆಯುಲೀಶ್ವರಸತ್ತೆಯಿಂದಲಿ ।
ಚರಿಸುವುದು ವ್ಯವಹಾರವೆಲ್ಲವು ।
ಪರಿಕಿಸಲು ಲೋಕವನು ಚೋದಕನಾಡಿಸುವ ತೆರದಿ ॥ ೬೮ ॥

ಸಿಂಧುಮೊದಲಾದವುಗಳಾಟವು ।
ಚಂದ್ರನೆದುರಿಲಿ ನಡೆವುದಲ್ಲವೆ ।
ಸಿಂಧುವಿಲಿ ನೀರುಕ್ಕಿ ಬರುವುದು ಕುಮುದಿನಿಗೆ ಹರ್ಷ ॥
ಚಂದ್ರಕಾಂತವು ದ್ರವಿಸುತಿಹುದಾ- ।
ನಂದದಿಂ ನಲಿವುದು ಚಕೋರ ವು- ।
ರಿಂದರಾತ್ಮಜ ನೋಡು ನೋಡೀ ಕೃತಿಯ ಲೌಕಿಕದ ॥ ೬೯ ॥

ಧರಣಿಯುಲ್ಲಿ ಪರಾಪ್ರಕೃತಿವಶ- ।
ನಿರುತಲೀಶ್ವರ ಚೇಷ್ಟೆಯಾಡುವ- ।
ನರಿಯಲಾ ವಾಸಿಪನು ನಿನ್ನಯ ಹೃದಯಕೋಶದಲಿ ॥
ಧರಿಸದರ್ಜುನನೆಂಬ ಭಾವವ- ।
ನಿರುವ ನಾನಾನೆಂಬ ಭಾವವು ।
ಪೊರೆವುದೀಶ್ವರ ಭಾವನೆಂದೇ ತಿಳಿಯ ಬೇಕು ಸದಾ ॥ ೭೦ ॥

ನೀನು ಯುದ್ಧವ ಮಾಡದಿದ್ದರೆ ।
ತಾನೆ ಯಾ ಯೋಶ್ವರನು ಪ್ರಕೃತಿಸ- ।
ಹಾನುಭೂತಿಯು ದೊರಕಿಸುತ ನಿನ್ನಿಂದ ಯುದ್ಧವನು ॥
ಸಾನುರಾಗದಿ ಮಾಡಿಸುವನೈ ।
ಕ್ಷೋಣಿಯುಲ್ಲೀಶ್ವರನೆ ಸ್ವಾಮಿಯು ।
ತಾನೆ ಭೂತಗ್ರಾಮಕೆಲ್ಲಕೆ ಪ್ರಕೃತಿಯನು ಕೊಡುವ ॥ ೭೧ ॥

ಈಶನಿತ್ತಾಪ್ರಕೃತಿಗುಣವಶ- ।
ವಾಸನೆಯಿಂದಲೆ ಯಿಂದ್ರಿಯಂಗಳು ।
ದೋಷವಿಲ್ಲದೆ ಸರ್ವಕ್ರಿಯೆಗಳ ಮಾಳ್ಪುವೈ ಪಾರ್ಥ ॥
ಲೇಶ ನೀನಭಿಮಾನ ಧರಿಸದೆ ।
ತೋಷದಿಂ ಕರ್ಮ ಪ್ರಕೃತಿಗುಣ- ।
ದೋಷವೆಂದೇ ನೆನಸಿ ನಡೆಸೈ ನಿನ್ನ ವ್ಯವಹಾರ ॥ ೭೨ ॥

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥ ೬೨ ॥

ಇರುವನೀಶ್ವರ ನಿನ್ನ ಹೃದಯದಿ ।
ಶರಣ ಹೋಗತಾನನು ತತ್ಪರ- ।
ನಿರುತ ಸಾಯುಜ್ಯವನು ಪಡೆಯುವಿ ಗಂಗೆಶರಧಿಯೊಲು ॥
ನಿರುತ ನೀ ವಾಕ್ಕಾಯಚಿತ್ತದಿ ।
ತೊರೆಯುತಲಹಂಕಾರವನು ಬಹು ।
ಪರಿಯಲಾತನ ಶರಣ ಹೋಗೈ ಪಡೆದು ತದ್ರೂಪ ॥ ೭೩ ॥

ದೊರಕಿಸುತಲೀಶಪ್ರಸಾದವ ।
ಕರವ ಗ್ರಹಿಸುವಿ ಶಾಂತಿ ಪಕ್ಷಿಯ ।
ಹರುಷದಿಂದಾತ್ಮಸ್ವರೂಪದಿ ರಮಿಸಿ ರಂಜಿಸುವಿ ॥
ಇರುವುದಿದು ವೃತ್ತಿತ್ರಿಕಾರಣ ।
ಪರಮ ವಿಶ್ರಾಂತಿಯ ಮನೋಹರ ।
ಚರಮನೆಯು ಅನುಭವಕೆ ಯನುಭವ ಸ್ಥಾನೋತ್ತಮವಿ ॥ ೭೪ ॥

ನರನೆ ನೀನೀಯಾತ್ಮಪದವಿಯ ।
ಥೊರೆಯೆನಿಸಿ ಯಕ್ಷಯವ ಸೌಖ್ಯವ ।
ದೊರಕಿಸುವಿ ನೀನೆಂದು ನಂಬೀ ಮಾತ ಪೇಳಿದುದ ॥

ಹರುಷದಿಂದೀ ಪರಿಯ ತತ್ತ್ವನ ।
ನರುಹಿದನು ಪಾರ್ಥನಿಗೆ ಪ್ರೇಮದಿ ।
ಹರಿಯು ಲಕ್ಷ್ಮೀಪತಿಯು ಯೆಂದನು ನಗುತ ಸಂಜಯನು ॥೬೬॥

ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ ।
ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು ॥ ೬೩ ॥

ಜ್ಞಾನ ಗೀತಾನಾಮದಿಂದ ಮ- ।
ಹಾನುಕೀರ್ತಿಯ ಹೊಂದಿರುವದೈ ।
ಜ್ಞಾನವಿದು ವೇದಗಳ ಸಾರವು ಸಕಲ ಜಗದೊಳಗೆ ॥
ಜ್ಞಾನವಿದು ನೋಡಾತ್ಮರೂಪದ ।
ಮಾಣಿಕವ ಕೈವಶವ ಮಾಳ್ಪುದು ।
ಜ್ಞಾನವಿದು ವೇದಾಂತ ಶಾಸ್ತ್ರದಿ ಕೀರ್ತಿ ಪಡೆದಿಹುದು ॥೬೭॥

ಬೇರೆ ಶಾಸ್ತ್ರಗಳೆದನೆ ವರ್ಣಿಸಿ ।
ಚಾರು ಕೀರ್ತಿಯ ಪಡೆದುವಲ್ಲವೆ ।
ಬೇರೆ ಬುದ್ಧ್ಯಾದಿಗಳ ಜ್ಞಾನವು ಲೇಶಶೇಷವಲಾ ॥
ಸೇರಲೀ ಜ್ಞಾನವನು ಸರ್ವಪ್ರ- ।
ಕಾರ ದ್ರಷ್ಟನು ನಾನೆಯವರಿಗೆ ।
ತೋರಿಕೊಳ್ಳುವೆ ನಿಜದೊಳಾತ್ಮಜ್ಞಾನವಿದು ಶ್ರೇಷ್ಠ ॥೬೮॥

ಗುಪ್ತನಿಹೆ ನಾ ಸರ್ವಜಗದಲಿ ।
ಗುಪ್ತಧನವಿದು ಜ್ಞಾನವೆನ್ನದು ।
ಯುಕ್ತವಿಹುದೀ ಜ್ಞಾನನತಿಯೋಗ್ಯತೆಯ ನಿಧಿಯಿಹುದು ॥
ಭಕ್ತರೊಳು ನೀನೆನ್ನ ಪರಮಸು- ।
ಭಕ್ತ ಮೈದುನ ಮಿತ್ರನಿರಲಿದ ।
ಗುಪ್ತನಿಡುವುದು ಯೋಗ್ಯವೇ ನಿನ್ನಿಂದ ಕೌಂತೇಯ ॥೬೯॥

ನರನೆ ನಿನಗಾಂ ಪ್ರೇಮಭರದೊಳ- ।
ಗಿರದೆ ಗುಪ್ತ ನಿಧಾನವಿತ್ತೆನು ।
ಹರಿವುದೈ ಪ್ರೇಮಪ್ರವಾಹವು ನಿನ್ನೊಳೆನಗೆ ಸದಾ ॥
ಕರೆದು ನಿಜಜಾಲನನು ಪ್ರೇಮದ ।
ಭರದಿ ಮುದ್ದಾಡುವಳು ತಾಯಿಯು ।
ನರನೆ ನಿನಗಾತೆರದಿ ಹೃದಯವ ತೆರೆದು ತೋರಿಸಿದೆ ॥೭೦॥

ಇರುವುದಲ್ಲಾ ಶಾಸ್ತ್ರ ಸೂಕ್ಷ್ಮವು ।
ನರನೆ ಸೋಸಿಸಿ ಕೊಳ್ಳರೇ ಕೇಳ್ ।
ಹೊರಗೊಳಗೆ ಪೀಯೂಷ ಸವಿಯುಲ್ಲವೆ ಧನಂಜಯನೆ ॥

ತೆರೆವರಲ್ಲವೆ ತೋಟಿಯಾಪರಿ ।
ತರಣಿ ಸರ್ವಪ್ರಕಾಶದಾತನು ।
ಪರಿಯಿದಾದರು ಕಣ್ಣಿಲಂಜನ ಹಾಕ ಬೇಕಲ್ಲೈ ॥ ೭೧ ॥

ನಾನು ಕೇಳ್ ಸರ್ವಜ್ಞನಾದರು ।
ಜ್ಞಾನವಿದನು ವಿಚಾರ ಮಾಡಿಯೆ ।
ನಾನುರಾಗದೊಳಿತ್ತೆ ನಿನಗಾಂ ಭಕ್ತ ನೀನೆನುತ ॥
ನೀನು ಮುಂದೆ ವಿಚಾರ ಮಾಡುತ- ।
ಲೇನು ಯೋಗ್ಯವೊ ತೋರ್ಪುದದನೆ ಮ- ।
ಹಾನು ಭಾವನೆ ಮಾಡು ನಿಶ್ಚಯವನ್ನು ಮಾಡೀಗ ॥ ೭೨ ॥

ನುಡಿದನೀಪರಿ ಪಾರ್ಥನಿಂಗಾ ।
ಜಡಜನಾಭನು ಪ್ರೇಮಭರದಲಿ ।
ಕಡೆಯ ನುಡಿಯಾಡಿದನು ದೇವನು ಮುಂದೆ ನುಡಿಯನಲಾ ॥
ಪಿಡುವನೆಂತೀಶ್ರವಣಸುಖವನು ।
ಪಿಡುವರಾರೀಮ್ಮಮೃತಪಾನವ ।
ಜಡಜನಾಭನು ಮುಂದೆ ಗೀತೆಯು ಪೇಳಬೇಕೆನುತ ॥ ೭೩ ॥

ಮಾತನಾಡದೆ ಸುಮ್ಮನಿದ್ದನು ।
ಪಾರ್ಥ ಮೌನವನಾಂತನೆನುತಲಿ ।
ಕೂತನೆಂತೀ ಮೌನದಿಂದಲೆನುತ್ತ ಚೋದ್ಯದಲಿ ॥
ವಿನತನಾಡಿದನಾಗ ಕೃಷ್ಣನು ।
ಪಾರ್ಥ ನಿನಗೀ ಮೌನವೇತ- ।
ಕ್ಕೇತಕೀ ಪರಿ ಜ್ಞಾನವಂಜನೆ ಮಾಡುವಿಯೊ ಪಾರ್ಥ ॥ ೭೪ ॥

ನರನೆ ನಿನ್ನಿಚ್ಛೆಯನು ಹೇಳೈ ।
ಧರಿಸ ಬಾರದು ಮೌನವೀಪರಿ ।
ಯುರುಹ ಬೇಕೇ ಮುಂದೆ ಗೀತಾಮೃತವ ನೀ ಪೇಳು ॥
ನರನು ಹಸಿವೆಯೊಳೂಟಕತಿಯಾ- ।
ತುರತೆಯಿಂದಲಿ ಕುಳಿತು ತೃಪ್ತಿಯು ।
ಬರದೆ ಸಾಕೈ ಬೇಡ ಬಡಿಸುವುದೆಂಬುವನೆ ಕ್ಷುಧಿತ ॥ ೭೫ ॥

ಹೊಟ್ಟೆ ಹಸಿವೆಯು ತೃಪ್ತಿಯಾಗದೆ । ಹೇಳ ಬೇಕೇ ತಿರಿತಿರಿಗಿ ನಾ ।
ಬಟ್ಟು ಬಿಡುವರೆ ಯೆಲೆಯು ವಂಚಿಸಿ । ಮೇಲೆಯೇ ನಿನಗಾಯ್ತು ಜ್ಞಾನವು ।
ತಟ್ಟುವುದು ವಂಚನೆಯ ದೋಷವು ಕ್ಷುಧೆಯು ಪೀಡಿಸ್ಪರು ॥ ಹೇಳು ನಿಶ್ಚಯ ಕೋರ್ಪುದಿದು ನಿನಗಲ್ಲನೇ ಜ್ಞೇಯು ॥
ಸೃಷ್ಟಿಗೊಡೆಯನು ಶ್ರೀಗುರುವು ನಿನ- । ತಾಳಿ ನೀ ಸರ್ವಜ್ಞ ಪದವಿಯ ।
ಗಿಷ್ಟ ಸ್ವಾತ್ಮಜ್ಞಾನ ವಿವರಿಸಿ । ಪಾಲಿಸುವಿ ಜಗವೆಲ್ಲ ನೀನೇ ।
ಕೊಟ್ಟು ತಿಳಿಸುವನಿರಲು ಯೋಗ್ಯವೆ ನಿನಗೆ ಸಂದೇಹ ॥೬೫೭॥ ಹೇಳ ಬೇಕೇ ಸೂರ್ಯನಿಗೆ ನೀ ಸೂರ್ಯ ನಿಜವೆನುತ ॥೬೫೮॥

ನರನೆ ನಿನಗಿನ್ನೊಂದು ಬಾರಿಗೆ । ಜಡಜದಳಲೋಚನನು ಕೃಷ್ಣನು ।
ಯುರುಹ ಬೇಕೀ ಜ್ಞಾನವೆನ್ನುತ । ನುಡಿಯು ಕೇಳುತ ಪಾರ್ಥನಾಡಿದ ।
ಧರಿಸಿದಿಯೊ ಮೌನವನು ಪೇಳೆನಗೀಗ ಶಂಕಿಸದೆ ॥ ನುಡಿದನೀಪರಿ ಭಕ್ತವತ್ಸಲ ಕುಂತಿನಂದನಗೆ ॥
ಹರಿಯು ವಚನವ ಕೇಳಿ ಪಾರ್ಥನು । ಜಿಡು ಜಿಡಿಲೊ ಕೌಂತೇಯ ನಿನ್ನಯ ।
ಹರುಷದಿಂದುತ್ತರವನಿತ್ತನು । ಸಡಗರದ ನುಡಿ ಸಾಕಿದೇತಕೆ ।
ಹರಿಯೆ ತಿಳಿಯಿತು ನಿನಗೆ ಯೆನ್ನ ಮನೋರಥವು ನಿಜದಿ ಕಡಿಮೆಯಾಯ್ತೇ ನಿನ್ನ ಸ್ತುತಿಯಿದು ಸ್ತುತಿನಿಪುಣ ನೀನು ॥೬೫೯॥

॥ ೬೫೭ ॥

ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್ ॥ ೬೪ ॥

ನರನೆ ನಿನಗಿನ್ನೊಂದು ಬಾರಿಗೆ । ಸೃಷ್ಟಿಯಲಿ ಕೇಳೀರಹಸ್ಯವ ।
ಯರುಹುವೆನು ವಿಸ್ತಾರಪೂರ್ವಕ । ಯೆಷ್ಟು ದುರ್ಲಭವೆನುತ ವರ್ಣಿಸೆ ।
ಪರಮ ನಿರ್ಮಲ ವಚನ ಕೇಳ್ವುದು ಸಾವಧಾನದಲಿ ॥ ಬಿಟ್ಟು ದ್ವೈತವನೈಕ್ಯಗೃಹದಲಿ ಭೋಗ್ಯನೀವಸ್ತು ॥
ಇರುವುದಿದು ಬ್ರಹ್ಮಸ್ವರೂಪವು । ಬಿಟ್ಟು ನಿಜ ಬಾಹ್ಯೋಪಚಾರವ ।
ಒರಿದೆ ಹೇಳುವ ಮಾತಿದಲ್ಲಾ । ಶ್ರೇಷ್ಠ ಪ್ರೇಮದ ವಿಷಯ ನೀನಿಹ ।
ಒರಿದೆ ಶತ್ರುವಿದೆಂದು ಕೇಳುವ ಮಾತು ಬೇರಲ್ಲ ॥೬೬೦॥ ಯೆಷ್ಟ ಹೇಳಲಿ ನೀನು ಯೆನ್ನ ನಿಜಾತ್ಮನೆಂದರಿಯು ॥ ೬೬೧ ॥

ನಿನ್ನ ಭಾಗ್ಯವು ದೊಡ್ಡದೆಂದು ಪ್ರ- । ತಿರಿತಿರಿಗಿ ದರ್ಪಣವ ಕೈಯಿಂ- ।
ಸನ್ನವಾಯ್ತಾ ಜ್ಞಾನ ಗುಹ್ಯವು । ದೊರೆಸುವುದು ಸ್ವಚ್ಛತೆಯು ಮಾಳ್ಪುದು ।
ಸನ್ನುತಾತ್ಮನೆ ಕೂರ್ಮದೃಷ್ಟಿಗೆ ಬೇಳಲಾ ಮರಿಯು ॥ ಪರಿಕಿಸಲು ಮೋರೆಯನು ಪೋಹದೊಳಲ್ಲ ದರ್ಪಣದ ॥
ಕಣ್ಣು ಕಣ್ಣನು ನೋಡಿದಾಕ್ಷಣ । ನರನೆ ನಿನ್ನ ನಿಮಿತ್ತ ಮಾಡುತ- ।
ತಣ್ಣಗಾಗುವುದೆಲ್ಲ ಹಸಿವೆಯು । ಲರುಹುವೆನು ನನಗಾಗಿಯೇ ನಾ- ।
ವ್ಯಣ್ಣಲಿಕೆ ಮೊಲೆ ತುರುಕ ಬೇಕೇ ಬಾಯೊಳಗೆ ತಿರಿಗಿ ನಿರುವುದೇ ದ್ವಂದ್ವಪ್ರಕಾರವು ನಮ್ಮನಮ್ಮೊಳಗೆ । ೬೬೪ ॥

॥ ೬೬೧ ॥

ಚಾತಕನಿಗೋಸುಗವೆ ಗಗನವು । ಇರುವುದೆನ್ನಯ ಗುಹ್ಯತಮವಿದು ।
ಪ್ರೀತಿಯಿಂ ಜಲ ಹಿಡಿದಿರುವುದೈ । ನರನೆ ನಿನಗಾನರುಹಿ ಪೆಟ್ಟಹೆ- ।
ಭೂತಳಕೆ ವ್ಯವಹಾರವಿಲ್ಲದೆ ಫಲದ ಪ್ರಾಪ್ತಿಯಲಾ ॥ ನಿರುವಿ ಯೆನ್ನಯ ಜೀವನೋ ನೀನಾತ್ಮನೋ ತಿಳಿಯೆ ॥
ಇತರಿಂದೀ ಫಲವು ದೊರೆವುದು । ನರನೆ ನೀನಾಗಿರುವಿ ಯೆನ್ನಯ ।
ಭೂತಳದಿ ಕಾರಣ ವಿಚಾರಿಸೆ । ಪರಮ ಭಕ್ತಶ್ರೇಷ್ಠ ನಿಷ್ಠೆಯ ।
ಮಾತ ಹೇಳುವೆ ದೈವಯೋಗದಿ ಫಲವು ಸಿಗದಿಹುದೇ ॥೬೬೫॥ ಸರಸ ಮೂರ್ತಿಯು ನೀನು ನನ್ನನು ಮರುಳ ಮಾಡಿದಿಯಾ ॥೬೬೫॥

ನೀರಿನಲಿ ಸೇರಿಸಲು ಲವಣವ ।
ಬೇರುವುದೇ ಲವಣವದರಲಿ ।
ನೀರಿನಾರೂಪವನು ತಾಳ್ವುದು ಮರೆತು ನಿಜರೂಪ ।।

ತೋರದೀಪರಿ ಭೇದವೆನ್ನೊಳು ।
ಸೇರಿರುವಿ ನೀನೈಕ್ಯಭಾವದಿ ।
ಕಾರಣದಿ ನಾ ನಿನಗೆ ಪೇಳ್ದೆನು ಗುಹ್ಯನಿರ್ಮಲವ ॥ ೬೬ ॥

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥ ೬೫ ॥

ನೀನು ಮಾಡುವ ಸರ್ವಕರ್ಮವ ।
ಮಾನಸಿಕ ಶಾರೀರಕವ ಮೇಣ್ ।
ನೀನು ಯೆನಗರ್ಪಿಪುದು ಸರ್ವವ್ಯಾಪಕನು ನಾನು ।,
ಬಾನಿನಲಿ ನೋಡಿದರೆ ವಾಯುವು ।
ತಾನೆ ವ್ಯಾಪಕ ಸರ್ವದಿಕ್ಕಿಯಲಿ ।
ನೀನದೇ ರೀತಿಯಲಿ ಕರ್ಮವನರ್ಪಿಸೈ ಯೆನಗೆ ॥ ೬೬ ॥

ಇರಿಸು ನಿನ್ನಯ ಮನದೊಳೆನ್ನನು ।
ನರನೆ ನಿನ್ನಯ ಕಿವಿಗಳೆನ್ನಯ ।
ಮೆರೆವ ಗುಣಗಣವರ್ಣನೆಯ ಕೇಳಲಿ ಸುಭಕ್ತಿಯಲಿ ॥
ಧರಿಯಲಾತ್ಮಜ್ಞಾನಸಂಯುತ- ।
ರಿರುವ ಸಾಧುಗಳೆನ್ನ ರೂಪರು ।
ಅರಿಸು ನಿನ್ನಯ ದೃಷ್ಟಿಯವರಲಿ ಕಾಮಿನಿಯ ತೆರದಿ ॥
॥ ೬೭ ॥

ನಾನು ಸಚರಾಚರದಿ ತುಂಬಿಹೆ ।
ಧ್ಯಾನ ಮಾಡೈ ಯೆನ್ನ ನಾಮ- ।
ಶ್ರೇಣಿಯನ್ನುಚ್ಚರಿಸಲೈ ತವ ವಾಣಿ ಯೆಡೆಬಿಡದೆ ॥
ನೀನು ಕೈಯಿಂ ಮಾಳ್ಪ ಕರ್ಮಕೆ ।
ನೀನು ಕಾಲಿಂ ನಡೆವ ಕರ್ಮಕೆ ।
ನಾನಧಿಷ್ಠಿತನೆಂದು ಸರ್ವವನರ್ಪಿಸೈ ಯೆನಗೆ । ೬೮ ॥

ವಾರ್ಥ ನೀ ಸಂತತದಿ ಮಾಳ್ಪ ಪ- ।
ರಾರ್ಥವಥವಾ ಸ್ವಾರ್ಥಕರ್ಮವ ।
ಸ್ವಸ್ಥ ಚಿತ್ತದೊಳೆನಗೆ ನೀನರ್ಪಿಸಲು ಮದ್ಯಾಜಿ ॥
ವಿಸ್ತರಿಸಿ ನಾನೇನ ಹೇಳಲಿ ।
ವಾರ್ಥ ನಿನಗೀ ತೋರ್ಪ ವಿಶ್ವವು ।
ಸತ್ಯವೆನ್ನೆಯ ರೂಪವೆಂದೇ ತಿಳಿದು ಭಕ್ತಿಯಲಿ ।। ೬೯ ॥

ಸೇವ್ಯವೈ ಮದ್ರೂಪವಿರುವುದು ।
ಸೇವಕನು ನೀನಿದಕೆ ಸರ್ವಕೆ ।
ಭಾವವಿದನೀ ಧರಿಸಿ ಸರ್ವರ ಸೇವೆ ಮಾಡುವುದು ॥

ಜೀವಮಾತ್ರದೊಳಿರುವ ದೈವ್ಯತದ ।
ಭಾವವನು ನೀ ಮರೆತು ನಾನೇ ।
ಜೀವಿಗಳ ಹೃದಯದಲಿ ವಾಸಿಪೆನೆಂದು ನೀ ನಂಬು ॥ ೭೦ ॥

ನರನೆ ನೀನೀ ತೆರದಿ ಭಾವಿಸಿ ।
ತೊರೆದು ದ್ವೈತವ ಸರ್ವಪ್ರಾಣಿಗ- ।
ಳಿರುವುವಲ್ಲಾ ಹರಿಮಯವು ತಾನೆಂದು ನಂದಿಪುದು ॥
ಸರಿಯಲೀ ವಂದನೆಯ ಮಾಡಲು ।
ಬರುವುದೈ ನಮ್ರತೆಯು ನಿನ್ನಲಿ ।
ದೊರೆನ್ನದೆನ್ನಾಶ್ರಯವೆನುತ ನೀ ನಂಬು ದೃಢವಾಗಿ ॥ ೭೧ ॥

ತೋರುನೀ ವಿಶ್ವದಲಿ ಸರ್ವದಿ ।
ಮೂರನೇಯವನಿರುವನಾರೈ ।
ತೋರುವುದು ನಾ ನೀನು ಯೆಂಬುವ ಭಾವಯುಗಳವಲಾ ।
ಚಾರುಸುಖ ಭೋಗಿಸುವರಿಬ್ಬರೆ ।
ಯಾರಿಹರು ಹೊರತೆಮ್ಮ ಜಗದಲಿ ।
ಸೇರಿಯುಭಭೋಗಿಸುವುದೈ ತಂತಮ್ಮೊಳಗೆ ನಾನೆ ।। ೭೨ ॥

ಸ್ಥಿತಿಯೊಳಿದರಲ್ಲೆನ್ನ ಭೋಗಿಸಿ ।
ಯತಿಸುಖವ ನೀ ಪಡೆವಿಯಲ್ಲನೆ ।
ಸತತವೀಪರಿ ನಾನು ನಿನ್ನನು ಭೋಗಿಸುವೆ ವಾರ್ಥ ॥
ಕ್ಷಿತಿಯಲೀ ತೆರ ಸುಖಕ್ಕೆ ವರ್ಧಿಸೆ ।
ಸತತ ಬರುತಿಹ ಪಡದೆ ಮೂರನೆ ।
ಸ್ಥಿತಿಯೆ ಸಾಯಲು ನೇರುನಿಯಲಾ ಯೆನ್ನನೇ ನೀನು ॥ ೭೩ ॥

ಬತ್ತಿ ಹೋಗಲು ಕೊಳವೆ ಕೊಳದಲಿ ।
ವಿಸ್ತರಿಪ ಪ್ರತಿಬಿಂಬ ತನ್ನಯ ।
ವಸ್ತುವನು ನೇರುವರೆ ಮುಂದೇನಡಚಣೆಯು ವಾರ್ಥ ॥
ಮತ್ತೆ ಗಗನವ ವಾಯು ನೇರಲಿ- ।
ಕೆತ್ತಣದ ಸಂದೇಹ ತೆರೆಗಳು ।
ನಿತ್ಯಜಲದಲಿ ನೇರುವರೆ ಮತ್ತೇನು ಸಂದೇಹ ॥ ೭೪ ॥

ನರನೆ ಭೇದವು ದೇಹಮೂಲಕ ।
ವಿರುವುದದರಿಂ ನೀನುನಾನೆಂ- ।
ಬೆರಡು ವ್ಯಕ್ತಿಗಳಿರದೆ ಭೇದವು ಸಾಯಲಾಕ್ಷಣಕೆ ॥
ಬರುವುದೈ ಮದ್ರೂಪ ನಿನಗದು ।
ಖರೆಯೊ ಸುಳ್ಳೋ ಯೆಂಬ ಶಂಕೆಯ ।
ಧರಿಸದಿರು ಕೌಂತೇಯ ನಿಜನಿದು ನೋಡು ನಿನ್ನಾಣೆ ।।೪೬।।

ಆಣೆ ನಿನ್ನಯ ಕೊಟ್ಟೆನೆಂದನು- ।
ಮಾನ ಮಾಡಲು ಬೇಡ ವಾರ್ಥನೆ ।
ನಾನು ನಿನ್ನಸ್ಖಿಳೆದೆ ನಾನಾಣೆಯು ಹೊರಗೆ ನಿಂತು ॥
ಈ ನಿಧಾನವ ಮಾಡ ಬೇಡೈ ।
ನೀನು ನನ್ನ ಪ್ರಾಣವೆಂದೇ ।
ನಾನು ಬೇಳೆಹೆನಲ್ಲನೇನು ಪದೇಪದೇ ನಿನಗೆ ॥ ೪೭॥

ಪಾರ್ಥ ಕೇಳೈ ನೀನು ಯೆನ್ನಯ ।
ಪ್ರೀತಿಪಾತ್ರನು ತತ್ತ್ವ ನಿಜನಿದು ।
ಮಾತನೀಪರಿ ಯೇಕೆ ಯಾಡಿದೆನಾಣೆ ಯಿತ್ತೆನಲಾ ॥
ಭೂತಳದಿ ಸುಳ್ಳಾಡುವನರೀ ।
ಮಾತ ಬೇಳುವರಾಣೆ ಬೇಳ್ವರು ।
ರೀತಿಯೆಲ್ಲವ ತಿಳಿದಿಹೆನು ನಿನ್ನಾಣೆ ಹೇಳುವುದು ।, ೪೮॥

ನಾನಿಹೆನು ನಿಜ ಬೇದಮಾನ್ಯನು ।
ನಾನು ಭೇದಾತೀತ ಕೇಳೆ- ।
ನ್ನಾಜ್ಞೆಯಲಿ ತೋರುವುದು ಜಗದಾಭಾಸ ಕೌಂತೇಯ ।।
ನಾನು ಕಾಲಾಂತಕನು ಶಕ್ತನು ।
ನಾನೆ ಜಗದ ಹಿತೈಷಿ ಕೇಳೈ ।
ನಾನು ಜಗದಲ ಸತ್ಯಸಂಕಲ್ಪನು ಕಣಾ ತಿಳಿಯೆ ॥ ೪೯॥

ನರನೆ ನಾನೀ ಪರಿಯೊಳಿದ್ದರು ।
ಅರುಹಿದೆನು ನಿನ್ನಾಣೆ ಯೆನುತಲಿ ।
ಮರುಳನಾದೆನು ನಿನ್ನೊಡನೆ ಕೌಂತೇಯ ನೋಡಿದಿಯಾ ॥
ಮರೆತೆನೆನ್ನಯ ದೇವತನವ- ।
ನ್ನಿರುವೆ ನಿನ್ನಯ ಭಕ್ತಸರ್ಧನು ।
ಯಿರುವಿ ನೀ ಮದ್ರೂಪನಾಗಿಯೆ ನೀನೆ ಸಂಪೂರ್ಣ ॥೪೯೦॥

ಅರಸನಾದರು ಮಿತ್ರಮಂಡಲಿ- ।
ಯರು ತನಗೆ ವಿಶ್ವಾಸಿಸಲು ಬಹು- ।
ತೆರದೊಳವರೊಳು ತಾನು ಮಾಡುವನಾಣೆಭಾಷೆಯನು ॥

ತೆರದೊಳೀ ನಿನ್ನಾಣೆ ಬೇಳ್ದೆನು ।
ಹರಿಯು ಬೇಳ್ದುದನೆಲ್ಲ ಕೇಳುತ ।
ನರನು ಪ್ರತ್ಯುತ್ತರವನಿತ್ತನು ರೋಮಪುಳಕದಲಿ ॥ ೪೮॥

ಹರಿಯೆ ನಿನ್ನಯ ನುಡಿಯು ಕೇಳಿದೆ- ।
ನರಿಯೆ ನಾ ಪಾಲ್ಗಾಳದಲಿ ಗುಣ- ।
ವಿರುವುದಲ್ಲಾ ನೋಡು ನಾಮಸ್ಮರಣದಲಿ ಸಿದ್ಧಿ ॥
ಧರೆಯಲೀಪರಿಯಿರಲು ನಿನ್ನಯ ।
ತೆರನದಾವುದು ಆಣಿಭಾಷೆಯು ।
ಬರಿದೆ ನಿನ್ನ ವಿನೋದನೀಪರಿ ಬೇಡನೆನ್ನೊಡನೆ ॥ ೪೯॥

ತರಣಿ ತನ್ನಯ ಕಿರಣದಿಂದಲೆ ।
ಯರಳಿಸುವನ್ಯೆ ಕಮಲವನವನು ।
ಧರೆಯೊಳದಕಿನ್ನೇಕೆ ಹೆಚ್ಚು ಪ್ರಕಾಶ ತುಸ ನಾಕು ॥
ತರಣಿ ತನ್ನೌದಾರ್ಯದಿಂದಲಿ ।
ಧರೆಗೆ ಸರ್ವಪ್ರಕಾಶ ಕೊಡುವನು ।
ಹರಿಯೆ ನೀನೀ ತೆರದಿ ಜಗದುದ್ಧಾರ ಮಾಡಿದಿಯಾ ॥೫೦॥

ಚಾತಕನಿಗೋಸುಗವೆ ಮೆಘ- ।
ವ್ರಾತ ಹನಿ ಹನಿ ನೀರ ಸುರಿಸವೆ ।
ಭೂತಳದಿ ಸುರಿಸುವುದು ಮಳೆಯನು ಮುಸಲಧಾರೆಯಲಿ ॥
ಭೂತಳದಿ ಜಲರಾಶಿ ಹರಿಯುತ ।
ಯಾತಕದು ಸಾಗರದಿ ಹರಿಯುವು ।
ದೀತೆರದ ಔದಾರ್ಯವಲ್ಲಾ ಮೇಘರಾಜನದು ॥ ೫೧॥

ಪರಮ ಕರುಣಿಯೆ ನೀನುದಾರನು ।
ಪರಿಮಿತಿಯು ನಾ ಕಾಣೆ ನಿನ್ನಯ ।
ಕರುಣೆಗಿನ್ನೇನೆಂಬೆನೆನ್ನ ನಿಮಿತ್ತ ಮಾಮತಲೆ ॥
ಹರಿಯೆ ಜಗದುದ್ಧಾರ ಮಾಡುವ ।
ಧರಿಸಿ ಸದ್ಭೋತುವನು ಮನದ- ।
ಲ್ಲರುಹಿದಿಯಲಾ ಜ್ಞಾನವೆಲ್ಲವ ಜಗಕೆ ಶುಭವಾಯ್ತು ॥ ೫೨॥

ಹರಿಯು ಕೇಳುತ ನುಡಿದನುತ್ತರ ।
ನರನೆ ನಾಕೀ ಸ್ತುತಿಯು ನಿಷ್ಫಲ- ।
ವರುಹಿದೆನು ಮದ್ರೂಪವಾಗುವ ಯುಕ್ತಿ ಸುಲಭದಲಿ ॥
ಶರಧಿಯಲಿ ಜೀಳಲ್ಕಿ ಲವಣವು ।
ಕರಗುವುದು ಕ್ಷಣಕ್ಷಣದೊಳದರ- ।
ಲ್ಲಿರುವುದೇ ಕಾರಣವು ಲವಣಕೆ ಕರಗಬೇಕೆಂದು ॥ ೫೩॥

ನಿರುತ ನೀ ಸರ್ವಪ್ರಕಾರದಿ ।
ನರನೆ ಯೆನ್ನನು ಭಜಿಸು ತದನಂ- ।
ತರದಿ ನಿನ್ನಯ ಬುದ್ಧಿ ನೋಡುವುದೆನ್ನೆಲ್ಲರಲಿ ॥
ಬರಲು ನಿನಗೀ ತೆರದೊಳನುಭವ ।
ಮರಣ ತಾಳ್ವುದು ನಿನ್ನ ಹಂಕೃತಿ ।
ಬರುವುದೈ ನಿನಗಾಗ ಮದ್ಭಾಪವು ಕಣಾ ನಿಜದಿ । ೮೮೭॥

ನರನೆ ನಿನಗಾನೆಲ್ಲ ಪೇಳ್ದೆನು ।
ಕರುಮ ಮಾರ್ಗದಿ ಜ್ಞಾನವಾಪ್ತಿಯ ।
ತೆರವ ತದನಂತರದಿ ಮದ್ಭಾಪದ ಸಮಾಪ್ತಿಯನು ॥
ಅರುಹುವೆನು ನಿನಗೊಂದು ತತ್ತ್ವವ ।
ಹರಿಗೆ ನೀನರ್ಪಿಸುವುದೆಲ್ಲವ ।
ಪರಿಪರಿಯ ಕರ್ಮಗಳ ನೀನಾಚರಿಪುದೆಲ್ಲವನು ॥ ೮೮೮ ॥

ಹರಿಗೆ ಕರ್ಮಾರ್ಪಣವ ಮಾಡಲು ।
ದೊರಕುವುದು ಯೆನ್ನ ಪ್ರಸಾದವ ।
ಬರುವುದೆನ್ನ ಪ್ರಸಾದದಿಂದಲೆ ಪಾರ್ಥ ಜ್ಞಾನವದು ॥

ಬರಲು ಜ್ಞಾನವು ಮುಂದೆ ಯೆನ್ನಯ ।
ಪರಮ ರೂಪದೊಳೈಕ್ಯ ಹೊಂದುವ- ।
ನರರೆ ನಂತರ ಸಾಧ್ಯಸಾಧನ ಭೇದವೆಲ್ಲಿಯದು । ೮೮೯ ॥

ನೀನು ನಿನ್ನಯ ನಿಖಿಲಕರ್ಮವ ।
ಸಾನುರಾಗದೊಳರ್ಪಿಸಿದಿ ಮ- ।
ತ್ತೀನು ಯೆನ್ನ ಪ್ರಸಾದವಾಯಿತು ನಿನಗೆ ನೋಡೀಗ ॥
ನಾನು ರಣರಂಗದಲಿ ವಿಘ್ನವ ।
ಮಾನಿಸದೆ ಮೆಚ್ಚಿದೆನು ಪ್ರೇಮದ ।
ಪೂರ್ಣಪಾತ್ರನು ಪಾರ್ಥ ಪೇಳಿದೆ ನಿನಗೆ ಜ್ಞಾನವನು ॥ ೮೯೦ ॥

ಗೀತೆಯಿದು ದೃಷ್ಟಾಂತಯುಕ್ತಿಸ- ।
ಮೇತ ಜ್ಞಾನದ ಸಾರ ತಿಮಿರ- ।
ವ್ರಾತಕೆದು ಕಾಡ್ಗಿಚ್ಚು ಸಂಸೃತಿ ಪೋಹಕಿದು ಕೂಲ ॥
ಪ್ರೀತಿಯಿಂದಲಿ ನಿನಗೆ ಜ್ಞಾನ- ।
ಜ್ಯೋತಿಯಿತ್ತೆನು ಬೆಳಕ ಪಸರಿಸಿ ।
ಪಾರ್ಥ ಧರ್ಮಾಧರ್ಮದಜ್ಞಾನವನು ಹರಿಸಿದೆನು ॥ ೮೯೧ ॥

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥ ೬೬ ॥

ಆಶೆ ನೋಡೈ ಸರ್ವದುಃಖದ ।
ಕೋಶ ನಿಂದಾಮೂಲಕದಿ ಬಹು- ।
ದೋಷವಾತಕ ಸಂಜನಿಸುವುದು ಪಾರ್ಥ ನೋಡಿದಿಯಾ ॥
ಕ್ಲೇಶದಾರಿದ್ರ್ಯಗಳು ದೈವದ ।
ದೋಷದಿಂದುದ್ಭವಿಸುತಿರುವುವು ।
ವಾಸವಾತ್ಮಜ ನೋಡು ದುಃಖದ ಕಾರಣಗಳನ್ನು ॥ ೮೯೨ ।

ನರನೆ ನೋಡಜ್ಞಾನದಿಂದಲಿ ।
ನಿರುತ ಧರ್ಮಾಧರ್ಮ ಭೇದವು ।
ಬರುವುವಲ್ಲಾ ಸ್ವರ್ಗನರಕದ ಪುಣ್ಯಪಾಪಗಳು ॥
ನರನೆ ನೀನೀ ಜ್ಞಾನದೀಪದಿ ।
ಭರದಿ ದಹಿಸಜ್ಞಾನತಿಮಿರವ ।
ಧರೆಯಲೀಪರಿ ಪುಣ್ಯಪಾಪವು ನಿನ್ನ ಬಾಧಿಸದು ॥ ೮೯೩ ॥

ಅರಿಯದಲೆ ಹಗ್ಗನು ನಿಜದ- ।
ಲ್ಲುರಗನೆಂದಾಭಾಸ ಬರುವುದು ।
ಕರದಿ ಹಗ್ಗವ ಹಿಡಿಯೆ ಮೇಣಾಭಾಸವೆಲ್ಲಿಯದು ॥

ಬರಲು ನಿದ್ರೆಯು ಸ್ವಪ್ನದೊಳಗೆನೆ ।
ಮೆರೆವುದೈ ಸಾಮ್ರಾಜ್ಯ ಸುಖವದು ।
ತೊರೆಯೆ ನಿದ್ರೆಯ ಸ್ವಪ್ನಸುಖವದು ಉಪ್ಪವಾಗುವುದು । ೮೯೪ ॥

ಹಳದಿ ಬಣ್ಣದ ಚಂದ್ರನೆಂಬುವು- ।
ದುಳಿವುದೇ ಕಾಮಿಣಿಯು ಹೋಗಲು ।
ಅಳಿಯೆ ವ್ಯಾಧಿಯು ವುಳಿವುದೇ ನಾಲಿಗೆಯ ಕಹಿತನವು ।
ನಳಿನಮಿತ್ರನು ಹೋಗಲಾಕ್ಷಣ- ।
ವುಳಿವುದೇ ಮೃಗಜಲವು ಕಾಷ್ಯವ ।
ತೊಲಗೆ ಜೆಂಕೆಯು ತೊಲಗಲಾರದೆ ಬಿಡುವುದೇ ಪಾರ್ಥ ॥೮೯೫॥

ನರನೆ ಧರ್ಮಾಧರ್ಮ ತಿಳಿಸುವ ।
ಧರೆಯೊಳಿಹ ಅಜ್ಞಾನ ಹೋಗಲು ।
ಹರಿವುದಲ್ಲಾ ಸರ್ವಧರ್ಮವಜಾಳ್ವಿಕೆಯು ಕೂಡ ॥
ಹರಿಯಲಾ ಅಜ್ಞಾನತಿಮಿರವು ।
ತಿರಿಗಿ ನಾನೊಬ್ಬೊಂಟಿಗನೆ ಮೇ- ।
ಣಿರುವೆನಲ್ಲಾ ನಿದ್ರೆಸ್ವಪ್ನವು ಪೋದ ನರನಂತೆ ॥ ೮೯೬ ॥

ಎನ್ನ ಹೊರತೀ ಜಗದಿ ಭಿನ್ನಾ- ।
ಭಿನ್ನ ಭಾವನೆಯಳಿದು ಹೋಗುವು- ।
ದಿನ್ನಳಿದ ನಿಜತತ್ತ್ವ ನಾನೇ ಪಿನುತ ಕಲ್ಪಿಸುತ ॥
ಎನ್ನೊಡನೆಯಿವನೈಕ್ಯ ಪಡೆವನು ।
ತನ್ನದೆಂಬುವ ಭೇದಭಾವವ ।
ತಿನ್ನಮಾಡುತಲೆನ್ನ ಸೇರಿದರವನೆ ನಿಜ ಶರಣಿ ॥೮೯॥

ನಡುವೆ ಒರಲಾ ಘಟದುಪಾಧಿಯು ।
ಪೊಡನೆ ಘಟದಾಕಾಶ ಕಲ್ಪನೆ ।
ಬಿಡದು ಘಟವದು ನಾಶವಾದಾಕ್ಷಣ ಘಟಾಕಾಶ ॥
ಪಡೆವುದೈಕ್ಯವನರೆ ನಿಮಿಷದಲಿ ।
ಬಿಡದು ನಿಜವಾಕಾಶವದ ನೀ ।
ಪಡೆನಿ ಯೆನ್ನೊಳು ಸತ್ಯೈಕ್ಯವ ಶರಣ ಒರಲೆನಗೆ ॥೮೮॥

ಚಿನ್ನದಿಂ ಮಣಿಗಳನು ಮಾಡೆ ಸು- ।
ವರ್ಣವನೆ ಸೇರುವುವು ಮಣಿಗಳು ।
ಸಣ್ಣ ದೊಡ್ಡ ತರಂಗಗಳು ನೀರನ್ನೆ ಸೇರುವೆವು ॥
ಮನ್ನಿಸೀಪರಿ ಶರಣ ಹೋಗೆನ- ।
ಗಿನ್ನೆನುತ ನಾ ಪೇಳ್ದೆ ವಾರ್ತೆನೆ ।
ಭಿನ್ನತನವನು ಬಿಟ್ಟೆನಗೆ ನೀನೀಗ ಜಾ ಶರಣ ॥ ೮೯ ॥

ಶರಣ ಹೊಗುವನು ಸಾಗರವ ಸಾ- ।
ಗರದ ರಿವು ಒಡಬಾನಳನು ಸಾ- ।
ಗರವನವ ನಾಶಿಸುವನ್ಯೆ ಕಡು ವೈರಭಾವದಲಿ ॥
ನರನೆ ನೀನೀ ತೆರದಲೆನ್ನನು ।
ಶರಣ ಒರದಲೆ ದ್ವೈತಭಾವವ ।
ಮುರಿದು ಯೆನ್ನ ವಿರುದ್ಧ ಮಾರ್ಗವ ಬಿಟ್ಟು ಬಿಡು ಪಾರ್ಥ
॥ ೯೦೦ ॥

ಬರುತ ಶರಣವನನ್ಯಭಾವದೊ- ।
ಳಿರುವೆ ದ್ವೈತದೊಳೆನ್ನೊಳೆಂದರೆ ।
ನರನೆ ಶಕ್ಯವೆ ಹೇಳುವವನಿಂಗಿಲ್ಲ ನಾಚಿಕೆಯು ॥
ನರನೆ ಧಿಕ್ಕರಿಸಿದನು ನಿಜದ- ।
ಲ್ಲರುಹಲೆಂತೀ ಪರಿಯ ನಿನ್ನ- ।
ಲ್ಲರಿಯಲಾ ನಿನಗೊಂದು ಮಾತನು ಪೇಳ್ವೆ ಮನಗೊಟ್ಟು
॥ ೯೦೧ ॥

ಆರಸನೊಳು ಸಂಬಂಧ ದಾಸಿಗೆ ।
ಬರಲು ಯೋಗ್ಯತೆ ಯೇರ್ವುದಾಕೆಗೆ ।
ಪರಿಯಲಾ ನೀನೋಡು ಪ್ರಾಕೃತನರಸನವನಲ್ಲೆ ॥
ಇರುವೆ ವಿಶ್ವಾಧೀಶ ನಾನೇ ।
ಬರಲು ಯೆನ್ನೊಡನಾತ್ಮದರ್ಶನ ।
ತೊರೆಯಲಾರವೆ ಬಂಧನಗಳೇ ಮಾತ ಬಿಟ್ಟು ಬಿಡು ॥ ೯೦೨ ॥

ಎನ್ನರೂಪವ ಸೇರಿರಲು ನೀ ।
ಮುನ್ನವೇ ನಾನಾಗಿ ನಂತರ- ।
ವೆನ್ನ ಭಕ್ತಿಯು ಸಹಜವಾಗಿಯೆ ಬರುವುದೈ ಪಾರ್ಥ ॥
ಮುನ್ನವೇ ನಿನಗೆನ್ನ ಜ್ಞಾನವ- ।
ನನ್ನತೆಯು ದೊರಕಲಿ ಧನಂಜಯ ।
ಬಿನ್ನ ಬಿಡುವುದೆ ನಿನಗೆ ಕೆಳ್ ಮದ್ಯೂಪಸೌಖ್ಯವದು ॥ ೯೦೩ ॥

ಸೊಸರ ಕಡಿದಾ ಬೆಣ್ಣೆಯನು ಬಹು- ।
ಕುಶಲತನದಲಿ ವಿಂಗಡಿಸಿದರೆ ।
ನುಸುಳುವುದೆ ಮೇಣ್ಯೈಕ್ಯದಲಿ ಮಜ್ಜಿಗೆಯಲಾ ಬೆಣ್ಣೆ ॥
ಬಸುಟು ನೀನಾ ದ್ವೈತಭಾವವ- ।
ನಸಮಬಲ ನೀನೆನ್ನ ಸೇರಲು ।
ವ್ಯಸುರಲೀಸದ ನಿನಗೆ ಧರ್ಮಾಧರ್ಮ ಸ್ಪರ್ಶಿಸದು ॥ ೯೦೪ ॥

ನರನೆ ಕಜ್ಜಣವಂತರಾಲದೊ- ।
ಳಿರಲು ಮಣ್ಣನು ಬಿಡದು ನೋಡೈ ।
ಪರುಸಸ್ಪರ್ಶದಿ ಚಿನ್ನವಾಗುವುದೇನ ಹೇಳುನೆನು ॥
ತಿರಿಗಿಯಾ ಚಿನ್ನವನು ಮಣ್ಣಿಲಿ ।
ಭರದೊಳಿಟ್ಟರು ಕಲ್ಪಪರ್ಯಂ- ।
ತರಕೆ ಮಣ್ಣಾಸು ಸೇರಲಾರದು ಚೋದ್ಯ ನೋಡಿದಿಯಾ ॥೯೦೫॥

ಕಾಷ್ಠದಿಂದಲೆ ತೆಗೆದ ಬೆಂಕಿಯ ।
ಕಾಷ್ಠದಿಂದಲಿ ರಂಪಿಸುತ್ತಿಹ ।
ಪೆಟ್ಟಿಗೆಯಲದನಿಡಲು ಬಹುದೇ ಸುಟ್ಟು ಬಿಡುವ್ರದಲಾ ॥
ದೃಷ್ಟಿಸನೆ ಕತ್ತಲೆಯನರ್ಕನು ।
ದೃಷ್ಟಿಸಲು ಸ್ವಪ್ನದ ಪ್ರಕಾರವ ।
ಕಷ್ಟನಲ್ಲಾ ನಿದ್ದೆಯಿಂದೆಚ್ಚರವು ಬಂದಿರಲು ॥ ೯೦೬ ॥

ಎನ್ನೊಳ್ಕೈಕ್ಯವ ಹೊಂದಿರಲು ನಿನ- ।
ಗಿನ್ನು ಬರುವುದು ಯೆನ್ನರೂಪವು ।
ಖಿನ್ನತನ ಮೇಣುಳಿವುದೇನ್ಯೆ ನಿನಗೆ ಕೌಂತೇಯ ॥
ಪುಣ್ಯಪಾಪಗಳೆಲ್ಲ ನೋಡೈ ।
ಯೆನ್ನ ಧರ್ಮಾಧರ್ಮ ಸರ್ವವು ।
ಭಿನ್ನವಿಲ್ಲದೆ ನಾನೆಯಾಗುವೆ ನಿನಗೆ ಸರ್ವತ್ರ ॥ ೯೦೭ ॥

ದುರಿತನಿಹುಡೈ ಸರ್ವಬಂಧನ- ।
ನಿರುವ್ವದದಕೀ ಲಕ್ಷಣವಲಾ ।
ಹೊರತು ಯೆನ್ನನು ಬೇರಿರುವುದೇ ಬೀಜವಿಡಕೆಲ್ಲ ॥
ನರನೆ ಯೆನ್ನೊಳು ಸೇರಲಕ್ಷಣ ।
ದುರಿತವೆಲ್ಲಿಂದಿಹುದು ನಾನೇ ।
ಹರಣ ಮಾಡುವೆ ದುರಿತವೆಲ್ಲವ ಜ್ಞಾನಖಡ್ಗದಲಿ ॥ ೪೦೮ ॥

ಎಲೆ ಧನಂಜಯ ನೋಡು ಲವಣವ ।
ಜಲದಿ ಹಾಕಲು ಕರಗಿ ಹೋಗುತ ।
ಜಲದ ರೂಪವ ಧರಿಸಿ ತಾನೈಕ್ಯವನು ಪಡೆವುದಲಾ ॥
ಇಳೆಯೊಳೀಪರಿ ನೀನು ನೋಡೆ- ।
ನ್ನೊಳಗೆ ಸೇರಲನನ್ಯಭಾವದಿ ।
ಬಳಿಕ ನೀಮದ್ರೂಪವಾಗುವಿ ಭೇದವೇನಿದಕೆ ॥ ೪೦೯ ॥

ನರನೆ ನೀನೀ ಯೋಗದಿಂದಲೆ ।
ಹರಿದು ಬಿಟ್ಟೀ ಬಂಧನಂಗಳ ।
ಅರಿತು ಯೆನ್ನನ್ನೆನ್ನ ದೊರಕಿಸಿ ಕೊಂಬುದನೆ ಮಾಡು ॥
ಬರಲು ನೀನೀ ತೆರದೊಳೆನ್ನೊಳು ।
ಹರಿದು ನಿನ್ನಯ ಸರ್ವಬಂಧನ ।
ನರನೆ ನಿನಗಾಂ ಮುಕ್ತತೆಯು ನಿಜವಾಗಿ ಕೊಡುವೆನಲಾ
॥ ೪೧೦ ॥

ಸುಮತಿ ಧರ್ಮಾಧರ್ಮಚಿಂತೆಯ ।
ಕುಮತಿಯಂದದಿ ಮಾಡ ಬೇಡೈ ।
ವಿಮಲನಾಗಿಹೆನದ್ವಿತೀಯನು ಶರಣ ಬಾ ಯೆನಗೆ ॥
ಕಮಲನಾಭನು ಸರ್ವಪುರುಷೋ- ।
ತ್ತಮನು ರೂಪಕೆ ರೂಪ ದೃಷ್ಟಿಗೆ ।
ಯಮಿತಸುಂದರ ಸರ್ವದೇಶಕೆ ವಸತಿ ವಿಶ್ರಾಮ ॥ ೪೧೧ ॥

ನುಡಿದನೀಪರಿ ಶ್ಯಾಮಸುಂದರ ।
ಸಡಗರದ ಶ್ರೀಕೃಷ್ಣಮೂರುತಿ ।
ಕಡುಮಮತೆಯಿಂ ಬಲದಕೈಯಿಂ ಭೂಷಣಾನ್ವಿತದಿ ॥
ಹಿಡಿದು ಪಾರ್ಥನನೇಕಭಾವದೊ- ।
ಳಡಿಗೆರಗಿದಾ ಭಕ್ತರತ್ನಗೆ ।
ದೃಢತರಾಲಿಂಗನವನಿತ್ತನು ಮೈಮರೆತು ಹರಿಯು ॥ ೪೧೨ ॥

ಶಬ್ದಗಳು ವಿಸ್ತರಿಸಲಾರದ ।
ಬುದ್ಧಿ ಮಾತ್ರಕೆ ಸಿಗದಿರುವ ಪರಿ- ।
ತುದ್ಧಬುದ್ಧ ನಿಜಸ್ವರೂಪವ ತೋರಿಸುವೆನೆನುತ ॥

ಹದ್ದನೇರುವ ಕೃಷ್ಣ ತನ್ನ ವಿ- ।
ಶುದ್ಧ ದೇಹಾಲಿಂಗನವ ತಾಂ ।
ಮುದ್ದಗೈಯುತ ಕೊಡುವೆನೆಂದು ನಿಮಿತ್ತ ಮಾಡಿದನು ॥ ೪೧೩ ॥

ನರನ ಹೃದಯವ ತನ್ನ ಹೃದಯದೊ- ।
ಳಿರಿಸಿ ದೇವನು ತನ್ನ ಹೃದಯದೊ- ।
ಳಿರುವ ಜ್ಞಾನವ ನರನ ಹೃದಯದೊಳಿಟ್ಟನೈ ಭರದಿ ॥
ಮುರಿಯದಲೆ ದ್ವೈತವನು ತನ್ನಯ ।
ತೆರದಿ ಮಾಡಿದನೇನ ಹೇಳಲಿ ।
ದೊರೆಯಿತೈ ವಾರ್ಥನಿಗೆ ಕೃಷ್ಣನಿಜಾತ್ಮಬೋಧವದು ॥ ೪೧೪ ॥

ಒಂದು ದೀಪಜ್ಯೋತಿಯಿಂದಿ- ।
ನ್ನೊಂದು ದೀಪವ ಹಚ್ಚಿಕೊಂಡರೆ ।
ದ್ವಂದ್ವ ಮುರಿವುದೆ ದೀಪವೆರಡರದೈಕ್ಯ ಕುಂದುವುದೆ ॥
ಇಂದಿರಾಧವನೀತೆರದಿ ತ- ।
ನ್ನಂದವನು ತೋರಿಸಲು ಪಾರ್ಥಗೆ ।
ಬಂದುದೀಪರಿ ಪಾರ್ಥನಾಲಿಂಗನಪ್ರಭಾವವದು ॥ ೪೧೫ ॥

ನರನ ಪರಮಾನಂದಸುಖಸಾ- ।
ಗರದ ಪೂರದಿ ಕೃಷ್ಣ ಶ್ರೀಹರಿ ।
ಹರಿದು ಹೋದನು ಸರ್ವವ್ಯಾಪಕನಾದರೇನವನು ॥
ಶರಧಿಯಲಿ ಮೇಣ್ ಶರಧಿ ಸೇರಲು ।
ಬರುವುದಲ್ಲಾ ದ್ವಿಗುಣ ನೀರಾ ।
ಪುರವಣಿಗೆ ಬೇಕಾ ಗಗನವೇ ಯಿಂಪರಿಯೊಳಾಯ್ತು ॥ ೪೧೬ ॥

ಯಾರರಿವರಾನಂದಸುಖವನು ।
ಶ್ರೀರಮಣನಾಲಿಂಗನವ ತಾಂ ।
ಧೀರಪಾರ್ಥನಿಗಿತ್ತನಿಬ್ಬರಿಗಾಯಿತಾನಂದ ॥
ಯಾರುಪರಮಾನಂದಸುಖ ವಿ- ।
ಸ್ತಾರಮಾಡಲು ಶಕ್ತರಿರುವರು ।
ಚಾರು ವಿಶ್ವವೆಯಾಯ್ತು ನಾರಾಯಣಸ್ವರೂಪವದು ॥ ೪೧೭ ॥

ಈ ತೆರದಿ ಶ್ರೀಕೃಷ್ಣಹರಿ ಪರ- ।
ಮಾತುಮನು ಪ್ರಕಟಿಸಿದನೀ ಶ್ರೀ ।
ಗೀತೆಯನು ವೇದಗಳ ಸಾರವ ಮೂಲಸೂತ್ರವನು ॥
ಗೀತೆಯಿದು ಶ್ರವಣಕ್ಕೈ ಪಠನಕೆ ।
ಪಾತ್ರ ಪರಮಪವಿತ್ರ ಪಾವನ ।
ಶಾಸ್ತ್ರವಿದು ಕಲಿಯುಗದಿ ಭವಸಾಗರದಲುತ್ತರಣ ॥ ೪೧೮ ॥

ಹೇಳಿದೆನು ನಾನಿಲ್ಲಿ ಗೀತೆಯು ।
ಮೂಲ ಸೂತ್ರವಿದೆಂದು ವೇದಕೆ ।
ಹೇಳುವೆನು ನಾನಿದಕೆ ಕಾರಣಸಹಿತವನುಭವವ ॥
ಶ್ರೀಲಲಾಮನು ವಿಶ್ವದೊಡೆಯನು ।
ಮೇಲೆ ಶ್ವಾಸೋಚ್ಛ್ವಾಸ ಮಾಡಲು ।
ತಾಳಿದುವು ವೇದಗಳು ರೂಪವನೇನ ಹೇಳುವೆನು ॥೯೧೪॥

ಆ ರಮಾನರ ತನ್ನ ಮುಖದಿಂ ।
ಧಾರುಣಿಯಲೀ ಗೀತೆ ಪೇಳ್ದನು ।
ಚಾರು ಸತ್ಯಪ್ರತಿಜ್ಞೆಯಿಂದಲಿ ನರಗೆ ವಿವರಿಸಿದ ॥
ಕಾರಣದೊಳೀ ಗೀತೆ ವೇದದ ।
ಸಾರವಿದು ಮೇಣ್ ಮೂಲ ಸೂತ್ರವು ।
ಯಾರು ಬಣ್ಣಿಪರಿದರ ಮಹಿಮೆಯನೆಂದ ಜ್ಞಾನೇಶ ॥೯೧೦॥

ಮರವು ಜಗದಲಿ ವಿಸ್ತರಿಸಿದರೆ ।
ಧರಣಿಯಲಿ ನಿಜನೆಲ್ಲ ವಿಸ್ತೃತ- ।
ಮರವು ಮೇಣಿಲ್ಲಿರುವುದಂತರ್ಗತ ಸ್ವರೂಪದಲಿ ॥
ಇರುವುದಲ್ಲಾ ಬೀಜದಲ್ಲದು ।
ಪರಿಯಲಾವೇದತ್ರಿಕಾಂಡವು ।
ಯಿರುವುದಲ್ಲಾ ಗುಸ್ತದಲಿ ಗೀತಾರ್ಥಬೀಜದಲಿ ॥ ೯೧೧ ॥

ಆದ ಕಾರಣದಿಂದ ಗೀತೆಯು ।
ವೇದಗಳ ನಿಜ ಬೀಜವೆಂದೆನು ।
ಮೇದಿನಿಯಲೀ ತತ್ತ್ವ ನಿಜವಿದ ನಾರಿ ಹೇಳುವೆನು ॥
ವೇದಗಳ ಕಾಂಡಗಳು ಮೂರಿಹು ।
ವಾದರದಿ ನೋಡಿದರೆ ಗೀತೆಯು ।
ಮೋದದಿಂದಲಿ ಮೂರ್ಧಿದ ಭೂಷಣವ ಧರಿಸಿಹಳು
॥ ೯೧೨ ॥

ವೇದಗಳೆಗಿಹುವಲ್ಲವೇ ಕ- ।
ರ್ಮಾದಿ ಮೂಕಾರ್ಕಾಂಡಗಳು ತದ್ವತು ।
ವೇದಿನಿಯಲೀ ಗೀತೆಯಲ್ಲಿರುತಿಹುವು ಮೂಕಾರ್ಕಾಂಡ ॥
ಆದರಿಸಿದೀನಿವರವೆಲ್ಲವ ।
ಮೋದದಿಂದಲಿ ಪೇಳ್ವೆ ನಾ ದಾ ।
ಮೋದರನು ಪೇಳಿರ್ದ ಗೀತೆಯಲೆಲ್ಲಿರುವುವೆನುತ ।೯೧೩॥

ಇರುವುದೈ ಯಧ್ಯಾಯ ಮೊದಲನೆ ।
ಯಿರುವುದದು ಪ್ರಸ್ತಾವನಾತ್ಮಕ ।
ಧರೆಯೊಳೆಲ್ಲೀ ಗೀತೆಯುದ್ಧರಿಸುರುತ್ತದೇಕೆನುತ ॥

ಎರಡನೇಯಧ್ಯಾಯದಲಿ ಶ್ರೀ- ।
ಹರಿಯು ಸಾಂಖ್ಯವ ವಿಸ್ತರಿಸಿದನು ।
ಯಿರುವುದಲ್ಲಾ ಸಾಂಖ್ಯವೆಂದರೆ ಜ್ಞಾನವಿಸ್ತಾರ ।। ೯೧೪ ॥

ಜ್ಞಾನವಿದು ಪರತಂತ್ರವಿಲ್ಲದೆ ।
ತಾನೆ ಮೋಕ್ಷವನಿತ್ತು ಕರ್ಮಾ- ।
ಧೀನತೆಯು ಧಿಕ್ಕರಿಪುದೆನ್ನುತ ಪೇಳಿದನು ಹರಿಯು ॥
ಈ ನಿಧಾನವ ಸೂಕ್ಷ್ಮತರದಿಂ ।
ದಾನವಾಂತಕ ಸೂತ್ರರೂಪದೊ- ।
ಳಾನರಗೆ ಹೇಳಲಿಕೆ ಪ್ರಾರಂಭವನು ಮಾಡಿದನು । ೯೧೫ ॥

ಪುರುಷನಿಂಗಜ್ಞಾನಯೋಗದಿ ।
ಬರುವುದೈ ಪರಿಪರಿಯ ಬಂಧನ ।
ಹರಿದು ತಾನಾ ಬಂಧನಂಗಳ ಮೋಕ್ಷಪದವಿಯನು ॥
ದೊರಕಿಸುವ ಧರ್ಮಸ್ವರೂಪದ ।
ಪರಿಪರಿಯ ಸಾಧನವೆನೆಂತಾ ।
ನರನು ಮಾಳ್ಪನೆನುತ್ತ ಮೂರನೆಯಲ್ಲಿ ವಿಸ್ತಾರ ॥ ೯೧೬ ॥

ತೊರೆದು ನಿಜದೇಹಾಭಿಮಾನವ ।
ತರಿಸಿ ಬೇಕೈ ವಿಹಿತ ಕರ್ಮವ ।
ನಿರುತ ಕಾಮ್ಯನಿಷಿದ್ಧ ಕರ್ಮಗಳನ್ನು ತ್ಯಜಿಸುವುದು ॥
ನಿರುತ ಸದ್ಭಾವದಲಿ ಕರ್ಮಾ ।
ಚರಣ ಮಾಡುವುದೆಂದೆನುತ ಶ್ರೀ ।
ಹರಿಯು ಹೇಳಿದನೆಂತ ತಿಳಿಯಲು ಕರ್ಮಕಾಂಡವಲಾ ।೯೧೭।

ನಿತ್ಯನೈಮಿತ್ತಿಕದ ಕರ್ಮವ ।
ನಿತ್ಯವಾಚರಣೆಯನು ಮಾಡಲು ।
ಸತ್ಯನೈಯಜ್ಞಾನ ಸಾಯುವುದೆಂತ ವಿಸ್ತರಿಸಿ ॥
ಧಾತ್ರಿಯಲ್ಲೀ ಕರ್ಮಬದ್ಧನು ।
ಚಿತ್ತಶುದ್ಧಿಯಿಂದ ಕರ್ಮನ- ।
ಮಸ್ತವನು ಮಾಡಲ್ಕೆ ಬ್ರಹ್ಮಾರ್ಪಣವ ಮಾಡೆನುತ ॥ ೯೧೮ ॥

ಹರಿಯು ಪೇಳಿದ ವಿಹಿತ ಕರ್ಮವ ।
ಹರಿಯು ಮೆಚ್ಚಿಸಲೆನುತ ಮಾಳ್ಪುದು ।
ನಿರುತ ಕೃಷ್ಣಾರ್ಪಣವ ಮಾಳ್ಪುದೆನುತ್ತ ಹೇಳಿದನು ।'
ಹರಿನಿಮಿತ್ತದ ಕರ್ಮಯೋಗದಿ ।
ಹರಿಭಜನಕಥನವನು ಮಾಡುವ ।
ಪರಿಯ ವಿಸ್ತರವೇ ಚತುರ್ಥಾಧ್ಯಾಯದಂತದಲಿ ॥ ೯೧೯ ।

ಹರಿಗೆ ಕರ್ಮಾರ್ಪಣೆಯ ಮಾಡುತ ।
ಹರಿಯ ಭಜನವನೆಂತು ಮಾಡುವ ।
ಪರಿಯನೆಲ್ಲವ ವಿಶ್ವರೂಪಾಧ್ಯಾಯ ಪರ್ಯಂತ ॥
ಹರಿಯು ವಿಸ್ತರಿಸಿಹನು ಪಾರ್ಥನಿ- ।
ಗಿರುವುದೀ ವಿಸ್ತಾರ ನಾಲ್ಕನೆ ।
ಸರಸಸಂಧಿಯು ಹಿಡಿದು ಹನ್ನೊಂದನೆಯ ಪರ್ಯಂತ ।।೪೩೦॥

ಇರುವುವೀಪರಿ ಸರಸವೆಂಟುಸ್ರ- ।
ಕರಣ ಕಾಂಡವುವಾಸನಾತ್ಮಕ ।
ವಿರುವುದಿದಕಿನ್ನೊಂದು ಹೆಸರೈ ದೇವತಾಕಾಂಡ ॥
ಒರುತಿರುವ ಪರಿಪರಿಯ ವಿಷ್ಣವ ।
ಹರಿಸಿ ಯೇತೀಶ್ವರನ ಭಜಿಪುದು ।
ಪರಿಯನೀಕಾಂಡದಲಿ ವಿಸ್ತರಿಸಿಹನು ಶ್ರೀಹರಿಯು ॥ ೪೩೧ ॥

ಗುರುಪರಂಪರೆ ಸಂಪ್ರದಾಯದಿ ।
ಮರಳಿ ಕೇಳೀಶ್ವರ ಪ್ರಸಾದದಿ ।
ಬರುವುದೈ ಸುಜ್ಞಾನ ನಿಜವಿಹುದಿದು ಸುಕೋಮಲವು ।।
ಹರಿಯು ಜ್ಞಾನವ ವಿಸ್ತರಿಸಿ ಹ- ।
ನ್ನೆರಡನೇಯಧ್ಯಾಯ ಪೇಳ್ದನು ।
ಸುರುವಿದಕ್ಕಾ ಶ್ಲೋಕವದ್ವೇಷ್ಟಾದಿಕವು ಕೆಂವಾ ॥ ೪೩೨ ॥

ಪದವಮಾನಿತ್ವಮಿದು ಸುರುವಿನ ।
ಪದದಲಿರುವಾ ಶ್ಲೋಕ ಹಿಡಿದಾ । [ಪದದಲಿ=ಸ್ಥಾನದಲ್ಲಿ]
ಹದಿಮುರನೆಯಧ್ಯಾಯದಲಿ ವಿಸ್ತಾರವಿಹುದಿದರ ।।
ಬುಧರು ನೋಡಾ ಕಾರಣದೊಳಾ ।
ಹದಿನೆರಡನಧ್ಯಾಯನಿದರಲಿ ।
ಮುದದಿ ಸೇರಿಸಿ ಜ್ಞಾನಕಾಂಡವಿದೆನ್ನುವರು ಜಗದಿ ।।೪೩೩॥

ಹಿಡಿದು ಹನ್ನೆರಡನೆಯ ಸಂಧಿಯ ।
ಕಡೆಗೆ ಹದಿನೈದರ ತನಕವಾ ।
ಜಡಜನಾಭನು ಜ್ಞಾನಫಲಸಿದ್ಧಿಯನು ಪೇಳಿಹನು ॥
ಹಿಡಿವರೀಯಧ್ಯಾಯ ನಾಲ್ಕನು ।
ಪೊಡವಿಯಲ್ಲೀ ಜ್ಞಾನಕಾಂಡದಿ ।
ನುಡಿದೆನದರಿಂ ಗೀತೆಯಲಿ ಮೂರ್ಕಾಂಡವಿಹುದೆಂದು ॥೪೩೪॥

ಜ್ಞಾನಕರ್ಮೋಪಾಸ್ತಿಯ ಜಗ- ।
ನ್ಮಾನ್ಯ ಗೀತೆಯು ಗೀತೆಯಲ್ಲಾ ।
ಕ್ಷೋಣಿಯಲಿ ಮೂರ್ವೇದಗಳ ಥಳಥಳಿಪ ಮೂರ್ತಿಯಲಾ ॥

ಕಾರಣುವೀಪದ್ಯಾಷ್ಟಹಾರವ ।
ತಾನೆ ಧರಿಸಿಹಕ್ಕೇನ ಹೇಳಲಿ ।
ಚೂಣಿಕದ ಸಮರತ್ನವಲ್ಲಾ ಶಬ್ದರಚನೆಯಿದು ॥ ೪೩೫ ॥

ಗೀತೆಯೆಂಬುದು ಮೂರುಕಾಂಡದ ।
ಮೂರ್ತಿಮಂತ ಶ್ರುತಿಯು ಡಂಗುರ ।
ಭೂತಳದಿ ಹೊಡಿಸುವುದು ಕೊಳ್ಳಿರಿ ಮೋಕ್ಷವೆಂಬ ಫಲ ।।
ಈ ತೆರದಜ್ಞಾನಕ್ಕೆ ಶತ್ರು- ।
ವ್ರಾತನಿರುವುದೆನುತ್ತ ಕಂಸಾ ।
ರಾತಿ ಹದಿನಾರನೆಯ ಅಧ್ಯಾಯದಲಿ ಪೇಳಿದನು ॥ ೪೩೬ ॥

ಶತ್ರುನಿಹುದಜ್ಞಾನವರ್ಗವು ।
ಶಾಸ್ತ್ರಶುದ್ಧದಿ ಗೆಲ್ವುದೆಂತೀ ।
ಯುಕ್ತಿಯನು ಪೇಳಿದನು ಹದಿನೇಳನೆಯು ಸಂಧಿಯಲಿ ॥
ಚಿತ್ತವಿಸಿರೈ ಶ್ವಾಸದಿಂದು- ।
ತ್ಪತ್ತಿಯಾಗಿಹ ವೇದಗಳನಾ ।
ಭಕ್ತವತ್ಸಲ ವಿಸ್ತರಿಸಿದನು ಗೀತೆಯಲಿ ತಿಳಿಯೆ ॥ ೪೩೭ ॥

ಇರುವುದೈ ತಾರ್ಕ್ಷ್ಯ ಕಡೆಗಿನ ।
ಸರಸ ಹದಿನೆಂಟನೆಯ ಪ್ರಕರಣ ।
ಪೆರೆವುದೈ ಸಂಪೂರ್ಣ ಗೀತೆಗೆ ಕಲಶದಂದದಲಿ ।।
ಹರಿಯು ಹೇಳಿದ ಸಪ್ತಶತದಾ ।
ಸರಸಶ್ಲೋಕಂಗಳ ಪ್ರಬಂಧವ ।
ಪೆರೆವ ವೇದದ ಮೂರ್ತಿ ಭಗವದ್ಗೀತೆ ನೋಡಿದರೆ ॥ ೪೩೮ ॥

ವೇದಕಿಂತೌದಾರ್ಯದಲಿ ಮಿಗಿ- ।
ಲಾದ ಗೀತೆಯು ಸರ್ವಶ್ರೇಷ್ಠವು ।
ವೇದಗಳು ಸಂಪನ್ನವಾದರು ಕೃಪಣವಾಗಿಹುವು ॥
ಭೂದಿವಿಜಮೊದಲಾದ ಮೂವರ- ।
ನಾದರಿಪುದೈ ವೇದ ನಿಖಿಲವು ।
ಶೂದ್ರಸ್ತ್ರೀಯರ ಮನ್ನಿಸದು ಸಂಸಾರಪೀಡಿತರ ॥ ೪೩೯ ॥

ತಿಳಿಯಲೆನ್ನಯ ಮತವ ಪೇಳುವೆ- ।
ನಳಿಸ ಬೇಕೇ ಕುಂದನೆನುತಲಿ ।
ಯಿಳೆಯೊಳೆಲ್ಲರು ಭೇದವಿಲ್ಲದೆ ಗ್ರಹಿಸಬೇಕೆನುತ ।।
ತಿಳಿದು ತನ್ನಪಕೀರ್ತಿಕಾರಣ ।
ಕಳಿಯುಗದಿ ಸತ್ಕೀರ್ತಿಲತೆ ಬಹು- ।
ಬೆಳೆಯ ಬೇಕೆಂಬಿನಿತು ಸದ್ಗೀತುವನು ಮನದೊಳಗೆ ॥ ೪೪೦ ॥

ಧರಿಸಿ ಭಗವದ್ಗೀತೆ ತಾನವ- ।
ತರಿಸಿದಳೊ ಭೂಮಿಯಲಿ ನೋಡಲು ।
ಧರಣಿಯಿಲ್ಲೀ ವೇದದವತಾರವು ಕಣಾ ತಿಳಿಯೆ ।।
ಇರುವುದೀ ವೇದಾರ್ಥ ಸುಲಭವು ।
ಬರುವುದಿದು ಜಪದಿಂದ ಬಾಯಲಿ ।
ಸರಸದಿಂ ಶ್ರವಣದಲಿಯರ್ಥದ ರೂಪದಿಂ ಮನದಿ ।।೪೪೧।।

ನಿತ್ಯ ಗೀತಾಪಾರ ಮಾಡುವ ।
ಸ್ತುತ್ಯ ಕೆಲಸವ ಮಾಳ್ಪ ಭಕ್ತನ ।
ಹತ್ತರದಲಾವಾತನಿರುವನೊ ಭಕ್ತಿಪೂರ್ವಕದಿ ।।
ಪುಸ್ತಕವ ಬರೆಯುತ್ತ ಗೀತಾ- ।
ವಿಸ್ತರವ ತಾನಾರು ಮಾಳ್ಪನೊ ।
ಸತ್ಯ ನೋಡವ ಧನ್ಯನೆಂಪೆನು ಜಗದಿ ಮನವರಿಯೆ ।।೪೪೨।।

ಈ ತೆರದಲೀ ಸರ್ವಪ್ರಾಣಿ- ।
ವ್ರಾತಕೀಸಂಸಾರಜಾತ್ರೆಯೊ- ।
ತಾತನು ಸದಾವರ್ತ ಹಾಕಿಹ ಮೋಕ್ಷಸುಖರೂಪ ।।
ಗೀತೆಯಿದು ಸೇವಿಸುವರೆಲ್ಲರ ।
ಜಾತಿನೀತಿಯ ನೋಡದಲೆ ಜಗ- ।
ತೀತಲದಿ ಮೋಕ್ಷವನು ಕೊಡುತಲಿ ಸುಖಿಸುವ್ರದು ನಿಜದಿ ।।೪೪೩।।

ಇರುವುದವಕಾಶವಿದು ಗಗನವು ।
ಸುರರ ವಾಸಸ್ಥಾನ ಮೇಣಿದು ।
ನರರ ವಿಹೃತಿಸ್ಥಾನ ತರಣಿಯ ಕಿರಣದುತ್ಥಾನ ।।
ಇರುವ್ರದೀಪರಿ ಗೀತೆ ಭುಜಕರ ।
ಸರುವರನ್ನುದ್ಧಾರ ಮಾಳ್ಪುದು ।
ಪರಿಯು ನೋಡದು ವೃತ್ತವಾಧಮ-ಮಧ್ಯಮಾದಿಗಳ ।।೪೪೪।।

ಆದಕಾರಣ ವಿಷಮಭಾವದ ।
ಭೇದದಿಂ ದುಷ್ಕರ್ತೃ ಪದೆದಿಹ ।
ವೇದಗಳು ಬಂದಿಹುವು ಗೀತೆಯ ಹೊಟ್ಟೆಯೊಳು ತಿಳಿಯೆ ।।
ಆದ ಕಾರಣ ವೇದಗಳು ಜಗ- ।
